1. The maximum time allowed for retention of a book shall be one fortnight. It may be borrowed again if not required by others.

2. No reference books shall be lent out.

3. No borrower shall have more than two volumes out of the Library at one time.

4. Borrowers must not pass books from one to another but must return them to the Librarian.

5. Library books must not be used as class-books.

6. Any one who defaces by writing or otherwise damages any book shall pay the full cost of the book or of the entire works, if it consists of more than one volume.

7. The borrower shall be responsible for the value of the books lent out to him if they are lost, damaged or otherwise cannot be returned to the Library when they are due or recalled.

8. The presence of the voucher with the Librarian shall be considered sufficient proof of the non-return of books.

1615-36 The Bangalore Press



ಪಾಲಿ-ಕನ್ನಡ ಅನುವಾದ ಮಾಲೆ: ೧೯೬೭ರ ಪ್ರಕಟಣೆ

ಬುದ್ಧ ವಚನ ಪರಿಚಯ

('ಬುದ್ಧವಚನ ಮಧು'ವಿನ ಪ್ರವೇಶಸಂಪುಟ)

ಮತ್ತು

ಮಿಲಿಂದ ಪ್ರಶ್ನೆ

ಅನುವಾದಕ–ಸಂಪಾದಕ
ಜಿ. ಪಿ. ರಾಜರತ್ನಂ



'ಅತ್ಥಂ ಹಿ ನಾಥೋ ಸರಣಂ ಅವೋಚ ನ ವ್ಯಞ್ಜನಂ'

'ಅರ್ಥವೇ ಮುಖ್ಯ, ಅಕ್ಷರವಲ್ಲ—
ಎಂದು ನಮ್ಮ ಸ್ವಾಮಿಯಾದ ಬುದ್ಧನು ಹೇಳಿದನು.'

ಶಾಕ್ಯ ಸಾಹಿತ್ಯ ಮಂಟಪ
ಮಲ್ಲೇಶ್ವರ, ಬೆಂಗಳೂರು
೧೯೬೭

ಮೊದಲ ಮುದ್ರಣ
ಪ್ರತಿಗಳು ೫೦೦

ಸಾಮಾನ್ಯ ಪ್ರತಿ
ನಾಲ್ಕು ರೂಪಾಯಿ

*

ಲೈಬ್ರರಿ ಪ್ರತಿ
ಏಳೂವರೆ ರೂಪಾಯಿ

* *

ಪುಟಗಳು—೧೨+೨೧೦+೧೩೪

* *

First Edition
Copies 500

Cheap Edition
6 *Sh.*

*

Library Edition
10 *Sh.* 6 *d.*

ಧರ್ಮಪ್ರಕಾಶ ಮುದ್ರಾಲಯ, ಮಂಗಳೂರು

PĀLI-KANNAḌA TRANSLATION SERIES

BUDDHA VACANA PARICAYA
(Introduction to The Buddha Vacana)

AND

MILINDA PRAṢNE
(The Questions of Milinda)

IN

KANNAḌA

FROM

The Original PĀLI

TRANSLATOR – EDITOR

G. P. RĀJA RATNAṂ, M. A.

ṢĀKYA SĀHITYA MAṆṬAPA

MALLÊṢWARAṂ, BANGALORE, S. INDIA.

1937

ಜಿ. ಪಿ. ರಾಜರತ್ನಂ
ಅವರ ಬೌದ್ಧ ಗ್ರಂಥಗಳು

ಚೀನಾದೇಶದ ಬೌದ್ಧ ಯಾತ್ರಿಕರು

ಧರ್ಮದಾನಿ ಬುದ್ಧ (ಮುಗಿದಿವೆ)

ಗೌತಮ ಬುದ್ಧ (ಮಕ್ಕಳಿಗೆ)

ಬುದ್ಧವಚನ ಪರಿಚಯ

ಪಾಲಿ ಪಜ್ಜ ಪುಷ್ಪಂಜಲಿ

ನಾಲ್ಕು ಪಾಲಿ ಸೂತ್ರಗಳು

ಮಿಲಿಂದ ಪ್ರಶ್ನೆ

ಪಾಲಿ ಸಾಹಿತ್ಯ ಪರಿಚಯ*

ಬುದ್ಧನ ಜಾತಕಗಳು*

---

* ಮೊದಲನೆಯದು ೧೯೫೭ರ ಮೇ ತಿಂಗಳಿನಲ್ಲೂ, ಎರಡನೆಯದು ೧೯೫೮ರ ಜನವರಿ ತಿಂಗಳಿನಲ್ಲೂ ಪ್ರಕಟವಾಗುವುದು.

'ಶಾಕ್ಯ ಸಾಹಿತ್ಯ ಮಂಟಪ'ದ ಬಿನ್ನಹ

ಪೂಜ್ಯವರ್ಯರಾದ ಮಾಸ್ತಿ ವೆಂಕಟೇಶ ಐಯಂಗಾರ್ಯರು, ಐದು ವರುಷಗಳ ಹಿಂದೆ, ಆಗ ತಾನೆ ವಿಶ್ವವಿದ್ಯಾಲಯದಿಂದ ಹೊರಬಿದ್ದ ನನಗೆ ಸರ್ವವಿಧದಿಂದಲೂ ಆಶ್ರಯನೀಡಿ, 'ಚೀನಾದೇಶದ ಬೌದ್ಧ ಯಾತ್ರಿಕರು' ಎಂಬ ನನ್ನ ಮೊದಲ ಪುಸ್ತಕವನ್ನು ಬರೆಯಿಸತೊಡಗಿದಾಗ; ನನ್ನ ವಿದ್ಯಾಗುರುಗಳಾದ ಮಾನ್ಯ ಎ. ಆರ್. ಕೃಷ್ಣಶಾಸ್ತ್ರಿಯವರ ಪ್ರೇರಣೆಯಿಂದ ಅದು ರೂಪುಗೊಂಡು, ಅವರ ಕೃಪೆಯಿಂದ ಪ್ರಕಾಶಕ್ಕೆ ಬಂದಾಗ; ಅಂದು ಪ್ರಾರಂಭಿಸಿದ ಭಗವಂತನ ಸೇವೆಯು ಇಂದು ಬುದ್ಧವಚನವನ್ನು ಕನ್ನಡದಲ್ಲಿ ತಿಳಿಸುವ ಭಾಗ್ಯವನ್ನು ನನಗೆ ಒದಗಿಸುವುದೆಂದು ಎಣಿಸಿರಲಿಲ್ಲ. ಈ ಕುಶಲ ಕರ್ಮಸಂಪಾದನೆಗೆ ನನ್ನನ್ನು ನಡಿಸಿದ ಹಿರಿಯರಿಗೆ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯ ಅಗ್ರಪೂಜೆಯನ್ನು ಸಲ್ಲಿಸುತ್ತೇನೆ.

ನಾನು ಮೊದುಮೊದಲು ಮಾಡಿದ ಬುದ್ಧವಚನದ ಅನುವಾದಗಳಲ್ಲಿ 'ಧರ್ಮಪದ'ವು ಬೆಂಗಳೂರಿನ 'ಸುಬೋಧ'ದಲ್ಲೂ, 'ಶ್ರಾಮಣ್ಯ ಫಲ ಸೂತ್ರ' ಮೊದಲಾದ ನಾಲ್ಕು ಸೂತ್ರಗಳು ಮೈಸೂರಿನ 'ಪ್ರಬುದ್ಧ ಕರ್ಣಾಟಕ'ದಲ್ಲೂ ಬೆಳಕುಕಂಡವು. ಈ ಪ್ರಕಟಣೆಗಳಿಂದ ನನ್ನ ಅನುವಾದ ಕಾರ್ಯಕ್ಕೆ ಪ್ರೋತ್ಸಾಹಕೊಟ್ಟ ಆ ಪತ್ರಿಕೆಗಳ ಸಂಪಾದಕ ವರ್ಗಕ್ಕೆ ನಾನು ಬಹು ಋಣಿಯಾಗಿದ್ದೇನೆ.

ಪಿಟಕಗಳಲ್ಲಿ ವಿನಯ ಸುತ್ತಗಳ ಸಾರವನ್ನೂ, ಪಿಟಕೇತರ ಪಾಲಿ ಸಾಹಿತ್ಯದಲ್ಲಿ ಮುಖ್ಯವಾಗಿ 'ಮಿಲಿಂದ ಪ್ರಶ್ನೆ'ಯೆಂಬ ಗ್ರಂಥವನ್ನೂ ಕ್ರಮವಾಗಿ ಕನ್ನಡಿಸಿ ಪ್ರಕಟಸಬೇಕೆಂದು ಸಂಕಲ್ಪಮಾಡಿ, ಹಿತವರಾದ ಹಲವರು ಹಿರಿಯರನ್ನೂ ಮಿತ್ರರನ್ನೂ ಸಮೀಪಿಸಿದಾಗ; ಅವರಲ್ಲಿ ಕೆಲವರ ಉದಾರಹಸ್ತದ ಬಲದಿಂದ, ಹಲವರ ಅಭಿವಚನದ ಅವಲಂಬನದಿಂದ, ಈ ಸಂಕಲ್ಪಿಸಿದ ಪಾಲಿ–ಕನ್ನಡ ಅನುವಾದಮಾಲೆಯ ಮೊದಲ ವರುಷದ ಸಂಪುಟವನ್ನು ಪ್ರಕಟಸುವ ಸಾಹಸಮಾಡಿದ್ದೇನೆ.

ಕುಲವಶದಿಂದ ನಾನು ಕನ್ನಡಿಗ, ಗುಣಕರ್ಮವಶದಿಂದ ಬರಹಗಾರ. ಬರಹಗಾರರ, ಅದರಲ್ಲೂ ಕನ್ನಡದ ಬರಹಗಾರರ, ಬಡತನವು ಮನೆಮಾತೆಂಬುದು ತಿಳಿಯದ ವಿಷಯವಲ್ಲ. ಆದ್ದರಿಂದ, ಈ ಪ್ರಕಟಣೆಗೆ

ಸಹೃದಯರು ನೀಡಿರುವ ಕೊಡುಗೈಯ ಹಾಗೂ ಅಭಯವಚನಗಳ ಬೆಂಬಲವಿರದಿದ್ದರೆ ಈ ವರುಷದ 'ಬುದ್ಧವಚನ ಪರಿಚಯ', 'ಮಿಲಿಂದ ಪ್ರಶ್ನೆ', ಮತ್ತು 'ಪಾಲಿ ಪಜ್ಜ ಪುಷ್ಪಾಂಜಲಿ' ಎಂಬ ಮೂರು ಪುಸ್ತಕಗಳು ಪ್ರಕಾಶಗೊಳ್ಳುತ್ತಿರಲಿಲ್ಲವೆಂದು ಒಪ್ಪಿಕೊಂಡರೆ, ಅದು ಈ ಪುಸ್ತಕಗಳ ಪ್ರಕಾಶನಕ್ಕೆ ಮುಖ್ಯ ಕಾರಣರಾದ ಎಲ್ಲಾ ಗ್ರಾಹಕರ ಸಹಾಯವನ್ನೂ ಕೃತಜ್ಞತೆಯಿಂದ ಒಪ್ಪಿಕೊಳ್ಳುವ ಪ್ರಯತ್ನ.

ಹೀಗೆ ನೆರವಾದವರಲ್ಲಿ ಅನೇಕರ ಅಪೇಕ್ಷೆಯಂತೆ, ಮುಂದೆ ಬರಲಿರುವ 'ಬುದ್ಧವಚನ ಮಧು'ವಿನ ಸ್ವರೂಪವನ್ನು ತಿಳಿಸಲು 'ಬುದ್ಧ ವಚನ ಪರಿಚಯ' ಎಂಬ ಪ್ರವೇಶ ಸಂಪುಟವನ್ನು ಈ ವರುಷ ಅರ್ಪಿಸಿದ್ದೇನೆ; 'ಮಿಲಿಂದ ಪ್ರಶ್ನೆ'ಯ ಸಹಜ (Genuine) ಭಾಗಗಳಿಂದ ಈ ವರುಷದ ಗ್ರಂಥಪ್ರಮಾಣವನ್ನು ಪೂರೈಸಿದ್ದೇನೆ.

ಈ ಪುಸ್ತಕದ ವಸ್ತುಗಳನ್ನು ಅನುವಾದ ಮಾಡಿ, ಹಸ್ತಪ್ರತಿಗಳನ್ನು ತೆಗೆದು, ಮುದ್ರಿತ ಪ್ರತಿಗಳನ್ನು ತಿದ್ದಿ, ಆವಶ್ಯಕವಾದ ಸೂಚಿಗಳನ್ನು ಅನುಗೊಳಿಸಿ, ಗ್ರಂಥವನ್ನು ಆದಷ್ಟು ಸಮರ್ಪಕವಾಗಿ ಅಣಿಮಾಡಲು ಕೆಲಸಮಾಡಿರುವ ನನಗೇ ನಾನು ನಮಸ್ಕರಿಸಿಕೊಳ್ಳುವುದು ಯೋಗ್ಯವಲ್ಲ. ಆದರೆ, ಈ ಸಂಪುಟದ ರಕ್ಷಾಕವಚವನ್ನೂ ಪ್ರವೇಶ ಪ್ರಸ್ಥಾನಪತ್ರಗಳನ್ನೂ ತಮ್ಮ ಚಿತ್ರ ಸಮುಚ್ಚಯಗಳಿಂದ ಅಲಂಕರಿಸಿದ ಗೆಳೆಯರು ಶಿವರಾಮ ಕಾರಂತರು ನನ್ನವರಾದರೂ ಅವರ ಅಭಿಮಾನದ ಗುರುತ್ತನ್ನು ನಾನು ಒಪ್ಪಿಕೊಳ್ಳದಿದ್ದರೆ ಕರ್ತವ್ಯಲೋಪವಾಗುತ್ತದೆ. ಹಿರಿಯರಾದ ಮಾಸ್ತಿ ವೆಂಕಟೇಶ ಐಯಂಗಾರ್ಯರ ಭಾವಚಿತ್ರ ಕೂಡ ಕಾರಂತರ ಕೃಪೆಯಿಂದ ಪಡೆದುದು.

ಈ ವರುಷದ ಪುಸ್ತಕಗಳು ಮೂರನ್ನೂ ಕೇವಲ ಸ್ವಲ್ಪ ವೇಳೆಯಲ್ಲಿ ಇಷ್ಟು ಸಮರ್ಪಕವಾಗಿ ಮುದ್ರಿಸಿ ಸಿದ್ಧಗೊಳಿಸಿಕೊಟ್ಟುದಕ್ಕಾಗಿ ಮಂಗಳೂರಿನ ಧರ್ಮಪ್ರಕಾಶ ಮುದ್ರಾಲಯದ ಸಂಚಾಲಕರನ್ನೂ ಅವರ ಕಾರ್ಯಕಾರಿ ವರ್ಗವನ್ನೂ ಸಂತೋಷದಿಂದ ವಂದಿಸುತ್ತೇನೆ.

* * *

ಇತರ ಕನ್ನಡ ಗ್ರಂಥಗಳ ಪಕ್ಕದಲ್ಲಿ ಈ ಮಾಲೆಯ ಗ್ರಂಥಗಳ ಬೆಲೆ ಹೆಚ್ಚಾಯಿತೆಂದು ಕೆಲವರು ಹೇಳಿದ್ದಾರೆ. ಆದರೆ, ಈ ಗ್ರಂಥವನ್ನು

ಸಮಗೊಳಿಸಲು ಬಳಸಬೇಕಾದ ಗ್ರಂಥಗಳು ಪಾಶ್ಚಾತ್ಯ ದೇಶಗಳಲ್ಲಿ ಮಾತ್ರ ದೊರಕುವುದಾದ್ದರಿಂದ; ಅಲ್ಲಿ, ಇದೇ ಪ್ರಮಾಣದ ಗ್ರಂಥಕ್ಕೆ ಇದಕ್ಕಿಂತ ಎಷ್ಟೋ ಹೆಚ್ಚು ಕ್ರಯ ತಾಗುವುದರಿಂದ; ಹೀಗೆ ಸಾಧನ ಸಾಹಿತ್ಯಕ್ಕೆ ತಗಲುವ ವೆಚ್ಚವೇ ಬಹಳವಾಗುವುದರಿಂದ; ಅವುಗಳಿಂದ ಹುಟ್ಟಿದ ಈ ಗ್ರಂಥದ ಬೆಲೆ ಹೆಚ್ಚಾಗುವುದು ಅನಿವಾರ್ಯ.


* * *

ಮಾಲೆಯಲ್ಲಿ ಮುಂದಿನ ವರುಷ ಪ್ರಕಟಿಸಬೇಕೆಂದು 'ಬುದ್ಧನ ಜಾತಕಗಳು' ಎಂಬ ಸಂಪುಟದ ಹಸ್ತಪ್ರತಿಯು ಸಿದ್ಧವಾಗುತ್ತಿದೆ. ಈ ಸಂಪುಟಕ್ಕೆ ದೊರೆತಂತೆ, ದೊರೆಯುವಂತೆ, ಅದಕ್ಕೂ ಸಹೃದಯರ ಸಹಾಯವೊದಗಿದರೆ ಲೋಕಪ್ರಿಯವಾದ ಜಾತಕಸಾಹಿತ್ಯದ ಸಾರವು ೧೯೩೮ರ ಜನವರಿ ತಿಂಗಳಿಗೆ ಕನ್ನಡದಲ್ಲಿ ಅವತರಿಸುವುದು.

ಈ ಅವತಾರದ ಆಗುಹೋಗುಗಳು ಧರ್ಮಾಭಿಮಾನಿಗಳ, ಕನ್ನಡ ಪ್ರೇಮಿಗಳ ಉದಾರಾಶ್ರಯವನ್ನೇ ಅವಲಂಬಿಸಿದೆಯೆಂದು ನಿಜಸ್ಥಿತಿಯನ್ನು ಮತ್ತೊಮ್ಮೆ ಒತ್ತಿ ನುಡಿದರೆ ಅದು ಅತಿಶಯೋಕ್ತಿಯಲ್ಲ.

'ಶಾಕ್ಯ ಸಾಹಿತ್ಯ ಮಂಟಪ'
ಮಲ್ಲೇಶ್ವರ, ಬೆಂಗಳೂರು
೧೦, ಜನವರಿ, ೧೯೩೭

ಜಿ. ಪಿ. ರಾಜರತ್ನಂ
ಸಂಪಾದಕ,
'ಬುದ್ಧವಚನ ಮಧು'



‘ಚೀನಾದೇಶದ ಬೌದ್ಧ ಯಾತ್ರಿಕರು’

ಎಂಬ

ನನ್ನ ಮೊದಲನೆಯ ಪುಸ್ತಕವನ್ನು ಬರೆಯಿಸಿ

ಆ ಮೂಲಕ

ನನ್ನ ಶಾಕ್ಯ ಸಾಹಿತ್ಯ ಪ್ರವೇಶಕ್ಕೆ ಆದಿಕಾರಣರಾದ

ಪೂಜನೀಯ

ಮಾಸ್ತಿ ವೆಂಕಟೇಶ ಐಯಂಗಾರ್ಯ

ಅವರಿಗೆ

ಈ

‘ಬುದ್ಧವಚನ ಪರಿಚಯ’

ಮತ್ತು

‘ಮಿಲಿಂದ ಪ್ರಶ್ನೆ’

ಎಂಬ ಗ್ರಂಥಗಳ ಸಹಸಂಪುಟವನ್ನು

ಕೃತಜ್ಞತೆಯ ಗುರುತಾಗಿ

ಭಕ್ತಿಭಾವದಿಂದ ಸಮರ್ಪಿಸುವೆನು.



ಶಾಕ್ಯ ಸಾಹಿತ್ಯ ಮಂಟಪದ ಮೊದಲನೆಯ ಪ್ರಧಾನಪುಷ್ಪ.

ಬುದ್ಧ ವಚನ ಪರಿಚಯ

'ಬುದ್ಧವಚನ ಮಧು'

ಎಂಬ

ಪಾಲೀ ಪಿಟಕ ಸಾಹಿತ್ಯದ ಕನ್ನಡ ಅನುವಾದಮಾಲೆಯ
ಪ್ರವೇಶ ಸಂಪುಟ.

ಅನುವಾದಕ–ಸಂಪಾದಕ

ಜಿ. ಪಿ. ರಾಜರತ್ನಂ



'ಅತ್ಥಂ ಹಿ ನಾಥೋ ಸರಣಂ ಅವೋಚ ನ ವ್ಯಞ್ಜನಂ'

'ಅರ್ಥವೇ ಮುಖ್ಯ, ಅಕ್ಷರವಲ್ಲ—
ಎಂದು ನಮ್ಮ ಸ್ವಾಮಿಯಾದ ಬುದ್ಧನು ಹೇಳಿದನು.'

ಶಾಕ್ಯ ಸಾಹಿತ್ಯ ಮಂಟಪ
ಮಲ್ಲೇಶ್ವರ, ಬೆಂಗಳೂರು
೧೯೩೭

BUDDHA VACANA PARICAYA

THE INTRODUCTORY VOLUME
TO
"BUDDHA VACANA MADHU"
A TRANSLATION SERIES
IN
KANNAḌA

PRESENTING
The best and representative selections
FROM
The Original PĀLI Buddhistic Sacred Texts
THE VINAYA PIṬAKA
AND
THE SUTTA PIṬAKA

TRANSLATOR — EDITOR
G. P. RĀJA RATNAṂ, M. A.

ṢĀKYA SĀHITYA MAṆṬAPA
MALLÊṢWARAṂ, BANGALORE, S. INDIA.

1937

ಪ್ರವೇಶ

ಹಿಂದುಗಳು ತಮ್ಮ ಪ್ರಮಾಣಗ್ರಂಥಗಳಾದ ವೇದಗಳು ಅಪೌರುಷೇಯವೆಂದು ನಂಬಿರುವಂತೆ, ಸಿಂಹಳ ಬರ್ಮಾದೇಶಗಳ ಬೌದ್ಧರು ತಮಗೆ ವೇದಸ್ವರೂಪವಾದ 'ತಿಪಿಟಕ'[1] ಎಂಬ ಗ್ರಂಥಸಮುದಾಯದಲ್ಲಿನ ಪ್ರತಿಯೊಂದು ವ್ಯಂಜನವೂ ಭಗವಂತನಾದ ಬುದ್ಧಗುರುವಿನ ಮುಖದಿಂದಲೇ ಬಂದುದೆಂದು ನಂಬಿರುವರು. ಅದರಿಂದ 'ತಿಪಿಟಕ'ವನ್ನು 'ಬುದ್ಧವಚನ' ಎಂದೂ ಕರೆಯುವರು.

ಬೌದ್ಧರ ವೇದವಾದ 'ಬುದ್ಧವಚನ'ಕ್ಕೆ ಸಾಯಣಸ್ವರೂಪನಾದ ಆಚಾರ್ಯ ಬುದ್ಧಘೋಷನು ತನ್ನ 'ಸುಮಂಗಲ ವಿಲಾಸಿನೀ'[2] ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾನೆ:

"ಬುದ್ಧವಚನವು ರಸವಶದಿಂದ ಒಂದು ವಿಧ; ಧರ್ಮ-ವಿನಯವಶದಿಂದ ಎರಡು ವಿಧ; ಪ್ರಥಮ-ಮಧ್ಯಮ-ಪಶ್ಚಿಮವಶದಿಂದ, ಹಾಗೂ ಪಿಟಕವಶದಿಂದ ಮೂರು ವಿಧ; ನಿಕಾಯವಶದಿಂದ ಐದು ವಿಧ; ಅಂಗವಶದಿಂದ ಒಂಬತ್ತು ವಿಧ; ಧರ್ಮಸ್ಕಂಧವಶದಿಂದ ಎಂಬತ್ತನಾಲ್ಕು ಸಾವಿರ ವಿಧ.

"ಭಗವಂತನು, ತಾನು ಸಮ್ಯಕ್‌ಸಂಬೋಧಿಯನ್ನು ಪಡೆದಂದಿನಿಂದ ಪರಿನಿರ್ವಾಣ ಪಡೆಯುವವರೆಗಿನ ನಲುವತ್ತೈದು ವರುಷಗಳು ದೇವ-ಮನುಷ್ಯ-ನಾಗ-ಯಕ್ಷಾದ್ಯರಿಗೆ ಮಾಡಿದ ಎಲ್ಲ ಉಪದೇಶದಲ್ಲಿ ವಿಮುಕ್ತಿರಸವೊಂದೇ ಇದ್ದಿತಾಗಿ, ರಸವಶದಿಂದ ಬುದ್ಧವಚನವು ಒಂದೇ ವಿಧ.

"ಭಗವಂತನು ಪರಿನಿರ್ವಾಣ ಪಡೆದಮೇಲೆ, ಬೌದ್ಧರ 'ಸಂಗೀತಿ'[3] ಎಂಬ ಮಹಾ ಧರ್ಮಸಭೆ ನಡೆಯಿತು. ಅಲ್ಲಿ, ಬುದ್ಧನ ಶಿಷ್ಯನಾದ ಉಪಾಲಿಯು, ಸಂಘದ ನಡತೆಗಾಗಿ ಭಗವಂತನು ಅನುಶಾಸನಮಾಡಿದ 'ವಿನಯ'ವೆಂಬ ಕಟ್ಟಲೆಗಳನ್ನು ಹಾಡಿದನು; ಭಗವಂತನು ಉಪದೇಶಿಸಿದ 'ಧರ್ಮ'ವನ್ನು ಆನಂದನು ಹಾಡಿದನು. ಹೀಗೆ, ಭಗವಂತನ ಸರ್ವ ಬೋಧೆಯನ್ನೂ ಅವರು ಆ ಸಭೆಯಲ್ಲಿ ಹಾಡಿದರು. ಆದರಿಂದ, 'ವಿನಯ', 'ಧರ್ಮ' ಎಂದು ಬುದ್ಧವಚನವು ಎರಡು ವಿಧ.

"ಭಗವಂತನು ಬೋಧಿವೃಕ್ಷದ ಮೂಲದಲ್ಲಿ ದುಃಖದ ನಿರೋಧವನ್ನು ಕಂಡು, 'ಅನೇಕ ಜಾತಿ ಸಂಸಾರಂ ಸಂಧಾವಿಸ್ಸಂ ಅನಿಬ್ಬಿಸಂ'[4] ಎಂದು ಹೇಳಿದ ಗಾಹೆಯು 'ಪ್ರಥಮ ಬುದ್ಧವಚನ'ವು. ಭಗವಂತನು ತನ್ನ ಪರಿನಿರ್ವಾಣ ಕಾಲದಲ್ಲಿ 'ಹನ್ದ

---

1. ಮೂರು ಪಿಟಕ, ಅಥವಾ ಬುಟ್ಟಿ. 2. ದೀಘನಿಕಾಯದ ವ್ಯಾಖ್ಯಾನ. 3. ಧರ್ಮಸಭೆಯಲ್ಲಿ ಧರ್ಮವಿನಯಗಳನ್ನು ಸಂಗಾಯನ ಮಾಡಿದುದರಿಂದ ಆ ಸಭೆಗೆ ಸಂಗೀತಿಯೆಂದು ಹೆಸರು. 4. 'ತಡೆಯಿಲ್ಲದೆ ಅನೇಕ ಜನ್ಮಗಳು ಅಲೆದೋಡಿ....'

ದಾನಿ ಭಿಕ್ಖವೇ ಆಮನ್ತಯಾಮಿ ವೋ:–ವಯಧಮ್ಮಾ ಸಂಖಾರಾ, ಅಪ್ಪಮಾದೇನ ಸಮ್ಪಾದೇಥ'[1] ಎಂದು ಹೇಳಿದುದು 'ಪಶ್ಚಿಮ ಬುದ್ಧವಚನ'. ಈ ಎರಡರ ನಡುವೆ ಹೇಳಿದುದೆಲ್ಲವೂ 'ಮಧ್ಯಮ ಬುದ್ಧವಚನ'. ಹೀಗೆ ಬುದ್ಧವಚನವು ಮೂರು ವಿಧ.

"ವಿನಯಪಿಟಕ, ಸುತ್ತಪಿಟಕ, ಅಭಿಧಮ್ಮಪಿಟಕ—ಎಂದು ಪಿಟಕವಶದಿಂದ ಬುದ್ಧವಚನವು ಮೂರು ವಿಧ. ಇದರಲ್ಲಿ, ಪಾಟಿಮೋಕ್ಖ, ವಿಭಙ್ಗ, ಖಂಧಕ, ಪರಿವಾರ—ಇವು ಕೂಡಿ ವಿನಯಪಿಟಕವೆನಿಸುವುದು. ದೀಘನಿಕಾಯ, ಮಜ್ಝಿಮನಿಕಾಯ, ಸಂಯುತ್ತನಿಕಾಯ, ಅಂಗುತ್ತರನಿಕಾಯ, ಖುದ್ದಕನಿಕಾಯ—ಇವು ಕೂಡಿ ಸುತ್ತಪಿಟಕವೆನಿಸುವುದು; ಇವುಗಳೊಳಗೆ, ಖುದ್ದಕಪಾಠ, ಧಮ್ಮಪದ, ಉದಾನ, ಇತಿವುತ್ತಕ, ಸುತ್ತನಿಪಾತ, ವಿಮಾನವತ್ಥು, ಪೇತವತ್ಥು, ಥೇರಥೇರೀಗಾಥಾ[2], ಜಾತಕ, ನಿದ್ದೇಸ[3], ಪಟಿಸಂಭಿಧಾಮಗ್ಗ, ಬುದ್ಧವಂಸ, ಚರಿಯಾಪಿಟಕ–ಎಂದು ಖುದ್ದಕನಿಕಾಯದಲ್ಲಿ ಹದಿನೈದು ಭೇದ. ಧಮ್ಮಸಂಗಹ, ವಿಭಙ್ಗ, ಧಾತುಕಥಾ, ಪುಗ್ಗಲಪಞ್ಞತ್ತಿ, ಕಥಾವತ್ಥು, ಯಮಕ, ಪಟ್ಠಾನ—ಎಂಬ ಏಳೂ ಕೂಡಿ ಅಭಿಧಮ್ಮಪಿಟಕವೆನಿಸುವುದು. ಹೀಗೆ ಪಿಟಕವಶದಿಂದ ಬುದ್ಧವಚನವು ಮೂರು ವಿಧ.

"ದೀಘನಿಕಾಯ, ಮಜ್ಝಿಮನಿಕಾಯ, ಸಂಯುತ್ತನಿಕಾಯ, ಅಂಗುತ್ತರನಿಕಾಯ, ಖುದ್ದಕನಿಕಾಯ ಎಂದು ನಿಕಾಯವಶದಿಂದ ಬುದ್ಧವಚನವು ಐದು ವಿಧ. ದೀಘ, ಮಜ್ಝಿಮ, ಸಂಯುತ್ತ, ಅಂಗುತ್ತರ—ಎಂಬ ನಾಲ್ಕು ನಿಕಾಯಗಳನ್ನು ಬಿಟ್ಟು; ಸಕಲ ವಿನಯಪಿಟಕ, ಅಭಿಧಮ್ಮಪಿಟಕ, ಮತ್ತು ಖುದ್ದಕಪಾಠ ಮೊದಲಾದ ಮೇಲೆ ಹೇಳಿದ ಹದಿನೈದು ಭೇದಗಳೂ ಕೂಡಿ ಖುದ್ದಕನಿಕಾಯವೆನಿಸುವುದು. ಹೀಗೆ, ನಿಕಾಯವಶದಿಂದ ಬುದ್ಧವಚನವು ಐದು ವಿಧ.

"ಸುತ್ತ[4], ಗೇಯ್ಯ[5], ವೇಯ್ಯಾಕರಣ[6], ಗಾಥಾ[7], ಉದಾನ[8], ಇತಿವುತ್ತಕ[9], ಜಾತಕ[10], ಅಬ್ಭುತಧಮ್ಮ[11], ವೇದಲ್ಲ[12]—ಎಂದು ಅಂಗವಶದಿಂದ ಬುದ್ಧವಚನವು ಒಂಬತ್ತು ವಿಧ. ವಿನಯಪಿಟಕದ ವಿಭಙ್ಗ—ಖಂಧಕ—ಪರಿವಾರಗಳೂ, ಸುತ್ತಪಿಟಕದ 'ಸುತ್ತ' ಎಂಬ ಹೆಸರಿನ ಎಲ್ಲಾ ತಥಾಗತ ವಚನಗಳೂ 'ಸುತ್ತ'ಗಳು. ಗಾಥೆಗಳಿಂದ ಕೂಡಿದ ಸುತ್ತಗಳು 'ಗೇಯ್ಯ'.

---

1. 'ಭಿಕ್ಷುಗಳೇ! ವ್ಯಯವಾಗುವುದು ಸಂಸ್ಕಾರಗಳ ಧರ್ಮ; ಅಪ್ರಮಾದದಿಂದ (ಮುಕ್ತಿಯನ್ನು) ಸಂಪಾದಿಸಿರಿ—ಎಂದು ನಿಮ್ಮನ್ನು ಕರೆಯುತ್ತೇನೆ.' 2. ಥೇರಗಾಥಾ, ಥೇರೀಗಾಥಾ—ಎಂದು ಎರಡು ಪುಸ್ತಕ. 3. ಚೂಳನಿದ್ದೇಸ, ಮಹಾನಿದ್ದೇಸ—ಎಂದು ಎರಡು ವಿಧ. 4. ಗದ್ಯ ರೂಪವಾದ ಸೂತ್ರಗಳು. 5. ಗದ್ಯಪದ್ಯ ಮಿಶ್ರಿತವಾದ ಸೂತ್ರಗಳು. 6. ಅರ್ಥವಿವರಣೆ. 7. ಶುದ್ಧ ಪದ್ಯಗಳು. 8. ಖುದ್ದಕನಿಕಾಯದ ಮೂರನೆಯ ಪುಸ್ತಕ. 9. ಖುದ್ದಕನಿಕಾಯದ ನಾಲ್ಕನೆಯ ಪುಸ್ತಕ. 10. ಬುದ್ಧನ ಪೂರ್ವಜನ್ಮದ ಕತೆಗಳು. 11. ಪವಾಡಗಳು. 12. ಪ್ರಶ್ನೋತ್ತರ ಮಾಲೆ.

ಅಭಿಧಮ್ಮಪಿಟಕವೂ, ಇತರ ಎಂಟು ಅಂಗಗಳಿಗೆ ಸಿಕ್ಕದ ಗಾಹೆಗಳಿಲ್ಲದ ಸೂತ್ರಗಳೂ 'ವೇಯ್ಯಾಕರಣ'. ಧಮ್ಮಪದ ಥೇರಗಾಥಾ ಥೇರೀಗಾಥೆಗಳೂ, ಸುತ್ತನಿಪಾತದ 'ಸುತ್ತ'ವೆಂಬ ಹೆಸರಿನ ಶುದ್ಧ ಗಾಹೆಗಳೂ 'ಗಾಥಾ'. ಸೌಮನಸ್ಯ ಜ್ಞಾನದಿಂದ ನುಡಿದ ಗಾಹೆಗಳಿಂದ ಒಡಗೂಡಿದ ಎಂಬತ್ತೆರಡು ಸೂತ್ರಗಳು 'ಉದಾನ'. 'ವುತ್ತಂ ಹೇತಂ ಭಗವತಾ'[1] ಎಂದು ಮೊದಲಾಗುವ ನೂರಹತ್ತು ಸೂತ್ರಗಳನ್ನು 'ಇತಿವುತ್ತಕ'ವೆಂದು ತಿಳಿಯಬೇಕು. 'ಅಪಣ್ಣಕ ಜಾತಕ' ಮೊದಲಾದ ೫೫೦ ಜಾತಕಗಳಿಗೆ 'ಜಾತಕ' ಎಂದು ಹೆಸರು. ಆಶ್ಚರ್ಯ ಆದ್ಭುತ ಧರ್ಮಗಳಿಂದ ಕೂಡಿದ ಸುತ್ತಗಳೆಲ್ಲವೂ 'ಅಬ್ಭುತ ಧಮ್ಮ'. ಪ್ರಶ್ನೋತ್ತರ ರೂಪಗಳಾದ ಸುತ್ತಗಳು 'ವೇದಲ್ಲ'. ಹೀಗೆ ಅಂಗವಶದಿಂದ ಬುದ್ಧವಚನವು ಒಂಬತ್ತು ವಿಧ.

"ಸೂತ್ರ, ಗಾಹೆ, ವಸ್ತು, ಮಾತೃಕೆ, ಪದ, ವ್ಯಂಜನ, ಅರ್ಥ ಮುಂತಾಗಿ ಧರ್ಮಗಳನ್ನು ಎಣಿಸುವ ರೀತಿಯಿಂದ ಬುದ್ಧವಚನವು ಎಂಬತ್ತನಾಲ್ಕು ಸಾವಿರ ವಿಧ."

ಈ 'ಬುದ್ಧವಚನ'ವು 'ಪಾಲಿ'[2] ಎಂಬ ಒಂದು ಪ್ರಾಕೃತ ಭಾಷಾ ವಿಶೇಷದಲ್ಲಿ ಬರೆಯಲ್ಪಟ್ಟಿದೆ. ಪಾಲಿ ಭಾಷೆಯಲ್ಲಿ ಪ್ರತಿಷ್ಠಿತವಾಗಿರುವ ಮಹಾ ಸಾಹಿತ್ಯದ ರಾಶಿಯಲ್ಲಿ 'ಬುದ್ಧವಚನ'ವು ಒಂದು ಭಾಗ ಮಾತ್ರ. ಆದರೆ, ಪಾಲಿ ಸಾಹಿತ್ಯದ ಸಾಲಿನಲ್ಲಿ ಪ್ರಾಚೀನತೆಯ ಅಗ್ರಸ್ಥಾನವು 'ಬುದ್ಧವಚನ'ಕ್ಕೇ ಮೀಸಲಾಗಿರುವುದು. ಅಷ್ಟು ಮಾತ್ರವಲ್ಲ; ವೇದ ಮತ್ತು ಹಲವು ಹಳೆಯ ಉಪನಿಷತ್ತುಗಳನ್ನು ವಿನಾಯಿಸಿದರೆ, ಭಾರತ ವರ್ಷದ ಸರ್ವ ಸನಾತನ ಸಾಹಿತ್ಯದಲ್ಲಿ ಪ್ರಾಚೀನತೆಯ ದೃಷ್ಟಿಯಿಂದ 'ಬುದ್ಧವಚನ'ವು ಅನುತ್ತರವೆಂದು ವಿಜ್ಞರ ವಾದ. ಸಾಲದುದಕ್ಕೆ, ಭಗವಂತನ ಅಪೂರ್ವ ವ್ಯಕ್ತಿತ್ವವನ್ನು ಕಾಣಬೇಕಾದರೆ, ಆತನ ಸದ್ಧರ್ಮದ ನಿಜಸ್ವರೂಪವನ್ನು ತಿಳಿಯಬೇಕಾದರೆ, ಪ್ರಾಚೀನ ಬೌದ್ಧ ಯುಗದ ಯಾವೊಂದು ವಿಷಯದ ಕಲ್ಪನೆಯಾಗಬೇಕಾದರೆ 'ಬುದ್ಧವಚನ'ವು ಒಂದು ವಿಶ್ವಕೋಶ.

ಬೌದ್ಧರ ಈ ಪ್ರಸಿದ್ಧ ಪವಿತ್ರ ಪ್ರಾಚೀನ ಪ್ರಮಾಣಗ್ರಂಥಗಳ ಉತ್ತಮೋತ್ತಮ ಭಾಗಗಳನ್ನು ಮೂಲಪಾಲಿಯಿಂದ ಅನುವಾದ ಮಾಡಿ

---

1. 'ಭಗವಂತನು ಹೀಗೆ ಹೇಳಿದನು'. 2. ಈ 'ಪಾಲಿ' ಭಾಷೆಯನ್ನೂ ಅದರ ಸಾಹಿತ್ಯವನ್ನೂ ಕುರಿತು 'ಪಾಲಿ ಸಾಹಿತ್ಯ ಪರಿಚಯ' ಎಂಬ ಗ್ರಂಥವು ೧೯೩೭ರ ಮೇ ತಿಂಗಳಿನಲ್ಲಿ ಪ್ರಕಟವಾಗುವುದು.

ಕನ್ನಡಿಗರ ಮುಡಿಲಿನಲ್ಲಿ ಬಿಡುವುದು ಈ ಸದ್ಯದ ಪ್ರಯತ್ನ. ಈ ಪ್ರಯತ್ನದ ಗುರಿ ಎರಡು: ಪಾಲಿ ಪಿಟಕಗಳಲ್ಲಿರುವ ಸಾಹಿತ್ಯಗುಣವನ್ನು ಆದಷ್ಟು ಮಟ್ಟಿಗೆ ಕನ್ನಡದಲ್ಲಿ ತಿಳಿಸುವುದು ಒಂದು; ಭಗವಂತನ ನಿಜ ಸ್ವರೂಪವನ್ನೂ, ಅದರೊಡನೆ ಸಹಗತವಾಗುವ ಆತನ ಧರ್ಮದ ಪರಿಚಯುವನ್ನೂ ಮೂಲಗ್ರಂಥಗಳಿಂದ ಯಥಾಭೂತವಾಗಿ ಮಾಡಿಕೊಡುವುದು ಎರಡನೆಯದು.

ಈ ಗುರಿಯಿಂದ ಹೊರಟಿರುವ ನಮಗೆ ವಿನಯಪಿಟಕ, ಸುತ್ತಪಿಟಕಗಳು ಮಾತ್ರ ಮುಖ್ಯ; ಅಭಿಧಮ್ಮಪಿಟಕವಲ್ಲ. ವಿನಯ ಸುತ್ತಪಿಟಕಗಳಲ್ಲಿ ನಾನಾ ಪರ್ಯಾಯಗಳಿಂದ ಸ್ವಾರಸ್ಯವಾಗಿ ತಿಳಿಸಿರುವ ಧರ್ಮವನ್ನೇ ಅಭಿಧಮ್ಮಪಿಟಕದಲ್ಲಿ ಬೇರೊಂದು ರೀತಿಯಿಂದ ನೀರಸವಾಗಿ ಪಟ್ಟಿ ಮಾಡಿದಂತೆ ಒಣ ಪ್ರಶ್ನೋತ್ತರಮಾಲಿಕೆಯಾಗಿ ಅಥವಾ ಶುಷ್ಕನಿರೂಪಣೆಯಾಗಿ ತಿಳಿಸಿರುವುದರಿಂದ, ಅಭಿಧಮ್ಮಪಿಟಕವನ್ನು ಬಿಟ್ಟ ನಾವು ಹೆಚ್ಚೇನೂ ಬಿಟ್ಟ ಹಾಗಾಗುವುದಿಲ್ಲ.

ಹೀಗೆ ಆರಿಸಿಕೊಂಡ ವಿನಯಪಿಟಕ ಸುತ್ತಪಿಟಕ ಎಂಬ ಎರಡನ್ನೇ ನಾವು ಸದ್ಯಕ್ಕೆ 'ಬುದ್ಧವಚನ'ವೆಂದು ಎಣಿಸಿ, ಅವುಗಳೊಳಗಿನ ಸಾರವನ್ನು 'ಬುದ್ಧವಚನ ಮಧು' ಎಂಬ ಹೆಸರಿನಲ್ಲಿ ಅರ್ಪಿಸಲು ಯತ್ನಿಸುತ್ತಿದ್ದೇವೆ. ಇಲ್ಲಿ, ನಮ್ಮ ಸೌಕರ್ಯಕ್ಕಾಗಿ ಈ 'ಬುದ್ಧವಚನ'ವನ್ನು ಗದ್ಯ-ಪದ್ಯವಶದಿಂದ ಎರಡು ವಿಧ ಮಾಡಿಕೊಂಡಿದ್ದೇವೆ: ವಿನಯ ಮತ್ತು ಸುತ್ತಗಳಲ್ಲಿಯ ಶುದ್ಧ ಗದ್ಯಭಾಗಗಳೂ, ಸ್ವಲ್ಪ ಗಾಹೆಗಳೊಡಗೂಡಿದ ಗದ್ಯಭಾಗಗಳೂ 'ಗದ್ಯ'; ಉಳಿದ ಶುದ್ಧ ಪದ್ಯಭಾಗಗಳೂ ಗದ್ಯದ ನಡುವಣ ಪದ್ಯಭಾಗಗಳೂ 'ಪದ್ಯ'.

ಹೀಗೆ ಆಯ್ದ 'ಗದ್ಯ'ವನ್ನು ವಸ್ತುವಿಗನುಗುಣವಾಗಿ ನಾಲ್ಕು ಸಂಪುಟಗಳಲ್ಲಿಯೂ, 'ಪದ್ಯ'ವನ್ನು ಮೂಲ ಅರ್ಥಗಳೊಡನೆ ಒಂದು ಸಂಪುಟದಲ್ಲಿಯೂ ಪ್ರಕಟಿಸಬೇಕೆಂದು ನಮ ಆಶಯ. ಆ ಸಂಪುಟಗಳ ಕ್ರಮ ಹೀಗೆ:

೧. ಗದ್ಯ.

ಸಂಪುಟ ಒಂದು: ಬುದ್ಧನ ಜಾತಕಗಳು—ಭಗವಂತನು ತನ್ನ ಶ್ರಾವಕರಿಗೆ ಧರ್ಮವನ್ನು ಸುಲಭರೀತಿಯಿಂದ ತಿಳಿಸುವುದಕ್ಕಾಗಿ ಹೇಳಿದ ಕತೆಗಳು.

ಸಂಪುಟ ಎರಡು: ಬುದ್ಧನ ಉಪಮಾನಗಳು — ಭಗವಂತನು ಶ್ರಾವಕರಿಗೆ ಧರ್ಮವನ್ನು ಬೋಧಿಸುವಾಗ, ಹೇಳಿದುದರ ಅರ್ಥವನ್ನು ಸ್ಪಷ್ಟಗೊಳಿಸುವುದಕ್ಕಾಗಿ ಕೊಟ್ಟ ಉಪಮಾನಗಳ ಸಂಗ್ರಹ.

ಸಂಪುಟ ಮೂರು: ಬುದ್ಧನ ಸಂವಾದಗಳು ಮತ್ತು ಇತರ ಸುಂದರ ಸೂತ್ರಗಳು — ಇದರಲ್ಲಿ ಬುದ್ಧನ ವಾದವಿಧಾನವನ್ನೂ ಸಂವಾದಸರಣಿಯನ್ನೂ ಸ್ಪಷ್ಟಗೊಳಿಸುವ ಅನೇಕ ಸೂತ್ರಗಳೂ, ಗುರುಸಮಾನರಾದ ಸಾರಿಪುತ್ರ, ಮಹಾಕಶ್ಯಪ ಮುಂತಾದ ಶ್ರೇಷ್ಠಸ್ಥವಿರರು ತಮ್ಮ ಧರ್ಮದೇಶನ ಕಾಲದಲ್ಲಿ ಆಡಿ ಮಾಡಿದುದನ್ನು ಸರ್ವಸಮರ್ಪಕವಾಗಿ ಚಿತ್ರಿಸುವ ಹಲವು ಸೂತ್ರಗಳೂ ಉಂಟು.

ಸಂಪುಟ ನಾಲ್ಕು: ಬುದ್ಧನ ಜೀವನ ಮತ್ತು ಉಪದೇಶ — ಬುದ್ಧನ ಬದುಕನ್ನು ಪರಿಚಯಗೊಳಿಸುವ ಪಿಟಕಭಾಗಗಳೂ, ಆತನ ಧರ್ಮವನ್ನು ತಿಳಿಸುವ—ಮೇಲಿನ ಮೂರು ಸಂಪುಟಗಳಿಗೂ ಒಳಪಡದ—ಇತರ ಸ್ವಾರಸ್ಯವಾದ ಪಿಟಕ ಭಾಗಗಳೂ ಈ ಸಂಪುಟವನ್ನು ಪೂರ್ಣವಮಾಡುವುವು.

೨. ಪದ್ಯ.

ಸಂಪುಟ ಐದು: ಪಾಲೀ ಪದ್ಯ ಪುಷ್ಪಾಂಜಲಿ — ಪಿಟಕಗಳಲ್ಲಿ ಉತ್ಕೃತ್ತಮವಾದ ಗಾಥಾಭಾಗಗಳನ್ನು ಆಯುವುದು; ಸಂಪುಟದ ಎಡಪುಟವಲ್ಲಿ ಪಾಲೀ ಮಾತೃಕೆಯನ್ನೂ, ಬಲಗಡೆ ಅದರೆದುರಿಗೆ ಸಮಯಾನುಸಾರವಾಗಿ ಕನ್ನಡದಲ್ಲಿ ಗದ್ಯಾನುವಾದ ಪದ್ಯಾನುವಾದಗಳನ್ನೂ ಕೊಡುವುದು; ಇದು ಈ ಸಂಪುಟದ ಸಂಕಲ್ಪ.

ಈ ರೀತಿಯಲ್ಲಿ, ಮೇಲೆ ಹೇಳಿದ ಐದು ಸಂಪುಟಗಳೂ ತಮ್ಮ ವಸ್ತುಪರಿಚಯರೂಪವಾದ ಮುನ್ನುಡಿಗಳೊಡನೆ ಪ್ರಕಟವಾದರೆ, ನಮ್ಮ ಗುರಿ ಸಾಧಿತವಾಯಿತೆಂದು ನಮ್ಮ ನಂಬಿಕೆ. ಈ ಕಾರ್ಯಕ್ರಮವು ಪ್ರಯೋಗದಲ್ಲಿ ಹೇಗೆ ಕಾಣುವುದೆಂಬುದಕ್ಕೆ ಈ 'ಬುದ್ಧವಚನ ಪರಿಚಯ' ದಲ್ಲಿ ಕಾಣಸಿಗುವ ಮಾದರಿಗಳೂ, 'ಪಾಲಿ ಪಜ್ಜ ಪುಪ್ಫಂಜಲಿ'[1]ಯೂ ಸಾಕ್ಷಿ.

ಈ 'ಬುದ್ಧವಚನ ಪರಿಚಯ'ದಲ್ಲಿ ಕಾಣುವ ಅನುವಾದಗಳಿಗೆ ಲಂಡನ್ನಿನ 'ಪಾಲಿ ಟೆಕ್ಸ್ಟ್ ಸೊಸೈಟಿ'ಯವರು ಪ್ರಕಟಿಸಿರುವ ಮಾತೃಕೆಗಳೆ ಮೂಲ. ಅಲ್ಲದೆ, ಅವರೇ ಪ್ರಕಟಿಸಿರುವ 'ಅಟ್ಠಕಥೆ'[2]ಗಳಿಂದಲೂ, ಅದೇ ಸೊಸೈಟಿಯ ಆಂಗ್ಲ ಅನುವಾದಗಳಿಂದಲೂ, ಅವರ ಹೊಸ ಪಾಲೀ ಶಬ್ದಕೋಶದಿಂದಲೂ ಬಹು ಉಪಕೃತರಾಗಿದ್ದೇವೆ.

---

1. ಶಾಕ್ಯ ಸಾಹಿತ್ಯ ಮಂಟಪದ ಮೊದಲನೆಯ ಉಪಪುಷ್ಪ, ೧೯೩೭. 2. ಅರ್ಥಕಥೆ, ವ್ಯಾಖ್ಯಾನ.

ಇಲ್ಲಿಯ ಅನುವಾದಗಳು ಮೂಲಪಾಲಿಯ ಜಾಡನ್ನೇ ಬಿಡದೆ ಹಿಡಿದಿದ್ದರು ಕೂಡ, ಮೂಲದಲ್ಲಿ ಮೇಲಿಂದ ಮೇಲೆ ಬರುವ 'ಪೆಯ್ಯಾಲ'[1] ಗಳನ್ನು ಸಂಕ್ಷೇಪಮಾಡಿ, ಅನುವಾದವನ್ನು ಓದಲು ಹೆಚ್ಚು ಇಷ್ಟವಾಗುವಂತೆ ಮಾಡಿದೆ. ಮೂಲವು ಸಂದಿಗ್ಧವಾಗಿರುವ ಕಡೆ 'ಅಟ್ಠಕಥೆ'ಯ ಸಹಾಯವನ್ನು ಧಾರಾಳವಾಗಿ ಪಡೆದಿದೆ. ಈ ಎರಡು ಬದಲಾವಣೆಗಳನ್ನು ಬಿಟ್ಟರೆ ಮೂಲಕ್ಕೂ ಅನುವಾದಕ್ಕೂ ಹೆಚ್ಚು ದೂರವಿಲ್ಲ. ಆದರೆ ಈ ಬದಲಾವಣೆಗಳನ್ನು ಈ ಸಂಗ್ರಹದಲ್ಲಿ ತೋರಿಸಿಲ್ಲ; ಮುಂದಿನ ಸಂಪುಟಗಳಲ್ಲಿ ತೋರಿಸಲಾಗುವುದು.

ಅನುವಾದಗಳಲ್ಲಿ ಕೆಲವು ಸಂಪೂರ್ಣ ಸೂತ್ರಗಳು; ಕೆಲವು ಸೂತ್ರಭಾಗಗಳು. ಈ ಉದ್ಧೃತಭಾಗಗಳಿಗೆ ಮಾಡಿರುವ ನಾಮಕರಣ ನಮ್ಮದು. ಅವುಗಳ ಮೂಲವನ್ನು ಅನುವಾದದ ಕಡೆಯಲ್ಲಿ ಕಾಣಿಸಿದೆ. ಈ ಅನುವಾದಗಳಲ್ಲಿ ಗದ್ಯವನ್ನು ದಪ್ಪ ಅಕ್ಷರದಲ್ಲಿಯೂ ಪದ್ಯಭಾಗವನ್ನು ಸಣ್ಣ ಅಕ್ಷರದಲ್ಲಿಯೂ ಮುದ್ರಿಸಿದೆ. ಪದ್ಯರೂಪವಾಗಿ ಅಚ್ಚಾಗಿದ್ದರೂ ಪದ್ಯಭಾಗದ ಅನುವಾದವು ಗದ್ಯರೂಪದಲ್ಲಿದೆ.

ಅನುವಾದವನ್ನು ಆದಷ್ಟು ಕನ್ನಡವಾಗಿ ಸುಲಭವಾಗಿ ಮಾಡಬೇಕೆಂದು ಯತ್ನಿಸಿ ಆಗಿಸಿದ್ದರು ಕೂಡ, ಉಳಿಸಿಕೊಂಡಿರುವ ಬೌದ್ಧ ವಿಶೇಷಪದಗಳಿಂದ ಅನುವಾದವು ಕ್ಲಿಷ್ಟವಾಗಿ ತೋರಬಹುದು. ಆದರೆ ಗ್ರಂಥದ ಕೊನೆಯಲ್ಲಿರುವ 'ಜನಸ್ಥಾನ ಪರಿಚಯ' ಮತ್ತು 'ಪದ ಪದಾರ್ಥ ಕೋಶ'ಗಳ ತಿಳುವಳಿಕೆಯಾದರೆ ಅನುವಾದವು ಸಹಜವಾಗಿ ಸುಲಭವಾಗುವುದು.

ಶ್ರದ್ಧೆಯಿಂದ ಅನುಗೊಳಿಸಿದ ಈ 'ಬುದ್ಧವಚನ ಪರಿಚಯ'ವು ಸಹೃದಯರ ಮಡಿಲಿಗಿರಲಿ; ಅವರ ಅನುಕಂಪದಿಂದ ಬೆಳೆಯಲಿ.

ಶಾಕ್ಯ ಸಾಹಿತ್ಯ ಮಂಟಪ
ಮಲ್ಲೇಶ್ವರ, ಬೆಂಗಳೂರು.

ಜಿ. ಪಿ. ರಾಜರತ್ನಂ

1. ಪರ್ಯಾಯ, repetition.

"ಬುದ್ಧವಚನ ಮಧು"

ಎಂಬ

ಪಾಲೀ ಪಿಟಕ ಸಾಹಿತ್ಯದ ಕನ್ನಡ ಅನುವಾದಮಾಲೆಯಲ್ಲಿ

ಮೊದಲ ಸಂಪುಟವಾಗಿ

ಪ್ರಕಟಿಸಬೇಕೆಂದು ಉದ್ದೇಶಿಸಿರುವ

"ಬುದ್ಧನ ಜಾತಕಗಳು"

ಎಂಬ ಪುಸ್ತಕದಿಂದ ಆಯ್ದ

ಎಂಟು ಜಾತಕಗಳು

ವಿವರ

ಪುಟ

೧ ಸುಪತ್ರ ಜಾತಕ ೧೧

೨. ಭೂಮಿ ಬಿರಿದ ಕತೆ ೧೭

೩. ಮೊಲದ ಕತೆ. ೨೦

೪. ದರ್ಭೆಯ ಹೂವು ೨೫

೫. ದಧಿವಾಹನ ೨೮

೬. ಗಿಡಕ್ಕೆ ನೀರೆರೆದ ಕೋತಿಗಳು . . . ೩೪

೭. ಚರ್ಮ ಹೊದೆದ ಸಂನ್ಯಾಸಿ ೩೬

೮. ಗ್ರಾಮಣಿ ಚಂಡ ೩೮

೧. ಸುಪತ್ರ ಜಾತಕ

['ಪಚ್ಚುಪ್ಪನ್ನ ವತ್ಥು' – ಈಗ ನಡೆದ ವಿಷಯ]

'ವಾರಣಾಸಿಯಲ್ಲಿ, ಮಹಾರಾಜ' ಎಂದು. ಇದನ್ನು ಗುರು, ತಾನು ಜೇತವನದಲ್ಲಿ ವಾಸಿಸುತ್ತಿರುವಾಗ, ಸ್ಥವಿರ ಸಾರಿಪುತ್ರನು ಬಿಂಬಾದೇವಿಗೆ ತಂದುಕೊಟ್ಟ ಕೆಂಪುಮೀನಿನ ರಸ ಹೊಸತುಪ್ಪದ ಅನ್ನಗಳನ್ನು ಕುರಿತು, ಹೇಳಿದನು.

ಸಮ್ಯಕ್‌ಸಂಬುದ್ಧನು ತನ್ನ ಶ್ರೇಷ್ಠವಾದ ಧರ್ಮಚಕ್ರವನ್ನು ತಿರುಗಿಸಿ ವೈಶಾಲಿಯ ಕೂಟಾಗಾರಶಾಲೆಯಲ್ಲಿ ವಾಸಿಸುತ್ತಿರುವಾಗ, ಮಹಾಪ್ರಜಾಪತಿ ಗೌತಮಿಯು ಐನೂರು ಶಾಕ್ಯರನ್ನು ಜೊತೆಗೊಂಡು ಹೊರಟು ಪ್ರವ್ರಜ್ಯವನ್ನು ಬೇಡಿ, ಪ್ರವ್ರಜ್ಯವನ್ನೂ ಉಪಸಂಪದೆಯನ್ನೂ ಪಡೆದಳು. ಅನಂತರ ಆ ಐನೂರು ಭಿಕ್ಷುಣಿಯರು ನಂದಕನ ಉಪದೇಶವನ್ನು ಕೇಳಿ ಅರ್ಹತ್ವವನ್ನು ಪಡೆದರು. ಆದರೆ ದೇವಿ ರಾಹುಲಮಾತೆಯು, ಗುರು ಶ್ರಾವಸ್ತಿಯಲ್ಲಿ ವಾಸಿಸುತ್ತಿರಲು, "ನನ್ನ ಸ್ವಾಮಿಯು ಪರಿವ್ರಜಿಸಿ ಸರ್ವಜ್ಞನಾದನು. ಮಗನು ಕೂಡ ಪರಿವ್ರಜಿಸಿ ಅವನ ಬಳಿಯಲ್ಲಿಯೇ ವಾಸಿಸುವನು. ನಾನು ಮನೆಯ ನಡುವೆ ಏನುಮಾಡಲಿ? ನಾನೂ ಪರಿವ್ರಜಿಸಿ ಶ್ರಾವಸ್ತಿಗೆ ಹೋಗಿ ಸಮ್ಯಕ್‌ಸಂಬುದ್ಧನನ್ನೂ ಮಗನನ್ನೂ ಸದಾ ನೋಡುತ್ತ ವಾಸಿಸುವೆನು" ಎಂದು ಚಿಂತಿಸಿ, ಭಿಕ್ಷುಣಿಗಳ ಬಳಿಹೋಗಿ ಪರಿವ್ರಜಿಸಿದಳು; ಅನಂತರ ಆಚಾರ್ಯ ಉಪಾಧ್ಯಾಯರೊಡನೆ ಶ್ರಾವಸ್ತಿಗೆ ಹೋಗಿ ಗುರುವನ್ನೂ ಪ್ರಿಯಪುತ್ರನನ್ನೂ ನೋಡುತ್ತ ಒಬ್ಬ ಭಿಕ್ಷುಣಿಯೊಡನೆ ವಾಸಮಾಡಿಕೊಂಡಳು. ಶ್ರಾಮಣೇರನಾದ ರಾಹುಲನು ಆಗಾಗ್ಗೆ ಹೋಗಿ ತಾಯಿಯನ್ನು ನೋಡುತ್ತಿದ್ದನು.

ಒಂದು ದಿನ ಸ್ಥವಿರಿಗೆ ಉದರವಾತ ಕೆರಳಿತು. ಮಗನು ಕಾಣಲು ಬಂದಾಗ ಅವನನ್ನು ನೋಡಲು ಹೊರಗೆ ಬರಲಾಗಲಿಲ್ಲ. ಬೇರೊಬ್ಬಳು ಬಂದು ಅವಳು ಅಸ್ವಸ್ಥವಾಗಿದ್ದುದನ್ನು ತಿಳಿಸಿದಳು. ಅವನು ತಾಯ ಸಮೀಪಕ್ಕೆ ಹೋಗಿ "ಏನು ತೆಗೆದುಕೊಂಡರೆ ಇದು ನಿಲ್ಲುವುದು?"

ಎಂದು ಕೇಳಿದನು. "ಅಪ್ಪ! ಮನೆಯಲ್ಲಿರುವಾಗ ನನಗೆ ಕೆಂಪು ಮೀನಿನ ರಸ ಹೊಸತುಪ್ಪದ ಅನ್ನಗಳಿಂದ ಈ ಉದರವಾತ ನಿಲ್ಲುತ್ತಿತ್ತು. ಇಲ್ಲಿಯೋ ಭಿಕ್ಷೆಮಾಡುತ್ತ ಜೀವಿಸುತ್ತಿದ್ದೇವೆ. ನಮಗೆ ಅದು ಹೇಗೆ ಸಿಕ್ಕುವುದು?" ಎಂದಳು. ಶ್ರಾಮಣೇರನು ತಾನು ಅದನ್ನು ಪಡೆದು ತರುವೆನೆಂದು ತಾಯಿಗೆ ಹೇಳಿ ಹೊರಟನು.

ಆ ಆಯುಷ್ಮಂತನಿಗೆ ಧರ್ಮಸೇನಾಪತಿಯೆನಿಸಿದ ಸಾರಿಪುತ್ರನು ಉಪಾಧ್ಯಾಯನು, ಮಹಾಮೌದ್ಗಲ್ಯಾಯನನು ಆಚಾರ್ಯನು, ಸ್ಥವಿರ ಆನಂದನು ಕುಲಪಿತನು, ಸಮ್ಯಕ್‌ಸಂಬುದ್ಧನು ತಂದೆಯು; ಹೀಗೆ ಅವನ ಸಂಪತ್ತಿ ಬಹಳವಾಗಿತ್ತು. ಹೀಗಿದ್ದರೂ, ಇತರರ ಬಳಿಗೆ ಹೋಗದೆ, ಆತನು, ತನ್ನ ಉಪಾಧ್ಯಾಯನ ಬಳಿ ಹೋಗಿ ವಂದಿಸಿ ಮುಖ ಸಪ್ಪೆಮಾಡಿಕೊಂಡು ನಿಂತನು.

ಆಗ ಸ್ಥವಿರ ಸಾರಿಪುತ್ರನು "ಏಕೆ ರಾಹುಲ, ಮುಖ ಸಪ್ಪೆ ಯಾಗಿದೆ?" ಎನ್ನಲು, "ಭನ್ತೇ, ನನ್ನ ತಾಯಿಯಾದ ಸ್ಥವಿರಿಗೆ ಉದರ ವಾತ ಕೆರಳಿದೆ" ಎಂದು ಶ್ರಾಮಣೇರನು ಹೇಳಿದನು. "ಏನು ತೆಗೆದು ಕೊಂಡರೆ ಅದು ನಿಲ್ಲುವುದು?" "ಭನ್ತೇ, ಕೆಂಪುಮೀನಿನ ರಸ, ಹೊಸ ತುಪ್ಪದ ಅನ್ನಗಳಿಂದ ಅದು ಸ್ವಸ್ಥವಾಗುವುದು." "ಆಗಲಿ, ನಾನು ಅದನ್ನು ಪಡೆಯುವೆನು. ಚಿಂತಿಸಬೇಡ."

ಸ್ಥವಿರನು ಮಾರನೆಯ ದಿನ ಅವನನ್ನು ಕರೆದುಕೊಂಡು ಶ್ರಾವಸ್ತಿ ಯನ್ನು ಪ್ರವೇಶಿಸಿ, ಶ್ರಾಮಣೇರನನ್ನು ಆಸನಶಾಲೆಯಲ್ಲಿ ಕುಳ್ಳಿರಿಸಿ, ಕೋಸಲರಾಜನ ಮನೆಗೆ ಹೋಗಿ ಕೆಂಪುಮೀನಿನ ರಸವನ್ನೂ ಹೊಸ ತುಪ್ಪ ಬೆರಸಿದ ಅನ್ನವನ್ನೂ ತಂದು ಅವನಿಗೆ ಕೊಟ್ಟನು. ಅವನು ಅದನ್ನು ತೆಗೆದುಕೊಂಡು ತಾಯಿಯಾದ ಸ್ಥವಿರಿಗೆ ಕೊಟ್ಟನು. ಅದನ್ನು ತಿಂದಮಾತ್ರದಿಂದ ಅವಳ ಉದರವಾತ ನಿಂತಿತು. ರಾಜನು ಜನರನ್ನು ಕಳುಹಿಸಿ, ವಿಚಾರಿಸಿ, ಅಂದಿನಿಂದ ಸ್ಥವಿರಿಗೆ ಅದೇ ರೀತಿಯ ಆಹಾರವನ್ನು ಕಳುಹಿಸಿದನು.

ಅನಂತರ ಒಂದು ದಿನ, "ಆಯುಷ್ಮಂತ ಧರ್ಮಸೇನಾಪತಿಯು ಈ ರೀತಿಯ ಊಟದಿಂದ ಸ್ಥವಿರಿಯನ್ನು ತೃಪ್ತಿಪಡಿಸಿದನು" ಎಂದು ಧರ್ಮ

ಸಭೆಯಲ್ಲಿ ಮಾತುಕತೆ ಎದ್ದಿತು. ಆಗ ಗುರು ಬಂದು, "ಭಿಕ್ಷುಗಳೆ, ಇಲ್ಲಿ ನೀವು ಕುಳಿತು ಆಡುತ್ತಿದ್ದ ಕತೆ ಏನು?" ಎಂದು ಕೇಳಿ, ಅವರು "ಇಂತಹದು" ಎನ್ನಲು, "ಭಿಕ್ಷುಗಳೆ, ಸಾರಿಪುತ್ರನು ರಾಹುಲನಾತೆಗೆ ಬೇಕಾದುದನ್ನು ಕೊಟ್ಟುದು ಈಗ ಮಾತ್ರವಲ್ಲ; ಹಿಂದೆಯೂ ಹೀಗೆಯೆ ಕೊಟ್ಟನು" ಎಂದು ಹೇಳಿ ಹಿಂದಿನದನ್ನು ಹೇಳಿದನು:

['ಅತೀತ ವತ್ಥು'—ಹಿಂದೆ ನಡೆದ ವಿಷಯ]

ಹಿಂದೆ, ವಾರಣಾಸಿಯಲ್ಲಿ ಬ್ರಹ್ಮದತ್ತನು ರಾಜ್ಯವಾಳುತ್ತಿದ್ದಾಗ, ಬೋಧಿಸತ್ತ್ವನು ಕಾಗೆಯ ಹೊಟ್ಟೆಯಲ್ಲಿ ಹುಟ್ಟಿದನು. ವಯಸ್ಸು ಬಂದ ಮೇಲೆ, ಎಂಟು ಸಾವಿರ ಕಾಗೆಗಳ ಹಿರಿಯನಾಗಿ ಸುಪತ್ರನೆಂಬ ಕಾಕರಾಜನಾದನು. ಸುಸ್ಪರ್ಶೆಯೆಂಬ ಹೆಣ್ಣುಕಾಗೆಯು ಅವನ ಮುಖ್ಯ ರಾಣಿಯಾಗಿದ್ದಳು. ಸುಮುಖನೆಂಬವನು ಅವನ ಸೇನಾಪತಿಯಾಗಿದ್ದನು. ಅವನು ಎಂಟು ಸಾವಿರ ಕಾಗೆಗಳಿಂದ ಬಳಸಲ್ಪಟ್ಟು ವಾರಣಾಸಿಯ ಬಳಿಯಲ್ಲಿ ವಾಸಿಸುತ್ತಿದ್ದನು.

ಒಂದು ದಿನ ಸುಸ್ಪರ್ಶೆಯನ್ನು ಕರೆದುಕೊಂಡು ಆಹಾರಕ್ಕಾಗಿ ಹಾರಾಡುತ್ತ, ಆ ಕಾಕರಾಜನು ವಾರಣಾಸಿಯ ರಾಜನ ಅಡುಗೆಯ ಮನೆಯ ಮೇಲೆ ಹೋದನು. ಅಲ್ಲಿ, ರಾಜನ ಅಡುಗೆಯವನು ನಾನಾ ತೆರದ ಮೀನುಮಾಂಸಗಳು ಸೇರಿದ ಊಟವನ್ನು ಸಿದ್ಧಮಾಡಿ, ಬಿಸಿ ಆರಲೆಂದು ಪಾತ್ರೆಗಳನ್ನು ಕೊಂಚ ತೆರೆದು ಕುಳಿತಿದ್ದನು. ಸುಸ್ಪರ್ಶೆಯು ಆ ಮೀನುಮಾಂಸಗಳ ವಾಸನೆಯನ್ನು ಮೂಸಿ, ರಾಜಭೋಜನವನ್ನು ತಿನ್ನಲು ಬಯಸಿದಳು. ಆದರೆ ಆ ದಿನ ಮಾತನಾಡಲಿಲ್ಲ.

ಎರಡನೆಯ ದಿನ "ಬಾ, ಭದ್ರೆ! ಆಹಾರಕ್ಕೆ ಹೋಗೋಣ" ಎಂದು ಸುಪತ್ರನು ಕರೆಯಲು, ಸುಸ್ಪರ್ಶೆಯು "ನೀನು ಹೋಗು. ನನಗೊಂದು ಬಯಕೆ ಇದೆ" ಎಂದಳು. "ಅದೆಂತಹ ಬಯಕೆ?" "ವಾರಣಾಸಿಯ ದೊರೆಯ ಊಟವನ್ನು ತಿನ್ನಲು ಬಯಸುವೆನು. ಅದನ್ನು ಪಡೆಯಲು ನನಗೆ ಶಕ್ಯವಿಲ್ಲ. ಅದರಿಂದ ಜೀವಬಿಡುವೆನು, ದೇವ!"

ಬೋಧಿಸತ್ತ್ವನು ಚಿಂತಿಸುತ್ತ ಕುಳಿತನು. ಸುಮುಖನು ಬಂದು "ಏಕೆ, ಮಹಾರಾಜ? ಮನಸ್ಸಿಗೆ ಏನು ಕೊರತೆ?" ಎಂದು ಕೇಳಿದನು.

ರಾಜನು ವಿಷಯವನ್ನು ಹೇಳಲು, ಸೇನಾಪತಿಯು "ಚಿಂತಿಸಬೇಡ, ಮಹಾರಾಜ" ಎಂದು ಆ ಇಬ್ಬರನ್ನೂ ಸಮಾಧಾನಪಡಿಸಲು "ಇಂದು ನೀವು ಇಲ್ಲಿಯೇ ಇರಿ. ನಾನು ಇಂದಿನ ಆಹಾರವನ್ನು ತರುತ್ತೇನೆ" ಎಂದು ಹೇಳಿ ಹೊರಟನು.

ಹೊರಟು, ಕಾಗೆಗಳನ್ನೆಲ್ಲ ಕೂಡಿಸಿ, ಆ ಕಾರಣವನ್ನು ತಿಳಿಸಿ, "ಆಹಾರ ತರೋಣ, ಬನ್ನಿ" ಎಂದು ಆ ಕಾಗೆಗಳೊಡನೆ ವಾರಣಾಸಿಯನ್ನು ಪ್ರವೇಶಿಸಿದನು. ಅಲ್ಲಿ, ಅಡುಗೆಯ ಮನೆಗೆ ಸ್ವಲ್ಪ ದೂರದಲ್ಲಿ ಕಾಗೆಗಳನ್ನು ವರ್ಗವರ್ಗವಾಗಿ ಮಾಡಿ, ಆ ಆ ಸ್ಥಾನಗಳಲ್ಲಿ ರಕ್ಷಣೆಗಾಗಿ ನಿಲಿಸಿ, ತಾನು ಎಂಟು ಕಾಕಯೋಧರೊಡನೆ ಅಡುಗೆಯ ಮನೆಯ ಮಾಡಿನ ಮೇಲೆ ಕುಳಿತನು. ಕುಳಿತು, ರಾಜನಿಗೆ ಊಟ ತೆಗೆದುಕೊಂಡು ಹೋಗುವ ಸಮಯವನ್ನು ಕಾಯುತ್ತ, "ರಾಜನ ಊಟವನ್ನು ಒಯ್ಯುವಾಗ ನಾನು ಪಾತ್ರೆಗಳನ್ನು ಬೀಳಿಸುವೆನು. ಪಾತ್ರೆಗಳನ್ನು ಬೀಳಿಸಿದ ಮೇಲೆ ನಾನು ಬದುಕುವ ಹಾಗಿಲ್ಲ. ನಿಮ್ಮಲ್ಲಿ ನಾಲ್ವರು ಬಾಯಿತುಂಬ ಆಹಾರವನ್ನೂ ನಾಲ್ವರು ಬಾಯಿತುಂಬ ಮೀನುಮಾಂಸವನ್ನೂ ತೆಗೆದುಕೊಂಡು ಕಾಕರಾಜನಿಗೂ ಅವನ ಹೆಂಡತಿಗೂ ತಿನ್ನಿಸಿರಿ. 'ಸೇನಾಪತಿಯೆಲ್ಲಿ?' ಎಂದು ಕೇಳಿದರೆ ಹಿಂದೆ ಬರುವನೆಂದು ತಿಳಿಸಿರಿ" ಎಂದು ಆ ಕಾಗೆಗಳಿಗೆ ಹೇಳಿದನು.

ಆಗ, ಅಡುಗೆಯವನು ತೆರತೆರದ ಭೋಜನಗಳನ್ನು ಸಿದ್ಧಗೊಳಿಸಿ ಕೋಲಿನಲ್ಲಿ ಹಿಡಿದುಕೊಂಡು ರಾಜನ ಮನೆಯ ಕಡೆ ಹೊರಟನು. ಅವನು ರಾಜಾಂಗಣಕ್ಕೆ ಹೋಗುವ ಸಮಯದಲ್ಲಿ ಕಾಕಸೇನಾಪತಿಯು ತನ್ನ ಕಾಗೆಗಳಿಗೆ ಸನ್ನೆಮಾಡಿ, ತಾನು ಮೇಲೆದ್ದು ಬಿದ್ದು, ಊಟ ಒಯ್ಯುತ್ತಿದ್ದವನ ಎದೆಯ ಮೇಲೆ ಕುಳಿತು ನಖಪಂಜರದಿಂದ ಹೊಡೆದು, ಬಾಣದ ತುದಿಯಂತಹ ತನ್ನ ಕೊಕ್ಕಿನಿಂದ ಅವನ ಮೂಗು ಮುರಿದು, ಎತ್ತಿದ ತನ್ನೆರಡು ಪಾದಗಳಿಂದ ಅವನ ಬಾಯಿ ಮುಚ್ಚಿದನು.

ರಾಜನು, ಅಂಗಳದಲ್ಲಿ ತಿರುಗಾಡುತ್ತ ದೊಡ್ಡ ಕಿಟಕಿಯಿಂದ ನೋಡಿ ಆ ಕಾಗೆಯ ಕೆಲಸವನ್ನು ಕಂಡು, "ಭೋ! ಭತ್ಯಹಾರ! ಪಾತ್ರೆಗಳನ್ನು ಕೆಳಗೆ ಬಿಡು. ಆ ಕಾಗೆಯನ್ನು ಹಿಡಿ!" ಎಂದು ಆಹಾರ ತರುತ್ತಿದ್ದವನಿಗೆ ಕೂಗಿ ಹೇಳಿದನು. ಅವನು ಪಾತ್ರೆಗಳನ್ನು ಕೆಳಗೆ

ಬಿಟ್ಟು, ಕಾಗೆಯನ್ನು ದೃಢವಾಗಿ ಹಿಡಿದನು. ರಾಜನು "ಇಲ್ಲಿ ಬಾ" ಎಂದನು.

ಆ ಕ್ಷಣದಲ್ಲಿ ಕಾಗೆಗಳು ಬಂದು ತಮಗೆ ಬೇಕಾದುದನ್ನು ತಿಂದು, ಮಿಕ್ಕುದನ್ನು ಹೇಳಿದಂತೆ ಕೊಂಡುಹೋದುವು. ಆಮೇಲೆ ಉಳಿದವು ಬಂದು ಉಳಿದುದನ್ನು ತಿಂದುವು. ಆ ಎಂಟು ಕಾಗೆಗಳೂ ಹೋಗಿ ಕಾಕರಾಜನಿಗೂ ಅವನ ಹೆಂಡತಿಗೂ ತಿನ್ನಿಸಿದುವು. ಸುಸ್ಪರ್ಶೆಯ ಬಯಕೆ ತೀರಿತು.

ಆಹಾರ ತರುತ್ತಿದ್ದವನು ಕಾಗೆಯನ್ನು ರಾಜನ ಬಳಿ ತಂದನು. ರಾಜನು "ಭೋ, ಕಾಕ! ನೀನು ನನಗೂ ಹೆದರಲಿಲ್ಲ. ಈ ಭತ್ಯಹಾರಕನ ಮೂಗು ಮುರಿದೆ. ಊಟದ ಪಾತ್ರೆಗಳನ್ನು ಒಡೆದೆ. ನಿನ್ನ ಜೀವವನ್ನೂ ಕಾಪಾಡಿಕೊಳ್ಳಲಿಲ್ಲ. ಏಕೆ ಇಂತಹ ಕೆಲಸಮಾಡಿದೆ?" ಎಂದನು.

ಕಾಗೆಯು "ಮಹಾರಾಜ! ನಮ್ಮ ರಾಜನು ವಾರಣಾಸಿಯ ಸಮೀಪದಲ್ಲಿ ವಾಸಿಸುವನು. ನಾನು ಅವನ ಸೇನಾಪತಿ. ಅವನ ಹೆಂಡತಿ ಸುಸ್ಪರ್ಶೆಯು ಬಯಕೆಯಿಂದ ನಿನ್ನ ಊಟವನ್ನು ತಿನ್ನಲು ಅಪೇಕ್ಷಿಸಿದಳು. ರಾಜನು ಆ ಬಯಕೆಯನ್ನು ನನಗೆ ತಿಳಿಸಿದನು. ನಾನು ಆಗಲೇ ನನ್ನ ಜೀವವನ್ನು ಬಿಟ್ಟುಬಂದೆ. ನಾನು ಈಗ ಅವರ ಊಟವನ್ನು ಕಳುಹಿಸಿದೆ. ನನ್ನ ಮನೋರಥದ ತುದಿ ಮುಟ್ಟಿತು. ಈ ಕಾರಣಗಳಿಂದ ನಾನು ಹೀಗೆ ಮಾಡಿದೆ" ಎಂದು, ಅದನ್ನು ಸ್ಪಷ್ಟಪಡಿಸಲು ಈ ಗಾಹೆಗಳನ್ನು ಹೇಳಿತು:

['ಗಾಥಾ' — ನಡುವೆ ಬರುವ ಪದ್ಯಭಾಗ]

"ಮಹಾರಾಜ, ಎಂಟು ಸಾವಿರ ಕಾಗೆಗಳು ಬಳಸಿರುವ
ಸುಪತ್ರನೆಂಬ ಕಾಕರಾಜನು ವಾರಣಾಸಿಯಲ್ಲಿರುವನು.

"ರಾಜನ ಅಡುಗೆಯ ಮನೆಯಲ್ಲಿ ಪಕ್ವವಾದ ಸೊಗಸಾದ
ರಾಜಭೋಜನವನ್ನು, ಮೀನನ್ನು, ಅವನ ಹೆಂಡತಿಯಾದ
ಸುಸ್ಪರ್ಶೆಯು ಬಯಸಿ ಬೇಕೆಂದಳು.

"ಅದರಿಂದ ನಮ್ಮ ರಾಜನು ಕಳುಹಿಸಿ ಇಲ್ಲಿ ಬಂದ ದೂತ ನಾನು.
ಒಡೆಯನನ್ನು ಗೌರವಿಸುವೆನು. ಅದರಿಂದ ಮೂಗು ಗಾಯಮಾಡಿದೆ."

ರಾಜನು ಆ ಮಾತು ಕೇಳಿ, “ನಾವು ಮನುಷ್ಯರಿಗೆ ಎಷ್ಟು ಹೆಚ್ಚಾದ ಯಶಸ್ಸು ಕೊಟ್ಟರೂ ಅವರನ್ನು ಸುಹೃದಯರನ್ನಾಗಿ ಮಾಡಿಕೊಳ್ಳಲು ಶಕ್ಯವಿಲ್ಲ. ಗ್ರಾಮ ಮೊದಲಾದವುಗಳನ್ನು ಕೊಟ್ಟರೂ ನಮಗಾಗಿ ಜೀವಕೊಡುವವರು ಸಿಕ್ಕುವುದಿಲ್ಲ. ಈ ಕಾಗೆ ತನ್ನ ರಾಜನಿಗಾಗಿ ಜೀವವನ್ನು ಪರಿತ್ಯಜಿಸುವನು. ಇವನು ಸತ್ಪುರುಷ, ಇವನ ಸ್ವರ ಮಧುರ, ಇವನು ಧಾರ್ಮಿಕ” ಎಂದು ಆ ಕಾಗೆಯ ಗುಣಗಳಿಗೆ ಪ್ರಸನ್ನನಾಗಿ ಅವನನ್ನು ಶ್ವೇತಛತ್ರದಿಂದ ಪೂಜಿಸಿದನು. ಅವನು ತನಗೆ ಲಭಿಸಿದ ಕೊಡೆಯಿಂದ ರಾಜನನ್ನೇ ಪೂಜಿಸುತ್ತ ಸುಪತ್ರನ ಗುಣಗಳನ್ನು ತಿಳಿಸಿದನು.

ರಾಜನು ಅವನನ್ನು ಕರೆಕಳುಹಿಸಿ, ಧರ್ಮವನ್ನು ಕೇಳಿ, ಅವರಿಬ್ಬರಿಗೂ ತಾನು ತಿನ್ನುವಂತಹ ಆಹಾರವನ್ನು ಕಳುಹಿಸಿದನು. ಉಳಿದ ಕಾಗೆಗಳಿಗೆ ದಿನಸಕ್ಕೆ ಒಂದು ಅಮ್ಮಣ ಅಕ್ಕಿಯನ್ನು ಬೇಯಿಸಿದನು. ತಾನು ಕೂಡ ಬೋಧಿಸತ್ತ್ವನ ಉಪದೇಶದಂತೆ ಎಲ್ಲಾ ಜೀವಿಗಳಿಗೂ ಅಭಯವನ್ನು ಕೊಟ್ಟು ಪಂಚಶೀಲಗಳನ್ನು ರಕ್ಷಿಸಿದನು. ಕಾಗೆಯಾದ ಸುಪತ್ರನ ಉಪದೇಶವು ಏಳುನೂರು ವರ್ಷ ನಡೆಯುತ್ತಿತ್ತು.

[‘ಸಮೋಧಾನ’ — ಅಂದಿನ ಕತೆಯ ಪಾತ್ರಗಳಿಗೂ ಇಂದಿನ ಕತೆಯ ಪಾತ್ರಗಳಿಗೂ ಸಂಬಂಧ ತೋರಿಸುವುದು]

ಗುರು, ಈ ದೇಶನವನ್ನು ಮುಗಿಸಿ, “ಆಗ ಆನಂದನು ರಾಜನಾಗಿದ್ದನು; ಸಾರಿಪುತ್ರನು ಸೇನಾಪತಿ, ರಾಹುಲಮಾತೆಯು ಸುಸ್ಪರ್ಶೆ; ನಾನೇ ಸುಪತ್ರನಾಗಿದ್ದೆ” ಎಂದು ಜಾತಕವನ್ನು ಗುರುತಿಸಿದನು.

[೨೯೨ನೆಯ ‘ಸುಪತ್ತ ಜಾತಕ’]

೨. ಭೂಮಿ ಬಿರಿದ ಕತೆ

ಹಿಂದೆ, ವಾರಣಾಸಿಯಲ್ಲಿ ಬ್ರಹ್ಮದತ್ತನು ರಾಜ್ಯವಾಳುತ್ತಿದ್ದಾಗ, ಬೋಧಿಸತ್ತ್ವನು ಸಿಂಹದ ಹೊಟ್ಟೆಯಲ್ಲಿ ಹುಟ್ಟಿ, ವಯಸ್ಸು ಬಂದಮೇಲೆ ಕಾಡಿನಲ್ಲಿ ವಾಸಿಸುತ್ತಿದ್ದನು.

ಆ ಸಮಯದಲ್ಲಿ, ಪಶ್ಚಿಮ ಸಮುದ್ರದ ಬಳಿ ಒಂದು ತಾಳೆಯ ವನವಿತ್ತು; ಅಲ್ಲಿ ಬಿಲ್ವವೃಕ್ಷಗಳೂ ಇದ್ದುವು. ಅಲ್ಲಿಯ ಒಂದು ಬಿಲ್ವ ವೃಕ್ಷದ ಬುಡದಲ್ಲಿ, ಒಂದು ತಾಳೆಯ ಸಸಿಯ ಕೆಳಗೆ ಒಂದು ಮೊಲ ವಾಸಮಾಡುತ್ತಿತ್ತು. ಅದು ಒಂದು ದಿನ ಆಹಾರವನ್ನು ತಂದು ಆ ತಾಳೆಯೆಲೆಯ ಕೆಳಗೆ ಮಲಗಿ, "ಈ ಭೂಮಿ ಚೂರಾದರೆ ನಾನೇನಾಗುವೆನು?" ಎಂದು ಚಿಂತಿಸಿತು. ಅದೇ ಕ್ಷಣದಲ್ಲಿ ಒಂದು ಪಕ್ವವಾದ ಬಿಲ್ವವು ತಾಳೆಯೆಲೆಯ ಮೇಲೆ ಬಿತ್ತು. ಮೊಲವು ಆ ಸದ್ದು ಕೇಳಿ, "ಶಾಶ್ವತವಾದ ಈ ಭೂಮಿ ಚೂರಾಗುತ್ತಿದೆ" ಎಂದು ಮೇಲೆದ್ದು ಬಿದ್ದು ಹಿಂದೆ ನೋಡದೆ ಓಡಿತು.

ಅದು ಸಾವಿನ ಹೆದರಿಕೆಯಿಂದ ಓಡುವುದನ್ನು ಬೇರೊಂದು ಮೊಲ ಕಂಡು, "ಇದೇಕೆ ಬಹಳ ಹೆದರಿ ಓಡುವೆ?" ಎಂದಿತು. "ಕೇಳಬೇಡ, ಕೇಳಬೇಡ" "ಏಕೆ? ಏಕೆ?" ಎಂದು ಕೇಳುತ್ತ ಎರಡನೆಯ ಮೊಲ ಅದರ ಹಿಂದೆಯೇ ಹೋಯಿತು. ಆ ಮೊಲ ನಿಂತು, ಹಿಂದೆ ನೋಡದೆ "ಇಲ್ಲಿ ಭೂಮಿ ಚೂರಾಗುತ್ತಿದೆ" ಎಂದಿತು. ಎರಡನೆಯ ಮೊಲ ಮೊದಲನೆಯದರ ಹಿಂದೆ ಓಡಿತು. ಅದನ್ನು ಕಂಡು ಇನ್ನೊಂದು, ಅದನ್ನು ಕಂಡು ಬೇರೊಂದು, ಹೀಗೆ ನೂರು ಸಾವಿರ ಮೊಲಗಳು ಒಂದಾಗಿ ಓಡಿದುವು.

ಅವುಗಳನ್ನು ಕ್ರಮವಾಗಿ ಒಂದು ಜಿಂಕೆ, ಹಂದಿ, ಗೋಕರ್ಣ, ಕಾಡುಕೋಣ, ಗೋವು, ಖಡ್ಗಮೃಗ, ಹುಲಿ, ಸಿಂಹ, ಆನೆ – ಇವು ಕಂಡು, "ಇದೇಕೆ ಹೀಗೆ ಓಡುವಿರಿ?" ಎಂದು ಕೇಳಿದುವು. "ಇಲ್ಲಿ ಭೂಮಿ ಚೂರಾಗುತ್ತಿದೆ" ಎಂದು ಆ ಮೊಲ ಹೇಳಿದುದನ್ನು ಕೇಳಿ ಎಲ್ಲವೂ ಓಡಿದುವು. ಹೀಗೆ ಒಂದರ ಹಿಂದೆ ಒಂದು ಓಡುವ ಆ ಪ್ರಾಣಿಗಳ ಗುಂಪು ಒಂದು ಯೋಜನ ಉದ್ದವಾಯಿತು.

ಅವು ಓಡುವುದನ್ನು ಬೋಧಿಸತ್ತ್ವನು ಕಂಡನು. ಅವು ಓಡುವುದೇಕೆಂದು ಪ್ರಶ್ನಿಸಿ, ಭೂಮಿ ಚೂರಾಗುತ್ತಿದೆಯೆಂಬುದನ್ನು ಕೇಳಿ, "ಭೂಮಿ ಚೂರಾಗುವುದು ಎಲ್ಲಿಯೂ ಇಲ್ಲ. ನಿಜವಾಗಿ ಯಾವುದೋ ಶಬ್ದವನ್ನು ಇವು ತಪ್ಪಾಗಿ ತಿಳಿದಿರಬೇಕು. ನಾನು ಪ್ರಯತ್ನ ಮಾಡದಿದ್ದರೆ ಇವು ಎಲ್ಲವೂ ನಾಶವಾಗುವುವು. ಇವುಗಳ ಜೀವವನ್ನು ಉಳಿಸುವೆನು" ಎಂದು ಚಿಂತಿಸಿ, ಸಿಂಹವೇಗದಿಂದ ಎದುರಿನ ಪರ್ವತಪಾದಕ್ಕೆ ಹೋಗಿ ಮೂರು ಸಲ ಸಿಂಹನಾದ ಮಾಡಿದನು. ಆ ಪ್ರಾಣಿಗಳು ಸಿಂಹ ಭಯದಿಂದ ಹೆದರಿ ಒಂದು ಗುಂಪಾಗಿ ನಿಂತುವು. ಬೋಧಿಸತ್ತ್ವನು ಅವುಗಳ ನಡುವೆ ಪ್ರವೇಶಿಸಿ "ಹೀಗೇಕೆ ಓಡುವಿರಿ?" ಎಂದನು.

"ಭೂಮಿ ಚೂರಾಗುತ್ತಿದೆ." "ಚೂರಾದುದನ್ನು ಯಾರು ಕಂಡರು?" "ಆನೆಗಳಿಗೆ ಗೊತ್ತು." ಆನೆಗಳನ್ನು ಕೇಳಲು, ಅವು "ನಮಗೆ ಗೊತ್ತಿಲ್ಲ, ಸಿಂಹಗಳಿಗೆ ಗೊತ್ತು" ಎಂದುವು. ಸಿಂಹಗಳು "ನಮಗೆ ಗೊತ್ತಿಲ್ಲ, ಹುಲಿಗಳಿಗೆ ಗೊತ್ತು" ಎಂದುವು. ಹುಲಿಗಳನ್ನು ಕೇಳಲು ಅವು ಖಡ್ಗಮೃಗಗಳನ್ನೂ, ಖಡ್ಗಮೃಗಗಳು ಗೋಗಳನ್ನೂ, ಗೋಗಳು ಕಾಡುಕೋಣಗಳನ್ನೂ, ಕಾಡುಕೋಣಗಳು ಗೋಕರ್ಣಗಳನ್ನೂ, ಗೋಕರ್ಣಗಳು ಹಂದಿಗಳನ್ನೂ, ಅವು ಜಿಂಕೆಗಳನ್ನೂ, ಜಿಂಕೆಗಳು ಮೊಲಗಳನ್ನೂ ತೋರಿಸಿದುವು. ಮೊಲಗಳನ್ನು ಕೇಳಲು, ಅವು "ಇದು ಹೇಳಿತು" ಎಂದು ಆ ಮೊಲವನ್ನು ತೋರಿಸಿದುವು.

ಆಗ ಬೋಧಿಸತ್ತ್ವನು "ಅಯ್ಯ, ಭೂಮಿ ಚೂರಾದುದು ನಿಜವೆ?" ಎಂದು ಆ ಮೊಲವನ್ನು ಕೇಳಿದನು. "ಹೌದು ಸ್ವಾಮಿ, ನಾನು ಕಂಡೆ." "ಎಲ್ಲಿ ವಾಸಿಸುತ್ತ ಕಂಡೆ?" "ಸಮುದ್ರದ ಸಮೀಪದ ಒಂದು ತಾಳೆವನದಲ್ಲಿ ಬಿಲ್ವಗಳಿವೆ, ಸ್ವಾಮಿ. ನಾನು ಆ ಬಿಲ್ವದ ಬುಡದಲ್ಲಿ ತಾಳೆಸೊಸಿಯ ಎಲೆಯ ಕೆಳಗೆ ಮಲಗಿ, 'ಭೂಮಿ ಚೂರಾದರೆ, ನಾನೇನಾಗುವೆನು?' ಎಂದು ಚಿಂತಿಸಿದೆ. ಆಗ ಅದೇ ಕ್ಷಣದಲ್ಲಿ ಭೂಮಿ ಚೂರಾದ ಸದ್ದು ಕೇಳಿ ನಾನು ಓಡಿದೆ."

ಆಗ ಬೋಧಿಸತ್ತ್ವನು "ನಿಜವಾಗಿ ಆ ತಾಳೆಯೆಲೆಯ ಮೇಲೆ ಪಕ್ವವಾದ ಬಿಲ್ವ ಬಿದ್ದು ಧಭಧಭ ಶಬ್ದವಾಗಿರಬೇಕು. ಇದು ಆ ಸದ್ದು ಕೇಳಿ ಭೂಮಿ ಚೂರಾಗುತ್ತಿದೆಯೆಂದು ಗುರುತುಮಾಡಿಕೊಂಡು ಓಡಿರಬೇಕು.

ಇರಲಿ, ನಿಜವನ್ನು ತಿಳಿಯುತ್ತೇನೆ" ಎಂದು ಆ ಮೊಲವನ್ನು ಹಿಡಿದು, ಮಿಕ್ಕ ಪ್ರಾಣಿಗಳನ್ನು ಸಮಾಧಾನಪಡಿಸಿ, "ಇದು ಕಂಡ ಸ್ಥಳದಲ್ಲಿ ಭೂಮಿ ಚೂರಾಗಿದೆಯೆ ಇಲ್ಲವೆ ನಾನು ಈಗಲೆ ತಿಳಿದುಬರುತ್ತೇನೆ. ನಾನು ಬರುವ ವರೆಗೆ ನೀವು ಇಲ್ಲಿಯೆ ಇರಿ" ಎಂದು ಆ ಮೊಲವನ್ನು ಬೆನ್ನಮೇಲೆ ಏರಿಸಿಕೊಂಡು ಸಿಂಹವೇಗದಿಂದ ಹಾರಿ, ತಾಳೆಯ ವನದಲ್ಲಿ ಮೊಲವನ್ನು ಇಳಿಸಿದನು.

ಇಳಿಸಿ, "ಬಾ! ನೀನು ಕಂಡ ಸ್ಥಳವನ್ನು ತೋರಿಸು" ಎಂದನು. ನಾನು ಬರಲಾರೆ, ಸ್ವಾಮಿ." "ಬಾ, ಭಯಪಡಬೇಡ." ಅದು ಬಿಲ್ವವೃಕ್ಷದ ಬಳಿ ಸಾರಲಾರದೆ ಕೊಂಚ ದೂರದಲ್ಲಿ ನಿಂತು, "ಇದೆ, ಸ್ವಾಮಿ, ಧಭಧಭವಾದ ಸ್ಥಳ" ಎಂದು ಹೇಳುತ್ತ,

"ಭದ್ರ! ನಾನು ವಾಸಿಸುತ್ತಿದ್ದ ಕಡೆ ಧಭಧಭವಾಯಿತು;
ಈ ಧಭಧಭ ಏನು, ಏಕೆ, ಎಂಬುದು ನಾನು ತಿಳಿಯೆ"

ಎಂದು ಮೊದಲನೆಯ ಗಾಹೆ ಹೇಳಿತು.

ಹೀಗೆನ್ನಲು, ಸಿಂಹವು ಬಿಲ್ವವೃಕ್ಷದ ಬುಡಕ್ಕೆ ಹೋಗಿ, ತಾಳೆಯೆಲೆಯ ಕೆಳಗೆ ಮೊಲ ಮಲಗಿದ್ದ ಸ್ಥಳದಲ್ಲಿ ತಾಳೆಯೆಲೆಯ ಮೇಲೆ ಬಿದ್ದ ಪಕ್ವವಾದ ಬಿಲ್ವವನ್ನು ಕಂಡಿತು. ಕಂಡು, ಭೂಮಿ ಚೂರಾಗದುದನ್ನು ನಿಜವೆಂದು ತಿಳಿದು, ಮೊಲವನ್ನು ಬೆನ್ನಮೇಲೆ ಏರಿಸಿಕೊಂಡು ಸಿಂಹವೇಗದಿಂದ ಬೇಗ ಮೃಗಸಂಘದ ಬಳಿಗೆ ಹೋಗಿ, ಎಲ್ಲಾ ವಿಚಾರವನ್ನೂ ತಿಳಿಸಿ ಭಯಪಡಬೇಡಿರೆಂದು ಆ ಮೃಗಗಳನ್ನು ಸಂತೈಸಿ ಕಳುಹಿಸಿತು.

ಆಗ ಬೋಧಿಸತ್ತ್ವನಿಲ್ಲದಿದ್ದರೆ ಎಲ್ಲ ಪ್ರಾಣಿಗಳೂ ಸಮುದ್ರವನ್ನು ಹೊಕ್ಕು ನಾಶವಾಗುತ್ತಿದ್ದುವು. ಬೋಧಿಸತ್ತ್ವನ ಆಶ್ರಯದಿಂದ ಅವು ಜೀವಪಡೆದುವು.

[೩೨೨ನೆಯ 'ದದ್ದಭ ಜಾತಕ']

೩. ಮೊಲದ ಕತೆ

ಹಿಂದೆ, ವಾರಣಾಸಿಯಲ್ಲಿ ಬ್ರಹ್ಮದತ್ತನು ರಾಜ್ಯವಾಳುತ್ತಿದ್ದಾಗ, ಬೋಧಿಸತ್ತ್ವನು ಮೊಲದ ಹೊಟ್ಟೆಯಲ್ಲಿ ಹುಟ್ಟಿ ಕಾಡಿನಲ್ಲಿ ವಾಸಿಸುತ್ತಿದ್ದನು. ಆ ಕಾಡಿನ ಒಂದು ಕಡೆ ಪರ್ವತದ ಬುಡ, ಒಂದು ಕಡೆ ನದಿ, ಒಂದು ಕಡೆ ಗಡಿನಾಡಿನ ಗ್ರಾಮ. ಆ ಮೊಲಕ್ಕೆ ಮೂವರು ಸ್ನೇಹಿತರಿದ್ದರು: ಒಂದು ಕೋತಿ, ಒಂದು ಸೃಗಾಲ, ಒಂದು ಉದ್ರ ಆ ನಾಲ್ವರು ಪಂಡಿತರು ಒಟ್ಟಿಗೆ ವಾಸಮಾಡುತ್ತ, ತಮ್ಮ ಆಹಾರಸ್ಥಾನಗಳಲ್ಲಿ ಆಹಾರವನ್ನು ಪಡೆದು, ಸಾಯಂಕಾಲ ಸಮಯಕ್ಕೆ ಒಂದು ಕಡೆ ಸೇರುವರು. ಶಶಪಂಡಿತನು "ದಾನ ಕೊಡತಕ್ಕುದು, ಶೀಲಗಳನ್ನು ರಕ್ಷಿಸತಕ್ಕುದು, ಉಪವಾಸಕರ್ಮವನ್ನು ಮಾಡತಕ್ಕುದು" ಎಂದು ಮೂವರಿಗೂ ಉಪದೇಶಮಾಡಿ ಧರ್ಮವನ್ನು ಹೇಳುವನು. ಅವರು ಅವನ ಉಪದೇಶವನ್ನು ಸ್ವೀಕರಿಸಿ ತಮ್ಮ ತಮ್ಮ ವಾಸಸ್ಥಾನಗಳನ್ನು ಹೊಕ್ಕು ವಾಸಿಸುವರು.

ಹೀಗೆ ಕೊಂಚ ಕಾಲ ಹೋಗಲು, ಒಂದು ದಿನ ಬೋಧಿಸತ್ತ್ವನು ಆಕಾಶದ ಕಡೆ ನೋಡಿ ಚಂದ್ರನನ್ನು ಕಂಡು, ನಾಳೆ ಉಪವಾಸದ ದಿನವೆಂದು ತಿಳಿದು, "ನಾಳೆ ಉಪವಾಸದ ದಿವಸ ನೀವು ಮೂವರೂ ಶೀಲಗಳನ್ನು ನಡಿಸಿಕೊಂಡು ಉಪವಾಸವನ್ನು ನಡಿಸಿರಿ. ಶೀಲಗಳನ್ನು ಬಿಡದೆ ಕೊಟ್ಟ ದಾನದಿಂದ ಮಹಾಫಲವಾಗುವುದು. ಅದರಿಂದ ಯಾಚಕರು ಬಳಿಸಾರಿದರೆ, ನೀವು ತಿನ್ನುವ ಆಹಾರವನ್ನು ಕೊಟ್ಟು ತಿನ್ನಿಸಿರಿ" ಎಂದು ಆ ಮೂವರಿಗೆ ಹೇಳಿದನು. ಅವರು "ಸಾಧು" ಎಂದು ಆ ಉಪದೇಶವನ್ನು ಸ್ವೀಕರಿಸಿ ತಮ್ಮ ವಾಸಸ್ಥಾನಗಳಲ್ಲಿ ವಾಸಿಸಿದರು.

ಮಾರನೆಯ ದಿನ ಬೆಳಗ್ಗೆ ಆ ಉದ್ರವು ಆಹಾರ ಹುಡುಕುವೆನೆಂದು ಹೊರಟು ಗಂಗಾತೀರಕ್ಕೆ ಹೋಯಿತು. ಆಗ ಒಬ್ಬ ಬೆಸ್ತರವನು ಏಳು ಕೆಂಪುಮೀನುಗಳನ್ನು ಹಿಡಿದೆತ್ತಿ ಬಳ್ಳಿಯಲ್ಲಿ ಪೋಣಿಸಿ ತಂದು ಗಂಗಾತೀರದ ಮರಳಿನಲ್ಲಿ ಮುಚ್ಚಿ, ಮೀನು ಹಿಡಿಯಲು ಗಂಗೆಯ ಕೆಳಗೆ ಹೋದನು. ಉದ್ರವು ಮೀನಿನ ವಾಸನೆಯನ್ನು ಮೂಸಿ, ಮರಳನ್ನು

ಬಗೆದು ಮೀನನ್ನು ಕಂಡಿತು. “ಇವುಗಳಿಗೆ ಒಡೆಯನುಂಟೆ?” ಎಂದು ಮೂರು ಸಲ ಗಟ್ಟಿಯಾಗಿ ಕೂಗಿ ಒಡೆಯನಾರನ್ನೂ ಕಾಣದೆ ಬಳ್ಳಿಯನ್ನು ಕಚ್ಚಿಕೊಂಡು ಹೋಯಿತು. ಅದನ್ನು ತನ್ನ ವಾಸಸ್ಥಳದಲ್ಲಿ ಇಟ್ಟು, ಸರಿಯಾದ ವೇಳೆಯಲ್ಲಿ ತಿನ್ನುವೆನೆಂದು ತನ್ನ ಶೀಲವನ್ನು ನೆನೆಯುತ್ತ ಮಲಗಿತು.

ಸೃಗಾಲ ಕೂಡ ಹೊರಗೆ ಹೊರಟು, ಆಹಾರವನ್ನು ಹುಡುಕುತ್ತ, ಒಬ್ಬ ಹೊಲಕಾಯುವವನ ಗುಡಿಸಲಿನಲ್ಲಿ ಎರಡು ಮಾಂಸಶೂಲಗಳನ್ನೂ ಒಂದು ಗೋಧವನ್ನೂ ಮೊಸರಿನ ಪಾತ್ರೆಯನ್ನೂ ಕಂಡಿತು. “ಇವುಗಳಿಗೆ ಒಡೆಯನುಂಟೆ?” ಎಂದು ಮೂರು ಸಲ ಗಟ್ಟಿಯಾಗಿ ಕೂಗಿ, ಒಡೆಯನನ್ನು ಕಾಣದೆ, ಮೊಸರಿನ ಪಾತ್ರೆ ಹಿಡಿಯುವ ಹಗ್ಗವನ್ನು ಕತ್ತಿಗೆ ಹಾಕಿ, ಮಾಂಸಶೂಲವನ್ನೂ ಗೋಧವನ್ನೂ ಬಾಯಲ್ಲಿ ಕಚ್ಚಿಕೊಂಡು ಹೋಯಿತು. ಅವುಗಳನ್ನು ತಾನು ಮಲಗುವ ಗವಿಯಲ್ಲಿ ಇಟ್ಟು, ಸರಿಯಾದ ವೇಳೆಯಲ್ಲಿ ತಿನ್ನುವೆನೆಂದು ತನ್ನ ಶೀಲವನ್ನು ನೆನೆಯುತ್ತ ಮಲಗಿತು.

ಕೋತಿ ಕೂಡ ಮಾವಿನ ತೋಪನ್ನು ಪ್ರವೇಶಿಸಿ ಮಾವಿನ ಗೊಂಚಲನ್ನು ತಂದು ತಾನು ವಾಸಿಸುವ ಗುಹೆಯಲ್ಲಿ ಇಟ್ಟು, ಸರಿಯಾದ ವೇಳೆಯಲ್ಲಿ ತಿನ್ನುವೆನೆಂದು ತನ್ನ ಶೀಲವನ್ನು ನೆನೆಯುತ್ತ ಮಲಗಿತು.

ಆದರೆ ಬೋಧಿಸತ್ತ್ವನು ಸಕಾಲದಲ್ಲಿಯೇ ಹೊರಗೆ ಬಂದು ದರ್ಭೆ ಹುಲ್ಲನ್ನು ತಿನ್ನುವೆನೆಂದು ತನ್ನ ಪೊದೆಯಲ್ಲಿ ಮಲಗಿದನು. ಆಗ ಅವನು “ನನ್ನ ಬಳಿ ಬಂದ ಯಾಚಕನಿಗೆ ಹುಲ್ಲು ಕೊಡಲಾಗುವುದಿಲ್ಲ. ಎಳ್ಳು, ಅಕ್ಕಿ ಮುಂತಾದುವು ನನ್ನಲ್ಲಿಲ್ಲ. ಯಾಚಕನು ನನ್ನ ಬಳಿ ಬಂದರೆ ನನ್ನ ಸ್ವಂತ ಶರೀರಮಾಂಸವನ್ನು ಅವನಿಗೆ ಕೊಡುವೆನು” ಎಂದು ಚಿಂತಿಸಿದನು.

ಆ ಶೀಲದ ತೇಜಸ್ಸಿಗೆ ಶಕ್ರನ ಬಿಳಿಶಿಲೆಯ ಆಸನವು ಬಿಸಿಯಾಯಿತು. ಅವನು ಅದೇಕೆಂದು ನೆನೆಯುತ್ತ ಈ ಕಾರಣವನ್ನು ಕಂಡು, ಶಶರಾಜನನ್ನು ಪರೀಕ್ಷಿಸುವೆನೆಂದನು.

ಹಾಗೆಂದು, ಶಕ್ರನು ಮೊದಲು ಉದ್ರನ ವಾಸಸ್ಥಾನಕ್ಕೆ ಹೋಗಿ ಬ್ರಾಹ್ಮಣವೇಷದಿಂದ ನಿಂತನು. “ಏಕೆ ನಿಂತೆ, ಬ್ರಾಹ್ಮಣ?” ಎಂದು ಆ

ಉದ್ರು ಕೇಳಿತು. ಅದಕ್ಕೆ, "ಪಂಡಿತ! ಏನಾದರೂ ಆಹಾರ ಸಿಕ್ಕಿದರೆ, ಉಪವಾಸವನ್ನು ಮುಗಿಸಿ ಶ್ರಮಣಧರ್ಮವನ್ನು ಮಾಡುವೆನು" ಎಂದು ಶಕ್ರನು ಹೇಳಲು, "ಸಾಧು, ನಿನಗೆ ಆಹಾರ ಕೊಡುವೆನು" ಎಂದು ಆ ಉದ್ರುವು ಅವನೊಡನೆ ಮಾತನಾಡುತ್ತ

'ಏಳು ಕೆಂಪುಮೀನುಗಳನ್ನು ನಾನು ಜಲದಿಂದ ನೆಲಕ್ಕೆ ತಂದೆ.
ಇದು ನನ್ನಲ್ಲಿ ಇದೆ, ಬ್ರಾಹ್ಮಣ. ಇದನ್ನು ತಿಂದು ವನದಲ್ಲಿ ವಾಸಿಸು'

ಎಂದು ಮೊದಲನೆಯ ಗಾಹೆ ಹೇಳಿತು.

ಬ್ರಾಹ್ಮಣನು "ನಾಳೆಯಾಗಲಿ, ಆಮೇಲೆ ಬರುತ್ತೇನೆ" ಎಂದು ಸೃಗಾಲದ ಬಳಿಗೆ ಹೋದನು. ಅಲ್ಲಿ ಕೂಡ ಸೃಗಾಲವು "ಏಕೆ ನಿಂತೆ, ಬ್ರಾಹ್ಮಣ?" ಎನ್ನಲು, ಬ್ರಾಹ್ಮಣನು ಮೊದಲಿನ ಹಾಗೆಯೆ ಹೇಳಿದನು. ಸೃಗಾಲವು "ಸಾಧು, ಕೊಡುವೆನು" ಎಂದು ಅವನೊಡನೆ ನುಡಿಯುತ್ತ

'ಕ್ಷೇತ್ರಪಾಲಕನ ರಾತ್ರಿಯೂಟವನ್ನು – ಎರಡು ಮಾಂಸದ ಶೂಲ,
ಒಂದು ಗೋಧ, ಒಂದು ಮೊಸರಿನ ಪಾತ್ರೆಗಳನ್ನು ಕದ್ದು ತಂದೆ; ಇದು ದೂಷ್ಯ.
ಇವು ನನ್ನಲ್ಲಿ ಇವೆ, ಬ್ರಾಹ್ಮಣ. ಇವನ್ನು ತಿಂದು ವನದಲ್ಲಿ ವಾಸಿಸು'

ಎಂದು ಎರಡನೆಯ ಗಾಹೆ ಹೇಳಿತು.

ಬ್ರಾಹ್ಮಣನು "ನಾಳೆಯಾಗಲಿ, ಆಮೇಲೆ ಹೇಳುತ್ತೇನೆ" ಎಂದು ಕೋತಿಯ ಬಳಿಗೆ ಹೋದನು. ಅಲ್ಲಿ ಕೂಡ ಕೋತಿಯು "ಏಕೆ ನಿಂತೆ?" ಎನ್ನಲು ಮೊದಲಿನ ಹಾಗೆ ಹೇಳಿದನು. ಅದಕ್ಕೆ ಕೋತಿಯು "ಸಾಧು, ಕೊಡುವೆನು" ಎಂದು ಅವನಿಗೆ ಹೇಳುತ್ತ

'ಪಕ್ವವಾದ ಮಾವು, ಶೀತಲವಾದ ನೀರು, ಮನೋರಮವಾದ ತಣ್ಣನೆಯ ನೆರಳು:
ಇವು ನನ್ನಲ್ಲಿ ಇವೆ, ಬ್ರಾಹ್ಮಣ. ಇವನ್ನು ಸವಿದು ವನದಲ್ಲಿ ವಾಸಿಸು'

ಎಂದು ಮೂರನೆಯ ಗಾಹೆ ಹೇಳಿತು.

ಬ್ರಾಹ್ಮಣನು "ನಾಳೆಯಾಗಲಿ, ಬರುತ್ತೇನೆ" ಎಂದು ಹೇಳಿ ಶಶ ಪಂಡಿತನ ಬಳಿಹೋದನು. ಶಶಪಂಡಿತನು "ಏಕೆ ನಿಂತೆ, ಬ್ರಾಹ್ಮಣ?" ಎನ್ನಲು, ಬ್ರಾಹ್ಮಣನು "ಪಂಡಿತ! ಏನಾದರೂ ಆಹಾರ ದೊರೆತರೆ, ಉಪ ವಾಸವನ್ನು ಮುಗಿಸಿ ಶ್ರಮಣಧರ್ಮವನ್ನು ಮಾಡುವೆನು" ಎಂದನು. ಬೋಧಿಸತ್ತ್ವನು ಅದನ್ನು ಕೇಳಿ ಮನಸ್ಸಿನಲ್ಲಿ ಸಂತೋಷಪಟ್ಟು, "ಬ್ರಾಹ್ಮಣ! ನೀನು ಆಹಾರಕ್ಕಾಗಿ ನನ್ನ ಬಳಿಗೆ ಬಂದುದು, ನೀನು

ಮಾಡಿದುದು, ಸರಿ. ನಾನು ಹಿಂದೆ ಕೊಡದ ದಾನವನ್ನು ಈ ದಿನ ತೋರಿಸುವೆನು. ನೀನು ಶೀಲವಂತನು; ಪ್ರಾಣಿಹತ್ಯೆ ಮಾಡುವುದಿಲ್ಲ. ಹೋಗಪ್ಪ! ಸೌದೆ ಜೋಡಿಸಿ ಬೆಂಕಿಮಾಡಿ ನನಗೆ ತಿಳಿಸು. ನಾನು ಆತ್ಮವನ್ನು ಪರಿತ್ಯಜಿಸಿ ಬೆಂಕಿಯ ನಡುವೆ ಬೀಳುವೆನು. ನನ್ನ ಶರೀರವು ಪಕ್ವವಾಗುವುದು; ನೀನು ಆ ಮಾಂಸವನ್ನು ತಿಂದು ಶ್ರಮಣಧರ್ಮವನ್ನು ನಡಿಸು" ಎಂದು ಅವನಿಗೆ ಹೇಳುತ್ತ

'ಮೊಲದ ಬಳಿ ಎಳ್ಳಿಲ್ಲ, ಹುರಳಿಯಿಲ್ಲ, ಅಕ್ಕಿಯಿಲ್ಲ;
ಈ ಬೆಂಕಿಯಲ್ಲಿ ಪಕ್ವವಾದ ನನ್ನನ್ನು ತಿಂದು ವನದಲ್ಲಿ ವಾಸಿಸು'

ಎಂದು ನಾಲ್ಕನೆಯ ಗಾಹೆಯನ್ನು ಹೇಳಿದನು.

ಶಕ್ರನು, ಅವನ ಮಾತು ಕೇಳಿ, ತನ್ನ ಪ್ರಭಾವದಿಂದ ಬೆಂಕಿಯ ರಾಶಿಯನ್ನು ಸೃಜಿಸಿ ಬೋಧಿಸತ್ತ್ವನಿಗೆ ತಿಳಿಸಿದನು. ಅವನು ದರ್ಭೆಯ ಹುಲ್ಲಿನ ಹಾಸಿಗೆಯಿಂದ ಎದ್ದು ಅಲ್ಲಿಗೆ ಹೋಗಿ, "ನನ್ನ ಕೂದಲಿನಲ್ಲಿ ಸಣ್ಣ ಪ್ರಾಣಿಗಳು ಇದ್ದರೆ, ಅವು ಸಾಯದಿರಲಿ" ಎಂದು ಹೇಳುತ್ತ ಮೂರು ಬಾರಿ ಮೈಯನ್ನು ಒದರಿದನು. ಒದರಿ, ತನ್ನ ಸಕಲಶರೀರವನ್ನು ದಾನಮುಖವಾಗಿ ಕೊಟ್ಟು ಹಾರಿ, ಪದ್ಮಪುಂಜದಲ್ಲಿ ರಾಜಹಂಸ ಹೇಗೋ ಹಾಗೆ, ಸಂತೋಷಚಿತ್ತದಿಂದ ಬೆಂಕಿಯ ರಾಶಿಯಲ್ಲಿ ಬಿದ್ದನು. ಆದರೆ ಆ ಬೆಂಕಿಯು ಬೋಧಿಸತ್ತ್ವನ ಶರೀರದ ರೋಮಕೂಪವನ್ನೂ ಬಿಸಿಮಾಡಲು ಶಕ್ತವಾಗಲಿಲ್ಲ; ಹಿಮಗರ್ಭವನ್ನು ಪ್ರವೇಶಿಸಿದ ಹಾಗಾಯಿತು.

ಆಗ ಶಶಪಂಡಿತನು ಶಕ್ರನನ್ನು ಕರೆದು, "ಬ್ರಾಹ್ಮಣ! ನೀನು ಮಾಡಿದ ಬೆಂಕಿ ಅತಿಶೀತಲವಾಗಿದೆ. ನನ್ನ ಶರೀರದ ರೋಮಕೂಪವನ್ನು ಕೂಡ ಬಿಸಿಮಾಡಲಾರದು. ಇದೇಕೆ?" ಎಂದನು.

"ಪಂಡಿತ! ನಾನು ಬ್ರಾಹ್ಮಣನಲ್ಲ, ನಾನು ಶಕ್ರ. ನಿನ್ನನ್ನು ಪರೀಕ್ಷಿಸಲು ಬಂದೆ."

"ಶಕ್ರ! ನೀನಿರಲಿ; ಎಲ್ಲಾ ಲೋಕಗಳವರೂ ನನ್ನನ್ನು ದಾನದಿಂದ ಪರೀಕ್ಷಿಸಲಿ, ದಾನ ಕೊಡದುದನ್ನು ನನ್ನಲ್ಲಿ ಕಾಣಲಾರರು" ಎಂದು ಬೋಧಿಸತ್ತ್ವನು ಸಿಂಹನಾದ ಮಾಡಿದನು.

ಆಗ ಶಕ್ರನು "ಶಶಪಂಡಿತ! ನಿನ್ನ ಗುಣವು ಎಲ್ಲಾ ಕಲ್ಪಗಳಿಗೂ ಪ್ರಕಟವಾಗಲಿ" ಎಂದು, ಒಂದು ಪರ್ವತವನ್ನು ಹಿಂಡಿ, ಆ ಪರ್ವತ

ರಸವನ್ನು ಕೊಂಡು ಚಂದ್ರಮಂಡಲದಲ್ಲಿ ಶಶಲಕ್ಷಣವನ್ನು ಬರೆದನು. ಬರೆದು, ಬೋಧಿಸತ್ತ್ವನನ್ನು ಕರೆದು ಆ ವನದಲ್ಲಿ ಅದೇ ಸ್ಥಳದಲ್ಲಿ ಎಳೆಯ ದರ್ಭೆಯ ಹುಲ್ಲಿನ ಮೇಲೆ ಕೆಳಗಿಳಿಸಿ, ತನ್ನ ದೇವಸ್ಥಾನಕ್ಕೆ ಹೋದನು.

ಆ ನಾಲ್ವರು ಪಂಡಿತರು ಒಟ್ಟಾಗಿ, ಸಂತೋಷದಿಂದ ಶೀಲಗಳನ್ನು ಪೂರ್ಣಗೊಳಿಸಿ, ಉಪವಾಸ ಕರ್ಮವನ್ನು ನಡಿಸಿ, ತಮ್ಮ ತಮ ಕರ್ಮಗಳಿಗನುಸಾರವಾಗಿ ಹೋದರು.

[೩೧೬ನೆಯ 'ಸಸ ಜಾತಕ']

೮. ದರ್ಭೆಯ ಹೂವು

ಹಿಂದೆ, ವಾರಣಾಸಿಯಲ್ಲಿ ಬ್ರಹ್ಮದತ್ತನು ರಾಜ್ಯವಾಳುತ್ತಿದ್ದಾಗ, ಬೋಧಿಸತ್ತ್ವನು ಒಂದು ನದೀತೀರದಲ್ಲಿ ವೃಕ್ಷದೇವತೆಯಾಗಿದ್ದನು. ಆಗ ಆ ನದೀತೀರದಲ್ಲಿ ಮಾಯಾವಿಯೆಂಬ ಸೃಗಾಲವು ತನ್ನ ಹೆಂಡತಿಯೊಡನೆ ಒಂದು ಕಡೆ ವಾಸವಾಗಿತ್ತು.

ಒಂದು ದಿನ ಆ ಸೃಗಾಲಿಯು "ಸ್ವಾಮಿ, ನನಗೆ ಬಯಕೆ ಜನಿಸಿದೆ. ಹೊಸ ಕೆಂಪುಮೀನಿನ ಮಾಂಸವನ್ನು ತಿನ್ನಲು ನನಗೆ ಆಸೆ" ಎಂದು ಸೃಗಾಲಕ್ಕೆ ಹೇಳಿತು. ಸೃಗಾಲವು "ನೀನೇನೂ ಚಿಂತಿಸಬೇಡ. ನಾನು ತರುತ್ತೇನೆ" ಎಂದು, ನದೀತೀರದಲ್ಲಿ ಚರಿಸುತ್ತ, ಕಾಲಿಗೆ ಬಳ್ಳಿಗಳನ್ನು ಬಿಗಿದುಕೊಂಡು ತೀರದಲ್ಲಿಯೇ ಹೋಯಿತು.

ಆ ಸಮಯದಲ್ಲಿ ಗಂಭೀರಚಾರಿ, ಅನುತೀರಚಾರಿ ಎಂಬ ಎರಡು ಉದ್ರಗಳು ಮೀನು ಹುಡುಕುತ್ತ ತೀರದಲ್ಲಿ ನಿಂತಿದ್ದುವು. ಅವುಗಳಲ್ಲಿ ಗಂಭೀರಚಾರಿಯು ಒಂದು ದೊಡ್ಡ ಕೆಂಪುಮೀನನ್ನು ಕಂಡು, ವೇಗವಾಗಿ ನೀರೊಳಗೆ ಹೊಕ್ಕು, ಅದರ ಬಾಲವನ್ನು ಹಿಡಿಯಿತು. ಆದರೆ ಬಲಶಾಲಿಯಾದ ಮೀನು ಅದನ್ನೇ ಎಳೆದುಕೊಂಡುಹೋಯಿತು. ಅದು "ಈ ದೊಡ್ಡ ಮೀನು ನಮಗಿಬ್ಬರಿಗೂ ಸಾಕಾಗುವುದು. ನನ್ನ ಸಹಾಯಕ್ಕೆ ಬಾ" ಎಂದು ಇನ್ನೊಂದನ್ನು ಕೂಗುತ್ತ

"ಭದ್ರ, ಅನುತೀರಚಾರಿ! ನನ್ನ ಸಹಾಯಕ್ಕೆ ಓಡಿಬಾ!
ನಾನು ಹಿಡಿದ ಮೀನು ದೊಡ್ಡದು. ನನ್ನನ್ನು ಬಲವಾಗಿ ಎಳೆಯುತ್ತಿದೆ"

ಎಂದು ಮೊದಲನೆಯ ಗಾಹೆ ಹೇಳಿತು.

ಅದನ್ನು ಕೇಳಿ ಅನುತೀರಚಾರಿಯು

"ಭದ್ರ, ಗಂಭೀರಚಾರಿ! ಬಲವಾಗಿ ಬಿಗಿಯಾಗಿ ಹಿಡಿ.
ಗರುಡನು ಹಾವನ್ನು ಹೇಗೋ ಹಾಗೆ ನಾನು ನಿನ್ನನ್ನು ಮೇಲೆತ್ತುವೆನು"

ಎಂದು ಎರಡನೆಯ ಗಾಹೆ ಹೇಳಿತು.

ಆಗ ಅವು ಎರಡೂ ಒಂದಾಗಿ, ಆ ಕೆಂಪುಮೀನನ್ನು ನೆಲದ ಮೇಲಿಟ್ಟುಕೊಂಡು "ನೀನು ಹಂಚು, ನೀನು ಹಂಚು" ಎಂದು ಜಗಳವಾಡುತ್ತ, ಹಂಚಲಾರದೆ ಕೆಳಗಿಟ್ಟು ಕುಳಿತುವು.

ಆ ವೇಳೆಗೆ ಸೃಗಾಲವು ಅಲ್ಲಿಗೆ ಬಂತು. ಆ ಉದ್ರುಗಳು ಅದನ್ನು ಕಂಡು ನಮಸ್ಕರಿಸಿ, "ಅಯ್ಯಾ ದರ್ಭಪುಷ್ಪ! ನಾವು ಒಟ್ಟಾಗಿ ಈ ಮೀನು ಹಿಡಿದೆವು. ಇದನ್ನು ಹಂಚಲಾರದೆ ನಮ್ಮಲ್ಲಿ ವಿವಾದ ಹುಟ್ಟಿತು. ನೀನು ಸಮವಾಗಿ ಹಂಚಿಕೊಡು" ಎಂದು ಕೇಳಿ

"ಕೇಳು ದರ್ಭಪುಷ್ಪ! ನಮ್ಮಲ್ಲಿ ವಿವಾದ ಹುಟ್ಟಿತು.
ನಮ್ಮ ಕಲಹವನ್ನು ಶಮನಮಾಡು. ವಿವಾದ ಶಾಂತವಾಗಲಿ"

ಎಂದು ಮೂರನೆಯ ಗಾಹೆಯನ್ನು ಹೇಳಿದುವು.

ಅವುಗಳ ಮಾತು ಕೇಳಿ, ಸೃಗಾಲವು ತನ್ನ ಬಲವನ್ನು ಬೆಳಗುತ್ತ

"ನಾನು ಹಿಂದೆ ಧರ್ಮದಿಂದ ಅನೇಕ ನ್ಯಾಯಗಳನ್ನು ತೀರಿಸಿದ್ದೇನೆ.
ನಿಮ್ಮ ಕಲಹವನ್ನು ನಿಲ್ಲಿಸುವೆನಯ್ಯ! ವಿವಾದ ನಿಲ್ಲಲಿ"

ಎಂದು ಈ ಗಾಹೆಯನ್ನು ಹೇಳುತ್ತ ಹಂಚಿ,

"ಅನುತೀರಚಾರಿಗೆ ಬಾಲ, ಗಂಭೀರಚಾರಿಗೆ ತಲೆ;
ಮಧ್ಯದ ಖಂಡವು ಧರ್ಮಸ್ಥನಿಗೆ"

ಎಂದು ಗಾಹೆ ಹೇಳಿತು.

ಹೀಗೆ ಆ ಮೀನನ್ನು ಹಂಚಿ, "ನೀವು ಜಗಳವಾಡದೆ ಬಾಲವನ್ನೂ ತಲೆಯನ್ನೂ ತಿನ್ನಿರಿ" ಎನ್ನುತ್ತ ಮಧ್ಯದ ಖಂಡವನ್ನು ಬಾಯಲ್ಲಿ ಕಚ್ಚಿಕೊಂಡು, ಅವು ನೋಡುತ್ತಿದ್ದಂತೆಯೇ ಓಡಿಹೋಯಿತು.

ಅವು ಸಾವಿರವನ್ನು ಸೋತಂತೆ ಕೆಟ್ಟಮುಖಮಾಡಿ ಕುಳಿತು

"ಜಗಳವಿಲ್ಲದಿದ್ದರೆ ನಮಗೆ ಬಹುಕಾಲ ಊಟವಾಗುತ್ತಿತ್ತು;
ತಲೆಬಾಲವಿಲ್ಲದ ಕೆಂಪುಮೀನನ್ನು ಸೃಗಾಲ ಕೊಂಡಿತು"

ಎಂದು ಆರನೆಯ ಗಾಹೆಯನ್ನು ಹೇಳಿದುವು.

ಸೃಗಾಲವು "ಈ ದಿನ ಹೆಂಡತಿಗೆ ಕೆಂಪುಮೀನು ತಿನ್ನಿಸುವೆನು" ಎಂದು ಸಮಾಧಾನದಿಂದ ಅದರ ಬಳಿ ಹೋಯಿತು. ಸೃಗಾಲಿಯು ಅದು ಬರುವುದನ್ನು ಕಂಡು ಸಂತೋಷಪಟ್ಟು

"ರಾಜ್ಯ ಸಿಕ್ಕಿದ ಕ್ಷತ್ರಿಯರಾಜನು ಆನಂದಪಡುವಂತೆ
ಪತಿಯು ತುಂಬಿದ ಬಾಯನ್ನು ಕಂಡು ನಾನು ಆನಂದಪಡುವೆನು"

ಎಂದು ಈ ಗಾಹೆಯನ್ನು ಹೇಳಿ,

"ನೆಲದಲ್ಲಿ ನಿಂತವನು ನೀರಿನ ಮೀನನ್ನು ಹೇಗೆ ಹಿಡಿದೆ?
ನಿನಗೆ ಇದು ಹೇಗೆ ಸಿಕ್ಕಿತು – ವಿವರಿಸಯ್ಯ"
ಎಂದು ಪಡೆದ ಉಪಾಯವನ್ನು ಕೇಳಿ ಈ ಗಾಹೆ ಹೇಳಿತು.

ಸೃಗಾಲವು ತಾನು ಅದನ್ನು ಪಡೆದ ಉಪಾಯವನ್ನು ತಿಳಿಸುತ್ತ
"ವಿವಾದದಿಂದ ನಾಶವಾಗುವರು; ವಿವಾದದಿಂದ ಹಣ ಹಾಳು.
ವಿವಾದದಿಂದ ಉದ್ರಗಳು ಇದನ್ನು ಕಳೆದುಕೊಂಡುವು.
ಮಾಯಾವೀ! ಕೆಂಪುಮೀನು ತಿನ್ನು!"
ಎಂದು ಇನ್ನೊಂದು ಗಾಹೆ ಹೇಳಿತು.

[೪೦೦ನೆಯ 'ದಬ್ಬಪುಪ್ಫ ಜಾತಕ']

೫. ದಧಿವಾಹನ

ಹಿಂದೆ, ವಾರಣಾಸಿಯಲ್ಲಿ ಬ್ರಹ್ಮದತ್ತನು ರಾಜ್ಯವಾಳುತ್ತಿದ್ದಾಗ, ಕಾಶೀರಾಷ್ಟ್ರದಲ್ಲಿ ನಾಲ್ಕು ಜನ ಅಣ್ಣತಮ್ಮಂದಿರು ಇದ್ದರು. ಅವರು ಬ್ರಾಹ್ಮಣರು; ಮನೆಯನ್ನು ಬಿಟ್ಟು ಋಷಿಗಳಾಗಿ ಹೊರಗೆ ಹೊರಟು, ಹಿಮವಂತಪ್ರದೇಶದಲ್ಲಿ ಸಾಲಾಗಿ ಪರ್ಣಶಾಲೆಗಳನ್ನು ಮಾಡಿಕೊಂಡು ವಾಸಮಾಡುತ್ತಿದ್ದರು.

ಅವರಲ್ಲಿ ಹಿರಿಯ ಸಹೋದರನು ಸತ್ತಮೇಲೆ ಇಂದ್ರಪದವಿಯನ್ನು ಪಡೆದನು. ಆಗ ತಾನು ಯಾರೆಂಬುದನ್ನು ತಿಳಿದು, ಏಳೆಂಟು ದಿವಸಗಳಿಗೆ ಒಂದು ಬಾರಿ ಇತರರನ್ನು ಬಂದು ಕಂಡು, ಅವರಿಗೆ ಸಹಾಯ ಮಾಡುತ್ತಿದ್ದನು.

ಒಂದು ದಿನ, ಇಂದ್ರಪದವಿಯನ್ನು ಪಡೆದವನು ಆ ಸಂನ್ಯಾಸಿಗಳಲ್ಲಿ ಹಿರಿಯನಾದವನಿಗೆ ವಂದಿಸಿ ಒಂದು ಕಡೆ ಕುಳಿತು, "ಭನ್ತೇ! ನಿನಗೇನು ಬೇಕು?" ಎಂದು ಕೇಳಿದನು. ಆ ತಪಸ್ವಿಗೆ ಪಾಂಡುರೋಗವಿತ್ತು. ಅವನು "ನನಗೆ ಬೆಂಕಿ ಬೇಕು" ಎಂದನು. ಇಂದ್ರತ್ವವನ್ನು ಪಡೆದವನು ಅವನಿಗೆ ಒಂದು ಕತ್ತಿಗೊಡಲಿಯನ್ನು ಕೊಟ್ಟನು. ತಾಪಸನು "ಇದನ್ನು ಕೊಂಡುಹೋಗಿ ನನಗೆ ಕಟ್ಟಿಗೆ ತರುವವರು ಯಾರು?" ಎನ್ನಲು, ಶಕ್ರನು "ಭನ್ತೇ! ನಿನಗೆ ಸೌದೆ ಬೇಕಾದರೆ ಈ ಕೊಡಲಿಯನ್ನು ಕೈಯಿಂದ ಹೊಡೆದು, 'ಸೌದೆ ತಂದು ಬೆಂಕಿಮಾಡು' ಎಂದು ಹೇಳು. ಇದು ಸೌದೆಯನ್ನು ತಂದು ಬೆಂಕಿ ಮಾಡುವುದು" ಎಂದನು.

ಹೀಗೆಂದು ಅವನಿಗೆ ಆ ಕತ್ತಿಗೊಡಲಿಯನ್ನು ಕೊಟ್ಟು, ಎರಡನೆಯವನ ಬಳಿ ಸಾರಿ "ಭನ್ತೇ, ನಿನಗೇನು ಬೇಕು?" ಎಂದು ಕೇಳಿದನು. ಆ ಸಂನ್ಯಾಸಿಯ ಪರ್ಣಶಾಲೆಯು ಆನೆಗಳು ಬಂದುಹೋಗುವ ಮಾರ್ಗದಲ್ಲಿತ್ತು. ಅವನು "ಆನೆಗಳಿಂದ ನನಗೆ ಬಹಳ ತೊಂದರೆಯಾಗುತ್ತಿದೆ. ಅವುಗಳನ್ನು ಓಡಿಸು" ಎಂದನು. ಶಕ್ರನು ಅವನಿಗೆ ಒಂದು ಭೇರಿಯನ್ನು ಕೊಟ್ಟು, "ಭನ್ತೇ! ಭೇರಿಯ ಈ ಕಡೆ ಹೊಡೆದರೆ, ನಿನ್ನ ಶತ್ರುಗಳು ಓಡುವರು; ಭೇರಿಯ ಈ ಕಡೆ ಹೊಡೆದರೆ ಅವರು ಮಿತ್ರರಾಗಿ ಚತುರಂಗ ಸೇನೆಯೊಡನೆ ನಿನ್ನನ್ನು ಓಲೈಸುವರು" ಎಂದನು.

ಎಂದು ಆ ಭೇರಿಯನ್ನು ಕೊಟ್ಟು, ಕೊನೆಯವನ ಬಳಿ ಹೋಗಿ "ಭನ್ತೇ, ನಿನಗೇನು ಬೇಕು?" ಎಂದು ಕೇಳಿದನು. ಅವನಿಗೆ ಕೂಡ ಪಾಂಡುರೋಗವಿತ್ತು. ಅವನು "ನನಗೆ ಮೊಸರು ಬೇಕು" ಎಂದನು. ಶಕ್ರನು ಅವನಿಗೆ ಒಂದು ಮೊಸರಿನ ಪಾತ್ರೆಯನ್ನು ಕೊಟ್ಟು, "ನಿನಗೆ ಮೊಸರು ಬೇಕಾದರೆ ಇದನ್ನು ಬಗ್ಗಿಸು; ಮಹಾನದಿಯಾಗಿ ಮಹಾ ಪ್ರವಾಹವಾಗಿ ಹೊರಟು ನಿನಗೆ ಒಂದು ರಾಜ್ಯವನ್ನು ಹಿಡಿದುಕೊಡಲು ಕೂಡ ಸಮರ್ಥವಾಗುವುದು" ಎಂದು ಹೇಳಿ ಹೊರಟನು.

ಅನಂತರ, ಕತ್ತಿಗೊಡಲಿಯು ಹಿರಿಯ ಸಹೋದರನಿಗೆ ಬೆಂಕಿ ಮಾಡಿಕೊಡುತ್ತಿತ್ತು. ಇನ್ನೊಬ್ಬನು ಭೇರಿಯ ಒಂದು ಕಡೆ ಹೊಡೆದರೆ ಆನೆ ಓಡಿಹೋಗುತ್ತಿತ್ತು. ಕಡೆಯವನು ಮೊಸರು ತಿನ್ನುತ್ತಿದ್ದನು.

ಆ ಸಮಯದಲ್ಲಿ, ಒಂದು ಹಂದಿ ಹಾಳುಬಿದ್ದ ಗ್ರಾಮವೊಂದರಲ್ಲಿ ತಿರುಗುತ್ತ ದಿವ್ಯವಾದ ಒಂದು ಮಣಿಯನ್ನು ಕಂಡಿತು. ಅದು ಆ ಮಣಿಯನ್ನು ಬಾಯಲ್ಲಿ ಕಚ್ಚಿ, ಅದರ ಪ್ರಭಾವದಿಂದ ಆಕಾಶದಲ್ಲಿ ಏರಿ, ಸಮುದ್ರದ ನಡುವಿನ ಒಂದು ದ್ವೀಪಕ್ಕೆ ಹೋಗಿ, ಅಲ್ಲಿ ತಾನು ವಾಸಿಸುವೆನೆಂದು ಇಳಿದು, ಒಂದು ಉದುಂಬರ ವೃಕ್ಷದ ಕೆಳಗೆ ಸೊಗಸಾದ ಸ್ಥಳದಲ್ಲಿ ಮನೆಮಾಡಿಕೊಂಡಿತು. ಒಂದು ದಿನ, ಅದು ಆ ಮಣಿಯನ್ನು ಎದುರಿಗೆ ಇಟ್ಟುಕೊಂಡು ಆ ಮರದ ಮೂಲದಲ್ಲಿ ಮಲಗಿತು.

ಆ ಸಮಯದಲ್ಲಿ, ಕಾಶೀರಾಷ್ಟ್ರದಲ್ಲಿ ವಾಸಿಸುತ್ತಿದ್ದ ಒಬ್ಬ ಮನುಷ್ಯನನ್ನು ಅವನ ತಾಯಿತಂದೆಗಳು 'ಇವನಿಂದ ನಮಗೆ ಉಪಕಾರವಿಲ್ಲ'ವೆಂದು ಮನೆಯಿಂದ ಅಟ್ಟಿದ್ದರು. ಅವನು ಸಮುದ್ರತೀರದ ಗ್ರಾಮವೊಂದಕ್ಕೆ ಹೋಗಿ, ಅಲ್ಲಿ ನಾವಿಕರಿಗೆ ಕೆಲಸಗಾರನಾಗಿ ನಾವೆಯನ್ನು ಏರಿದನು. ನಡುಸಮುದ್ರದಲ್ಲಿ ಹಡಗು ಒಡೆಯಲು, ಅದರ ಹಲಗೆಗಳೊಡನೆ ತೇಲಿ ಆ ಹಂದಿಯಿದ್ದ ದ್ವೀಪವನ್ನು ಸೇರಿದನು. ಅಲ್ಲಿ ಹಣ್ಣುಹಂಪಲುಗಳನ್ನು ಹುಡುಕುತ್ತ ಆ ಹಂದಿ ಮಲಗಿರುವುದನ್ನು ಕಂಡು, ಅದರ ಸಮೀಪಕ್ಕೆ ಬಂದು, ಆ ಮಣಿಯನ್ನು ತೆಗೆದುಕೊಂಡು, ಅದರ ಪ್ರಭಾವದಿಂದ ಆಕಾಶದಲ್ಲಿ ಎದ್ದು ಉದುಂಬರ ವೃಕ್ಷದ ಮೇಲೆ ಕುಳಿತನು. ಕುಳಿತು, "ಈ ಹಂದಿಯು ಈ ಮಣಿಯ ಪ್ರಭಾವದಿಂದ

ಆಕಾಶದಲ್ಲಿ ಸಂಚರಿಸಿ ಇಲ್ಲಿ ವಾಸಮಾಡುವುದೆಂದು ಕಾಣುತ್ತದೆ. ನಾನು ಮೊದಲು ಇದನ್ನು ಕೊಂದು, ಇದರ ಮಾಂಸವನ್ನು ತಿಂದು, ಆಮೇಲೆ ಹೊರಡುತ್ತೇನೆ" ಎಂದು ಚಿಂತಿಸಿದನು.

ಹೀಗೆ ಚಿಂತಿಸಿ, ಒಂದು ಕಡ್ಡಿಯನ್ನು ಮುರಿದು ಅದರ ತಲೆಯ ಮೇಲೆ ಬೀಳಿಸಿದನು. ಹಂದಿಯು ಎಚ್ಚತ್ತು, ತನ್ನ ಮಣಿಯನ್ನು ಕಾಣದೆ ಅಲ್ಲಿ ಇಲ್ಲಿ ನಡುಗುತ್ತ ಓಡಾಡಿತು. ಮರದಲ್ಲಿ ಕುಳಿತವನು ಅದನ್ನು ಕಂಡು ನಕ್ಕನು. ಹಂದಿಯು ಸುತ್ತಲೂ ನೋಡಿ ಅವನನ್ನು ಕಂಡು, ಮರವನ್ನು ತಲೆಯಿಂದ ಹೊಡೆದು ಅಲ್ಲಿಯೇ ಸತ್ತಿತು.

ಆಗ ಆ ಪುರುಷನು ಇಳಿದು, ಬೆಂಕಿಮಾಡಿ, ಆ ಮಾಂಸವನ್ನು ಬೇಯಿಸಿ ತಿಂದು ಆಕಾಶದಲ್ಲಿ ಏರಿದನು. ಹಿಮವಂತದ ತಲೆಯ ಮೇಲೆ ಹೋಗುತ್ತ ಅಲ್ಲಿಯ ಆಶ್ರಮಪ್ರದೇಶವನ್ನು ಕಂಡು, ಹಿರಿಯ ತಪಸ್ವಿಯ ಆಶ್ರಮದಲ್ಲಿ ಇಳಿದನು. ಅಲ್ಲಿ ಎರಡು ಮೂರು ಹಗಲು ವಾಸಮಾಡಿ, ಆ ಸಂನ್ಯಾಸಿಯ ಕೆಲಸಕಾರ್ಯಗಳನ್ನು ಮಾಡಿದನು. ಆಗ ಆ ಕತ್ತಿಗೊಡಲಿಯ ಪ್ರಭಾವವನ್ನು ಕಂಡು, ತಾನು ಅದನ್ನು ತೆಗೆದುಕೊಂಡು ಹೋಗಬೇಕೆಂದು ತನ್ನ ಮಣಿಯ ಪ್ರಭಾವವನ್ನು ಅವನಿಗೆ ತೋರಿಸಿ, "ಭನ್ತೇ, ಇದನ್ನು ತೆಗೆದುಕೊಂಡು ನಿಮ್ಮ ಕತ್ತಿಗೊಡಲಿಯನ್ನು ಕೊಡಿರಿ" ಎಂದನು. ತಪಸ್ವಿಯು, ಆಕಾಶದಲ್ಲಿ ಸಂಚರಿಸಲು ಬಯಸಿ, ಆ ಮಣಿಯನ್ನು ತೆಗೆದುಕೊಂಡು ಕತ್ತಿಗೊಡಲಿಯನ್ನು ಕೊಟ್ಟನು. ಅವನು ಅದನ್ನು ಹಿಡಿದು ಕೊಂಚ ದೂರ ಹೋಗಿ, ಆ ಕತ್ತಿಗೊಡಲಿಯನ್ನು ಕೈಯಿಂದ ಹೊಡೆದು, "ಕತ್ತಿಗೊಡಲಿ! ತಪಸ್ವಿಯ ತಲೆ ಒಡೆದು ನನ್ನ ಮಣಿ ತಾ!" ಎಂದನು. ಅದು ಹೋಗಿ ಆ ತಾಪಸನ ತಲೆ ಒಡೆದು ಮಣಿ ತಂದಿತು.

ಅವನು ಆ ಕತ್ತಿಗೊಡಲಿಯನ್ನು ಬಚ್ಚಿಟ್ಟು, ಮಧ್ಯಮ ತಾಪಸನ ಬಳಿಗೆ ಹೋಗಿ, ಕೆಲವು ಹಗಲು ಅಲ್ಲಿ ವಾಸಿಸಿದನು. ಆಗ ಅವನ ಭೇರಿಯ ಪ್ರಭಾವವನ್ನು ಕಂಡು, ತನ್ನ ಮಣಿಯನ್ನು ಕೊಟ್ಟು ಆ ಭೇರಿಯನ್ನು ಕೊಂಡು, ಮೊದಲಿನಂತೆಯೇ ಅವನ ತಲೆಯನ್ನೂ ಒಡೆಯಿಸಿದನು.

ಅನಂತರ ಕಡೆಯವನ ಬಳಿಸಾರಿ, ಅವನ ಮೊಸರಿನ ಪಾತ್ರೆಯ ಪ್ರಭಾವವನ್ನು ಕಂಡು, ಮಣಿಗೆ ಬದಲಾಗಿ ಮೊಸರಿನ ಪಾತ್ರೆಯನ್ನು ಕೊಂಡು, ಮೊದಲಿನಂತೆಯೇ ಅವನ ತಲೆಯನ್ನೂ ಒಡೆಸಿದನು.

ಹೀಗೆ ಮಣಿ ಕತ್ತಿಗೊಡಲಿ ಭೇರಿ ಮೊಸರಿನ ಪಾತ್ರೆಗಳನ್ನು ಕೊಂಡು, ಆಕಾಶದಲ್ಲಿ ಎದ್ದು, ವಾರಣಾಸಿಗೆ ಸ್ವಲ್ಪ ದೂರದಲ್ಲಿ ನಿಂತು “ನನ್ನೊಡನೆ ಯುದ್ಧಮಾಡು; ಇಲ್ಲವೆ ರಾಜ್ಯ ಕೊಡು.” ಎಂದು ವಾರಣಾಸಿಯ ರಾಜನಿಗೆ ಎಲೆಯ ಮೇಲೆ ಬರೆದು ಕಳುಹಿಸಿದನು. ರಾಜನು ಆ ಸುದ್ದಿಯನ್ನು ಕೇಳಿ ‘ಕಳ್ಳನನ್ನು ಹಿಡಿಯೋಣ’ವೆಂದು ಹೊರಟನು. ಇವನು ಭೇರಿಯ ಒಂದು ಕಡೆ ಬಡಿಯಲು, ರಾಜನ ಚತುರಂಗ ಸೇನೆಯು ಇವನನ್ನು ಓಲೈಸಿತು. ರಾಜನು ಪರಿವಾರಹೀನನಾದುದನ್ನು ತಿಳಿದು ಮೊಸರಿನ ಪಾತ್ರೆಯನ್ನು ಬಗ್ಗಿಸಿದನು. ದೊಡ್ಡ ನದಿ ಹರಿಯಿತು. ಅನೇಕ ಜನರು ಮೊಸರಿನಲ್ಲಿ ಮುಳುಗಿ ಹೊರಗೆ ಬರಲಾರದೆ ಹೋದರು. ಕತ್ತಿಗೊಡಲಿಯನ್ನು ಕೈಯಿಂದ ಹೊಡೆದು ‘ರಾಜನ ತಲೆ ತಾ’ ಎಂದನು. ಕತ್ತಿಗೊಡಲಿಯು ಹೋಗಿ ರಾಜನ ತಲೆಯನ್ನು ತಂದು ಇವನ ಕಾಲ ಬಳಿ ಇಟ್ಟಿತು. ಒಬ್ಬನಿಗಾದರೂ ಆಯುಧವೆತ್ತಲು ಸಾಧ್ಯವಾಗಲಿಲ್ಲ.

ಹೀಗೆ ದೊಡ್ಡ ಸೈನ್ಯವನ್ನು ಸುತ್ತ ಕೂಡಿಸಿಕೊಂಡು ಅವನು ನಗರವನ್ನು ಹೊಕ್ಕು ಅಭಿಷೇಕಮಾಡಿಸಿಕೊಂಡು ದಧಿವಾಹನನೆಂಬ ರಾಜನಾಗಿ ಧರ್ಮದಿಂದ ರಾಜ್ಯವಾಳಿದನು.

ಒಂದು ದಿನ ಅವನು ಮಹಾನದಿಯಲ್ಲಿ ಬಲೆಯಿಂದ ಆಟವಾಡುತ್ತಿದ್ದನು. ಆಗ, ದೇವತೆಗಳು ತಿನ್ನಲು ಯೋಗ್ಯವಾದ ಒಂದು ಪಕ್ವವಾದ ಮಾವಿನ ಹಣ್ಣು ಕರ್ಣಮುಂಡವೆಂಬ ಕೊಳದಿಂದ ಬಂದು ಆ ಬಲೆಗೆ ಸಿಕ್ಕಿತು. ಬಲೆಯನ್ನು ಎತ್ತಿದವರು ಅದನ್ನು ಕಂಡು ರಾಜನಿಗೆ ತೋರಿಸಿದರು. ಅದು ದೊಡ್ಡದಾಗಿತ್ತು, ಮಡಕೆಯ ಗಾತ್ರವಾಗಿತ್ತು, ಗುಂಡಾಗಿತ್ತು, ಚಿನ್ನದ ಬಣ್ಣವಾಗಿತ್ತು. ‘ಇದು ಎಂತಹ ಫಲ?’ ಎಂದು ರಾಜನು ವನಚಾರಕರನ್ನು ಕೇಳಿದನು. ಅವರು ‘ಇದು ಮಾವಿನ ಹಣ್ಣು’ ಎನ್ನಲು, ಅದನ್ನು ತಿಂದು, ಅದರ ಬೀಜವನ್ನು ತನ್ನ ಉದ್ಯಾನದಲ್ಲಿ ನೆಡಿಸಿ, ಹಾಲುನೀರು ಚಿಮುಕಿಸುತ್ತಿದ್ದನು. ಮರ ಹುಟ್ಟಿ, ಮೂರನೆಯ ವರ್ಷದಲ್ಲಿ ಫಲ ಕಂಡಿತು. ಆ ಮಾವಿಗೆ ಮಾಡುವ ಸತ್ಕಾರ ಬಹಳವಾಯಿತು. ಅದಕ್ಕೆ ಹಾಲುನೀರು ಚಿಮುಕಿಸುವರು, ಐದು ವಾಸನೆಯ ಹೂಗಳ ಮಾಲೆಯನ್ನು ಹಾಕುವರು; ಮಾಲೆಯ ಎಳೆಗಳನ್ನು ಅದರ ಸುತ್ತ

ಇಡುವರು; ಸುವಾಸನೆಯ ತೈಲದ ದೀಪವನ್ನು ಉರಿಸುವರು. ಅಲ್ಲದೆ, ಅದರ ಸುತ್ತ ಒಂದು ಬಟ್ಟೆಯ ತೆರೆ ಆಯಿತು. ಹಣ್ಣುಗಳು ಮಧುರ ವಾದುವು, ಚಿನ್ನದ ಬಣ್ಣವಾದುವು.

ದಧಿವಾಹನ ರಾಜನು ಇತರ ರಾಜರಿಗೆ ಮಾವಿನ ಹಣ್ಣು ಕಳುಹಿಸು ವಾಗ, ಅದರ ಬೀಜದಿಂದ ಮರ ಹುಟ್ಟುವುದೆಂದು ಹೆದರಿ, ಮೊಳಕೆ ಹುಟ್ಟುವ ಸ್ಥಳವನ್ನು ಮುಳ್ಳಿನಿಂದ ಮುರಿದು ಕಳುಹಿಸುವನು. ಅವರು ಆ ಮಾವನ್ನು ತಿಂದು ಬೀಜ ನೆಟ್ಟರೆ ಮೊಳಕೆ ಹುಟ್ಟುತ್ತಿರಲಿಲ್ಲ. ಅದಕ್ಕೇನು ಕಾರಣವೆಂದು ಕೇಳಿ, ಅವರು ಅದಕ್ಕೆ ಕಾರಣವನ್ನು ತಿಳಿದರು.

ಆಗ ಒಬ್ಬ ರಾಜನು ತನ್ನ ತೋಟಗಾರನನ್ನು ಬರಹೇಳಿ, "ದಧಿ ವಾಹನನ ಮಾವಿನ ಹಣ್ಣುಗಳ ರಸವನ್ನು ಹಾಳುಮಾಡಿ ಕಹಿಯಾಗಿ ಮಾಡಲು ಆಗುವುದೆ?" ಎಂದು ಕೇಳಿದನು. ಅವನು "ಹೌದು, ದೇವ" ಎನ್ನಲು, "ಹಾಗಾದರೆ ಹೋಗು" ಎಂದು ಅವನಿಗೆ ಒಂದು ಸಾವಿರ ಕೊಟ್ಟು ಕಳುಹಿಸಿದನು.

ಆ ತೋಟಗಾರನು ವಾರಣಾಸಿಗೆ ಹೋಗಿ, ಉದ್ಯಾನಪಾಲಕ ನೊಬ್ಬನು ಬಂದಿರುವನೆಂದು ರಾಜನಿಗೆ ತಿಳಿಸಿದನು. ರಾಜನು ಅವನನ್ನು ಕರೆಯಿಸಿದನು. ಅವನು ಒಳಗೆ ಬಂದು ರಾಜನಿಗೆ ವಂದಿಸಲು, "ನೀನು ತೋಟಗಾರನೆ?" ಎಂದು ರಾಜನು ಕೇಳಿದನು. "ಹೌದು, ದೇವ" ಎಂದು ಅವನು ತನ್ನ ಪ್ರಭಾವವನ್ನು ವರ್ಣಿಸಲು, "ಹೋಗು, ನಮ್ಮ ಉದ್ಯಾನಪಾಲಕನ ಬಳಿ ಹೋಗು" ಎಂದು ರಾಜನು ಅವನನ್ನು ಕಳು ಹಿಸಿದನು. ಅವರು ಇಬ್ಬರೂ ಆ ಉದ್ಯಾನವನ್ನು ನೋಡಿಕೊಳ್ಳುತ್ತಿದ್ದರು.

ಹೊಸದಾಗಿ ಬಂದ ತೋಟಗಾರನು ಅಕಾಲದ ಹೂಗಳನ್ನೂ ಹಣ್ಣುಗಳನ್ನೂ ಗಿಡಮರಗಳಲ್ಲಿ ಬಿಡಿಸಿ ಉದ್ಯಾನವನ್ನು ರಮಣೀಯವಾಗಿ ಮಾಡಿದನು. ರಾಜನು ಅದರಿಂದ ಪ್ರಸನ್ನನಾಗಿ ಹಳೆಯ ತೋಟಗಾರ ನನ್ನು ತೆಗೆದು ಅವನಿಗೇ ತೋಟವನ್ನು ಕೊಟ್ಟನು. ಉದ್ಯಾನವು ತನ್ನ ಕೈಗೆ ಬಂದುದನ್ನು ತಿಳಿದು, ಅವನು ಆ ಮಾವಿನ ಮರದ ಸುತ್ತ ಬೇವಿನ ಮರವನ್ನೂ ಪಗ್ಗವಲ್ಲಿಯನ್ನೂ ನೆಟ್ಟನು. ಅವು ಕ್ರಮವಾಗಿ ಬೆಳೆದುವು. ಬುಡಗಳಲ್ಲಿ ಬುಡವೂ ಕೊಂಬೆಗಳಲ್ಲಿ ಕೊಂಬೆಯೂ ಕೆಳಗೂ ಮೇಲೂ ಸೇರಿಕೊಂಡವು. ಹೀಗೆ ಅಸಹ್ಯವಾದ, ಕಹಿಯಾದುದರ

ಜೊತೆಯಿಂದ ಸಿಹಿಯಾದ ಮಾವಿನ ಹಣ್ಣು ಬೇವಿನೆಲೆಯ ರಸದಂತೆ ಕಹಿಯಾಯಿತು. ಮಾವಿನ ಹಣ್ಣು ಕಹಿಯಾದುದನ್ನು ತಿಳಿದು ತೋಟಗಾರನು ಓಡಿಹೋದನು. ದಧಿವಾಹನನು ಉದ್ಯಾನಕ್ಕೆ ಹೋಗಿ ಮಾವಿನ ಹಣ್ಣನ್ನು ತಿನ್ನಬೇಕೆಂದು ಬಾಯಲ್ಲಿ ಇಟ್ಟು, ಮಾವಿನ ರುಚಿಯು ಬೇವಿನ ರಸದಂತೆ ಅಸಹ್ಯವಾಗಿರಲು, ಸಹಿಸಲಾರದೆ ಕೆಮ್ಮುತ್ತ ಉಗುಳಿದನು.

ಆ ಸಮಯದಲ್ಲಿ ಬೋಧಿಸತ್ತ್ವನು ಅವನಿಗೆ ಧರ್ಮ ಅರ್ಥಗಳನ್ನು ಬೋಧಿಸುತ್ತಿದ್ದನು. ರಾಜನು ಆ ಬೋಧಿಸತ್ತ್ವನನ್ನು ಕರೆದು, "ಪಂಡಿತ! ಈ ಮರವನ್ನು ಮೊದಲಿನಂತೆಯೇ ಕಾಪಾಡುವರು; ಏನೂ ಕಡಿಮೆಯಾಗಿಲ್ಲ. ಆದರೂ ಇದರ ಹಣ್ಣು ಕಹಿಯಾಗಿಬಿಟ್ಟಿದೆ. ಇದಕ್ಕೆ ಕಾರಣವೇನು?" ಎಂದು ಕೇಳುತ್ತ

"ಹಿಂದೆ ಈ ಮಾವು ವರ್ಣ ಗಂಧ ರಸಗಳಿಂದ ಕೂಡಿತ್ತು.
ಅದೇ ಪೂಜೆ ಲಭಿಸುತ್ತಿದೆ; ಮಾವಿನ ಹಣ್ಣೇಕೆ ಕಹಿ?"

ಎಂದು ಮೊದಲ ಗಾಹೆಯನ್ನು ಹೇಳಿದನು.

ಆಗ ಬೋಧಿಸತ್ತ್ವನು ಆ ಕಾರಣವನ್ನು ವಿವರಿಸಲು

"ದಧಿವಾಹನ! ನಿನ್ನ ಮಾವಿನ ಸುತ್ತ ಬೇವಿನ ಪರಿವಾರ.
ಬುಡದೊಡನೆ ಬುಡ, ಕೊಂಬೆಯೊಡನೆ ಕೊಂಬೆ ಬೆರೆತಿದೆ.
ಅಸಹ್ಯವಾದುದರ ಸಂಗದಿಂದ ನಿನ್ನ ಮಾವಿನ ಹಣ್ಣು ಕಹಿ"

ಎಂದು ಎರಡನೆಯ ಗಾಹೆಯನ್ನು ಹೇಳಿದನು.

ರಾಜನು ಆ ಮಾತು ಕೇಳಿ, ಆ ಬೇವು ಪಗ್ಗವಗಳು ಎಲ್ಲವನ್ನೂ ಕಡಿಯಿಸಿ, ಬೇರುಗಳನ್ನು ಮೇಲಕ್ಕೆ ಎತ್ತಿಸಿ, ಕಹಿಯಾದ ಮಣ್ಣನ್ನು ಚೆನ್ನಾಗಿ ತೆಗೆಯಿಸಿ, ಸಿಹಿಯಾದ ಮಣ್ಣು ಹಾಕಿಸಿ, ಹಾಲುನೀರು ಸಕ್ಕರೆನೀರು ಸುವಾಸನೆಯ ನೀರುಗಳಿಂದ ಮಾವಿನ ಮರವನ್ನು ಚೆನ್ನಾಗಿ ತಣಿಯಿಸಿದನು. ಆ ಸಿಹಿಯಾದ ರಸಗಳ ಜೊತೆಯಿಂದ ಮಾವು ಪುನಃ ಸಿಹಿಯೇ ಆಯಿತು. ರಾಜನು ಮೊದಲಿನ ತೋಟಗಾರನನ್ನೇ ತೋಟದಲ್ಲಿ ನಿಲ್ಲಿಸಿ, ಆಯುಸ್ಸು ಇರುವವರೆಗೆ ಇದ್ದು, ತನ್ನ ಕರ್ಮಕ್ಕೆ ಅನುಸಾರವಾಗಿ ಹೋದನು.

[೧೮೬ನೆಯ 'ದಧಿವಾಹನ ಜಾತಕ']

೬. ಗಿಡಕ್ಕೆ ನೀರೆರೆದ ಕೋತಿಗಳು

ಹಿಂದೆ, ವಾರಣಾಸಿಯಲ್ಲಿ ವಿಶ್ವಸೇನನೆಂಬವನು ರಾಜ್ಯವಾಳುತ್ತಿದ್ದನು.

ಅವನು, ಒಂದು ಸಲ, ನಗರದಲ್ಲಿ ಉತ್ಸವವಾಗುವುದೆಂದು ಕೂಗಿಸಿದನು. ಅಲ್ಲಿಯ ತೋಟದ ಕಾವಲುಗಾರನು ತಾನೂ ಉತ್ಸವದಲ್ಲಿ ಆಡಬೇಕೆಂದು, ಆ ತೋಟದಲ್ಲಿ ವಾಸಿಸುತ್ತಿದ್ದ ಕೋತಿಗಳನ್ನು ಕರೆದು, "ಈ ತೋಟದಿಂದ ನಿಮಗೆ ಬಹಳ ಉಪಕಾರವಾಗಿದೆ. ನಾನು ಏಳು ದಿವಸ ಉತ್ಸವಕ್ಕೆ ಹೋಗುವೆನು. ನೀವು ಏಳು ದಿವಸ ಸಸಿಗಳಿಗೆ ನೀರೆರೆಯುವಿರ?" ಎಂದು ಕೇಳಿದನು. ಅವು ಆಗಲೆಂದು ಒಪ್ಪಿದುವು. ಅವನು ಅವುಗಳಿಗೆ ಚರ್ಮದ ಕೊಡಗಳನ್ನು ಕೊಟ್ಟು ಹೊರಟನು. ಕೋತಿಗಳು ನೀರೆಳೆದು ಸಸಿಗಳಿಗೆ ಎರೆದುವು.

ಆಗ ಆ ಕೋತಿಗಳಲ್ಲಿ ಹಿರಿಯನಾದುದು "ತಡೆಯಿರಿ! ನೀರು ಯಾವಾಗಲೂ ಸಿಕ್ಕುವುದಿಲ್ಲ; ಅದನ್ನು ಕಾಪಾಡಬೇಕು. ಸಸಿಗಳನ್ನು ಕಿತ್ತೆತ್ತಿ ಬುಡದ ಆಳತೆಯನ್ನು ತಿಳಿದು, ದೊಡ್ಡ ಬುಡಕ್ಕೆ ಹೆಚ್ಚು ನೀರನ್ನೂ ಸಣ್ಣ ಬುಡಕ್ಕೆ ಸ್ವಲ್ಪ ನೀರನ್ನೂ ಎರೆಯೋಣ" ಎಂದಿತು. ಆ ಕೋತಿಗಳು ಹಾಗೆಯೆ ಆಗಲೆಂದು ಒಪ್ಪಿದುವು. ಕೆಲವು ಕೋತಿಗಳು ಸಸಿಗಳನ್ನು ಕಿತ್ತು ಎತ್ತುವುವು; ಇನ್ನು ಕೆಲವು ಅದನ್ನು ಪುನಃ ನಟ್ಟು ನೀರೆರೆಯುವುವು.

ಆ ಸಮಯದಲ್ಲಿ ಬೋಧಿಸತ್ತ್ವನು ವಾರಣಾಸಿಯ ಒಂದು ಮನೆಯಲ್ಲಿ ಮಗನಾಗಿ ಹುಟ್ಟಿದನು. ಅವನು ಯಾವುದೋ ಕಾರ್ಯಕ್ಕಾಗಿ ಆ ಉದ್ಯಾನಕ್ಕೆ ಹೋಗಿ, ಕೋತಿಗಳು ಮಾಡುವ ಕೆಲಸ ಕಂಡು "ನಿಮ್ಮನ್ನು ಹೀಗೆ ಮಾಡಿಸುವವರು ಯಾರು?" ಎಂದು ಕೇಳಿದನು. ಕೋತಿಗಳು "ನಮ್ಮ ಗುಂಪಿನ ಹಿರಿಯನು" ಎಂದುವು. ಬೋಧಿಸತ್ತ್ವನು ಅದನ್ನು ಕೇಳಿ, "ನಿಮ್ಮ ಹಿರಿಯನ ಪ್ರಜ್ಞೆಯೇ ಹೀಗಾದರೆ, ನಿಮ್ಮದು ಎಂತಹದಾದೀತು!" ಎಂದು ಆ ಅರ್ಥವನ್ನು ವಿವರಿಸಲು

"ಈ ಎಲ್ಲ ಗುಂಪಿನಲ್ಲಿ ಇದನ್ನೇ ಉತ್ತಮವೆನ್ನುವರು;
ಇದರ ಪ್ರಜ್ಞೆಯೇ ಹೀಗಿರುವಾಗ, ಇದರ ಪ್ರಜೆಗಳದು ಹೇಗಿರಬೇಕು?"

ಎಂದು ಮೊದಲ ಗಾಹೆಯನ್ನು ಹೇಳಿದನು.

ಕೋತಿಗಳು ಆ ಮಾತು ಕೇಳಿ

"ಬ್ರಾಹ್ಮಣ! ನೀನು ತಿಳಿಯದೆ ಹೀಗೆಲ್ಲ ನಿಂದಿಸುವೆ.
ಬುಡವನ್ನು ನೋಡದೆ ಮರದ ಬೆಳುವಳಿಗೆ ತಿಳಿಯುವುದು ಹೇಗೆ?"

ಎಂದು ಎರಡನೆಯ ಗಾಹೆಯನ್ನು ಹೇಳಿದುವು.

ಬೋಧಿಸತ್ತ್ವನು ಅದನ್ನು ಕೇಳಿ

"ನಿಮ್ಮನ್ನಾಗಲಿ ವನದ ಬೇರೆ ವಾನರರನ್ನಾಗಲಿ ನಾನು ನಿಂದಿಸೆನು.
ನಿಮ್ಮಂತಹ ಗಿಡ ಬೆಳೆಸುವವರಿಗಾಗಿ ವಿಶ್ವಸೇನನನ್ನು ನಿಂದಿಸುವೆನು"

ಎಂದು ಮೂರನೆಯ ಗಾಹೆ ಹೇಳಿದನು.

[೪೬ನೆಯ 'ಆರಾಮದೂಸ ಜಾತಕ']

೭. ಚರ್ಮ ಹೊದೆದ ಸಂನ್ಯಾಸಿ

ಹಿಂದೆ, ವಾರಣಾಸಿಯಲ್ಲಿ ಬ್ರಹ್ಮದತ್ತನು ರಾಜ್ಯವಾಳುತ್ತಿದ್ದಾಗ, ಬೋಧಿಸತ್ತ್ವನು ವ್ಯಾಪಾರಿಗಳ ಮನೆಯಲ್ಲಿ ಹುಟ್ಟಿ ವ್ಯಾಪಾರಮಾಡುತ್ತಿದ್ದನು.

ಆಗ, ಚರ್ಮ ಹೊದೆದ ಪರಿವ್ರಾಜಕನೊಬ್ಬನು ಭಿಕ್ಷೆಗಾಗಿ ವಾರಣಾಸಿಯಲ್ಲಿ ಸಂಚಾರಮಾಡುತ್ತ, ಟಗರುಗಳು ಕಾಳಗವಾಡುವ ಸ್ಥಳಕ್ಕೆ ಬಂದನು. ಅಲ್ಲಿ ಟಗರು ಹಿಂದುಹಿಂದಕ್ಕೆ ಹೋಗುವುದನ್ನು ಕಂಡು, ಅದು ತನಗೆ ಮರ್ಯಾದೆ ತೋರಿಸುತ್ತಿದೆಯೆಂದು ತಿಳಿದನು. ಹಾಗೆ ತಿಳಿದು, ಹಿಂದಿರುಗಿ ಹೋಗದೆ, "ಇಷ್ಟು ಜನರ ನಡುವೆ ಈ ಟಗರು ಒಂದಕ್ಕೇ ನನ್ನ ಗುಣ ಗೊತ್ತು" ಎಂದು ಅದಕ್ಕೆ ಕೈಮುಗಿದು ನಿಂತು,

"ಈ ನಾಲ್ಕು ಕಾಲಿನ ಪ್ರಾಣಿಯ ರೂಪ ಸುಂದರವಾದುದು.
ಇದರ ನಡತೆ ಪ್ರಿಯವಾದುದು. ಇದು ಒಳ್ಳೆಯದು.
ಜಾತಿ ಮಂತ್ರಗಳಿಂದ ಕೂಡಿದ ಬ್ರಾಹ್ಮಣನನ್ನು
ಪೂಜಿಸುವ ಈ ಶ್ರೇಷ್ಠವಾದ ಟಗರಿಗೆ ಯಶಸ್ಸು ಬರುವುದು"

ಎಂದು ಮೊದಲನೆಯ ಗಾಹೆ ಹೇಳಿದನು.

ಆಗ, ಅಂಗಡಿಯಲ್ಲಿ ಕುಳಿತಿದ್ದ ಪಂಡಿತ ವ್ಯಾಪಾರಿಯು ಆ ಪರಿವ್ರಾಜಕನನ್ನು ತಡೆಯಬೇಕೆಂದು

"ಬ್ರಾಹ್ಮಣ! ಒಂದು ಕ್ಷಣಕಾಲ ಕಂಡುದರಿಂದ
ಚತುಷ್ಪಾದಗಳಲ್ಲಿ ವಿಶ್ವಾಸವಿಡಬೇಡ.
ಜೋರಾಗಿ ಹೊಡೆಯಬೇಕೆಂದು ಬಯಸಿ ಅದು
ಹಿಂದು ಹಿಂದಕ್ಕೆ ಹೋಗುತ್ತದೆ. ಬಲವಾಗಿ ಹೊಡೆಯುತ್ತದೆ"

ಎಂದು ಎರಡನೆಯ ಗಾಹೆ ಹೇಳಿದನು.

ಆ ಪಂಡಿತ ವ್ಯಾಪಾರಿ ಮಾತನಾಡುತ್ತಿರುವಾಗಲೇ ಟಗರು ವೇಗದಿಂದ ಬಂದು ಪರಿವ್ರಾಜಕನ ತೊಡೆಗೆ ಹೊಡೆಯಿತು; ಅಲ್ಲಿಯೇ ನೋವನ್ನುಂಟುಮಾಡಿ ಅವನನ್ನು ಬೀಳಿಸಿತು. ಅವನು ನೋವಿನಿಂದ ನರಳುತ್ತ ಮಲಗಿದನು.

ಗುರು ಆ ಕಾರಣವನ್ನು ಪ್ರಕಾಶಪಡಿಸಲು

"ಮೂಳೆ ಮುರಿಯಿತು, ಭಿಕ್ಷಾಪಾತ್ರೆ ಉರುಳಿತು,
ಬ್ರಾಹ್ಮಣನ ಐಶ್ವರ್ಯವೆಲ್ಲ ಇಲ್ಲಿ ಚೂರಾಯಿತು;
ಈಗ ತೋಳು ನೀಡಿ ಗೋಳಾಡುವನು.
ಓಡಿರಿ! ಬ್ರಹ್ಮಚಾರಿ ಸಾಯುವನು!"

ಎಂದು ಮೂರನೆಯ ಗಾಹೆ ಹೇಳಿದನು.

ಪರಿವ್ರಾಜಕನು

"ಇಂದು ಬುದ್ಧಿಯಿಲ್ಲದೆ ನಾನು ಟಗರಿನಿಂದ ಹತನಾದ ಹಾಗೆ
ಪೂಜಿಸಬಾರದವನನ್ನು ಪೂಜಿಸಿದರೆ ಹೀಗೆಯೇ ಕೇಡಾಗುವುದು"

ಎಂದು ನಾಲ್ಕನೆಯ ಗಾಹೆ ಹೇಳಿ ನರಳುತ್ತ ಅಲ್ಲಿಯೇ ಸತ್ತನು.

[೩೨೪ನೆಯ 'ಚಮ್ಮಸಾಟಕ ಜಾತಕ']

೮. ಗ್ರಾಮಣಿ ಚಂಡ

ಭಿಕ್ಷುಗಳೆ! ಹಿಂದೆ ವಾರಣಾಸಿಯಲ್ಲಿ ಜನಸಂಧನೆಂಬವನು ರಾಜ್ಯವಾಳುತ್ತಿದ್ದನು. ಬೋಧಿಸತ್ತ್ವನು ಅವನ ಹಿರಿಯ ರಾಣಿಯ ಹೊಟ್ಟೆಯಲ್ಲಿ ಹುಟ್ಟಿದನು. ಅವನ ಮುಖವು ಚೆನ್ನಾಗಿ ತೊಳೆದ ಚಿನ್ನದ ಕನ್ನಡಿಯಂತೆ ಪರಿಶುದ್ಧವಾಗಿತ್ತು, ಬಹಳ ಸೌಭಾಗ್ಯ ತುಂಬಿತ್ತು. ಹೆಸರಿಡುವ ದಿವಸ ಅವನಿಗೆ ಆದರ್ಶಕುಮಾರನೆಂದು ನಾಮಕರಣಮಾಡಿದರು.

ಏಳುವರ್ಷವಾಗುವುದರೊಳಗೆ ಅವನ ತಂದೆಯು ಅವನಿಗೆ ಮೂರು ವೇದಗಳನ್ನೂ ಲೋಕದ ಎಲ್ಲಾ ಕರ್ತವ್ಯಗಳನ್ನೂ ಕಲಿಯಿಸಿ, ಅವನಿಗೆ ಏಳುವರ್ಷವಾದಾಗ ಕಾಲವಾದನು. ಮಂತ್ರಿಗಳು ಮಹಾಸತ್ಕಾರಗಳಿಂದ ರಾಜನ ಶರೀರಕ್ಕೆ ಮಾಡಬೇಕಾದ ಕೃತ್ಯಗಳನ್ನು ಮಾಡಿ, ಕೊಡಬೇಕಾದ ದಾನಗಳನ್ನು ಕೊಟ್ಟು, ಏಳನೆಯ ದಿವಸ ರಾಜಾಂಗಣದಲ್ಲಿ ಸೇರಿದರು. ಸೇರಿ, "ಕುಮಾರನು ಬಹಳ ಚಿಕ್ಕವನು. ಅವನಿಗೆ ರಾಜ್ಯದ ಅಭಿಷೇಕಮಾಡುವುದು ಶಕ್ಯವಿಲ್ಲ. ವಿಮರ್ಶೆಮಾಡಿ ಅಭಿಷೇಕ ಮಾಡೋಣ" ಎಂದು, ಒಂದು ದಿನ ನಗರವನ್ನು ಅಲಂಕರಿಸಿ, ವಿಮರ್ಶೆಯ ಸ್ಥಳವನ್ನು ಸಜ್ಜುಗೊಳಿಸಿ, ಪರ್ಯಂಕವನ್ನು ಸಿದ್ಧಮಾಡಿ ಕುಮಾರನ ಬಳಿ ಸಾರಿ, "ದೇವ! ವಿಮರ್ಶೆಯ ಸ್ಥಳಕ್ಕೆ ಹೊರಡು" ಎಂದರು.

ಕುಮಾರನು 'ಒಳ್ಳೆಯದೆ'ಂದು ಮಹಾಪರಿವಾರದೊಡನೆ ಹೋಗಿ ಪರ್ಯಂಕದ ಮೇಲೆ ಕುಳಿತನು. ಅವನು ಕುಳಿತಿರುವಾಗ, ಅಮಾತ್ಯರು, ಎರಡು ಕಾಲಿನಿಂದ ನಡೆಯುವ ಕೋತಿಗೆ ವಸ್ತುವಿದ್ಯಾಚಾರ್ಯನ ವೇಷವನ್ನು ಹಾಕಿಸಿ, ವಿಮರ್ಶೆಯ ಸ್ಥಳಕ್ಕೆ ಒಯ್ದು, "ದೇವ! ಈ ಪುರುಷನು ನಿನ್ನ ತಂದೆಯಾದ ಮಹಾರಾಜನ ಕಾಲದಲ್ಲಿ ವಸ್ತುವಿದ್ಯೆಯ ಆಚಾರ್ಯನಾಗಿದ್ದನು. ಇವನು ನಿಪುಣನು. ಭೂಮಿಯಲ್ಲಿ ಏಳು ಪ್ರಮಾಣಗಳವರೆಗೂ ದೋಷವನ್ನು ಕಾಣಬಲ್ಲನು. ಇವನ ಸಹಾಯದಿಂದ ರಾಜನ ಮನೆಗೆ ಯೋಗ್ಯವಾದ ಸ್ಥಳ ಸಿಕ್ಕಿತು. ದೇವರು ಇವನನ್ನು ಸ್ವೀಕರಿಸಿ, ಇವನಿಗೆ ಯಾವುದಾದರೂ ಸ್ಥಾನ ಕೊಡಬೇಕು" ಎಂದರು.

ಕುಮಾರನು ಅವನನ್ನು ಕೆಳಗೂ ಮೇಲೂ ನೋಡಿ. "ಇವನು ಮನುಷ್ಯನಲ್ಲ, ಇದು ಕೋತಿ" ಎಂದು ತಿಳಿದು, "ಕೋತಿಗಳು

ಮಾಡಿದುದನ್ನು ಮುರಿಯಬಲ್ಲುವು, ಇಲ್ಲದುದನ್ನು ಮಾಡಿ ವಿಚಾರಿಸಲರಿಯುವು" ಎಂದು ಚಿಂತಿಸಿ,

"ಇದು ಮನೆಕಟ್ಟುವುದರಲ್ಲಿ ಕುಶಲಿಯಲ್ಲ; ಇದು ಸುಕ್ಕುಮುಖದ ಕೋತಿ.
ಮಾಡಿದುದನ್ನು ಇವು ಕೆಡಿಸಬಲ್ಲುವು. ಇದು ಇವುಗಳ ಕುಲಧರ್ಮ"

ಎಂದು ಮೊದಲನೆಯ ಗಾಹೆ ಹೇಳಿದನು.

ಅಮಾತ್ಯರು "ಇರಬೇಕು, ದೇವ" ಎಂದು ಅದನ್ನು ಒಯ್ದು, ಒಂದೆರಡು ದಿನಗಳನಂತರ ಪುನಃ ಅದಕ್ಕೆ ಅಲಂಕಾರಮಾಡಿ ಪರೀಕ್ಷಾಸ್ಥಾನಕ್ಕೆ ಕರೆತಂದು, "ದೇವ! ಇವನು ನಿನ್ನ ತಂದೆಯ ಕಾಲದಲ್ಲಿ ವಿಮರ್ಶೆ ಮಾಡುವ ಮಂತ್ರಿಯಾಗಿದ್ದನು. ಇವನನ್ನು ಸ್ವೀಕರಿಸಿ ಪರೀಕ್ಷೆಯನ್ನು ಇವನಿಂದ ನಡಿಸಬೇಕು" ಎಂದರು. ಕುಮಾರನು ಅದನ್ನು ಚೆನ್ನಾಗಿ ನೋಡಿ, "ಮನಸ್ಸು, ಚಿತ್ತ ಚೆನ್ನಾಗಿರುವವನಿಗೆ ಕೂದಲು ಈ ರೀತಿಯಿರುವುದಿಲ್ಲ. ಚಿತ್ತವಿಲ್ಲದ ಈ ವಾನರವು ಪರೀಕ್ಷೆ ಮಾಡಲಾರದು" ಎಂದು ತಿಳಿದು,

"ಚಿತ್ತವಂತನಿಗೆ ಹೀಗೆ ಕೂದಲಿಲ್ಲ. ಈ ಮೃಗದಿಂದ ಸಮಾಧಾನವಾಗದು.
ಜನಸಂಧನು ಕಲಿಸಿದ ಹಾಗೆ: ಇದಕ್ಕೇನೂ ಗೊತ್ತಿಲ್ಲ"

ಎಂದು ಎರಡನೆಯ ಗಾಹೆ ಹೇಳಿದನು.

ಅಮಾತ್ಯರು ಆ ಗಾಹೆಯನ್ನು ಕೇಳಿ, "ಹಾಗೇ ಇರಬೇಕು, ದೇವ" ಎಂದು ಅದನ್ನು ಕರೆದೊಯ್ದು, ಪುನಃ ಅದಕ್ಕೆ ಅಲಂಕಾರಮಾಡಿ ಪರೀಕ್ಷಾಸ್ಥಾನಕ್ಕೆ ಕರೆತಂದು, "ದೇವ! ನಿನ್ನ ತಂದೆಯ ಕಾಲದಲ್ಲಿ, ಈ ಪುರುಷನು ತಾಯಿತಂದೆಗಳಿಗೆ ಮಾಡಬೇಕಾದ ಸೇವೆಗಳನ್ನು ಸಂಪೂರ್ಣವಾಗಿ ಮಾಡಿ, ಕುಲಗಳಿಗೆ ಹಿರಿಯನಾದವನನ್ನು ಗೌರವಿಸುತ್ತಿದ್ದನು. ಇವನನ್ನು ಸ್ವೀಕರಿಸಿ ಕಾಪಾಡಬೇಕು" ಎಂದರು. ಕುಮಾರನು ಅದನ್ನು ಪುನಃ ದೃಷ್ಟಿಸಿ, "ಕೋತಿಗಳ ಚಿತ್ತ ಚಂಚಲ. ಇಂತಹ ಸೇವೆಮಾಡುವ ಸಾಮರ್ಥ್ಯವಿಲ್ಲ" ಎಂದು ಚಿಂತಿಸಿ,

"ತಾಯನ್ನಾಗಲಿ, ತಂದೆಯನ್ನಾಗಲಿ, ಅಣ್ಣ ಅಕ್ಕ ಸ್ನೇಹಿತರನ್ನಾಗಲಿ
ಇಂತಹ ಪುರುಷನು ಪೋಷಿಸಲಾರನು. ದಶರಥನು ನನಗೆ ಕಲಿಸಿದ್ದಾನೆ"

ಎಂದು ಮೂರನೆಯ ಗಾಹೆ ಹೇಳಿದನು.

ಅಮಾತ್ಯರು "ಹಾಗೆಯೆ ಇರಬೇಕು, ದೇವ" ಎಂದು ಆ ಕೋತಿಯನ್ನು ಕರೆದೊಯ್ದರು. "ಕುಮಾರನು ಪಂಡಿತನು, ರಾಜ್ಯವಾಳಲು ಶಕ್ತನು" ಎಂದು ಬೋಧಿಸತ್ತ್ವನಿಗೆ ರಾಜ್ಯದಲ್ಲಿ ಅಭಿಷೇಕಮಾಡಿ, "ಇದು ಆದರ್ಶಕುಮಾರನ ಆಜ್ಞೆ" ಎಂದು ನಗರದಲ್ಲಿ ಭೇರಿಯನ್ನು ಹೊರಡಿಸಿದರು.

ಆಗಿನಿಂದ ಬೋಧಿಸತ್ತ್ವನು ಧರ್ಮದಿಂದ ರಾಜ್ಯವಾಳಿದನು. ಅವನು ಪಂಡಿತನೆಂಬುದು ಸಕಲ ಜಂಬೂದ್ವೀಪದಲ್ಲಿ ಹಬ್ಬಿತು. ಅವನ ಪಂಡಿತಭಾವವನ್ನು ಪ್ರಕಾಶಪಡಿಸುವುದಕ್ಕಾಗಿ ಗೋವು, ಮಗ, ಕುದುರೆ, ಮೋದರವನು, ಗ್ರಾಮಭೋಜಕ, ಗಣಿಕೆ, ತರುಣಿ, ಹಾವು, ಜಿಂಕೆ, ತಿತ್ತಿರ, ದೇವತೆ, ನಾಗರಾಜ, ತಪಸ್ವಿ, ಬ್ರಾಹ್ಮಣ ಬಾಲಕರು — ಎಂಬ ಹದಿನಾಲ್ಕು ವಿಷಯುಗಳನ್ನು ಅವನ ಬಳಿ ತಂದರು.

ಅವುಗಳ ಕ್ರಮವಾದ ಕತೆ ಹೀಗೆ:

ಬೋಧಿಸತ್ತ್ವನಿಗೆ ರಾಜ್ಯದಲ್ಲಿ ಅಭಿಷೇಕವಾದ ಮೇಲೆ, ಜನಸಂಧರಾಜನ ಪಾದಸೇವಕನಾಗಿದ್ದ ಗ್ರಾಮಣಿ ಚಂಡನೆಂಬವನು "ಈ ರಾಜ್ಯವು ರಾಜನಿಗೆ ಸಮಾನವಯಸ್ಕರಿಂದಲೇ ಶೋಭಿಸುವುದು. ನನಗೆ ಮಹಾವಯಸ್ಸಾಗಿದೆ. ನಾನು ಹರೆಯದ ಕುಮಾರನ ಊಳಿಗ ಮಾಡಲಾರೆ. ಗ್ರಾಮದಲ್ಲಿ ಕೃಷಿ ಕೆಲಸಮಾಡಿ ಜೀವಿಸುವೆನು" ಎಂದು ನಗರದಿಂದ ಮೂರು ಯೋಜನ ದೂರ ಹೋಗಿ, ಒಂದು ಗ್ರಾಮದಲ್ಲಿ ವಾಸಮಾಡಿಕೊಂಡನು.

ಕೃಷಿಮಾಡಲು ಅವನ ಬಳಿ ಗೋಗಳೂ ಇರಲಿಲ್ಲ. ಮಳೆಯಾದ ಮೇಲೆ, ಅವನು ಜೊತೆಗಾರನೊಬ್ಬನಿಂದ ಎರಡು ಗೋಗಳನ್ನು ಬೇಡಿ ಹಗಲೆಲ್ಲ ಕೃಷಿಮಾಡಿದನು. ಗೋಗಳಿಗೆ ಹುಲ್ಲು ತಿನ್ನಿಸಿ, ಅವುಗಳನ್ನು ಒಡೆಯನಿಗೆ ಹಿಂದಿರುಗಿ ಕೊಡಲು ಅವನ ಮನೆಗೆ ಹೋದನು. ಅವನು ಆ ಕ್ಷಣದಲ್ಲಿ ಹೆಂಡತಿಯೊಡನೆ ಮನೆಯೊಳಗೆ ಕುಳಿತು ಊಟಮಾಡುತ್ತಿದ್ದನು. ಗೋಗಳು ಪರಿಚಯದಿಂದ ಮನೆಯೊಳಗೆ ಹೋದುವು. ಅವು ಪ್ರವೇಶಿಸುವಾಗ ಮನೆಯಾತನು ತನ್ನ ತಟ್ಟೆಯನ್ನು ಮೇಲೆ ಎತ್ತುತ್ತಿದ್ದನು; ಅವನ ಹೆಂಡತಿಯು ತನ್ನ ತಟ್ಟೆಯನ್ನು ಕೆಳಗಿಡುತ್ತಿದ್ದಳು.

ಗ್ರಾಮಣಿ ಚಂಡನು, ಅವರು ತನ್ನನ್ನು ಊಟಕ್ಕೆ ಕರೆಯುವುದಿಲ್ಲವೆಂದು ನೋಡಿ, ಗೋಗಳನ್ನು ಹಿಂದಿರುಗಿ ಕೊಡದೆಯೆ ಹೋದನು.

ಕಳ್ಳರು ರಾತ್ರಿ ಕೊಟ್ಟಿಗೆಯನ್ನು ಒಡೆದು ಆ ಗೋಗಳನ್ನು ಕದ್ದರು.

ಗೋಗಳ ಒಡೆಯನು ಬೆಳಗ್ಗೆ ಕೊಟ್ಟಗೆಗೆ ಹೋಗಿ, ಅಲ್ಲಿ ಗೋಗಳನ್ನು ಕಾಣದೆ, ಕಳ್ಳರು ಒಯ್ದರೆಂದು ತಿಳಿದರು ಕೂಡ "ಇದನ್ನು ಗ್ರಾಮಣಿಯ ಕತ್ತಿಗೆ ತರುತ್ತೇನೆ" ಎಂದು ಅವನ ಬಳಿ ಬಂದು, "ನನ್ನ ಗೋಗಳನ್ನು ಕೊಡು" ಎಂದನು.

"ಗೋಗಳು ನಿನ್ನ ಮನೆಯೊಳಗೆ ಬರಲಿಲ್ಲವೆ?"

"ನೀನು ಅವುಗಳನ್ನು ನನಗೆ ಹಿಂದಿರುಗಿ ಕೊಟ್ಟೆಯೊ?"

"ಇಲ್ಲ."

"ಹಾಗಾದರೆ, ಇದೋ ಇದು ರಾಜದೂತ. ಬಾ."

ಆ ಜನರು ಒಂದು ಸಣ್ಣ ಕಲ್ಲನ್ನೋ ಮಡಕೆ ಚೂರನ್ನೋ ಎತ್ತಿ "ಇದು ರಾಜದೂತ, ಬಾ" ಎನ್ನುವರು. ಅದನ್ನು ಕೇಳಿಯೂ ಬಾರದವನಿಗೆ ಶಿಕ್ಷೆಯಾಗುವುದು. ಅದರಿಂದ, ಅವನು "ದೂತ" ಎಂದುದನ್ನು ಕೇಳಿ ಗ್ರಾಮಣಿಯು ಹೊರಟನು.

ಅವನೊಡನೆ ರಾಜನ ಮನೆಗೆ ಹೋಗುವಾಗ ತನ್ನ ಜೊತೆಗಾರನೊಬ್ಬನು ವಾಸಿಸುತ್ತಿದ್ದ ಗ್ರಾಮ ಸಿಕ್ಕಿತು. ಗ್ರಾಮಣಿಯು "ಬಹಳ ಹಸಿವು. ಈ ಗ್ರಾಮದಲ್ಲಿ ಊಟಮಾಡಿಕೊಂಡು ಬರುವವರೆಗೆ ಇಲ್ಲೇ ಇರು" ಎಂದು ಹೇಳಿ ತನ್ನ ಸ್ನೇಹಿತನ ಮನೆಗೆ ಹೋದನು. ಅವನು ಮನೆಯಲ್ಲಿರಲಿಲ್ಲ. ಅವನ ಹೆಂಡತಿಯು "ಸ್ವಾಮಿ, ಪಕ್ವವಾದ ಆಹಾರವಿಲ್ಲ. ಮುಹೂರ್ತ ತಡೆದರೆ, ಈಗಲೇ ಬೇಯಿಸಿ ಕೊಡುತ್ತೇನೆ" ಎಂದು ಏಣಿಯಿಂದ ಬೇಗನೆ ಅಕ್ಕಿಯ ಉಗ್ರಾಣಕ್ಕೆ ಹತ್ತುತ್ತ ನೆಲಕ್ಕೆ ಬಿದ್ದಳು. ಅದೇ ಕ್ಷಣದಲ್ಲಿ ಅವಳ ಏಳು ತಿಂಗಳ ಗರ್ಭ ಬಿದ್ದುಹೋಯಿತು. ಆ ಗಳಿಗೆಯೆ ಅವಳ ಗಂಡನು ಬಂದು ಅದು ನೋಡಿ, "ನೀನು ನನ್ನ ಹೆಂಡತಿಯನ್ನು ಹೊಡೆದು ಗರ್ಭಪಾತಮಾಡಿಸಿದೆ. ಇದು ನಿನ್ನ ರಾಜದೂತ. ಬಾ" ಎಂದು ಅವನನ್ನು ಹಿಡಿದುಕೊಂಡು ಹೊರಟನು.

ಅಲ್ಲಿಂದ ಅವರಿಬ್ಬರೂ ಗ್ರಾಮಣಿಯನ್ನು ನಡುವೆ ಇಟ್ಟುಕೊಂಡು ಹೊರಟರು. ಆಗ ಒಂದು ಗ್ರಾಮದ ಬಾಗಿಲಲ್ಲಿ ಒಬ್ಬ ಕುದುರೆ ಕಾಯುವವನು ತನ್ನ ಕುದುರೆಯನ್ನು ಹಿಂದಿರುಗಿಸಲಾರದೆ ಗ್ರಾಮಣಿಯನ್ನು ಕಂಡು, "ಮಾತುಲ ಚಂಡಗ್ರಾಮಣಿ! ಆ ಕುದುರೆಯನ್ನು ಯಾವುದರಿಂದಲಾದರೂ ಹೊಡೆದು ಹಿಂದಿರುಗಿಸು" ಎಂದನು. ಚಂಡನು ಒಂದು ಕಲ್ಲು ಹಿಡಿದು ಎಸೆದನು. ಕಲ್ಲು ಕುದುರೆಯ ಕಾಲಿಗೆ ತಾಗಿ, ಅದು ಏರಂಡದ ಕಡ್ಡಿಯಂತೆ ಮುರಿಯಿತು ಆಗ ಕುದುರೆಯವನು "ನೀನು ನನ್ನ ಕುದುರೆಯ ಕಾಲು ಮುರಿದೆ. ಇದು ನಿನ್ನ ರಾಜದೂತ" ಎಂದು ಹೇಳಿ ಅವನನ್ನು ಹಿಡಿದುಕೊಂಡನು.

ಹೀಗೆ ಮೂವರೂ ಅವನನ್ನು ಒಯ್ಯುತ್ತಿರಲು, ಚಂಡನು "ಇವರು ನನ್ನನ್ನು ರಾಜನಿಗೆ ಕಾಣಿಸುವರು. ನಾನು ಗೋಗಳ ಬೆಲೆಯನ್ನು ಕೊಡಲಾರೆ; ಗರ್ಭಪಾತದ ದಂಡವನ್ನಂತೂ ಮೊದಲೇ ಇಲ್ಲ; ಕುದುರೆಯ ಬೆಲೆಯನ್ನು ಎಲ್ಲಿಂದ ತರಲಿ? ನಾನು ಸಾಯುವುದೇ ಮೇಲು" ಎಂದು ಚಿಂತಿಸುತ್ತ, ದಾರಿಯ ನಡುವೆ ಸಮೀಪದ ಕಾಡಿನಲ್ಲಿ ಒಂದು ದೊಡ್ಡ ಪರ್ವತದ ಕಮರಿಯನ್ನು ಕಂಡನು.

ಅದೇ ಪರ್ವತದ ನೆರಳಿನಲ್ಲಿ ಇಬ್ಬರು ಮೇದರವರು, ತಂದೆಮಕ್ಕಳು, ಚಾಪೆ ಹೆಣೆಯುತ್ತಿದ್ದರು.

ಗ್ರಾಮಣಿ ಚಂಡನು "ನಾನು ದೇಹಬಾಧೆಗಳನ್ನು ಮಾಡಬೇಕು. ಸ್ವಲ್ಪ ಇಲ್ಲೇ ಇರಿ. ಈಗಲೆ ಬಂದೆ" ಎಂದು ಹೇಳಿ ಆ ಪರ್ವತವನ್ನು ಹತ್ತಿ, ಪಪಾತದ ಪಕ್ಕದಿಂದ ಬೀಳುತ್ತ ತಂದೆಯಾದ ಮೇದರವನ ಬೆನ್ನ ಮೇಲೆ ಬಿದ್ದನು. ಆ ಮೇದರವನು ಒಂದೇ ಏಟಗೆ ಪ್ರಾಣಬಿಟ್ಟನು. ಗ್ರಾಮಣಿಯು ಎದ್ದುನಿಂತನು. ಮಗನಾದ ಮೇದರವನು "ನೀನು ನನ್ನ ತಂದೆಯನ್ನು ಕೊಂದ ಕಳ್ಳ. ಇದು ನಿನ್ನ ರಾಜದೂತ" ಎಂದು ಹೇಳಿ ಕೈ ಹಿಡಿದುಕೊಂಡು ಪೊದರಿನಿಂದ ಹೊರಟನು. ಉಳಿದವರು "ಇದೇಕೆ?" ಎನ್ನಲು, "ತಂದೆಯನ್ನು ಕೊಂದ ಕಳ್ಳ" ಎಂದನು. ಅಲ್ಲಿಂದ ಗ್ರಾಮಣಿಯನ್ನು ನಡುವೆ ಮಾಡಿಕೊಂಡು ನಾಲ್ಕು ಜನರೂ ಅವನನ್ನು ಬಳಸಿ ಕರೆದುಕೊಂಡು ಹೋದರು.

ದಾರಿಯಲ್ಲಿ, ಇನ್ನೊಂದು ಗ್ರಾಮದ ಬಾಗಿಲಲ್ಲಿ, ಒಬ್ಬ ಗ್ರಾಮ ಭೋಜಕನು ಗ್ರಾಮಣಿ ಚಂಡನನ್ನು ಕಂಡು, "ಮಾತುಲ ಚಂಡ! ಎಲ್ಲಿ ಹೋಗುವೆ?" ಎಂದನು. "ರಾಜನನ್ನು ಕಾಣಲು ಹೋಗುವೆನು." "ಓ! ರಾಜನನ್ನು ಕಾಣಲು ಹೋಗುವೆಯ! ನಾನು ರಾಜನಿಗೆ ಒಂದು ಸುದ್ದಿ ಕೊಡುವೆನು. ತೆಗೆದುಕೊಂಡು ಹೋಗುವೆಯ?"

"ಆಗಲಿ. ಒಯ್ಯುತ್ತೇನೆ."

"ನನಗೆ ಸಹಜವಾಗಿ ರೂಪ ಚೆನ್ನಾಗಿದೆ, ಹಣ ಹೆಚ್ಚಾಗಿದೆ, ಯಶಸ್ಸು ತುಂಬಿದೆ, ರೋಗವೇನಿಲ್ಲ. ಈಗ ನನಗೆ ದುರ್ಗತಿ ಬಂದು ಪಾಂಡು ರೋಗವಾಗಿದೆ. ಇದಕ್ಕೆ ಕಾರಣವೇನೆಂದು ರಾಜನನ್ನು ಕೇಳು. ಅವನು ಹೇಳಿದುದನ್ನು ನನಗೆ ತಿಳಿಸು."

ಚಂಡನು ಆಗಲೆಂದು ಒಪ್ಪಿದನು.

ಮುಂದೆ, ಇನ್ನೊಂದು ಗ್ರಾಮದ ಬಾಗಿಲಲ್ಲಿ ಒಬ್ಬ ಗಣಿಕೆಯು ಅವನನ್ನು ಕಂಡು, "ಮಾತುಲ ಚಂಡ! ಎಲ್ಲಿಗೆ ಹೋಗುವೆ?" ಎಂದಳು. "ರಾಜನ ಬಳಿಗೆ." "ರಾಜನು ಪಂಡಿತನು. ನನ್ನ ಸುದ್ದಿಯೊಂದನ್ನು ಕೊಂಡುಹೋಗು. ಹಿಂದೆ ನನಗೆ ಬಹಳ ಹಣ ಸಿಕ್ಕುತ್ತಿತ್ತು. ಈಗ ಬರಿಯ ತಾಂಬೂಲವೂ ಸಿಕ್ಕುವುದಿಲ್ಲ ನನ್ನ ಬಳಿ ಯಾರೂ ಬರುವುದಿಲ್ಲ. ಇದಕ್ಕೆ ಕಾರಣವೇನೆಂದು ರಾಜನನ್ನು ಕೇಳಿ ನನಗೆ ತಿಳಿಸು."

ಮುಂದೆ, ಇನ್ನೊಂದು ಗ್ರಾಮದ ಬಾಗಿಲಲ್ಲಿ ಒಬ್ಬ ತರುಣ ಸ್ತ್ರೀಯು ಅವನನ್ನು ಕಂಡು, ಅದನ್ನೇ ಕೇಳಿ, "ನಾನು ನನ್ನ ಗಂಡನ ಮನೆಯಲ್ಲಾಗಲಿ ನನ್ನ ಮನೆಯಲ್ಲಾಗಲಿ ವಾಸಮಾಡಲಾರೆ. ಇದಕ್ಕೇನು ಕಾರಣವೆಂದು ರಾಜನನ್ನು ಕೇಳಿ ನನಗೆ ತಿಳಿಸು" ಎಂದಳು.

ಅಲ್ಲಿಂದ ಆಮೇಲೆ, ದೊಡ್ಡ ದಾರಿಯ ಬಳಿಯ ಹುತ್ತದಲ್ಲಿ ವಾಸಿಸುತ್ತಿದ್ದ ಒಂದು ಹಾವು "ಎಲ್ಲಿಗೆ ಹೋಗುವೆ, ಚಂಡ?" ಎಂದು ಕೇಳಿತು. "ರಾಜನ ಬಳಿಗೆ." "ರಾಜನು ಪಂಡಿತನು. ನನ್ನ ಸುದ್ದಿಯನ್ನು ಕೊಂಡುಹೋಗು. ನಾನು ಆಹಾರಕ್ಕಾಗಿ ಹೊರಗೆ ಹೋಗುವಾಗ ಶಕ್ತಿಯಿಲ್ಲದೆ ಬಡವಾಗಿ ಹುತ್ತದಿಂದ ಹೊರಡುವೆನು; ಬಿಲದ ತುಂಬ ಮೈತುಂಬಿ, ಶರೀರವನ್ನು ಕಷ್ಟದಿಂದ ಎಳೆದುಕೊಂಡು ಹೋಗುವೆನು. ಸಂಚಾರ ಮುಗಿಸಿ ಬಂದಾಗ ತೃಪ್ತನಾಗಿರುವೆನು; ಮೈ ದಪ್ಪನಾದರೂ

ಪ್ರವೇಶಿಸುವಾಗ ಬಿಲದ ಪಕ್ಕಗಳನ್ನು ಮುಟ್ಟದೆ ಸುಲಭವಾಗಿ ಪ್ರವೇಶಿಸುವೆನು. ಇದಕ್ಕೆ ಕಾರಣವೇನೆಂದು ರಾಜನನ್ನು ಕೇಳಿ ನನಗೆ ತಿಳಿಸು."

ಆಮೇಲೆ, ಒಂದು ಜಿಂಕೆಯು ಅವನನ್ನು ಕಂಡು ಹಾಗೆಯೆ ಕೇಳಿ, "ನಾನು ಬೇರೆ ಕಡೆ ಹುಲ್ಲು ತಿನ್ನಲಾರೆ; ಒಂದೇ ಮರದ ಬುಡದಲ್ಲಿ ತಿನ್ನಬಲ್ಲೆ. ಇದಕ್ಕೇನು ಕಾರಣವೆಂದು ರಾಜನನ್ನು ಕೇಳು" ಎಂದಿತು.

ಅನಂತರ, ಒಂದು ತಿತ್ತಿರಪಕ್ಷಿಯು ಅವನನ್ನು ಕಂಡು, "ನಾನು ಒಂದೇ ಒಂದು ಹುತ್ತದ ಬುಡದಲ್ಲಿ ಕುಳಿತು ಮನೋಹರವಾಗಿ ಧ್ವನಿ ಮಾಡಿ ವಾಸಿಸಬಲ್ಲೆ; ಮಿಕ್ಕ ಕಡೆಗಳಲ್ಲಿ ಕೂಡಲಾರೆ. ಇದಕ್ಕೆ ಕಾರಣ ವೇನೆಂದು ರಾಜನನ್ನು ಕೇಳು" ಎಂದಿತು.

ಮುಂದೆ, ಒಂದು ವೃಕ್ಷದೇವತೆಯು ಅವನನ್ನು ಕಂಡು, "ಎಲ್ಲಿ ಹೋಗುವೆ, ಚಂಡ?" ಎಂದು ಕೇಳಿತು. "ರಾಜನ ಬಳಿಗೆ." "ರಾಜನು ಪಂಡಿತನು. ಹಿಂದೆ ನನಗೆ ಸತ್ಕಾರ ಸಿಕ್ಕುತ್ತಿತ್ತು. ಈಗ ಒಂದು ಹಿಡಿ ಚಿಗುರು ಕೂಡ ಸಿಕ್ಕುವುದಿಲ್ಲ. ಇದಕ್ಕೇನು ಕಾರಣವೆಂದು ರಾಜನನ್ನು ಕೇಳು."

ಅಲ್ಲಿಂದ ಆಮೇಲೆ ಒಬ್ಬ ನಾಗರಾಜನು ಚಂಡನನ್ನು ಕಂಡು, ಹಾಗೆಯೆ ಕೇಳಿ, "ಈ ಸರೋವರದ ನೀರು ಹಿಂದೆ ತಿಳಿಯಾಗಿ ಸ್ಫಟಿಕ ಮಣಿಯ ಬಣ್ಣವಾಗಿತ್ತು. ಈಗ ಇದು ಕದಡಿಕೊಂಡು ಮೇಲೆಲ್ಲ ಕಸ ಕಡ್ಡಿ ತುಂಬಿಹೋಗಿದೆ. ಇದಕ್ಕೆ ಕಾರಣವೇನೆಂದು ರಾಜನನ್ನು ಕೇಳು. ರಾಜನು ಪಂಡಿತನು" ಎಂದನು.

ಆಮೇಲೆ, ನಗರದ ಬಳಿಯ ಒಂದಾನೊಂದು ಆರಾಮದಲ್ಲಿ ವಾಸಿಸುತ್ತಿದ್ದ ತಪಸ್ವಿಯೊಬ್ಬನು ಚಂಡನನ್ನು ಕಂಡು, ಹಾಗೆಯೆ ಕೇಳಿ, "ರಾಜನು ಪಂಡಿತನು. ಹಿಂದೆ ಈ ಆರಾಮದಲ್ಲಿ ಮಧುರವಾದ ಹಣ್ಣು ಹಂಪಲು ಆಗುತ್ತಿದ್ದುವು. ಈಗ ಒಣಗಿ ಸಪ್ಪೆಯಾಗಿವೆ. ಇದಕ್ಕೆ ಕಾರಣವೇನೆಂದು ರಾಜನನ್ನು ಕೇಳು" ಎಂದನು.

ಅಲ್ಲಿಂದ ಮುಂದೆ, ನಗರದ ಬಾಗಿಲ ಬಳಿಯ ಒಂದು ಶಾಲೆಯಲ್ಲಿದ್ದ ಬ್ರಾಹ್ಮಣ ಬಾಲಕರು ಚಂಡನನ್ನು ಕಂಡು, "ಎಲ್ಲಿಗೆ ಹೋಗುವೆ, ಚಂಡ?" ಎಂದರು. "ರಾಜನ ಬಳಿಗೆ." "ಹಾಗಾದರೆ, ನಮ್ಮ ಸುದ್ದಿಯನ್ನು ಕೊಂಡುಹೋಗು. ಹಿಂದೆ ಯಾವ ಯಾವ ವಿಷಯ ಹಿಡಿದರೂ ನಮಗೆ

ಚೆನ್ನಾಗಿ ತಿಳಿಯುತ್ತಿತ್ತು; ಈಗ ಒಡೆದ ಮಡಕೆಯಲ್ಲಿನ ನೀರಿನಂತೆ ನಿಲ್ಲು ವುದಿಲ್ಲ, ತಿಳಿಯುವುದಿಲ್ಲ, ಕತ್ತಲೆಯಾಗುವುದು. ಇದಕ್ಕೆ ಏನು ಕಾರಣ ವೆಂದು ರಾಜನನ್ನು ಕೇಳು."

ಗ್ರಾಮಣಿ ಚಂಡನು ಈ ಹದಿನಾಲ್ಕು ಸುದ್ದಿಗಳನ್ನು ರಾಜನ ಬಳಿಗೆ ತೆಗೆದುಕೊಂಡು ಬಂದನು. ರಾಜನು ನ್ಯಾಯಾಸ್ಥಾನದಲ್ಲಿ ಕುಳಿತಿದ್ದನು. ಗೋಗಳ ಒಡೆಯನು ಗ್ರಾಮಣಿ ಚಂಡನನ್ನು ಹಿಡಿದು ರಾಜನ ಬಳಿ ಸಾರಿ ದನು. ರಾಜನು ಚಂಡನನ್ನು ನೋಡಿ ತಿಳಿದು, "ಇವನು ನನ್ನ ತಂದೆಯ ಬಳಿ ಇದ್ದು ನನ್ನನ್ನು ಎತ್ತಿ ಆಡಿಸಿದವನು. ಇಷ್ಟು ಕಾಲ ಎಲ್ಲಿ ವಾಸ ಮಾಡುತ್ತಿದ್ದ?" ಎಂದು ಚಿಂತಿಸಿ, "ಭೋ ಚಂಡ! ಇಷ್ಟು ಕಾಲ ಎಲ್ಲಿದ್ದೆ? ಬಹುಕಾಲದಿಂದ ನಿನ್ನನ್ನು ಕಾಣಲಿಲ್ಲ. ಏನು ಕಾರಣ ಬಂದೆ?" ಎಂದನು.

"ದೇವ! ನಮ್ಮ ದೇವನು ಸ್ವರ್ಗಕ್ಕೆ ಹೋದಾಗಿನಿಂದ ಹಳ್ಳಿಗೆ ಹೋಗಿ ಕೃಷಿಕೆಲಸ ಮಾಡಿಕೊಂಡು ಜೀವಿಸುತ್ತಿದ್ದೇನೆ. ಈಗ ಈ ಪುರುಷನು ಗೋಗಳ ಕಾರಣದಿಂದ ರಾಜದೂತನನ್ನು ತೋರಿಸಿ ನನ್ನನ್ನು ನಿಮ್ಮ ಬಳಿ ಎಳೆತಂದನು."

"ಅವನು ಎಳೆತರದಿದ್ದರೆ ನೀನು ಬರುತ್ತಿರಲಿಲ್ಲ. ಎಳೆದು ತಂದುದು ಒಳ್ಳೆಯದಾಯಿತು. ನಿನ್ನನ್ನು ನೋಡುವ ಲಾಭವಾಯಿತು. ನಿನ್ನನ್ನು ಕರೆತಂದ ಪುರುಷನು ಯಾರು?"

"ಇವನು, ದೇವ!"

"ನಮ್ಮ ಚಂಡನಿಗೆ ದೂತನನ್ನು ತೋರಿಸಿದುದು ನಿಜವೆ?"

"ನಿಜ, ದೇವ."

"ಕಾರಣವೇನು?"

"ಇವನು ನನ್ನ ಎರಡು ಗೋಗಳನ್ನು ಕೊಡವೊಲ್ಲ."

"ನಿಜವೇ ಚಂಡ?"

"ಹಾಗಾದರೆ, ದೇವ, ನನ್ನ ಮಾತನ್ನೂ ಕೇಳಿರಿ" ಎಂದು ಚಂಡನು ನಡೆದುದನ್ನೆಲ್ಲ ತಿಳಿಸಿದನು.

ಅದನ್ನು ಕೇಳಿ, ರಾಜನು ಗೋಸ್ವಾಮಿಯನ್ನು ಕುರಿತು, "ನಿನ್ನ ಗೋಗಳು ಮನೆಹೊಕ್ಕುದನ್ನು ಕಂಡೆಯ?" ಎಂದು ಕೇಳಿದನು.

"ಕಾಣಲಿಲ್ಲ, ದೇವ."

"ಏನು! ಆದರ್ಶಮುಖರಾಜನೆಂಬ ನನ್ನ ಹೆಸರನ್ನು ನೀನು ಹಿಂದೆ ಕೇಳಿಲ್ಲವೊ? ಸತ್ಯ ಹೇಳು."

"ಕಂಡೆ, ದೇವ!"

"ಭೋ ಚಂಡ! ಗೋಗಳನ್ನು ನೀನು ಹಿಂದಿರುಗಿ ಕೊಡನುದರಿಂದ ಗೋಗಳು ನಿನ್ನ ಕೊರಳಿಗೆ. ಇವನು ಕಂಡೂ 'ಕಾಣಲಿಲ್ಲ' ಎಂದು ತಿಳಿದೂ ಸುಳ್ಳಾಡಿದುದರಿಂದ ನೀನೇ ಇವನ ಕಣ್ಣುಗಳನ್ನು ಕಿತ್ತು, ಇವನ ಗೋಗಳ ಬೆಲೆಯು ಇಪ್ಪತ್ತುನಾಲ್ಕು ಕಹಾಪಣಗಳನ್ನು ಕೊಟ್ಟುಬಿಡು" ಎಂದು ಹೇಳಿ, ರಾಜನು ಆ ಗೋಸ್ವಾಮಿಯನ್ನು ಹೊರಗೆ ಕಳುಹಿಸಿದನು.

ಅವನು "ಕಣ್ಣುಗಳನ್ನು ಕಿತ್ತರೆ ಕಹಾಪಣಗಳಿಂದ ಏನುಮಾಡಲಿ?" ಎಂದು ಚಂಡನ ಕಾಲಿಗೆ ಬಿದ್ದು, "ಸ್ವಾಮಿ, ಚಂಡ, ಗೋಗಳ ಬೆಲೆಯು ಕಹಾಪಣಗಳನ್ನೂ ನೀನೇ ಇಟ್ಟುಕೊ. ಇದನ್ನೂ ಹಿಡಿ" ಎಂದು ಬೇರೆ ಕಹಾಪಣಗಳನ್ನು ಕೊಟ್ಟು ಓಡಿದನು.

ಆಗ ಎರಡನೆಯವನು "ದೇವ! ಇವನು ನನ್ನ ಹೆಂಡತಿಯನ್ನು ಹೊಡೆದು ಗರ್ಭಪಾತಮಾಡಿಸಿದನು" ಎಂದನು.

"ನಿಜವೆ, ಚಂಡ?"

"ಕೇಳು, ಮಹಾರಾಜ" ಎಂದು ಚಂಡನು ಎಲ್ಲವನ್ನೂ ವಿಸ್ತರಿಸಿ ಹೇಳಿದನು.

ಆಗ ರಾಜನು "ಇವನ ಹೆಂಡತಿಯನ್ನು ಹೊಡೆದು ಗರ್ಭಪಾತ ಮಾಡಿಸಿದೆಯು?" ಎಂದನು.

"ಇಲ್ಲ, ದೇವ."

"ಭೋ! ಇವನಿಂದ ಆದ ಗರ್ಭಪಾತವನ್ನು ಸರಿಪಡಿಸಬಲ್ಲೆಯು?"

"ಮಾಡಲಾರೆ, ದೇವ."

"ಇದಕ್ಕೇನು ಮಾಡಬೇಕೆನ್ನುವೆ?"

"ನನಗೆ ಮಗ ಲಭಿಸಬೇಕು."

"ಹಾಗಾದರೆ, ಚಂಡ, ನೀನು ಇವನ ಹೆಂಡತಿಯನ್ನು ನಿನ್ನ ಮನೆಗೆ ಮಾಡಿಕೊಂಡು, ಮಗ ಹುಟ್ಟಿದಾಗ ಅವನನ್ನು ತಂದು ಇವನಿಗೆ ಕೊಡು."

ಅವನು ಕೂಡ ಗ್ರಾಮಣಿ ಚಂಡನ ಪಾದಕ್ಕೆ ಬಿದ್ದು, "ಸ್ವಾಮಿ! ನನ್ನ ಮನೆ ಮುರಿಯಬೇಡ" ಎಂದು ಕಹಾಪಣಗಳನ್ನು ಕೊಟ್ಟು ಓಡಿದನು.

ಆಗ ಮೂರಸೆಯುವನು ಬಂದು, "ದೇವ! ಇವನು ಹೊಡೆದು ನನ್ನ ಕುದುರೆಯ ಕಾಲು ಮುರಿದನು" ಎಂದನು.

"ನಿಜವೆ, ಚಂಡ?"

"ಕೇಳು ಮಹಾರಾಜ" ಎಂದು ಚಂಡನು ನಡೆದುದನ್ನು ವಿಸ್ತರಿಸಿ ಹೇಳಿದನು.

ಅದನ್ನು ಕೇಳಿ, ರಾಜನು "ಕುದುರೆಯನ್ನು ಹೊಡೆದು ಹಿಂದಿರುಗಿ ಸೆಂದು ನೀನು ಹೇಳಿದುದು ನಿಜವೆ?" ಎಂದು ಆ ಕುದುರೆ ಕಾಯುವವನನ್ನು ಕೇಳಿದನು.

"ಹೇಳಲಿಲ್ಲ, ದೇವ!"

ಮೇಲಿಂದ ಮೇಲೆ ಕೇಳಲು, "ಹೌದು, ಹೇಳಿದೆ" ಎಂದನು.

ರಾಜನು ಚಂಡನನ್ನು ಕರೆದು, "ಭೋ ಚಂಡ! ಇವನು ಹೇಳಿ 'ಹೇಳಲಿಲ್ಲ' ಎಂದು ಸುಳ್ಳಾಡಿದನು. ನೀನು ಇವನ ನಾಲಿಗೆಯನ್ನು ಕತ್ತರಿಸಿ, ಕುದುರೆಯ ಬೆಲೆಯ ಸಾವಿರವನ್ನು ನಮ್ಮಿಂದ ಪಡೆದು ಕೊಡು" ಎಂದನು.

ಕುದುರೆ ಕಾಯುವವನು ಬೇರೆ ಕಹಾಪಣಗಳನ್ನು ಕೊಟ್ಟು ಓಡಿ ಹೋದನು.

ಆಗ, ಮೇದರವನ ಮಗನು "ದೇವ! ಇವನು ನನ್ನ ತಂದೆಯನ್ನು ಕೊಂದ ಕಳ್ಳ!" ಎಂದನು.

"ಸತ್ಯವೆ ಚಂಡ?"

"ಕೇಳು, ದೇವ" ಎಂದು ಚಂಡನು ಅದರ ಕಾರಣವನ್ನು ವಿಸ್ತರಿಸಿ ಹೇಳಿದನು.

ರಾಜನು ಮೇದರವನನ್ನು ಕರೆದು, "ಇದಕ್ಕೆ ಏನು ಮಾಡಬೇಕೆನ್ನುವೆ?" ಎಂದನು.

"ನನಗೆ ತಂದೆ ಸಿಕ್ಕಿದರಾಯಿತು, ದೇವ."

"ಭೋ ಚಂಡ! ಇವನಿಗೆ ತಂದೆ ಸಿಕ್ಕಿದರಾಯಿತು. ಸತ್ತವನನ್ನು ತರುವುದು ಸಾಧ್ಯವಿಲ್ಲ. ನೀನು ಇವನ ತಾಯನ್ನು ನಿನ್ನ ಮನೆಗೆ ಮಾಡಿಕೊಂಡು ಇವನಿಗೆ ತಂದೆಯಾಗು."

ಮೇದರವನ ಮಗನು "ಸ್ವಾಮಿ! ಸತ್ತ ನನ್ನ ತಂದೆಯ ಮನೆ ಮುರಿಯಬೇಡಿ" ಎಂದು ಗ್ರಾಮಣಿ ಚಂಡನಿಗೆ ಕಹಾಪಣಗಳನ್ನು ಕೊಟ್ಟು ಓಡಿದನು.

ಗ್ರಾಮಣಿ ಚಂಡನು ಜಯಹೊಂದಿ, ಸಂತೋಷಚಿತ್ತನಾಗಿ, "ದೇವ! ಕೆಲಕೆಲವರ ಸುದ್ದಿಗಳನ್ನು ನಿನ್ನಲ್ಲಿ ಒಪ್ಪಿಸಬೇಕು. ಹೇಳಬಹುದೆ?" ಎಂದು ರಾಜನಿಗೆಂದನು.

"ಹೇಳು, ಚಂಡ."

ಚಂಡನು ಬ್ರಾಹ್ಮಣ ಬಾಲಕರ ಸುದ್ದಿಯನ್ನು ಮೊದಲು ಮಾಡಿ ಕೊಂಡು ಪ್ರತಿಲೋಮಕ್ರಮದಿಂದ ಒಂದೊಂದನ್ನೂ ಹೇಳಿದನು. ರಾಜನು ಕ್ರಮವಾಗಿ ಅವುಗಳನ್ನು ಬಿಡಿಸಿ ಹೇಳಿದನು.

ಮೊದಲನೆಯ ಸುದ್ದಿಯನ್ನು ಕೇಳಿ, "ಅವರು ವಾಸಮಾಡುವ ಸ್ಥಳದಲ್ಲಿ, ಹಿಂದೆ, ವೇಳೆಯನ್ನು ತಿಳಿದು ಕೂಗುವ ಕೋಳಿಯಿತ್ತು. ಅವರು ಆ ಶಬ್ದದಿಂದ ಎಚ್ಚರಹೊಂದಿ ಮಂತ್ರಗಳನ್ನು ಗ್ರಹಿಸಿ ಕಲಿಯುವ ವೇಳೆಗೆ ಅರುಣನು ಏಳುತ್ತಿದ್ದನು. ಆದರಿಂದ ಅವರು ಹಿಡಿದುದು ಹಾಳಾಗುತ್ತಿರ ಲಿಲ್ಲ. ಈಗ ಅವರ ವಾಸಸ್ಥಾನದಲ್ಲಿ ಅವೇಳೆಯಲ್ಲಿ ಕೂಗುವ ಕೋಳಿ ಯಿದೆ. ಅದು ಅತಿರಾತ್ರೆಯಲ್ಲಿ ಅಥವಾ ಅತಿಬೆಳಗಿನಲ್ಲಿ ಕೂಗುವುದು. ಅತಿರಾತ್ರೆಯಲ್ಲಿ ಕೂಗಿದ ಶಬ್ದಕ್ಕೆ ಎದ್ದು ಮಂತ್ರ ಗ್ರಹಿಸಿದಾಗ ನಿದ್ದೆಗೆ ವಶರಾಗಿ ಕಲಿಯದೆ ಪುನಃ ಮಲಗುವರು. ಅತಿಬೆಳಗಿನಲ್ಲಿ ಕೂಗಿದ ಶಬ್ದಕ್ಕೆ ಎದ್ದರೆ ಕಲಿತುದು ದಕ್ಕುವುದಿಲ್ಲ. ಅದರಿಂದ ಅವರು ಗ್ರಹಿಸಿ ದುದು ಅವರಿಗೆ ತಿಳಿಯುವುದಿಲ್ಲ" ಎಂದನು.

ಎರಡನೆಯದನ್ನು ಕೇಳಿ, "ಹಿಂದೆ, ಅವರು ಶ್ರಮಣರಿಗೆ ತಕ್ಕ ಧರ್ಮ ಗಳನ್ನು ಮಾಡುತ್ತ ಧ್ಯಾನ ಮೊದಲಾದವುಗಳಲ್ಲಿ ತೊಡಗುತ್ತಿದ್ದರು. ಈಗ ಶ್ರಮಣಧರ್ಮವನ್ನು ಬಿಟ್ಟು, ಮಾಡಬಾರದುದರಲ್ಲಿ ತೊಡಗಿರುವರು.

ಆರಾಮದಲ್ಲಿ ಬೆಳೆದ ಹಣ್ಣುಹಂಪಲುಗಳನ್ನು ಬಳಿಯಿದ್ದವರಿಗೆ ಕೊಡುವರು. ಒಬ್ಬನ ಪಾತ್ರೆಗೆ ಬಿದ್ದ ಭಿಕ್ಷೆಯನ್ನು ಎಲ್ಲರೂ ತಿನ್ನುವರು. ಅವರು ಜೀವಿಸುವ ರೀತಿ ಸರಿಯಾದುದಲ್ಲ. ಅದರಿಂದ ಅವರ ಹಣ್ಣು ಹಂಪಲುಗಳು ಮಧುರವಾಗಿ ಹುಟ್ಟುವುದಿಲ್ಲ. ಅವರು ಎಲ್ಲರೂ ಪುನಃ ಮೊದಲಿನಂತೆ ಶ್ರಮಣಧರ್ಮದಲ್ಲಿ ತೊಡಗಿದರೆ, ಅವರ ಹಣ್ಣುಹಂಪಲುಗಳು ಪುನಃ ಸಿಹಿಯಾಗುವುವು. ಆ ತಾಪಸರಿಗೆ ರಾಜನ ಮನೆಯವರು ಪಂಡಿತರೆಂಬುದು ತಿಳಿಯದು. ಶ್ರಮಣಧರ್ಮಗಳನ್ನು ನಡಿಸುವಂತೆ ಅವರಿಗೆ ಹೇಳು" ಎಂದನು.

ಮೂರನೆಯದನ್ನು ಕೇಳಿ, "ಆ ನಾಗರಾಜರು ಒಬ್ಬರೊಡನೆ ಒಬ್ಬರು ಜಗಳವಾಡುವರು. ಆದರಿಂದ ಆ ನೀರು ಕದಡುವುದು. ಅವರು ಹಿಂದಿನಂತೆ ಒಂದಾದರೆ ಪುನಃ ತಿಳಿಯಾಗುವುದು" ಎಂದನು.

ನಾಲ್ಕನೆಯದನ್ನು ಕೇಳಿ, "ಆ ವೃಕ್ಷದೇವತೆಯು ಹಿಂದೆ ಕಾಡಿನಲ್ಲಿ ಹೋಗುತ್ತಿದ್ದವರನ್ನು ಕಾಪಾಡುತ್ತಿತ್ತು. ಅದರಿಂದ ಅದಕ್ಕೆ ನಾನಾ ರೀತಿಯ ಬಲಿಕರ್ಮಗಳು ಸಿಕ್ಕುತ್ತಿತ್ತು. ಈಗ ಅದು ಕಾಪಾಡುವುದಿಲ್ಲ; ಅದರಿಂದ ಬಲಿಕರ್ಮ ಸಿಕ್ಕುವುದಿಲ್ಲ. ಹಿಂದಿನಂತೆ ಕಾಪಾಡುತ್ತಿದ್ದರೆ ಪುನಃ ಎಲ್ಲ ಲಾಭವೂ ದೊರಕುವುದು. ರಾಜರು ಇರುವುದು ಅದಕ್ಕೆ ಗೊತ್ತಿಲ್ಲ. ಕಾಡಿಗೆ ಬಂದವರನ್ನು ಕಾಪಾಡುವಂತೆ ಅದಕ್ಕೆ ತಿಳಿಸು" ಎಂದನು.

ಐದನೆಯದನ್ನು ಕೇಳಿ, "ಯಾವ ಹುತ್ತದ ಬುಡದಲ್ಲಿ ಕುಳಿತು ಆ ತಿತ್ತಿರವು ಮನೋಹರವಾಗಿ ಕೂಗುವುದೋ, ಅದರ ಕೆಳಗೆ ದೊಡ್ಡ ಹಣದ ಗಡಿಗೆಯಿದೆ. ಅದನ್ನು ನೀನು ಎತ್ತಿ ತೆಗೆದುಕೊ" ಎಂದನು.

ಆರನೆಯದನ್ನು ಕೇಳಿ, "ಯಾವ ಮರದ ಬುಡದಲ್ಲಿ ಮಾತ್ರ ಆ ಜಿಂಕೆ ಹುಲ್ಲು ತಿನ್ನಬಲ್ಲುದೋ, ಆ ಮರದ ಮೇಲೆ ದೊಡ್ಡ ಜೇನುಗೂಡು ಇದೆ. ಆ ಜೇನು ಬಿದ್ದು, ಅದೇ ಹುಲ್ಲಿನ ಮೇಲೆ ಅದಕ್ಕೆ ಆಸೆ; ಬೇರೆಯದನ್ನು ತಿನ್ನಲಾರದು. ನೀನು ಆ ಜೇನುಗೂಡನ್ನು ತೆಗೆದುಕೊಂಡು ಅದರಲ್ಲಿ ಮೇಲಿನ ಜೇನನ್ನು ನನಗೆ ಕಳುಹಿಸು. ಉಳಿದುದನ್ನು ನೀನು ತಿನ್ನು" ಎಂದು ಹೇಳಿದನು.

ಏಳನೆಯದನ್ನು ಕೇಳಿ, "ಆ ಹಾವು ವಾಸಮಾಡುವ ಹುತ್ತದ ಕೆಳಗೆ ದೊಡ್ಡ ಹಣದ ಗಡಿಗೆಯಿದೆ. ಅದನ್ನು ಕಾಪಾಡುತ್ತ ವಾಸಿಸುವ ಅದು

ಹೊರಗೆ ಬರುವಾಗ, ಧನಲೋಭದಿಂದ ಆದರ ಶರೀರವು ಹುತ್ತಕ್ಕೆ ಅಂಟಿಕೊಳ್ಳುವುದು. ಆಹಾರ ಹಿಡಿದ ಮೇಲೆ, ಧನಸ್ನೇಹದಿಂದ ಬೇರೆಯಾಗಿ ವೇಗದಿಂದ ಸುಲಭವಾಗಿ ಪ್ರವೇಶಿಸುವುದು. ಆ ಹಣದ ಗಡಿಗೆಯನ್ನು ನೀನು ಎತ್ತಿ ತೆಗೆದುಕೊ" ಎಂದನು.

ಎಂಟನೆಯದನ್ನು ಕೇಳಿ, "ಆ ತರುಣಸ್ತ್ರೀಯು ಗಂಡನೂ ತಾಯಿ ತಂದೆಗಳೂ ವಾಸಮಾಡುವ ಗ್ರಾಮಗಳ ನಡುವಿನ ಗ್ರಾಮದಲ್ಲಿ ಒಬ್ಬ ಜಾರನು ಇದ್ದಾನೆ. ಅವಳು ಅವನನ್ನು ನೆನೆದು ಅವನ ಸ್ನೇಹದಿಂದ ಗಂಡನ ಮನೆಯಲ್ಲಿ ವಾಸಿಸಲಾರಳು. ತಾಯಿತಂದೆಯರನ್ನು ನೋಡುವೆನೆಂದು ಜಾರನ ಮನೆಯಲ್ಲಿ ಕೆಲದಿವಸ ವಾಸಿಸಿ, ಅನಂತರ ತಾಯಿತಂದೆಗಳ ಮನೆಗೆ ಹೋಗುವಳು. ಅಲ್ಲಿ ಕೆಲವು ದಿನ ಇದ್ದು, ಪುನಃ ಜಾರನನ್ನು ಸ್ಮರಿಸಿ, ಗಂಡನ ಮನೆಗೆ ಹೋಗುವೆನೆಂದು ಪುನಃ ಜಾರನ ಮನೆಗೇ ಹೋಗುವಳು. ಆ ಸ್ತ್ರೀಗೆ ರಾಜನಿರುವನೆಂಬುದನ್ನು ತಿಳಿಸಿ, 'ಗಂಡನ ಮನೆಯಲ್ಲೇ ವಾಸಮಾಡಬೇಕು. ವಾಸಮಾಡದಿದ್ದರೆ ರಾಜನು ಹಿಡಿಸುವನು; ನೀನು ಬದುಕುವುದಿಲ್ಲ. ಇದನ್ನು ಮರೆಯದೆ ನೆನಪಿನಲ್ಲಿಡು' ಎಂದು ಅವಳಿಗೆ ಹೇಳು" ಎಂದನು.

ಒಂಬತ್ತನೆಯದನ್ನು ಕೇಳಿ, "ಹಿಂದೆ, ಆ ಗಣಿಕೆಯು ಒಬ್ಬನಿಂದ ಬೆಲೆ ತೆಗೆದುಕೊಂಡು, ಅವನನ್ನು ತೃಪ್ತಿಪಡಿಸದೆ ಇನ್ನೊಬ್ಬನಿಂದ ತೆಗೆದುಕೊಳ್ಳುತ್ತಿರಲಿಲ್ಲ. ಅದರಿಂದ ಹಿಂದೆ ಅವಳಿಗೆ ಬಹಳ ಸಿಕ್ಕುತ್ತಿತ್ತು. ಈಗ ತನ್ನ ಧರ್ಮವನ್ನು ಬಿಟ್ಟು, ಒಬ್ಬನ ಕೈಯಿಂದ ಪಡೆದುದಕ್ಕೆ ತೃಪ್ತಿಪಡಿಸದೆ ಇನ್ನೊಬ್ಬನ ಕೈಯಿಂದ ಸ್ವೀಕರಿಸುವಳು. ಮೊದಲನೆಯವನನ್ನು ಕೇಳದೆ ಎರಡನೆಯವನನ್ನು ಸೇರುವಳು. ಅದರಿಂದ ಅವಳಿಗೆ ಬೆಲೆ ಸಿಕ್ಕುವುದಿಲ್ಲ; ಯಾರೂ ಬರುವುದಿಲ್ಲ. ತನ್ನ ಧರ್ಮವನ್ನು ನಡಿಸಿದರೆ, ಹಿಂದಿನಂತೆ ಆಗುವುದು. ತನ್ನ ಧರ್ಮದಲ್ಲಿ ನಿಲ್ಲುವಂತೆ ಅವಳಿಗೆ ಹೇಳು" ಎಂದನು.

ಹತ್ತನೆಯದನ್ನು ಕೇಳಿ, "ಹಿಂದೆ, ಆ ಗ್ರಾಮಭೋಜಕನು ಧರ್ಮದಿಂದ ಸಮವಾಗಿ ನ್ಯಾಯವನ್ನು ನಿಶ್ಚಯಮಾಡುತ್ತಿದ್ದನು. ಅದರಿಂದ ಜನರಿಗೆ ಪ್ರಿಯನಾದನು, ಮನೋಹರನಾದನು. ಸಮಾಧಾನವೊಂದಿದ ಆ ಜನರು ಅವನಿಗೆ ಅನೇಕ ಬಹುಮಾನಗಳನ್ನು ತಂದರು. ಅದರಿಂದ

ಅವನ ರೂಪ ಚೆನ್ನಾಯಿತು, ಹಣ ಹೆಚ್ಚಾಯಿತು, ಯಶಸ್ಸು ಕೂಡಿತು. ಈಗ, ಲಂಚ ತೆಗೆದುಕೊಂಡು ಅಧರ್ಮದಿಂದ ನ್ಯಾಯವನ್ನು ನಿಶ್ಚಯ ಮಾಡುವನು. ಅದರಿಂದ ಕೆಟ್ಟಗತಿ ಹೊಂದಿ ಜಿಪುಣನಾಗಿ ಪಾಂಡು ರೋಗದಿಂದ ನರಳುವನು. ಮೊದಲಿನಂತೆ ನ್ಯಾಯವನ್ನು ನಿಶ್ಚಯಿಸಿದರೆ ಮೊದಲಿನಂತೆಯೇ ಆಗುವನು. ರಾಜನಿರುವುದು ಅವನಿಗೆ ಗೊತ್ತಿಲ್ಲ. ಧರ್ಮದಿಂದ ನ್ಯಾಯವನ್ನು ನಿಶ್ಚಯಿಸುವಂತೆ ಅವನಿಗೆ ಹೇಳು" ಎಂದನು.

ಹೀಗೆ, ಗ್ರಾಮಣಿ ಚಂಡನು ಆ ಎಲ್ಲ ಸುದ್ದಿಗಳನ್ನೂ ತಿಳಿಸಿದನು. ರಾಜನು, ಸರ್ವಜ್ಞನಾದ ಬುದ್ಧನಂತೆ ತನ್ನ ಪ್ರಜ್ಞೆಯಿಂದ ಅವು ಎಲ್ಲವನ್ನೂ ವಿವರಿಸಿ, ಗ್ರಾಮಣಿ ಚಂಡನಿಗೆ ಬಹಳ ಹಣಕೊಟ್ಟು, ಅವನು ವಾಸಿಸುತ್ತಿದ್ದ ಗ್ರಾಮವನ್ನು ಶ್ರೇಷ್ಠವಾದ ದಾನವಾಗಿ ಮಾಡಿ ಅವನಿಗೆ ಕೊಟ್ಟು ನಿಲ್ಲಿಸಿದನು.

ಚಂಡನು ನಗರದಿಂದ ಹೊರಟು, ಬೋಧಿಸತ್ತ್ವನು ಕೊಟ್ಟ ಸುದ್ದಿಯನ್ನು ಬ್ರಾಹ್ಮಣ ಬಾಲಕರಿಗೂ, ತಾಪಸರಿಗೂ, ನಾಗರಾಜ ವೃಕ್ಷದೇವತೆಗಳಿಗೂ ತಿಳಿಸಿದನು; ತಿತ್ತಿರಪಕ್ಷಿಯು ಕುಳಿತ ಸ್ಥಳದಲ್ಲಿನ ನಿಧಿಯನ್ನು ಕೊಂಡನು; ಜಿಂಕೆಯು ಹುಲ್ಲು ತಿನ್ನುವ ಸ್ಥಳದ ಮರದ ಮೇಲಿನ ಜೇನುಗೂಡನ್ನು ತೆಗೆದು, ಅದರ ಜೇನನ್ನು ರಾಜನಿಗೆ ಕಳುಹಿಸಿದನು. ಹಾವಿದ್ದ ಹುತ್ತವನ್ನು ಒಡೆಯಿಸಿ ಅಲ್ಲಿಯ ನಿಧಿಯನ್ನು ಸಂಗ್ರಹಿಸಿದನು; ಆ ತರುಣಿಗೂ ಗಣಿಕೆಗೂ ಗ್ರಾಮಭೋಜಕನಿಗೂ ರಾಜನು ಹೇಳಿ ಕಳುಹಿಸಿದ ಸುದ್ದಿಗಳನ್ನು ತಿಳಿಯಿಸಿ, ಮಹಾಯಶಸ್ಸಿನಿಂದ ತನ್ನ ಗ್ರಾಮಕ್ಕೆ ಹೋಗಿ, ಆಯುಸ್ಸು ಇರುವವರೆಗೂ ಇದ್ದು, ಕರ್ಮಕ್ಕೆ ಅನುಸಾರವಾಗಿ ಹೋದನು.

ಆದರ್ಶಮುಖರಾಜನು ಕೂಡ, ದಾನ ಮೊದಲಾದ ಪುಣ್ಯಗಳನ್ನು ಮಾಡಿ, ಜೀವಿತವು ಕಡೆಯಾಗಲು ಸ್ವರ್ಗದ ಸ್ಥಳವನ್ನು ಪೂರ್ಣಗೊಳಿಸಲು ಹೋದನು.

[೨೫೭ನೆಯ 'ಗಾಮಣಿ ಚಂಡ ಜಾತಕ']

"ಬುದ್ಧವಚನ ಮಧು"

ಎಂಬ

ಪಾಲೀ ಪಿಟಕ ಸಾಹಿತ್ಯದ ಕನ್ನಡ ಅನುವಾದಮಾಲೆಯಲ್ಲಿ

ಎರಡನೆಯ ಸಂಪುಟವಾಗಿ

ಪ್ರಕಟಿಸಬೇಕೆಂದು ಉದ್ದೇಶಿಸಿರುವ

"ಬುದ್ಧನ ಉಪಮಾನಗಳು"

ಎಂಬ ಪುಸ್ತಕದಿಂದ ಆಯ್ದ

ಹದಿನೈದು ಉಪಮಾನಗಳು

ವಿವರ

		ಪುಟ
೧.	ದೇಹವೆಂಬ ವೀಣೆ	೫೫
೨.	ಪ್ರಚೇತನನ ರಥದ ಗಾಲಿ	೫೮
೩.	ಕುರುಡರು ಕಂಡ ಆನೆ	೬೧
೪.	'ಬೈಯುವ ಭಾರದ್ವಾಜ'	೬೪
೫.	ವೈದೇಹಿಕೆಯ ದಾಸಿ ಕಾಳಿ	೬೬
೬.	ಕೋಪ ತಿನ್ನುವ ಯಕ್ಷ	೬೯
೭.	ಹೊಗೆಯಾಡುವ ಹುತ್ತ	೭೧
೮.	'ಸುಳ್ಳು ಹೇಳಬಾರದು, ರಾಹುಲ!' . . .	೭೫
೯.	ಆನೆಯನ್ನು ಅನುಕರಿಸಿದ ಆನೆಮರಿ . . .	೭೭
೧೦.	ಏಕಾಂತವಾಸ	೭೮
೧೧.	ವಿಷದ ಬಾಣ	೮೦
೧೨.	ಹೊಸ ಮದುಮಗಳು	೮೧
೧೩.	ಬಲು ದೂರದೂರ	೮೨
೧೪.	ಮಳೆಯ ಮೋಡ	೮೩
೧೫.	ಮುಚ್ಚುಮರೆ	೮೪

೧. ದೇಹವೆಂಬ ವೀಣೆ

ಆಗ ಸೋಣನು ಭಗವಂತನ ಬಳಿಸಾರಿ, ಅಭಿವಂದಿಸಿ ಒಂದು ಕಡೆ ಕುಳಿತನು. ಒಂದು ಕಡೆ ಕುಳಿತು, “ಭನ್ತೇ! ಭಗವಂತನು ಉಪದೇಶಮಾಡಿದ ಧರ್ಮವನ್ನು ನಾನು ತಿಳಿದೆನು. ಬ್ರಹ್ಮಚರ್ಯವು ಏಕಾಂತವಾಸದಿಂದ ಪರಿಪೂರ್ಣವಾಗತಕ್ಕದ್ದು, ಏಕಾಂತವಾಸದಿಂದ ಪರಿಶುದ್ಧವಾಗತಕ್ಕದು, ಶಂಖದಂತೆ ಶುಭ್ರವಾಗತಕ್ಕದು. ಮನೆಯಲ್ಲಿ ವಾಸಿಸುವವನಿಗೆ ಅದನ್ನು ಆಚರಿಸುವುದು ಸುಲಭವಲ್ಲ. ಅದಕ್ಕಾಗಿ ನಾನು ತಲೆಗೂದಲು ಗಡ್ಡಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಬೇಕೆಂದು ಬಯಸುತ್ತೇನೆ. ಭಗವಂತನು ನನಗೆ ಪ್ರವ್ರಜ್ಯವನ್ನು ಕೊಡಬೇಕು” ಎಂದನು.

ಹೀಗೆ ಸೋಣನು ಭಗವಂತನಿಂದ ಪ್ರವ್ರಜ್ಯವನ್ನೂ ಉಪಸಂಪದವನ್ನೂ ಪಡೆದನು. ಉಪಸಂಪದವನ್ನು ಪಡೆದ ಕೊಂಚ ಕಾಲದಲ್ಲಿ ಆಯುಷ್ಮಂತನಾದ ಸೋಣನು ಸೀತವನದಲ್ಲಿ ವಾಸಮಾಡುತ್ತಿದ್ದನು.

ಆತನು ಅತಿಯಾಗಿ ಕಲಕಿದ ವೀರ್ಯದಿಂದ ಅಲ್ಲಿಂದ ಇಲ್ಲಿಗೆ ಶತಪಥ ತಿರುಗುವಾಗ ಅವನ ಕಾಲು ಬಿರಿದುವು; ಅವನು ತಿರುಗಾಡಿದ ಸ್ಥಳವು, ಗೋಗಳನ್ನು ಕೊಲ್ಲುವ ಮನೆಯು ಹಾಗೆ, ರಕ್ತದಿಂದ ನೆನೆಯಿತು. ಆಗ ಸೋಣನು ಒಂದು ಕಡೆ ಹೋಗಿ, “ಆರಬ್ಧವೀರ್ಯರಾಗಿ ವಾಸಮಾಡುವ ಭಗವಂತನ ಶ್ರಾವಕರಲ್ಲಿ ನಾನು ತಿಳಿದವನು. ಆದರೂ ಆಸ್ರವಗಳ ಬೆಸುಗೆಯಿಂದ ಚಿತ್ತವು ಬಿಡುಗಡೆಯಾಗಿಲ್ಲ. ನನ್ನ ವಂಶದಲ್ಲಿ ಭೋಗರಾಶಿಯಾಗಿದೆ. ಅದನ್ನು ಅನುಭವಿಸಿ ಪುಣ್ಯಗಳನ್ನು ಮಾಡಲು ನನಗೆ ಸಾಧ್ಯ. ನಾನು ಈಗ ಹೀನವಾದುದಕ್ಕೆ ತಿರುಗಿ ಭೋಗಗಳನ್ನು ಅನುಭವಿಸುವೆನು; ಪುಣ್ಯಗಳನ್ನು ಮಾಡುವೆನು” ಎಂದು ಆಲೋಚನೆ ಮಾಡಿದನು.

ಆಯುಷ್ಮಂತನಾದ ಸೋಣನ ಮನಸ್ಸಿನಲ್ಲಿ ಹುಟ್ಟಿದ ಆಲೋಚನೆಯನ್ನು ಭಗವಂತನು ಕಂಡುಕೊಂಡನು. ಕಂಡುಕೊಂಡು — ಬಲವಂತನಾದ ಪುರುಷನು ಬಗ್ಗಿದ ಬಾಹುವನ್ನು ಪಸರಿಸುವಂತೆ, ಪಸರಿಸಿದ

ಬಾಹುವನ್ನು ಬಗ್ಗಿಸುವಂತೆ — ಗೃಧ್ರಕೂಟಪರ್ವತದಲ್ಲಿ ಮರೆಯಾಗಿ ಸೀತ ವನದಲ್ಲಿ ಕಾಣಿಸಿಕೊಂಡನು. ಆಗ ಭಗವಂತನು, ಅನೇಕ ಭಿಕ್ಷು ಗಳೊಡನೆ ಅವರು ಮಲಗಿ ಕುಳಿತುಕೊಳ್ಳುವ ಸ್ಥಳಗಳಲ್ಲಿ ತಿರುಗಾಡುತ್ತ, ಆಯುಷ್ಮಂತನಾದ ಸೋಣನು ನಡೆದಾಡಿದ ಕಡೆಗೆ ಬಂದನು.

ಆ ಸ್ಥಳವು ರಕ್ತದಿಂದ ನೆನೆದಿದ್ದುದನ್ನು ಕಂಡು, ಭಗವಂತನು "ಭಿಕ್ಷುಗಳೆ! ಹಸುಗಳನ್ನು ಕೊಲ್ಲುವ ಮನೆಯಂತೆ ರಕ್ತದಿಂದ ನೆನೆದಿರುವ ಈ ತಿರುಗಾಡುವ ಭೂಮಿ ಯಾರದು?" ಎಂದು ಭಿಕ್ಷುಗಳನ್ನು ಕೇಳಿದನು.

"ಭನ್ತೇ! ಆಯುಷ್ಮಂತನಾದ ಸೋಣನು ಆರಬ್ಧವೀರ್ಯನಾಗಿ ತಿರು ಗಾಡುವಾಗ ಅವನ ಕಾಲು ಬಿರಿದುವು. ಅದರಿಂದ ಈ ತಿರುಗಾಡುವ ಭೂಮಿಯು ಗೋಗಳ ಕೊಲೆಮನೆಯಂತೆ ರಕ್ತದಿಂದ ನೆನೆದಿದೆ."

ಆಗ ಭಗವಂತನು ಆಯುಷ್ಮಂತನಾದ ಸೋಣನ ವಿಹಾರದ ಬಳಿ ಸಾರಿ, ಸಿದ್ಧಗೊಳಿಸಿದ ಆಸನದಲ್ಲಿ ಕುಳಿತನು. ಸೋಣನು ಭಗವಂತನಿಗೆ ಅಭಿವಂದಿಸಿ ಒಂದು ಕಡೆ ಕುಳಿತನು.

ಆಗ ಭಗವಂತನು "ಏನು, ಸೋಣ? ಈ ಬ್ರಹ್ಮಚರ್ಯವನ್ನು ಬಿಟ್ಟು ಹೀನವಾದುದಕ್ಕೆ ಹಿಂದಿರುಗಬೇಕೆಂದು ನಿನಗೆ ಆಲೋಚನೆ ಹುಟ್ಟಿತಲ್ಲವೆ?" ಎಂದನು.

"ಹೌದು, ಭನ್ತೇ."

"ಸೋಣ! ಹಿಂದೆ ನೀನು ಮನೆಯಲ್ಲಿದ್ದಾಗ, ವೀಣೆಯ ತಂತಿಯಿಂದ ಸ್ವರ ಹೊರಡಿಸುವ ಕೌಶಲ್ಯವು ನಿನಗೆ ಇತ್ತಲ್ಲವೆ?"

"ಹೌದು, ಭನ್ತೇ."

"ಏನೆಂಬೆ, ಸೋಣ? ನಿನ್ನ ವೀಣೆಯ ತಂತಿ ಅತಿ ಬಿಗಿಯಾದಾಗ, ಆ ಸಮಯದಲ್ಲಿ, ನಿನ್ನ ವೀಣೆ ಸ್ವರವತಿಯಾಗಿತ್ತೆ? ಕೆಲಸಕ್ಕೆ ತಕ್ಕು ದಾಗಿತ್ತೆ?"

"ಇಲ್ಲ, ಭನ್ತೇ."

"ಸೋಣ, ನಿನ್ನ ವೀಣೆಯ ತಂತಿ ಅತಿ ಸಡಿಲವಾದಾಗ, ಆ ಸಮಯ ದಲ್ಲಿ, ನಿನ್ನ ವೀಣೆ ಸ್ವರವತಿಯಾಗಿತ್ತೆ? ಕೆಲಸಕ್ಕೆ ತಕ್ಕುದಾಗಿತ್ತೆ?"

"ಇಲ್ಲ, ಭನ್ತೇ."

"ಸೋಣ, ನಿನ್ನ ವೀಣೆಯ ತಂತಿ ಅತಿ ಬಿಗಿಯಾಗದೆ ಅತಿ ಸಡಿಲವಾಗದೆ ಸಮಗುಣದಲ್ಲಿ ನಿಂತಾಗ, ಆ ಸಮಯದಲ್ಲಿ, ನಿನ್ನ ವೀಣೆ ಸ್ವರವತಿಯಾಗಿತ್ತೆ? ಕೆಲಸಕ್ಕೆ ತಕ್ಕುದಾಗಿತ್ತೆ ?"

"ಹೌದು, ಭನ್ತೇ."

"ಅದರಂತೆಯೇ, ಸೋಣ, ವೀರ್ಯವು ಅತಿಯಾಗಿ ಆರಬ್ಧವಾದರೆ ಅದು ಔದ್ಧತ್ಯಕ್ಕೆ ತಿರುಗುವುದು; ವೀರ್ಯವು ಅತಿ ಲೀನವಾದರೆ ಸೋಮಾರಿತನಕ್ಕೆ ತಿರುಗುವುದು. ಅದರಿಂದ, ಸೋಣ, ವೀರ್ಯದಲ್ಲಿ ಸಮತೆಯನ್ನು ಸ್ಥಿರವಾಗಿ ನಿಲ್ಲಿಸು. ಇಂದ್ರಿಯಗಳ ಸಮತೆಯನ್ನು ಕಂಡು ತಿಳಿ. ಅದೇ ನಿಮಿತ್ತವನ್ನು ಹಿಡಿ."

ಆಯುಷ್ಮಂತನಾದ ಸೋಣನು ಹಾಗೆಯೇ ಆಗಲೆಂದು ಭಗವಂತನ ಮಾತಿಗೆ ಒಪ್ಪಿದನು. ಭಗವಂತನು ಆಯುಷ್ಮಂತನಾದ ಸೋಣನಿಗೆ ಈ ಉಪದೇಶವನ್ನು ಉಪದೇಶಿಸಿ— ಬಲವಂತನಾದ ಪುರುಷನು ಬಗ್ಗಿದ ಬಾಹುವನ್ನು ಪಸರಿಸುವಂತೆ, ಪಸರಿಸಿದ ಬಾಹುವನ್ನು ಬಗ್ಗಿಸುವಂತೆ— ಸೀತವನದಲ್ಲಿ ಸೋಣನ ಎದುರಿನಲ್ಲಿ ಮರೆಯಾಗಿ ಗೃಧ್ರಕೂಟಪರ್ವತದಲ್ಲಿ ಕಾಣಿಸಿಕೊಂಡನು.

[ವಿನಯಪಿಟಕ — ಮಹಾವಗ್ಗ: ಖಂಧಕ ೫ – ೧: § ೧೧—೧೭]

೨. ಪ್ರಚೇತನನ ರಥದ ಗಾಲಿ

ಭಗವಂತನು ಒಂದು ಸಲ ವಾರಣಾಸಿಯಲ್ಲಿ ಋಷಿಪತನದ ಮೃಗದಾವದಲ್ಲಿ ತಂಗಿದ್ದನು. ಅಲ್ಲಿ ಭಗವಂತನು "ಭಿಕ್ಷುಗಳೆ!" ಎಂದು ಭಿಕ್ಷುಗಳನ್ನು ಕರೆದನು.

"ಭನ್ತೇ!" ಎಂದು ಆ ಭಿಕ್ಷುಗಳು ಭಗವಂತನಿಗೆ ಕಿವಿಗೊಟ್ಟರು.

ಭಗವಂತನು ಹೀಗೆಂದನು:

"ಭಿಕ್ಷುಗಳೆ! ಹಿಂದೆ ಪ್ರಚೇತನನೆಂಬ ರಾಜನಿದ್ದನು. ಅವನು ತನ್ನ ರಥಕಾರನನ್ನು ಕರೆದು, 'ಅಯ್ಯ ರಥಕಾರ! ಇನ್ನು ಆರು ತಿಂಗಳ ಮೇಲೆ ನಮಗೆ ಒಂದು ಯುದ್ಧ ಸಂಭವಿಸುತ್ತದೆ. ಎರಡು ಹೊಸ ಚಕ್ರ ಮಾಡಿಕೊಡಬಲ್ಲೆಯ?' ಎಂದನು.

"'ಮಾಡಬಲ್ಲೆ, ದೇವ' ಎಂದು ರಥಕಾರನು ಒಪ್ಪಿದನು.

"ಆಗ, ಭಿಕ್ಷುಗಳೆ, ಆ ರಥಕಾರನು ಆರು ರಾತ್ರೆ ಕಡಿಮೆಯಾದ ಆರು ತಿಂಗಳಿಗೆ ಒಂದು ಚಕ್ರವನ್ನು ಮುಗಿಸಿದನು.

"ಪ್ರಚೇತನ ರಾಜನು ಅವನನ್ನು ಕರೆದು, 'ಅಯ್ಯ ರಥಕಾರ! ಇನ್ನು ಆರು ದಿನಗಳ ಮೇಲೆ ಯುದ್ಧವಾಗುತ್ತದೆ. ಹೊಸ ಎರಡು ಚಕ್ರ ಮುಗಿಸಿಯಾಯಿತೆ?' ಎಂದನು.

"'ದೇವ! ಈ ಆರು ರಾತ್ರೆ ಕಡಿಮೆಯಾದ ಆರು ತಿಂಗಳಿಗೆ ಒಂದು ಚಕ್ರ ಮುಗಿಯಿತು.'

"'ಅಯ್ಯ ರಥಕಾರ! ಈ ಆರು ದಿವಸಗಳಲ್ಲಿ ಎರಡನೆಯ ಚಕ್ರ ಮುಗಿಸಬಲ್ಲೆಯ?'

"'ಮುಗಿಸಬಲ್ಲೆ, ದೇವ.'

"ಆಗ, ಭಿಕ್ಷುಗಳೆ, ರಥಕಾರನು ಎರಡನೆಯ ಚಕ್ರವನ್ನು ಆರು ದಿನಗಳಲ್ಲಿ ಮುಗಿಸಿ, ಹೊಸ ಎರಡು ಚಕ್ರಗಳನ್ನು ತಂದು ಪ್ರಚೇತನ ರಾಜನ ಬಳಿಸಾರಿದನು. ಬಳಿಸಾರಿ, 'ದೇವ! ಇದೋ, ಹೊಸ ಎರಡು ಚಕ್ರ ಮುಗಿದಿದೆ' ಎಂದನು.

“‘ಅಯ್ಯ ರಥಕಾರ! ಆರು ರಾತ್ರೆ ಕಡಿಮೆಯಾದ ಆರು ತಿಂಗಳಲ್ಲಿ ಮುಗಿಸಿದ ಈ ಚಕ್ರಕ್ಕೂ ಆರು ದಿನಗಳಲ್ಲಿ ಮುಗಿಸಿದ ಈ ಚಕ್ರಕ್ಕೂ ವ್ಯತ್ಯಾಸವೇನೂ ಇಲ್ಲ, ನಾನೇನೂ ವ್ಯತ್ಯಾಸ ಕಾಣೆ.’

“‘ವ್ಯತ್ಯಾಸವಿದೆ, ದೇವ. ದೇವರು ವ್ಯತ್ಯಾಸ ನೋಡಬೇಕು.’

“ಆಗ, ಭಿಕ್ಷುಗಳೆ, ರಥಕಾರನು ಆರು ದಿನದಲ್ಲಿ ಮುಗಿಸಿದ ಚಕ್ರವನ್ನು ಉರುಳಿಸಿದನು. ಅದು ಉರುಳಿಸಿದ್ದರಿಂದ ಬಂದ ಗತಿಯಿರುವ ವರೆಗೆ ಹೋಗಿ, ಆಮೇಲೆ ತಿರುತಿರುಗಿಕೊಂಡು ನೆಲದಲ್ಲಿ ಬಿತ್ತು. ಅನಂತರ ಆರು ರಾತ್ರೆ ಕಡಿಮೆಯಾದ ಆರು ತಿಂಗಳಲ್ಲಿ ಮುಗಿಸಿದ ಚಕ್ರವನ್ನು ಉರುಳಿಸಿದನು. ಅದು ಉರುಳಿಸಿದ್ದರಿಂದ ಬಂದ ಗತಿಯಿರುವ ವರೆಗೆ ಹೋಗಿ, ಆಮೇಲೆ ಅಕ್ಷಕ್ಕೆ ತಗುಲಿಕೊಂಡಿದೆಯೋ ಎನ್ನುವ ಹಾಗೆ ನಿಂತಿತು.

“ಆಗ ಪ್ರಚೇತನನು ‘ಅಯ್ಯ ರಥಕಾರ! ಆರು ದಿವಸದಲ್ಲಿ ಮುಗಿಸಿದ ಈ ಚಕ್ರವು ಉರುಳಿಸಿದ್ದರಿಂದ ಬಂದ ಗತಿಯಿರುವ ವರೆಗೆ ಹೋಗಿ, ತಿರುತಿರುಗಿಕೊಂಡು ನೆಲದಲ್ಲಿ ಬಿತ್ತು. ಆರು ರಾತ್ರೆ ಕಡಿಮೆಯಾದ ಆರು ತಿಂಗಳಲ್ಲಿ ಮುಗಿಸಿದ ಈ ಚಕ್ರವು ಉರುಳಿಸಿದ್ದರಿಂದ ಬಂದ ಗತಿಯಿರುವ ವರೆಗೆ ಹೋಗಿ, ಅಕ್ಷಕ್ಕೆ ತಗುಲಿಕೊಂಡಿದೆಯೋ ಎಂಬಂತೆ ನಿಂತಿತು. ಇದಕ್ಕೆ ಮೂಲವೇನು? ಕಾರಣವೇನು?’ ಎಂದನು.

“‘ದೇವ! ಆರು ದಿನಗಳಲ್ಲಿ ಮುಗಿಸಿದ ಈ ಚಕ್ರದ ನೇಮಿಯಲ್ಲಿ ವಕ್ರಗಳುಂಟು, ದೋಷಗಳುಂಟು, ಹುಳುಕುಗಳುಂಟು. ಇದರ ಕಡ್ಡಿಗಳಲ್ಲಿಯೂ ನಾಭಿಯಲ್ಲಿಯೂ ವಕ್ರಗಳು, ದೋಷಗಳು, ಹುಳುಕುಗಳು. ಇದರ ನೇಮಿ, ಕಡ್ಡಿ, ನಾಭಿಗಳ ವಕ್ರತ್ವದಿಂದ, ದೋಷ ಹುಳುಕುಗಳ ಇರುವಿಕೆಯಿಂದ ಇದು ಉರುಳಿಸಿ ಬಂದ ಗತಿಯಿರುವ ವರೆಗೆ ಹೋಗಿ, ಆ ಮೇಲೆ ತಿರುತಿರುಗಿಕೊಂಡು ನೆಲದಲ್ಲಿ ಬಿತ್ತು. ಆರು ರಾತ್ರೆ ಕಡಿಮೆಯಾದ ಆರು ತಿಂಗಳಲ್ಲಿ ಮುಗಿಸಿದ ಈ ಚಕ್ರದ ನೇಮಿಯಲ್ಲಿ ವಕ್ರವಿಲ್ಲ, ದೋಷವಿಲ್ಲ, ಹುಳುಕಿಲ್ಲ. ಇದರ ಕಡ್ಡಿಗಳಲ್ಲಿಯೂ ನಾಭಿಯಲ್ಲಿಯೂ ವಕ್ರವಿಲ್ಲ, ದೋಷವಿಲ್ಲ, ಹುಳುಕಿಲ್ಲ. ಇದರ ನೇಮಿ, ನಾಭಿ, ಕಡ್ಡಿಗಳಲ್ಲಿ ವಕ್ರತ್ವ, ದೋಷ, ಹುಳುಕುಗಳು ಇಲ್ಲದಿರುವುದರಿಂದ ಇದು ಉಗುಳಿಸಿ ಬಂದ ಗತಿಯಿರುವ ವರೆಗೆ ಹೋಗಿ, ಆ ಮೇಲೆ ಅಕ್ಷಕ್ಕೆ ತಗುಲಿಕೊಂಡಿದೆಯೋ ಎಂಬಂತೆ ನಿಂತಿತು.’ . . . . . .

"ಭಿಕ್ಷುಗಳೆ! ದೇಹದ ವಕ್ರ, ದೇಹದ ದೋಷ, ದೇಹದ ಹುಳುಕು, ಮಾತಿನ ವಕ್ರ, ಮಾತಿನ ದೋಷ, ಮಾತಿನ ಹುಳುಕು, ಮನಸ್ಸಿನ ವಕ್ರ, ಮನಸ್ಸಿನ ದೋಷ, ಮನಸ್ಸಿನ ಹುಳುಕು — ಇವುಗಳನ್ನು ಬಿಟ್ಟಿರದ ಭಿಕ್ಷುಭಿಕ್ಷುಣಿಯರು, ಆರು ದಿನಗಳಲ್ಲಿ ಮುಗಿಸಿದ ಚಕ್ರದಂತೆ, ಧರ್ಮವಿನಯಗಳಿಂದ ಬೇರೆಯಾಗಿ ಬೀಳುವರು.

"ಭಿಕ್ಷುಗಳೆ! ಮೈ ಮಾತು ಮನಸ್ಸುಗಳ ವಕ್ರ, ದೋಷ, ಹುಳುಕುಗಳನ್ನು ಬಿಟ್ಟಿರುವ ಭಿಕ್ಷುಭಿಕ್ಷುಣಿಯರು, ಆರು ರಾತ್ರಿ ಕಡಿಮೆಯಾದ ಆರು ತಿಂಗಳಲ್ಲಿ ಮುಗಿಸಿದ ಚಕ್ರದಂತೆ, ಧರ್ಮವಿನಯಗಳಲ್ಲಿ ಚೆನ್ನಾಗಿ ಸ್ಥಿರವಾಗಿ ನಿಲ್ಲುವರು.

"ಆದರಿಂದ, ಭಿಕ್ಷುಗಳೆ, 'ದೇಹದ ವಕ್ರವನ್ನೂ ದೇಹದ ದೋಷವನ್ನೂ ದೇಹದ ಹುಳುಕನ್ನೂ ಬಿಡುತ್ತೇವೆ; ಮಾತಿನ ವಕ್ರವನ್ನೂ ಮಾತಿನ ದೋಷವನ್ನೂ ಮಾತಿನ ಹುಳುಕನ್ನೂ ಬಿಡುತ್ತೇವೆ; ಮನಸ್ಸಿನ ವಕ್ರವನ್ನೂ ಮನಸ್ಸಿನ ದೋಷವನ್ನೂ ಮನಸ್ಸಿನ ಹುಳುಕನ್ನೂ ಬಿಡುತ್ತೇವೆ', — ಎಂದು ಹೀಗೆ ನೀವು ಶಿಕ್ಷಿಸಿಕೊಳ್ಳತಕ್ಕುದು. ಭಿಕ್ಷುಗಳೆ, ಹೀಗೆಯೇ ಶಿಕ್ಷಿಸಿಕೊಳ್ಳತಕ್ಕುದು."

[ಅಂಗುತ್ತರ ನಿಕಾಯ – ತಿಕನಿಪಾತ: ರಥಕಾರವಗ್ಗ — ಪಚೇತನಸುತ್ತ]

೩. ಕುರುಡರು ಕಂಡ ಆನೆ

ಭಗವಂತನು ಒಂದು ಸಲ ಶ್ರಾವಸ್ತಿಯ ಜೇತವನದಲ್ಲಿ ಅನಾಥ ಪಿಂಡಿಕನ ಆರಾಮದಲ್ಲಿ ತಂಗಿದ್ದನು.

ಆ ಸಮಯದಲ್ಲಿ ನಾನಾ ತೀರ್ಥಕರಾದ ಅನೇಕ ಶ್ರಮಣ ಬ್ರಾಹ್ಮಣ ಪರಿವ್ರಾಜಕರು ಭಿಕ್ಷೆಗಾಗಿ ಶ್ರಾವಸ್ತಿಯನ್ನು ಪ್ರವೇಶಿಸಿದರು. ಅವರು ಅನೇಕ ದೃಷ್ಟಿಗಳವರು; ಅನೇಕ ವಿಷಯಗಳನ್ನು ಸಹಿಸುತ್ತಿದ್ದರು; ಅವರಿಗೆ ಅನೇಕ ವಿಷಯಗಳು ರುಚಿಸುತ್ತಿದ್ದುವು; ಅವರು ಅನೇಕ ದೃಷ್ಟಿಗಳ ಆಶ್ರಯದಲ್ಲಿ ಆಶ್ರಿತರಾಗಿದ್ದರು.

'ಲೋಕ ಶಾಶ್ವತ. ಇದೇ ಸತ್ಯ, ಮಿಕ್ಕುದು ಮೋಘ' ಎಂದು ಹೇಳಿ, ಅದೇ ದೃಷ್ಟಿಯುಳ್ಳ ಕೆಲವು ಶ್ರಮಣ ಬ್ರಾಹ್ಮಣರಿದ್ದರು. 'ಲೋಕ ಅಶಾಶ್ವತ. ಇದೇ ಸತ್ಯ, ಮಿಕ್ಕುದು ಮೋಘ' ಎಂದು ಕೆಲವರು, 'ಲೋಕ ಅಂತವುಳ್ಳುದು. ಇದೇ ಸತ್ಯ, ಮಿಕ್ಕುದು ಮೋಘ' ಎಂದು ಕೆಲವರು, 'ಲೋಕ ಅನಂತವಾದುದು . . . ಜೀವ ಶರೀರ ಎರಡೂ ಒಂದೇ . . . ಜೀವ ಬೇರೆ, ಶರೀರ ಬೇರೆ. . . ತಥಾಗತನಿಗೆ ಮರಣಾನಂತರ ಉಂಟು . . . ತಥಾಗತನಿಗೆ ಮರಣಾನಂತರ ಇಲ್ಲ . . . ತಥಾಗತನಿಗೆ ಮರಣಾನಂತರ ಉಂಟು, ಮತ್ತು ಇಲ್ಲ . . . ತಥಾಗತನಿಗೆ ಮರಣಾನಂತರ ಇಲ್ಲ, ಇಲ್ಲದೆಯೂ ಇಲ್ಲ . . . ಇದೇ ಸತ್ಯ, ಮಿಕ್ಕುದು ಮೋಘ' ಎಂದು ಒಬ್ಬೊಬ್ಬರು ಒಂದೊಂದು ಹೇಳಿ, ಅದೇ ದೃಷ್ಟಿಯುಳ್ಳವರಾಗಿದ್ದರು.

ಆ ಜಗಳಗಂಟರು, ಕಲಹಜಾತರು, ವಿವಾದಾಪನ್ನರು ಒಬ್ಬರನ್ನೊಬ್ಬರು 'ಧರ್ಮ ಹೀಗೆ', 'ಧರ್ಮ ಹೀಗಲ್ಲ', ಧರ್ಮ ಹೀಗಲ್ಲ', 'ಧರ್ಮ ಹೀಗೆ' ಎನ್ನುತ್ತ, ಬಾಯಿಜೋರಿನಿಂದ ಹೊಡೆದಾಡುತ್ತಿದ್ದರು.

ಆಗ, ಅನೇಕ ಭಿಕ್ಷುಗಳು ಪೂರ್ವಾಹ್ನ ಸಮಯದಲ್ಲಿ ಬಟ್ಟೆ ಹಾಕಿಕೊಂಡು, ಪಾತ್ರೆ ಚೀವರಗಳನ್ನು ಕೊಂಡು, ಭಿಕ್ಷೆಗಾಗಿ ಶ್ರಾವಸ್ತಿಯನ್ನು ಹೊಕ್ಕರು. ಭಿಕ್ಷೆಗಾಗಿ ಶ್ರಾವಸ್ತಿಯಲ್ಲಿ ಸಂಚಾರಮಾಡಿ ಹಿಂದಿರುಗಿ, ಊಟವಾದ ಮೇಲೆ ಭಗವಂತನಿರುವ ಬಳಿಸಾರಿ, ಅಭಿವಂದಿಸಿ ಒಂದು ಕಡೆ ಕುಳಿತರು. ಕುಳಿತು; ತಾವು ಕಂಡ ಆ ತೀರ್ಥಕರನ್ನೂ ಅವರ ಕೂಗಾಟ ಜಗಳಗಳನ್ನೂ ತಿಳಿಸಿದರು.

ಆಗ ಭಗವಂತನು ಹೀಗೆಂದನು:

“ಭಿಕ್ಷುಗಳೆ! ಈ ಅನ್ಯತೀರ್ಥಕರಾದ ಪರಿವ್ರಾಜಕರು ಕುರುಡರು, ಕಣ್ಣಿಲ್ಲದವರು. ಇವರಿಗೆ ಅರ್ಥ ಗೊತ್ತಿಲ್ಲ, ಅನರ್ಥ ಗೊತ್ತಿಲ್ಲ; ಧರ್ಮ ಗೊತ್ತಿಲ್ಲ, ಅಧರ್ಮ ಗೊತ್ತಿಲ್ಲ. ಹೀಗೆ ಯಾವುದನ್ನೂ ತಿಳಿಯದೆ ಜಗಳ ಗಂಟರಾಗಿ, ಕಲಹಜಾತರಾಗಿ, ವಿವಾದಾಪನ್ನರಾಗಿ ‘ಧರ್ಮ ಹೀಗೆ, ಧರ್ಮ ಹೀಗಲ್ಲ’ ಎಂದು ಬಾಯಿಜೋರಿನಿಂದ ಹೊಡೆದಾಡುವರು.

“ಹಿಂದೆ, ಭಿಕ್ಷುಗಳೆ, ಇದೇ ಶ್ರಾವಸ್ತಿಯಲ್ಲಿ ಒಬ್ಬಾನೊಬ್ಬ ರಾಜ ನಿದ್ದನು. ಆ ರಾಜನು ಒಬ್ಬನನ್ನು ಕರೆದು, ‘ಭೋ ಪುರುಷ! ಶ್ರಾವಸ್ತಿ ಯಲ್ಲಿರುವ ಹುಟ್ಟುಗುರುಡರೆಲ್ಲರನ್ನೂ ಒಂದು ಕಡೆ ಕೂಡಿಸು’ ಎಂದನು.

“‘ಹಾಗೇ ಆಗಲಿ, ದೇವ’ ಎಂದು ಆ ಪುರುಷನು ರಾಜನ ಮಾತಿಗೆ ಒಪ್ಪಿ, ಶ್ರಾವಸ್ತಿಯ ಹುಟ್ಟುಗುರುಡರನ್ನೆಲ್ಲ ಹಿಡಿದು, ರಾಜನ ಬಳಿಸಾರಿ, ‘ಶ್ರಾವಸ್ತಿಯ ಹುಟ್ಟುಗುರುಡರನ್ನೆಲ್ಲ ಕೂಡಿಸಿಯಾಯಿತು, ದೇವ’ ಎಂದನು.

“‘ಹಾಗಾದರೆ, ಅಯ್ಯ, ಹುಟ್ಟುಗುರುಡರಿಗೆ ಆನೆ ತೋರಿಸು.’

“‘ಹಾಗೆಯೆ ಆಗಲಿ, ದೇವ’ ಎಂದು ಆ ಪುರುಷನು ರಾಜನ ಮಾತಿನಂತೆ ‘ಹುಟ್ಟುಗುರುಡರೆ! ಆನೆ ಹೀಗಿದೆ’ ಎಂದು ಅವರಿಗೆ ಆನೆ ತೋರಿಸಿದನು. ‘ಆನೆ ಹೀಗಿದೆ’ ಎಂದು ಒಬ್ಬನಿಗೆ ಆನೆಯ ತಲೆ ತೋರಿಸಿದನು. ‘ಆನೆ ಹೀಗಿದೆ’ ಎಂದು ಒಬ್ಬನಿಗೆ ಆನೆಯ ಕಿವಿ ತೋರಿಸಿದನು. ‘ಆನೆ ಹೀಗಿದೆ’ ಎನ್ನುತ್ತ ಒಬ್ಬನಿಗೆ ಆನೆಯ ಕೊಂಬು, ಒಬ್ಬನಿಗೆ ಅದರ ಸೊಂಡಿಲು, ಇನ್ನೊಬ್ಬನಿಗೆ ಅದರ ದೇಹ, ಮತ್ತೊಬ್ಬನಿಗೆ ಅದರ ಕಾಲು, ಬೇರೊಬ್ಬನಿಗೆ ಅದರ ಬೆನ್ನು, ಇನ್ನೊಬ್ಬನಿಗ ಅದರ ಬಾಲ, ಮತ್ತೊಬ್ಬನಿಗೆ ಬಾಲದ ತುದಿಯ ಕೂದಲುಕುಚ್ಚು — ಹೀಗೆ ಒಬ್ಬೊಬ್ಬ ನಿಗೆ ಒಂದೊಂದು ತೋರಿಸಿದನು.

“ಆಗ, ಆ ಪುರುಷನು ಹುಟ್ಟುಗುರುಡರಿಗೆ ಆನೆಯನ್ನು ತೋರಿಸಿ, ರಾಜನಿರುವ ಬಳಿಸಾರಿ, ‘ದೇವ! ಹುಟ್ಟುಗುರುಡರು ಆನೆ ಕಂಡರು. ನಿನಗೆ ಬೇಕಾದಂತೆ ಮಾಡಬಹುದು’ ಎಂದನು.

“ಆಗ ಆ ರಾಜನು ಹುಟ್ಟುಗುರುಡರ ಬಳಿಸಾರಿ, ‘ಹುಟ್ಟುಗುರುಡರೆ! ಆನೆ ಕಂಡಿರಾ?’ ಎಂದನು.

"'ಹೌದು, ದೇವ. ಆನೆ ಕಂಡೆವು.'

"'ಹೇಳಿ, ಹುಟ್ಟುಗುರುಡರೆ, ಆನೆ ಹೇಗಿದೆ?'

"ಭಿಕ್ಷುಗಳೆ! ಆನೆಯ ತಲೆ ಕಂಡವರು 'ಆನೆ ಗಡಿಗೆಯ ಹಾಗಿದೆ, ದೇವ' ಎಂದರು. ಕಿವಿ ಕಂಡವರು 'ಆನೆ ಮೊರದ ಹಾಗಿದೆ' ಎಂದರು. ಕೊಂಬು ಕಂಡವರು 'ಆನೆ ನೇಗಿಲಿನ ಹಲ್ಲಿನ ಹಾಗಿದೆ' ಎಂದರು. ಸೊಂಡಿಲು ಕಂಡವರು 'ಆನೆ ನೇಗಿಲಿನ ಕಡ್ಡಿಯ ಹಾಗಿದೆ' ಎಂದರು. ದೇಹ ಕಂಡವರು 'ಆನೆ ಉಗ್ರಾಣದ ಹಾಗಿದೆ' ಎಂದರು. ಕಾಲು ಕಂಡವರು 'ಆನೆ ಕಂಬದ ಹಾಗಿದೆ' ಎಂದರು. ಬೆನ್ನು ಕಂಡವರು 'ಆನೆ ಒರಳಿನ ಹಾಗಿದೆ' ಎಂದರು. ಬಾಲ ಕಂಡವರು 'ಆನೆ ಒನಕೆಯ ಹಾಗಿದೆ' ಎಂದರು. ಬಾಲದ ತುದಿಯ ಕೂದಲುಕುಚ್ಚು ಕಂಡವರು 'ಆನೆ ಪರಕೆಯ ಹಾಗಿದೆ' ಎಂದರು.

"ಅವರು 'ಆನೆ ಹೀಗಿದೆ', 'ಆನೆ ಹೀಗಿಲ್ಲ', 'ಆನೆ ಹೀಗಿಲ್ಲ', 'ಆನೆ ಹೀಗಿದೆ'—ಎಂದು ಒಬ್ಬರನ್ನೊಬ್ಬರು ಮುಷ್ಟಿಯಿಂದ ಚೆನ್ನಾಗಿ ಹೊಡೆದರು.

"ಆಗ, ರಾಜನು ಅದರಿಂದ ಸಂತೋಷಪಟ್ಟನು.

"ಅದರಂತೆಯೇ, ಭಿಕ್ಷುಗಳೆ, ಈ ಅನ್ಯತೀರ್ಥಕರಾದ ಪರಿವ್ರಾಜಕರು ಕುರುಡರು, ಕಣ್ಣಿಲ್ಲದವರು. ಇವರಿಗೆ ಅರ್ಥ ಗೊತ್ತಿಲ್ಲ, ಅನರ್ಥ ಗೊತ್ತಿಲ್ಲ; ಧರ್ಮ ಗೊತ್ತಿಲ್ಲ, ಅಧರ್ಮ ಗೊತ್ತಿಲ್ಲ. ಹೀಗೆ ಯಾವುದನ್ನೂ ತಿಳಿಯದೆ ಜಗಳಗಂಟರಾಗಿ, ಕಲಹಜಾತರಾಗಿ, ವಿವಾದಾಪನ್ನರಾಗಿ 'ಧರ್ಮ ಹೀಗೆ, ಧರ್ಮ ಹೀಗಲ್ಲ' ಎಂದು ಬಾಯಿಜೋರಿನಿಂದ ಹೊಡೆದಾಡುವರು."

[ಉದಾನ – ಜಚ್ಚಂಧ ವಗ್ಗ – ಉದಾನವತು ಚತುತ್ಥ]

೪. 'ಬೈಯುವ ಭಾರದ್ವಾಜ'

ಭಗವಂತನು ಒಂದು ಸಲ ರಾಜಗೃಹದಲ್ಲಿ ವೇಣುವನದ ಕಳಂದಕ ನಿವಾಪದಲ್ಲಿ ತಂಗಿದ್ದನು. ಆಗ 'ಬೈಯುವ ಭಾರದ್ವಾಜ'ನೆಂಬ ಬ್ರಾಹ್ಮಣನು, ತನ್ನ ಹಿರಿಯನಾದ ಭಾರದ್ವಾಜಗೋತ್ರದ ಬ್ರಾಹ್ಮಣನೊಬ್ಬನು ಶ್ರಮಣ ಗೌತಮನ ಬಳಿಯಲ್ಲಿ ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದನೆಂದು ಕೇಳಿದನು. ಅದರಿಂದ ಅವನು ಕುಪಿತನಾಗಿ, ಮನಸ್ಸು ಕೆಟ್ಟು, ಭಗವಂತನ ಬಳಿಸಾರಿ, ಅಸಭ್ಯವಾದ ಪರುಷವಾದ ಮಾತುಗಳಿಂದ ಭಗವಂತನನ್ನು ಬೈದನು, ಅವಹೇಳನಮಾಡಿದನು.

'ಬೈಯುವ ಭಾರದ್ವಾಜ'ನು ಹೀಗೆನ್ನಲು, ಭಗವಂತನು "ಬ್ರಾಹ್ಮಣ! ನಿನ್ನ ಮಿತ್ರರು, ಜೊತೆಗಾರರು, ಜ್ಞಾತಿಗಳು, ರಕ್ತಸಂಬಂಧಿಗಳು, ಅತಿಥಿಗಳು – ಯಾರಾದರೂ ನಿನ್ನ ಬಳಿ ಬರುವರೇನು?" ಎಂದನು.

"ಕೆಲವು ವೇಳೆ ಬರುವರು, ಭೋ ಗೌತಮ."

"ಅವರಿಗೆ ನೀನು ಖಾದ್ಯಭೋಜ್ಯಗಳನ್ನೂ ವಿಶ್ರಾಂತಿಯನ್ನೂ ಒದಗಿಸುವೆಯ, ಬ್ರಾಹ್ಮಣ?"

"ಕೆಲವು ಸಲ ಒದಗಿಸುವೆನು, ಭೋ ಗೌತಮ."

"ಅವರು ಅದನ್ನು ಸ್ವೀಕರಿಸದಿದ್ದರೆ, ಅವು ಯಾರದಾಗುವುವು, ಬ್ರಾಹ್ಮಣ?"

"ಅವರು ಅದನ್ನು ಸ್ವೀಕರಿಸದಿದ್ದರೆ, ಅವು ನನ್ನವೇ ಆಗುವುವು."

"ಅದರಂತೆಯೇ, ಬ್ರಾಹ್ಮಣ! ನೀನು ನಮ್ಮನ್ನು, ಬೈಯದವರನ್ನು ಬೈಯುವೆ, ರೋಸದವರ ಮೇಲೆ ರೋಸುವೆ, ಅವಹೇಳನಮಾಡದವರನ್ನು ಅವಹೇಳನಮಾಡುವೆ. ಅದನ್ನು ನಾವು ಸ್ವೀಕರಿಸುವುದಿಲ್ಲ. ಅದು ನಿನ್ನದೇ, ಬ್ರಾಹ್ಮಣ! ನಿನ್ನದೇ, ಬ್ರಾಹ್ಮಣ! ಬೈದವನನ್ನು ತಿರುಗಿ ಬೈಯುವವರು, ರೋಸಿದವನ ಮೇಲೆ ಮರಳಿ ರೋಸುವವರು, ಅವಹೇಳನಮಾಡಿದವನನ್ನು ಪ್ರತಿಯಾಗಿ ಅವಹೇಳನಮಾಡುವವರು — ಜೊತೆಯಲ್ಲಿ ಊಟಮಾಡಿ ಅದಕ್ಕೆ ಬದಲುಮಾಡಿದರೆಂದು ಹೇಳುವರು.

ನಾವು ನಿಮ್ಮೊಡನೆ ಊಟಮಾಡುವುದಿಲ್ಲ, ಅದಕ್ಕೆ ಬದುಲುಮಾಡುವುದಿಲ್ಲ. ಅದು ನಿನ್ನದೇ, ಬ್ರಾಹ್ಮಣ! ನಿನ್ನದೇ!"

"ಪೂಜ್ಯ ಗೌತಮನನ್ನು 'ಶ್ರಮಣ ಗೌತಮನು ಅರ್ಹನು' ಎಂದು ರಾಜನೂ ಪರಿವಾರವೂ ತಿಳಿದಿದೆ. ಆದರೆ ಪೂಜ್ಯ ಗೌತಮನು ಕೋಪ ಗೊಳ್ಳುತ್ತಾನೆ."

"ಕ್ರೋಧವಿಲ್ಲದವನಿಗೆ,
ಸಮಜೀವಿಯಾಗಿ ದಾಂತನಾದವನಿಗೆ,
ಸಮ್ಯಕ್‌ಜ್ಞಾನದಿಂದ ವಿಮುಕ್ತಿ ಪಡೆದವನಿಗೆ,
ಉಪಶಾಂತನಾದಂಥವನಿಗೆ ಕ್ರೋಧವೆಲ್ಲಿಯದು?

"ಕ್ರೋಧಕ್ಕೆ ಪ್ರತಿಯಾಗಿ ಕ್ರೋಧಮಾಡುವವನು
ಅವನೇ ಅವರಲ್ಲಿ ಹೆಚ್ಚು ಪಾಪಿ;
ಕ್ರೋಧಕ್ಕೆ ಪ್ರತಿಯಾಗಿ ಕ್ರೋಧಮಾಡದವನು
ಜಯಿಸಲು ಕಷ್ಟಸಾದ ಯುದ್ಧವನ್ನು ಜಯಿಸುತ್ತಾನೆ.

"ಇತರರು ಕೋಪಗೊಂಡುದನ್ನು ತಿಳಿದು
ಸ್ಮೃತನಾಗಿ ಉಪಶಾಂತನಾದವನು
ತನಗೂ ಇತರರಿಗೂ — ಇಬ್ಬರಿಗೂ
ಶ್ರೇಯಸ್ಸಾಗಲೆಂದು ಹಾಗೆ ನಡೆಯುತ್ತಾನೆ.

"ಹೀಗೆ ತನಗೂ, ಇತರರಿಗೂ,
ಇಬ್ಬರಿಗೂ ಚಿಕಿತ್ಸೆಮಾಡುವವನನ್ನು
ಧರ್ಮದಲ್ಲಿ ಪಂಡಿತರಲ್ಲದವರು
ಅಜ್ಞಾನಿಯೆಂದು ತಿಳಿಯುವರು."

[ಸಂಯುತ್ತನಿಕಾಯ — ಸಗಾಥಾವಗ್ಗ —
ಬ್ರಾಹ್ಮಣಸಂಯುತ್ತ — ಅರ್ಹಂತವಗ್ಗ — ಅಕ್ಕೋಸ ಸುತ್ತ]

೫. ವೈದೇಹಿಕೆಯ ದಾಸಿ ಕಾಳಿ

"ಭಿಕ್ಷುಗಳೆ! ಹಿಂದೆ ಇದೇ ಶ್ರಾವಸ್ತಿಯಲ್ಲಿ ವೈದೇಹಿಕೆಯೆಂಬ ಮನೆಯಾಕೆಯಿದ್ದಳು. ಆ ವೈದೇಹಿಕೆಯು ಒಳ್ಳೆಯವಳು, ನಮ್ರಳು, ಶಾಂತಳು— ಎಂದು ಕೀರ್ತಿ ಹಬ್ಬಿತ್ತು.

"ವೈದೇಹಿಕೆಗೆ ಕಾಳಿ ಎಂಬ ದಾಸಿಯಿದ್ದಳು. ಅವಳು ದಕ್ಷತೆಯಿಂದ ಆಲಸಿಕೆಯಿಲ್ಲದೆ ಅಚ್ಚುಕಟ್ಟಾಗಿ ಕೆಲಸಮಾಡುತ್ತಿದ್ದಳು.

"ಆ ದಾಸಿಗೆ ಒಂದು ಸಲ 'ವೈದೇಹಿಕೆಯು ಒಳ್ಳೆಯವಳು, ನಮ್ರಳು, ಶಾಂತಳು— ಎಂದು ಕೀರ್ತಿ ಹಬ್ಬಿದೆ. ನಮ್ಮ ಆರ್ಯೆಯು ನಿಜವಾಗಿ ಶಾಂತಳೊ, ಅಥವಾ ಅಶಾಂತಳಾಗಿ ಒಳಗಿನ ಕೋಪವನ್ನು ಪ್ರಕಟಪಡಿಸುವುದಿಲ್ಲವೊ? ಅಥವಾ ನಾನು ಅಚ್ಚುಕಟ್ಟಾಗಿ ಕೆಲಸಮಾಡುವುದರಿಂದ ನಮ್ಮ ಆರ್ಯೆಯು ಶಾಂತಳೇ ಆಗಿ, ಒಳಗಿನ ಕೋಪವನ್ನು ಪ್ರಕಟಸದೆ, ಅಶಾಂತಳಾಗುವುದಿಲ್ಲವೊ? ಈಗ ಆರ್ಯೆಯನ್ನು ವಿಮರ್ಶಿಸೋಣ' ಎನಿಸಿತು.

"ಆಗ, ದಾಸಿ ಕಾಳಿಯು ಬೆಳಗಾದ ಮೇಲೆ ಎದ್ದಳು.

"ವೈದೇಹಿಕೆಯು 'ಕಾಳೀ! ಏ ಕಾಳೀ!' ಎಂದು ದಾಸಿಯನ್ನು ಕೂಗಿದಳು.

"'ಏನು, ಆರ್ಯೆ?'

"'ಏನು, ಬೆಳಗಾದ ಮೇಲೆ ಎದ್ದೆ?'

"'ಏನೂ ಇಲ್ಲ, ಆರ್ಯೆ.'

"'ಏನೂ ಇಲ್ಲ! ಎಲಾ, ಪಾಪಿ ದಾಸಿ!' ಎಂದು ಕೋಪಗೊಂಡು, ಮನಸ್ಸು ಕೆಟ್ಟು, ವೈದೇಹಿಕೆಯು ಹುಬ್ಬು ಗಂಟುಹಾಕಿದಳು.

"ಆಗ ದಾಸಿ ಕಾಳಿಗೆ 'ಶಾಂತಳೇ ನಮ್ಮ ಆರ್ಯೆ? ಒಳಗಿನ ಕೋಪವನ್ನು ಪ್ರಕಟಪಡಿಸುವುದಿಲ್ಲ, ಅಶಾಂತಳಾಗುವುದಿಲ್ಲ. ನಾನು ಅಚ್ಚುಕಟ್ಟಾಗಿ ಕೆಲಸಮಾಡುವುದರಿಂದ ನಮ್ಮ ಆರ್ಯೆಯು ಶಾಂತಳಾಗಿ, ಒಳಗಿನ ಕೋಪವನ್ನು ಪ್ರಕಟಸದೆ, ಅಶಾಂತಳಾಗುವುದಿಲ್ಲ. ಆರ್ಯೆಯನ್ನು ಇನ್ನೂ ಹೆಚ್ಚಾಗಿ ವಿಮರ್ಶಿಸೋಣ' ಎಂದೆನಿಸಿತು.

"ಮಾರನೆಯ ದಿನ ಕಾಳಿಯು ಹಗಲಾದ ಮೇಲೆ ಎದ್ದಳು.

"'ಕಾಳೀ! ಏ ಕಾಳೀ!'

"'ಏನಾರ್ಯೆ?'

"'ಏನೆ, ಹಗಲಾದ ಮೇಲೆ ಎದ್ದೆ?'

"'ಏನೂ ಇಲ್ಲ, ಆರ್ಯೆ.'

"'ಏನೂ ಇಲ್ಲ! ಎಲಾ, ಪಾಪಿ ದಾಸಿ! ಹಗಲಾದ ಮೇಲೆ ಎದ್ದಿದ್ದಾಳೆ!' ಎಂದು ಕೋಪಗೊಂಡು, ಮನಸ್ಸು ಕೆಟ್ಟು, ಕೆಟ್ಟ ಮಾತುಗಳನ್ನು ಹೊರಗೆಡವಿದಳು.

"ಕಾಳಿಯು ತನ್ನ ಒಡತಿಯನ್ನು ಇನ್ನೂ ಪರೀಕ್ಷಿಸಬೇಕೆಂದು ಮಾರನೆಯ ದಿನ ಇನ್ನೂ ಹಗಲಾದ ಮೇಲೆ ಎದ್ದಳು.

"ವೈದೇಹಿಕೆಯು 'ಕಾಳೀ! ಏ ಕಾಳೀ!' ಎಂದು ಕೂಗಿದಳು.

"'ಏನಾರ್ಯೆ?'

"'ಏನೆ, ಇಷ್ಟು ಹಗಲಾದ ಮೇಲೆ ಎದ್ದೆ?'

"'ಏನೂ ಇಲ್ಲ, ಆರ್ಯೆ.'

"'ಏನೂ ಇಲ್ಲ! ಎಲಾ, ಪಾಪಿ ದಾಸಿ! ಹಗಲಾದ ಮೇಲೆ ಎದ್ದಿದ್ದಾಳೆ!' ಎಂದು ಕುಪಿತಳಾಗಿ, ಮನಸ್ಸು ಕೆಟ್ಟು, ಅಗಳಿಯ ಅಡ್ಡಮರವನ್ನು ಹಿಡಿದು ತಲೆಯ ಮೇಲೆ ಏಟು ಹಾಕಿದಳು. ಕಾಳಿಯ ತಲೆ ಒಡೆಯಿತು.

"ಆಗ ಕಾಳಿಯು ಅಕ್ಕಪಕ್ಕದವರನ್ನು ಎಬ್ಬಿಸಿ, ಒಡೆದು ರಕ್ತ ಸೋರುತ್ತಿರುವ ತಲೆಯನ್ನು ತೋರಿಸಿ, 'ಒಳ್ಳೆಯವಳ ಕೆಲಸ ನೋಡು, ಆರ್ಯೆ! ಶಾಂತಳ ಕೆಲಸ ನೋಡು! ನಮ್ರಳಾದವಳ ಕೆಲಸ ನೋಡು! ದಾಸಿಗೇಕೆ ಹೀಗಾಯಿತು? ಹಗಲಾದ ಮೇಲೆ ಎದ್ದೆಯಾ ಎಂದು ಕೋಪಗೊಂಡು, ಮನಸ್ಸು ಕೆಟ್ಟು, ಅಗಳಿಯ ಅಡ್ಡಮರವನ್ನು ಹಿಡಿದು ತಲೆಗೆ ಏಟು ಹಾಕಿದಳು; ತಲೆ ಒಡೆಯಿತು!' ಎಂದಳು.

"ಆಮೇಲೆ, 'ಮನೆಯಾಕೆಯಾದ ವೈದೇಹಿಕೆಯು ಒಳ್ಳೆಯವಳಲ್ಲ, ಶಾಂತಳಲ್ಲ, ನಮ್ರಳಲ್ಲ' ಎಂದು ಕೆಟ್ಟ ಸುದ್ದಿ ಹರಡಿತು.

"ಆದರಂತೆಯೇ, ಭಿಕ್ಷುಗಳೆ, ಅಪ್ರಿಯವಾದ ಮಾತು ತನಗೆ ತಾಗದಿರುವವರೆಗೆ ಭಿಕ್ಷುವು ಒಳ್ಳೆಯವನಾಗಿರಬಹುದು, ನಮ್ರನಾಗಿರಬಹುದು, ಶಾಂತನಾಗಿರಬಹುದು. ಅಪ್ರಿಯವಾದ ಮಾತು ಮುಟ್ಟಿದಾಗ ಆ ಭಿಕ್ಷುವನ್ನು ಒಳ್ಳೆಯವನು, ಶಾಂತನು, ನಮ್ರನು ಎಂದು ಹೇಳಬಹುದು. ಬಟ್ಟೆ, ಊಟ, ಹಾಸಿಗೆ, ಔಷಧಿಗಳೆಂಬ ತನಗೆ ಆವಶ್ಯಕವಾದ ವಸ್ತುಗಳಿಗೋಸ್ಕರ ಒಳ್ಳೆಯ ಮಾತನಾಡುವವನನ್ನು ನಾನು ಒಳ್ಳೆಯವನೆಂದು ಹೇಳುವುದಿಲ್ಲ. ಏಕೆ? ಆ ವಸ್ತುಗಳು ಸಿಕ್ಕದಿದ್ದರೆ ಆ ಭಿಕ್ಷು ಒಳ್ಳೆಯ ಮಾತನ್ನು ಆಡುವುದಿಲ್ಲ, ನಮ್ರನಾಗುವುದಿಲ್ಲ.

"ಭಿಕ್ಷುಗಳೆ! ಧರ್ಮವನ್ನೇ ಸತ್ಕರಿಸಿ, ಧರ್ಮವನ್ನೇ ಗೌರವಿಸಿ, ಧರ್ಮವನ್ನೇ ಪೂಜಿಸಿ ಒಳ್ಳೆಯ ಮಾತನಾಡುವವರು ನಮ್ರರಾಗುವರು. ಅವರನ್ನು ನಾನು ಒಳ್ಳೆಯವರೆಂದು ಹೇಳುವೆನು. ಭಿಕ್ಷುಗಳೆ! ಇದರಂತೆಯೇ ನೀವು ಶಿಕ್ಷೆಪಡೆಯತಕ್ಕದ್ದು . . . ."

[ಮಜ್ಝಿಮನಿಕಾಯ – ಕಕಚೂಪಮ ಸುತ್ತ]

೬. ಕೋಪ ತಿನ್ನುವ ಯಕ್ಷ

ಶ್ರಾವಸ್ತಿಯ ಜೇತವನದಲ್ಲಿ . . . .

"ಭಿಕ್ಷುಗಳೆ! ಹಿಂದೆ, ಒಬ್ಬಾನೊಬ್ಬ ಕುರೂಪಿಯಾದ ದಪ್ಪ ಹೊಟ್ಟೆಯ ಕುಳ್ಳ ಯಕ್ಷನು ದೇವೇಂದ್ರನಾದ ಶಕ್ರನ ಆಸನದಲ್ಲಿ ಕುಳಿತಿದ್ದನು.

"ಆಗ, ಭಿಕ್ಷುಗಳೆ, ತ್ರಯಸ್ತ್ರಿಂಶಸ್ಸಿನ ದೇವತೆಗಳು 'ಆಹಾ, ಇದು ಆಶ್ಚರ್ಯ! ಆಹಾ, ಇದು ಅದ್ಭುತ! ಈ ಕುರೂಪಿಯಾದ ದಪ್ಪಹೊಟ್ಟೆಯ ಗುಜ್ಜಾರಿ ಯಕ್ಷನು ದೇವೇಂದ್ರನಾದ ಶಕ್ರನ ಆಸನದಲ್ಲಿ ಕುಳಿತಿರುವನು!' ಎಂದು ಸಿಟ್ಟುಗೊಂಡರು, ಸಿಡುಕಿದರು, ರೇಗಿದರು.

"ತ್ರಯಸ್ತ್ರಿಂಶಸ್ಸಿನ ದೇವತೆಗಳು ಹೇಗೆ ಹೇಗೆ ಸಿಟ್ಟುಗೊಂಡರು, ಸಿಡುಕಿದರು, ರೇಗಿದರು — ಹಾಗೆಲ್ಲ ಆ ಯಕ್ಷನು ಹೆಚ್ಚು ಹೆಚ್ಚು ರೂಪವಂತನಾದನು, ಹೆಚ್ಚುಹೆಚ್ಚು ದರ್ಶನೀಯನಾದನು, ಹೆಚ್ಚುಹೆಚ್ಚು ಪ್ರಾಸಾದಿಕನಾದನು.

"ಆಗ ತ್ರಯಸ್ತ್ರಿಂಶಸ್ಸಿನ ದೇವತೆಗಳು ದೇವೇಂದ್ರನಾದ ಶಕ್ರನ ಬಳಿಸಾರಿ ನಡೆದುದನ್ನೆಲ್ಲ ತಿಳಿಸಿದರು. ತಿಳಿಸಿ, 'ಮಾರಿಷ! ಅವನು ಕ್ರೋಧಭಕ್ಷ್ಯನೆಂಬ ಯಕ್ಷನಾಗಿರಬಹುದೆ?' ಎಂದರು.

"ಆಗ, ದೇವೇಂದ್ರನಾದ ಶಕ್ರನು ಆ ಕ್ರೋಧಭಕ್ಷ್ಯ ಯಕ್ಷನಿರುವ ಬಳಿಸಾರಿ, ಒಂದು ತೋಳಿನ ಬಟ್ಟೆಯನ್ನು ತೆಗೆದು, ಬಲಮುಂಡಿಯನ್ನು ನೆಲದ ಮೇಲೆ ಬಗ್ಗಿಸಿ, ಆ ಕ್ರೋಧಭಕ್ಷ್ಯ ಯಕ್ಷನ ಕಡೆಗೆ ಕೈಮುಗಿದು ನಮಿಸಿ, 'ಮಾರಿಷ! ನಾನು ದೇವೇಂದ್ರನಾದ ಶಕ್ರ. ನಾನು ದೇವೇಂದ್ರನಾದ ಶಕ್ರ, ಮಾರಿಷ!' ಎಂದು ಮೂರು ಸಲ ಹೆಸರು ಹೇಳಿಕೊಂಡನು.

"ದೇವೇಂದ್ರನಾದ ಶಕ್ರನು ಹೆಸರು ಹೇಳಿಕೊಂಡ ಹಾಗೆಲ್ಲ ಆ ಯಕ್ಷನು ಹೆಚ್ಚುಹೆಚ್ಚು ಕುರೂಪಿಯಾದನು, ಹೆಚ್ಚುಹೆಚ್ಚು ಕುಳ್ಳಾದನು, ಅವನ ಹೊಟ್ಟೆಯ ದಪ್ಪ ಹೆಚ್ಚುಹೆಚ್ಚಾಯಿತು. ಹಾಗಾಗಿ, ಅವನು ಅಲ್ಲಿಯೆ ಅಂತರ್ಧಾನವಾದನು.

"ಆಗ, ದೇವೇಂದ್ರನಾದ ಶಕ್ರನು ತನ್ನ ಆಸನದಲ್ಲಿ ಕುಳಿತು, ತ್ರಯಸ್ತ್ರಿಂಶಸ್ಸಿನ ದೇವತೆಗಳನ್ನು ಸಮಾಧಾನಮಾಡುತ್ತ, ಆ ವೇಳೆಯಲ್ಲಿ ಈ ಗಾಹೆಗಳನ್ನು ಹೇಳಿದನು:

" 'ನನ್ನ ಚಿತ್ತಕ್ಕೆ ಸುಲಭವಾಗಿ ಏಟು ಬೀಳುವುದಿಲ್ಲ.
ಕ್ರೋಧದ ಆವರ್ತದಲ್ಲಿ ನನ್ನನ್ನು ಎಳೆಯುವುದು ಸುಲಭವಲ್ಲ.
ಬಹುಕಾಲದಿಂದ ನಾನು ಕ್ರುದ್ಧನಾಗುವುದಿಲ್ಲ.
ಕ್ರೋಧ ನನ್ನಲ್ಲಿ ಮನೆಮಾಡಿಲ್ಲ.

'ಕ್ರೋಧವಾದುದನ್ನೂ ಪರುಷವಾದುದನ್ನೂ ನಾನು ಹೇಳುವುದಿಲ್ಲ;
ಧರ್ಮವನ್ನು ಬಿಟ್ಟು ಹೋಗುವುದಿಲ್ಲ.
ಆತ್ಮಾರ್ಥವನ್ನು ಚೆನ್ನಾಗಿ ಕಂಡು
ಆತ್ಮವನ್ನು ಚೆನ್ನಾಗಿ ನಿಗ್ರಹಿಸುತ್ತೇನೆ.' "

[ಸಂಯುತ್ತನಿಕಾಯ — ಸಗಾಥಾವಗ್ಗ – ಸಕ್ಕಸಂಯುತ್ತ:
ತತಿಯವಗ್ಗ — ದುಬ್ಬಣ್ಣಿಯ ಸುತ್ತ]

೭. ಹೊಗೆಯಾಡುವ ಹುತ್ತ

ಭಗವಂತನು ಒಂದು ಸಲ ಶ್ರಾವಸ್ತಿಯ ಜೇತವನದಲ್ಲಿ ಅನಾಥ ಪಿಂಡಿಕನ ಆರಾಮದಲ್ಲಿ ತಂಗಿದ್ದನು.

ಆಗ ಆ ಸಮಯದಲ್ಲಿ, ಆಯುಷ್ಮಂತನಾದ ಕುಮಾರ ಕಶ್ಯಪನು ಅಂಧವನದಲ್ಲಿ ತಂಗಿದ್ದನು. ಆಗ, ರಾತ್ರೆ ಮುಗಿಯುತ್ತಿರಲು, ಬೆಳಗುವ ಬಣ್ಣದ ದೇವತೆಯೊಂದು ಬಂದು ಅಂಧವನವನ್ನೆಲ್ಲ ಬೆಳಗುತ್ತ ಕುಮಾರ ಕಶ್ಯಪನ ಬಳಿಸಾರಿ, ಒಂದು ಕಡೆ ನಿಂತಿತು. ಒಂದು ಕಡೆ ನಿಂತು, ಆ ದೇವತೆಯು ಕುಮಾರ ಕಶ್ಯಪನಿಗೆ ಹೀಗೆಂದಿತು:

"ಭಿಕ್ಷು! ಭಿಕ್ಷು! ಈ ಹುತ್ತವು ರಾತ್ರೆ ಹೊಗೆಯಾಡುತ್ತದೆ; ಹಗಲು ಉರಿಯುತ್ತದೆ.

"ಬ್ರಾಹ್ಮಣನು 'ಸುಮೇಧ! ಶಸ್ತ್ರ ತೆಗೆದುಕೊಂಡು ಅಗೆ!' ಎಂದನು. ಸುಮೇಧನು ಶಸ್ತ್ರ ತೆಗೆದುಕೊಂಡು ಅಗೆಯುತ್ತ ಅಡ್ಡಕಡ್ಡಿಯನ್ನು ಕಂಡನು. 'ಅಡ್ಡಕಡ್ಡಿ ಭನ್ತೇ.' ಬ್ರಾಹ್ಮಣನು 'ಅಡ್ಡಕಡ್ಡಿಯನ್ನು ಎತ್ತಿ ಬಿಸುಡು. ಶಸ್ತ್ರ ತೆಗೆದುಕೊಂಡು ಮತ್ತೂ ಅಗೆ, ಸುಮೇಧ!' ಎಂದನು.

"ಸುಮೇಧನು ಅಗೆದನು; ಊದಿಕೊಂಡಿದ್ದುದನ್ನು ಕಂಡನು. 'ಊದಿಕೊಂಡಿರುವುದು ಇದೆ, ಭನ್ತೇ!' 'ಅದನ್ನು ಎತ್ತಿ ಬಿಸುಡು. ಮುಂದೆ ಅಗೆ'.

"ಮುಂದೆ ಅಗೆಯುತ್ತ ಸುಮೇಧನು ಎರಡು ಕವಲಿನ ದಾರಿಯನ್ನು ಕಂಡನು. 'ಎರಡು ಕವಲಿನ ದಾರಿ, ಭನ್ತೇ!' 'ಅದನ್ನೂ ಎತ್ತಿ ಬಿಸುಡು, ಮುಂದೆ ಅಗೆ.'

"ಮುಂದೆ ಒಂದು ಜರಡಿ ಸಿಕ್ಕಿತು. 'ಜರಡಿ, ಭನ್ತೇ.' 'ಜರಡಿಯನ್ನು ಎತ್ತಿಬಿಸುಡು. ಮುಂದೆ ಅಗೆ' ಎಂದು ಬ್ರಾಹ್ಮಣನು ಹೇಳಿದನು.

"ಸುಮೇಧನು ಪುನಃ ಶಸ್ತ್ರಹಿಡಿದು ಅಗೆಯುತ್ತ ಒಂದು ಆಮೆಯನ್ನು ಕಂಡನು. 'ಆಮೆ, ಭನ್ತೇ!' ಎಂದನು. 'ಆಮೆಯನ್ನು ಎತ್ತಿ ಬಿಸುಡು. ಮುಂದೆ ಅಗೆ.'

"ಮುಂದೆ ಅಗೆಯಲು ಒಂದೆ ಕೊಲೆಮನೆ ಕಾಣಿಸಿತು. 'ಕೊಲೆ ಮನೆ, ಭನ್ತೇ!' 'ಅದನ್ನೂ ಎತ್ತಿಬಿಸುಡು. ಇನ್ನೂ ಅಗೆ.'

"ಸುಮೇಧನು ಇನ್ನೂ ಅಗೆದು, ಒಂದು ಮಾಂಸದ ಚೂರನ್ನು ಕಂಡು, 'ಮಾಂಸದ ಚೂರು, ಭನ್ತೇ!' ಎಂದನು. 'ಅದನ್ನೂ ಎತ್ತಿ ಬಿಸುಡು. ಮರಳಿ ಅಗೆ'.

"ಸುಮೇಧನು ಮರಳಿ ಅಗೆದು, ಒಂದು ನಾಗವನ್ನು ಕಂಡನು. 'ಭನ್ತೇ, ನಾಗ!' ಎಂದು ಸುಮೇಧನು ತಿಳಿಸಿದನು. ಬ್ರಾಹ್ಮಣನು 'ನಾಗ ಇರಲಿ. ನಾಗವನ್ನು ಹೊಡೆಯಬೇಡ. ನಾಗನಿಗೆ ನಮಸ್ಕಾರ ಮಾಡು' ಎಂದನು.

"ಭಿಕ್ಷು! ಭಗವಂತನ ಬಳಿಸಾರಿ ಈ ಪ್ರಶ್ನೆಗಳನ್ನು ಕೇಳು. ಭಗವಂತನು ಇದನ್ನು ಹೇಗೆ ವಿವರಿಸುವನೆಂಬುದನ್ನು ಮನಸ್ಸಿನಲ್ಲಿಡು. ಭಿಕ್ಷು! ತಥಾಗತನನ್ನು, ಅವನ ಶ್ರಾವಕನನ್ನು, ಅಥವಾ ಅವರನ್ನು ಕೇಳಿದವರನ್ನು ಬಿಟ್ಟರೆ; ಈ ಪ್ರಶ್ನೆಗಳನ್ನು ವಿವರಿಸಿ ಮನಸ್ಸು ಮೆಚ್ಚಿಸತಕ್ಕವರನ್ನು ಈ ದೇವ ಮಾರ ಬ್ರಹ್ಮರುಗಳ ಲೋಕದಲ್ಲಿ, ಶ್ರಮಣ ಬ್ರಾಹ್ಮಣ ಪ್ರಜೆಗಳಲ್ಲಿ, ದೇವ ಮನುಷ್ಯರಲ್ಲಿ ಯಾರನ್ನೂ ನಾನು ಕಾಣೆ."

ಆ ದೇವತೆ ಇದನ್ನು ಹೇಳಿ ಅಲ್ಲಿಯೇ ಅಂತರ್ಧಾನವಾಯಿತು.

ಆಗ, ಆ ರಾತ್ರಿ ಮುಗಿಯಲು, ಆಯುಷ್ಮಂತನಾದ ಕುಮಾರ ಕಶ್ಯಪನು ಭಗವಂತನಿರುವ ಬಳಿಸಾರಿ, ಅಭಿವಂದಿಸಿ, ಒಂದು ಕಡೆ ಕುಳಿತನು. ಒಂದು ಕಡೆ ಕುಳಿತು, ಕಳೆದ ರಾತ್ರಿ ಆ ದೇವತೆ ಬಂದುದನ್ನೂ ಅದು ತಿಳಿಸಿದ ಪ್ರಶ್ನೆಗಳನ್ನೂ ಕ್ರಮವಾಗಿ ನುಡಿದು, "ಭನ್ತೇ! ಹೀಗೆ ಹೇಳಿ ಆ ದೇವತೆ ಅಂತರ್ಧಾನವಾಯಿತು. ಈ ಹುತ್ತವೆಂಬುದೇನು? ಯಾವುದು ರಾತ್ರಿ ಹೊಗೆಯಾಡಿ, ಹಗಲು ಉರಿಯುವುದು? ಬ್ರಾಹ್ಮಣನು ಯಾರು? ಸುಮೇಧನಾರು? ಶಸ್ತ್ರ ಯಾವುದು? ಅಗೆಯುವುದೆಂಬುದೇನು? ಅಡ್ಡಕಡ್ಡಿ ಯಾವುದು? ಊದಿಕೊಂಡಿರುವುದು ಏನು? ಎರಡು ಕವಲಿನ ದಾರಿ ಯಾವುದು? ಯಾವುದು ಆ ಜರಡಿ? ಆಮೆ ಯಾವುದು? ಕೊಲೆಮನೆ ಯಾವುದು? ಆ ಮಾಂಸದ ಚೂರೇನು? ನಾಗ ಯಾರು?" ಎಂದು ಕೇಳಿದನು.

"ಭಿಕ್ಷು! 'ಹುತ್ತ'ವೆಂಬುದು— ನಾಲ್ಕು ಮಹಾಭೂತಗಳಿಂದ ಆಗಿ, ತಾಯಿತಂದೆಗಳಿಂದ ಹುಟ್ಟಿ, ಅನ್ನಾಹಾರಗಳಿಂದ ಪೋಷಿತವಾಗಿ, ಅನಿತ್ಯವಾಗಿ, ಸವೆದು ತೇದು ಮುರಿದು ನಾಶವಾಗುವ ಸ್ವಭಾವವುಳ್ಳ ಈ ದೇಹ.

"ಹಗಲು ಮೊದಲಾಗಿ ಮಾಡಿದುದನ್ನೆಲ್ಲ ರಾತ್ರೆ ಅನುವಿತರ್ಕ ಮಾಡಿ ಅನುವಿಚಾರಮಾಡುವುದು, ಇದು 'ರಾತ್ರೆ ಹೊಗೆಯಾಡುವುದು'.

"ರಾತ್ರೆಯೆಲ್ಲ ಅನುವಿತರ್ಕಮಾಡಿ ಅನುವಿಚಾರಮಾಡಿ, ಹಗಲಿನಲ್ಲಿ ಮೈ ಮಾತು ಮನಸ್ಸುಗಳಿಂದ ಕೆಲಸಮಾಡಲು ತೊಡಗುವುದು— ಇದು 'ಹಗಲು ಉರಿಯುವುದು'.

"'ಬ್ರಾಹ್ಮಣ'ನೆಂಬುದು ಅರ್ಹತನೂ ಸಮ್ಯಕ್‌ಸಂಬುದ್ಧನೂ ಆದ ತಥಾಗತನ ಹೆಸರಿನ ಗುರುತು.

"ಅವನಲ್ಲಿ ಶಿಕ್ಷೆಪಡೆಯುತ್ತಿರುವವನಿಗೆ 'ಸುಮೇಧ'ನೆಂದು ಸಂಕೇತ.

"ಆರ್ಯರ ಪ್ರಜ್ಞೆಗೆ 'ಶಸ್ತ್ರ'ವೆಂದು ಸಂಜ್ಞೆ.

"ಆರಂಭದ ವೀರ್ಯಕ್ಕೆ 'ಅಗೆಯುವುದು' ಎಂದು ಸಂಕೇತ.

"'ಅವಿದ್ಯೆ' ಎಂಬುದೇ ಅಡ್ಡಕಡ್ಡಿ. ಅಡ್ಡಕಡ್ಡಿಯನ್ನು ಎತ್ತಿ ಬಿಸುಡು, ಅವಿದ್ಯೆಯನ್ನು ಬಿಡು; ಪ್ರಜ್ಞೆಯನ್ನು ಕೊಂಡು ಮುಂದೆ ನಡೆ— ಎಂದು ಇದರ ಅರ್ಥ.

"ಕೋಪದಿಂದ ಹುಟ್ಟುವ ತಳಮಳಕ್ಕೆ 'ಊದಿಕೊಂಡಿರುವುದು' ಎಂದು ಸಂಜ್ಞೆ. ಕೋಪದ ತಳಮಳವನ್ನು ಬಿಡು, ಪ್ರಜ್ಞೆಯಿಂದ ಮುಂದೆ ಸಾಗು ಎಂದು ಈ ಮಾತಿನ ಅರ್ಥ.

"ವಿಚಿಕಿತ್ಸೆಗೆ 'ಎರಡು ಕವಲಿನ ದಾರಿ'ಯೆಂದು ಸಂಕೇತ. ಅದನ್ನು ಬಿಟ್ಟು ಮುಂದೆ ಸಾಗಬೇಕು.

"ಕಾಮಚ್ಛಂದ, ವ್ಯಾಪಾದ, ಸ್ತ್ಯಾನಮಿದ್ಧ, ಔದ್ಧತ್ಯ ಕೌಕೃತ್ಯ, ವಿಚಿಕಿತ್ಸೆ ಎಂಬ ಐದು ನೀವರಣಗಳಿಗೆ 'ಜರಡಿ'ಯೆಂಬುದು ಸಂಜ್ಞೆ. ಇದನ್ನು ತೆಗೆದುಹಾಕಿ ಮುಂದೆ ಸಾಗಬೇಕು.

"ರೂಪ, ವೇದನೆ, ಸಂಜ್ಞೆ, ಸಂಸ್ಕಾರ, ವಿಜ್ಞಾನಗಳೆಂಬ ಈ ಐದರ ಉಪಾದಾನಸ್ಕಂಧಗಳಿಗೆ 'ಆಮೆ' ಎಂದು ಸಂಕೇತ. ಇದನ್ನು ತೊಲಗಿಸಿ ಮುಂದೆ ಹೋಗಬೇಕು.

“ಇಷ್ಟವಾಗಿ, ಕಾಂತವಾಗಿ, ಮನಸ್ಸಿಗೆ ಹಿತವಾಗಿ, ಕಾಮಗಳಿಂದ ಕೂಡಿ ರಂಜಿಸುವ ರೂಪಗಳ ಚಕ್ಷುವಿಜ್ಞೇಯ, ಶಬ್ದಗಳ ಶ್ರೋತ್ರವಿಜ್ಞೇಯ, ಗಂಧಗಳ ಘ್ರಾಣವಿಜ್ಞೇಯ, ರಸಗಳ ಜಿಹ್ವಾವಿಜ್ಞೇಯ, ಸ್ಪ್ರಷ್ಟವ್ಯಗಳ ಕಾಯವಿಜ್ಞೇಯ — ಎಂಬ ಐದು ಕಾಮಗುಣಗಳಿಗೆ ‘ಕೊಲೆಮನೆ’ಯೆಂದು ಸಂಕೇತ.

“ನಂದಿರಾಗಗಳಿಗೆ ‘ಮಾಂಸದ ಚೂರು’ ಎಂದು ಸಂಜ್ಞೆ.

“ಆಸ್ರವಗಳು ನಾಶವಾದ ಭಿಕ್ಷುವಿಗೆ ‘ನಾಗ’ ಎಂದು ಸಂಕೇತ. ಅವನು ಇರಲಿ, ಅವನನ್ನು ಹೊಡೆಯಬೇಡ, ಅವನಿಗೆ ನಮಸ್ಕಾರ ಮಾಡು — ಎಂದು ಇದಕ್ಕೆ ಅರ್ಥ.”

ಭಗವಂತನು ಹೀಗೆಂದನು. ಆಯುಷ್ಮಂತ ಕುಮಾರ ಕಶ್ಯಪನು ಆತ್ತಮನನಾಗಿ ಭಗವಂತನ ಭಾಷಿತಕ್ಕೆ ಅಭಿನಂದಿಸಿದನು.

[ಮಜ್ಝಿಮನಿಕಾಯ – ವಮ್ಮೀಕಸುತ್ತ]

೮. 'ಸುಳ್ಳು ಹೇಳಬಾರದು, ರಾಹುಲ!'

ಭಗವಂತನು ಒಂದು ಸಲ ರಾಜಗೃಹದಲ್ಲಿ ವೇಣುವನದ ಕಳಂದಕ ನಿವಾಪದಲ್ಲಿ ತಂಗಿದ್ದನು. ಆ ಸಮಯದಲ್ಲಿ ಆಯುಷ್ಮಂತನಾದ ರಾಹುಲನು ಅಂಬಲಟ್ಠಿಕೆಯಲ್ಲಿ ತಂಗಿದ್ದನು.

ಆಗ ಭಗವಂತನು ಸಾಯಂಕಾಲ ಸಮಯದಲ್ಲಿ ತನ್ನ ಏಕಾಂತ ವಾದ ಧ್ಯಾನದಿಂದ ಎದ್ದು, ಅಂಬಲಟ್ಠಿಕೆಯಲ್ಲಿದ್ದ ಆಯುಷ್ಮಂತನಾದ ರಾಹುಲನ ಬಳಿಗೆ ಹೋದನು. ಭಗವಂತನು ದೂರದಲ್ಲಿ ಬರುವುದನ್ನು ಆಯುಷ್ಮಂತನಾದ ರಾಹುಲನು ಕಂಡು, ಆಸನವನ್ನೂ ಕಾಲುಗಳಿಗೆ ನೀರನ್ನೂ ಸಿದ್ಧಗೊಳಿಸಿದನು. ಸಿದ್ಧಗೊಳಿಸಿದ ಆಸನದಲ್ಲಿ ಭಗವಂತನು ಕುಳಿತು, ಕಾಲು ತೊಳೆದುಕೊಂಡನು. ಆಯುಷ್ಮಂತನಾದ ರಾಹುಲನು ಭಗವಂತನಿಗೆ ಅಭಿವಂದಿಸಿ ಒಂದು ಕಡೆ ಕುಳಿತನು.

ಆಗ ಭಗವಂತನು, ನೀರಿನ ಪಾತ್ರೆಯಲ್ಲಿ ಬಲುಕೊಂಚ ನೀರು ನಿಲಿಸಿ, "ರಾಹುಲ! ಈ ನೀರಿನ ಪಾತ್ರೆಯಲ್ಲಿ ಬಲುಕೊಂಚ ನೀರು ಉಳಿಸಿರುವುದು ಕಾಣುವುದೆ?" ಎಂದನು.

"ಹೌದು, ಭನ್ತೇ."

"ರಾಹುಲ! ತಿಳಿದೂ ತಿಳಿದೂ ಸುಳ್ಳಾಡುವುದಕ್ಕೆ ಲಜ್ಜೆಪಡದವರ ಶ್ರಾಮಣ್ಯವು ಹೀಗೆಯೇ ಬಲುಕೊಂಚ."

ಆಗ ಭಗವಂತನು, ಆ ಉಳಿಸಿದ ಬಹುಸ್ವಲ್ಪ ನೀರನ್ನು ಚೆಲ್ಲಿ, ಆಯುಷ್ಮಂತನಾದ ರಾಹುಲನನ್ನು ಕರೆದು, "ರಾಹುಲ! ಉಳಿದ ಆ ಬಲುಕೊಂಚ ನೀರನ್ನು ಚೆಲ್ಲಿದುದು ಕಂಡೆಯು?" ಎಂದನು.

"ಹೌದು, ಭನ್ತೇ."

"ರಾಹುಲ! ತಿಳಿದೂ ತಿಳಿದೂ ಸುಳ್ಳಾಡುವುದಕ್ಕೆ ಲಜ್ಜೆಪಡೆದವರ ಶ್ರಾಮಣ್ಯವು ಹೀಗೆಯೇ ಚೆಲ್ಲಿಹೋಗುವುದು."

ಆಗ ಭಗವಂತನು, ಆ ನೀರಿನ ಪಾತ್ರೆಯನ್ನು ಬಗ್ಗಿಸಿ ತಲೆಕೆಳಗು ಮಾಡಿ, "ರಾಹುಲ! ಬಗ್ಗಿಸಿ ತಲೆಕೆಳಗಾದ ಈ ನೀರಿನ ಪಾತ್ರೆ ನೋಡಿದೆಯು?" ಎಂದನು.

"ಹೌದು, ಭನ್ತೇ."

"ರಾಹುಲ! ತಿಳಿದೂ ತಿಳಿದೂ ಸುಳ್ಳಾಡುವುದಕ್ಕೆ ಲಜ್ಜೆಪಡದವರ ಶ್ರಾಮಣ್ಯವು ಹೀಗೆಯೇ ತಲೆಕೆಳಗಾಗಿ ಹೋಗುವುದು."

ಆಗ ಭಗವಂತನು, ಆ ನೀರಿನ ಪಾತ್ರೆಯನ್ನು ಸರಿಯಾಗಿ ನಿಲ್ಲಿಸಿ, "ರಾಹುಲ! ಈ ನೀರಿನ ಪಾತ್ರೆ ಶೂನ್ಯವಾಗಿ ಬರಿದಾಗಿರುವುದನ್ನು ನೋಡಿದೆಯ?" ಎಂದನು.

"ಹೌದು, ಭನ್ತೇ."

"ರಾಹುಲ! ತಿಳಿದೂ ತಿಳಿದೂ ಸುಳ್ಳಾಡುವುದಕ್ಕೆ ಲಜ್ಜೆಪಡದವರ ಶ್ರಾಮಣ್ಯವು ಹೀಗೆಯೇ ಶೂನ್ಯ, ಬರಿದು.

"ರಾಹುಲ! ರಾಜನ ಆನೆಯಿದೆ: ಅದರ ಕೊಂಬು ನೇಗಿಲಿನ ಕೋಲಿನಂತೆ ಉದ್ದವಾಗಿದೆ; ಅದು ಒಳ್ಳೆಯ ಜಾತಿಯಾನೆ, ಅನೇಕ ಯುದ್ಧಗಳಿಗೆ ಹೋಗಿಬಂದುದು. ಅದು ಯುದ್ಧಕ್ಕೆ ಬಂದು ತನ್ನ ಹಿಂದಿನ ಕಾಲುಗಳಿಂದ, ಮುಂದಿನ ಕಾಲುಗಳಿಂದ, ದೇಹದ ಮುಂಭಾಗ ಹಿಂಭಾಗಗಳಿಂದ, ತಲೆ ಕಿವಿ ಕೊಂಬುಗಳಿಂದ, ಬಾಲದಿಂದ ಕೂಡ ಕೆಲಸ ಮಾಡುವುದು; ಸೊಂಡಿಲನ್ನು ಮಾತ್ರ ಕಾಪಾಡಿಕೊಳ್ಳುವುದು. ಆಗ ಮಾಹುತನಿಗೆ 'ಈ ಆನೆ ಕಾಲು ದೇಹ ತಲೆ ಕಿವಿ ಕೊಂಬು ಬಾಲ ಗಳಿಂದಲೂ ಕೆಲಸಮಾಡಿ, ಸೊಂಡಿಲೊಂದನ್ನು ಕಾಪಾಡಿಕೊಳ್ಳುವುದು. ಈ ಆನೆಯ ಜೀವಕ್ಕೆ ಏನೂ ಭಯವಿಲ್ಲ' ಎಂದೆನಿಸುವುದು. ಯಾವಾಗ ಆ ಆನೆ ಸೊಂಡಿಲಿನಿಂದಲೂ ಕೆಲಸಮಾಡುವುದು, ಆಗ 'ಇದು ಮಾಡದೆ ಬಿಟ್ಟುದು ಯಾವುದೂ ಇಲ್ಲ. ಇದರ ಜೀವ ಹೋದಹಾಗೆಯೇ ಸರಿ!' ಎಂದು ಮಾಹುತನಿಗೆನಿಸುವುದು.

"ಅದರಂತೆಯೇ, ರಾಹುಲ, ತಿಳಿದೂ ತಿಳಿದೂ ಸುಳ್ಳಾಡುವುದಕ್ಕೆ ಲಜ್ಜೆಪಡದವರು ಮಾಡದೆ ಬಿಟ್ಟ ಪಾಪವು ಯಾವುದೂ ಇಲ್ಲವೆಂದು ನಾನು ಹೇಳುತ್ತೇನೆ. ಅದರಿಂದ, ರಾಹುಲ, 'ನಾನು ಹಾಸ್ಯಕ್ಕಾಗಿಯಾದರೂ ಸುಳ್ಳು ಹೇಳುವುದಿಲ್ಲ' ಎಂದು, ಹೀಗೆಯೇ ನೀನು ಶಿಕ್ಷಿಸಿಕೊಳ್ಳ ಬೇಕು . . . . . ."

[ಮಜ್ಝಿಮನಿಕಾಯ — ಅಂಬಲಟ್ಠಿಕಾ ರಾಹುಲೋವಾದ ಸುತ್ತ]

೯. ಆನೆಯನ್ನು ಅನುಕರಿಸಿದ ಆನೆಮರಿ

ಆಗ ಭಗವಂತನು ಭಿಕ್ಷುಗಳನ್ನು ಕರೆದನು:

"ಭಿಕ್ಷುಗಳೆ! ಹಿಂದೆ, ಒಂದು ಕಾಡಿನ ನಡುವೆ ಒಂದು ಮಹಾ ಸರಸ್ಸು. ಅದರ ಬಳಿ ಆನೆಗಳು ವಾಸಮಾಡುತ್ತಿದ್ದುವು. ಅವು ಆ ಸರಸ್ಸಿನಲ್ಲಿ ಮುಳುಗಿ, ಎಳೆಯ ತಾವರೆದಂಟುಗಳನ್ನು ಹೊರ ಗೆಳೆದು ಚೆನ್ನಾಗಿ ಚೊಕ್ಕಟವಾಗಿ ತೊಳೆದು, ಕೆಸರಿಲ್ಲದ ಅವನ್ನು ಚೆನ್ನಾಗಿ ಅಗಿದು ನುಂಗುತ್ತಿದ್ದುವು. ಅದರಿಂದ ಅವುಗಳಿಗೆ ಬಣ್ಣವೂ ಬಲವೂ ಉಂಟಾಯಿತು. ಅದೇ ಕಾರಣವಾಗಿ, ಅವು ಮರಣವನ್ನಾಗಲಿ ಮರಣದಂತಹ ದುಃಖವನ್ನಾಗಲಿ ಹೊಂದಲಿಲ್ಲ.

"ಭಿಕ್ಷುಗಳೆ! ಅವುಗಳಲ್ಲಿ ಎಳೆಯ ಆನೆಮರಿಗಳು ಆ ಮಹಾ ನಾಗಗಳನ್ನು ಅನುಕರಣಮಾಡಿ ಆ ಸರಸ್ಸಿನಲ್ಲಿ ಮುಳುಗಿ, ಎಳೆಯ ತಾವರೆದಂಟುಗಳನ್ನು ಹೊರಗೆಳೆದು, ಚೆನ್ನಾಗಿ ಚೊಕ್ಕಟವಾಗಿ ತೊಳೆ ಯದೆ, ಕೆಸರಿನೊಡನೆ ಅವನ್ನು ಚೆನ್ನಾಗಿ ಅಗಿದು ನುಂಗಿದುವು. ಅದ ರಿಂದ ಅವುಗಳಿಗೆ ಬಣ್ಣವಾಗಲಿ ಬಲವಾಗಲಿ ಉಂಟಾಗಲಿಲ್ಲ. ಅದೇ ಕಾರಣವಾಗಿ, ಅವು ಮರಣವನ್ನೋ ಮರಣದಂತಹ ದುಃಖವನ್ನೋ ಹೊಂದಿದುವು.

"ಅದರಂತೆಯೇ, ಭಿಕ್ಷುಗಳೆ, ದರಿದ್ರನಾದ ದೇವದತ್ತನು ನನ್ನನ್ನು ಅನುಕರಿಸುತ್ತ ಮರಣಹೊಂದುವನು."

[ವಿನಯಪಿಟಕ–ಚುಲ್ಲವಗ್ಗ: ಖಂಧಕ ೭–೪: § ೫]

೧೦. ಏಕಾಂತವಾಸ

ಆಗ ಆಯುಷ್ಮಂತನಾದ ಉಪಾಲಿಯು ಭಗವಂತನ ಬಳಿಸಾರಿ, ಅಭಿವಂದಿಸಿ ಒಂದು ಕಡೆ ಕುಳಿತನು. ಕುಳಿತು, "ಭನ್ತೇ! ಅರಣ್ಯದ ವನಪ್ರಸ್ಥಪ್ರಾಂತ್ಯಗಳಲ್ಲಿ ಮಲಗಿ ಕುಳಿತು ವಾಸಮಾಡಬೇಕೆಂದು ಬಯಸುತ್ತೇನೆ" ಎಂದನು.

"ಉಪಾಲಿ! ಅರಣ್ಯದ ವನಪ್ರಸ್ಥಪ್ರಾಂತ್ಯಗಳಲ್ಲಿ ಮಲಗಿ ಕುಳಿತು ವಾಸಿಸುವುದು ಕಷ್ಟ. ಏಕಾಂತವಾಸವನ್ನು ನಡಿಸುವುದು ಕಷ್ಟ; ಏಕಾಂತದಲ್ಲಿ ರಮಿಸುವುದು ಕಷ್ಟ. ಸಮಾಧಿಯನ್ನು ಪಡೆಯದ ಭಿಕ್ಷುವಿನ ಮನಸ್ಸು ವನಗಳಿಂದ ಹಾಳಾಗುವುದೆಂದು ನನಗೆನಿಸುತ್ತದೆ. ಸಮಾಧಿ ಲಭಿಸದಿದ್ದರೂ ಅರಣ್ಯದ ವನಪ್ರಸ್ಥಪ್ರಾಂತ್ಯಗಳಲ್ಲಿ ವಾಸಿಸುವೆನೆಂಬವನು ಕೆಳಕ್ಕೆ ಮುಳುಗುವನು; ಇಲ್ಲದಿದ್ದರೆ ಮೇಲೆ ತೇಲುವನು.

"ಉಪಾಲಿ! ನೀರಿನ ದೊಡ್ಡ ಕೊಳವಿದೆ. ಏಳೋ ಎಂಟೋ ರತನಿಗಳ ಪ್ರಮಾಣದ ಸಲಗವು ಅಲ್ಲಿಗೆ ಬರುವುದು. ಅದು 'ನಾನು ಇಂದು ಈ ನೀರಿನ ಕೊಳದಲ್ಲಿ ಇಳಿದು, ಕಿವಿಯೊಳಕ್ಕೂ ಬೆನ್ನಮೇಲೂ ನೀರು ಚೆಲ್ಲಿಕೊಂಡು ಆಟವಾಡುವೆನು. ಆಟವಾಡಿ, ಸ್ನಾನಮಾಡಿ, ಕುಡಿದು, ಅನಂತರ ಮೇಲೆಬಂದು ಬೇಕಾದ ಕಡೆ ಹೋಗುವೆನು' ಎಂದುಕೊಂಡು ಆ ಕೊಳದಲ್ಲಿ ಮುಳುಗಿ, ಕಿವಿಗೂ ಬೆನ್ನಮೇಲೂ ನೀರು ಚೆಲ್ಲಿಕೊಂಡು, ಆಟವಾಡಿ, ಸ್ನಾನಮಾಡಿ, ಕುಡಿದು, ಅನಂತರ ಮೇಲೆಬಂದು ಬೇಕಾದ ಕಡೆ ಹೋಗುವುದು. ಏಕೆ? ಅದರ ದೊಡ್ಡ ಆತ್ಮಭಾವವು ಆ ಗಂಭೀರದ ಆಳವನ್ನು ತಿಳಿಯಬಲ್ಲುದು.

"ಆದರೆ, ಒಂದು ಮೊಲವೋ ಬೆಕ್ಕೋ ಬಂದು, 'ನಾನು ಯಾರು, ಸಲಗ ಯಾರು! ನಾನು ಇಂದು ಈ ನೀರಿನ ಕೊಳದಲ್ಲಿ ಇಳಿದು, ಕಿವಿಯೊಳಕ್ಕೂ ಬೆನ್ನಮೇಲೂ ನೀರು ಚೆಲ್ಲಿಕೊಂಡು ಆಟವಾಡುವೆನು. ಆಟವಾಡಿ, ಸ್ನಾನಮಾಡಿ, ಕುಡಿದು, ಅನಂತರ ಮೇಲೆ ಬಂದು ಬೇಕಾದ ಕಡೆ ಹೋಗುವೆನು' ಎಂದುಕೊಂಡು ಅವಸರವಸರದಿಂದ ಮುಂದಾಲೋಚನೆಯಿಲ್ಲದೆ ಹಾರುವುದು. ಅದಕ್ಕೆ ಆಗುವುದಿಷ್ಟೆ:

ಅದು ಕೆಳಕ್ಕೆ ಮುಳುಗುವುದು, ಅಥವಾ ಮೇಲೆ ತೇಲುವುದು. ಏಕೆ? ಅದರ ಸಣ್ಣ ಆತ್ಮಭಾವವು ಆ ಗಂಭೀರದ ಆಳವನ್ನು ತಿಳಿಯಲಾರದು. . . . . .

"ಬಾ, ಉಪಾಲಿ! ಸಂಘದಲ್ಲಿ ನಿಂತು ನಡೆ. ಅದರಿಂದ ನಿನಗೆ ಹಿತವಾಗುವುದು."

[ಅಂಗುತ್ತರನಿಕಾಯ – ದಸಕನಿಪಾತ: ಉಪಾಸಕವಗ್ಗ – ಉಪಾಲಿಸುತ್ತ]

೧೧. ವಿಷದ ಬಾಣ

"ಮಾಲುಂಕ್ಯಾಪುತ್ರ! ಒಬ್ಬ ಪುರುಷನಿಗೆ ಗಾಢವಾಗಿ ವಿಷಬಳಿದ ಬಾಣ ಚುಚ್ಚುತ್ತದೆ. ಅವನ ಮಿತ್ರರೂ ರಕ್ತಜ್ಞಾತಿಗಳೂ ಬಾಣದ ಗಾಯಗಳನ್ನು ಬಲ್ಲ ವೈದ್ಯನನ್ನು ಕರೆತರುವರು.

"ಆಗ ಅವನು 'ನನ್ನನ್ನು ಹೊಡೆದವನು ಕ್ಷತ್ರಿಯನೆ, ಬ್ರಾಹ್ಮಣನೆ, ವೈಶ್ಯನೆ, ಶೂದ್ರನೆ? ಅವನ ಹೆಸರು ಗೋತ್ರಗಳೇನು? ಅವನು ಎತ್ತರವಾದವನೆ, ಕುಳ್ಳೆ, ಅಥವಾ ಮಧ್ಯಮನೆ? ಅವನ ಬಣ್ಣ ಕಪ್ಪೆ, ಶ್ಯಾಮವರ್ಣವೆ, ಸುವರ್ಣವರ್ಣವೆ? ಅವನು ಬಂದುದು ಯಾವ ಗ್ರಾಮ ನಿಗಮ ನಗರಗಳಿಂದ? ಅವನು ಹೊಡೆದ ಧನುಸ್ಸು ಚಾಪವೆ, ಕೋದಂಡವೆ? ಆ ಧನುಸ್ಸಿನ ನಾರಿ ಅರ್ಕದ್ದೆ, ಸಂಸ್ಥದ್ದೆ, ಸ್ನಾಯುವಿನದೆ, ಮರುವದ್ದೆ, ಅಥವಾ ಕ್ಷೀರಪರ್ಣದ್ದೆ? ಈ ಬಾಣದ ಕಾಂಡವು ಕಚ್ಛದ್ದೆ, ರೋಪಿಮದ್ದೆ? ಈ ಕಾಂಡಕ್ಕೆ ವೇಗಬರಲು ತುದಿಗೆ ಹಾಕಿರುವ ಗರಿಯು ಗೃಧ್ರದ್ದೆ, ಕಂಕದ್ದೆ, ಕಲಲದ್ದೆ, ಮಯೂರದ್ದೆ, ಅಥವಾ ಶಿಥಿಲಹನುವಿನದೆ? ಈ ಕಾಂಡಕ್ಕೆ ಸುತ್ತಿರುವ ಸ್ನಾಯುವು ಗೋವಿನದೆ, ಮಹಿಷದ್ದೆ, ರೋರುವದ್ದೆ, ಅಥವಾ ಕೋತಿಯದೆ? ನನಗೆ ತಗಲಿದ ಈ ಬಾಣವು ಖುರಪ್ಪವೆ, ವೈಕಾಂಡವೆ, ನಾರಾಚವೆ, ವತ್ಸದಂತವೆ, ಅಥವಾ ಕರವೀರಪತ್ರವೆ? ಇದು ಎಲ್ಲವೂ ನನಗೆ ತಿಳಿಯದ ವರೆಗೆ ನಾನು ಈ ಬಾಣವನ್ನು ತೆಗೆಸುವುದಿಲ್ಲ'– ಎಂದು ಹೇಳಿದರೆ, ಅದನ್ನು ತಿಳಿಸುವುದರೊಳಗೇ ಅವನು ಮರಣ ಹೊಂದುವನು

"ಅದರಂತೆಯೇ ಮಾಲುಂಕ್ಯಾಪುತ್ರ! . . . 'ಲೋಕ ಶಾಶ್ವತವೆ, ಅಶಾಶ್ವತವೆ? ಲೋಕ ಅಂತವುಳ್ಳದೆ, ಅನಂತವಾದುದೆ? ಜೀವವೂ ಶರೀರವೂ ಒಂದೇಯೆ, ಅಥವಾ ಬೇರೆಬೇರೆಯೆ? ತಥಾಗತನು ಸತ್ತನಂತರ ಇರುವನೆ, ಅಥವಾ ಇಲ್ಲವೆ? ತಥಾಗತನಿಗೆ ಸತ್ತಮೇಲೆ ಬೇರೆ ಜನ್ಮವುಂಟೆ, ಅಥವಾ ಇಲ್ಲವೆ? ಇವುಗಳನ್ನು ವಿವರಿಸದ ವರೆಗೆ ನಾನು ಭಗವಂತನ ಬ್ರಹ್ಮ ಚರ್ಯವನ್ನು ಆಚರಿಸುವುದಿಲ್ಲ' ಎಂದು ಯಾವನಾದರೂ ಹೇಳಿದರೆ, ವಿವರಣೆಯನ್ನು ಹೇಳುವುದರೊಳಗೇ ಆ ಪ್ರಾಣಿಯು ಮರಣಹೊಂದುವನು."

[ಮಜ್ಝಿಮನಿಕಾಯ · ಚೂಳಮಾಲುಂಕ್ಯಾ ಸುತ್ತ]

೧೨. ಹೊಸ ಮದುಮಗಳು

"ಭಿಕ್ಷುಗಳೆ! ಚಿಕ್ಕ ಮದುಮಗಳನ್ನು ಕರೆತರುವಾಗ – ಹಗಲಾಗಲಿ ರಾತ್ರಿಯಾಗಲಿ – ಅವಳು ಅತ್ತೆಮಾವಂದಿರಿಗೂ ಗಂಡನಿಗೂ ಹೆದರುವಳು, ನಾಚುವಳು; ಮನೆಯ ದಾಸರಿಗೆ, ಕೂಲಿ ಕೆಲಸದವರಿಗೆ ಕೂಡ ಹೆದರುವಳು, ನಾಚುವಳು ಅನಂತರ, ಜೊತೆಯಲ್ಲಿ ವಾಸ ಮಾಡಿದುದರ ಫಲವಾಗಿ, ವಿಶ್ವಾಸದ ಫಲವಾಗಿ, ಅವಳು ಅತ್ತೆಮಾವಂದಿರನ್ನೂ ಗಂಡನನ್ನು ಕೂಡ 'ಹೋಗು, ನಿನಗೇನು ಗೊತ್ತು?' ಎನ್ನುವಳು.

"ಅದರಂತೆಯೇ, ಭಿಕ್ಷುಗಳೆ, ಭಿಕ್ಷುವು ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದಾಗ – ಹಗಲಾಗಲಿ ರಾತ್ರಿಯಾಗಲಿ – ಭಿಕ್ಷುಭಿಕ್ಷುಣಿಯರಿಗೂ ಉಪಾಸಕ ಉಪಾಸಿಕೆಯರಿಗೂ ಹೆದರುವನು, ನಾಚುವನು; ಆರಾಮದಲ್ಲಿ ವಾಸಿಸುವ ಶ್ರಾಮಣೇರರೆದುರು ಕೂಡ ಹೆದರುವನು, ನಾಚುವನು. ಅನಂತರ, ಜೊತೆಯಲ್ಲಿ ವಾಸಮಾಡಿದುದರ ಫಲವಾಗಿ, ವಿಶ್ವಾಸದ ಫಲವಾಗಿ, ಅವನು ಆಚಾರ್ಯನನ್ನೂ ಉಪಾಧ್ಯಾಯನನ್ನು ಕೂಡ 'ಹೋಗು, ನಿನಗೇನು ಗೊತ್ತು?' ಎನ್ನುವನು.

"ಅದರಿಂದ, ಭಿಕ್ಷುಗಳೆ, 'ಈಗತಾನೆ ಬಂದ ಚಿಕ್ಕ ಮದುಮಗಳಂತೆ ಮನಸ್ಸುಮಾಡಿ ಬದುಕುವೆನು' ಎಂದು, ಹೀಗೆ ಶಿಕ್ಷಿಸಿಕೊಳ್ಳತಕ್ಕುದು. ಭಿಕ್ಷುಗಳೆ, ಹೀಗೆಯೇ ಶಿಕ್ಷಿಸಿಕೊಳ್ಳತಕ್ಕುದು."

[ಅಂಗುತ್ತರ ನಿಕಾಯ – ಚತುಕ್ಕ ನಿಪಾತ: ಅಪಣ್ಣಕವಗ್ಗ – ವಧುಕಾ ಸುತ್ತ]

೧೩. ಬಲು ದೂರದೂರ

"ಭಿಕ್ಷುಗಳೆ! ಈ ನಾಲ್ಕು ಬಲು ದೂರದೂರ.

"ಯಾವ ನಾಲ್ಕು?

"ಮೊದಲನೆಯದು - ಆಕಾಶವೂ ಭೂಮಿಯೂ ಬಲು ದೂರ ದೂರ. ಎರಡನೆಯದು—ಸಮುದ್ರದ ಆಚೆ ತೀರವೂ ಈಚೆ ತೀರವೂ ಬಲು ದೂರದೂರ. ಸೂರ್ಯನು ಹುಟ್ಟುವ ಕಡೆಯೂ ಸೂರ್ಯನು ಮುಳುಗುವ ಕಡೆಯೂ ಬಲು ದೂರದೂರ — ಇದು ಮೂರನೆಯದು. ಒಳ್ಳೆಯವರ ಧರ್ಮವೂ ಕೆಟ್ಟವರ ಧರ್ಮವೂ ಬಲು ದೂರದೂರ — ಇದು ನಾಲ್ಕನೆಯದು.

"ಈ ನಾಲ್ಕು, ಭಿಕ್ಷುಗಳೆ, ಬಲು ದೂರದೂರ."

[ಅಂಗುತ್ತರ ನಿಕಾಯ — ಚತುಕ್ಕನಿಪಾತ: ರೋಹಿತಸ್ಸವಗ್ಗ — ಸುದೂರ ಸುತ್ತ]

೧೪. ಮಳೆಯ ಮೋಡ

"ಭಿಕ್ಷುಗಳೆ! ಮಳೆಯ ಮೋಡಗಳು ನಾಲ್ಕು: ಗರ್ಜಿಸಿ ಮಳೆ ಸುರಿಸದವು, ಮಳೆ ಸುರಿಸಿ ಗರ್ಜಿಸದವು, ಗರ್ಜಿಸದೆಯೂ ಮಳೆ ಸುರಿಸದೆಯೂ ಇರುವವು, ಮತ್ತು ಗರ್ಜಿಸಿ ಮಳೆಯನ್ನೂ ಸುರಿಸುವವು. ಇವು ನಾಲ್ಕು ಮಳೆಯ ಮೋಡಗಳು.

"ಅದರಂತೆಯೇ, ಭಿಕ್ಷುಗಳೆ, ಈ ಮಳೆಮೋಡಗಳಂತೆ ನಾಲ್ಕು ತೆರದ ಜನರು ಲೋಕದಲ್ಲಿ ಕಂಡುಬರುತ್ತಾರೆ: ಒಬ್ಬನು ಮಾತಾಡುತ್ತಾನೆ, ಕೆಲಸ ಮಾಡುವುದಿಲ್ಲ; ಒಬ್ಬನು ಕೆಲಸ ಮಾಡುತ್ತಾನೆ, ಮಾತನಾಡುವುದಿಲ್ಲ; ಒಬ್ಬನು ಮಾತೂ ಆಡುವುದಿಲ್ಲ, ಕೆಲಸವೂ ಮಾಡುವುದಿಲ್ಲ; ಒಬ್ಬನು ಮಾತೂ ಆಡುತ್ತಾನೆ, ಕೆಲಸವೂ ಮಾಡುತ್ತಾನೆ. ಈ ನಾಲ್ಕು ಜನ ಮಳೆಯ ಮೋಡಗಳ ಹಾಗೆ."

[ಅಂಗುತ್ತರನಿಕಾಯ – ಚತುಕ್ಕನಿಪಾತ: ವಲಾಹಕವಗ್ಗ – ವಲಾಹಕಸುತ್ತ]

೧೫. ಮುಚ್ಚುಮರೆ

"ಭಿಕ್ಷುಗಳೆ! ಈ ಮೂರು ಮುಚ್ಚುಮರೆಯಾಗಿ ನಡೆಯುತ್ತವೆ, ಪ್ರಕಾಶವಾಗಿ ನಡೆಯುವುದಿಲ್ಲ. ಯಾವುವು ಈ ಮೂರು?

"ಸ್ತ್ರೀಯರ ನಡತೆ ನಡೆಯುವುದು ಮುಚ್ಚುಮರೆಯಾಗಿ, ಪ್ರಕಾಶವಾಗಿಯಲ್ಲ. ಬ್ರಾಹ್ಮಣರ ಮಂತ್ರಗಳು ನಡೆಯುವುದು ಮುಚ್ಚುಮರೆಯಾಗಿ, ಪ್ರಕಾಶವಾಗಿಯಲ್ಲ ಮಿಥ್ಯಾದೃಷ್ಟಿಯು ನಡೆಯುವುದು ಮುಚ್ಚುಮರೆಯಾಗಿ, ಪ್ರಕಾಶವಾಗಿಯಲ್ಲ. ಈ ಮೂರು, ಭಿಕ್ಷುಗಳೆ, ಮುಚ್ಚುಮರೆಯಾಗಿ ನಡೆಯುತ್ತವೆ, ಪ್ರಕಾಶವಾಗಿಯಲ್ಲ.

"ಭಿಕ್ಷುಗಳೆ! ಈ ಮೂರು ಬಿಚ್ಚಿ ಬೆಳಗುತ್ತವೆ; ಇವಕ್ಕೆ ಮುಚ್ಚುಮರೆಯಿಲ್ಲ. ಯಾವುವು ಈ ಮೂರು?

"ಚಂದ್ರಮಂಡಲವು ಬಿಚ್ಚಿ ಬೆಳಗುತ್ತದೆ; ಇದಕ್ಕೆ ಮುಚ್ಚುಮರೆಯಿಲ್ಲ ಸೂರ್ಯಮಂಡಲವು ಬಿಚ್ಚಿ ಬೆಳಗುತ್ತದೆ; ಇದಕ್ಕೆ ಮುಚ್ಚುಮರೆಯಿಲ್ಲ. ತಥಾಗತನು ತೋರಿಸಿಕೊಟ್ಟ ಧರ್ಮವಿನಯವು ಬಿಚ್ಚಿ ಬೆಳಗುತ್ತದೆ; ಇದಕ್ಕೆ ಮುಚ್ಚುಮರೆಯಿಲ್ಲ. ಈ ಮೂರು, ಭಿಕ್ಷುಗಳೆ, ಬಿಚ್ಚಿ ಬೆಳಗುತ್ತವೆ; ಇವಕ್ಕೆ ಮುಚ್ಚುಮರೆಯಿಲ್ಲ."

[ಅಂಗುತ್ತರನಿಕಾಯ – ತಿಕನಿಪಾತ: ಕುಸಿನಾರವಗ್ಗ — ಪಟಿಚ್ಛನ್ನ ಸುತ್ತ]

"ಬುದ್ಧವಚನ ಮಧು"

ಎಂಬ

ಪಾಲೀ ಪಿಟಕ ಸಾಹಿತ್ಯದ ಕನ್ನಡ ಅನುವಾದಮಾಲೆಯಲ್ಲಿ

ಮೂರನೆಯ ಸಂಪುಟವಾಗಿ

ಪ್ರಕಟಿಸಬೇಕೆಂದು ಉದ್ದೇಶಿಸಿರುವ

"ಬುದ್ಧನ ಸಂವಾದಗಳು

ಮತ್ತು

ಇತರ ಸುಂದರ ಸೂತ್ರಗಳು"

ಎಂಬ ಪುಸ್ತಕದಿಂದ ಆಯ್ದ

ನಾಲ್ಕು ಸೂತ್ರಗಳು

ವಿವರ

		ಪುಟ
೧.	ಜಾತಿಯ ಅಭಿಮಾನ	೮೭
೨.	ಬ್ರಾಹ್ಮಣನ ಲಕ್ಷಣಗಳು	೧೧೩
೩.	ಅಭಯ ರಾಜಕುಮಾರ	೧೩೦
೪.	ಪೂರ್ಣ ಮಂತ್ರಾಣಿಪುತ್ರ	೧೩೪

೧. ಜಾತಿಯ ಅಭಿಮಾನ

ನಾನು ಹೀಗೆ ಕೇಳಿರುವೆನು:

ಒಂದು ಸಲ ಭಗವಂತನು ಕೋಸಲದಲ್ಲಿ ಭಿಕ್ಷಾಚರಣಮಾಡುತ್ತ, ಮಹಾಭಿಕ್ಷುಸಂಘದೊಡನೆ—ಸುಮಾರು ಐನೂರು ಭಿಕ್ಷುಗಳೊಡನೆ—ಇಚ್ಛಾನಂಕಲವೆಂಬ ಕೋಸಲದ ಬ್ರಾಹ್ಮಣಗ್ರಾಮಕ್ಕೆ ಬಂದನು. ಅಲ್ಲಿ, ಭಗವಂತನು ಇಚ್ಛಾನಂಕಲ ವನಷಂಡದಲ್ಲಿ ತಂಗಿದನು.

ಆ ಸಮಯದಲ್ಲಿ ಬ್ರಾಹ್ಮಣ ಪೌಷ್ಕರಸಾದಿಯು ಉತ್ಕೃಷ್ಟದಲ್ಲಿ ವಾಸಮಾಡುತ್ತಿದ್ದನು. ಅದು ಜೀವಿಗಳಿಂದ ತುಂಬಿತುಳುಕಿ, ಹುಲ್ಲು ಕಡ್ಡಿ ಕಾಳು ನೀರಿನಿಂದ ಕೂಡಿ, ರಾಜನು ಭೋಗಿಸಲು ತಕ್ಕುದು. ಅದು ಕೋಸಲದ ರಾಜ ಪ್ರಸೇನಜಿತನು ದಾನಮಾಡಿದ ರಾಜಯೋಗ್ಯವಾದ ದಾನ, ಶ್ರೇಷ್ಠವಾದ ದಾನ.

ಆಗ ಬ್ರಾಹ್ಮಣ ಪೌಷ್ಕರಸಾದಿಯು "ಭೋ! ಶಾಕ್ಯಪುತ್ರನಾಗಿ ಶಾಕ್ಯಕುಲದಿಂದ ಪರಿವ್ರಜಿಸಿದ ಶ್ರಮಣ ಗೌತಮನು ಕೋಸಲದಲ್ಲಿ ಭಿಕ್ಷಾಚರಣಮಾಡುತ್ತ, ಮಹಾಭಿಕ್ಷುಸಂಘದೊಡನೆ — ಸುಮಾರು ಐನೂರು ಭಿಕ್ಷುಗಳೊಡನೆ—ಇಚ್ಛಾನಂಕಲವನ್ನು ಸಾರಿ, ಇಚ್ಛಾನಂಕಲ ದಲ್ಲಿ, ಇಚ್ಛಾನಂಕಲ ವನಷಂಡದಲ್ಲಿ ತಂಗಿರುವನಂತೆ! 'ಆ ಭಗ ವಂತನು ಅರ್ಹನು, ಸಮ್ಯಕ್‌ಸಂಬುದ್ಧನು, ವಿದ್ಯಾಚರಣಸಂಪನ್ನನು. ಅವನು ಸುಗತಿಯನ್ನು ಪಡೆದವನು. ಆತನು ಲೋಕಗಳನ್ನು ತಿಳಿದವನು. ದಮನವನ್ನು ಬಯಸುವ ಜನರನ್ನು ಸಾರಥಿಯಂತೆ ನಡಿಸುವುದರಲ್ಲಿ ಎಲ್ಲರನ್ನೂ ಮೀರಿಸಿದವನವನು. ಅವನು ದೇವತೆಗಳಿಗೂ ಮನುಷ್ಯರಿಗೂ ಗುರುವು; ಬುದ್ಧನು, ಭಗವಂತನು'—ಎಂದು ಆ ಪೂಜ್ಯ ಗೌತಮನನ್ನು ಕುರಿತು ಸುಂದರವಾದ ಕೀರ್ತಿಶಬ್ದವು ಹರಡಿದೆ. ಅವನು ಈ ಲೋಕ ವನ್ನು—ದೇವ ಮಾರ ಬ್ರಹ್ಮ ಸಹಿತವಾಗಿ, ಶ್ರಮಣ ಬ್ರಾಹ್ಮಣ ಪ್ರಜೆ ಗಳೊಡನೆ, ದೇವ ಮನುಷ್ಯ ಸಹಿತವಾಗಿ—ಸ್ವಂತ ಅಭಿಜ್ಞೆಯಿಂದ ಕಂಡು ಕೊಂಡು ತಿಳಿಯಪಡಿಸುತ್ತಾನೆ. ಮೊದಲಿನಲ್ಲೂ ಮಧ್ಯದಲ್ಲೂ ಕಡೆ ಯಲ್ಲೂ ಸುಂದರವಾದ ಧರ್ಮವನ್ನು ಅರ್ಥವ್ಯಂಜನಗಳೊಡನೆ ಸಾರು ವನು. ಕೇವಲ ಪರಿಪೂರ್ಣವೂ ಪರಿಶುದ್ಧವೂ ಆದ ಬ್ರಹ್ಮಚರ್ಯವನ್ನು

ಪ್ರಕಾಶಗೊಳಿಸುವನು. ಅಂತಹ ಆರ್ಹತರ ದರ್ಶನದಿಂದ ಮೇಲಾಗುವುದು" ಎಂದು ಕೇಳಿದನು.

ಆ ಸಮಯದಲ್ಲಿ ಅಂಬಷ್ಟನೆಂಬ ಬ್ರಾಹ್ಮಣ ತರುಣನು ಪೌಷ್ಕರಸಾದಿಯೊಡನೆ ವಾಸಮಾಡುವ ಶಿಷ್ಯನಾಗಿದ್ದನು. ಅವನು ವೇದಗಳನ್ನು ಕಲಿತವನು; ಮಂತ್ರ ತಿಳಿದವನು; ನಿಘಂಟು, ಕೇಟುಭ, ಅಕ್ಷರ ಪ್ರಭೇದಗಳು, ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರು ವೇದಗಳಲ್ಲಿ ಪಾರಂಗತನು; ವೇದಗಳ ಪದಪಾಠವನ್ನು ಬಲ್ಲವನು; ವೈಯಾಕರಣನು; ಲೋಕಾಯತ ಮಹಾಪುರುಷಲಕ್ಷಣಗಳಲ್ಲಿ ಪಂಡಿತನು; 'ನಾನು ತಿಳಿದಿರುವುದನ್ನು ನೀನು ತಿಳಿದಿರುವೆ; ನೀನು ತಿಳಿದಿರುವುದನ್ನು ನಾನು ತಿಳಿದಿರುವೆನು' ಎಂದು ಸ್ವಂತ ಆಚಾರ್ಯನಿಗೆ ಹೇಳುವಷ್ಟು ಮೂರುವೇದಗಳ ಪ್ರವಚನದಲ್ಲಿ ಅವನು ಪ್ರವೀಣನೆಂದೂ ಅಧಿಕಾರವಾಣಿಯೆಂದೂ ಇತರರು ಒಪ್ಪಿದ್ದರು.

ಆಗ, ಬ್ರಾಹ್ಮಣ ಪೌಷ್ಕರಸಾದಿಯು ಅಂಬಷ್ಟನನ್ನು ಕರೆದು, "ಪ್ರಿಯ ಅಂಬಷ್ಟ! ಶ್ರಮಣ ಗೌತಮನು ಇಚ್ಛಾನಂಕಲದಲ್ಲಿ ತಂಗಿರುವನಂತೆ. ಅವನನ್ನು ಕುರಿತು ಹೀಗೆ ಕೀರ್ತಿಶಬ್ದ ಹರಡಿದೆ. ನೀನು ಶ್ರಮಣ ಗೌತಮನ ಬಳಿ ಹೋಗು. ಹೋಗಿ, ಆ ಪೂಜ್ಯ ಗೌತಮನು ಅವನ ವಿಚಾರವಾಗಿ ಹರಡಿರುವ ಸುದ್ದಿಗೆ ಸಮನಾಗಿರುವನೆ ಇಲ್ಲವೆ, ಆ ಪೂಜ್ಯ ಗೌತಮನು ಹಾಗಿರುವನೆ ಇಲ್ಲವೆ ಎಂದು ತಿಳಿದುಕೊ. ತಿಳಿದು, ನನಗೆ ತಿಳಿಸು" ಎಂದನು.

"ಭೋ! ಆತನು ಹಾಗಿರುವನೊ ಇಲ್ಲವೊ ಎಂದು ನಾನು ತಿಳಿಯುವುದು ಹೇಗೆ?"

"ಪ್ರಿಯ ಅಂಬಷ್ಟ! ನಮ್ಮ ಮಂತ್ರಗಳಲ್ಲಿ ಮೂವತ್ತೆರಡು ಮಹಾಪುರುಷಲಕ್ಷಣಗಳು ನಡೆದುಬಂದಿವೆ. ಅವು ಕೂಡಿಬಂದ ಮಹಾಪುರುಷನಿಗೆ ಈ ಎರಡು ಗತಿಯಲ್ಲದೆ ಬೇರೆಯದಾಗದು: ಅವನು ಮನೆಯಲ್ಲಿ ವಾಸಮಾಡಿದರೆ ರಾಜನಾಗುವನು, ಚಕ್ರವರ್ತಿಯಾಗುವನು, ಧಾರ್ಮಿಕನಾಗುವನು, ಧರ್ಮರಾಜನಾಗುವನು; ನಾಲ್ಕು ದಿಕ್ಕುಗಳನ್ನೂ ಜಯಿಸುವನು, ಜನಪದವನ್ನು ಸ್ತಿಮಿತಕ್ಕೆ ತರುವನು; ಚಕ್ರ

ರತ್ನ, ಹಸ್ತಿರತ್ನ, ಅಶ್ವರತ್ನ, ಮಣಿರತ್ನ, ಸ್ತ್ರೀರತ್ನ, ಗೃಹಪತಿರತ್ನ, ಪರಿನಾಯಕರತ್ನ - ಎಂಬ ಏಳು ರತ್ನಗಳಿಂದ ಕೂಡಿದವನಾಗುವನು; ವೀರರಾಗಿ ವೀರಾಂಗರೂಪರಾಗಿ ಪರಸೇನೆಯನ್ನು ಮರ್ದನಮಾಡುವ ಮಕ್ಕಳು ಅವನಿಗೆ ಸಾವಿರಕ್ಕೆ ಮೇಲ್ಪಟ್ಟು ಆಗುವರು; ಅವನು ದಂಡ ವಿಲ್ಲದೆ, ಶಸ್ತ್ರವಿಲ್ಲದೆ, ಧರ್ಮದಿಂದ ಸಾಗರಪರಿಯಂತವಾದ ಈ ಪೃಥ್ವಿ ಯನ್ನು ಪೂರ್ಣವಾಗಿ ಗೆದ್ದು ವಾಸಿಸುವನು. ಹಾಗಲ್ಲದೆ, ಅವನು ಗಾರ್ಹಸ್ಥ್ಯದಿಂದ ಸಂನ್ಯಾಸಕ್ಕೆ ನಡೆದರೆ ಅರ್ಹನಾಗುವನು, ಲೋಕದ ಮುಸುಕನ್ನು ತೆಗೆಯುವ ಸಮ್ಯಕ್‌ಸಂಬುದ್ಧನಾಗುವನು. ಪ್ರಿಯ ಅಂಬಷ್ಟ! ನಾನು ಮಂತ್ರಗಳನ್ನು ಕೊಡುವವನು, ನೀನು ಮಂತ್ರಗಳನ್ನು ಪ್ರತಿಗ್ರಹಿಸುವವನು."

"ಹಾಗೆಯೆ ಆಗಲಿ, ಭೋ!" ಎಂದು ಅಂಬಷ್ಟನು ಪೌಷ್ಕರಸಾದಿಗೆ ಉತ್ತರ ಕೊಟ್ಟು, ಆಸನದಿಂದ ಎದ್ದು ಅವನಿಗೆ ಅಭಿವಂದಿಸಿ ಪ್ರದಕ್ಷಿಣೆ ಮಾಡಿ, ಹೆಣ್ಣುಕುದುರೆ ಕಟ್ಟದ ರಥವನ್ನೇರಿ, ಅನೇಕ ಬ್ರಾಹ್ಮಣ ಯುವಕರೊಡನೆ ಇಚ್ಛಾನಂಕಲ ವನಷಂಡವಿರುವ ಕಡೆಗೆ ತೆರಳಿದನು. ರಥಕ್ಕೆ ನೆಲವಿರುವವರೆಗೆ ರಥದಲ್ಲಿ ಹೋಗಿ, ಅನಂತರ ರಥದಿಂದ ಇಳಿದು ಕಾಲುನಡೆಯಿಂದ ಆರಾಮವನ್ನು ಪ್ರವೇಶಿಸಿದನು.

ಆ ಸಮಯದಲ್ಲಿ ಅನೇಕ ಭಿಕ್ಷುಗಳು ಹೊರಗಿನ ಬಯಲಿನಲ್ಲಿ ಅಲ್ಲಿಂದಿಲ್ಲಿಗೆ ತಿರುಗಾಡುತ್ತಿದ್ದರು. ಆಗ ಅಂಬಷ್ಟನು ಆ ಭಿಕ್ಷುಗಳು ಇದ್ದ ಕಡೆ ಹೋಗಿ, "ಭೋ! ಪೂಜ್ಯ ಗೌತಮನು ಈಗ ಎಲ್ಲಿ ವಿಹರಿಸು ತ್ತಿರುವನು? ಆತನ ದರ್ಶನಕ್ಕಾಗಿ ನಾವು ಇಲ್ಲಿ ಬಂದಿರುವೆವು" ಎಂದನು.

ಆಗ ಆ ಭಿಕ್ಷುಗಳಿಗೆ "ಈ ಬ್ರಾಹ್ಮಣ ಯುವಕನಾದ ಅಂಬಷ್ಟನು ಪ್ರಸಿದ್ಧವಾದ ಕುಲದಲ್ಲಿ ಹುಟ್ಟಿದವನು; ಪ್ರಸಿದ್ಧನಾದ ಬ್ರಾಹ್ಮಣ ಪೌಷ್ಕರ ಸಾದಿಯ ಸಹವಾಸಿಯಾದ ಶಿಷ್ಯ. ಇಂತಹ ಕುಲಪುತ್ರನೊಡನೆ ಮಾತು ಕತೆಯಾಡಲು ಭಗವಂತನಿಗೆ ಕಷ್ಟವಾಗದು" ಎನ್ನಿಸಿತು. ಅವರು "ಅದೋ, ಅಂಬಷ್ಟ, ಮುಚ್ಚಿದಬಾಗಿಲ ವಿಹಾರ. ಅಲ್ಪಶಬ್ದದಿಂದ ಅಲ್ಲಿಗೆ ಹೋಗಿ, ಹೊರಸಾಲೆಯನ್ನು ನಿದಾನವಾಗಿ ಪ್ರವೇಶಿಸಿ, ಕೆಮ್ಮಿ,

ಅಗುಳಿಯನ್ನು ತಟ್ಟು. ಭಗವಂತನು ನಿನಗೆ ಬಾಗಿಲು ತೆರೆಯುವನು" ಎಂದರು.

ಅಂಬಷ್ಟನು ಹಾಗೆಯೆ ನಡೆದು ಅಗುಳಿ ತಟ್ಟಿದನು. ಭಗವಂತನು ಬಾಗಿಲು ತೆರೆದನು. ಅಂಬಷ್ಟನು ಒಳಹೊಕ್ಕನು. ಅವನೊಡನೆ ಬಂದ ಬ್ರಾಹ್ಮಣ ಯುವಕರು ತಾವೂ ಪ್ರವೇಶಿಸಿ, ಭಗವಂತನೊಡನೆ ಸಮ್ಮೋದ ದಿಂದ ಮಾತನಾಡಿ, ಕೇಳತಕ್ಕ ಕುಶಲಪ್ರಶ್ನೆಗಳನ್ನು ಕೇಳಿ, ಒಂದು ಕಡೆ ಕುಳಿತರು. ಆದರೆ ಅಂಬಷ್ಟನು ಅಲ್ಲಿಂದಿಲ್ಲಿ ಸುತ್ತುತ್ತ, ಅದು ಇದು ಮಾತನಾಡುತ್ತ, ಕುಳಿತ ಭಗವಂತನೊಡನೆ ನಿಂತುಕೊಂಡೇ ಅದು ಇದು ಕುಶಲಪ್ರಶ್ನೆಗಳನ್ನು ಆಡಿದನು.

ಆಗ ಭಗವಂತನು "ಅಂಬಷ್ಟ! ವೃದ್ಧಬ್ರಾಹ್ಮಣರೊಡನೆಯೂ ಮಹಾ ಆರ್ಯಕರಾದ ನಿನ್ನ ಆಚಾರ್ಯಪ್ರಾಚಾರ್ಯರೊಡನೆಯೂ ನೀನು ಮಾತುಕತೆ ನಡಿಸುವುದು ಹೀಗೇಯೇನು—ನಾನು ಹೀಗೆ ಕುಳಿತಿದ್ದರೂ ನೀನು ನಡೆಯುತ್ತ ನಿಲ್ಲುತ್ತ ಅದು ಇದು ಆಡುವ ರೀತಿಯಲ್ಲಿ?" ಎಂದನು.

"ಖಂಡಿತ ಇಲ್ಲ, ಭೋ ಗೌತಮ! ನಡೆಯುತ್ತಿರುವ ಬ್ರಾಹ್ಮಣ ನಾದರೆ ಮಾತ್ರ ಬ್ರಾಹ್ಮಣನು ನಡೆಯುತ್ತ ಮಾತನಾಡುವುದು ತಕ್ಕುದು. ಬ್ರಾಹ್ಮಣನು ನಿಂತಿದ್ದರೆ ಮಾತ್ರ ಅವನೊಡನೆ ನಿಂತು ಮಾತನಾಡುವುದು ತಕ್ಕುದು. ಬ್ರಾಹ್ಮಣನು ಕುಳಿತಿದ್ದರೆ ಮಾತ್ರ ಅವನೊಡನೆ ಕುಳಿತು ಮಾತನಾಡುವುದೂ, ಅವನು ಮಲಗಿದ್ದರೆ ಮಾತ್ರ ಅವನೊಡನೆ ಮಲಗಿ ಮಾತನಾಡುವುದೂ ತಕ್ಕುದು. ಆದರೆ ಭೋ ಗೌತಮ, ಮುಂಡಕರು, ಶ್ರಮಣಕರು, ಇಭ್ಯರು, ಕೃಷ್ಣರು, ಬಂಧುಪಾದಾಪತ್ಯರು—ಇವ ರೊಡನೆ ಮಾತುಕತೆಯಾಡುವಾಗ ಪೂಜ್ಯ ಗೌತಮನೊಡನೆ ಹೇಗೋ ಹಾಗೆ."

"ಅಂಬಷ್ಟ, ನೀನು ಒಂದು ಗುರಿಯಿಂದ ಇಲ್ಲಿ ಬಂದೆ. ಆ ಬಂದ ಗುರಿಯನ್ನು ಮನಸ್ಸಿಗೆ ತಂದುಕೊ. ಈ ಅಂಬಷ್ಟನು ಅಪೂರ್ಣನೇ ಸರಿ! ಪರಿಪೂರ್ಣನೆಂದು ಹೆಮ್ಮೆಪಡುವವನು ಅಪೂರ್ಣವಾದ ಆತ್ಮವುಳ್ಳವ ನಲ್ಲದೆ ಇನ್ನೇನು!"

ಭಗವಂತನು ತನ್ನನ್ನು ಅಪೂರ್ಣನೆಂದುದರಿಂದ ಅಂಬಷ್ಟನ ಮನಸ್ಸು ಕೆಟ್ಟಿತು. ಅವನಿಗೆ ಕೋಪಬಂತು. ಅಸಂತುಷ್ಟ ಮನಸ್ಸಿನಿಂದ ಭಗವಂತನನ್ನು ಅಣಕಿಸುತ್ತ, ಹೀನೈಸುತ್ತ, ನಿಂದಿಸುತ್ತ, 'ಶ್ರಮಣ ಗೌತಮನು ಕೆಟ್ಟನು' ಎಂದುಕೊಂಡು, "ಭೋ ಗೌತಮ! ನಿಮ್ಮ ಶಾಕ್ಯ ಜಾತಿಗೆ ಕೋಪ ಬರುವುದು ಬಹುಬೇಗ. ನಿಮ್ಮ ಶಾಕ್ಯಜಾತಿ ಒಡ್ಡು. ನಿಮ್ಮ ಶಾಕ್ಯಜಾತಿಯು ಕೊಂಚಕ್ಕೆಲ್ಲ ಕೆರಳುವವರು, ಅತಿಮಾತನಾಡುವವರು; ಇಭ್ಯರು, ಇಭ್ಯಸಮಾನರು; ಬ್ರಾಹ್ಮಣರನ್ನು ಸತ್ಕರಿಸುವುದಿಲ್ಲ, ಗೌರವಿಸುವುದಿಲ್ಲ, ಮಾನಿಸುವುದಿಲ್ಲ, ಪೂಜಿಸುವುದಿಲ್ಲ, ಬ್ರಾಹ್ಮಣರಿಗೆ ಕೈಜೋಡಿಸುವುದಿಲ್ಲ. ಇದು, ಭೋ ಗೌತಮ, ಈ ನಡತೆಯು ತಕ್ಕುದಲ್ಲ, ಸರಿಯಲ್ಲ" ಎಂದನು.

ಹೀಗೆಂದು ಅಂಬಷ್ಟನು ಮೊದಲಸಲ ಶಾಕ್ಯರು ಇಭ್ಯರೆಂದು ಹಂಗಿಸಿದನು.

"ಆದರೆ, ಶಾಕ್ಯರು ನಿನಗೇನು ಅಪರಾಧಮಾಡಿದರು, ಅಂಬಷ್ಟ?"

"ಒಂದು ಸಲ, ಗೌತಮ, ಆಚಾರ್ಯನಾದ ಬ್ರಾಹ್ಮಣ ಪೌಷ್ಕರಸಾದಿಯ ಯಾವುದೋ ಕೆಲಸಕ್ಕಾಗಿ ನಾನು ಕಪಿಲವಸ್ತುವಿಗೆ ತೆರಳಿ, ಶಾಕ್ಯರ ಸಂಸ್ಥಾಗಾರವಿರುವಲ್ಲಿಗೆ ಹೋದೆ. ಆಗ ಆ ಸಮಯದಲ್ಲಿ ಅನೇಕ ಶಾಕ್ಯರೂ ಶಾಕ್ಯಕುಮಾರರೂ ಆ ಸಂಸ್ಥಾಗಾರದಲ್ಲಿ ಎತ್ತರವಾದ ಪೀಠಗಳಲ್ಲಿ ಕುಳಿತು, ಒಬ್ಬರನ್ನೊಬ್ಬರು ಬೆರಳಿಂದ ತಿವಿಯುತ್ತ ಗೇಲಿಮಾಡುತ್ತ ಆಟವಾಡುತ್ತಿದ್ದರು. ಅವರು ನನ್ನನ್ನು ಗೇಲಿಮಾಡುತ್ತಿದ್ದುದು! ನನಗೆ ಯಾರೂ ಆಸನಕೊಟ್ಟು ಕರೆಯಲಿಲ್ಲ. ಇಭ್ಯರಾಗಿ, ಇಭ್ಯಸಮಾನರಾಗಿ, ಈ ಶಾಕ್ಯರು ಬ್ರಾಹ್ಮಣರನ್ನು ಸತ್ಕರಿಸದೆ, ಗೌರವಿಸದೆ, ಮಾನಿಸದೆ, ಪೂಜಿಸದೆ, ಬ್ರಾಹ್ಮಣರಿಗೆ ಕೈಜೋಡಿಸದಿರುವುದು -- ಇದು ಸರಿಯಲ್ಲ, ಇದು ತಕ್ಕುದಲ್ಲ."

ಹೀಗೆಂದು ಅಂಬಷ್ಟನು ಎರಡನೆಯ ಸಲ ಶಾಕ್ಯರು ಇಭ್ಯರೆಂದು ಹಂಗಿಸಿದನು.

"ಅಂಬಷ್ಟ! ಚಿಕ್ಕ ಹಕ್ಕಿಯಾದ ಲಟುಕಿಕೆ ಕೂಡ ತನ್ನ ಗೂಡಿನಲ್ಲಿ ಬೇಕಾದುದನ್ನು ಹೇಳಬಲ್ಲುದು. ಈ ಕಪಿಲವಸ್ತು ಶಾಕ್ಯರಿಗೆ ಸ್ವಂತ,

ಅಂಬಷ್ಟ. ಇಂತಹ ಅಲ್ಪಮಾತ್ರಕ್ಕೆ ಅಂಬಷ್ಟನು ಕೋಪಗೊಳ್ಳುವುದು ಅರ್ಹವಲ್ಲ."

"ಭೋ ಗೌತಮ! ಕ್ಷತ್ರಿಯರು, ಬ್ರಾಹ್ಮಣರು, ವೈಶ್ಯರು, ಶೂದ್ರರು—ಎಂದು ವರ್ಣಗಳು ನಾಲ್ಕು. ಈ ನಾಲ್ಕು ವರ್ಣಗಳಲ್ಲಿ ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಮೂರು ವರ್ಣಗಳು ಬ್ರಾಹ್ಮಣರಿಗೆ ಪರಿಚಾರಕರಲ್ಲದೆ ಬೇರೆಯಲ್ಲ! ಅದರಿಂದ ಭೋ ಗೌತಮ, ಇಭ್ಯರಾಗಿ, ಇಭ್ಯಸಮಾನರಾಗಿ, ಈ ಶಾಕ್ಯರು ಬ್ರಾಹ್ಮಣರನ್ನು ಸತ್ಕರಿಸದೆ, ಗೌರವಿಸದೆ, ಮಾನಿಸದೆ, ಪೂಜಿಸದೆ, ಬ್ರಾಹ್ಮಣರಿಗೆ ಕೈಜೋಡಿಸದಿರುವುದು—ಇದು ಸರಿಯಲ್ಲ, ಇದು ತಕ್ಕುದಲ್ಲ."

ಹೀಗೆಂದು ಅಂಬಷ್ಟನು ಮೂರನೆಯ ಸಲ ಶಾಕ್ಯರು ಇಭ್ಯರೆಂದು ಹಂಗಿಸಿದನು.

ಆಗ "ಇಭ್ಯರೆಂದು ನುಡಿದು ಶಾಕ್ಯರನ್ನು ಕೀಳುಮಾಡಲು ಈ ಬ್ರಾಹ್ಮಣ ಅಂಬಷ್ಟನು ದೃಢಮಾಡಿದ್ದಾನೆ. ನಾನು ಇವನ ಗೋತ್ರ ಕೇಳುವೆನು" ಎಂದು ಭಗವಂತನಿಗೆ ಎನಿಸಿತು.

ಆಗ ಭಗವಂತನು "ನೀನು ಯಾವ ಗೋತ್ರ, ಅಂಬಷ್ಟ?" ಎಂದು ಅವನನ್ನು ಕೇಳಿದನು.

"ನಾನು ಕೃಷ್ಣಾಯನ, ಭೋ ಗೌತಮ!"

"ಅಂಬಷ್ಟ! ನಿನ್ನ ತಂದೆತಾಯಿಯರ ಹೆಸರು ಗೋತ್ರಗಳನ್ನು ಹಿಡಿದು ಹಿಂದೆಹೋದರೆ ಶಾಕ್ಯರು ಆರ್ಯಪುತ್ರರಾಗುವರು; ನೀನು ಶಾಕ್ಯರ ದಾಸೀಪುತ್ರನಾಗುವೆ. ಇಕ್ಷ್ವಾಕುರಾಜನು ತಮಗೆ ಪಿತಾಮಹನೆಂದು ಶಾಕ್ಯರು ಹೇಳುವರು, ಅಂಬಷ್ಟ.

"ಬಹು ಹಿಂದೆ, ಅಂಬಷ್ಟ, ಇಕ್ಷ್ವಾಕುರಾಜನು ತನ್ನ ಹಿರಿಯ ಮಕ್ಕಳಿಗೆ ನ್ಯಾಯವಾಗಿ ಬರಬೇಕಾಗಿದ್ದ ರಾಜ್ಯವನ್ನು ತನ್ನ ಮನಸ್ಸನ್ನು ಸಂತೋಷಗೊಳಿಸಿ ಪ್ರಿಯಳಾದ ರಾಣಿಯ ಮಗನಿಗೆ ಕೊಡಬೇಕೆಂದು ಬಯಸಿದನು; ಇಕ್ಷ್ವಾಮುಖ, ಕರಂಡು, ಹಸ್ತಿನೀಯ, ಸೀನಿಪುರ—ಎಂಬ ತನ್ನ ಜ್ಯೇಷ್ಠಕುಮಾರರನ್ನು ರಾಷ್ಟ್ರದಿಂದ ಹೊರಡಿಸಿದನು. ಅವರು ರಾಜ್ಯದಿಂದ ಹೊರಡಿಸಲ್ಪಟ್ಟು, ಹಿಮವಂತದ ಬಳಿಯ ಪುಷ್ಕರಿಣಿಯ

ತೀರದಲ್ಲಿ ಮಹಾಶಾಕಷಂಡದ ಬಳಿ ವಾಸವನ್ನು ಮಾಡಿಕೊಂಡರು. ಅವರು ತಮ್ಮ ಜಾತಿ ಒಡೆದುಹೋದೀತೆಂದು ಹೆದರಿ ತಮ್ಮ ಸಹೋದರಿಯು ರನ್ನು ಮದುವೆಯಾದರು.

"ಆಗ, ಅಂಬಷ್ಟ, ಇಕ್ಷ್ವಾಕುರಾಜನು ತನ್ನ ಮಂತ್ರಿಗಳ ಪರಿ ಷತ್ತನ್ನು ಕರೆದು, 'ಭೋ! ಕುಮಾರರು ಈಗ ಎಲ್ಲಿ ವಾಸಮಾಡುವರು?' ಎಂದು ಕೇಳಿದನು.

"'ಹಿಮವಂತದ ಬಳಿಯ ಪುಷ್ಕರಿಣಿಯ ತೀರದಲ್ಲಿ ಮಹಾಶಾಕ ಷಂಡವುಂಟು, ದೇವ. ಕುಮಾರರು ಈಗ ಅಲ್ಲಿ ವಾಸಿಸುವರು. ಅವರು ತಮ್ಮ ಜಾತಿ ಒಡೆದುಹೋದೀತೆಂದು ಹೆದರಿ ತಮ್ಮ ಸಹೋದರಿಯರನ್ನು ಮದುವೆಯಾಗಿರುವರು.'

"ಆಗ ಇಕ್ಷ್ವಾಕುರಾಜನು 'ಆಹಾ! ಕುಮಾರರು ಶಾಕ್ಯರು! ಕುಮಾ ರರು ಪರಮಶಾಕ್ಯರು!' ಎಂದು ಮೆಚ್ಚಿ ಸಂತೋಷದಿಂದ ನುಡಿದನು.

"ಅದರಿಂದಲೇ, ಅಂಬಷ್ಟ, ಶಾಕ್ಯರೆನ್ನುವುದು. ಅವನೇ ಶಾಕ್ಯರಿಗೆ ಪೂರ್ವಪುರುಷನು.

"ಅಂಬಷ್ಟ! ಇಕ್ಷ್ವಾಕುರಾಜನಿಗೆ ದಿಶಾ ಎಂಬ ಹೆಸರಿನ ದಾಸಿ ಯಿದ್ದಳು. ಅವಳಿಗೆ ಕೃಷ್ಣನು ಹುಟ್ಟಿದನು. ಕೃಷ್ಣನು ಹುಟ್ಟಿದ ಗಳಿಗೆಯೆ 'ನನ್ನನ್ನು ತೊಳೆ, ಅಮ್ಮ! ನನಗೆ ಸ್ನಾನಮಾಡಿಸು, ಅಮ್ಮ! ಅಮ್ಮ, ಈ ಅಶುಚಿಯಿಂದ ನನ್ನನ್ನು ಬಿಡುಗಡೆಮಾಡು. ನಾನು ನಿನಗೆ ಸಹಾಯವಾಗುವೆನು' ಎಂದನು.

"ಈಗ ಜನರು ಪಿಶಾಚಿಗಳನ್ನು 'ಪಿಶಾಚಿಗಳು' ಎನ್ನುವಂತೆ, ಆ ಕಾಲದಲ್ಲಿ ಜನರು ಪಿಶಾಚಿಗಳನ್ನು 'ಕೃಷ್ಣಗಳು' ಎನ್ನುತ್ತಿದ್ದರು. ಅವರು 'ಇದು ಹುಟ್ಟಿದ ಮರುಗಳಿಗೆಯೆ ಮಾತನಾಡಿತು; ಕೃಷ್ಣ ಹುಟ್ಟಿತು, ಪಿಶಾಚಿ ಹುಟ್ಟಿತು' ಎಂದರು.

"ಅದೆ ಮೊದಲಾಗಿ, ಅಂಬಷ್ಟ, ಕೃಷ್ಣಾಯನರೆನ್ನುವುದು. ಅವನೇ ಕೃಷ್ಣಾಯನರಿಗೆ ಪೂರ್ವಪುರುಷನು.

"ಹೀಗೆ, ಅಂಬಷ್ಟ, ನಿನ್ನ ತಂದೆತಾಯಿಯರ ಹೆಸರು ಗೋತ್ರ ಗಳನ್ನು ಹಿಡಿದು ಹಿಂದೆಹೋದರೆ ಶಾಕ್ಯರು ಆರ್ಯಪುತ್ರರಾಗುವರು; ನೀನು ಶಾಕ್ಯರ ದಾಸೀಪುತ್ರನಾಗುವೆ."

ಹೀಗೆನ್ನಲು, ಆ ಬ್ರಾಹ್ಮಣ ಯುವಕರು ಭಗವಂತನನ್ನು ಕುರಿತು "ಪೂಜ್ಯ ಗೌತಮನು ಅಂಬಷ್ಟನನ್ನು ದಾಸೀಪುತ್ರವಾದದಿಂದ ಬಹುವಾಗಿ ತಗ್ಗಿಸದಿರಲಿ. ಅಂಬಷ್ಟನು ಸುಜಾತನು, ಕುಲಪುತ್ರನು, ಬಹುಶ್ರುತನು, ಕಲ್ಯಾಣವಾಕ್ಕರಣನು, ಪಂಡಿತನು. ಈ ವಿಷಯವಾಗಿ ಅಂಬಷ್ಟನು ಪೂಜ್ಯ ಗೌತಮನಿಗೆ ಉತ್ತರಕೊಡಬಲ್ಲನು" ಎಂದರು.

ಆಗ ಭಗವಂತನು "ಬ್ರಾಹ್ಮಣ ಯುವಕರೆ! ಅಂಬಷ್ಟನು ದುರ್ಜಾತನು, ಅಕುಲಪುತ್ರನು, ಅಲ್ಪಶ್ರುತನು, ಅಕಲ್ಯಾಣವಾಕ್ಕರಣನು, ದುಷ್ಪ್ರಜ್ಞನು; ಈ ವಿಷಯವಾಗಿ ಗೌತಮನಿಗೆ ಉತ್ತರಕೊಡಲಾರನು — ಎಂದು ನಿಮಗೆ ಎನಿಸಿದರೆ, ಅಂಬಷ್ಟನು ಕುಳಿತುಕೊಳ್ಳಲಿ; ನೀವು ನನ್ನೊಡನೆ ಈ ವಿಚಾರವಾಗಿ ಮಂತಣಮಾಡಿರಿ. ಹಾಗಲ್ಲದೆ, ಅಂಬಷ್ಟನು ಸುಜಾತನು, ಕುಲಪುತ್ರನು, ಬಹುಶ್ರುತನು, ಕಲ್ಯಾಣವಾಕ್ಕರಣನು, ಪಂಡಿತನು; ಈ ವಿಷಯದಲ್ಲಿ ಗೌತಮನಿಗೆ ಉತ್ತರಕೊಡಬಲ್ಲನು -- ಎಂದು ನಿಮಗೆನಿಸಿದರೆ, ನೀವು ಕುಳಿತುಕೊಳ್ಳಿರಿ; ಅಂಬಷ್ಟನು ನನ್ನೊಡನೆ ಮಂತಣ ಮಾಡಲಿ" ಎಂದನು.

"ಭೋ ಗೌತಮ, ಅಂಬಷ್ಟನು ಸುಜಾತನು, ಕುಲಪುತ್ರನು, ಬಹುಶ್ರುತನು, ಕಲ್ಯಾಣವಾಕ್ಕರಣನು, ಪಂಡಿತನು; ಈ ವಿಷಯದಲ್ಲಿ ಪೂಜ್ಯ ಗೌತಮನಿಗೆ ಉತ್ತರಕೊಡಬಲ್ಲನು. ನಾವು ಸುಮ್ಮನಾಗುವೆವು. ಅಂಬಷ್ಟನು ಪೂಜ್ಯ ಗೌತಮನೊಡನೆ ಮಂತಣಮಾಡಲಿ."

ಆಗ ಭಗವಂತನು "ಅಂಬಷ್ಟ! ಈಗ ಸಹಜವಾಗಿ ಈ ಪ್ರಶ್ನೆ ಬರುತ್ತದೆ; ಬೇಡವೆನಿಸಿದರೂ ಇದು ಉತ್ತರಕೊಡಬೇಕಾದುದು. ಉತ್ತರಕೊಡದಿದ್ದರೆ, ಒಂದರಿಂದ ಒಂದಕ್ಕೆ ಜಾರಿದರೆ, ಅಥವಾ ಸುಮ್ಮನಿದ್ದರೆ, ಇಲ್ಲವೆ ಹೊರಟುಹೋದರೆ — ಅಲ್ಲಿಯೇ ನಿನ್ನ ತಲೆ ಏಳಾಗಿ ಸೀಳಿಹೋಗುವುದು. ಏನೆಂಬೆ ಅಂಬಷ್ಟ? ವೃದ್ಧಬ್ರಾಹ್ಮಣರೂ ಮಹಾ ಆರ್ಯಕರಾದ ನಿನ್ನ ಆಚಾರ್ಯಪ್ರಾಚಾರ್ಯರೂ ಮಾತನಾಡುತ್ತಿರುವಾಗ, ಕೃಷ್ಣಾಯನರು ಎಲ್ಲಿಂದ ಜನಿಸಿಬಂದರು, ಕೃಷ್ಣಾಯನರ ಪೂರ್ವ ಪುರುಷನು ಯಾರು ಎಂಬುದನ್ನು ಏನಾದರೂ ಕೇಳಿರುವೆಯ?" ಎಂದನು.

ಹೀಗೆನ್ನಲು ಅಂಬಷ್ಟನು ಸುಮ್ಮನಿದ್ದನು. ಭಗವಂತನು ಅದನ್ನೇ ಎರಡನೆಯ ಸಲ ಕೇಳಿದನು. ಆಗಲೂ ಅಂಬಷ್ಟನು ಸುಮ್ಮನಿರಲು, ಭಗವಂತನು "ಇದಕ್ಕೆ ಉತ್ತರಕೊಡು, ಅಂಬಷ್ಟ. ಈಗ ನೀನು ಸುಮ್ಮನಿರುವ ಕಾಲವಲ್ಲ. ಅಂಬಷ್ಟ, ಸಹಜವಾಗಿ ಕೇಳಲೇಬೇಕಾದ ಪ್ರಶ್ನೆಯನ್ನು ತಥಾಗತನು ಮೂರನೆಯ ಸಲ ಕೇಳಿದಾಗಲೂ ಉತ್ತರ ಕೊಡದಿದ್ದರೆ, ನಿನ್ನ ತಲೆ ಆಗಲೇ ಏಳಾಗಿ ಸೀಳಿಹೋಗುವುದು" ಎಂದನು.

ಆ ಸಮಯದಲ್ಲಿ ವಜ್ರಪಾಣಿಯೆಂಬ ಯಕ್ಷನು ಸೂರ್ಯನ ಹಾಗೆ ಪ್ರಜ್ವಲಿಸುವ ಜ್ಯೋತಿರ್ಭೂತವಾದ ದೊಡ್ಡ ಕಬ್ಬಿಣದ ರಾಶಿಯನ್ನು ತಂದು, "ಭಗವಂತನು ಮೂರನೆಯ ಸಲ ಕೇಳಿದ ಸಹಜವಾದ ಪ್ರಶ್ನೆಗೆ ಉತ್ತರಕೊಡದಿದ್ದರೆ, ಆಗಲೇ ಇವನ ತಲೆಯನ್ನು ಏಳಾಗಿ ಸೀಳುವೆನು" ಎಂದು ಅಂಬಷ್ಟನ ತಲೆಯಮೇಲೆ ಆಕಾಶದಲ್ಲಿ ನಿಂತಿದ್ದನು.

ಆ ವಜ್ರಪಾಣಿ ಯಕ್ಷನನ್ನು ಭಗವಂತನೂ ಅಂಬಷ್ಟನೂ ನೋಡಿದರು. ಅಂಬಷ್ಟನು ಅದನ್ನು ಕಂಡು ಹೆದರಿ, ಬೆಚ್ಚಿ, ರೋಮಾಂಚಗೊಂಡು, ಭಗವಂತನ ಮರೆಹೊಕ್ಕು, ಅವನ ರಕ್ಷೆಬೇಡಿ, ಅವನಿಗೆ ಶರಣಾಗಿ, ಬಳಿಬಂದು ಕುಳಿತು, "ಪೂಜ್ಯ ಗೌತಮನು ಹೇಳಿದುದೇನು? ಪೂಜ್ಯ ಗೌತಮನು ಪುನಃ ಹೇಳಬೇಕು" ಎಂದನು.

"ಏನೆಂಬೆ, ಅಂಬಷ್ಟ? ವೃದ್ಧಬ್ರಾಹ್ಮಣರೂ, ಮಹಾ ಆರ್ಯಕರಾದ ನಿನ್ನ ಆಚಾರ್ಯಪ್ರಾಚಾರ್ಯರೂ ಮಾತನಾಡುತ್ತಿರುವಾಗ ಕೃಷ್ಣಾಯನರು ಎಲ್ಲಿಂದ ಜನಿಸಿಬಂದರು, ಕೃಷ್ಣಾಯನರ ಪೂರ್ವಪುರುಷನು ಯಾರು ಎಂಬುದನ್ನು ಏನಾದರೂ ಕೇಳಿರುವೆಯ?"

"ಪೂಜ್ಯ ಗೌತಮನು ಹೇಳಿದಂತೆಯೇ ಕೇಳಿರುವೆನು, ಭೋ ಗೌತಮ. ಕೃಷ್ಣಾಯನರು ಜನಿಸಿಬಂದುದು ಹಾಗೆಯೇ. ಕೃಷ್ಣಾಯನರ ಪೂರ್ವಪುರುಷನು ಅವನೇ."

ಅಂಬಷ್ಟನು ಹೀಗೆನ್ನಲು, ಆ ಬ್ರಾಹ್ಮಣ ಯುವಕರು ದನಿಯೆತ್ತಿ ಕೂಗಾಡುತ್ತ, ಕೋಲಾಹಲಮಾಡುತ್ತ "ಅಂಬಷ್ಟನು ದುರ್ಜಾತನಂತೆ! ಕುಲಪುತ್ರನಲ್ಲವಂತೆ! ಶಾಕ್ಯರ ದಾಸೀಪುತ್ರನಂತೆ! ಶಾಕ್ಯರು ಅಂಬಷ್ಟನಿಗೆ

ಆರ್ಯಪುತ್ರರಂತೆ! ಧರ್ಮದಂತೆಯೇ ಮಾತನಾಡುವ ಶ್ರಮಣ ಗೌತಮ ನನ್ನು ನಂಬಲಾಗದೆಂದು ತಿಳಿದಿರಲಿಲ್ಲ" ಎಂದರು.

ಆಗ, "ಈ ಯುವಕರು ದಾಸೀಪುತ್ರವಾದದಿಂದ ಅಂಬಷ್ಟನನ್ನು ಹೀನೈಸಬೇಕೆಂದು ದೃಢಮಾಡಿದ್ದಾರೆ. ಇವನನ್ನು ಬಿಡಿಸೋಣ" ಎಂದು ಕೊಂಡು, ಭಗವಂತನು "ಬ್ರಾಹ್ಮಣ ಯುವಕರೆ! ದಾಸಿಯ ಮಗನೆಂದು ನೀವು ಅಂಬಷ್ಟನನ್ನು ಅತಿಯಾಗಿ ಹೀನೈಸಬೇಡಿ. ಆ ಕೃಷ್ಣನು ಶ್ರೇಷ್ಠ ನಾದ ಋಷಿಯಾದನು. ಅವನು ದಕ್ಷಿಣ ಜನಪದಕ್ಕೆ ಹೋಗಿ ಅತ್ಯುತ್ಕೃಷ್ಟವಾದ ಮಂತ್ರಗಳನ್ನು ಕಲಿತು, ಇಕ್ಷ್ವಾಕುರಾಜನ ಬಳಿಸಾರಿ, ಮದ್ರರೂಪಿಯೆಂಬ ಅವನ ಮಗಳನ್ನು ಯಾಚಿಸಿದನು.

"ಅದಕ್ಕೆ ಇಕ್ಷ್ವಾಕುರಾಜನು 'ಅರೇ! ನನ್ನ ಮಗಳಾದ ಮದ್ರ ರೂಪಿಯನ್ನು ಯಾಚಿಸುವ ನನ್ನ ದಾಸೀಪುತ್ರನಿಗೆ ಸಮಾನನಾದ ಇವ ನಾರು?' ಎಂದು ಕೋಪಗೊಂಡು, ಮನಸ್ಸುಕೆಟ್ಟು ಬಾಣಹೂಡಿದನು. ಆದರೆ ಆ ಬಾಣವನ್ನು ಬಿಡುವುದಕ್ಕಾಗಲಿ ಪ್ರತಿಸಂಹಾರಮಾಡುವುದಕ್ಕಾ ಗಲಿ ಅವನಿಂದ ಆಗದೆಹೋಯಿತು.

"ಆಗ, ಅಲ್ಲಿಯ ಬ್ರಾಹ್ಮಣರೂ ಅಮಾತ್ಯರ ಪರಿಷತ್ತೂ ಋಷಿ ಯಾದ ಕೃಷ್ಣನ ಬಳಿಬಂದು, 'ಭದಂತೇ, ರಾಜನಿಗೆ ಕ್ಷೇಮವಾಗಲಿ. ರಾಜನಿಗೆ ಕ್ಷೇಮವಾಗಲಿ, ಭದಂತೇ!' ಎಂದರು.

"'ರಾಜನಿಗೆ ಕ್ಷೇಮವಾಗುವುದು. ಆದರೆ ರಾಜನು ಆ ಬಾಣ ವನ್ನು ಕೆಳಗೆ ಬಿಟ್ಟರೆ, ಅವನು ಜಯಿಸಿರುವವರೆಗಿನ ಪೃಥ್ವಿಯಷ್ಟೂ ಚೂರಾಗುವುದು.'

"'ಭದಂತೇ! ರಾಜನಿಗೆ ಕ್ಷೇಮವಾಗಲಿ, ಜನಪದಕ್ಕೆ ಕ್ಷೇಮ ವಾಗಲಿ.'

"'ರಾಜನಿಗೂ ಅವನ ಜನಪದಕ್ಕೂ ಕ್ಷೇಮವಾಗುವುದು. ಆದರೆ ರಾಜನು ಈ ಬಾಣವನ್ನು ಮೇಲೆ ಬಿಟ್ಟರೆ, ರಾಜನು ಜಯಿಸಿರುವವರೆಗಿನ ಅಷ್ಟಕ್ಕೂ ದೇವತೆಯು ಏಳುವರ್ಷ ಮಳೆಗರೆಯುವುದಿಲ್ಲ.'

"'ಭದಂತೇ! ರಾಜನಿಗೂ ಜನಪದಕ್ಕೂ ಕ್ಷೇಮವಾಗಲಿ. ದೇವ ತೆಯೂ ಮಳೆಗರೆಯಲಿ.'

"'ರಾಜನಿಗೂ ಜನಪದಕ್ಕೂ ಕ್ಷೇಮವಾಗುವುದು. ದೇವತೆಯೂ ಮಳೆಗರೆಯುವನು. ಆದರೆ, ರಾಜನು ಬಾಣವನ್ನು ಜ್ಯೇಷ್ಠಕುಮಾರನಲ್ಲಿ ಪ್ರತಿಸ್ಥಾಪಿಸಲಿ. ಕುಮಾರನಿಗೆ ಕೂದಲು ಅಲುಗದ ಹಾಗೆ ಕ್ಷೇಮ ವಾಗುವುದು.'

"ಆಗ ಆ ಬ್ರಾಹ್ಮಣರೂ ಅಮಾತ್ಯರೂ ಇಕ್ಷ್ವಾಕುವನ್ನು ಕುರಿತು 'ಇಕ್ಷ್ವಾಕುವು ಬಾಣವನ್ನು ಜ್ಯೇಷ್ಠಕುಮಾರನಲ್ಲಿ ಪ್ರತಿಸ್ಥಾಪಿಸಲಿ. ಕುಮಾರನಿಗೆ ಕೂದಲು ಅಲುಗದಂತೆ ಕ್ಷೇಮವಾಗುವುದು' ಎಂದರು.

"ಆಗ ಇಕ್ಷ್ವಾಕುರಾಜನು ಆ ಬಾಣವನ್ನು ಜ್ಯೇಷ್ಠಕುಮಾರನ ಮೇಲೆ ಬಿಟ್ಟನು. ಕುಮಾರನಿಗೆ ಕೂದಲು ಅಲುಗದ ಹಾಗೆ ಕ್ಷೇಮ ವಾಯಿತು. ಆಗ ಅವನು ಭಯಪಟ್ಟು, ಅತಿಯಾದ ದಂಡದಿಂದ ಬೆದರಿ, ಮದ್ರರೂಪಿ ಕುಮಾರಿಯನ್ನು ಅವನಿಗೆ ಕೊಟ್ಟನು.

"ಬ್ರಾಹ್ಮಣ ಯುವಕರೆ! ದಾಸಿಯ ಮಗನೆಂದು ನೀವು ಅಂಬಷ್ಟ ನನ್ನು ಅತಿಯಾಗಿ ಹೀನೈಸಬೇಡಿ. ಆ ಕೃಷ್ಣನು ಶ್ರೇಷ್ಠನಾದ ಋಷಿ ಯಾದನು" ಎಂದನು.

ಆಗ, ಭಗವಂತನು ಅಂಬಷ್ಟನನ್ನು ಕರೆದು, "ಏನೆಂಬೆ, ಅಂಬಷ್ಟ? ಒಬ್ಬ ಕ್ಷತ್ರಿಯ ಕುಮಾರನು ಬ್ರಾಹ್ಮಣಕನ್ಯೆಯ ಸಂಗಮಾಡುವನು. ಆ ಸಂಗದಿಂದ ಒಬ್ಬ ಮಗ ಹುಟ್ಟುವನು. ಹೀಗೆ ಕ್ಷತ್ರಿಯ ಕುಮಾರ ನಿಂದ ಬ್ರಾಹ್ಮಣ ಕನ್ಯೆಯಲ್ಲಿ ಹುಟ್ಟಿದ ಮಗನಿಗೆ ಬ್ರಾಹ್ಮಣರು ಆಸನ ಉದಕಗಳನ್ನು ಕೊಡುವರೆ?" ಎಂದನು.

"ಕೊಡುವರು, ಗೌತಮ."

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ, ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು?"

"ಉಣಗೊಡಿಸುವರು, ಗೌತಮ."

"ಆದರೆ, ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೊ? ಇಲ್ಲವೊ?"

"ಕಲಿಸುವರು, ಗೌತಮ."

"ಆದರೆ, ಅವರ ಹೆಂಗಸರು ಅವನೊಡನೆ ಸೇರುವರೊ? ಇಲ್ಲವೊ?"

"ಸೇರುವರು, ಗೌತಮ."

"ಆದರೆ, ಕ್ಷತ್ರಿಯರು ಕ್ಷತ್ರಿಯಾಭಿಷೇಕದಿಂದ ಅವನಿಗೆ ಅಭಿಷೇಕ ಮಾಡುವರೊ?"

"ಅದಾಗದಾಗದು, ಗೌತಮ."

"ಅದಕ್ಕೆ ಕಾರಣ?"

"ಅವನ ತಾಯಿಯ ಕಡೆಯ ಉತ್ಪನ್ನ ಸರಿಯಾದುದಲ್ಲ, ಗೌತಮ."

"ಏನೆಂಬೆ, ಅಂಬಷ್ಟ? ಬ್ರಾಹ್ಮಣ ಕುಮಾರನೊಬ್ಬನು ಕ್ಷತ್ರಿಯ ಕನ್ಯೆಯ ಸಂಗಮಾಡುವನು. ಆ ಸಂಗದಿಂದ ಒಬ್ಬ ಮಗ ಹುಟ್ಟುವನು. ಹೀಗೆ ಬ್ರಾಹ್ಮಣ ಕುಮಾರನಿಂದ ಕ್ಷತ್ರಿಯ ಕನ್ಯೆಯಲ್ಲಿ ಹುಟ್ಟಿದ ಮಗನಿಗೆ ಬ್ರಾಹ್ಮಣರು ಆಸನ ಉದಕಗಳನ್ನು ಕೊಡುವರೆ?"

"ಕೊಡುವರು, ಗೌತಮ."

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ, ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು?"

"ಉಣಗೊಡಿಸುವರು, ಗೌತಮ."

"ಆದರೆ, ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೊ? ಇಲ್ಲವೊ?"

"ಕಲಿಸುವರು, ಗೌತಮ."

"ಆದರೆ, ಅವರ ಹೆಂಗಸರು ಅವನೊಡನೆ ಸೇರುವರೊ? ಇಲ್ಲವೊ?"

"ಸೇರುವರು, ಗೌತಮ."

"ಆದರೆ, ಕ್ಷತ್ರಿಯರು ಕ್ಷತ್ರಿಯಾಭಿಷೇಕದಿಂದ ಅವನಿಗೆ ಅಭಿಷೇಕ ಮಾಡುವರೊ?"

"ಅದಾಗದಾಗದು, ಗೌತಮ."

"ಅದಕ್ಕೆ ಕಾರಣ?"

"ಅವನ ತಂದೆಯ ಕಡೆಯ ಉತ್ಪನ್ನ ಸರಿಯಾದುದಲ್ಲ, ಗೌತಮ."

"ಹೀಗೆ, ಅಂಬಷ್ಟ, ಸ್ತ್ರೀಯರೊಡನೆ ಸ್ತ್ರೀಯರನ್ನು ಹೋಲಿಸಲಿ, ಪುರುಷರೊಡನೆ ಪುರುಷರನ್ನು ಹೋಲಿಸಲಿ, ಕ್ಷತ್ರಿಯರೇ ಶ್ರೇಷ್ಠರು; ಬ್ರಾಹ್ಮಣರು ಹೀನರು.

"ಏನೆಂಬೆ, ಅಂಬಷ್ಟ? ಬ್ರಾಹ್ಮಣರು, ಯಾವುದಾದರೂ ಪ್ರಕರಣದಲ್ಲಿ, ಒಬ್ಬ ಬ್ರಾಹ್ಮಣನಿಗೆ ತಲೆ ಬೋಳಿಸಿ, ಬೂದಿ ಸುರಿದು, ರಾಷ್ಟ್ರದಿಂದಲೋ ನಗರದಿಂದಲೋ ಹೊರಗೆ ಅಟ್ಟುತ್ತಾರೆ. ಅವನಿಗೆ ಬ್ರಾಹ್ಮಣರು ಆಸನ ಉದಕಗಳನ್ನು ಕೊಡುವರೆ?"

"ಇಲ್ಲ, ಗೌತಮ."

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ, ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು?

"ಅದೂ ಇಲ್ಲ, ಗೌತಮ."

"ಆದರೆ, ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೊ? ಇಲ್ಲವೊ?"

"ಅದೂ ಇಲ್ಲ, ಗೌತಮ."

"ಆದರೆ, ಅವರ ಹೆಂಗಸರು ಅವನೊಡನೆ ಸೇರುವರೊ? ಇಲ್ಲವೊ?"

"ಸೇರುವುದಿಲ್ಲ, ಗೌತಮ."

"ಏನೆಂಬೆ, ಅಂಬಷ್ಟ? ಆದರಂತೆಯೇ ಕ್ಷತ್ರಿಯರೂ ಯಾವುದಾದರೂ ಪ್ರಕರಣದಲ್ಲಿ, ಕ್ಷತ್ರಿಯನೊಬ್ಬನಿಗೆ ತಲೆ ಬೋಳಿಸಿ, ಬೂದಿ ಸುರಿದು, ರಾಷ್ಟ್ರದಿಂದಲೋ ನಗರದಿಂದಲೋ ಹೊರಗೆ ಅಟ್ಟಿದರೆ; ಅವನಿಗೆ ಬ್ರಾಹ್ಮಣರು ಆಸನ ಉದಕಗಳನ್ನು ಕೊಡುವರೆ?"

"ಕೊಡುವರು, ಗೌತಮ."

"ಆದರೆ ಶ್ರಾದ್ಧದಲ್ಲಿ, ಸ್ಥಾಲೀಪಾಕದಲ್ಲಿ, ಯಜ್ಞದಲ್ಲಿ, ಕರೆದಿಕ್ಕಿದ ಊಟದಲ್ಲಿ, ಬ್ರಾಹ್ಮಣರು ಅವನನ್ನು ಉಣಗೊಡಿಸುವರೇನು?"

"ಉಣಗೊಡಿಸುವರು, ಗೌತಮ."

"ಆದರೆ, ಬ್ರಾಹ್ಮಣರು ಅವನಿಗೆ ಮಂತ್ರ ಕಲಿಸುವರೊ? ಇಲ್ಲವೊ?"

"ಕಲಿಸುವರು, ಗೌತಮ."

"ಆದರೆ, ಅವರ ಹೆಂಗಸರು ಅವನೊಡನೆ ಸೇರುವರೊ? ಇಲ್ಲವೊ?"

"ಸೇರುವರು, ಗೌತಮ."

"ಆದರೆ, ಅಂಬಷ್ಟ, ಕ್ಷತ್ರಿಯರು ತಲೆ ಬೋಳಿಸಿ, ಬೂದಿ ಸುರಿದು, ರಾಷ್ಟ್ರದಿಂದಲೋ ನಗರದಿಂದಲೋ ಹೊರಗಟ್ಟಿದಾಗಲೇ ಅಷ್ಟರಿಂದಲೇ

ಕ್ಷತ್ರಿಯನು ಪರಮನಿಹೀನತೆ ಪಡೆಯುತ್ತಾನೆ. ಹೀಗೆ, ಅಂಬಷ್ಟ, ಕ್ಷತ್ರಿಯನು ಪರಮನಿಹೀನತೆ ಪಡೆದರೂ, ಆಗಲೂ ಕ್ಷತ್ರಿಯರೇ ಶ್ರೇಷ್ಠರು; ಬ್ರಾಹ್ಮಣರು ಹೀನರು.

"ಅಂಬಷ್ಟ! ಬ್ರಹ್ಮ ಸನತ್ಕುಮಾರನು

'ಗೋತ್ರವನ್ನು ಅನುಸರಿಸುವ ಜನರಲ್ಲಿ ಕ್ಷತ್ರಿಯನು ಶ್ರೇಷ್ಠ;
ವಿದ್ಯಾಚರಣಸಂಪನ್ನನಾದವನು ದೇವಮನುಷ್ಯರಲ್ಲಿ ಶ್ರೇಷ್ಠ'

ಎಂದು ಈ ಗಾಹೆಗಳನ್ನು ನುಡಿದಿದ್ದಾನೆ. ಆ ಬ್ರಹ್ಮ ಸನತ್ಕುಮಾರನು ಹಾಡಿದ ಗಾಹೆಗಳು ಒಳ್ಳೆಯವು, ಕೆಟ್ಟವಲ್ಲ; ಆ ಮಾತು ಒಳ್ಳೆಯವು, ಕೆಟ್ಟವಲ್ಲ; ಅವು ಅರ್ಥವುಳ್ಳವು, ಅರ್ಥವಿಲ್ಲದುವಲ್ಲ — ಎಂದು ನನ್ನ ಮತ ಕೂಡ. ನಾನು ಕೂಡ, ಅಂಬಷ್ಟ,

'ಗೋತ್ರವನ್ನು ಅನುಸರಿಸುವ ಜನರಲ್ಲಿ ಕ್ಷತ್ರಿಯನು ಶ್ರೇಷ್ಠ;
ವಿದ್ಯಾಚರಣಸಂಪನ್ನನಾದವನು ದೇವಮನುಷ್ಯರಲ್ಲಿ ಶ್ರೇಷ್ಠ'

ಎಂದು ಹೇಳುವೆನು."

[ಮೊದಲ ಭಾಣವಾರ ಮುಗಿಯಿತು.]

"ಆದರೆ, ಭೋ ಗೌತಮ, ಆ ಚರಣ ಯಾವುದು? ವಿದ್ಯೆ ಯಾವುದು?"

"ಅಂಬಷ್ಟ! ಅತ್ಯುತ್ತಮವಾದ ವಿದ್ಯೆ ಚರಣಗಳನ್ನು ಸಂಪಾದಿಸುವುದಕ್ಕೆ 'ನೀನು ನನಗೆ ಅರ್ಹ, ನೀನು ನನಗೆ ಅರ್ಹನಲ್ಲ' ಎಂದು ಜಾತಿ, ಗೋತ್ರ, ಮಾನಗಳ ಮಾತನ್ನು ಹೇಳುವುದಿಲ್ಲ. ಹೆಣ್ಣು ಕೊಡುವಾಗ, ಹೆಣ್ಣು ತರುವಾಗ, 'ನೀನು ನನಗೆ ಅರ್ಹ, ನೀನು ನನಗೆ ಅರ್ಹನಲ್ಲ', ಎಂದು ಜಾತಿ, ಗೋತ್ರ, ಮಾನಗಳ ಮಾತನ್ನು ಹೇಳುವರು. ಆದರೆ, ಅಂಬಷ್ಟ, ಈ ಜಾತಿವಾದ, ಗೋತ್ರವಾದ, ಮಾನವಾದ, ಹೆಣ್ಣು ಕೊಟ್ಟು ತರುವುದು — ಇವುಗಳ ವಿಶೇಷವಾದ ಬಂಧನಕ್ಕೆ ಸಿಕ್ಕಿದವರು ಅತ್ಯುತ್ತಮವಾದ ವಿದ್ಯಾಚರಣಗಳ ಸಂಪಾದನೆಗೆ ದೂರವಾದವರು; ಈ ಬಂಧನಗಳನ್ನು ಬಿಟ್ಟರೆ ಎಲ್ಲವನ್ನೂ ಮೀರಿಸಿದಂತಹ ವಿದ್ಯಾಚರಣಗಳ ಸಂಪತ್ತು ಸಾಕ್ಷಾತ್ಕಾರವಾಗುವುದು."

"ಆದರೆ, ಗೌತಮ, ಆ ಚರಣ ಯಾವುದು? ಆ ವಿದ್ಯೆ ಯಾವುದು?"

"ಅಂಬಷ್ಟ, ಸರ್ವಜ್ಞನಾದ ಭಗವಂತನು ಲೋಕದಲ್ಲಿ ಹುಟ್ಟಿ, ಧರ್ಮವನ್ನು ಸಾರಿ, ಬ್ರಹ್ಮಚರ್ಯವನ್ನು ಪ್ರಕಾಶಗೊಳಿಸುವನು. ಅದನ್ನು ಕೇಳಿದ ಶ್ರೋತೃವು ಶ್ರದ್ಧೆಯಿಂದ ಪ್ರವ್ರಜ್ಯವನ್ನು ಕೈಕೊಳ್ಳುವನು. ಅವನು ಕ್ಷುಲ್ಲಶೀಲ, ಮಧ್ಯಮಶೀಲ, ದೀರ್ಘಶೀಲಗಳನ್ನು ನಡಿಸಿ ಶೀಲಸಂಪನ್ನನಾಗುವನು.

"ಹೀಗೆ ಭಿಕ್ಷುವು ಶೀಲಸಂಪನ್ನನಾಗಿ, ಭಯವನ್ನು ತೊರೆದು ಸುಖವಾಗಿ ವಾಸಮಾಡುವನು. ಅನಂತರ, ತನ್ನ ಆರು ಇಂದ್ರಿಯಗಳ ಬಾಗಿಲುಗಳನ್ನೂ ಕಾಯ್ದು ಕಾಪಾಡಿಕೊಳ್ಳುವನು. ಇಂದ್ರಿಯದ್ವಾರ ಗೋಪನವಾದ ಮೇಲೆ ಸ್ಮೃತಿಸಂಪ್ರಜಾನ್ಯಗಳನ್ನು ಸಂಪಾದಿಸಿ, ಸಂತುಷ್ಟಿಯಿಂದ ಕೂಡಿ, ಏಕಾಂತವಾಸವನ್ನು ಅನುಭವಿಸುತ್ತ, ಐದು ನಿವಾರಣಗಳನ್ನು ಅತಿಕ್ರಮಿಸುವನು. ಅನಂತರ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ಧ್ಯಾನಗಳನ್ನು ಸಂಪಾದಿಸಿ ವಾಸಿಸುವನು. ಇವು ಅವನ 'ಚರಣ' ವಾಗುವುವು.

"ಹೀಗೆ ಚಿತ್ತವನ್ನು ಒಂದುಕಡೆ ನಿಲ್ಲಿಸಿ, ಭಿಕ್ಷುವು ಅದನ್ನು ಪರಿಶುದ್ಧವಾಗಿ, ಪರಿಶುಭ್ರವಾಗಿ ಮಾಡುವನು. ಅದು ಕೊಳೆಗಳು ಇಲ್ಲದೆ, ಉಪಕ್ಲೇಶಗಳು ಹೋಗಿ, ಮೃದುವಾಗಿ, ಕೆಲಸಕ್ಕೆ ಸಿದ್ಧವಾಗಿ, ಸ್ಥಿತವಾಗಿ, ಸ್ಥಿರವಾಗಲು; ಭಿಕ್ಷುವು ಜ್ಞಾನದರ್ಶನಕ್ಕಾಗಿ ಚಿತ್ತವನ್ನು ಬಗ್ಗಿಸುವನು. ಅದನ್ನು ಸಾಧಿಸಿ, ಕ್ರಮವಾಗಿ ಮನೋಮಯ ಕಾಯ ನಿರ್ಮಾಣ, ಋದ್ಧಿವಿಧ, ದಿವ್ಯಶ್ರೋತ್ರ, ಚೇತೋಪರಿಯಜ್ಞಾನ, ಪೂರ್ವನಿವಾಸಾನುಸ್ಮೃತಿಜ್ಞಾನ, ಸತ್ತ್ವಗಳ ಚ್ಯುತೋಪಪಾತಜ್ಞಾನ, ಆಸ್ರವಕ್ಷಯ ಜ್ಞಾನಗಳಿಗಾಗಿ ಚಿತ್ತವನ್ನು ಬಗ್ಗಿಸಿ ಸಾಧಿಸುವನು. ಇವು ಅವನ 'ವಿದ್ಯೆ'ಯಾಗುವುವು. ಇದು ಒಂದಕ್ಕಿಂತ ಒಂದು ಹೆಚ್ಚಿನ ವಿದ್ಯೆ.

"ಆ ಭಿಕ್ಷುವನ್ನು, ಅಂಬಷ್ಟ, ವಿದ್ಯಾಸಂಪನ್ನನೆನ್ನುವರು, ಚರಣಸಂಪನ್ನನೆನ್ನುವರು, ವಿದ್ಯಾಚರಣಸಂಪನ್ನನೆನ್ನುವರು. ಈ ವಿದ್ಯಾಚರಣ ಸಂಪದಕ್ಕಿಂತ ಮೇಲಾದ ಸಿಹಿಯಾದ ಬೇರೆ ವಿದ್ಯಾಸಂಪದವಿಲ್ಲ, ಚರಣ ಸಂಪದವಿಲ್ಲ.

"ಅಂಬಷ್ಟ! ಈ ಅತ್ಯುತ್ತಮವಾದ ವಿದ್ಯಾಚರಣಗಳ ಸಂಪಾದನೆಗೆ ನಾಲ್ಕು ಅಪಾಯಮುಖಗಳು, ಎಂದರೆ ಮಾಡಿದ ಪ್ರಯತ್ನವು

ವ್ಯರ್ಥವಾಗಿ ಸೋರಿಹೋಗುವ ಕಂಡಿಗಳು, ಉಂಟು. ಆ ನಾಲ್ಕು ಯಾವುವು?

"ಒಬ್ಬನು — ಶ್ರಮಣನೋ, ಬ್ರಾಹ್ಮಣನೋ — ಈ ಅನುತ್ತರವಾದ ವಿದ್ಯಾಚರಣಸಂಪದವನ್ನು ಚೆನ್ನಾಗಿ ಪಡೆಯದೆ; ಅರಣಿ, ಕಮಂಡಲ, ಸೂಜಿ ಮುಂತಾದ ತಾಪಸಪರಿಷ್ಕಾರಗಳು ತುಂಬಿದ ಅಡ್ಡೆಯನ್ನು ಹೊತ್ತು, 'ಬಿದ್ದ ಹಣ್ಣು ತಿನ್ನುವವ'ನಾಗುವೆನೆಂದು ಅರಣ್ಯದೊಳಗೆ ಹೋಗುವನು. ಅವನು ವಿದ್ಯಾಚರಣಸಂಪನ್ನರ ಪರಿಚಾರಕನಾಗುವುದಕ್ಕೆ ಅರ್ಹನಲ್ಲದೆ ಬೇರೆಯಲ್ಲ. ಈ ಶ್ರೇಷ್ಠವಾದ ವಿದ್ಯಾಚರಣಸಂಪದಕ್ಕೆ ಇದು ಮೊದಲನೆಯ ಅಪಾಯಮುಖ.

"ಯಾವನಾದರೂ ಒಬ್ಬ ಶ್ರಮಣನು, ಅಥವಾ ಬ್ರಾಹ್ಮಣನು, ಈ ಅನುತ್ತರವಾದ ವಿದ್ಯಾಚರಣಸಂಪದವನ್ನು ಚೆನ್ನಾಗಿ ಪಡೆಯದೆ, ಬಿದ್ದ ಹಣ್ಣು ತಿನ್ನುವುದನ್ನೂ ಚೆನ್ನಾಗಿ ಸಾಧಿಸದೆ; ಗುದ್ದಲಿ ಬುಟ್ಟಿಗಳನ್ನು ಕೊಂಡು, 'ಕಂದಮೂಲ ಫಲಗಳನ್ನು ತಿನ್ನುವವ'ನಾಗುವೆನೆಂದು ಅರಣ್ಯದೊಳಗೆ ಹೋಗುವನು. ಅವನು ವಿದ್ಯಾಚರಣಸಂಪನ್ನರ ಪರಿಚಾರಕನಾಗುವುದಕ್ಕೆ ಅರ್ಹನಲ್ಲದೆ ಬೇರೆಯಲ್ಲ. ಈ ಶ್ರೇಷ್ಠವಾದ ವಿದ್ಯಾಚರಣಸಂಪದಕ್ಕೆ ಇದು ಎರಡನೆಯ ಅಪಾಯಮುಖ.

"ಅಂಬಷ್ಟ! ಶ್ರಮಣನಾಗಲಿ, ಬ್ರಾಹ್ಮಣನಾಗಲಿ, ಈ ಅನುತ್ತರವಾದ ವಿದ್ಯಾಚರಣಸಂಪದವನ್ನು ಚೆನ್ನಾಗಿ ಪಡೆಯದೆ, ಬಿದ್ದ ಹಣ್ಣು ತಿನ್ನುವುದನ್ನೂ ಸಾಧಿಸದೆ, ಕಂದಮೂಲ ಫಲ ತಿನ್ನುವುದನ್ನೂ ನಡಿಸದೆ; ಗ್ರಾಮ ಅಥವಾ ನಗರದ ಸಮೀಪದಲ್ಲಿ ಅಗ್ನಿಗೆ ಮನೆಮಾಡಿಕೊಂಡು ಅಗ್ನಿಪರಿಚರ್ಯೆಮಾಡಿಕೊಂಡಿರುವನು. ಅವನು ವಿದ್ಯಾಚರಣಸಂಪನ್ನರ ಪರಿಚಾರಕನಾಗುವುದಕ್ಕೆ ಅರ್ಹನಲ್ಲದೆ ಬೇರೆಯಲ್ಲ. ಈ ಶ್ರೇಷ್ಠವಾದ ವಿದ್ಯಾಚರಣಸಂಪದಕ್ಕೆ ಇದು ಮೂರನೆಯ ಅಪಾಯಮುಖ.

"ಯಾವನಾದರೂ ಶ್ರಮಣನು ಅಥವಾ ಬ್ರಾಹ್ಮಣನು ಈ ಅನುತ್ತರವಾದ ವಿದ್ಯಾಚರಣಸಂಪದವನ್ನು ಚೆನ್ನಾಗಿ ಪಡೆಯದೆ, ಬಿದ್ದ ಹಣ್ಣು ತಿನ್ನುವುದನ್ನೂ ಸಾಧಿಸದೆ, ಕಂದಮೂಲ ಫಲ ತಿನ್ನುವುದನ್ನೂ ನಡಿಸದೆ, ಅಗ್ನಿಪರಿಚರ್ಯೆಯನ್ನೂ ಮಾಡದೆ; ನಾಲ್ಕು ಮಹಾಮಾರ್ಗಗಳ ಬಳಿಯಲ್ಲಿ ನಾಲ್ಕುಬಾಗಿಲ ಮನೆಮಾಡಿ, 'ಈ ನಾಲ್ಕು ದಿಕ್ಕುಗಳಿಂದ ಬರುವ

ಶ್ರಮಣ ಬ್ರಾಹ್ಮಣರನ್ನು ನನ್ನ ಶಕ್ತಿ ಬಲಗಳಿಗೆ ತಕ್ಕಹಾಗೆ ಪೂಜೆ ಮಾಡುವೆನು' ಎಂದು ವಾಸಮಾಡುವನು. ಅವನು ವಿದ್ಯಾಚರಣ ಸಂಪನ್ನರ ಪರಿಚಾರಕನಾಗುವುದಕ್ಕೆ ಅರ್ಹನಲ್ಲದೆ ಬೇರೆಯಲ್ಲ. ಈ ಶ್ರೇಷ್ಠವಾದ ವಿದ್ಯಾಚರಣಸಂಪದಕ್ಕೆ ಇದು ನಾಲ್ಕನೆಯ ಅಪಾಯಮುಖ.

"ಈ ಅನುತ್ತರವಾದ ವಿದ್ಯಾಚರಣಸಂಪದಕ್ಕೆ ಇವು ನಾಲ್ಕು ಅಪಾಯಮುಖಗಳು, ಅಂಬಷ್ಟ."

"ಏನು, ಅಂಬಷ್ಟ? ಈ ಅನುತ್ತರವಾದ ವಿದ್ಯಾಚರಣಸಂಪದ ವನ್ನು ನೀನು ಆಚಾರ್ಯನಿಂದ ತಿಳಿದಿರುವೆಯೇನು?"

"ಇಲ್ಲ, ಗೌತಮ. ಆಚಾರ್ಯನಿಂದ ಕಲಿತುದೆಲ್ಲಿ! ಈ ಅನುತ್ತರ ವಾದ ವಿದ್ಯಾಚರಣಸಂಪದವೆಲ್ಲಿ! ಆಚಾರ್ಯನಿಂದ ನಾನು ಕಲಿತುದು ಈ ಅನುತ್ತರವಾದ ವಿದ್ಯಾಚರಣಸಂಪದಕ್ಕೆ ದೂರವಾದುದು."

"ಏನು, ಅಂಬಷ್ಟ? ಈ ಅನುತ್ತರವಾದ ವಿದ್ಯಾಚರಣಸಂಪದ ವನ್ನು ನೀನು ತಿಳಿಯದಿದ್ದರೂ; ತಾಪಸಪರಿಷ್ಕಾರಗಳು ತುಂಬಿದ ಅಡ್ಡೆಯನ್ನು ಕೊಂಡು, ತಾನಾಗಿ ಬಿದ್ದ ಹಣ್ಣುಗಳನ್ನು ತಿಂದು ವಾಸಿಸುವುದಕ್ಕಾಗಿ ಅರಣ್ಯಕ್ಕೆ ಹೋಗುವುದನ್ನು ಆಚಾರ್ಯನಿಂದ ಕಲಿ ತಿರುವೆಯ?"

"ಅದೂ ಇಲ್ಲ, ಗೌತಮ."

"ಹಾಗಾದರೆ, ಅಂಬಷ್ಟ, ನೀನು ಈ ಅನುತ್ತರವಾದ ವಿದ್ಯಾಚರಣ ಸಂಪದವನ್ನು ಸಾಧಿಸದೆ, ಬಿದ್ದ ಹಣ್ಣು ತಿಂದು ವಾಸಿಸದಿದ್ದರೂ; ಗುದ್ದಲಿ ಬುಟ್ಟಿಗಳನ್ನು ಕೊಂಡು, ಕಂದಮೂಲ ಫಲಗಳನ್ನು ತಿಂದು ವಾಸಿಸುವೆ ನೆಂದು ಅರಣ್ಯಕ್ಕೆ ಹೋಗುವುದನ್ನು ಆಚಾರ್ಯನಿಂದ ಕಲಿತಿರುವೆಯ?"

"ಅದೂ ಇಲ್ಲ, ಗೌತಮ."

"ಏನು, ಅಂಬಷ್ಟ? ನೀನು ಈ ಅನುತ್ತರವಾದ ವಿದ್ಯಾಚರಣ ಸಂಪದವನ್ನು ಸಾಧಿಸದೆ, ಬಿದ್ದ ಹಣ್ಣು ತಿಂದು ವಾಸಿಸದೆ, ಕಂದಮೂಲ ಫಲಗಳನ್ನು ತಿಂದು ಬದುಕದಿದ್ದರು ಕೂಡ; ಗ್ರಾಮ ನಗರಗಳ ಸಮೀಪ ದಲ್ಲಿ ಅಗ್ನಿಗೆ ಮನೆಮಾಡಿಕೊಂಡು ಅಗ್ನಿಪರಿಚರ್ಯೆ ಮಾಡುವುದನ್ನು ಆಚಾರ್ಯನಿಂದ ಕಲಿತಿರುವೆಯ?"

"ಅದೂ ಇಲ್ಲ, ಗೌತಮ."

"ಹಾಗಾದರೆ, ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದವನ್ನು ಸಾಧಿಸದೆ, ಬಿದ್ದ ಹಣ್ಣು ತಿಂದು ವಾಸಿಸದೆ, ಕಂದಮೂಲ ಫಲಗಳನ್ನು ತಿಂದು ಬದುಕದೆ, ಅಗ್ನಿಪರಿಚರ್ಯೆ ಮಾಡದಿದ್ದರು ಕೂಡ; ನಾಲ್ಕು ಮಹಾಮಾರ್ಗಗಳ ಬಳಿಯಲ್ಲಿ ನಾಲ್ಕು ಬಾಗಿಲ ಮನೆಮಾಡಿ, 'ಈ ನಾಲ್ಕು ದಿಕ್ಕುಗಳಿಂದ ಬರುವ ಶ್ರಮಣ ಬ್ರಾಹ್ಮಣರನ್ನು ನನ್ನ ಶಕ್ತಿಬಲಗಳಿಗೆ ತಕ್ಕ ಹಾಗೆ ಪೂಜೆಮಾಡುವೆನು' ಎಂದು ವಾಸಮಾಡುವುದನ್ನು ಆಚಾರ್ಯನಿಂದ ಕಲಿತಿರುವೆಯ?"

"ಅದೂ ಇಲ್ಲ, ಗೌತಮ."

"ಹೀಗೆ, ಅಂಬಷ್ಟ, ಈ ಅನುತ್ತರವಾದ ವಿದ್ಯಾಚರಣಸಂಪದದಲ್ಲಿ ನೀನು ಆಚಾರ್ಯನಿಂದ ಕಲಿತುದು ಸಾಲದು. ಈ ವಿದ್ಯಾಚರಣಸಂಪದಕ್ಕೆ ಸಂಭವಿಸುವ ನಾಲ್ಕು ಅಪಾಯಮುಖಗಳಲ್ಲಿ ಕೂಡ ನೀನು ಆಚಾರ್ಯನಿಂದ ಕಲಿತುದು ಸಾಲದು. ಆದರೂ, ಅಂಬಷ್ಟ, ನಿನ್ನ ಆಚಾರ್ಯನಾದ ಬ್ರಾಹ್ಮಣ ಪೌಷ್ಕರಸಾದಿಯು ತಾನು ಈ ಅಪಾಯಮುಖಗಳನ್ನು ಪೂರ್ಣಗೊಳಿಸದಿದ್ದರು ಕೂಡ, 'ಈ ಮುಂಡಕರು, ಶ್ರಮಣಕರು, ಇಭ್ಯರು, ಕೃಷ್ಣರು, ಬಂಧುಪಾದಾಪತ್ಯರು—ಇವರೆಲ್ಲಿ! ಮೂರುವೇದ ಕಲಿತ ಬ್ರಾಹ್ಮಣರೊಡನೆ ಮಾತುಕತೆಯೆಲ್ಲಿ!' ಎಂದು ನಿನಗೆ ಹೇಳಿರುವನು. ನಿನ್ನ ಆಚಾರ್ಯನಾದ ಬ್ರಾಹ್ಮಣ ಪೌಷ್ಕರಸಾದಿಯು ನಿನಗೆ ಎಷ್ಟು ಅಪರಾಧ ಮಾಡಿರುವನು, ನೋಡು, ಅಂಬಷ್ಟ.

"ಅಲ್ಲದೆ, ಅಂಬಷ್ಟ, ಪೌಷ್ಕರಸಾದಿಯು ಕೋಸಲದ ರಾಜನಾದ ಪ್ರಸೇನಜಿತನು ಕೊಡುವ ದತ್ತಿಕವನ್ನು ತಿನ್ನುವನು. ಆದರೆ, ಪ್ರಸೇನಜಿತನು ಅವನನ್ನು ಎದುರಿಗೂ ಬರಗೊಡುವುದಿಲ್ಲ. ಅವನೊಡನೆ ಮಂತಣ ನಡಿಸುವಾಗ, ಪರದೆಯ ಹಿಂದಿನಿಂದ ಅವನೊಡನೆ ಮಂತಣ ಮಾಡುವನು. ಕೋಸಲದ ರಾಜನು, ತಾನು ಕೊಟ್ಟ ಧಾರ್ಮಿಕವೂ ಶುದ್ಧವೂ ಆದ ಭಿಕ್ಷವನ್ನು ತೆಗೆದುಕೊಳ್ಳುವವನನ್ನು ಎದುರಿಗೂ ಬರಗೊಡನೇಕೆ, ಅಂಬಷ್ಟ? ನಿನ್ನ ಆಚಾರ್ಯನಾದ ಬ್ರಾಹ್ಮಣ ಪೌಷ್ಕರಸಾದಿಯು ನಿನಗೆ ಎಷ್ಟು ಅಪರಾಧಮಾಡಿರುವನು, ನೋಡು, ಅಂಬಷ್ಟ."

"ಏನು, ಅಂಬಷ್ಟ? ಕೋಸಲದ ರಾಜನಾದ ಪ್ರಸೇನಜಿತನು ಆನೆಯ ಕತ್ತಿನ ಮೇಲೆ ಅಥವಾ ಕುದುರೆಯ ಬೆನ್ನಮೇಲೆ ಕುಳಿತು, ಇಲ್ಲವೆ ರಥಕ್ಕೆ ಹಾಸಿರುವ ಉಪಸ್ತರದ ಮೇಲೆ ನಿಂತು, ಉಗ್ರರೆಂಬ ದೊಡ್ಡ ರಾಜ್ಯಾಧಿಕಾರಿಗಳೊಡನೆಯೋ ರಾಜನ್ಯರೆಂಬ ಇನ್ನೂ ಅಭಿಷೇಕವಿಲ್ಲದ ಕುಮಾರರೊಡನೆಯೋ ಏನಾದರೂ ಮಂತಣಮಾಡುವನು. ಅವನು ಆ ಪ್ರದೇಶದಿಂದ ಹೊರಟು ಬೇರೆ ಕಡೆ ನಿಂತಮೇಲೆ, ಒಬ್ಬ ಶೂದ್ರನೋ ಶೂದ್ರನ ದಾಸನೋ ಅಲ್ಲಿಗೆ ಬರುವನು. ಅವನು ಆ ಪ್ರದೇಶದಲ್ಲಿ ನಿಂತು, 'ಕೋಸಲದ ರಾಜನಾದ ಪ್ರಸೇನಜಿತನು ಹೀಗೆ ಹೇಳಿದನು' ಎಂದು ಅದೇ ಮಂತಣವನ್ನು ಮಾಡುವನು. ಅವನು ರಾಜನು ಹೇಳಿದುದನ್ನೇ ಹೇಳಲಿ, ರಾಜನು ನಡಿಸಿದ ಮಂತಣವನ್ನೇ ನಡಿಸಲಿ; ಅಷ್ಟರಿಂದ ಅವನು ರಾಜನಾದಾನೆ? ರಾಜನಿಗೆ ಸಮಾನನಾದಾನೆ?"

"ಖಂಡಿತ ಇಲ್ಲ, ಗೌತಮ."

"ಅದರಂತೆಯೇ, ಅಂಬಷ್ಟ, ನೀನು 'ಯಾರ ಗೀತ ಪ್ರವಾಚಿತ ಸಂಹಿತೆಗಳಾದ ಪುರಾತನ ಮಂತ್ರಪದಗಳನ್ನು ಈಗಿನ ಬ್ರಾಹ್ಮಣರು ಅನುಗಾಯನಮಾಡಿ, ಅನುಭಾಷಣಮಾಡಿ, ಭಾಷಿಸಿದಂತೆ ಅನುಭಾಷಿಸಿ, ವಾಚಿಸಿದಂತೆ ಅನುವಾಚಿಸುವರೋ—ಆ ಪೂರ್ವದ ಬ್ರಾಹ್ಮಣ ಋಷಿಗಳು, ಆ ಮಂತ್ರಕರ್ತರು, ಆ ಮಂತ್ರಪ್ರವಕ್ತರು -- ಎಂದರೆ ಅಷ್ಟಕ, ವಾಮಕ, ವಾಮದೇವ, ವಿಶ್ವಾಮಿತ್ರ, ಜಮದಗ್ನಿ, ಅಂಗಿರಸ, ಭಾರದ್ವಾಜ, ವಾಸಿಷ್ಠ, ಕಶ್ಯಪ, ಭೃಗು ಎಂಬವರು — ಅವರ ಮಂತ್ರಗಳನ್ನು ಆಚಾರ್ಯನಿಂದ ನಾನು ಅಧ್ಯಯನಮಾಡಿರುವೆನು' ಎಂದು ಹೇಳಿ, ಅಷ್ಟರಿಂದ ಋಷಿಯಾಗುವುದು, ಋಷಿತ್ವ ಪಡೆಯುವುದು, ಎಂಬ ಸ್ಥಿತಿಯಿಲ್ಲ!"

"ಏನು, ಅಂಬಷ್ಟ? ವೃದ್ಧಬ್ರಾಹ್ಮಣರೂ ಮಹಾ ಆರ್ಯಕರಾದ ನಿನ್ನ ಆಚಾರ್ಯಪ್ರಾಚಾರ್ಯರೂ ಮಾತನಾಡುವಾಗ ನೀನೇನು ಕೇಳಿರುವೆ? ಯಾರ ಗೀತ ಪ್ರವಾಚಿತ ಸಂಹಿತೆಗಳಾದ ಪುರಾತನ ಮಂತ್ರಪದಗಳನ್ನು ಈಗಿನ ಬ್ರಾಹ್ಮಣರು ಅನುಗಾಯನಮಾಡಿ, ಅನುಭಾಷಣಮಾಡಿ, ಭಾಷಿಸಿದಂತೆ ಅನುಭಾಷಿಸಿ, ವಾಚಿಸಿದಂತೆ ಅನುವಾಚಿಸುವರೋ --- ಆ ಪೂರ್ವದ

ಬ್ರಾಹ್ಮಣ ಋಷಿಗಳು, ಆ ಮಂತ್ರಕರ್ತರು, ಆ ಮಂತ್ರಪ್ರವಕ್ತರು— ಎಂದರೆ ಅಷ್ಟಕ, ವಾಮಕ, ವಾಮದೇವ, ವಿಶ್ವಾಮಿತ್ರ, ಜಮದಗ್ನಿ, ಅಂಗಿರಸ, ಭಾರದ್ವಾಜ, ವಾಸಿಷ್ಠ, ಕಶ್ಯಪ, ಭೃಗು ಎಂಬವರು; ಅವರು, ಈಗ ನೀನೂ ನಿನ್ನ ಆಚಾರ್ಯನೂ ಇರುವ ಹಾಗೆ, ಚೆನ್ನಾಗಿ ಸ್ನಾನಮಾಡಿ, ಲೇಪನ ಹಚ್ಚಿಕೊಂಡು, ಕೂದಲು ಗಡ್ಡಗಳನ್ನು ಅಲಂಕರಿಸಿ, ಮಾಲೆಗಳನ್ನೂ ಆಭರಣಗಳನ್ನೂ ಧರಿಸಿ, ಬಿಳಿಯ ಬಟ್ಟೆಗಳನ್ನುಟ್ಟು, ಪಂಚೇಂದ್ರಿಯಗಳ ಸುಖಗಳನ್ನು ಪಡೆದು ಅದರಲ್ಲಿ ಲೀನರಾಗಿದ್ದರೇನು?"

"ಇಲ್ಲ, ಗೌತಮ."

"ಅಥವಾ, ಅವರು ಹೀಗೆ, ಈಗ ನೀನೂ ನಿನ್ನ ಆಚಾರ್ಯನೂ ಇರುವಂತೆ, ಕಪ್ಪು ಆರಿಸಿ ತೆಗೆದ ಶಾಲ್ಯನ್ನವನ್ನೂ ಅನೇಕ ಸೂಪ ವ್ಯಂಜನಗಳನ್ನೂ ತಿನ್ನುತ್ತಿದ್ದರೆ?"

"ಇಲ್ಲ, ಗೌತಮ."

"ಅಥವಾ, ಅವರು ಹೀಗೆ, ಈಗ ನೀನೂ ನಿನ್ನ ಆಚಾರ್ಯನೂ ಇರುವಂತೆ, ನಡುವಿಗೆ ವೇಷ್ಟಕ ಬಿಗಿದು ಬಳುಕುವ ಹೆಂಗಸರಿಂದ ಪರಿಚರ್ಯೆ ಪಡೆಯುತ್ತಿದ್ದರೆ?"

"ಅದೂ ಇಲ್ಲ, ಗೌತಮ."

"ಅಥವಾ, ಅವರು ಹೀಗೆ, ಈಗ ನೀನೂ ನಿನ್ನ ಆಚಾರ್ಯನೂ ಇರುವಂತೆ, ಹೆಣೆದ ಕೂದಲಿನ ಹೆಣ್ಣುಕುದುರೆ ಹೂಡಿದ ರಥದಲ್ಲಿ ಕುಳಿತು, ಉದ್ದವಾದ ಚುಚ್ಚುಗೋಲಿನಿಂದ ವಾಹನವನ್ನು ಬಡಿದು ತಿರುಗುತ್ತಿದ್ದರೇನು?"

"ಅದೂ ಇಲ್ಲ, ಗೌತಮ."

"ಅಥವಾ, ಅವರು ಹೀಗೆ, ಈಗ ನೀನೂ ನಿನ್ನ ಆಚಾರ್ಯನೂ ಇರುವಂತೆ, ಅಗಳು ತೆಗೆದು, ಅಡ್ಡಮರಗಳನ್ನು ಕೆಳಬಿಟ್ಟು, ಉದ್ದಕತ್ತಿಯನ್ನು ಬಿಗಿದ ಪುರುಷರ ನಗರರಕ್ಷಣೆಯಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದರೇನು?"

"ಅದೂ ಇಲ್ಲ, ಗೌತಮ."

"ಹೀಗೆ, ಅಂಬಷ್ಟ, ನೀನಾಗಲಿ ನಿನ್ನ ಆಚಾರ್ಯನಾಗಲಿ ಋಷಿಯಲ್ಲ, ಋಷಿತ್ವ ಪಡೆದಿಲ್ಲ. ನನ್ನನ್ನು ಕುರಿತು ಏನಾದರೂ ಸಂದೇಹ ಸಂಶಯಗಳಿದ್ದರೆ ಪ್ರಶ್ನಿಸು, ಅಂಬಷ್ಟ; ನಾನು ವಿವರಿಸಿ ಸ್ಪಷ್ಟಗೊಳಿಸುವೆನು."

ಆಗ ಭಗವಂತನು ವಿಹಾರದಿಂದ ಹೊರಬಿದ್ದು, ಅತ್ತಿಂದಿತ್ತ ತಿರುಗಾಡಲು ಮೊದಲುಮಾಡಿದನು. ಅಂಬಷ್ಟನು ತಾನೂ ಹಾಗೆಯೆ ಮಾಡಿದನು. ಆಗ ಅಂಬಷ್ಟನು, ತಿರುಗಾಡುವ ಭಗವಂತನ ಹಿಂದೆಯೆ ತಿರುಗಾಡಿ, ಭಗವಂತನ ದೇಹದಲ್ಲಿನ ಮೂವತ್ತೆರಡು ಮಹಾಪುರುಷ ಲಕ್ಷಣಗಳನ್ನು ಗಮನಿಸಿದನು. ಗಮನಿಸಿ, ಆ ಮೂವತ್ತೆರಡು ಮಹಾಪುರುಷಲಕ್ಷಣಗಳಲ್ಲಿ ಎರಡು ಹೊರತಾಗಿ ಎಲ್ಲವನ್ನೂ ಕಂಡನು; ವಸ್ತ್ರದಿಂದ ಮರೆಯಾದ ಶಿಶ್ನ, ಮತ್ತು ನಾಲಗೆಯ ಉದ್ದ—ಈ ಎರಡು ಮಹಾಪುರುಷಲಕ್ಷಣಗಳಲ್ಲಿ ಸಂದೇಹಪಟ್ಟನು, ಸಂಶಯಪಟ್ಟನು; ತೃಪ್ತನಾಗಲಿಲ್ಲ, ಪ್ರಸನ್ನನಾಗಲಿಲ್ಲ.

ಆಗ, ಅಂಬಷ್ಟನ ಸಂದೇಹ ಸಂಶಯಗಳನ್ನು ತಿಳಿದು, ಭಗವಂತನು, ವಸ್ತ್ರದಿಂದ ಮರೆಯಾದ ತನ್ನ ಶಿಶ್ನವು ಅಂಬಷ್ಟನಿಗೆ ಕಾಣುವ ರೀತಿಯಲ್ಲಿ ಋದ್ಧಿಶಕ್ತಿಯನ್ನು ಪ್ರಯೋಗಿಸಿದನು. ತನ್ನ ನಾಲಗೆಯನ್ನು ಬಗ್ಗಿಸಿ ತನ್ನೆರಡು ಕಿವಿಗಳನ್ನೂ ಮುಟ್ಟಿ ಸವರಿದನು, ಮೂಗು ಎರಡನ್ನೂ ಮುಟ್ಟಿ ಸವರಿದನು; ಲಲಾಟಮಂಡಲವಷ್ಟನ್ನೂ ನಾಲಗೆಯಿಂದ ಮುಚ್ಚಿದನು.

ಆಗ, ಅಂಬಷ್ಟನು "ಶ್ರಮಣ ಗೌತಮನು ಮೂವತ್ತೆರಡು ಮಹಾಪುರುಷಲಕ್ಷಣಗಳಿಂದ, ಯಾವುದೂ ಕಡಿಮೆಯಿಲ್ಲದಂತೆ ಪರಿಪೂರ್ಣವಾಗಿ, ಕೂಡಿದವನು" ಎಂದುಕೊಂಡು, "ಭೋ ಗೌತಮ! ನಾವು ಹೋಗಲಾದೀತು. ಬಹಳ ಕೆಲಸವಿದೆ. ಮಾಡಬೇಕಾದುದು ಬಹಳವಿದೆ" ಎಂದು ಭಗವಂತನಿಗೆ ಹೇಳಿದನು.

"ನಿನಗೆ ಹೇಗೆನಿಸುವುದೋ ಹಾಗಾಗಲಿ, ಅಂಬಷ್ಟ."

ಆಗ ಅಂಬಷ್ಟನು ಹೆಣ್ಣುಕುದುರೆಯ ರಥವನ್ನು ಹತ್ತಿ ಹೊರಟನು.

ಆ ಸಮಯದಲ್ಲಿ ಬ್ರಾಹ್ಮಣ ಪೌಷ್ಕರಸಾದಿಯು ಮಹಾಬ್ರಾಹ್ಮಣಗಣದೊಡನೆ ಉತ್ಕೃಷ್ಟದಿಂದ ಹೊರಟು, ತನ್ನ ಆರಾಮದಲ್ಲಿ ಕುಳಿತು ಅಂಬಷ್ಟನನ್ನೇ ಎದುರುನೋಡುತ್ತಿದ್ದನು. ಅಂಬಷ್ಟನು ಆಗ ಆರಾಮಕ್ಕೆ ಬಂದನು. ರಥಕ್ಕೆ ಮಾರ್ಗವಿರುವವರೆಗೆ ರಥದಲ್ಲಿ ಹೋಗಿ, ರಥದಿಂದ ಇಳಿದು ಪಾದಚಾರಿಯಾಗಿ ಪೌಷ್ಕರಸಾದಿಯ ಬಳಿಸಾರಿ, ಅಭಿವಂದಿಸಿ ಒಂದು ಕಡೆ ಕುಳಿತನು.

ಅಂಬಷ್ಟನು ಒಂದು ಕಡೆ ಕುಳಿತುಕೊಂಡ ಮೇಲೆ, ಬ್ರಾಹ್ಮಣ ಪೌಷ್ಕರಸಾದಿಯು ಅವನನ್ನು ಕುರಿತು "ಪ್ರಿಯ ಅಂಬಷ್ಟ! ಆ ಪೂಜ್ಯ ಗೌತಮನನ್ನು ಕಂಡೆಯ?" ಎಂದನು.

"ಕಂಡೆನು, ಭೋ!"

"ಪ್ರಿಯ ಅಂಬಷ್ಟ! ಆ ಪೂಜ್ಯ ಗೌತಮನು, ಆತನ ವಿಚಾರವಾಗಿ ಹರಡಿರುವ ಸುದ್ದಿಗೆ ಸಮನಾಗಿರುವನೆ? ಅಥವಾ ಇಲ್ಲವೆ? ಆತನು ಹಾಗೆಯೇ ಇರುವನೆ? ಬೇರೆ ತೆರ ಇಲ್ಲವೆ?"

"ಆ ಪೂಜ್ಯ ಗೌತಮನು, ಆತನ ವಿಚಾರವಾಗಿ ಹರಡಿರುವ ಸುದ್ದಿಗೆ ಸಮನಾಗಿರುವನು; ಅನ್ಯಥಾ ಇಲ್ಲ. ಆತನು ಹಾಗೆಯೇ ಇರುವನಲ್ಲದೆ ಬೇರೆ ತೆರನಾಗಿ ಇಲ್ಲ. ಭೋ! ಆತನು ಮೂವತ್ತೆರಡು ಮಹಾಪುರುಷ ಲಕ್ಷಣಗಳಿಂದ, ಯಾವುದೂ ಕಡಿಮೆಯಿಲ್ಲದಂತೆ ಪರಿಪೂರ್ಣವಾಗಿ, ಕೂಡಿರುವನು."

"ಹಾಗಾದರೆ, ಶ್ರಮಣ ಗೌತಮನೊಡನೆ ನಿನಗೇನಾದರೂ ಮಾತು ಕತೆ ನಡೆಯಿತೆ, ಅಂಬಷ್ಟ?"

"ಕೊಂಚ ಮಾತುಕತೆ ನಡೆಯಿತು, ಭೋ."

"ಶ್ರಮಣ ಗೌತಮನೊಡನೆ ಮಾತುಕತೆ ಹೇಗಾಯಿತು, ಅಂಬಷ್ಟ?"

ಆಗ ಅಂಬಷ್ಟನು, ಭಗವಂತನೊಡನೆ ನಡೆದ ಮಾತುಕತೆಯೆಲ್ಲ ವನ್ನೂ ಪೌಷ್ಕರಸಾದಿಗೆ ತಿಳಿಸಿದನು.

ಹೀಗೆನ್ನಲು, ಬ್ರಾಹ್ಮಣ ಪೌಷ್ಕರಸಾದಿಯು ಅಂಬಷ್ಟನನ್ನು ಕುರಿತು "ಆಹಾ, ನನ್ನ ಪಂಡಿತಕ! ಆಹಾ, ನನ್ನ ಬಹುಶ್ರುತಕ! ಆಹಾ, ನನ್ನ ತ್ರೈವಿದ್ಯಕ! ಹೋದ ಕೆಲಸವನ್ನು ಈ ರೀತಿಯಲ್ಲಿ ನಡಿಸಿದ ಪುರುಷನು, ಸತ್ತು ದೇಹ ಮುರಿದ ಮೇಲೆ, ಅಪಾಯವಾದ ದುರ್ಗತಿಗೆ ಬಿದ್ದು ನರಕ ದಲ್ಲಿ ಹುಟ್ಟುವನು. ಅಂಬಷ್ಟ, ನೀನು ಆ ಪೂಜ್ಯ ಗೌತಮನನ್ನು ಸಾರಿ ಸಾರಿ ಹೀಸೈಸಿದುದೇ ಆತನ ಬಳಿಯಲ್ಲಿ ನಮ್ಮ ಹೀನಾಯಕ್ಕೂ ಕಾರಣ ವಾಯಿತು. ಆಹಾ, ಪಂಡಿತಕ! ಆಹಾ, ಬಹುಶ್ರುತಕ! ಆಹಾ, ತ್ರೈವಿದ್ಯಕ!" ಎಂದು ಕೋಪಗೊಂಡು, ಮನಸ್ಸು ಕೆಟ್ಟು, ಅಂಬಷ್ಟನನ್ನು ಕಾಲಿನಿಂದ ಉರುಳಿಸಿ, ಆಗಲೇ ಭಗವಂತನ ದರ್ಶನಕ್ಕೆ ಹೋಗಬೇಕೆಂದು ಬಯಸಿದನು.

ಆಗ ಬ್ರಾಹ್ಮಣರು "ಭೋ! ಶ್ರಮಣ ಗೌತಮನ ದರ್ಶನಕ್ಕೆ ಹೋಗಲು ಈಗ ವೇಳೆ ಬಹಳ ಮೀರಿದೆ. ಆತನ ದರ್ಶನಕ್ಕೆ ಪೂಜ್ಯ ಪೌಷ್ಕರಸಾದಿಯು ನಾಳೆ ಹೋಗಬಹುದು" ಎಂದು ಪೌಷ್ಕರಸಾದಿಗೆ ಹೇಳಿದರು.

ಆಗ ಬ್ರಾಹ್ಮಣ ಪೌಷ್ಕರಸಾದಿಯು ತನ್ನ ಮನೆಯಲ್ಲಿ ಸಿಹಿಯಾದ ಖಾದ್ಯಭೋಜ್ಯಗಳನ್ನು ಸಿದ್ಧಗೊಳಿಯಿಸಿ, ಬಂಡಿಗಳಲ್ಲಿ ಏರಿಸಿಕೊಂಡು, ಪಂಜಿನ ಬೆಳಕಿನಲ್ಲಿ ಉತ್ಕೃಷ್ಟದಿಂದ ಹೊರಟು, ಇಚ್ಛಾನಂಕಲದ ವನಷಂಡವಿರುವ ಕಡೆಗೆ ಹೋದನು. ರಥಕ್ಕೆ ದಾರಿಯಿರುವವರೆಗೆ ರಥದಲ್ಲಿ ಹೋಗಿ, ರಥದಿಂದ ಇಳಿದು, ಪಾದಚಾರಿಯಾಗಿ ಭಗವಂತನ ಬಳಿಸಾರಿದನು. ಬಳಿಸಾರಿ, ಭಗವಂತನೊಡನೆ ಸಮ್ಮೋದದಿಂದ ನುಡಿದು, ಕೇಳಬೇಕಾದ ಕುಶಲಪ್ರಶ್ನೆಗಳಾದ ಮೇಲೆ ಒಂದು ಕಡೆ ಕುಳಿತನು.

ಒಂದು ಕಡೆ ಕುಳಿತು, ಬ್ರಾಹ್ಮಣ ಪೌಷ್ಕರಸಾದಿಯು "ಭೋ ಗೌತಮ! ನನ್ನೊಡನೆ ವಾಸಮಾಡುವ ಶಿಷ್ಯನಾದ ಅಂಬಷ್ಟನು ಇಲ್ಲಿ ಬಂದಿದ್ದನೆ?" ಎಂದನು.

"ಬಂದಿದ್ದನು, ಬ್ರಾಹ್ಮಣ."

"ನಿನಗೆ ಅವನೊಡನೆ ಏನಾದರೂ ಮಾತುಕತೆಯಾಯಿತೆ, ಗೌತಮ?"

"ಆಯಿತು, ಬ್ರಾಹ್ಮಣ."

"ಆ ಮಾತುಕತೆ ಹೇಗಾಯಿತು, ಗೌತಮ?"

ಆಗ ಭಗವಂತನು, ಅಂಬಷ್ಟನೊಡನೆ ನಡೆದ ಮಾತುಕತೆಯೆಲ್ಲವನ್ನೂ ಬ್ರಾಹ್ಮಣ ಪೌಷ್ಕರಸಾದಿಗೆ ತಿಳಿಸಿದನು.

ಹಾಗೆನ್ನಲು, ಬ್ರಾಹ್ಮಣ ಪೌಷ್ಕರಸಾದಿಯು "ಭೋ ಗೌತಮ! ಅಂಬಷ್ಟನು ಚಿಕ್ಕವನು, ಅಜ್ಞಾನಿ. ಪೂಜ್ಯ ಗೌತಮನು ಅಂಬಷ್ಟನನ್ನು ಕ್ಷಮಿಸಬೇಕು" ಎಂದು ಭಗವಂತನಿಗೆ ಹೇಳಿದನು.

"ಬ್ರಾಹ್ಮಣ ಯುವಕನಾದ ಅಂಬಷ್ಟನು ಸುಖಿಯಾಗಲಿ, ಬ್ರಾಹ್ಮಣ."

ಆಗ ಪೌಷ್ಕರಸಾದಿಯು ಭಗವಂತನ ದೇಹದ ಮೂವತ್ತೆರಡು ಮಹಾಪುರುಷಲಕ್ಷಣಗಳನ್ನು ಗಮನಿಸಿದನು. ಗಮನಿಸಿ, ಆ ಮೂವತ್ತೆರಡು ಮಹಾಪುರುಷಲಕ್ಷಣಗಳಲ್ಲಿ ಎರಡು ಹೊರತಾಗಿ ಎಲ್ಲವನ್ನೂ ಕಂಡನು; ವಸ್ತ್ರದಿಂದ ಮರೆಯಾದ ಶಿಶ್ನ, ಮತ್ತು ನಾಲಗೆಯ ಉದ್ದ—ಈ ಎರಡು ಮಹಾಪುರುಷಲಕ್ಷಣಗಳಲ್ಲಿ ಸಂದೇಹಪಟ್ಟನು, ಸಂಶಯಪಟ್ಟನು; ತೃಪ್ತನಾಗಲಿಲ್ಲ, ಪ್ರಸನ್ನನಾಗಲಿಲ್ಲ.

ಆಗ ಪೌಷ್ಕರಸಾದಿಯ ಸಂದೇಹ ಸಂಶಯಗಳನ್ನು ತಿಳಿದು, ಭಗವಂತನು, ವಸ್ತ್ರದಿಂದ ಮರೆಯಾದ ತನ್ನ ಶಿಶ್ನವು ಪೌಷ್ಕರಸಾದಿಗೆ ಕಾಣುವ ರೀತಿಯಲ್ಲಿ ಋದ್ಧಿಶಕ್ತಿಯನ್ನು ಪ್ರಯೋಗಿಸಿದನು. ತನ್ನ ನಾಲಗೆಯನ್ನು ಬಗ್ಗಿಸಿ ತನ್ನೆರಡೂ ಕಿವಿಗಳನ್ನು ಮುಟ್ಟಿ ಸವರಿದನು, ಮೂಗು ಎರಡನ್ನೂ ಮುಟ್ಟಿ ಸವರಿದನು; ಲಲಾಟಮಂಡಲವನ್ನೂ ನಾಲಗೆಯಿಂದ ಮುಚ್ಚಿದನು.

ಆಗ, ಪೌಷ್ಕರಸಾದಿಯು "ಶ್ರಮಣ ಗೌತಮನು ಮೂವತ್ತೆರಡು ಮಹಾಪುರುಷಲಕ್ಷಣಗಳಿಂದ, ಯಾವುದೂ ಕಡಿಮೆಯಿಲ್ಲದಂತೆ ಪರಿಪೂರ್ಣವಾಗಿ, ಕೂಡಿದವನು" ಎಂದುಕೊಂಡು, "ಪೂಜ್ಯ ಗೌತಮನು ಭಿಕ್ಷುಸಂಘದೊಡನೆ ನಾಳೆ ನಮ್ಮ ಊಟಕ್ಕೆ ಸಮ್ಮತಿಸಬೇಕು" ಎಂದನು. ಭಗವಂತನು ಮೌನದಿಂದ ಒಪ್ಪಿದನು.

ಭಗವಂತನು ಒಪ್ಪಿದುದನ್ನು ತಿಳಿದು, ಮಾರನೆಯ ದಿನ ಬ್ರಾಹ್ಮಣ ಪೌಷ್ಕರಸಾದಿಯು "ಸಮಯವಾಯಿತು, ಭೋ ಗೌತಮ. ಊಟ ಸಿದ್ಧವಾಗಿದೆ" ಎಂದು ಭಗವಂತನಿಗೆ ತಿಳಿಸಿದನು. ಆಗ ಭಗವಂತನು ಪೂರ್ವಾಹ್ನ ಸಮಯದಲ್ಲಿ ಉಡುಪು ಹಾಕಿಕೊಂಡು, ಪಾತ್ರೆ ಚೀವರಗಳನ್ನು ಕೊಂಡು, ಬ್ರಾಹ್ಮಣ ಪೌಷ್ಕರಸಾದಿಯ ಮನೆಗೆ ಭಿಕ್ಷುಸಂಘದೊಡನೆ ಸಾರಿ, ಸಿದ್ಧಪಡಿಸಿದ್ದ ಆಸನದಲ್ಲಿ ಕುಳಿತನು. ಆಗ ಬ್ರಾಹ್ಮಣ ಪೌಷ್ಕರಸಾದಿಯು ಭಗವಂತನನ್ನೂ, ಬ್ರಾಹ್ಮಣ ಯುವಕರು ಭಿಕ್ಷುಸಂಘವನ್ನೂ, ಸಿಹಿಯಾದ ಖಾದ್ಯಭೋಜ್ಯಗಳನ್ನು ಸ್ವಹಸ್ತದಿಂದ ನೀಡಿ ಒಪ್ಪಿಸಿ ಸಂತೃಪ್ತಿಪಡಿಸಿದರು. ಆಗ, ಭಗವಂತನು ಊಟಮಾಡಿ ಪಾತ್ರೆಯಿಂದ ಕೈತೆಗೆದ ಮೇಲೆ, ಬ್ರಾಹ್ಮಣ ಪೌಷ್ಕರ

ಸಾದಿಯು ಬೇರೊಂದು ಕೆಳಗಡೆಯ ಪೀಠವನ್ನು ಹಿಡಿದು ಒಂದು ಕಡೆ ಕುಳಿತನು.

ಹೀಗೆ ಒಂದು ಕಡೆ ಕುಳಿತ ಬ್ರಾಹ್ಮಣ ಪೌಷ್ಕರಸಾದಿಗೆ ಭಗವಂತನು ದಾನ, ಶೀಲ, ಸ್ವರ್ಗ, ಕಾಮುಗಳ ಅಪಾಯ ಪಾಪ ಸಂಕ್ಲೇಶಗಳು, ನಿಷ್ಕ್ರಮಣದ ಮಹಾತ್ಮೆ—ಇವುಗಳನ್ನು ಕ್ರಮವಾಗಿ ಕುರಿತು ಮಾತನಾಡಿ ಪ್ರಕಾಶಗೊಳಿಸಿದನು. ಅನಂತರ, ಬ್ರಾಹ್ಮಣ ಪೌಷ್ಕರ ಸಾದಿಯ ಚಿತ್ತವು ಹದವಾಗಿ, ಮೃದುವಾಗಿ, ನಿವಾರಣಗಳನ್ನು ನೀಗಿ ಕೊಂಡು, ಮೇಲೆದ್ದು, ಪ್ರಸನ್ನವಾಯಿತೆಂದು ತಿಳಿದಾಗ; ಬುದ್ಧರಿಂದ ಕೀರ್ತಿತವಾಗಿರುವ 'ದುಃಖ, ಸಮುದಯ, ನಿರೋಧ, ಮಾರ್ಗ' ಎಂಬ ಧರ್ಮದೇಶನವನ್ನು ಭಗವಂತನು ಪ್ರಕಾಶಪಡಿಸಿದನು. ಕೊಳೆ ಹೋಗಿ ಶುದ್ಧವಾದ ವಸ್ತ್ರವು ಚೆನ್ನಾಗಿ ರಂಗು ಹಿಡಿಯುವ ಹಾಗೆ, 'ಸಮುದಯ ಧರ್ಮ ಸರ್ವವೂ ನಿರೋಧ ಧರ್ಮವು' ಎಂಬ ಸ್ವಚ್ಛವಾದ ನಿರ್ಮಲ ವಾದ ಧರ್ಮಚಕ್ಷು ಬ್ರಾಹ್ಮಣ ಪೌಷ್ಕರಸಾದಿಗೆ ಆ ಪೀಠದಲ್ಲಿ ಕುಳಿ ತಿದ್ದಂತೆಯೇ ಹುಟ್ಟಿತು.

ಆಗ ಬ್ರಾಹ್ಮಣ ಪೌಷ್ಕರಸಾದಿಯು ಧರ್ಮವನ್ನು ಕಂಡು, ಧರ್ಮ ಪ್ರಾಪ್ತಿಯನ್ನು ಹೊಂದಿ, ಧರ್ಮವನ್ನು ತಿಳಿದು, ಧರ್ಮದಲ್ಲಿ ಇಳಿಮುಳುಗಿ, ಸಂದೇಹ ಸಂಶಯುಗಳನ್ನು ದಾಟ, 'ಅದು ಹೇಗೆ? ಇದು ಹೇಗೆ?' ಎಂಬ ಶಂಕೆಗಳು ಹೋಗಿ, ಸ್ವಶಕ್ತಿಯಲ್ಲಿ ಸಂಪೂರ್ಣವಾದ ನಂಬಿಕೆಯನ್ನು ಪಡೆದು, ಬೇರೆಯವರ ಸಹಾಯವಿಲ್ಲದೆಯೆ ಗುರುಶಾಸನವನ್ನು ತಿಳಿಯುವ ಸ್ಥಿತಿಗೆ ಬಂದು, ಭಗವಂತನಿಗೆ ಹೀಗೆಂದನು:

"ಬಲುಸೊಗಸು, ಭೋ ಗೌತಮ! ಬಲುಸೊಗಸು, ಭೋ ಗೌತಮ! ಬಿದ್ದಿದ್ದುದನ್ನು ಎತ್ತಿ ನಿಲ್ಲಿಸಿದಂತೆ, ಮುಚ್ಚಿದ್ದುದನ್ನು ಬಿಚ್ಚಿ ದಂತೆ, ಮೂಢನಿಗೆ ಮಾರ್ಗ ತೋರಿಕೊಟ್ಟಂತೆ, ಕಣ್ಣಿರುವವರು ರೂಪ ಗಳನ್ನು ಕಾಣಲೆಂದು ಕತ್ತಲಿನಲ್ಲಿ ತೈಲದ ದೀಪ ಹಿಡಿದಂತೆ ಪೂಜ್ಯ ಗೌತಮನು ಅನೇಕ ಪರ್ಯಾಯಗಳಿಂದ ಧರ್ಮವನ್ನು ಪ್ರಕಾಶಪಡಿಸಿದನು. ಭೋ ಗೌತಮ! ನಾನು ನನ್ನ ಮಕ್ಕಳು ಹೆಂಡತಿ ಜನ ಜೊತೆಗಾರ ರೊಡನೆ ಭಗವಂತನಾದ ಗೌತಮನಿಗೂ ಅವನ ಧರ್ಮಕ್ಕೂ ಭಿಕ್ಷು ಸಂಘಕ್ಕೂ ಶರಣಾಗುತ್ತೇನೆ. ಇಂದಿನಿಂದ ಪ್ರಾಣವಿರುವವರೆಗೂ

ಶರಣಾಗತನಾದ ಉಪಾಸಕನೆಂದು ನನ್ನನ್ನು ಪೂಜ್ಯ ಗೌತಮನು ಸ್ವೀಕರಿಸಲಿ. ಉತ್ಕೃಷ್ಟದ ಇತರ ಉಪಾಸಕ ಕುಲಗಳ ಬಳಿಸಾರುವಂತೆಯೇ ಪೂಜ್ಯ ಗೌತಮನು ಪೌಷ್ಕರಸಾದಿಯ ಕುಲವನ್ನೂ ಬಳಿಸಾರಲಿ. ಭಗವಂತನಾದ ಗೌತಮನಿಗೆ ಅಭಿವಂದನೆಗೈಯುವ, ಅಥವಾ ಪ್ರತ್ಯುತ್ಥಾನ ಮಾಡುವ, ಇಲ್ಲವೆ ಆಸನೋದಕಗಳನ್ನು ಕೊಡುವ, ಅಥವಾ ಅವನಿಂದ ಚಿತ್ತಪ್ರಸಾದವನ್ನು ಪಡೆವ ಬ್ರಾಹ್ಮಣ ಯುವಕ ಯುವತಿಯರು ಇದ್ದರೆ— ಅದರಿಂದ ಅವರಿಗೆ ಬಹುಕಾಲ ಹಿತವುಂಟು, ಸುಖವುಂಟು."

"ನೀನು ಹೇಳುವುದು ಕಲ್ಯಾಣವಾದುದು, ಬ್ರಾಹ್ಮಣ."

[ದೀಘನಿಕಾಯ — ಅಂಬಟ್ಠಸುತ್ತ.]

೨. ಬ್ರಾಹ್ಮಣನ ಲಕ್ಷಣಗಳು

ನಾನು ಹೀಗೆ ಕೇಳಿರುವೆನು:

ಒಂದು ಸಲ ಭಗವಂತನು ಅಂಗದೇಶದಲ್ಲಿ ಭಿಕ್ಷಾಚರಣಮಾಡುತ್ತ ಮಹಾ ಭಿಕ್ಷುಸಂಘದೊಡನೆ – ಸುಮಾರು ಐನೂರು ಭಿಕ್ಷುಗಳೊಡನೆ— ಚಂಪೆಗೆ ಹೋದನು. ಅಲ್ಲಿ, ಭಗವಂತನು ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿದನು.

ಆ ಸಮಯದಲ್ಲಿ ಬ್ರಾಹ್ಮಣ ಸೋಣದಂಡನು ಚಂಪೆಯಲ್ಲಿ ವಾಸ ಮಾಡುತ್ತಿದ್ದನು. ಅದು ಜೀವಿಗಳಿಂದ ತುಂಬಿತುಳುಕಿ, ಹುಲ್ಲು ಕಡ್ಡಿ ಕಾಳು ನೀರಿನಿಂದ ಕೂಡಿ, ರಾಜನು ಭೋಗಿಸಲು ತಕ್ಕುದು. ಅದು ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನು ದಾನಮಾಡಿದ ರಾಜ ಯೋಗ್ಯವಾದ ದಾನ, ಶ್ರೇಷ್ಠವಾದ ದಾನ.

ಆಗ, "ಶಾಕ್ಯಪುತ್ರನಾಗಿ ಶಾಕ್ಯಕುಲದಿಂದ ಪರಿವ್ರಜಿಸಿದ ಶ್ರಮಣ ಗೌತಮನು ಅಂಗದೇಶದಲ್ಲಿ ಭಿಕ್ಷಾಚರಣಮಾಡುತ್ತ, ಮಹಾ ಭಿಕ್ಷುಸಂಘ ದೊಡನೆ – ಸುಮಾರು ಐನೂರು ಭಿಕ್ಷುಗಳೊಡನೆ– ಚಂಪೆಯನ್ನು ಸಾರಿ, ಚಂಪೆಯಲ್ಲಿ, ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿರುವನಂತೆ! 'ಆ ಭಗವಂತನು ಅರ್ಹನು, ಸಮ್ಯಕ್‌ಸಂಬುದ್ಧನು, ವಿದ್ಯಾಚರಣಸಂಪನ್ನನು. ಅವನು ಸುಗತಿಯನ್ನು ಪಡೆದವನು. ಆತನು ಲೋಕಗಳನ್ನು ತಿಳಿದವನು. ದಮನವನ್ನು ಬಯಸುವ ಜನರನ್ನು ಸಾರಥಿಯಂತೆ ನಡಿಸುವುದರಲ್ಲಿ ಎಲ್ಲರನ್ನೂ ಮೀರಿಸಿದವನು. ಅವನು ದೇವತೆಗಳಿಗೂ ಮನುಷ್ಯರಿಗೂ ಗುರುವು; ಬುದ್ಧನು, ಭಗವಂತನು'—ಎಂದು ಆ ಪೂಜ್ಯ ಗೌತಮನನ್ನು ಕುರಿತು ಸುಂದರವಾದ ಕೀರ್ತಿಶಬ್ದವು ಹರಡಿದೆ. ಅವನು ಈ ಲೋಕ ವನ್ನು—ದೇವ ಮಾರ ಬ್ರಹ್ಮ ಸಹಿತವಾಗಿ, ಶ್ರಮಣ ಬ್ರಾಹ್ಮಣ ಪ್ರಜೆ ಗಳೊಡನೆ, ದೇವ ಮನುಷ್ಯ ಸಹಿತವಾಗಿ – ಸ್ವಂತ ಅಭಿಜ್ಞೆಯಿಂದ ಕಂಡು ಕೊಂಡು ತಿಳಿಯಪಡಿಸುತ್ತಾನೆ. ಮೊದಲಿನಲ್ಲೂ ಮಧ್ಯದಲ್ಲೂ ಕಡೆ ಯಲ್ಲೂ ಸುಂದರವಾದ ಧರ್ಮವನ್ನು ಅರ್ಥ ವ್ಯಂಜನಗಳೊಡನೆ ಸಾರು ವನು. ಕೇವಲ ಪರಿಪೂರ್ಣವೂ ಪರಿಶುದ್ಧವೂ ಆದ ಬ್ರಹ್ಮಚರ್ಯ ವನ್ನು ಪ್ರಕಾಶಗೊಳಿಸುವನು. ಅಂತಹ ಅರ್ಹತರ ದರ್ಶನದಿಂದ

ಮೇಲುಂಟಾಗುವುದು" ಎಂದು ಚಂಪೆಯ ಬ್ರಾಹ್ಮಣರೂ ಗೃಹಪತಿಗಳೂ ಕೇಳಿದರು.

ಕೇಳಿ, ಅವರು ಗುಂಪುಗುಂಪಾಗಿ ಹಿಂಡುಹಿಂಡಾಗಿ ಹೊರಟು, ಗಗ್ಗರೆಯ ಪುಷ್ಕರಿಣಿಯಿರುವಲ್ಲಿಗೆ ತೆರಳಿದರು.

ಆ ಸಮಯದಲ್ಲಿ ಬ್ರಾಹ್ಮಣ ಸೋಣದಂಡನು ಹಗಲುನಿದ್ದೆಗಾಗಿ ಪ್ರಾಸಾದದ ಮೇಲುಗಡೆ ಹೋಗಿದ್ದನು. ಚಂಪೆಯ ಬ್ರಾಹ್ಮಣರೂ ಗೃಹಪತಿಗಳೂ ಗುಂಪುಗುಂಪಾಗಿ ಹಿಂಡುಹಿಂಡಾಗಿ ಚಂಪೆಯಿಂದ ಹೊರಟು ಗಗ್ಗರೆಯ ಪುಷ್ಕರಿಣೀ ತೀರಕ್ಕೆ ಹೋಗುವುದನ್ನು ಅವನು ಕಂಡನು.

ಕಂಡು, ತಾನು ಕೇಳಿಕೇಳಿದ ಪ್ರಶ್ನೆಗೆ ವಿವರಕೊಡಲು ಸಮರ್ಥನಾದ ಕ್ಷತ್ತೃವೆಂಬ ಅಧಿಕಾರಿಯನ್ನು ಕರೆದು, "ಭೋ ಕ್ಷತ್ತೃ! ಚಂಪೆಯ ಈ ಬ್ರಾಹ್ಮಣರೂ ಗೃಹಪತಿಗಳೂ ಹೀಗೆ ಗುಂಪುಗುಂಪಾಗಿ ಹಿಂಡುಹಿಂಡಾಗಿ ಹೊರಟು ಗಗ್ಗರೆಯ ಪುಷ್ಕರಿಣೀ ತೀರಕ್ಕೆ ಏಕೆ ಹೋಗುವರು?" ಎಂದು ಕೇಳಿದನು.

"ಭೋ! ಶ್ರಮಣ ಗೌತಮನು ಚಂಪೆಗೆ ಬಂದು ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿರುವನು. ಇವರೆಲ್ಲರೂ ಆತನ ದರ್ಶನಕ್ಕಾಗಿ ಹೋಗುವರು."

"ಭೋ ಕ್ಷತ್ತೃ! ಚಂಪೆಯ ಬ್ರಾಹ್ಮಣ ಗೃಹಪತಿಗಳ ಬಳಿಸಾರಿ, 'ತಾವು ಸ್ವಲ್ಪ ತಡೆಯಬೇಕೆಂದು ಬ್ರಾಹ್ಮಣ ಸೋಣದಂಡನು ಹೇಳುವನು. ಅವನು ಕೂಡ ಶ್ರಮಣ ಗೌತಮನ ದರ್ಶನಕ್ಕೆ ಬರುವನು' ಎಂದು ಅವರಿಗೆ ತಿಳಿಸು."

"ಹಾಗೆಯೇ ಆಗಲಿ" ಎಂದು ಆ ಕ್ಷತ್ತೃವು ಸೋಣದಂಡನ ಮಾತನ್ನು ಆ ಚಂಪೆಯ ಬ್ರಾಹ್ಮಣರಿಗೂ ಗೃಹಪತಿಗಳಿಗೂ ತಿಳಿಸಿದನು.

ಆ ಸಮಯದಲ್ಲಿ, ನಾನಾ ಅನ್ಯರಾಜ್ಯಗಳ ಬ್ರಾಹ್ಮಣರು—ಸುಮಾರು ಐನೂರು ಮಂದಿ—ಏನೋ ಕಾರ್ಯಕ್ಕಾಗಿ ಚಂಪೆಯಲ್ಲಿ ನಿಂತಿದ್ದರು. ಬ್ರಾಹ್ಮಣ ಸೋಣದಂಡನು ಶ್ರಮಣ ಗೌತಮನ ದರ್ಶನಕ್ಕೆ ಹೋಗುವನೆಂಬುದನ್ನು ಆ ಬ್ರಾಹ್ಮಣರು ಕೇಳಿ, ಸೋಣದಂಡನ ಬಳಿ

ಸಾರಿ, "ಪೂಜ್ಯನಾದ ಸೋಣದಂಡನು ಶ್ರಮಣ ಗೌತಮನನ್ನು ಕಾಣಲು ಹೋಗುವನೆಂಬುದು ನಿಜವೆ?" ಎಂದರು.

"ನನಗೆ ಹಾಗೆನಿಸಿದೆ, ಭೋ. ಶ್ರಮಣ ಗೌತಮನನ್ನು ಕಾಣಲು ನಾನೂ ಹೋಗುವೆನು."

"ಶ್ರಮಣ ಗೌತಮನನ್ನು ಕಾಣುವುದಕ್ಕಾಗಿ ಪೂಜ್ಯ ಸೋಣದಂಡನು ಹೋಗದಿರಲಿ. ಹಾಗೆ ಹೋಗುವುದು ತಕ್ಕುದಲ್ಲ. ಶ್ರಮಣ ಗೌತಮನನ್ನು ಕಾಣುವುದಕ್ಕೆ ಪೂಜ್ಯ ಸೋಣದಂಡನು ಹೋದರೆ, ಪೂಜ್ಯ ಸೋಣದಂಡನ ಯಶಸ್ಸು ಕಡಿಮೆಯಾಗುವುದು; ಶ್ರಮಣ ಗೌತಮನ ಯಶಸ್ಸು ಬಲು ಹೆಚ್ಚುವುದು. ಅದರಿಂದ ಶ್ರಮಣ ಗೌತಮನನ್ನು ಕಾಣುವುದಕ್ಕೆ ಪೂಜ್ಯ ಸೋಣದಂಡನು ಹೋಗುವುದು ತಕ್ಕುದಲ್ಲ; ಪೂಜ್ಯ ಸೋಣದಂಡನನ್ನು ಕಾಣುವುದಕ್ಕೆ ಶ್ರಮಣ ಗೌತಮನೇ ಬರುವುದು ತಕ್ಕುದು.

"ಪೂಜ್ಯ ಸೋಣದಂಡನ ಜಾತಿಯು ಎರಡು ಕಡೆಯಿಂದಲೂ ಒಳ್ಳೆಯದು. ಅವನ ತಾಯಿತಂದೆಯರ ಜನ್ಮವು ಏಳು ಪಿತಾಮಹ ಯುಗಗಳವರೆಗೂ ಶುದ್ಧವಾದುದು. ಸೋಣದಂಡನ ಜಾತಿಯಲ್ಲಿ ಕಳಂಕವಿಲ್ಲ, ನಿಂದೆಗೆ ಆಸ್ಪದವಿಲ್ಲ . . .

"ಪೂಜ್ಯ ಸೋಣದಂಡನು ಆಢ್ಯನು, ಮಹಾ ಧನವಂತನು, ಮಹಾ ಭೋಗವಂತನು . . .

"ಪೂಜ್ಯ ಸೋಣದಂಡನು ವೇದಗಳನ್ನು ಕಲಿತವನು; ಮಂತ್ರ ತಿಳಿದವನು; ನಿಘಂಟು, 'ಕೇಟುಭ', ಅಕ್ಷರ ಪ್ರಭೇದಗಳು, ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರುವೇದಗಳಲ್ಲಿ ಪಾರಂಗತನು; ವೇದಗಳ ಪದಪಾಠವನ್ನು ಬಲ್ಲವನು; ವೈಯಾಕರಣನು; ಲೋಕಾಯುತ ಮಹಾಪುರುಷಲಕ್ಷಣಗಳಲ್ಲಿ ಪಂಡಿತನು . . .

"ಪೂಜ್ಯ ಸೋಣದಂಡನು ಸುಂದರನು, ನೋಟಕ್ಕೆ ಚೆಲುವನು, ಮನಸ್ಸಿಗೆ ಪ್ರಸನ್ನತೆಯನ್ನು ಕೊಡುವವನು, ಹೆಚ್ಚಾದ ವರ್ಣಪುಷ್ಕಳತೆಯಿಂದ ಕೂಡಿದವನು; ಅವನ ಬಣ್ಣ ಶ್ರೇಷ್ಠವಾದುದು; ಅವನ ವರ್ಚಸ್ಸು ಬ್ರಹ್ಮನಂತಹದು; ನೋಡಲು ದೀರ್ಘವಾಗಿ ಗಂಭೀರವಾದ ಆಕಾರ . . .

"ಪೂಜ್ಯ ಸೋಣದಂಡನು ಶೀಲವಂತನು. ಶೀಲವು ಅವನಲ್ಲಿ ಬೆಳೆದಿದೆ. ಅವನು ಬೆಳೆದು ಹೆಚ್ಚಾದ ಶೀಲದಿಂದ ಕೂಡಿದವನು . . .

"ಪೂಜ್ಯ ಸೋಣದಂಡನ ಮಾತು ಸುಂದರವಾದುದು. ಅದರಲ್ಲಿ ಸಂದಿಗ್ಧ ವಿಲಂಬಿತ ಮೊದಲಾದ ದೋಷಗಳಿಲ್ಲ. ಅವನ ಮಾತು ಸ್ಪಷ್ಟ, ಅರ್ಥವನ್ನು ತಿಳಿಸುವಂತಹದು. ಅವನ ಮಾತೂ ಕೆಲಸಗಳೂ ಸುಂದರ. ಅವನು ಆಡುವ ಮಾತು ಪೌರರಿಗೆ ತಕ್ಕುದಾದುದು . . .

"ಪೂಜ್ಯ ಸೋಣದಂಡನು ಅನೇಕಾನೇಕ ಆಚಾರ್ಯರಿಗೆ ಆಚಾರ್ಯನು; ಮೂರುನೂರು ಬ್ರಾಹ್ಮಣ ಯುವಕರಿಗೆ ಮಂತ್ರ ಓದಿಸುವನು. ನಾನಾ ದಿಕ್ಕುಗಳಿಂದ, ನಾನಾ ಜನಪದಗಳಿಂದ, ಮಂತ್ರ ಕಲಿಯಬೇಕೆಂದು ಮಂತ್ರಾರ್ಥಿಗಳಾಗಿ ಅನೇಕ ಬ್ರಾಹ್ಮಣ ಯುವಕರು ಪೂಜ್ಯ ಸೋಣದಂಡನ ಸಮೀಪಕ್ಕೆ ಬರುವರು . . .

"ಪೂಜ್ಯ ಸೋಣದಂಡನು ಮುಪ್ಪಾದವನು, ವೃದ್ಧನು, ವಯಸ್ಸಾದವನು, ದಾರಿ ನಡೆದವನು, ದಿನ ತುಂಬಿದವನು. ಶ್ರಮಣ ಗೌತಮನು ಇನ್ನೂ ತರುಣನು, ತರುಣ ಪರಿವ್ರಾಜಕನು . . .

"ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನು ಪೂಜ್ಯ ಸೋಣದಂಡನನ್ನು ಸತ್ಕರಿಸಿ, ಗೌರವಿಸಿ, ಮಾನಿಸಿ, ಪೂಜಿಸಿ, ಅವನಿಗೆ ಕೈಜೋಡಿಸುವನು . . .

"ಬ್ರಾಹ್ಮಣ ಪೌಷ್ಕರಸಾದಿಯು ಪೂಜ್ಯ ಸೋಣದಂಡನನ್ನು ಸತ್ಕರಿಸಿ, ಗೌರವಿಸಿ, ಮಾನಿಸಿ, ಪೂಜಿಸಿ, ಅವನಿಗೆ ಕೈಜೋಡಿಸುವನು . . .

"ಜೀವಿಗಳಿಂದ ತುಂಬಿತುಳುಕಿ, ಹುಲ್ಲು ಕಡ್ಡಿ ಕಾಳು ನೀರಿನಿಂದ ಕೂಡಿ, ರಾಜನು ಭೋಗಿಸಲು ತಕ್ಕುದಾದ ಚಂಪೆಯಲ್ಲಿ ಪೂಜ್ಯ ಸೋಣದಂಡನು ವಾಸಿಸುವನು. ಇದನ್ನು ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನು ರಾಜಯೋಗ್ಯವಾದ ದಾನವೆಂದು, ಶ್ರೇಷ್ಠವಾದ ದಾನವೆಂದು ಕೊಟ್ಟನು . . .

"ಈ ಕಾರಣಗಳಿಂದ ಶ್ರಮಣ ಗೌತಮನನ್ನು ಕಾಣುವುದಕ್ಕೆ ಪೂಜ್ಯ ಸೋಣದಂಡನು ಹೋಗುವುದು ತಕ್ಕುದಲ್ಲ; ಪೂಜ್ಯ ಸೋಣದಂಡನನ್ನು ಕಾಣಲು ಶ್ರಮಣ ಗೌತಮನೇ ಬರುವುದು ತಕ್ಕುದು."

ಹೀಗೆನ್ನಲು, ಬ್ರಾಹ್ಮಣ ಸೋಣದಂಡನು ಆ ಬ್ರಾಹ್ಮಣರಿಗೆ ಹೀಗೆಂದನು:

"ಭೋ! ಈಗ ನಾನು ಹೇಳುವುದನ್ನು ಕೇಳಿರಿ. ಪೂಜ್ಯ ಗೌತಮ ನನ್ನು ನಾನೇ ಹೋಗಿ ಕಾಣುವುದು ತಕ್ಕುದು. ಪೂಜ್ಯ ಗೌತಮನು ನನ್ನನ್ನು ಕಾಣಲು ಬರುವುದು ತಕ್ಕುದಲ್ಲ.

"ಶ್ರಮಣ ಗೌತಮನ ಜಾತಿಯು ಎರಡು ಕಡೆಯಿಂದಲೂ ಒಳ್ಳೆಯದು. ಅವನ ತಾಯಿತಂದೆಯರ ಜನ್ಮವು ಏಳು ಪಿತಾಮಹ ಯುಗಗಳವರೆಗೂ ಶುದ್ಧವಾದುದು. ಅವನ ಜಾತಿಯಲ್ಲಿ ಕಳಂಕವಿಲ್ಲ, ನಿಂದೆಗೆ ಆಸ್ಪದವಿಲ್ಲ . . .

"ಶ್ರಮಣ ಗೌತಮನು ತನ್ನ ಜ್ಞಾತಿಗಳ ದೊಡ್ಡ ಬಳಗವನ್ನು ಬಿಟ್ಟು ಪರಿವ್ರಜಿಸಿದನು . . .

"ಭೂಮಿಯ ಮೇಲೂ ಕೆಳಗೂ ರಾಶಿಯಾಗಿದ್ದ ಧನಕನಕಗಳನ್ನು ಬಿಟ್ಟು, ಶ್ರಮಣ ಗೌತಮನು ಪರಿವ್ರಜಿಸಿದನು.

"ಶ್ರಮಣ ಗೌತಮನು ಗೃಹಸ್ಥಧರ್ಮವನ್ನು ಬಿಟ್ಟು ಸಂನ್ಯಾಸಿ ಯಾದಾಗ ಇನ್ನೂ ತರುಣ; ತಲೆಗೂದಲು ಇನ್ನೂ ಕಪ್ಪಾಗಿತ್ತು; ಆಗ ಮಂಗಳಕರವಾದ ಯೌವನದ ಮೊದಲ ವಯಸ್ಸು . . .

"ಶ್ರಮಣ ಗೌತಮನು ಸಂನ್ಯಾಸಿಯಾಗುವುದು ಅವನ ತಾಯಿ ತಂದೆಯರಿಗೆ ಇಷ್ಟವಿರಲಿಲ್ಲ; ಅವರು ಕಣ್ಣೀರುಬಿಡುತ್ತ ಅಳುತ್ತಿದ್ದರು. ಆದರೂ ಗೌತಮನು ಕೂದಲು ಗಡ್ಡಗಳನ್ನು ತೆಗೆದು, ಕಾಷಾಯವಸ್ತ್ರ ಗಳನ್ನು ಹೊದೆದು, ಹೊರಟನು . . .

"ಶ್ರಮಣ ಗೌತಮನು ಸುಂದರನು, ನೋಟಕ್ಕೆ ಚೆಲುವನು. ಅವ ನನ್ನು ಕಂಡರೆ ಮನಸ್ಸು ಪ್ರಸನ್ನವಾಗುವುದು. ಅವನು ಹೆಚ್ಚಾದ ವರ್ಣ ಪುಷ್ಕಳತೆಯಿಂದ ಕೂಡಿದವನು. ಅವನ ಬಣ್ಣ ಶ್ರೇಷ್ಠವಾದುದು. ಅವನ ವರ್ಚಸ್ಸು ಬ್ರಹ್ಮನಂತಹದು. ಅವನದು ನೋಡಲು ದೀರ್ಘವಾದ ಗಂಭೀರವಾದ ಆಕಾರ . . .

"ಶ್ರಮಣ ಗೌತಮನು ಶೀಲವಂತನು. ಅವನದು ಆರ್ಯರಿಗೆ ತಕ್ಕ ಶೀಲ; ಕುಶಲವಾದ ಕರ್ಮಗಳೇ ಅವನ ಶೀಲ . . .

“ಶ್ರಮಣ ಗೌತಮನ ಮಾತು ಸುಂದರವಾದುದು. ಅದರಲ್ಲಿ ಸಂದಿಗ್ಧ ವಿಲಂಬಿತ ಮೊದಲಾದ ದೋಷಗಳಿಲ್ಲ. ಅವನ ಮಾತು ಸ್ಪಷ್ಟ, ಅರ್ಥವನ್ನು ತಿಳಿಸುವಂತಹದು. ಅವನ ಮಾತೂ ಕೆಲಸಗಳೂ ಸುಂದರ. ಅವನು ಆಡುವ ಮಾತು ಪೌರರಿಗೆ ತಕ್ಕುದಾದುದು . . .

“ಶ್ರಮಣ ಗೌತಮನು ಅನೇಕರ ಆಚಾರ್ಯರಿಗೆ ಆಚಾರ್ಯನು . . .

“ಶ್ರಮಣ ಗೌತಮನಿಗೆ ಕಾಮರಾಗಗಳು ಕ್ಷೀಣವಾಗಿವೆ; ಚಾಪಲ್ಯ ಹೋಗಿದೆ . . .

“ಶ್ರಮಣ ಗೌತಮನು ಕರ್ಮವಾದಿ, ಕ್ರಿಯಾವಾದಿ; ಬ್ರಾಹ್ಮಣ ಪ್ರಜೆಗಳಲ್ಲಿ ಅಪಾಪವನ್ನು ಪುರಸ್ಕರಿಸುವನು . . .

“ಶ್ರಮಣ ಗೌತಮನು ಆದಿಕ್ಷತ್ರಿಯ ಕುಲಗಳಲ್ಲಿ ಉಚ್ಚಕುಲ ದಿಂದ ಪರಿವ್ರಜಿಸಿದನು . . .

“ಶ್ರಮಣ ಗೌತಮನು ಮಹಾಧನವುಳ್ಳ ಮಹಾಭೋಗವುಳ್ಳ ಆಢ್ಯಕುಲದಿಂದ ಪರಿವ್ರಜಿಸಿದನು . . .

“ಶ್ರಮಣ ಗೌತಮನನ್ನು ಪ್ರಶ್ನಿಸಬೇಕೆಂದು ರಾಷ್ಟ್ರಗಳಾಚೆಯಿಂದ, ಜನಪದಗಳಾಚೆಯಿಂದ ಜನರು ಬರುತ್ತಾರೆ . . .

“ಶ್ರಮಣ ಗೌತಮನಿಗೆ ಸಾವಿರಾರು ದೇವತೆಗಳು ಶರಣು ಹೋಗುವರು . . .

“‘ಆ ಭಗವಂತನು ಅರ್ಹನು, ಸಮ್ಯಕ್‌ಸಂಬುದ್ಧನು, ವಿದ್ಯಾ ಚರಣಸಂಪನ್ನನು. ಅವನು ಸುಗತಿಯನ್ನು ಪಡೆದವನು. ಆತನು ಲೋಕಗಳನ್ನು ತಿಳಿದವನು. ದಮನವನ್ನು ಬಯಸುವ ಜನರನ್ನು ಸಾರಥಿಯಂತೆ ನಡಿಸುವುದರಲ್ಲಿ ಎಲ್ಲರನ್ನೂ ಮೀರಿಸಿದವನು. ಅವನು ದೇವತೆಗಳಿಗೂ ಮನುಷ್ಯರಿಗೂ ಗುರುವು; ಬುದ್ಧನು, ಭಗವಂತನು’— ಎಂದು ಶ್ರಮಣ ಗೌತಮನನ್ನು ಕುರಿತು ಸುಂದರವಾದ ಕೀರ್ತಿಶಬ್ದವು ಹರಡಿದೆ . . .

“ಶ್ರಮಣ ಗೌತಮನಿಗೆ ಮೂವತ್ತೆರಡು ಮಹಾಪುರುಷಲಕ್ಷಣ ಗಳಿವೆ . . .

“ಅವನು ಎಲ್ಲರನ್ನೂ ‘ಬಾ’ ಎಂದು ಸ್ವಾಗತಿಸುವನು, ಸಖ್ಯದಿಂದ ಇರುವನು, ಸಮ್ಮೋದದಿಂದ ಇರುವನು. ಅವನು ಹುಬ್ಬು ಗಂಟು

ಹಾಕುವುದಿಲ್ಲ. ಸ್ಪಷ್ಟವಾಗಿ ಮಾತನಾಡುವನು. ಮಾತನಾಡಿದನಂತರ ಮಾತನಾಡುವನು . . .

"ಭಿಕ್ಷುಗಳು, ಭಿಕ್ಷುಣಿಯರು, ಉಪಾಸಕರು, ಉಪಾಸಿಕೆಯರು— ಎಂಬ ನಾಲ್ಕು ಗುಂಪಿನವರೂ ಶ್ರಮಣ ಗೌತಮನನ್ನು ಸತ್ಕರಿಸಿ, ಗೌರವಿಸಿ, ಮಾನಿಸಿ, ಪೂಜಿಸಿ, ಅವನಿಗೆ ಕೈಮುಗಿಯುವರು . . .

"ಅನೇಕ ದೇವತೆಗಳೂ ಮನುಷ್ಯರೂ ಶ್ರಮಣ ಗೌತಮನನ್ನು ಬಹಳವಾಗಿ ನಂಬಿರುವರು . . .

"ಶ್ರಮಣ ಗೌತಮನು ವಾಸಮಾಡುವ ಗ್ರಾಮ ನಗರಗಳಲ್ಲಿ ಅಮನುಷ್ಯರು ಮನುಷ್ಯರಿಗೆ ಕೇಡುಮಾಡುವುದಿಲ್ಲ . . .

"ಶ್ರಮಣ ಗೌತಮನನ್ನು ಸಂಘದ ಮುಖ್ಯಸ್ಥನೆಂದು, ಗಣದ ಮುಖಂಡನೆಂದು, ಗಣಾಚಾರ್ಯನೆಂದು, ಬೇರೆ ಬೇರೆ ತೀರ್ಥಕರ ಅಗ್ರನೆಂದು ಹೇಳುವರು . . .

"ಕೆಲವರು ಶ್ರಮಣ ಬ್ರಾಹ್ಮಣರಿಗೆ ಹಾಗೆ ಹೀಗೆ ಯಶಸ್ಸು ಸೇರಿದರೆ, ಶ್ರಮಣ ಗೌತಮನಿಗೆ ಯಶಸ್ಸು ಸೇರಿದುದು ಹಾಗಲ್ಲ; ಅನುತ್ತರವಾದ ವಿದ್ಯಾಚರಣಸಂಪದದಿಂದ ಶ್ರಮಣ ಗೌತಮನಿಗೆ ಯಶಸ್ಸು ಸೇರಿತು . . .

"ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನು ತನ್ನ ಮಕ್ಕಳು, ಹೆಂಡತಿ, ಪರಿವಾರ, ಮಂತ್ರಿಗಳೊಡನೆ ಶ್ರಮಣ ಗೌತಮನಿಗೆ ಶರಣಾಗಿರುವನು . . .

"ಕೋಸಲದ ರಾಜನಾದ ಪ್ರಸೇನಜಿತ್ತು ತನ್ನ ಮಕ್ಕಳು, ಹೆಂಡತಿ, ಪರಿವಾರ, ಮಂತ್ರಿಗಳೊಡನೆ ಶ್ರಮಣ ಗೌತಮನಿಗೆ ಶರಣಾಗಿರುವನು . . .

"ಬ್ರಾಹ್ಮಣನಾದ ಪೌಷ್ಕರಸಾದಿಯು ತನ್ನ ಮಕ್ಕಳು, ಹೆಂಡತಿ, ಜನ, ಜೊತೆಗಾರರೊಡನೆ ಶ್ರಮಣ ಗೌತಮನಿಗೆ ಶರಣಾಗಿರುವನು . . .

"ಮಗಧದ ರಾಜನಾದ ಶ್ರೇಣಿಯ ಬಿಂಬಿಸಾರನು ಶ್ರಮಣ ಗೌತಮನನ್ನು ಸತ್ಕರಿಸುವನು, ಗೌರವಿಸುವನು, ಮಾನಿಸುವನು, ಪೂಜಿಸುವನು; ಅವನಿಗೆ ಕೈಮುಗಿಯುವನು . . .

"ಕೋಸಲದ ರಾಜನಾದ ಪ್ರಸೇನಜಿತ್ತು ಶ್ರಮಣ ಗೌತಮನನ್ನು ಸತ್ಕರಿಸುವನು, ಗೌರವಿಸುವನು, ಮಾನಿಸುವನು, ಪೂಜಿಸುವನು; ಅವನಿಗೆ ಕೈಮುಗಿಯುವನು . . .

"ಬ್ರಾಹ್ಮಣನಾದ ಪೌಷ್ಕರಸಾದಿಯು ಶ್ರಮಣ ಗೌತಮನನ್ನು ಸತ್ಕರಿಸುವನು, ಗೌರವಿಸುವನು, ಮಾನಿಸುವನು, ಪೂಜಿಸುವನು; ಅವನಿಗೆ ಕೈಮುಗಿಯುವನು . . .

"ಶ್ರಮಣ ಗೌತಮನು ಚಂಪೆಯನ್ನು ಸಾರಿ, ಚಂಪೆಯಲ್ಲಿ, ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿರುವನು. ಯಾರಾದರೂ ಶ್ರಮಣ ಬ್ರಾಹ್ಮಣರು ನಮ್ಮ ಗ್ರಾಮಕ್ಷೇತ್ರಕ್ಕೆ ಬಂದರೆ, ಅವರು ನಮ್ಮ ಅತಿಥಿಗಳು. ಅತಿಥಿಗಳನ್ನು ನಾವು ಸತ್ಕರಿಸತಕ್ಕುದು, ಗೌರವಿಸತಕ್ಕುದು, ಮಾನಿಸತಕ್ಕುದು, ಪೂಜಿಸತಕ್ಕುದು; ಅವರಿಗೆ ಕೈಮುಗಿಯತಕ್ಕುದು. ಶ್ರಮಣ ಗೌತಮನು ಚಂಪೆಗೆ ಬಂದು, ಚಂಪೆಯಲ್ಲಿ, ಗಗ್ಗರೆಯ ಪುಷ್ಕರಿಣೀ ತೀರದಲ್ಲಿ ತಂಗಿದಾಗ, ಶ್ರಮಣ ಗೌತಮನು ನಮ್ಮ ಅತಿಥಿ. ಅತಿಥಿಯನ್ನು ನಾವು ಸತ್ಕರಿಸತಕ್ಕುದು, ಗೌರವಿಸತಕ್ಕುದು, ಮಾನಿಸತಕ್ಕುದು, ಪೂಜಿಸತಕ್ಕುದು; ಅವನಿಗೆ ಕೈಮುಗಿಯತಕ್ಕುದು.

"ಈ ಕಾರಣಗಳಿಂದ, ನನ್ನನ್ನು ಕಾಣಲು ಪೂಜ್ಯ ಗೌತಮನು ಬರುವುದು ತಕ್ಕುದಲ್ಲ; ಪೂಜ್ಯ ಗೌತಮನನ್ನು ನಾನೇ ಹೋಗಿ ಕಾಣುವುದು ತಕ್ಕುದು.

"ಭೋ! ಆ ಪೂಜ್ಯ ಗೌತಮನ ವರ್ಣವನ್ನು ಕುರಿತು ನಾನು ತಿಳಿದಿರುವುದು ಇಷ್ಟೆ. ಆದರೆ ಆತನ ವರ್ಣ ಇಷ್ಟೇ ಅಲ್ಲ; ಆ ವರ್ಣನೆಗೆ ಪರಿಮಿತಿಯಿಲ್ಲ."

ಹೀಗೆನ್ನಲು, ಆ ಬ್ರಾಹ್ಮಣರು "ಪೂಜ್ಯ ಸೋಣದಂಡನು ಶ್ರಮಣ ಗೌತಮನನ್ನು ವರ್ಣಿಸುವ ರೀತಿಯು—ಆ ಪೂಜ್ಯ ಗೌತಮನು ನೂರು ಯೋಜನ ದೂರದಲ್ಲಿ ತಂಗಿದ್ದರೂ ಸಂಚಿಯೊಡನೆಯಾದರೂ ಆ ಕುಲಪುತ್ರನ ದರ್ಶನಕ್ಕೆ ಹೋಗುವಂತೆ ನಂಬಿಕೆಯನ್ನು ಉಂಟುಮಾಡುವುದು. ಆದರಿಂದ, ಭೋ, ಎಲ್ಲರೂ ಶ್ರಮಣ ಗೌತಮನ ದರ್ಶನಕ್ಕಾಗಿ ತೆರಳೋಣ" ಎಂದು ಬ್ರಾಹ್ಮಣ ಸೋಣದಂಡನಿಗೆ ಹೇಳಿದರು.

ಆಗ, ವನಷಂಡವನ್ನು ದಾಟುತ್ತಿರುವಾಗ, ಸೋಣದಂಡನ ಮನಸ್ಸಿನಲ್ಲಿ ಹೀಗೆ ಪರಿವಿತರ್ಕ ಹುಟ್ಟಿತು:

"ನಾನೇ ಶ್ರಮಣ ಗೌತಮನನ್ನು ಪ್ರಶ್ನೆ ಕೇಳಿದರೆ; ಅವನು 'ಪ್ರಶ್ನೆ ಹೀಗೆ ಕೇಳತಕ್ಕುದಲ್ಲ, ಬ್ರಾಹ್ಮಣ; ಹೀಗೆ ಕೇಳತಕ್ಕುದು' ಎಂದರೆ; ಅದರಿಂದ ಈ ಸಭೆಯು 'ಬ್ರಾಹ್ಮಣನಾದ ಸೋಣದಂಡನು ಅಜ್ಞಾನಿ, ತಿಳಿಯದವನು. ಶ್ರಮಣ ಗೌತಮನನ್ನು ಸರಿಯಾಗಿ ಪ್ರಶ್ನಿಸಲೂ ಶಕ್ತನಲ್ಲ' ಎಂದು ನನಗೆ ಅಪಮಾನಮಾಡುವುದು. ಆ ಅಪಮಾನದಿಂದ ಯಶಸ್ಸು ಕಡಿಮೆಯಾಗುವುದು. ಯಶಸ್ಸು ಕಡಿಮೆಯಾದವನ ಭೋಗ ಕಡಿಮೆ ಯಾಗುವುದು; ಏಕೆಂದರೆ, ನಮ್ಮ ಭೋಗಗಳೆಲ್ಲ ಬರುವುದು ಯಶಸ್ಸಿನಿಂದ.

"ಹಾಗಲ್ಲದೆ, ಶ್ರಮಣ ಗೌತಮನೇ ನನ್ನನ್ನು ಪ್ರಶ್ನಿಸಿದರೆ, ನಾನು ಅದಕ್ಕೆ ಉತ್ತರಕೊಟ್ಟು ಅವನ ಮನಸ್ಸನ್ನು ಆರಾಧಿಸಲಾರೆ. ಆಗ ಶ್ರಮಣ ಗೌತಮನು 'ಪ್ರಶ್ನೆಗೆ ಉತ್ತರ ಕೊಡತಕ್ಕುದು ಹೀಗಲ್ಲ, ಬ್ರಾಹ್ಮಣ; ಉತ್ತರ ಕೊಡತಕ್ಕುದು ಹೀಗೆ' ಎಂದು ಹೇಳಿದರೆ; ಅದರಿಂದ ಈ ಸಭೆಯು 'ಬ್ರಾಹ್ಮಣನಾದ ಸೋಣದಂಡನು ಅಜ್ಞಾನಿ, ತಿಳಿಯದವನು. ಶ್ರಮಣ ಗೌತಮನ ಪ್ರಶ್ನೆಗೆ ಉತ್ತರಕೊಟ್ಟು ಅವನ ಚಿತ್ತವನ್ನು ಆರಾಧಿಸಲಾರದೆ ಹೋದ' ಎಂದು ನನಗೆ ಅಪಮಾನಮಾಡುವುದು. ಆ ಅಪಮಾನದಿಂದ ಯಶಸ್ಸು ಕಡಿಮೆಯಾಗುವುದು. ಯಶಸ್ಸು ಕಡಿಮೆಯಾದವನ ಭೋಗ ಕಡಿಮೆಯಾಗುವುದು; ಏಕೆಂದರೆ, ನಮ್ಮ ಭೋಗಗಳೆಲ್ಲ ಬರುವುದು ಯಶಸ್ಸಿನಿಂದ.

"ಹಾಗಲ್ಲದೆ, ಇಷ್ಟು ಹತ್ತಿರ ಬಂದೂ ಶ್ರಮಣ ಗೌತಮನನ್ನು ಕಾಣದೆ ಹಿಂದಿರುಗಿದರೆ; ಅದರಿಂದ ಈ ಸಭೆಯು 'ಬ್ರಾಹ್ಮಣನಾದ ಸೋಣದಂಡನು ಅಜ್ಞಾನಿ, ತಿಳಿಯದವನು. ಮಾನದಿಂದ ಬೀಗಿ, ಹೆದರಿ, ಶ್ರಮಣ ಗೌತಮನನ್ನು ಕಂಡು ಬರಲಾರದೆ ಹೋದ. ಇಷ್ಟು ಹತ್ತಿರ ಬಂದೂ ಶ್ರಮಣ ಗೌತಮನನ್ನು ಕಾಣದೆ ಹೇಗೆ ಹಿಂದಿರುಗಿದ?' ಎಂದು ನನಗೆ ಅಪಮಾನಮಾಡುವುದು. ಆ ಅಪಮಾನದಿಂದ ಯಶಸ್ಸು ಕಡಿಮೆಯಾಗುವುದು. ಯಶಸ್ಸು ಕಡಿಮೆಯಾದವನ ಭೋಗ ಕಡಿಮೆ ಯಾಗುವುದು; ಏಕೆಂದರೆ, ನಮ್ಮ ಭೋಗಗಳೆಲ್ಲ ಬರುವುದು ಯಶಸ್ಸಿನಿಂದ."

ಆಗ, ಬ್ರಾಹ್ಮಣ ಸೋಣದಂಡನು ಭಗವಂತನಿರುವ ಬಳಿಸಾರಿ, ಸಮ್ಮೋದದಿಂದ ನುಡಿದು, ಕೇಳತಕ್ಕ ಕುಶಲಪ್ರಶ್ನೆಗಳಾದ ಮೇಲೆ ಒಂದು

ಕಡೆ ಕುಳಿತನು. ಚಂಪೆಯ ಬ್ರಾಹ್ಮಣರು ಗೃಹಪತಿಗಳಲ್ಲಿ ಕೆಲವರು ಭಗವಂತನಿಗೆ ಅಭಿವಂದಿಸಿ ಒಂದು ಕಡೆ ಕುಳಿತರು; ಕೆಲವರು ಭಗವಂತನೊಡನೆ ಸಮ್ಮೋದದಿಂದ ನುಡಿದು, ಕೇಳತಕ್ಕ ಕುಶಲಪ್ರಶ್ನೆಗಳನ್ನು ಕೇಳಿ, ಒಂದು ಕಡೆ ಕುಳಿತರು; ಕೆಲವರು ಭಗವಂತನಿರುವ ಕಡೆಗೆ ಕೈಮುಗಿದು ಒಂದು ಕಡೆ ಕುಳಿತರು; ಕೆಲವರು ತಮ್ಮ ಹೆಸರು ಗೋತ್ರಗಳನ್ನು ತಿಳಿಸಿ ಒಂದು ಕಡೆ ಕುಳಿತರು; ಕೆಲವರು ಮೌನವಾಗಿ ಒಂದು ಕಡೆ ಕುಳಿತರು.

ಆಗ ಕೂಡ, ಬ್ರಾಹ್ಮಣ ಸೋಣದಂಡನು ಬಹುವಾದ ಅನುವಿತರ್ಕದಿಂದ ಕೂಡಿ ಕುಳಿತು, "ಆಹಾ! ಆಚಾರ್ಯನಾದ ನಾನು ಬಲ್ಲ ಮೂರು ವೇದಗಳಲ್ಲಿ ಶ್ರಮಣ ಗೌತಮನು ಪ್ರಶ್ನೆ ಕೇಳಿದರೆ, ಅದಕ್ಕೆ ಉತ್ತರ ಕೊಟ್ಟು ಅವನ ಚಿತ್ತವನ್ನು ಆರಾಧಿಸಿಯೇನು!" ಎಂದುಕೊಂಡನು.

ಬ್ರಾಹ್ಮಣ ಸೋಣದಂಡನ ಮನಸ್ಸಿನ ಪರಿವಿತರ್ಕವನ್ನು ಕಂಡು, ಭಗವಂತನು "ಈ ಬ್ರಾಹ್ಮಣ ಸೋಣದಂಡನು ತನ್ನ ಸ್ವಂತ ಮನಸ್ಸಿನಿಂದ ನೋಯುತ್ತಿದ್ದಾನೆ. ಅವನು ಆಚಾರ್ಯನಾಗಿ ಬಲ್ಲ ಮೂರುವೇದದಲ್ಲಿ ಈಗ ಅವನನ್ನು ಪ್ರಶ್ನಿಸುವೆನು" ಎಂದುಕೊಂಡು, "ಬ್ರಾಹ್ಮಣ! 'ನಾನು ಬ್ರಾಹ್ಮಣ' ಎಂದು ಹೇಳುವವನು ಸುಳ್ಳು ಹೇಳದೆ ಸರಿಯಾದುದನ್ನೇ ಹೇಳಬೇಕಾದರೆ, ಬ್ರಾಹ್ಮಣನಿಗೆ ಎಷ್ಟು ಅಂಗಗಳಿರಬೇಕೆಂದು ಬ್ರಾಹ್ಮಣರು ತಿಳಿಸುವರು?" ಎಂದು ಸೋಣದಂಡನನ್ನು ಕೇಳಿದನು.

ಆಗ, ಬ್ರಾಹ್ಮಣ ಸೋಣದಂಡನಿಗೆ "ಆಹಾ! 'ಆಚಾರ್ಯನಾದ ನಾನು ಬಲ್ಲ ಮೂರುವೇದಗಳಲ್ಲಿ ಶ್ರಮಣ ಗೌತಮನು ಪ್ರಶ್ನೆ ಕೇಳಿದರೆ, ಅದಕ್ಕೆ ಉತ್ತರಕೊಟ್ಟು ಅವನ ಚಿತ್ತವನ್ನು ಆರಾಧಿಸಿಯೇನು!' — ಎಂದು ಯಾವುದನ್ನು ಇಚ್ಛಿಸಿದೆ, ಯಾವುದನ್ನು ಬಯಸಿದೆ, ಯಾವುದು ಬೇಕೆಂದೆ, ಯಾವುದನ್ನು ಬೇಡಿದೆ, ಅದನ್ನು, ನಾನು ಆಚಾರ್ಯನಾಗಿ ಬಲ್ಲ ಮೂರು ವೇದಗಳಲ್ಲಿನ ಪ್ರಶ್ನೆಯನ್ನು ಶ್ರಮಣ ಗೌತಮನು ಕೇಳಿರುವನು. ಅವನ ಪ್ರಶ್ನೆಗೆ ಉತ್ತರಕೊಟ್ಟು ಅವನ ಮನಸ್ಸನ್ನು ಆರಾಧಿಸಿಯೇನೆ!" ಎನ್ನಿಸಿತು.

ಆಗ, ಬ್ರಾಹ್ಮಣ ಸೋಣದಂಡನು ತನ್ನ ದೇಹವನ್ನು ನೆಟ್ಟಗಿಟ್ಟು, ಸಭೆಯ ಸುತ್ತ ನೋಡಿ, ಭಗವಂತನಿಗೆ ಹೀಗೆಂದನು:

“ಭೋ ಗೌತಮ! ‘ನಾನು ಬ್ರಾಹ್ಮಣ’ ಎಂದು ಹೇಳುವವನು ಸುಳ್ಳು ಹೇಳದೆ ಸರಿಯಾದುದನ್ನೇ ಹೇಳಬೇಕಾದರೆ, ಬ್ರಾಹ್ಮಣನಿಗೆ ಐದು ಅಂಗಗಳಿರಬೇಕೆಂದು ಬ್ರಾಹ್ಮಣರು ಹೇಳುವರು.

“ಆ ಐದು ಯಾವುವು?

“ಬ್ರಾಹ್ಮಣನು ಎರಡು ಕಡೆಯಿಂದಲೂ ಒಳ್ಳೆಯ ಜಾತಿಯುಳ್ಳವನು. ಅವನ ತಾಯಿತಂದೆಯರ ಜನ್ಮವು ಏಳು ಪಿತಾಮಹ ಯುಗಗಳ ವರೆಗೂ ಸಂಶುದ್ಧವಾದುದು. ಅವನ ಜಾತಿಯಲ್ಲಿ ಕಳಂಕವಿಲ್ಲ, ನಿಂದೆಗೆ ಆಸ್ಪದವಿಲ್ಲ.

“ಅವನು ವೇದಗಳನ್ನು ಕಲಿತವನು; ಮಂತ್ರ ತಿಳಿದವನು; ನಿಘಂಟು, ‘ಕೇಟುಭ’, ಅಕ್ಷರ ಪ್ರಭೇದಗಳು, ಮತ್ತು ಐದನೆಯದಾಗಿ ಇತಿಹಾಸದೊಡನೆ ಮೂರುವೇದಗಳಲ್ಲಿ ಪಾರಂಗತನು. ವೇದಗಳ ಪದ ಪಾಠವನ್ನು ಬಲ್ಲವನು. ವೈಯಾಕರಣನು; ಲೋಕಾಯತ ಮಹಾ ಪುರುಷಲಕ್ಷಣಗಳಲ್ಲಿ ಪಂಡಿತನು.

“ಅವನು ಸುಂದರನು, ನೋಟಕ್ಕೆ ಚೆಲುವನು, ಮನಸ್ಸಿಗೆ ಪ್ರಸನ್ನತೆಯನ್ನು ಕೊಡುವವನು, ಹೆಚ್ಚಾದ ವರ್ಣಪುಷ್ಕಳತೆಯಿಂದ ಕೂಡಿದವನು; ಅವನ ಬಣ್ಣ ಶ್ರೇಷ್ಠವಾದುದು; ಅವನ ವರ್ಚಸ್ಸು ಬ್ರಹ್ಮನಂತಹದು; ನೋಡಲು ದೀರ್ಘವಾಗಿ ಗಂಭೀರವಾದ ಆಕಾರ.

“ಅವನು ಶೀಲವಂತನು. ಶೀಲವು ಅವನಲ್ಲಿ ಬೆಳೆದಿದೆ. ಅವನು ಬೆಳೆದು ಹೆಚ್ಚಾದ ಶೀಲದಿಂದ ಕೂಡಿದವನು.

“ಅವನು ಪಂಡಿತ, ಮೇಧಾವಿ; ಸ್ರುಚವನ್ನು ಹಿಡಿಯುವವರಲ್ಲಿ ಅವನು ಮೊದಲನೆಯವನು, ಅಥವಾ ಎರಡನೆಯವನು.

“ಬ್ರಾಹ್ಮಣನಿಗೆ ಈ ಐದು ಅಂಗಗಳಿರಬೇಕೆಂದು ಬ್ರಾಹ್ಮಣರು ಹೇಳುವರು, ಭೋ ಗೌತಮ.”

“ಆದರೆ, ಬ್ರಾಹ್ಮಣ, ಈ ಐದು ಅಂಗಗಳಲ್ಲಿ ಒಂದನ್ನು ಬಿಟ್ಟು, ಮಿಕ್ಕ ನಾಲ್ಕರಿಂದ ಕೂಡಿದವನನ್ನು ಬ್ರಾಹ್ಮಣನೆಂದು ಹೇಳಲಾಗುವುದೆ? ಆಗಲೂ ‘ನಾನು ಬ್ರಾಹ್ಮಣ’ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯವೆ?”

"ಶಕ್ಯ, ಭೋ ಗೌತಮ. ಈ ಐದು ಅಂಗಗಳಲ್ಲಿ, ವರ್ಣವನ್ನು ಬಿಡಬಹುದು. ವರ್ಣವೇನು ಮಾಡುವುದು? ಮಿಕ್ಕ ನಾಲ್ಕು ಅಂಗಗಳಿದ್ದರೆ, ಅವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ಹೇಳುವರು. ಆಗಲೂ, 'ನಾನು ಬ್ರಾಹ್ಮಣ'ನೆಂಬವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯ."

"ಆದರೆ, ಬ್ರಾಹ್ಮಣ, ಈ ನಾಲ್ಕು ಅಂಗಗಳಲ್ಲಿ ಒಂದನ್ನು ಬಿಟ್ಟು, ಮಿಕ್ಕ ಮೂರರಿಂದ ಕೂಡಿದವನನ್ನು ಬ್ರಾಹ್ಮಣನೆಂದು ಹೇಳಲಾಗುವುದೆ? ಆಗಲೂ, 'ನಾನು ಬ್ರಾಹ್ಮಣ'ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯವೆ?"

"ಶಕ್ಯ, ಭೋ ಗೌತಮ. ಈ ನಾಲ್ಕು ಅಂಗಗಳಲ್ಲಿ ಮಂತ್ರವನ್ನು ಬಿಡಬಹುದು. ಮಂತ್ರವೇನು ಮಾಡುವುದು? ಉಳಿದ ಮೂರು ಅಂಗಗಳಿದ್ದರೆ, ಅವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ಹೇಳುವರು. ಆಗಲೂ, 'ನಾನು ಬಾಹ್ಮಣ'ನೆಂಬವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯ."

"ಆದರೆ, ಬ್ರಾಹ್ಮಣ, ಈ ಮೂರು ಅಂಗಗಳಲ್ಲಿ ಒಂದನ್ನು ಬಿಟ್ಟು, ಮಿಕ್ಕ ಎರಡರಿಂದ ಕೂಡಿದವನನ್ನು ಬ್ರಾಹ್ಮಣನೆಂದು ಹೇಳಲಾಗುವುದೆ? ಆಗಲೂ, 'ನಾನು ಬ್ರಾಹ್ಮಣ'ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯವೆ?"

"ಶಕ್ಯ, ಭೋ ಗೌತಮ. ಈ ಮೂರು ಅಂಗಗಳಲ್ಲಿ ಜಾತಿಯನ್ನು ಬಿಡಬಹುದು. ಜಾತಿಯೇನು ಮಾಡುವುದು? ಉಳಿದ ಎರಡು ಅಂಗಗಳಿದ್ದರೆ, ಅವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ಹೇಳುವರು. ಆಗಲೂ, 'ನಾನು ಬ್ರಾಹ್ಮಣ'ನೆಂಬವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯ."

ಬ್ರಾಹ್ಮಣ ಸೋಣದಂಡನು ಹೀಗೆನ್ನಲು, ಆ ಸಭೆಯ ಬ್ರಾಹ್ಮಣರು "ಪೂಜ್ಯ ಸೋಣದಂಡನು ಹಾಗೆ ಹೇಳದಿರಲಿ! ಹಾಗೆನ್ನದಿರಲಿ! ಪೂಜ್ಯನಾದ ಸೋಣದಂಡನು ವರ್ಣವನ್ನು ಮಾತ್ರವಲ್ಲ, ಮಂತ್ರಗಳನ್ನೂ ಜಾತಿಯನ್ನೂ ಅವಹೇಳನಮಾಡುವನು! ಪೂಜ್ಯ ಸೋಣದಂಡನು ಶ್ರಮಣ ಗೌತಮನ ವಾದವನ್ನೇ ಸಮರ್ಥಿಸುತ್ತಿರುವನಲ್ಲ!" ಎಂದರು.

ಆಗ ಭಗವಂತನು "ಬ್ರಾಹ್ಮಣರೆ! 'ಬ್ರಾಹ್ಮಣ ಸೋಣದಂಡನು ಅಲ್ಪಶ್ರುತನು, ಅಕಲ್ಯಾಣವಾಕ್ಕರಣನು, ದುಷ್ಪ್ರಜ್ಞನು, ಶ್ರಮಣ ಗೌತಮನೊಡನೆ ಮಾತನಾಡಿ ಮಂತಣಮಾಡಲಾರನು' ಎಂದು ನಿಮಗೆನಿಸಿದರೆ, ಬ್ರಾಹ್ಮಣ ಸೋಣದಂಡನು ಕುಳಿತುಕೊಳ್ಳಲಿ, ನೀವು ನನ್ನೊಡನೆ ಮಂತಣಮಾಡಿರಿ. ಹಾಗಲ್ಲದೆ, 'ಬ್ರಾಹ್ಮಣ ಸೋಣದಂಡನು ಬಹುಶ್ರುತನು, ಕಲ್ಯಾಣವಾಕ್ಕರಣನು, ಪಂಡಿತನು, ಶ್ರಮಣ ಗೌತಮನೊಡನೆ ಮಾತನಾಡಿ ಮಂತಣಮಾಡಲಾಪನು' ಎಂದು ನಿಮಗೆನಿಸಿದರೆ, ನೀವು ಕುಳಿತುಕೊಳ್ಳಿ, ಬ್ರಾಹ್ಮಣ ಸೋಣದಂಡನು ನನ್ನೊಡನೆ ಮಂತಣಮಾಡಲಿ" ಎಂದನು.

ಹಾಗೆನ್ನಲು, ಬ್ರಾಹ್ಮಣ ಸೋಣದಂಡನು "ಪೂಜ್ಯ ಗೌತಮನು ಕುಳಿತುಕೊಳ್ಳಲಿ. ಪೂಜ್ಯ ಗೌತಮನು ಸುಮ್ಮನಾಗಲಿ. ಅವರ ಧರ್ಮದಂತೆ ಅವರಿಗೆ ನಾನೇ ಉತ್ತರ ಕೊಡುವೆನು" ಎಂದು ಭಗವಂತನಿಗೆ ನುಡಿದು, "ಪೂಜ್ಯರೆ! 'ಸೋಣದಂಡನು ವರ್ಣವನ್ನು ಮಾತ್ರವಲ್ಲ, ಮಂತ್ರಗಳನ್ನೂ ಜಾತಿಯನ್ನೂ ಅವಹೇಳನಮಾಡುವನು; ಶ್ರಮಣ ಗೌತಮನ ವಾದವನ್ನೇ ಹಿಡಿಯುತ್ತಿರುವನು' ಎಂದು ಹೇಳಬೇಡಿರಿ. ವರ್ಣವನ್ನಾಗಲಿ, ಮಂತ್ರಗಳನ್ನಾಗಲಿ, ಜಾತಿಯನ್ನಾಗಲಿ ನಾನು ಅವಹೇಳನಮಾಡೆನು" ಎಂದು ಆ ಬ್ರಾಹ್ಮಣರಿಗೆ ಹೇಳಿದನು.

ಆಗ, ಆ ಸಮಯದಲ್ಲಿ, ಬ್ರಾಹ್ಮಣ ಸೋಣದಂಡನ ಅಕ್ಕನ ಮಗನಾದ ಅಂಗಕನೆಂಬ ಯುವಕನು ಆ ಸಭೆಯಲ್ಲಿ ಕುಳಿತಿದ್ದನು. ಆಗ, ಬ್ರಾಹ್ಮಣ ಸೋಣದಂಡನು "ಪೂಜ್ಯರೆ! ನನ್ನ ಅಕ್ಕನ ಮಗನಾದ ಈ ಅಂಗಕನನ್ನು ಕಾಣುವಿರಲ್ಲವೆ?" ಎಂದು ಆ ಬ್ರಾಹ್ಮಣರನ್ನು ಕುರಿತು ನುಡಿದನು.

"ಹೌದು, ಭೋ, ಕಾಣುವೆವು."

"ಭೋ! ಅಂಗಕನು ಸುಂದರನು, ನೋಟಕ್ಕೆ ಚೆಲುವನು, ಮನಸ್ಸಿಗೆ ಪ್ರಸನ್ನತೆಯನ್ನು ಕೊಡುವವನು, ಹೆಚ್ಚಾದ ವರ್ಣಪುಷ್ಕಳತೆಯಿಂದ ಕೂಡಿದವನು. ಈ ಸಮಸ್ತ ಸಭೆಯಲ್ಲಿ, ಶ್ರಮಣ ಗೌತಮನನ್ನು ಬಿಟ್ಟರೆ, ಅವನ ಸಮಸಮಾನರಿಲ್ಲ.

"ಭೋ! ಅಂಗಕನು ವೇದಗಳನ್ನು ಕಲಿತವನು; ಮಂತ್ರ ತಿಳಿದವನು; ನಿಘಂಟು, ಕೇಟುಭ, ಅಕ್ಷರ ಪ್ರಭೇದಗಳು, ಮತ್ತು ಐದನೆಯ

ದಾಗಿ ಇತಿಹಾಸದೊಡನೆ ಮೂರುವೇದಗಳಲ್ಲಿ ಪಾರಂಗತನು. ವೇದಗಳ ಪದಪಾಠವನ್ನು ಬಲ್ಲವನು. ವೈಯಾಕರಣನು; ಲೋಕಾಯತ ಮಹಾ ಪುರುಷಲಕ್ಷಣಗಳಲ್ಲಿ ಪಂಡಿತನು. ಅವನಿಗೆ ಮಂತ್ರ ಕಲಿಸಿದವನು ನಾನು.

"ಭೋ! ಅಂಗಕನು ಎರಡು ಕಡೆಯಿಂದಲೂ ಒಳ್ಳೆಯ ಜಾತಿ ಯುಳ್ಳವನು. ಅವನ ತಾಯಿತಂದೆಯರ ಜನ್ಮವು ಏಳು ಪಿತಾಮಹ ಯುಗಗಳವರೆಗೂ ಸಂಶುದ್ಧವಾದುದು. ಅವನ ಜಾತಿಯಲ್ಲಿ ಕಳಂಕ ವಿಲ್ಲ, ನಿಂದೆಗೆ ಆಸ್ಪದವಿಲ್ಲ. ಅವನ ತಾಯಿತಂದೆಯರನ್ನು ನಾನು ಬಲ್ಲೆ.

"ಭೋ! ಈ ಅಂಗಕನು ಪ್ರಾಣಿಗಳನ್ನು ಕೊಂದರೆ, ಕೊಡದು ದನ್ನು ತೆಗೆದುಕೊಂಡರೆ, ಕಂಡವರ ಹೆಂಡಿರ ಬಳಿ ಹೋದರೆ, ಸುಳ್ಳು ಹೇಳಿದರೆ, ಮದ್ಯ ಕುಡಿದರೆ—ಅವನ ವರ್ಣವಾಗಲಿ ಮಂತ್ರ ಜಾತಿ ಗಳಾಗಲಿ ಏನು ಮಾಡಿಯಾವು?

"ಭೋ! ಯಾವಾಗ ಬ್ರಾಹ್ಮಣನು ಶೀಲವಂತನಾಗಿ, ಶೀಲವನ್ನು ಬೆಳೆಸಿ, ಬೆಳೆದ ಶೀಲದಿಂದ ಕೂಡಿ, ಪಂಡಿತನಾಗಿ, ಮೇಧಾವಿಯಾಗಿ, ಸ್ರುಚವನ್ನು ಹಿಡಿಯುವವರಲ್ಲಿ ಮೊದಲನೆಯವನೋ ಎರಡನೆಯವನೋ ಆಗುವನು; ಆಗ—ಈ ಎರಡು ಅಂಗಗಳಿದ್ದರೆ—ಅವನನ್ನು ಬ್ರಾಹ್ಮಣರು ಬ್ರಾಹ್ಮಣನೆಂದು ಹೇಳುವರು. ಆಗಲೂ, 'ನಾನು ಬ್ರಾಹ್ಮಣ'ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯ."

"ಆದರೆ, ಬ್ರಾಹ್ಮಣ, ಈ ಎರಡು ಅಂಗಗಳಲ್ಲಿ ಒಂದನ್ನು ಬಿಟ್ಟು, ಮಿಕ್ಕ ಒಂದೇ ಅಂಗದಿಂದ ಕೂಡಿದವನನ್ನು ಬ್ರಾಹ್ಮಣನೆಂದು ಹೇಳಲಾಗು ವುದೆ? ಆಗಲೂ, 'ನಾನು ಬ್ರಾಹ್ಮಣ'ನೆಂದು ಹೇಳುವವನು ಸುಳ್ಳಾಡದೆ ಸರಿಯಾದುದನ್ನೇ ಹೇಳಲು ಶಕ್ಯವೆ?"

"ಆದಾಗದು, ಭೋ ಗೌತಮ. ಭೋ ಗೌತಮ! ಪ್ರಜ್ಞೆ ಶೀಲದಿಂದ ಪರಿಧೌತವಾಗುವುದು, ಪ್ರಜ್ಞೆಯಿಂದ ಶೀಲ ಪರಿಧೌತವಾಗುವುದು. ಶೀಲ ವಿರುವ ಕಡೆ ಪ್ರಜ್ಞೆ, ಪ್ರಜ್ಞೆಯಿರುವ ಕಡೆ ಶೀಲ. ಪ್ರಜ್ಞೆಯು ಶೀಲವಂತ ನಿಗೆ, ಶೀಲವು ಪ್ರಜ್ಞಾವಂತನಿಗೆ. ಶೀಲ ಪ್ರಜ್ಞೆಗಳನ್ನು ಲೋಕದಲ್ಲಿ ಅಗ್ರ ವೆಂದು ಹೇಳುವರು. ಭೋ ಗೌತಮ! ಕೈಯಿಂದ ಕೈ ತೊಳೆಯುವಂತೆ, ಕಾಲಿನಿಂದ ಕಾಲು ತೊಳೆಯುವಂತೆ, ಪ್ರಜ್ಞೆಯು ಶೀಲದಿಂದ ಪರಿಧೌತ

ವಾಗುವುದು; ಶೀಲವು ಪ್ರಜ್ಞೆಯಿಂದ ಪರಿಧೌತವಾಗುವುದು. ಶೀಲವಿರುವ ಕಡೆ ಪ್ರಜ್ಞೆ, ಪ್ರಜ್ಞೆಯಿರುವ ಕಡೆ ಶೀಲ. ಶೀಲವಂತನಿಗೆ ಪ್ರಜ್ಞೆ, ಪ್ರಜ್ಞಾವಂತನಿಗೆ ಶೀಲ. ಶೀಲ ಪ್ರಜ್ಞೆಗಳನ್ನು ಲೋಕದಲ್ಲಿ ಅಗ್ರವೆಂದು ಹೇಳುವರು."

"ಅದು ಹಾಗೆಯೇ ಸರಿ, ಬ್ರಾಹ್ಮಣ! ನೀನು ಹೇಳಿದಂತೆಯೇ ಸರಿ. ನಾನು ಕೂಡ ಅದನ್ನೆ ಹೇಳುವೆನು. ಆದರೆ, ಬ್ರಾಹ್ಮಣ, ಆ ಶೀಲ ಯಾವುದು? ಆ ಪ್ರಜ್ಞೆ ಯಾವುದು?"

"ಈ ವಿಚಾರ ನನಗೆ ತಿಳಿದಿರುವುದು ಇಷ್ಟೇ, ಭೋ ಗೌತಮ. ಪೂಜ್ಯ ಗೌತಮನು ಈಗ ಹೇಳಿದುದರ ಅರ್ಥವನ್ನು ಬೆಳಗಿಸಿದರೆ ಮೇಲು."

"ಹಾಗಾದರೆ, ಬ್ರಾಹ್ಮಣ, ಕಿವಿಗೊಟ್ಟು ಕೇಳು. ಸಾಧುವಾದುದಕ್ಕೆ ಮನಸ್ಸು ಕೊಡು. ಹೇಳುತ್ತೇನೆ."

ಬ್ರಾಹ್ಮಣ ಸೋಣದಂಡನು "ಹಾಗೆಯೇ ಆಗಲಿ" ಎಂದು ಭಗವಂತನ ಮಾತಿಗೆ ಒಪ್ಪಿದನು.

ಭಗವಂತನು ಹೀಗೆಂದನು:

"ಬ್ರಾಹ್ಮಣ! ಸರ್ವಜ್ಞನಾದ ಬುದ್ಧನು ಲೋಕದಲ್ಲಿ ಜನಿಸಿ, ಧರ್ಮವನ್ನು ಸಾರಿ, ಬ್ರಹ್ಮಚರ್ಯವನ್ನು ಪ್ರಕಾಶಗೊಳಿಸುವನು. ಅದನ್ನು ಕೇಳಿದ ಶ್ರೋತೃವು ಶ್ರದ್ಧೆಯಿಂದ ಪ್ರವ್ರಜ್ಯವನ್ನು ಕೈಕೊಳ್ಳುವನು. ಅವನು ಕ್ಷುಲ್ಲಶೀಲ, ಮಧ್ಯಮಶೀಲ, ದೀರ್ಘಶೀಲಗಳನ್ನು ನಡಿಸಿ ಶೀಲಸಂಪನ್ನನಾಗುವನು. ಹೀಗೆ ಭಿಕ್ಷುವು ಶೀಲಸಂಪನ್ನನಾಗಿ, ಭಯವನ್ನು ತೊರೆದು ಸುಖವಾಗಿ ವಾಸಮಾಡುವನು.

"ಇದು, ಬ್ರಾಹ್ಮಣ, ಆ ಶೀಲ.

"ಭಿಕ್ಷುವು, ಬ್ರಾಹ್ಮಣ, ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ, ಚತುರ್ಥಧ್ಯಾನಗಳನ್ನು ಸಂಪಾದಿಸಿ ವಾಸಿಸುವನು. ಹೀಗೆ ಚಿತ್ತವನ್ನು ಒಂದು ಕಡೆ ನಿಲಿಸಿ, ಅದನ್ನು ಪರಿಶುದ್ಧವಾಗಿ, ಪರಿಶುಭ್ರವಾಗಿ ಮಾಡುವನು. ಅದು ಕೊಳೆಗಳು ಇಲ್ಲದೆ, ಉಪಕ್ಲೇಶಗಳು ಹೋಗಿ, ಮೃದುವಾಗಿ, ಕೆಲಸಕ್ಕೆ ಸಿದ್ಧವಾಗಿ, ಸ್ಥಿತವಾಗಿ, ಸ್ಥಿರವಾಗಲು; ಭಿಕ್ಷುವು ಜ್ಞಾನದರ್ಶನಕ್ಕಾಗಿ ಚಿತ್ತವನ್ನು ಬಗ್ಗಿಸುವನು. ಅದನ್ನು ಸಾಧಿಸಿ, ಕ್ರಮವಾಗಿ ಮನೋಮಯಕಾಯನಿರ್ಮಾಣ, ಋದ್ಧಿವಿಧ, ದಿವ್ಯಶ್ರೋತ್ರ, ಚೇತೋ

ಪರಿಯಜ್ಞಾನ, ಪೂರ್ವನಿವಾಸಾನುಸ್ಮೃತಿಜ್ಞಾನ, ಸತ್ತ್ವಗಳ ಚ್ಯುತೋಪಪಾತಜ್ಞಾನ, ಆಸ್ರವಕ್ಷಯಜ್ಞಾನ—ಇವುಗಳಿಗಾಗಿ ಚಿತ್ತವನ್ನು ಬಗ್ಗಿಸಿ ಸಾಧಿಸುವನು.

"ಇದು, ಬ್ರಾಹ್ಮಣ, ಆ ಪ್ರಜ್ಞೆ."

ಭಗವಂತನು ಹೀಗೆನ್ನಲು, ಬ್ರಾಹ್ಮಣ ಸೋಣದಂಡನು "ಬಲು ಸೊಗಸು, ಭೋ ಗೌತಮ! ಬಲುಸೊಗಸು, ಭೋ ಗೌತಮ! ಬಿದ್ದಿದ್ದದನ್ನು ಎತ್ತಿ ನಿಲ್ಲಿಸಿದಂತೆ, ಮುಚ್ಚಿದ್ದುದನ್ನು ಬಿಚ್ಚಿದಂತೆ, ಮೂಢನಿಗೆ ಮಾರ್ಗ ತೋರಿಕೊಟ್ಟಂತೆ, ಕಣ್ಣಿರುವವರು ರೂಪಗಳನ್ನು ಕಾಣಲೆಂದು ಕತ್ತಲಿನಲ್ಲಿ ತೈಲದ ದೀಪ ಹಿಡಿದಂತೆ ಪೂಜ್ಯ ಗೌತಮನು ಅನೇಕ ಪರ್ಯಾಯಗಳಿಂದ ಧರ್ಮವನ್ನು ಪ್ರಕಾಶಪಡಿಸಿದನು. ಭಗವಂತನಾದ ಗೌತಮನನ್ನು, ಅವನ ಧರ್ಮ ಭಿಕ್ಷುಸಂಘಗಳನ್ನು ಈ ನಾನೂ ಶರಣುಹೋಗುತ್ತೇನೆ. ಇಂದಿನಿಂದ ಪ್ರಾಣವಿರುವವರೆಗೂ ಶರಣಾಗತನಾದ ಉಪಾಸಕನೆಂದು ನನ್ನನ್ನು ಪೂಜ್ಯ ಗೌತಮನು ಸ್ವೀಕರಿಸಲಿ. ಪೂಜ್ಯ ಗೌತಮನು ಭಿಕ್ಷುಸಂಘದೊಡನೆ ನಾಳೆ ನಮ್ಮ ಊಟಕ್ಕೆ ಸಮ್ಮತಿಸಬೇಕು" ಎಂದನು.

ಭಗವಂತನು ಮೌನದಿಂದ ಒಪ್ಪಿದನು. ಭಗವಂತನು ಒಪ್ಪಿದುದನ್ನು ಬ್ರಾಹ್ಮಣ ಸೋಣದಂಡನು ತಿಳಿದು, ಆಸನದಿಂದ ಎದ್ದು, ಭಗವಂತನಿಗೆ ಅಭಿವಂದಿಸಿ, ಪ್ರದಕ್ಷಿಣೆಮಾಡಿ ಹೊರಟನು.

ಆ ರಾತ್ರಿ ಮುಗಿಯಲು, ಬ್ರಾಹ್ಮಣ ಸೋಣದಂಡನು ತನ್ನ ಮನೆಯಲ್ಲಿ ಸಿಹಿಯಾದ ಖಾದ್ಯಭೋಜ್ಯಗಳನ್ನು ಸಿದ್ಧಗೊಳಿಯಿಸಿ, "ಸಮಯವಾಯಿತು, ಭೋ ಗೌತಮ. ಊಟ ಸಿದ್ಧವಾಗಿದೆ" ಎಂದು ಭಗವಂತನಿಗೆ ತಿಳಿಸಿದನು. ಆಗ ಭಗವಂತನು ಪೂರ್ವಾಹ್ನ ಸಮಯದಲ್ಲಿ ಉಡುಪು ಹಾಕಿಕೊಂಡು, ಪಾತ್ರೆ ಚೀವರಗಳನ್ನು ಕೊಂಡು, ಭಿಕ್ಷುಸಂಘದೊಡನೆ ಬ್ರಾಹ್ಮಣ ಸೋಣದಂಡನ ಮನೆಯ ಬಳಿಸಾರಿ, ಸಿದ್ಧಗೊಳಿಸಿದ್ದ ಆಸನದಲ್ಲಿ ಕುಳಿತನು. ಆಗ, ಬ್ರಾಹ್ಮಣ ಸೋಣದಂಡನು, ಬುದ್ಧನು ಮೊದಲಾದ ಭಿಕ್ಷುಸಂಘಕ್ಕೆ ಸಿಹಿಯಾದ ಖಾದ್ಯಭೋಜ್ಯಗಳನ್ನು ತನ್ನ ಕೈಯಾರೆ ನೀಡಿ ಒಪ್ಪಿಸಿ, ಸಂತೃಪ್ತಿಪಡಿಸಿದನು. ಭಗವಂತನು ಊಟಮಾಡಿ ಪಾತ್ರೆಯಿಂದ

ಕೈ ತೆಗೆದ ಮೇಲೆ, ಬ್ರಾಹ್ಮಣ ಸೋಣದಂಡನು ಬೇರೊಂದು ಕೆಳಗಡೆಯ ಪೀಠವನ್ನು ಹಿಡಿದು ಒಂದು ಕಡೆ ಕುಳಿತನು.

ಒಂದು ಕಡೆ ಕುಳಿತು, ಬ್ರಾಹ್ಮಣ ಸೋಣದಂಡನು "ಭೋ ಗೌತಮ! ನಾನು ಸಭೆಗೆ ಬಂದು ಆಸನದಿಂದ ಮೇಲೆದ್ದು ಭಗವಂತನಾದ ಗೌತಮನಿಗೆ ಅಭಿವಂದಿಸಿದರೆ, ಅದರಿಂದ ಆ ಸಭೆಯು ನನಗೆ ಅಪಮಾನ ಮಾಡುವುದು. ಆ ಸಭೆಯಲ್ಲಿ ಅಪಮಾನ ಹೊಂದಿದವನ ಯಶಸ್ಸು ಕಡಿಮೆಯಾಗುವುದು. ಯಶಸ್ಸು ಕಡಿಮೆಯಾದವನ ಭೋಗವೂ ಕಡಿಮೆ ಯಾಗುವುದು; ಏಕೆಂದರೆ, ನಮಗೆ ಭೋಗ ಬರುವುದು ಯಶಸ್ಸಿನಿಂದ. ಅದರಿಂದ, ಭೋ ಗೌತಮ, ನಾನು ಸಭೆಗೆ ಬಂದು ಕೈ ಜೋಡಿಸಿ ಹಿಡಿದರೆ, ಅದನ್ನು ನಾನು ಆಸನದಿಂದ ಪ್ರತ್ಯುತ್ಥಾನಗೆಯ್ದಂತೆ ಸ್ವೀಕರಿಸಬೇಕು. ನಾನು ಪರಿಷೆಗೆ ಬಂದು ತಲೆಯ ವೇಷ್ಟನವನ್ನು ತೆಗೆದರೆ, ಅದನ್ನು ನಾನು ಶಿರಸಾಮಾಡಿದ ಅಭಿವಾದನವೆಂದು ಸ್ವೀಕರಿಸಬೇಕು. ನಾನು ರಥದಲ್ಲಿ ಹೋಗುತ್ತಿರುವಾಗ, ಭೋ ಗೌತಮ, ರಥದಿಂದ ಇಳಿದು ಭಗವಂತನಾದ ಗೌತಮನಿಗೆ ಅಭಿವಂದಿಸಿದರೆ, ಆ ಸಭೆಯು ನನಗೆ ಅಪಮಾನಮಾಡುವುದು. ಆ ಅಪಮಾನದಿಂದ ಯಶಸ್ಸು ಕಡಿಮೆಯಾಗಿ, ಅದರಿಂದ ಭೋಗ ಕಡಿಮೆಯಾಗುವುದು; ಏಕೆಂದರೆ, ನಮ್ಮ ಭೋಗ ಬರುವುದು ಯಶಸ್ಸಿನಿಂದ. ಅದರಿಂದ, ಭೋ ಗೌತಮ, ನಾನು ರಥದಲ್ಲಿ ಹೋಗುತ್ತ ಚುಚ್ಚುಗೋಲನ್ನು ತಗ್ಗಿಸಿದರೆ, ಅದನ್ನು ನಾನು ರಥದಿಂದ ಇಳಿದಂತೆ ಸ್ವೀಕರಿಸಬೇಕು. ನಾನು ರಥದಲ್ಲಿ ಹೋಗುತ್ತ ಕೈ ಬೀಸಿದರೆ, ಅದು ನಾನು ಪೂಜ್ಯ ಗೌತಮನಿಗೆ ಶಿರಸಾ ಮಾಡಿದ ಅಭಿವಾದನೆಯೆಂದು ಸ್ವೀಕರಿಸಬೇಕು" ಎಂದನು.

ಆಗ ಭಗವಂತನು, ಧರ್ಮಕಥನದಿಂದ ಬ್ರಾಹ್ಮಣ ಸೋಣದಂಡನಿಗೆ ಧರ್ಮವನ್ನು ಕಾಣಿಸಿ, ಅದನ್ನು ಒಪ್ಪಿಕೊಳ್ಳುವಂತೆ ಪ್ರೇರಿಸಿ, ಚೆನ್ನಾಗಿ ಉತ್ತೇಜನಗೊಳಿಸಿ, ಚೆನ್ನಾಗಿ ಹರ್ಷಗೊಳಿಸಿ, ಆಸನದಿಂದ ಎದ್ದು ಹೊರಟನು.

[ದೀಘನಿಕಾಯ — ಸೋಣದಂಡ ಸುತ್ತ]

೩. ಅಭಯ ರಾಜಕುಮಾರ

ಭಗವಂತನು ಒಂದು ಸಲ ರಾಜಗೃಹದಲ್ಲಿ, ವೇಣುವನದ ಕಳಂದಕ ನಿವಾಪದಲ್ಲಿ ತಂಗಿದ್ದನು. ಆಗ ಅಭಯನೆಂಬ ರಾಜಕುಮಾರನು ನಿರ್ಗ್ರಂಥ ಜ್ಞಾತೃಪುತ್ರನ ಬಳಿಸಾರಿ, ಅವನಿಗೆ ಅಭಿವಂದಿಸಿ ಒಂದು ಕಡೆ ಕುಳಿತನು.

ನಿರ್ಗ್ರಂಥನು ಅವನನ್ನು ಕುರಿತು "ಹೋಗು, ರಾಜಕುಮಾರ. ಶ್ರಮಣ ಗೌತಮನೊಡನೆ ವಾದ ಹೂಡು. ಅದರಿಂದ, ಮಹಾಶಕ್ತನಾದ ಮಹಾನುಭಾವನಾದ ಶ್ರಮಣ ಗೌತಮನೊಡನೆ ಅಭಯ ರಾಜಕುಮಾರನು ವಾದ ಹೂಡಿದನೆಂದು ನಿನ್ನ ಒಳ್ಳೆಯ ಹೆಸರೂ ಕೀರ್ತಿಯೂ ಹೆಚ್ಚಾಗುವುದು" ಎಂದನು.

"ಆತನೊಡನೆ ನಾನು ಹೇಗೆ ವಾದ ಹೂಡಲಿ, ಭನ್ತೇ?"

"ಹೋಗು, ರಾಜಕುಮಾರ. ಶ್ರಮಣ ಗೌತಮನ ಬಳಿಸಾರಿ, 'ಭನ್ತೇ, ಇತರರಿಗೆ ಪ್ರಿಯವಲ್ಲದ, ಮನಸ್ಸಿಗೆ ಹಿತವಲ್ಲದ ಮಾತನ್ನು ತಥಾಗತನು ಆಡುವನೆ?' ಎಂದು ಕೇಳು. ಹೀಗೆ ಕೇಳಿದಾಗ, ಅವನು 'ಹೌದು, ಆಡುವನು' ಎಂದರೆ, 'ಹಾಗಾದರೆ ನಿನಗೂ ಸಾಮಾನ್ಯ ಜನರಿಗೂ ವ್ಯತ್ಯಾಸವೇನು, ಭನ್ತೇ? ಸಾಮಾನ್ಯರು ಕೂಡ ಇತರರಿಗೆ ಅಪ್ರಿಯವಾದ, ಮನಸ್ಸಿಗೆ ಹಿತವಲ್ಲದ ಮಾತನ್ನು ಆಡುವರು' ಎನ್ನು. ಹಾಗಲ್ಲದೆ ಅವನು 'ತಥಾಗತನು ಅಪ್ರಿಯವನ್ನೂ ಅಹಿತವನ್ನೂ ಆಡುವುದಿಲ್ಲ' ಎಂದು ಉತ್ತರ ಕೊಟ್ಟರೆ, 'ಹಾಗಾದರೆ, ಭನ್ತೇ, ದೇವದತ್ತನಿಗೆ ಅಪಾಯವಾಗುವುದು, ದೇವದತ್ತನು ನರಕಕ್ಕೆ ಹೋಗುವನು, ದೇವದತ್ತನು ಕಲ್ಪಗಳವರೆಗೂ ನರಳುವನು—ಎಂದು ನೀನು ಹೇಳಿದುದೇಕೆ? ಅದರಿಂದ ದೇವದತ್ತನಿಗೆ ಕೋಪ ಬಂತು, ಅವನ ಮನಸ್ಸು ಕೆಟ್ಟಿತು' ಎಂದು ಹೇಳು.

"ರಾಜಕುಮಾರ! ಈ ಎರಡು ತುದಿಯ ಪ್ರಶ್ನೆಯನ್ನು ಶ್ರಮಣ ಗೌತಮನಿಗೆ ಹಾಕು; ಅವನು ಅದನ್ನು ಉಗುಳಲೂ ಆರ, ನುಂಗಲೂ ಆರ. ಮನುಷ್ಯನಿಗೆ ಕಬ್ಬಿಣದ ಚೌಕನಾದ ಚೂರು ಗಂಟಲಿನಲ್ಲಿ ಸಿಕ್ಕಿಕೊಂಡರೆ ಹೇಗೆ ಅದನ್ನು ಉಗುಳಲೂ ಆರ, ನುಂಗಲೂ ಆರ; ಹಾಗೆಯೇ ರಾಜಕುಮಾರ, ನೀನು ಈ ಎರಡು ತುದಿಯ ಪ್ರಶ್ನೆಯನ್ನು ಕೇಳಿದರೆ ಅವನು ಅದನ್ನು ಉಗುಳಲೂ ಆರ, ನುಂಗಲೂ ಆರ."

ಅಭಯ ರಾಜಕುಮಾರನು ಹಾಗೆಯೇ ಆಗಲೆಂದು ನಿರ್ಗ್ರಂಥನ ಮಾತಿಗೆ ಒಪ್ಪಿ, ಆಸನದಿಂದ ಎದ್ದು, ಅವನಿಗೆ ಅಭಿವಂದಿಸಿ, ಪ್ರದಕ್ಷಿಣೆ ಮಾಡಿ, ಭಗವಂತನಿರುವ ಬಳಿಗೆ ಹೋದನು. ಹೋಗಿ, ಅವನಿಗೆ ಅಭಿ ವಂದಿಸಿ ಒಂದು ಕಡೆ ಕುಳಿತನು. ಆಗ ಅಭಯ ರಾಜಕುಮಾರನು ಸೂರ್ಯನನ್ನು ದೃಷ್ಟಿಸಿ, "ಭಗವಂತನೊಡನೆ ವಾದ ಹೂಡಲು ಇದು ಸಮಯವಲ್ಲ. ಅದರಿಂದ, ನಾಳೆ ನಮ್ಮ ಮನೆಯಲ್ಲಿ ವಾದ ಹೂಡು ವೆನು" ಎಂದುಕೊಂಡು, "ಭನ್ತೇ, ಭಗವಂತನು ಇನ್ನೂ ಮೂವರೊಡನೆ ನಾಳೆಯ ಊಟಕ್ಕೆ ನಮ್ಮ ಮನೆಗೆ ಬರಲು ಒಪ್ಪಬೇಕು" ಎಂದನು. ಭಗ ವಂತನು ಮೌನದಿಂದ ಸಮ್ಮತಿಸಿದನು. ಆಗ, ಭಗವಂತನು ಒಪ್ಪಿದು ದನ್ನು ತಿಳಿದು, ಅಭಯ ರಾಜಕುಮಾರನು ಆಸನದಿಂದ ಎದ್ದು ಭಗ ವಂತನಿಗೆ ಅಭಿವಂದಿಸಿ ಪ್ರದಕ್ಷಿಣೆಮಾಡಿ ಹೊರಟನು.

ಭಗವಂತನು, ಆ ರಾತ್ರಿ ಕಳೆದ ಮೇಲೆ, ಪೂರ್ವಾಹ್ನ ಸಮಯ ದಲ್ಲಿ ಉಡುಪು ಹಾಕಿ, ಪಾತ್ರೆ ಚೀವರಗಳನ್ನು ತೆಗೆದುಕೊಂಡು ಅಭಯನ ಮನೆಗೆ ಹೋದನು. ಹೋಗಿ, ಅಲ್ಲಿ ಸಿದ್ಧಮಾಡಿದ್ದ ಆಸನದಲ್ಲಿ ಕುಳಿ ತನು. ಆಗ, ಅಭಯ ರಾಜಕುಮಾರನು ಭಗವಂತನಿಗೆ ಸಿಹಿಯಾದ ಖಾದ್ಯಭೋಜ್ಯಗಳನ್ನು ತನ್ನ ಕೈಯಿಂದಲೇ ಸಾಕೆನ್ನುವವರೆಗೆ ನೀಡಿ ತೃಪ್ತಿ ಪಡಿಸಿದನು. ಭಗವಂತನು ಊಟಮಾಡಿ ಪಾತ್ರೆಯಿಂದ ಕೈತೆಗೆದ ಮೇಲೆ ಅಭಯ ರಾಜಕುಮಾರನು ಒಂದು ಕೆಳಗಿನ ಆಸನದ ಮೇಲೆ ಕುಳಿತನು.

ಕುಳಿತು, "ಭನ್ತೇ! ಇತರರಿಗೆ ಅಪ್ರಿಯವಾಗಿ ಮನಸ್ಸಿಗೆ ಹಿತವಲ್ಲದ ಮಾತನ್ನು ತಥಾಗತನು ಹೇಳುವನೆ?" ಎಂದು ಅಭಯನು ಭಗವಂತ ನನ್ನು ಕೇಳಿದನು.

"ಹೀಗೆಯೇ ಎಂದು ಖಂಡಿತವಾಗಿ ಹೇಳುವಂತಿಲ್ಲ, ರಾಜ ಕುಮಾರ."

"ಇಲ್ಲಿ ನಿರ್ಗ್ರಂಥರು ಬಿದ್ದರು, ಭನ್ತೇ."

"ಹಾಗೇಕೆ ಹೇಳುವೆ, ರಾಜಕುಮಾರ?"

ಆಗ ಅಭಯ ರಾಜಕುಮಾರನು, ತಾನು ನಿರ್ಗ್ರಂಥನ ಬಳಿಸಾರಿದು ದನ್ನೂ ಗೌತಮನೊಡನೆ ವಾದ ಹೂಡುವ ವಿಧಾನವನ್ನು ಅವನು ತನಗೆ ಹೇಳಿಕೊಟ್ಟುದನ್ನೂ ಭಗವಂತನಿಗೆ ತಿಳಿಸಿದನು.

ಆ ಸಮಯದಲ್ಲಿ ಅಭಯನ ಚಿಕ್ಕ ಮಗು, ಕೈಲಾಗದುದು, ಬೆನ್ನು ಅಡಿಮಾಡಿ ಅವನ ತೊಡೆಯಲ್ಲಿ ಮಲಗಿತ್ತು. ಆಗ ಭಗವಂತನು "ಏನೆಂಬೆ ರಾಜಕುಮಾರ? ನಿನ್ನ ಪ್ರಮಾದದಿಂದಲೋ ದಾದಿಯ ಪ್ರಮಾದ ದಿಂದಲೋ ಈ ಮಗು ಒಂದು ಕಡ್ಡಿಯನ್ನೋ ಕಲ್ಲನ್ನೋ ಬಾಯಿಗೆ ಹಾಕಿ ಕೊಂಡರೆ ಏನುಮಾಡುವೆ?" ಎಂದು ರಾಜಕುಮಾರನನ್ನು ಕೇಳಿದನು.

"ಅದನ್ನು ತೆಗೆಯುತ್ತೇನೆ. ಅದನ್ನು ಮೊದಲೇ ತೆಗೆಯಲಾಗ ದಿದ್ದರೆ, ಎಡಗೈಯಿಂದ ಅದರ ತಲೆಯನ್ನು ಹಿಡಿದು, ಬಲಗೈ ಬೆರಳನ್ನು ಬಗ್ಗಿಸಿ, ರಕ್ತದೊಡನೆಯಾದರೂ ತೆಗೆಯುತ್ತೇನೆ. ಏಕೆಂದರೆ, ಮಗುವಿನ ಮೇಲೆ ನನಗೆ ಅನುಕಂಪವಿದೆ."

"ಹಾಗೆಯೇ ರಾಜಕುಮಾರ, ಇಲ್ಲದುದನ್ನೂ ಅಸತ್ಯವಾದುದನ್ನೂ ಪ್ರಯೋಜನವಿಲ್ಲದುದನ್ನೂ ಇತರರಿಗೆ ಅಪ್ರಿಯವಾಗಿ ಅಹಿತವಾದುದನ್ನೂ ತಥಾಗತನು ಹೇಳುವುದಿಲ್ಲ. ಇರುವುದನ್ನು, ಸತ್ಯವನ್ನು, ಆದರೆ ಪ್ರಯೋಜನವಿಲ್ಲದುದನ್ನು—ಆ ಮಾತನ್ನೂ ತಥಾಗತನು ಹೇಳುವುದಿಲ್ಲ. ಇರುವುದನ್ನು, ಸತ್ಯವಾದುದನ್ನು, ಪ್ರಯೋಜನವುಳ್ಳುದನ್ನು, ಆ ಮಾತು ಇತರರಿಗೆ ಅಪ್ರಿಯವಾಗಿ ಮನಸ್ಸಿಗೆ ಹಿತವಾಗದಿದ್ದರೂ ಅದನ್ನು ಬಿಡಿಸಿ ಹೇಳುವ ಕಾಲ ತಥಾಗತನಿಗೆ ಗೊತ್ತು.

"ಇಲ್ಲದುದನ್ನು, ಅಸತ್ಯವಾದುದನ್ನು, ಪ್ರಯೋಜನವಿಲ್ಲದುದನ್ನು–ಆ ಮಾತು ಇತರರಿಗೆ ಪ್ರಿಯವಾಗಿ ಮನಸ್ಸಿಗೆ ಹಿತವಾದರೂ ಅದನ್ನು ತಥಾಗತನು ಹೇಳುವುದಿಲ್ಲ. ಇರುವುದನ್ನು, ಸತ್ಯವಾದುದನ್ನು, ಪ್ರಯೋ ಜನವಿಲ್ಲದುದನ್ನು—ಆ ಮಾತು ಇತರರಿಗೆ ಪ್ರಿಯವಾಗಿ ಮನಸ್ಸಿಗೆ ಹಿತ ವಾದರೂ ಅದನ್ನು ತಥಾಗತನು ಹೇಳುವುದಿಲ್ಲ. ಆದರೆ ಇರುವುದನ್ನು, ಸತ್ಯವಾದುದನ್ನು, ಪ್ರಯೋಜನವುಳ್ಳುದನ್ನು, ಇತರರಿಗೆ ಪ್ರಿಯವಾಗಿ ಮನ ಸ್ಸಿಗೆ ಹಿತವಾದುದನ್ನು ಬಿಡಿಸಿ ಹೇಳುವ ಕಾಲ ತಥಾಗತನಿಗೆ ಗೊತ್ತು.

"ಏಕೆಂದರೆ, ರಾಜಕುಮಾರ, ತಥಾಗತನಿಗೆ ಪ್ರಾಣಿಗಳ ಮೇಲೆ ಅನುಕಂಪವಿದೆ."

"ಭನ್ತೇ! ಪಂಡಿತರಾದ ಕ್ಷತ್ರಿಯರು, ಬ್ರಾಹ್ಮಣರು, ಗೃಹಸ್ಥರು, ಶ್ರಮಣರು ಪ್ರಶ್ನೆಗಳನ್ನು ಜೋಡಿಸಿಕೊಂಡು ತಥಾಗತನ ಬಳಿಬಂದು

ಕೇಳುವಾಗ; 'ಇವರು ನನ್ನ ಬಳಿಬಂದು ಹೀಗೆ ಕೇಳುವರು. ಆಗ, ಹೀಗೆ ಕೇಳಿದರೆ ನಾನು ಹೀಗೆ ಹೇಳುವೆನು' ಎಂದು ಭಗವಂತನ ಮನಸ್ಸಿನಲ್ಲಿ ಮೊದಲೇ ಯೋಚನೆ ಹುಟ್ಟುವುದೆ? ಅಥವಾ ಅದು ಅಲ್ಲಿಯೇ ತಥಾಗತನಿಗೆ ಹೊಳೆಯುವುದೆ?"

"ರಾಜಕುಮಾರ, ನಾನು ನಿನ್ನನ್ನು ಒಂದು ಪ್ರತಿಪ್ರಶ್ನೆ ಕೇಳುತ್ತೇನೆ. ತಕ್ಕಹಾಗೆ ಉತ್ತರ ಕೊಡು. ರಾಜಕುಮಾರ, ನೀನು ರಥದ ಅಂಗ ಪ್ರತ್ಯಂಗಗಳನ್ನು ಚೆನ್ನಾಗಿ ಬಲ್ಲೆಯ?"

"ಚೆನ್ನಾಗಿ ಬಲ್ಲೆ, ಭನ್ತೇ."

"ಹಾಗಾದರೆ, ಏನು ರಾಜಕುಮಾರ? ನಿನ್ನನ್ನು ಯಾರಾದರೂ ರಥದ ಅಂಗಪ್ರತ್ಯಂಗಗಳನ್ನು ಕುರಿತು ಕೇಳಿದರೆ, 'ಇವರು ಹೀಗೆ ಕೇಳಿದರೆ ನಾನು ಹೀಗೆ ಹೇಳುವೆನು' ಎಂದು ನೀನು ಮೊದಲೇ ಯೋಚಿಸಿರುವೆಯೊ? ಅಥವಾ ಅಲ್ಲಿಯೇ ಅದು ನಿನಗೆ ಹೊಳೆಯುವುದೊ?"

"ಭನ್ತೇ, ನಾನು ಹೆಸರುಪಡೆದ ರಥಿಕ. ರಥದ ಅಂಗಪ್ರತ್ಯಂಗಗಳನ್ನು ನಾನು ಚೆನ್ನಾಗಿ ಬಲ್ಲೆ. ಅವು ನನಗೆ ಚೆನ್ನಾಗಿ ಗೊತ್ತು. ಅದು ನನಗೆ ಅಲ್ಲಿಯೇ ಹೊಳೆಯುವುದು."

"ಅದರಂತೆಯೇ, ರಾಜಕುಮಾರ, ಪಂಡಿತರಾದ ಕ್ಷತ್ರಿಯರೂ ಬ್ರಾಹ್ಮಣರೂ ಗೃಹಸ್ಥರೂ ಶ್ರಮಣರೂ ಪ್ರಶ್ನೆಗಳನ್ನು ಜೋಡಿಸಿಕೊಂಡು ತಥಾಗತನ ಬಳಿಬಂದು ಕೇಳಿದರೆ, ತಥಾಗತನಿಗೆ ಉತ್ತರ ಅಲ್ಲಿಯೇ ಹೊಳೆಯುವುದು. ಏಕೆಂದರೆ, ತಥಾಗತನು ಆ ಧರ್ಮಧಾತುವನ್ನು ಚೆನ್ನಾಗಿ ತಿಳಿದಿರುವನು. ಅದರಿಂದ ನನಗೆ ಅದು ಅಲ್ಲಿಯೇ ಹೊಳೆಯುವುದು, ರಾಜಕುಮಾರ."

ಆಗ ಅಭಯ ರಾಜಕುಮಾರನು ಭಗವಂತನಿಗೆ ಶರಣಾಗತನಾದನು . . .

[ಮಜ್ಝಿಮನಿಕಾಯ — ಅಭಯರಾಜಕುಮಾರ ಸುತ್ತ]

४. ಪೂರ್ಣ ಮಂತ್ರಾಣಿಪುತ್ರ

ಭಗವಂತನು ಒಂದು ಸಲ ರಾಜಗೃಹದಲ್ಲಿ, ವೇಣುವನದ ಕಳಂದಕನಿವಾಪದಲ್ಲಿ ತಂಗಿದ್ದನು. ಆಗ, ಆ ಪ್ರಾಂತದಲ್ಲಿ ವರ್ಷಾಕಾಲ ವನ್ನು ನಡಿಸುತ್ತಿದ್ದ ಅನೇಕ ಭಿಕ್ಷುಗಳು ಭಗವಂತನಿರುವ ಬಳಿಸಾರಿ, ಅಭಿ ವಂದಿಸಿ ಒಂದು ಕಡೆ ಕುಳಿತರು.

ಹೀಗೆ ಕುಳಿತ ಆ ಭಿಕ್ಷುಗಳನ್ನು ಕುರಿತು, ಭಗವಂತನು "ಭಿಕ್ಷು ಗಳೆ! ಆಸೆ ಅಲ್ಪವಿರಬೇಕು, ಸಂಪೂರ್ಣ ತೃಪ್ತಿಯಿರಬೇಕು, ಏಕಾಂತ ದಲ್ಲಿ ವಾಸಮಾಡಬೇಕು, ಸಾಮಾನ್ಯ ಜಗತ್ತಿನ ಸಂಗವನ್ನು ಬಿಟ್ಟಿರಬೇಕು, ಕೆಲಸಮಾಡುವ ಪ್ರಯತ್ನದಲ್ಲಿ ವೀರ್ಯ ಉಕ್ಕುತ್ತಿರಬೇಕು, ಶೀಲಸಂಪನ್ನ ನಾಗಿರಬೇಕು, ಸಮಾಧಿಯನ್ನು ಪಡೆದಿರಬೇಕು, ಪ್ರಜ್ಞೆಯನ್ನು ಹೊಂದಿರ ಬೇಕು, ವಿಮುಕ್ತಿಯನ್ನು ಸಾಧಿಸಿರಬೇಕು; ತಾನು ಹೀಗಿದ್ದು, ಜೊತೆಯ ಭಿಕ್ಷುಗಳಿಗೆ ಆ ಆ ಗುಣಗಳನ್ನು ತಿಳಿಸಿ ವಿಮುಕ್ತಿಯ ಜ್ಞಾನವನ್ನು ತೋರಿಸಬೇಕು; ಈ ಧರ್ಮವನ್ನು ಜೊತೆಯ ಬ್ರಹ್ಮಚಾರಿಗಳಿಗೆ ಉಪ ದೇಶಮಾಡಿ, ತಿಳಿಸಿ, ತೋರಿಸಿ, ಅವರನ್ನು ಅದರಲ್ಲಿ ನಿಲ್ಲಿಸಿ, ಅವರಿಗೆ ಉತ್ತೇಜನಕೊಟ್ಟು, ಅವರನ್ನು ಹರ್ಷಪಡಿಸಬೇಕು; ಇಂತಹ ಭಿಕ್ಷುವು, ಈ ಪ್ರಾಂತ್ಯದ ಜೊತೆಯ ಬ್ರಹ್ಮಚಾರಿಗಳಿಂದಲೇ ಸಂಭಾವಿತನಾದವನು, ಇಲ್ಲಿ ಯಾವನಾದರೂ ಇರುವನೆ?" ಎಂದು ಕೇಳಿದನು.

"ಭಗವಂತನು ಹೇಳಿದ ಗುಣಗಳೆಲ್ಲವೂ ಕೂಡಿ, ಜೊತೆಯ ಬ್ರಹ್ಮ ಚಾರಿಗಳಿಂದ ಸಂಭಾವಿತನಾದವನು ಮಂತ್ರಾಣಿಪುತ್ರನಾದ ಆಯುಷ್ಮಾನ್ ಪೂರ್ಣನು, ಭನ್ತೇ" ಎಂದು ಆ ಭಿಕ್ಷುಗಳು ಭಗವಂತನು ಹೇಳಿದ ಗುಣ ಗಳೆಲ್ಲವೂ ಅವನಲ್ಲಿ ಉಂಟೆಂದು ಕ್ರಮಕ್ರಮವಾಗಿ ವಿವರಿಸಿದರು.

ಆ ಸಮಯದಲ್ಲಿ ಭಗವಂತನಿಗೆ ಸ್ವಲ್ಪ ದೂರದಲ್ಲಿ ಆಯುಷ್ಮಾನ್ ಸಾರಿಪುತ್ರನು ಕುಳಿತಿದ್ದನು. ಆಗ, ಸಾರಿಪುತ್ರನಿಗೆ "ಆಹಾ! ಆಯುಷ್ಮಾನ್ ಪೂರ್ಣ ಮಂತ್ರಾಣಿಪುತ್ರನದು ಏನು ಲಾಭ! ಏನು ಒಳ್ಳೆಯ ಲಾಭ! ತಿಳಿದವರಾದ ಜೊತೆಯ ಬ್ರಹ್ಮಚಾರಿಗಳು ಗುರುವಿನೆದುರು ಅವನನ್ನು ಹೇಗೆ ಕ್ರಮಕ್ರಮವಾಗಿ ವರ್ಣಿಸುವರು! ಗುರು ಕೂಡ ಅವನನ್ನು ಹೆಚ್ಚು ಹೆಚ್ಚಾಗಿ ಅನುಮೋದಿಸುವನು! ನಾನು ಆಯುಷ್ಮಾನ್ ಪೂರ್ಣ

ಮಂತ್ರಾಣಿಪುತ್ರನನ್ನು ಯಾವಾಗಲಾದರೂ ಎಲ್ಲಿಯಾದರೂ ಸೇರಿಯೇನೆ! ಅವನೊಡನೆ ಮಾತನಾಡಿಯೇನೆ!" ಎಂದೆನಿಸಿತು.

ಅನಂತರ, ಭಗವಂತನು ತನಗೆ ಬೇಕಾದಷ್ಟು ಕಾಲ ರಾಜಗೃಹದಲ್ಲಿ ತಂಗಿದ್ದು, ಆಮೇಲೆ ಶ್ರಾವಸ್ತಿಗೆ ಸಂಚಾರಮಾಡಿದನು. ಕ್ರಮವಾಗಿ ಸಂಚಾರಮಾಡಿ ಶ್ರಾವಸ್ತಿಗೆ ಹೋದನು. ಭಗವಂತನು ಅಲ್ಲಿಯ ಜೇತ ವನದಲ್ಲಿ ಅನಾಥಪಿಂಡಿಕನ ಆರಾಮದಲ್ಲಿ ತಂಗಿದನು.

ಭಗವಂತನು ಶ್ರಾವಸ್ತಿಗೆ ಬಂದು ಜೇತವನದಲ್ಲಿ ಅನಾಥಪಿಂಡಿಕನ ಆರಾಮದಲ್ಲಿ ತಂಗಿರುವುದನ್ನು ಪೂರ್ಣ ಮಂತ್ರಾಣಿಪುತ್ರನು ಕೇಳಿದನು. ಆಗ ಆಯುಷ್ಮಂತನಾದ ಪೂರ್ಣನು ತನ್ನ ಕುಳಿತು ಮಲಗುವ ಆಸನ ವನ್ನು ಸುತ್ತಿ, ಪಾತ್ರೆ ಚೀವರಗಳನ್ನು ಕೊಂಡು, ಶ್ರಾವಸ್ತಿಗೆ ಸಂಚಾರ ಮಾಡಿ ಕ್ರಮವಾಗಿ ಬಂದು ಸೇರಿದನು. ಸೇರಿ, ಜೇತವನದಲ್ಲಿ ಭಗವಂತ ನಿರುವ ಬಳಿಸಾರಿ, ಅಭಿವಂದಿಸಿ ಒಂದು ಕಡೆ ಕುಳಿತನು. ಭಗವಂತನು ಅವನೊಡನೆ ಧರ್ಮದ ಮಾತನಾಡಿ, ಅವನಿಗೆ ಧರ್ಮವನ್ನು ತೋರಿಸಿ, ಅವನನ್ನು ಅದರಲ್ಲಿ ನಿಲ್ಲಿಸಿ, ಅವನಿಗೆ ಉತ್ತೇಜನಕೊಟ್ಟು, ಹರ್ಷ ಗೊಳಿಸಿದನು. ಆಯುಷ್ಮಂತನಾದ ಪೂರ್ಣನು ಭಗವಂತನ ಮಾತಿಗೆ ಮೆಚ್ಚಿ ಆನಂದಪಟ್ಟು, ಆಸನದಿಂದ ಎದ್ದು, ಭಗವಂತನಿಗೆ ಅಭಿವಂದಿಸಿ ಪ್ರದಕ್ಷಿಣೆಮಾಡಿ, ಮಧ್ಯಾಹ್ನ ತಂಗುವುದಕ್ಕಾಗಿ ಅಂಧವನಕ್ಕೆ ಹೋದನು.

ಆಗ ಒಬ್ಬ ಭಿಕ್ಷುವು ಆಯುಷ್ಮಂತನಾದ ಸಾರಿಪುತ್ರನ ಬಳಿಸಾರಿ, "ನೀನು ಸದಾ ಕೀರ್ತಿಸುತ್ತಿದ್ದ ಪೂರ್ಣ ಮಂತ್ರಾಣಿಪುತ್ರನೆಂಬ ಭಿಕ್ಷುವು ಭಗವಂತನ ಧರ್ಮಕಥನದಿಂದ ಪ್ರಸನ್ನನಾಗಿ ಮಧ್ಯಾಹ್ನ ತಂಗುವು ದಕ್ಕಾಗಿ ಅಂಧವನದ ಕಡೆ ಹೊರಟನು" ಎಂದನು.

ಆಗ ಆಯುಷ್ಮಂತನಾದ ಸಾರಿಪುತ್ರನು ಬೇಗ ತಾನು ಕುಳಿತಿದ್ದ ಚಾಪೆಯನ್ನು ಕೊಂಡು, ಎದುರಿಗೇ ನೋಡುತ್ತ ಪೂರ್ಣ ಮಂತ್ರಾಣಿ ಪುತ್ರನ ಹಿಂದೆಹಿಂದೆಯೇ ಹೋದನು. ಆಗ ಆಯುಷ್ಮಂತನಾದ ಪೂರ್ಣನು ಅಂಧವನದ ಒಳಹೊಕ್ಕು, ಒಂದು ಮರದ ಬುಡದಲ್ಲಿ ದಿವಾವಿಹಾರಕ್ಕಾಗಿ ಕುಳಿತನು. ಆಯುಷ್ಮಂತನಾದ ಸಾರಿಪುತ್ರನು ಕೂಡ ಅಂಧವನದ

ಒಳಹೊಕ್ಕು, ಬೇರೊಂದು ಮರದ ಬುಡದಲ್ಲಿ, ದಿವಾವಿಹಾರಕ್ಕಾಗಿ ಕುಳಿತನು.

ಆಗ, ಸಾಯಂಕಾಲ ಸಮಯದಲ್ಲಿ, ಆಯುಷ್ಮಂತನಾದ ಸಾರಿಪುತ್ರನು ಏಕಾಂತಧ್ಯಾನದಿಂದ ಎಚ್ಚತ್ತು, ಆಯುಷ್ಮಂತನಾದ ಪೂರ್ಣಮಂತ್ರಾಣಿಪುತ್ರನ ಬಳಿಸಾರಿ, ಅವನೊಡನೆ ಸಮ್ಮೋದದಿಂದ ಮಾತನಾಡಿ, ಕೇಳಬೇಕಾದ ಕುಶಲಪ್ರಶ್ನೆಗಳಾದ ಮೇಲೆ ಒಂದು ಕಡೆ ಕುಳಿತನು.

ಒಂದು ಕಡೆ ಕುಳಿತು, ಸಾರಿಪುತ್ರನು "ಆಯುಷ್ಮನ್! ನೀನು ಭಗವಂತನೊಡನೆ ಬ್ರಹ್ಮಚರ್ಯವನ್ನು ಆಚರಿಸುವೆಯು?" ಎಂದು ಪೂರ್ಣನನ್ನು ಕೇಳಿದನು.

"ಹೌದು, ಆಯುಷ್ಮನ್."

"ನೀವು ಬ್ರಹ್ಮಚರ್ಯವನ್ನು ಆಚರಿಸುವುದು ಶೀಲವಿಶುದ್ಧಿಗಾಗಿಯೆ? (= ಸರಿಯಾದ ನಡತೆಯಿಂದ ಶುದ್ಧರಾಗುವುದಕ್ಕಾಗಿಯೆ?)"

"ಅಲ್ಲ."

"ಹಾಗಾದರೆ, ಚಿತ್ತವಿಶುದ್ಧಿಗಾಗಿಯೆ? (= ಚಿತ್ತದ ಮಲಗಳನ್ನು ಕಳೆದು ಶುದ್ಧಿಗೊಳಿಸುವುದಕ್ಕಾಗಿಯೆ?)"

"ಅಲ್ಲ."

"ದೃಷ್ಟಿವಿಶುದ್ಧಿಗಾಗಿಯೆ? (= ಸತ್ಯಾಸತ್ಯಗಳನ್ನು ಸರಿಯಾಗಿ ಕಾಣುವುದಕ್ಕಾಗಿಯೆ?)"

"ಅಲ್ಲ."

"ಕಾಂಕ್ಷಾವಿತರಣವಿಶುದ್ಧಿಗಾಗಿಯೆ? (= ಸಂದೇಹ ಸಂಶಯಗಳನ್ನು ದಾಟಿ ಶುದ್ಧರಾಗುವುದಕ್ಕಾಗಿಯೆ?)"

"ಅಲ್ಲ."

"ಮಾರ್ಗಾಮಾರ್ಗಜ್ಞಾನದರ್ಶನವಿಶುದ್ಧಿಗಾಗಿಯೆ? (= ಮಾರ್ಗ ಅಮಾರ್ಗಗಳ ಜ್ಞಾನವನ್ನು ಕಂಡು ಶುದ್ಧರಾಗುವುದಕ್ಕಾಗಿಯೆ?)"

"ಅಲ್ಲ."

"ಪ್ರತಿಪದಾಜ್ಞಾನದರ್ಶನವಿಶುದ್ಧಿಗಾಗಿಯೆ? (= ಮಾರ್ಗದಲ್ಲಿ ನಡೆಯುವ ಜ್ಞಾನವನ್ನು ಕಂಡು ಶುದ್ಧರಾಗುವುದಕ್ಕಾಗಿಯೆ?)"

"ಅಲ್ಲ."

"ಹಾಗಾದರೆ, ಜ್ಞಾನದರ್ಶನವಿಶುದ್ಧಿಗಾಗಿಯೆ? (= ಜ್ಞಾನವನ್ನು ಕಂಡು ಶುದ್ಧರಾಗುವುದಕ್ಕಾಗಿಯೆ?)"

"ಅಲ್ಲ."

"ಇದೇನು ಆಯುಷ್ಮನ್? ಯಾವುದನ್ನು ಕೇಳಿದರೂ ಅಲ್ಲವೆನ್ನುವೆ. ಹಾಗಾದರೆ, ನೀವು ಭಗವಂತನೊಡನೆ ಬ್ರಹ್ಮಚರ್ಯವನ್ನು ಆಚರಿಸುವುದು ಯಾವುದಕ್ಕೋಸ್ಕರ?"

"ಉಪಾದಾನವಿಲ್ಲದ ಪರಿನಿರ್ವಾಣಕ್ಕೋಸ್ಕರ, ಆಯುಷ್ಮನ್."

"ಏನು, ಆಯುಷ್ಮನ್? ಶೀಲವಿಶುದ್ಧಿಯು ಪರಿನಿರ್ವಾಣವೆ?"

"ಅಲ್ಲ."

"ಚಿತ್ತವಿಶುದ್ಧಿಯು ಪರಿನಿರ್ವಾಣವೆ?"

"ಅಲ್ಲ."

"ದೃಷ್ಟಿವಿಶುದ್ಧಿಯು ಪರಿನಿರ್ವಾಣವೆ?"

"ಅಲ್ಲ."

"ಕಾಂಕ್ಷಾವಿತರಣವಿಶುದ್ಧಿಯು ಪರಿನಿರ್ವಾಣವೆ?"

"ಅಲ್ಲ."

"ಮಾರ್ಗಾಮಾರ್ಗಜ್ಞಾನದರ್ಶನವಿಶುದ್ಧಿಯು ಪರಿನಿರ್ವಾಣವೆ?"

"ಅಲ್ಲ."

"ಪ್ರತಿಪದಾಜ್ಞಾನದರ್ಶನವಿಶುದ್ಧಿಯು ಪರಿನಿರ್ವಾಣವೆ?"

"ಅಲ್ಲ."

"ಜ್ಞಾನದರ್ಶನವಿಶುದ್ಧಿಯು ಪರಿನಿರ್ವಾಣವೆ?"

"ಅಲ್ಲ."

"ಹಾಗಾದರೆ, ಇವುಗಳಲ್ಲದ ಬೇರೆ ಯಾವುದಾದರೂ ಪರಿನಿರ್ವಾಣವೆ?"

"ಅಲ್ಲ."

"ಏನಿದು ಆಯುಷ್ಮನ್? ಯಾವುದನ್ನು ಕೇಳಿದರೂ ಅಲ್ಲವೆನ್ನುವೆ. ನೀನು ಹೇಳಿದುದರ ಅರ್ಥ ಏನೆಂದು ತಿಳಿಯಬೇಕು?"

“ಆಯುಷ್ಮನ್! ಮೇಲೆ ಹೇಳಿದ ವಿಶುದ್ಧಿಗಳು ಪರಿನಿರ್ವಾಣವೆಂದು ಭಗವಂತನು ತಿಳಿಸಿದರೆ, ಅದು ಅನುಪಾದಾನವಲ್ಲ ಸ–ಉಪಾದಾನವೆಂದೇ ತಿಳಿಸುವನು. ಈ ಧರ್ಮಗಳಲ್ಲದೆ ಬೇರೆಯದರಿಂದ ಅನುಪಾದಾನ ಪರಿನಿರ್ವಾಣವಾಗುವುದಾದರೆ, ಸಾಮಾನ್ಯ ಜನರು ಕೂಡ ಪರಿನಿರ್ವಾಣ ಪಡೆಯುವರು; ಏಕೆಂದರೆ, ಅವರು ಈ ಧರ್ಮಗಳಿಂದ ಬೇರೆಯಾದವರು.

“ಆಯುಷ್ಮನ್, ಒಂದು ಉಪಮಾನ ಕೊಡುತ್ತೇನೆ. ಉಪಮಾನದಿಂದ, ಬಲ್ಲವರು ಕೆಲವರು ಹೇಳಿದುದರ ಅರ್ಥವನ್ನು ತಿಳಿಯುವರು. ಆಯುಷ್ಮನ್, ಕೋಸಲದ ರಾಜನಾದ ಪ್ರಸೇನಜಿತನು ಶ್ರಾವಸ್ತಿಯಲ್ಲಿ ವಾಸಿಸುತ್ತಿದ್ದಾನೆ. ಅವನು ಸಾಕೇತದಲ್ಲಿ ಒಂದು ಅವಶ್ಯವಾದ ಕೆಲಸ ಮಾಡಬೇಕಾಗುತ್ತದೆ. ಅದಕ್ಕಾಗಿ, ಶ್ರಾವಸ್ತಿಗೂ ಸಾಕೇತಕ್ಕೂ ನಡುವೆ ಏಳು ರಥವಿನೀತಗಳನ್ನು ಏರ್ಪಡಿಸುವರು. ಆಗ, ಪ್ರಸೇನಜಿತನು ಶ್ರಾವಸ್ತಿಯ ಅರಮನೆಯ ಬಾಗಿಲಿಂದ ಹೊರಟು ಮೊದಲನೆಯ ರಥವಿನೀತವನ್ನು ಹತ್ತುವನು. ಮೊದಲನೆಯ ರಥವಿನೀತದಿಂದ ಎರಡನೆಯ ರಥವಿನೀತದ ಬಳಿಸಾರಿ, ಮೊದಲನೆಯುದನ್ನು ಬಿಟ್ಟು ಎರಡನೆಯುದನ್ನು ಹತ್ತುವನು. ಎರಡನೆಯುದರಿಂದ ಮೂರನೆಯುದನ್ನು ಸಮೀಪಿಸಿ, ಅದನ್ನು ಬಿಟ್ಟು ಮೂರನೆಯುದನ್ನು ಹತ್ತುವನು. ಹೀಗೆ ಮೂರನೆಯುದರಿಂದ ನಾಲ್ಕು, ಅದರಿಂದ ಐದು, ಅದರಿಂದ ಆರು, ಅದರಿಂದ ಏಳು—ಹೀಗೆ ಹತ್ತಿ, ಏಳನೆಯ ರಥವಿನೀತದಿಂದ ಸಾಕೇತದ ಅರಮನೆಯ ಬಾಗಿಲಿಗೆ ಬರುವನು. ಅಲ್ಲಿ, ಅವನ ಮಿತ್ರರೂ ಮಂತ್ರಿಗಳೂ ರಕ್ತಜ್ಞಾತಿಗಳೂ ‘ಶ್ರಾವಸ್ತಿಯಿಂದ ಸಾಕೇತದ ಅರಮನೆ ಬಾಗಿಲಿಗೆ ಈ ರಥವಿನೀತದಿಂದ ಬಂದೆಯ, ಮಹಾರಾಜ?’ ಎಂದು ಕೇಳಿದರೆ, ಪ್ರಸೇನಜಿತನು ಸರಿಯಾಗಿ ಉತ್ತರಕೊಡಬೇಕಾದರೆ ಏನು ಹೇಳಬೇಕು?”

“ಅವನು ಸರಿಯಾಗಿ ಉತ್ತರಕೊಡಬೇಕಾದರೆ, ‘ಹೀಗೆ, ಶ್ರಾವಸ್ತಿಯಿಂದ ಸಾಕೇತಕ್ಕೆ ಆವಶ್ಯಕವಾದ ಕಾರ್ಯಕ್ಕೆ ಬರಬೇಕಾಯಿತು. ಅದಕ್ಕಾಗಿ ಏಳು ರಥವಿನೀತಗಳನ್ನು ಸಿದ್ಧಮಾಡಿದರು. ನಾನು ಒಂದು ರಥವಿನೀತದಿಂದ ಅದರ ಮುಂದಿನ ರಥವಿನೀತಕ್ಕೆ ಬಂದು, ಹೀಗೆ ಆರು ರಥ

ವಿನೀತಗಳಾಗಲು, ಏಳನೆಯದನ್ನು ಹತ್ತಿ ಅದರಿಂದ ಸಾಕೇತದ ಅರಮನೆ ಬಾಗಿಲಿಗೆ ಬಂದೆ' ಎಂದು ಹೇಳಬೇಕು. ಆಗ ಅವನು ಸರಿಯಾಗಿ ಉತ್ತರ ಹೇಳಿದ ಹಾಗಾಗುವುದು."

"ಅದರಂತೆಯೇ, ಆಯುಷ್ಮನ್, ಶೀಲವಿಶುದ್ಧಿಯು ಚಿತ್ತವಿಶುದ್ಧಿಗಾಗಿ, ಅಲ್ಲಿಯ ವರೆಗೆ ಮಾತ್ರ; ಚಿತ್ತವಿಶುದ್ಧಿಯು ದೃಷ್ಟಿವಿಶುದ್ಧಿಗಾಗಿ, ಅಲ್ಲಿಯ ವರೆಗೆ ಮಾತ್ರ; ದೃಷ್ಟಿವಿಶುದ್ಧಿಯು ಕಾಂಕ್ಷಾವಿತರಣ ವಿಶುದ್ಧಿಗಾಗಿ, ಅಲ್ಲಿಯ ವರೆಗೆ ಮಾತ್ರ; ಕಾಂಕ್ಷಾವಿತರಣವಿಶುದ್ಧಿಯು ಮಾರ್ಗಾಮಾರ್ಗಜ್ಞಾನದರ್ಶನವಿಶುದ್ಧಿಗಾಗಿ, ಅಲ್ಲಿಯ ವರೆಗೆ ಮಾತ್ರ; ಮಾರ್ಗಾಮಾರ್ಗಜ್ಞಾನದರ್ಶನವಿಶುದ್ಧಿಯು ಪ್ರತಿಪದಾಜ್ಞಾನದರ್ಶನ ವಿಶುದ್ಧಿಗಾಗಿ, ಅಲ್ಲಿಯ ವರೆಗೆ ಮಾತ್ರ; ಪ್ರತಿಪದಾಜ್ಞಾನದರ್ಶನ ವಿಶುದ್ಧಿಯು ಜ್ಞಾನದರ್ಶನವಿಶುದ್ಧಿಗಾಗಿ, ಅಲ್ಲಿಯ ವರೆಗೆ ಮಾತ್ರ; ಜ್ಞಾನದರ್ಶನವಿಶುದ್ಧಿಯು ಅನುಪಾದಾನವಾದ ಪರಿನಿರ್ವಾಣಕ್ಕಾಗಿ, ಅಲ್ಲಿಯ ವರೆಗೆ ಮಾತ್ರ. ನಾನು ಭಗವಂತನೊಡನೆ ಬ್ರಹ್ಮಚರ್ಯವನ್ನು ಆಚರಿಸುವುದು ಅನುಪಾದಾನವಾದ ಪರಿನಿರ್ವಾಣಕ್ಕೋಸ್ಕರ."

ಹೀಗೆನ್ನಲು, ಸಾರಿಪುತ್ರನು "ಆಯುಷ್ಮಂತನ ಹೆಸರೇನು? ಜೊತೆಯ ಬ್ರಹ್ಮಚಾರಿಗಳು ಆಯುಷ್ಮಂತನನ್ನು ಯಾರೆಂದು ತಿಳಿಯುವರು?" ಎಂದು ಪೂರ್ಣನನ್ನು ಕೇಳಿದನು.

"ಆಯುಷ್ಮನ್, ನನ್ನ ಹೆಸರು ಪೂರ್ಣ. ಜೊತೆಯ ಬ್ರಹ್ಮಚಾರಿಗಳು ನನ್ನನ್ನು ಮಂತ್ರಾಣಿಪುತ್ರನೆಂದು ತಿಳಿಯುವರು."

"ಆಶ್ಚರ್ಯ, ಆಯುಷ್ಮನ್! ಅದ್ಭುತ, ಆಯುಷ್ಮನ್! ಗುರುವಿನ ಶಾಸನವನ್ನು ಸಂಪೂರ್ಣವಾಗಿ ತಿಳಿದ ಶ್ರುತವಂತನಾದ ಶ್ರಾವಕನಂತೆ ಆಯುಷ್ಮನ್ ಪೂರ್ಣ ಮಂತ್ರಾಣಿಪುತ್ರನು ಗಂಭೀರ ಗಂಭೀರವಾದ ಪ್ರಶ್ನೆಗಳನ್ನು ಕ್ರಮಕ್ರಮವಾಗಿ ಹೇಗೆ ವಿವರಿಸಿದನು! ಆಯುಷ್ಮಂತನಾದ ಪೂರ್ಣ ಮಂತ್ರಾಣಿಪುತ್ರನನ್ನು ಕಂಡು ಸೇವೆಮಾಡುವ ಜೊತೆಯ ಬ್ರಹ್ಮಚಾರಿಗಳ ಲಾಭವೇ ಲಾಭ! ಸೊಗಸಾದ ಲಾಭ! ತಲೆಯ ಮೇಲೆ ಸಿಂಬಿಯಿಟ್ಟುಕೊಂಡು ಆಯುಷ್ಮಂತನನ್ನು ಹೊತ್ತು ತಿರುಗಿದರೂ ಸರಿ, ಜೊತೆಯ ಬ್ರಹ್ಮಚಾರಿಗಳಿಗೆ ಅವನ ದರ್ಶನವೂ ಸೇವೆಯೂ ದೊರೆತರೆ,

ಅದು ಸೊಗಸಾದ ಲಾಭ! ಆಯುಷ್ಮಂತನನ್ನು ಕಂಡು ಸೇವಿಸಿದುದರಿಂದ ನನಗೂ ಲಾಭವಾಯಿತು! ಒಳ್ಳೆಯ ಲಾಭವಾಯಿತು!"

ಸಾರಿಪುತ್ರನು ಹೀಗೆನ್ನಲು, ಪೂರ್ಣನು ಅವನನ್ನು ಕುರಿತು "ಆಯುಷ್ಮಂತನ ಹೆಸರೇನು? ಜೊತೆಯ ಬ್ರಹ್ಮಚಾರಿಗಳು ಆಯುಷ್ಮಂತನು ಯಾರೆಂದು ತಿಳಿಯುವರು?" ಎಂದು ಕೇಳಿದನು.

"ಆಯುಷ್ಮನ್, ನನ್ನ ಹೆಸರು ಉಪತಿಷ್ಯ. ಜೊತೆಯ ಬ್ರಹ್ಮಚಾರಿಗಳು ನನ್ನನ್ನು ಸಾರಿಪುತ್ರನೆಂದು ತಿಳಿಯುವರು."

"ಆಹಾ! ಗುರುಸಮಾನನಾದ ಶ್ರಾವಕನೊಡನೆ ಮಾತನಾಡುವೆನೆಂದು ನಾನು ತಿಳಿಯಲಿಲ್ಲ. ಆಯುಷ್ಮಾನ್ ಸಾರಿಪುತ್ರನೆಂದು ತಿಳಿದಿದ್ದರೆ ಇಷ್ಟು ಉತ್ತರ ಕೊಡುತ್ತಿರಲಿಲ್ಲ" ಎಂದು, ಪೂರ್ಣನು, ತನ್ನನ್ನು ಸಾರಿಪುತ್ರನು ಕೀರ್ತಿಸಿದಂತೆಯೇ ತಾನೂ ಅವನನ್ನು ಕೀರ್ತಿಸಿದನು.

ಹೀಗೆ ಆ ಇಬ್ಬರು ಮಹಾನಾಗರು ಒಬ್ಬರೊಬ್ಬರೂ ಚೆನ್ನಾಗಿ ಮಾತನಾಡಿದರೆಂದು ಮೆಚ್ಚಿದರು.

[ಮಜ್ಝಿಮನಿಕಾಯ – ರಥವಿನೀತ ಸುತ್ತ]

"ಬುದ್ಧವಚನ ಮಧು"

ಎಂಬ

ಪಾಲೀ ಪಿಟಕ ಸಾಹಿತ್ಯದ ಕನ್ನಡ ಅನುವಾದಮಾಲೆಯಲ್ಲಿ

ನಾಲ್ಕನೆಯ ಸಂಪುಟವಾಗಿ

ಪ್ರಕಟಿಸಬೇಕೆಂದು ಉದ್ದೇಶಿಸಿರುವ

"ಬುದ್ಧನ ಜೀವನ ಮತ್ತು ಉಪದೇಶ"

ಎಂಬ ಪುಸ್ತಕದಿಂದ ಆಯ್ದ

ಹತ್ತು ಸನ್ನಿವೇಶಗಳು

ವಿವರ

		ಪುಟ
೧.	ಸುಪ್ರಿಯೆ	೧೪೩
೨.	ರೋಗಿಯನ್ನು ಉಪಚರಿಸಿದ ಬುದ್ಧ	೧೪೭
೩.	ನಾಲಾಗಿರಿ	೧೪೯
೪.	ಸೇನಾಪತಿ ಸಿಂಹ	೧೫೧
೫.	ಅಂಗುಲಿಮಾಲ	೧೫೫
೬.	ಪ್ರಾಣಿವಧೆಯ ಫಲ	೧೬೨
೭.	ಕುರುಡು ಆನೆ	೧೬೪
೮.	ನಾಗನು ಯಾರು?	೧೬೫
೯.	ಗೃಹಪತಿಯ ಧರ್ಮ.	೧೬೭
೧೦.	ಸಂನ್ಯಾಸಿ ಜೀವನದ ಫಲ	೧೮೦

೧. ಸುಪ್ರಿಯೆ

ಭಗವಂತನು ತನಗೆ ಬೇಕಾದಷ್ಟು ಕಾಲ ರಾಜಗೃಹದಲ್ಲಿ ವಾಸ ಮಾಡಿ, ಅನಂತರ ವಾರಣಾಸಿಗೆ ಭಿಕ್ಷಾಚರಣಕ್ಕಾಗಿ ಹೊರಟನು. ಕ್ರಮವಾಗಿ ಸಂಚಾರಮಾಡುತ್ತ ವಾರಣಾಸಿಯ ಬಳಿಸಾರಿದನು. ಅಲ್ಲಿಗೆ ಬಂದು ಋಷಿಪತನದ ಮೃಗದಾವದಲ್ಲಿ ತಂಗಿದನು.

ಆ ಕಾಲದಲ್ಲಿ, ಸುಪ್ರಿಯನೆಂಬ ಉಪಾಸಕನೂ ಸುಪ್ರಿಯೆಯೆಂಬ ಉಪಾಸಿಕೆಯೂ ವಾರಣಾಸಿಯಲ್ಲಿ ಇದ್ದರು. ಅವರು ಇಬ್ಬರೂ ಧರ್ಮಕ್ಕೆ ಪ್ರಸನ್ನರಾಗಿ, ಕೊಟ್ಟು ಮಾಡಿ, ಸಂಘಕ್ಕೆ ಪೋಷಕರಾಗಿದ್ದರು.

ಒಂದು ದಿನ ಉಪಾಸಿಕೆ ಸುಪ್ರಿಯೆಯು ಆರಾಮಕ್ಕೆ ಹೋಗಿ, ವಿಹಾರದಿಂದ ವಿಹಾರಕ್ಕೂ ಪರಿವೇಣದಿಂದ ಪರಿವೇಣಕ್ಕೂ ತಿರುಗಿ, "ಭನ್ತೇ! ರೋಗಿಗಳು ಯಾರಿದ್ದಾರೆ? ಯಾರಿಗೆ ಏನು ತರಲಿ?" ಎಂದು ಭಿಕ್ಷುಗಳನ್ನು ಕೇಳಿದಳು.

ಆ ಸಮಯದಲ್ಲಿ ಭಿಕ್ಷುವೊಬ್ಬನು ವಿರೇಚನ ಕುಡಿದಿದ್ದನು. ಅವನು "ಭಗಿನಿ! ನಾನು ವಿರೇಚನ ಕುಡಿದಿದ್ದೇನೆ. ನನಗೆ ಮಾಂಸದ ರಸ ಬೇಕು" ಎಂದು ಸುಪ್ರಿಯೆಗೆ ಹೇಳಿದನು.

"ಆಗಲಯ್ಯ, ತರಿಸುತ್ತೇನೆ" ಎಂದು ಅವಳು ಮನೆಗೆ ಹೋಗಿ, ಹೊಸ ಮಾಂಸವನ್ನು ನೋಡಿ ತರುವಂತೆ ತನ್ನ ಸೇವಕನಿಗೆ ಆಜ್ಞಾಪಿಸಿದಳು.

"ಆಗಲಿ, ಆರ್ಯೆ" ಎಂದು ಅವನು ಸುಪ್ರಿಯೆಯ ಮಾತಿನಂತೆ ವಾರಣಾಸಿಯೆಲ್ಲವನ್ನೂ ಹುಡುಕಿ, ಹೊಸ ಮಾಂಸವನ್ನು ಕಾಣದೆ, ಸುಪ್ರಿಯೆಯ ಬಳಿಸಾರಿ, "ಆರ್ಯೆ, ಹೊಸ ಮಾಂಸವಿಲ್ಲ. ಈ ದಿನ ಕೊಲ್ಲಕೂಡದು" ಎಂದನು.

ಆಗ ಸುಪ್ರಿಯೆಯು "ರೋಗಿಯಾದ ಆ ಭಿಕ್ಷುವಿಗೆ ಮಾಂಸದ ರಸ ಸಿಕ್ಕದಿದ್ದರೆ ಅವನ ರೋಗ ಹೆಚ್ಚಬಹುದು, ಅಥವಾ ಅವನು ಸಾಯಬಹುದು. ನಾನು ತರಿಸುತ್ತೇನೆಂದು ಒಪ್ಪಿ ಕಳುಹಿಸದಿರುವುದು ಸರಿಯಲ್ಲ" ಎಂದುಕೊಂಡು, ಕಿರುಗತ್ತಿಯನ್ನು ಹಿಡಿದು ತನ್ನ ತೊಡೆಯ

ಮಾಂಸವನ್ನು ಕೆತ್ತಿ ತೆಗೆದಳು. ಅದನ್ನು ದಾಸಿಗೆ ಕೊಟ್ಟು, "ಏನೆ! ಈ ಮಾಂಸವನ್ನು ಬೇಯಿಸಿ ಅದರ ರಸ ತೆಗೆದು ಇಂತಹ ವಿಹಾರದಲ್ಲಿರುವ ರೋಗಿಯಾದ ಭಿಕ್ಷುವಿಗೆ ಕೊಡು. ನನ್ನನ್ನು ಯಾರಾದರೂ ಕೇಳಿದರೆ ಕಾಯಿಲೆಯೆಂದು ಉತ್ತರ ಹೇಳು" ಎಂದು ಮೇಲುಬಟ್ಟೆಯಿಂದ ತೊಡೆಯನ್ನು ಮುಚ್ಚಿಕೊಂಡು, ಒಳಕೋಣೆಗೆ ಹೋಗಿ ಮಂಚದ ಮೇಲೆ ಮಲಗಿದಳು.

ಉಪಾಸಕನಾದ ಸುಪ್ರಿಯನು ಮನೆಗೆ ಬಂದನು. ಬಂದು, "ಸುಪ್ರಿಯೆ ಎಲ್ಲಿ?" ಎಂದು ದಾಸಿಯನ್ನು ಕೇಳಿದನು.

"ಅವಳು ಒಳಕೋಣೆಯಲ್ಲಿ ಮಲಗಿರುವಳು, ಆರ್ಯ."

ಸುಪ್ರಿಯನು ಸುಪ್ರಿಯೆಯ ಬಳಿಸಾರಿ, "ಏಕೆ ಮಲಗಿರುವೆ?" ಎಂದನು.

"ನನಗೆ ಕಾಯಿಲೆ."

"ನಿನಗೇನು ಕಾಯಿಲೆ?"

ಆಗ ಸುಪ್ರಿಯೆಯು ಸುಪ್ರಿಯನಿಗೆ ಎಲ್ಲ ವಿಚಾರವನ್ನೂ ತಿಳಿಸಿದಳು. ಅದನ್ನು ಕೇಳಿ, "ಆಹಾ! ಏನು ಆಶ್ಚರ್ಯ! ಏನು ಅದ್ಭುತ! ತನ್ನ ಮಾಂಸವನ್ನೇ ಕೊಟ್ಟಳಲ್ಲ! ಈ ಸುಪ್ರಿಯೆಗೆ ಎಷ್ಟು ಶ್ರದ್ಧೆ! ಏನು ಪ್ರಸನ್ನತೆ! ಬೇರೆ ಇನ್ನೇನು ತಾನೆ ಕೊಡದಿರುವಳು!" ಎಂದು ಸುಪ್ರಿಯನು ಹರ್ಷದಿಂದ ಉಕ್ಕಿ ಭಗವಂತನಿರುವ ಬಳಿಸಾರಿ, ಅಭಿವಂದಿಸಿ ಒಂದು ಕಡೆ ಕುಳಿತನು.

ಒಂದು ಕಡೆ ಕುಳಿತು, ಉಪಾಸಕ ಸುಪ್ರಿಯನು "ಭನ್ತೇ! ಭಗವಂತನು ಭಿಕ್ಷುಸಂಘದೊಡನೆ ನಾಳೆ ನಮ್ಮಲ್ಲಿಗೆ ಊಟಕ್ಕೆ ಬರಲು ಒಪ್ಪಬೇಕು" ಎಂದು ಭಗವಂತನನ್ನು ಕೇಳಿಕೊಂಡನು. ಭಗವಂತನು ಮೌನದಿಂದ ಸಮ್ಮತಿಸಿದನು. ಭಗವಂತನು ಒಪ್ಪಿದುದನ್ನು ತಿಳಿದು, ಉಪಾಸಕ ಸುಪ್ರಿಯನು ಆಸನದಿಂದ ಎದ್ದು, ಭಗವಂತನಿಗೆ ಅಭಿವಂದಿಸಿ ಪ್ರದಕ್ಷಿಣೆಮಾಡಿ ಹೊರಟನು.

ಆ ರಾತ್ರಿ ಕಳೆಯಲು, ಸುಪ್ರಿಯನು ಸೊಗಸಾದ ಖಾದ್ಯಭೋಜ್ಯಗಳನ್ನು ಸಿದ್ಧಮಾಡಿಕೊಂಡು "ಊಟ ಸಿದ್ಧವಾಗಿ ಸಮಯವಾಗಿದೆ,

ಭನ್ತೇ” ಎಂದು ಭಗವಂತನಿಗೆ ಸಮಯವನ್ನು ತಿಳಿಸಿದನು. ಭಗವಂತನು ಪೂರ್ವಾಹ್ನ ಸಮಯದಲ್ಲಿ ಉಡುಪುಹಾಕಿ, ಪಾತ್ರೆ ಚೀವರಗಳನ್ನು ಕೊಂಡು, ಸುಪ್ರಿಯನ ಮನೆಯ ಬಳಿಸಾರಿ, ಸಿದ್ಧಗೊಳಿಸಿದ್ದ ಆಸನದಲ್ಲಿ ಭಿಕ್ಷುಸಂಘದೊಡನೆ ಕುಳಿತನು. ಸುಪ್ರಿಯನು ಭಗವಂತನ ಬಳಿಸಾರಿ, ಅಭಿವಂದಿಸಿ ಒಂದು ಕಡೆ ಕುಳಿತನು.

ಹಾಗೆ ಕುಳಿತ ಸುಪ್ರಿಯನನ್ನು ನೋಡಿ, ಭಗವಂತನು “ಸುಪ್ರಿಯೆ ಎಲ್ಲಿ?” ಎಂದು ಕೇಳಿದನು.

“ಅವಳಿಗೆ ಕಾಯಿಲೆ, ಭಗವನ್.”

“ಆದರೂ ಬರಲಿ.”

“ಅವಳು ಬರಲಾರಳು, ಭಗವನ್.”

“ಹಾಗಾದರೆ, ಹಿಡಿದು ಎತ್ತಿಕೊಂಡಾದರೂ ತಾ.”

ಸುಪ್ರಿಯನು ಸುಪ್ರಿಯೆಯನ್ನು ಹಿಡಿದೆತ್ತಿಕೊಂಡು ತಂದನು.

ಭಗವಂತನು ಅವಳನ್ನು ನೋಡಿದೊಡನೆ ಆ ಮಹಾಗಾಯವು ವಾಸಿಯಾಯಿತು; ಒಳ್ಳೆಯ ಚರ್ಮ, ರೋಮ, ಹುಟ್ಟಿತು.

ಆಗ ಉಪಾಸಕ ಸುಪ್ರಿಯನೂ ಉಪಾಸಿಕೆ ಸುಪ್ರಿಯೆಯೂ “ಆಹ! ಆಶ್ಚರ್ಯ! ಅದ್ಭುತ! ತಥಾಗತನ ಮಹಾ ಋದ್ಧಿಶಕ್ತಿಯೇನು! ಮಹಾ ಅನುಭಾವವೇನು! ಭಗವಂತನು ಇವಳನ್ನು ನೋಡಿದೊಡನೆ ಈ ಮಹಾಗಾಯವು ವಾಸಿಯಾಯಿತು! ಒಳ್ಳೆಯ ಚರ್ಮ, ರೋಮ, ಹುಟ್ಟಿತು!” ಎಂದು ಹರ್ಷದಿಂದ ಉಬ್ಬಿದರು. ಬುದ್ಧನು ಮೊದಲಾದ ಭಿಕ್ಷುಸಂಘಕ್ಕೆ ಸೊಗಸಾದ ಖಾದ್ಯಭೋಜ್ಯಗಳನ್ನು ತಾವೇ ಕೈಯಾರೆ ನೀಡಿ ತೃಪ್ತಿಪಡಿಸಿ, ಭಗವಂತನು ಊಟಮಾಡಿ ಪಾತ್ರೆಯಿಂದ ಕೈತೆಗೆದ ಮೇಲೆ ಒಂದು ಕಡೆ ಕುಳಿತರು.

ಆಗ ಭಗವಂತನು ಧರ್ಮದ ಮಾತನ್ನಾಡಿ, ಅವರಿಗೆ ಧರ್ಮವನ್ನು ತೋರಿಸಿ, ಅವರನ್ನು ಅದರಲ್ಲಿ ನಿಲ್ಲಿಸಿ, ಅವರಿಗೆ ಉತ್ತೇಜನ ಕೊಟ್ಟು, ಅವರನ್ನು ಹರ್ಷಗೊಳಿಸಿ ಆಸನದಿಂದ ಎದ್ದು ಹೊರಟನು.

ಈ ಕಾರಣದಿಂದ, ಈ ಸಂದರ್ಭದಲ್ಲಿ ಭಗವಂತನು ಭಿಕ್ಷುಗಳನ್ನು ಹತ್ತಿರ ಕರೆದು, “ಭಿಕ್ಷುಗಳೇ! ಉಪಾಸಿಕೆ ಸುಪ್ರಿಯೆಯನ್ನು ಮಾಂಸ ಕೇಳಿಕೊಂಡವರು ಯಾರು?” ಎಂದು ಕೇಳಿದನು.

ಹೀಗೆನ್ನಲು, "ಭನ್ತೇ, ನಾನು ಕೇಳಿಕೊಂಡೆ" ಎಂದು ಆ ಭಿಕ್ಷು ಹೇಳಿದನು.

"ಅದನ್ನು ತಂದುಕೊಟ್ಟರೆ, ಭಿಕ್ಷು?"

"ತಂದರು, ಭಗವನ್."

"ನೀನು ತಿಂದೆಯ, ಭಿಕ್ಷು?"

"ತಿಂದೆ, ಭಗವನ್."

"ಅದು ಏನೆಂದು ವಿಚಾರಿಸಿನೋಡಿದೆಯ?"

"ನೋಡಲಿಲ್ಲ, ಭಗವನ್."

ಆ ಮಾತು ಕೇಳಿ, ಭಗವಂತನಾದ ಬುದ್ಧನು "ಮೂಢ! ನೋಡದೆ ಮಾಂಸವನ್ನು ಹೇಗೆ ತಿನ್ನಬಲ್ಲೆ! ಮೂಢ! ನೀನು ತಿಂದುದು ಮನುಷ್ಯ ಮಾಂಸ! ಪ್ರಸನ್ನರಾಗದವರು ಇದರಿಂದ ಪ್ರಸನ್ನರಾಗುವುದಿಲ್ಲ, ಮೂಢ!" ಎಂದು ತೀಕ್ಷ್ಣವಾಗಿ ಆಡಿದನು.

ಅನಂತರ ಧರ್ಮಕಥೆಯನ್ನು ನಡಿಸಿ, ಭಿಕ್ಷುಗಳನ್ನು ಕರೆದು, "ಭಿಕ್ಷುಗಳೆ! ಧರ್ಮದಲ್ಲಿ ಶ್ರದ್ಧೆ ಪ್ರಸಾದಗಳು ಉಳ್ಳ ಕೆಲವರು ಇದ್ದಾರೆ; ಅವರು ತಮ್ಮ ಮಾಂಸವನ್ನೂ ಕೊಟ್ಟುಬಿಡುವರು. ಭಿಕ್ಷುಗಳೆ, ಮನುಷ್ಯಮಾಂಸವು ತಿನ್ನತಕ್ಕುದಲ್ಲ. ತಿಂದವರು ಘೋರವಾದ ಅಪರಾಧಮಾಡುವರು. ಭಿಕ್ಷುಗಳೆ, ವಿಚಾರಿಸಿನೋಡದೆ ಮಾಂಸವನ್ನು ತಿನ್ನುವುದು ತಕ್ಕುದಲ್ಲ. ಹಾಗೆ ತಿನ್ನುವವರು ಮಾಡಬಾರದ ಅಪರಾಧ ಮಾಡುವರು" ಎಂದನು.

[ವಿನಯ — ಮಹಾವಗ್ಗ: ಖಂಧಕ ೬ — ೨೩: § ೧ — ೯]

೨. ರೋಗಿಯನ್ನು ಉಪಚರಿಸಿದ ಬುದ್ಧ

ಆ ಸಮಯದಲ್ಲಿ ಒಬ್ಬ ಭಿಕ್ಷುವಿಗೆ ಹೊಟ್ಟೆಯಲ್ಲಿ ಏನೋ ವ್ಯತ್ಯಾಸವಾಗಿ ಕಾಯಿಲೆಯಾಗಿತ್ತು. ಅವನು ತನ್ನ ಮಲಮೂತ್ರಗಳಲ್ಲಿ ಬಿದ್ದುಕೊಂಡಿದ್ದ. ಆ ಸಮಯದಲ್ಲಿ ಭಗವಂತನು ಭಿಕ್ಷುಗಳು ಮಲಗುವ ಸ್ಥಳಗಳಲ್ಲಿ ಸಂಚಾರಮಾಡುತ್ತ ಆ ಭಿಕ್ಷುವಿನ ವಿಹಾರದ ಬಳಿಸಾರಿದನು. ಭಗವಂತನ ಹಿಂದೆ ಆಯುಷ್ಮಂತನಾದ ಆನಂದನು ಬರುತ್ತಿದ್ದನು.

ಭಗವಂತನು ಅಲ್ಲಿಗೆ ಬಂದು, ಆ ಭಿಕ್ಷುವು ತನ್ನ ಮಲಮೂತ್ರಗಳಲ್ಲಿ ಬಿದ್ದು ಮಲಗಿರುವುದನ್ನು ಕಂಡು, ಅವನ ಬಳಿ ಹೋಗಿ, "ನಿನಗೇನು ಕಾಯಿಲೆ, ಭಿಕ್ಷು?" ಎಂದನು.

"ನನಗೆ ಕುಕ್ಷಿವಿಕಾರ, ಭನ್ತೇ."

"ನಿನ್ನ ಸೇವೆಗೆ ಒಬ್ಬನಿರುವನೆ, ಭಿಕ್ಷು?"

"ಇಲ್ಲ, ಭಗವನ್."

"ಭಿಕ್ಷುಗಳು ಏಕೆ ನಿನ್ನನ್ನು ಸೇವಿಸುವುದಿಲ್ಲ?"

"ನಾನು ಭಿಕ್ಷುಗಳಿಗೆ ಏನೂ ಮಾಡುತ್ತಿಲ್ಲ, ಭನ್ತೇ. ಅದರಿಂದ ಭಿಕ್ಷುಗಳು ನನ್ನನ್ನು ಸೇವಿಸುವುದಿಲ್ಲ."

ಆಗ ಭಗವಂತನು "ಹೋಗು, ಆನಂದ. ನೀರು ತಾ. ಈ ಭಿಕ್ಷುವಿಗೆ ಸ್ನಾನಮಾಡಿಸೋಣ" ಎಂದು ಆಯುಷ್ಮಂತನಾದ ಆನಂದನಿಗೆ ಹೇಳಿದನು.

ಹಾಗೆಯೇ ಆಗಲೆಂದು ಆಯುಷ್ಮಾನ್ ಆನಂದನು ಭಗವಂತನ ಮಾತಿನಂತೆ ನೀರು ತಂದನು. ಆ ನೀರನ್ನು ಭಗವಂತನು ಚಿಮುಕಿಸಿದನು. ಆನಂದನು ಮೈ ತೊಳೆದನು. ಭಗವಂತನು ತಲೆಯ ಕಡೆಯೂ ಆನಂದನು ಕಾಲಕಡೆಯೂ ಹಿಡಿದು ಮೇಲೆತ್ತಿ ಮಂಚದಲ್ಲಿ ಮಲಗಿಸಿದರು.

ಆಗ ಭಗವಂತನು, ಅದೇ ಕಾರಣವಾಗಿ, ಆ ಸಮಯದಲ್ಲಿ ಭಿಕ್ಷುಸಂಘವನ್ನು ಬಳಿಗೆ ಕರೆದು, "ಭಿಕ್ಷುಗಳೆ! ಇಂತಹ ವಿಹಾರದಲ್ಲಿ ರೋಗಿಯಾದ ಭಿಕ್ಷುವಿರುವನೆ?" ಎಂದು ಕೇಳಿದನು.

"ಇರುವನು, ಭಗವನ್."

“ಆ ಭಿಕ್ಷುವಿಗೆ ಏನು ಕಾಯಿಲೆ, ಭಿಕ್ಷುಗಳೆ?”

“ಭನ್ತೇ, ಆ ಆಯುಷ್ಮಂತನಿಗೆ ಕುಕ್ಷಿವಿಕಾರದ ಕಾಯಿಲೆ.”

“ಭಿಕ್ಷುಗಳೆ, ಅವನ ಸೇವೆಗೆ ಯಾರಾದರೂ ಇರುವರೆ?”

“ಇಲ್ಲ, ಭಗವನ್.”

“ಭಿಕ್ಷುಗಳೇಕೆ ಅವನ ಸೇವೆಮಾಡುವುದಿಲ್ಲ?”

“ಭಿಕ್ಷುಗಳಿಗೆ ಆ ಭಿಕ್ಷು ಏನೂ ಮಾಡುತ್ತಿಲ್ಲ. ಆದರಿಂದ ಭಿಕ್ಷುಗಳು ಅವನ ಸೇವೆಮಾಡುವುದಿಲ್ಲ.”

“ಭಿಕ್ಷುಗಳೆ! ನಿಮ್ಮನ್ನು ಸೇವಿಸಲು ನಿಮ್ಮ ತಾಯಿಯಿಲ್ಲ, ತಂದೆಯಿಲ್ಲ. ನೀವು ಒಬ್ಬರನ್ನೊಬ್ಬರು ಸೇವಿಸದಿದ್ದರೆ, ಇನ್ನು ಯಾರು ನಿಮ್ಮನ್ನು ಸೇವಿಸುವರು? ಭಿಕ್ಷುಗಳೆ, ನನ್ನ ಸೇವೆಮಾಡಬೇಕೆನ್ನುವವರು ರೋಗಿಗಳ ಸೇವೆಮಾಡಲಿ.”

[ವಿನಯ — ಮಹಾವಗ್ಗ: ಖಂಧಕ ೮–೨೬: § ೧–೩]

೩. ನಾಲಾಗಿರಿ

ಆ ಸಮಯದಲ್ಲಿ, ರಾಜಗೃಹದಲ್ಲಿ ನಾಲಾಗಿರಿಯೆಂಬ ಕ್ರೂರವಾದ ಆನೆಯಿತ್ತು. ಅದು ಮನುಷ್ಯರನ್ನು ಕೊಲ್ಲುತ್ತಿತ್ತು. ದೇವದತ್ತನು ರಾಜಗೃಹದ ಗಜಶಾಲೆಗೆ ಹೋಗಿ ಗಜಪಾಲರನ್ನು ಕರೆದು, "ಅಯ್ಯಾ! ರಾಜನಿಗೆ ನಾನು ಗೊತ್ತು. ಕೀಳು ಕೆಲಸದಲ್ಲಿರುವವನನ್ನು ನಾನು ಮೇಲಕ್ಕೇರಿಸಬಲ್ಲೆ; ಊಟ ಸಂಬಳಗಳನ್ನು ಹೆಚ್ಚಿಸಬಲ್ಲೆ. ಅದರಿಂದ, ಅಯ್ಯ, ಶ್ರಮಣ ಗೌತಮನು ಈ ರಥದ ಮಾರ್ಗದಲ್ಲಿ ಬಂದಾಗ ಈ ನಾಲಾಗಿರಿಯನ್ನು ಬಿಚ್ಚಿ ಈ ಮಾರ್ಗದಲ್ಲಿ ಬಿಡಿರಿ" ಎಂದನು. ಅವರು ಹಾಗೆಯೆ ಆಗಲೆಂದು ದೇವದತ್ತನ ಮಾತಿಗೆ ಒಪ್ಪಿದರು.

ಭಗವಂತನು ಪೂರ್ವಾಹ್ನ ಸಮಯದಲ್ಲಿ ಬಟ್ಟೆ ಹಾಕಿಕೊಂಡು, ಪಾತ್ರೆ ಚೀವರಗಳನ್ನು ತೆಗೆದುಕೊಂಡು, ಅನೇಕ ಭಿಕ್ಷುಗಳೊಡನೆ ಭಿಕ್ಷೆಗಾಗಿ ರಾಜಗೃಹದ ಒಳಹೊಕ್ಕನು; ಹೊಕ್ಕು, ಆ ರಥಮಾರ್ಗದಲ್ಲಿ ನಡೆದನು. ಭಗವಂತನು ಆ ಮಾರ್ಗದಲ್ಲಿ ಬಂದುದನ್ನು ಕಂಡು, ಆನೆ ಕಾಯುವವರು ನಾಲಾಗಿರಿಯನ್ನು ಬಿಚ್ಚಿ, ಆ ಮಾರ್ಗದಲ್ಲಿ ಬಿಟ್ಟರು.

ಭಗವಂತನು ಬರುವುದನ್ನು ನಾಲಾಗಿರಿಯು ದೂರದಿಂದಲೇ ಕಂಡಿತು. ಕಂಡು, ಸೊಂಡಿಲನ್ನು ಮೇಲೆತ್ತಿ, ಕಿವಿ ಬಾಲಗಳನ್ನು ನೆಟ್ಟಗಿರಿಸಿ ಭಗವಂತನ ಬಳಿಗೆ ವೇಗವಾಗಿ ಓಡಿತು. ನಾಲಾಗಿರಿ ಬರುವುದನ್ನು ಆ ಭಿಕ್ಷುಗಳು ದೂರದಿಂದಲೇ ಕಂಡು, "ಭನ್ತೇ, ಈ ಆನೆ ನಾಲಾಗಿರಿ ಕ್ರೂರವಾದುದು. ಇದು ಮನುಷ್ಯರನ್ನು ಕೊಲ್ಲುವುದು. ಈ ರಥಮಾರ್ಗದಲ್ಲಿ ಬರುತ್ತಿದೆ. ಭನ್ತೇ! ಭಗವಂತನು ಹಿಂದಿರುಗಬೇಕು! ಸುಗತನು ಹಿಂದಿರುಗಬೇಕು!" ಎಂದರು.

"ಹೆದರಬೇಡಿ, ಭಿಕ್ಷುಗಳೆ. ಬನ್ನಿ. ಇತರರು ಕಾರಣರಾಗಿ ತಥಾಗತನು ಸಾಯುವುದಿಲ್ಲ; ಅದು ಆಗುವುದಿಲ್ಲ. ಬೇರೆ ಕಾರಣವಿಲ್ಲದೆ ತಥಾಗತನು ಪರಿನಿರ್ವಾಣ ಪಡೆಯುವನು."

ಆ ಭಿಕ್ಷುಗಳು ಎರಡು ಮೂರು ಸಲ ಪುನಃ ಹಾಗೆಯೆ ಹೇಳಿದರು. ಭಗವಂತನು ಅದೇ ಉತ್ತರ ಕೊಟ್ಟನು.

ಆ ಸಮಯದಲ್ಲಿ ಜನರು ಪ್ರಾಸಾದಗಳನ್ನೂ ಹರ್ಮ್ಯಗಳನ್ನೂ ಮಾಡುಗಳನ್ನೂ ಹತ್ತಿದರು. ಅವರಲ್ಲಿ ಶ್ರದ್ಧೆ ಪ್ರಸಾದಗಳು ಇಲ್ಲದ ದುರ್ಬುದ್ಧಿಯವರು "ಈ ಸುಂದರನಾದ ಶ್ರಮಣನನ್ನು ಆನೆಯು ಗಾಯ ಮಾಡುವುದು" ಎಂದರು; ಶ್ರದ್ಧೆ ಪ್ರಸಾದಗಳು ಇದ್ದು ಪಂಡಿತರಾದ ಬುದ್ಧಿವಂತರು "ನಾಗವು ನಾಗನೊಡನೆ ಯುದ್ಧಮಾಡಬೇಕಾದರೆ ಬಹು ಕಾಲ ಬೇಕು!" ಎಂದರು.

ಆಗ ಭಗವಂತನು ತನ್ನ ಮೈತ್ರಿಯ ಚಿತ್ತದಿಂದ ಆನೆ ನಾಲಾಗಿರಿಯನ್ನು ವ್ಯಾಪಿಸಿದನು. ಹೀಗೆ ಭಗವಂತನ ಮೈತ್ರೀಚಿತ್ತದಿಂದ ವ್ಯಾಪಿಸಲ್ಪಟ್ಟು, ಆನೆ ನಾಲಾಗಿರಿಯು ತನ್ನ ಸೊಂಡಿಲನ್ನು ಕೆಳಗಿಳಿಸಿ, ಭಗವಂತನ ಬಳಿಸಾರಿ ಎದುರಿಗೆ ನಿಂತಿತು.

ಆಗ ಭಗವಂತನು ಬಲಗೈಯಿಂದ ಆನೆ ನಾಲಾಗಿರಿಯ ಕುಂಭವನ್ನು ಸವರುತ್ತ,

"ಕುಂಜರ! ನಾಗನ ಗೊಡವೆ ಬೇಡ. ಅದರಿಂದ ದುಃಖವೇ ಸರಿ!
ನಾಗನನ್ನು ಹೊಡೆದವನಿಗೆ ಇಲ್ಲಾಗಲಿ ಪರದಲ್ಲಾಗಲಿ ಒಳ್ಳೆಯ ಗತಿಯಿಲ್ಲ.
ಮದ ಬೇಡ, ಪ್ರಮಾದ ಬೇಡ. ಪ್ರಮತ್ತರು ಸುಗತಿಗೆ ಹೋಗುವುದೇ ಇಲ್ಲ.
ಸುಗತಿಗೆ ಹೋಗುವುದಕ್ಕೆ ಬೇಕಾದುದನ್ನು ಮಾಡು"

ಎಂದು ಈ ಗಾಹೆಗಳನ್ನು ಹೇಳಿದನು.

ಆಗ ನಾಲಾಗಿರಿಯು ಸೊಂಡಿಲಿನಿಂದ ಭಗವಂತನ ಕಾಲುಧೂಳನ್ನು ಹಿಡಿದು ತಲೆಯ ಮೇಲೆ ಚೆಲ್ಲಿಕೊಂಡು, ಭಗವಂತನನ್ನೇ ಕುರಿತು ನೋಡುತ್ತ ಹಿಮ್ಮೆಟ್ಟಹೋಯಿತು. ನಾಲಾಗಿರಿಯು ಗಜಶಾಲೆಗೆ ಹೋಗಿ ತನ್ನ ಸ್ಥಾನದಲ್ಲಿ ನಿಂತಿತು. ಆನೆ ನಾಲಾಗಿರಿಯು ಪುನಃ ದಾಂತವಾಯಿತು.

ಆ ಸಮಯದಲ್ಲಿ ಜನರು

"ಒಂದೊಂದನ್ನು ದಂಡದಿಂದ, ಅಂಕುಶದಿಂದ, ಕಶೆಯಿಂದ, ದಮನಮಾಡುವರು.
ದಂಡವಿಲ್ಲದೆ, ಶಸ್ತ್ರವಿಲ್ಲದೆ, ಮಹರ್ಷಿಯು ನಾಗವನ್ನು ದಮನಮಾಡಿದನು"

ಎಂದು ಈ ಗಾಹೆಯನ್ನು ಹಾಡಿದರು.

[ವಿನಯ — ಚುಲ್ಲವಗ್ಗ: ಖಂಧಕ ೭–೩: § ೧೧–೧೨]

೪. ಸೇನಾಪತಿ ಸಿಂಹ

ಭಗವಂತನು ಒಂದು ಸಲ ವೈಶಾಲಿಯಲ್ಲಿ ಮಹಾವನದ ಕೂಟಾಗಾರ ಶಾಲೆಯಲ್ಲಿ ತಂಗಿದ್ದನು. ಆಗ, ಪ್ರಸಿದ್ಧ ಸುಪ್ರಸಿದ್ಧರಾದ ಅನೇಕ ಲಿಚ್ಛವಿಗಳು ಸಂಸ್ಥಾಗಾರದಲ್ಲಿ ಒಟ್ಟಿಗೆ ಕುಳಿತು, ಬುದ್ಧನನ್ನೂ ಅವನ ಧರ್ಮಸಂಘಗಳನ್ನೂ ಅನೇಕ ಬಗೆಯಾಗಿ ವರ್ಣಿಸುತ್ತಿದ್ದರು. ಆ ಸಮಯದಲ್ಲಿ ನಿರ್ಗ್ರಂಥನ ಶ್ರಾವಕನಾದ ಸೇನಾಪತಿ ಸಿಂಹನು ಆ ಸಭೆಯಲ್ಲಿ ಕುಳಿತಿದ್ದನು. ಆ ಲಿಚ್ಛವಿಗಳ ವರ್ಣನೆಯನ್ನು ಕೇಳಿ, "ಆ ಭಗವಂತನು ನಿಸ್ಸಂಶಯವಾಗಿಯೂ ಅರ್ಹಂತನಾಗಿರಬೇಕು, ಸಮ್ಯಕ್ ಸಂಬುದ್ಧನಾಗಿರಬೇಕು. ನಾನು ಈ ದಿನ ಭಗವಂತನ ದರ್ಶನಕ್ಕೆ ಹೋಗಬೇಕು" ಎಂದು ಅವನಿಗೆನಿಸಿತು.

ಆಗ ಸಿಂಹನು ನಿರ್ಗ್ರಂಥ ಜ್ಞಾತೃಪುತ್ರನ ಬಳಿಸಾರಿ, "ಭನ್ತೇ! ಶ್ರಮಣ ಗೌತಮನನ್ನು ಕಾಣಲು ಹೋಗಬೇಕೆಂದು ಬಯಸುತ್ತೇನೆ" ಎಂದನು.

"ಸಿಂಹ! ಕ್ರಿಯಾವಾದಿಯಾದ ನೀನು ಅಕ್ರಿಯಾವಾದಿಯಾದ ಶ್ರಮಣ ಗೌತಮನನ್ನು ಏಕೆ ಕಾಣಲು ಹೋಗಬೇಕು? ಶ್ರಮಣ ಗೌತಮನು ಅಕ್ರಿಯಾವಾದಿ, ಅಕ್ರಿಯೆಯ ಧರ್ಮವನ್ನು ಉಪದೇಶ ಮಾಡುವನು, ಅದರಲ್ಲಿ ಶ್ರಾವಕರನ್ನು ನಡಿಸುವನು."

ಆಗ, ಸಿಂಹನು ಭಗವಂತನನ್ನು ಕಾಣಲು ಹೋಗಬೇಕೆಂದಿದ್ದುದು ಇಳಿಯಿತು.

ಹೀಗೆಯೆ ಎರಡನೆಯ ಸಲ ಲಿಚ್ಛವಿಗಳು ಬುದ್ಧನನ್ನೂ ಅವನ ಧರ್ಮಸಂಘಗಳನ್ನೂ ವರ್ಣಿಸುವುದು ಕೇಳಿ, ಪುನಃ ಸಿಂಹನು ಭಗವಂತನನ್ನು ಕಾಣಬೇಕೆಂದು ಆಶಿಸಿದನು. ಆ ಸಲವೂ ನಿರ್ಗ್ರಂಥನ ಮಾತು ಕೇಳಿ ಹೋಗದೆಯೆ ನಿಂತನು. ಮೂರನೆಯ ಸಲವೂ ಹಾಗೆಯೇ ಆಯಿತು.

ಆಗ ಸಿಂಹನು "ಈ ಲಿಚ್ಛವಿಗಳು ಬುದ್ಧನನ್ನೂ ಅವನ ಧರ್ಮಸಂಘಗಳನ್ನೂ ವರ್ಣಿಸುವುದು ಕೇಳಿದರೆ, ಆ ಭಗವಂತನು ನಿಸ್ಸಂಶಯವಾಗಿಯೂ ಅರ್ಹಂತನಾಗಿರಬೇಕು, ಸಮ್ಯಕ್‌ಸಂಬುದ್ಧನಾಗಿರಬೇಕು. ಈ ನಿರ್ಗ್ರಂಥರನ್ನು ಕೇಳಿದರೇನು, ಕೇಳದಿದ್ದರೇನು? ಅವರೇನು ಮಾಡಿ

ಯಾರು? ಈ ದಿನ ಆ ನಿರ್ಗ್ರಂಥನನ್ನು ಕೇಳದೆಯೆ ಅರ್ಹಂತನೂ ಸಮ್ಯಕ್‌ಸಂಬುದ್ಧನೂ ಆದ ಭಗವಂತನ ದರ್ಶನಕ್ಕೆ ಹೋಗುವೆನು" ಎಂದನು.

ಆಗ ಸೇನಾಪತಿ ಸಿಂಹನು ಭಗವಂತನನ್ನು ಕಾಣುವುದಕ್ಕೋಸ್ಕರ ನಡುಹಗಲಿನಲ್ಲಿ ಐನೂರು ರಥಗಳೊಡನೆ ವೈಶಾಲಿಯಿಂದ ಹೊರಟನು. ರಥಕ್ಕೆ ಮಾರ್ಗವಿರುವವರೆಗೆ ರಥದಲ್ಲಿ ಹೋಗಿ, ಇಳಿದು, ಕಾಲುನಡೆಯಿಂದ ಆರಾಮದ ಒಳಗೆ ಹೋದನು. ಅಲ್ಲಿ ಭಗವಂತನ ಬಳಿಸಾರಿ, ಅಭಿವಂದಿಸಿ, ಒಂದು ಕಡೆ ಕುಳಿತನು.

ಒಂದು ಕಡೆ ಕುಳಿತು, ಸಿಂಹನು "ಭನ್ತೇ! 'ಶ್ರಮಣ ಗೌತಮನು ಅಕ್ರಿಯಾವಾದಿ, ಅಕ್ರಿಯೆಯ ಧರ್ಮವನ್ನು ಉಪದೇಶಮಾಡುತ್ತಾನೆ, ಅದರಲ್ಲಿ ಶ್ರಾವಕರನ್ನು ನಡಿಸುತ್ತಾನೆ' . . . ಎಂದು ಕೇಳಿದ್ದೇನೆ. ಹಾಗೆ ಹೇಳುವವರು ಇಲ್ಲದುದನ್ನು ಹೇಳಿ ಭಗವಂತನನ್ನು ನಿಂದಿಸುವುದಿಲ್ಲವಷ್ಟೆ? ಅವರು ಧರ್ಮಕ್ಕೆ ಅನುಸಾರವಾದ ಧರ್ಮವನ್ನು ತಿಳಿಸುವರೆ? ಹೀಗೆ ಹೇಳುವುದರಿಂದ ಯಾವ ಸಹಧರ್ಮಿಕನೂ ದೋಷಕ್ಕೆ ಒಳಗಾಗುವುದಿಲ್ಲ ತಾನೆ? ಭಗವಂತನನ್ನು ನಿಂದಿಸಬೇಕೆಂದು ನನಗೆ ಆಸೆಯಿಲ್ಲ" ಎಂದನು.

"ಸಿಂಹ! 'ಶ್ರಮಣ ಗೌತಮನು ಅಕ್ರಿಯಾವಾದಿ, ಅಕ್ರಿಯೆಯ ಧರ್ಮವನ್ನು ಉಪದೇಶಿಸುವನು, ಅದರಲ್ಲಿ ಶ್ರಾವಕರನ್ನು ನಡಿಸುವನು'–ಎಂದು ಹೇಳುವುದು ಒಂದು ರೀತಿಯಲ್ಲಿ ಸರಿ. 'ಶ್ರಮಣ ಗೌತಮನು ಕ್ರಿಯಾವಾದಿ, ಕ್ರಿಯೆಯ ಧರ್ಮವನ್ನು ಉಪದೇಶಿಸುವನು, ಅದರಲ್ಲಿ ಶ್ರಾವಕರನ್ನು ನಡಿಸುವನು' – ಎಂದು ಹೇಳುವುದು ಒಂದು ರೀತಿಯಲ್ಲಿ ಸರಿ . . .

"ಸಿಂಹ! ಮೈ ಮಾತು ಮನಸ್ಸುಗಳಿಂದ ಆಗುವ ಕೆಟ್ಟ ಕೆಲಸಗಳ ಅಕ್ರಿಯೆಯನ್ನು ನಾನು ಹೇಳುತ್ತೇನೆ. ಅನೇಕ ರೀತಿಯ ಪಾಪಕವಾದ ಅಕುಶಲಧರ್ಮಗಳ ಅಕ್ರಿಯೆಯನ್ನು ನಾನು ಹೇಳುತ್ತೇನೆ. ಆದರಿಂದ 'ಗೌತಮನು ಅಕ್ರಿಯಾವಾದಿ' ಎಂದು ಹೇಳುವುದು ಸರಿಯಾದದ್ದೇ.

"ಸಿಂಹ! ಮೈ ಮಾತು ಮನಸ್ಸುಗಳಿಂದ ಆಗುವ ಒಳ್ಳೆಯ ಕೆಲಸಗಳ ಕ್ರಿಯೆಯನ್ನು ನಾನು ಹೇಳುತ್ತೇನೆ. ಅನೇಕ ರೀತಿಯ ಕುಶಲ ಧರ್ಮಗಳ ಕ್ರಿಯೆಯನ್ನು ನಾನು ಹೇಳುತ್ತೇನೆ. ಅದರಿಂದ, 'ಗೌತಮನು ಕ್ರಿಯಾವಾದಿ' ಎಂದು ಹೇಳಿದರೆ, ಅದೂ ಸರಿಯಾದದ್ದೇ . . ."

ಹೀಗೆನ್ನಲು, ಸೇನಾಪತಿ ಸಿಂಹನು "ಬಲುಸೊಗಸು, ಭನ್ತೇ! ಬಲುಸೊಗಸು, ಭನ್ತೇ! ಬಿದ್ದಿದ್ದುದನ್ನು ಎತ್ತಿ ನಿಲ್ಲಿಸಿದಂತೆ, ಮುಚ್ಚಿದ್ದುದನ್ನು ಬಿಚ್ಚಿದಂತೆ, ಮೂಢನಿಗೆ ಮಾರ್ಗ ತೋರಿಕೊಟ್ಟಂತೆ, ಕಣ್ಣಿರುವವರು ರೂಪಗಳನ್ನು ಕಾಣಲೆಂದು ಕತ್ತಲಿನಲ್ಲಿ ತೈಲದ ದೀಪ ಹಿಡಿದಂತೆ ಭಗವಂತನು ಅನೇಕ ಪರ್ಯಾಯಗಳಿಂದ ಧರ್ಮವನ್ನು ಪ್ರಕಾಶಪಡಿಸಿದನು. ಈಗ ನಾನು ಭಗವಂತನಿಗೂ ಆತನ ಧರ್ಮಕ್ಕೂ ಭಿಕ್ಷುಸಂಘಕ್ಕೂ ಶರಣಾಗುತ್ತೇನೆ. ಇಂದಿನಿಂದ ಪ್ರಾಣವಿರುವ ವರೆಗೂ ಶರಣಾಗತನಾದ ಉಪಾಸಕನೆಂದು ಭಗವಂತನು ನನ್ನನ್ನು ಸ್ವೀಕರಿಸಬೇಕು" ಎಂದನು.

"ಸಿಂಹ! ತಿಳಿದು ಪರೀಕ್ಷೆ ಮಾಡಿನೋಡು. ತಿಳಿದು ಪರೀಕ್ಷಿಸಿ ನೋಡುವುದರಿಂದ ನಿನ್ನಂತಹ ಬಲ್ಲವರಿಗೆ ಮೇಲಾಗುವುದು."

"ಭನ್ತೇ! ಭಗವಂತನ ಈ ಮಾತುಗಳಿಂದ ಮನಸ್ಸಿಗೆ ಹೆಚ್ಚು ಒಪ್ಪಿಗೆಯಾಯಿತು, ಮೆಚ್ಚುಗೆಯಾಯಿತು. ಬೇರೆ ಯಾರಾದರೂ ತೀರ್ಥಕರಿಗೆ ನಾನು ಶ್ರಾವಕನಾಗಿದ್ದರೆ, 'ಸೇನಾಪತಿ ಸಿಂಹನು ನಮ್ಮ ಶ್ರಾವಕನಾದನು' ಎಂದು ವೈಶಾಲಿಯಲ್ಲೆಲ್ಲ ಬಾವುಟ ಹಾರಿಸುತ್ತಿದ್ದರು. ಆದರೆ ಭಗವಂತನು 'ತಿಳಿದು ಪರೀಕ್ಷಿಸಿನೋಡು. ಆದರಿಂದ ನಿನ್ನಂತಹ ಬಲ್ಲವರಿಗೆ ಮೇಲಾಗುವುದು' ಎನ್ನುವನು. ಭನ್ತೇ! ಭಗವಂತನಿಗೂ ಅವನ ಧರ್ಮಸಂಘಗಳಿಗೂ ನಾನು ಎರಡನೆಯ ಸಲ ಶರಣಾಗುವೆನು. ಇಂದಿನಿಂದ ಜೀವವಿರುವವರೆಗೂ ಶರಣಾಗತನಾದ ಉಪಾಸಕನೆಂದು ಭಗವಂತನು ನನ್ನನ್ನು ಸ್ವೀಕರಿಸಬೇಕು."

"ಸಿಂಹ! ಬಹು ದಿವಸದಿಂದ ನಿರ್ಗ್ರಂಥರಿಗೆ ನಿಮ್ಮ ಮನೆ ಚಿಮ್ಮುವ ಚಿಲುಮೆಯು ಹಾಗಿದೆ. ಅದರಿಂದ ಹತ್ತಿರ ಬಂದವರಿಗೆ ಭಿಕ್ಷೆ ಹಾಕತಕ್ಕುದೆಂದು ತಿಳಿ."

"ಭನ್ತೇ! ಭಗವಂತನ ಈ ಮಾತುಗಳಿಂದ ಮನಸ್ಸಿಗೆ ಇನ್ನೂ ಹೆಚ್ಚು ಒಪ್ಪಿಗೆಯಾಯಿತು. ಶ್ರಮಣ ಗೌತಮನು 'ದಾನವನ್ನು ನನಗೆ ಕೊಡತಕ್ಕುದು, ಇತರರಿಗೆ ಕೊಡತಕ್ಕುದಲ್ಲ; ನನ್ನ ಶ್ರಾವಕರಿಗೆ ದಾನ ಕೊಡತಕ್ಕುದು, ಇತರರ ಶ್ರಾವಕರಿಗೆ ಕೊಡತಕ್ಕುದಲ್ಲ; ನನಗೂ ನನ್ನ ಶ್ರಾವಕರಿಗೂ ಕೊಟ್ಟುದರಿಂದ ಬಹಳ ಫಲ, ಇತರರಿಗೂ ಅವರ ಶ್ರಾವಕರಿಗೂ ಕೊಟ್ಟುದರಿಂದ ಬಹಳ ಫಲವಿಲ್ಲ'—ಎಂದು ಹೇಳುವನೆಂದು ಕೇಳಿದ್ದೇನೆ. ಆದರೆ ನಿರ್ಗ್ರಂಥರಿಗೂ ದಾನಕೊಡುವಂತೆ ಭಗವಂತನು ನನ್ನನ್ನು ಒಪ್ಪಿಸುತ್ತಾನೆ! ಭನ್ತೇ, ಸಮಯಬಂದಾಗ ಏನುಮಾಡಬೇಕೆಂದು ತಿಳಿದೆ. ಭಗವಂತನಿಗೂ ಅವನ ಧರ್ಮಸಂಘಗಳಿಗೂ ನಾನು ಮೂರನೆಯ ಸಲ ಶರಣಾದೆ. ಇಂದಿನಿಂದ ಜೀವವಿರುವವರೆಗೂ ಶರಣಾಗತನಾದ ಉಪಾಸಕನೆಂದು ಭಗವಂತನು ನನ್ನನ್ನು ಸ್ವೀಕರಿಸಬೇಕು."

ಆಗ ಭಗವಂತನು ಸಿಂಹನಿಗೆ ಧರ್ಮವನ್ನು ಕ್ರಮವಾಗಿ ಬೋಧಿಸಿದನು . . .

[ಅಂಗುತ್ತರ ನಿಕಾಯ—ಅಟ್ಠಕನಿಪಾತ: ಮಹಾವಗ್ಗ—ಸೀಹಸುತ್ತ]

೫. ಅಂಗುಳಿಮಾಲ

ಭಗವಂತನು ಒಂದು ಸಲ ಶ್ರಾವಸ್ತಿಯ ಜೇತವನದಲ್ಲಿ ಅನಾಥ ಪಿಂಡಿಕನ ಆರಾಮದಲ್ಲಿ ತಂಗಿದ್ದನು. ಆ ಸಮಯದಲ್ಲಿ, ಕೋಸಲದ ರಾಜನಾದ ಪ್ರಸೇನಜಿತನು ಜಯಿಸಿದ ಕಡೆ ಅಂಗುಳಿಮಾಲನೆಂಬ ಚೋರನಿದ್ದನು. ಅವನು ಕ್ರೂರಿ. ರಕ್ತದಿಂದ ಅವನ ಕೈ ಕೆಂಪಾಗಿತ್ತು. ಅವನು ಜನರನ್ನು ಕೊಂದು ಗಾಯಪಡಿಸುವನು. ಪ್ರಾಣಿಗಳಲ್ಲಿ ಅವನಿಗೆ ದಯೆಯಿರಲಿಲ್ಲ. ಅವನಿಂದ ಅನೇಕ ಗ್ರಾಮಗಳೂ ನಗರಗಳೂ ಜನಪದಗಳೂ ಹೆಸರಿಲ್ಲದಹಾಗಾದುವು. ಅವನು ಮನುಷ್ಯರನ್ನು ಕೊಂದು ಕೊಂದು, ಅವರ ಅಂಗುಳಿಗಳ ಮಾಲೆಯನ್ನು ಹಾಕಿಕೊಳ್ಳುತ್ತಿದ್ದನು.

ಭಗವಂತನು ಪೂರ್ವಾಹ್ನ ಸಮಯದಲ್ಲಿ ಉಡುಪು ಹಾಕಿಕೊಂಡು, ಪಾತ್ರೆ ಚೀವರಗಳನ್ನು ತೆಗೆದುಕೊಂಡು ಭಿಕ್ಷೆಗಾಗಿ ಶ್ರಾವಸ್ತಿಯನ್ನು ಹೊಕ್ಕು ಸಂಚರಿಸಿದನು. ಹಿಂದಿರುಗಿ ಬಂದು, ಊಟವಾದ ಮೇಲೆ ಹಾಸಿಗೆಯನ್ನು ಸುತ್ತಿಟ್ಟು, ಪಾತ್ರೆ ಚೀವರಗಳನ್ನು ಕೊಂಡು ಚೋರನಾದ ಅಂಗುಳಿಮಾಲನಿರುವ ಕಡೆಗೆ ಹೊರಟನು. ಅಂಗುಳಿಮಾಲನಿರುವ ಮಾರ್ಗವನ್ನು ಹಿಡಿದ ಭಗವಂತನನ್ನು ಗೋಪಾಲಕರೂ ಪಶುಪಾಲಕರೂ ಕೃಷಿಕರೂ ದಾರಿಹೋಕರೂ ಕಂಡು, "ಈ ಮಾರ್ಗದಲ್ಲಿ ಹೋಗಬೇಡ, ಶ್ರಮಣ. ಇಲ್ಲಿ ಅಂಗುಳಿಮಾಲನೆಂಬ ಚೋರನಿದ್ದಾನೆ. ಅವನು ಕ್ರೂರಿ. ರಕ್ತದಿಂದ ಅವನ ಕೈ ಕೆಂಪಾಗಿದೆ. ಅವನು ಜನರನ್ನು ಕೊಂದು ಗಾಯಪಡಿಸುತ್ತಾನೆ. ಪ್ರಾಣಿಗಳಲ್ಲಿ ಅವನಿಗೆ ದಯೆಯಿಲ್ಲ. ಅವನಿಂದ ಅನೇಕ ಗ್ರಾಮಗಳೂ ನಗರಗಳೂ ಜನಪದಗಳೂ ಹೆಸರಿಲ್ಲದಹಾಗಾದುವು. ಅವನು ಮನುಷ್ಯರನ್ನು ಕೊಂದು ಕೊಂದು, ಅವರ ಅಂಗುಳಿಗಳ ಮಾಲೆಯನ್ನು ಹಾಕಿಕೊಳ್ಳುತ್ತಾನೆ. ಹತ್ತಲ್ಲ, ಇಪ್ಪತ್ತಲ್ಲ, ಮೂವತ್ತು ನಲುವತ್ತು ಜನ ಕೂಡಿ ಈ ಮಾರ್ಗದಲ್ಲಿ ಹೊರಟರೂ, ಅವರೂ ಚೋರ ಅಂಗುಳಿಮಾಲನ ಕೈಗೆ ಬೀಳುವರು" ಎಂದರು.

ಹೀಗೆನ್ನಲು, ಭಗವಂತನು ಮಾತನಾಡದೆ ನಡೆದನು.

ಆ ಗೋಪಾಲಕರೂ ಪಶುಪಾಲಕರೂ ಕೃಷಿಕರೂ ದಾರಿಹೋಕರೂ ಭಗವಂತನನ್ನು ಎರಡನೆಯ ಸಲ ತಡೆದರು; ಮೂರನೆಯ ಸಲ ತಡೆದರು. ಆದರೂ ಭಗವಂತನು ಮಾತನಾಡದೆ ನಡೆದನು.

ಭಗವಂತನು ಬರುವುದನ್ನು ಅಂಗುಳಿಮಾಲನು ದೂರದಿಂದಲೇ ಕಂಡನು. ಕಾಣಲು, "ಆಹಾ, ಆಶ್ಚರ್ಯ! ಅದ್ಭುತ! ಈ ದಾರಿಯಲ್ಲಿ ಹತ್ತಲ್ಲ, ಇಪ್ಪತ್ತಲ್ಲ, ಮೂವತ್ತು, ನಲುವತ್ತು, ಐವತ್ತು ಜನ ಸೇರಿ ಬಂದರೂ, ಅವರು ಕೂಡ ನನ್ನ ಕೈಗೆ ಬೀಳುವರು. ಆದರೆ ಈ ಶ್ರಮಣನು ಒಂಟಿಯಾಗಿ ಎರಡನೆಯವರಿಲ್ಲದೆ ಸಾಹಸದಿಂದ ಬರುವಹಾಗಿದೆ. ಈ ದಿನ ನಾನು ಈ ಶ್ರಮಣನ ಜೀವ ತೆಗೆಯುತ್ತೇನೆ" ಎಂದುಕೊಂಡನು.

ಆಗ ಅಂಗುಳಿಮಾಲನು ಕತ್ತಿ ಬಿಲ್ಲುಗಳನ್ನು ಸಿದ್ಧಮಾಡಿಕೊಂಡು ಭಗವಂತನ ಹಿಂದೆ ಹಿಂದೆಯೆ ಅನುಸರಿಸಿ ಬಂದನು. ಆಗ ಭಗವಂತನು ತನ್ನ ದಿವ್ಯಶಕ್ತಿಯನ್ನು ತೋರ್ಪಡಿಸಿದನು. ಅದರಿಂದ, ಅಂಗುಳಿಮಾಲನು ತನ್ನ ಸಂಪೂರ್ಣ ಶಕ್ತಿಯಿಂದ ನಡೆದರೂ ಸಹಜವಾಗಿ ನಡೆಯುವ ಭಗವಂತನನ್ನು ಸೇರಲು ಆಗಲಿಲ್ಲ.

ಆಗ ಅಂಗುಳಿಮಾಲನಿಗೆ "ಆಶ್ಚರ್ಯ! ಅದ್ಭುತ! ನಾನು, ಹಿಂದೆ, ಓಡೋಡಿ ಆನೆಯನ್ನು ಸಮೀಪಿಸಿ ಹಿಡಿಯುತ್ತಿದ್ದೆ; ಕುದುರೆ, ರಥ, ಮೃಗಗಳನ್ನು ಕೂಡ ಓಡಿ ಸಮೀಪಿಸಿ ಹಿಡಿಯುತ್ತಿದ್ದೆ. ಆದರೆ ಈಗ, ನನ್ನ ಸರ್ವಶಕ್ತಿಯಿಂದ ನಡೆದರೂ ಈ ಸಹಜವಾಗಿ ನಡೆಯುವ ಶ್ರಮಣನನ್ನು ಸೇರಲಾರೆ!" ಎಂದೆನಿಸಿತು.

ಆಗ ಅವನು ನಿಂತು, "ನಿಲ್ಲು, ಸಮಣ! ನಿಲ್ಲು, ಸಮಣ!" ಎಂದು ಭಗವಂತನಿಗೆಂದನು.

"ನಾನು ನಿಂತಿದ್ದೇನೆ, ಅಂಗುಳಿಮಾಲ. ನೀನೂ ನಿಲ್ಲು."

ಆಗ, "ಈ ಶಾಕ್ಯಪುತ್ರರಾದ ಶ್ರಮಣರು ಸತ್ಯವಾದಿಗಳು, ಸತ್ಯಪ್ರತಿಜ್ಞರು. ಆದರೆ, ಈ ಶ್ರಮಣನು ತಾನು ನಡೆಯುತ್ತಿದ್ದರೂ 'ನಾನು ನಿಂತಿದ್ದೇನೆ, ಅಂಗುಳಿಮಾಲ. ನೀನೂ ನಿಲ್ಲು' ಎನ್ನುವನು. ಇದೇನೆಂದು ಈ ಶ್ರಮಣನನ್ನೇ ಕೇಳೋಣ" ಎಂದುಕೊಂಡು, ಅಂಗುಳಿಮಾಲನು ಭಗವಂತನನ್ನು ಕುರಿತು ಈ ಗಾಹೆಗಳನ್ನು ಹೇಳಿದನು:

"'ನಾನು ನಿಂತಿದ್ದೇನೆ' ಎಂದು ನಡೆಯುತ್ತ ಹೇಳುವೆ.
ನಿಂತಿರುವ ನನ್ನನ್ನು 'ನಿಂತಿಲ್ಲ' ಎನ್ನುವೆ.
ನೀನು ನಿಂತಿರುವುದು ಹೇಗೆ? ನಾನು ನಿಂತಿಲ್ಲ ಹೇಗೆ?
ಇದರ ಅರ್ಥ ಕೇಳುತ್ತೇನೆ, ಶ್ರಮಣ?"

"ನಾನು ನಿಂತಿದ್ದೇನೆ, ಅಂಗುಳಿಮಾಲ. ಸರ್ವದಾ
ಸರ್ವಪ್ರಾಣಿಗಳಲ್ಲಿಯೂ ದಂಡವನ್ನು ಇಳಿಸಿದ್ದೇನೆ.
ನೀನು ಇನ್ನೂ ಪ್ರಾಣಿಗಳನ್ನು ಕೊಲ್ಲುತ್ತಿರುವೆ.
ಆದರಿಂದ — ನಾನು ನಿಂತಿದ್ದೇನೆ, ನೀನು ನಿಂತಿಲ್ಲ."

"ಪೂಜ್ಯನಾದ ಮಹರ್ಷಿಯು, ಸತ್ಯವಾದಿಯು,
ಕಟ್ಟಕಡೆಗೆ ನನಗೆ ಮಹಾವನದಲ್ಲಿ ಸಿಕ್ಕಿದನು.
ಕಡೆಗೆ ನಿನ್ನ ಧರ್ಮಯುತವಾದ ಗಾಥೆಗಳನ್ನು ಕೇಳಿ
ಪಾಪಗಳನ್ನು ಬಿಡುತ್ತೇನೆ."

ಹೀಗೆಂದು, ಚೋರನು ಕತ್ತಿ ಆಯುಧಗಳನ್ನು
ಆಳವಾದ ಕಮರಿಗೆ ಎಸೆದನು.
ಚೋರನು ಸುಗತನ ಪಾದಕ್ಕೆ ನಮಸ್ಕಾರಮಾಡಿ
ಆಗಲೇ ಪ್ರವ್ರಜ್ಯವನ್ನು ಬೇಡಿದನು.

ಬುದ್ಧನು, ಕಾರುಣಿಕನಾದ ಮಹರ್ಷಿಯು,
ಮನುಷ್ಯರಿಗೂ ದೇವತೆಗಳಿಗೂ ಗುರುವಾದವನು,
'ಬಾ ಭಿಕ್ಷು!' ಎಂದು ಆಗ ಹೇಳಿದನು.
ಅಷ್ಟರಿಂದಲೇ ಅವನಿಗೆ ಭಿಕ್ಷುಭಾವವಾಯಿತು.

ಆಗ, ಭಗವಂತನು ಆಯುಷ್ಮಂತನಾದ ಅಂಗುಳಿಮಾಲನನ್ನು ತನ್ನ ಶ್ರಾವಕನನ್ನಾಗಿ ಹಿಂದೆ ಕರೆದುಕೊಂಡು ಶ್ರಾವಸ್ತಿಗೆ ಹೊರಟನು. ಕ್ರಮವಾಗಿ ಸಂಚಾರಮಾಡುತ್ತ ಇಬ್ಬರೂ ಶ್ರಾವಸ್ತಿಗೆ ಬಂದರು. ಅಲ್ಲಿ, ಭಗವಂತನು ಜೇತವನದಲ್ಲಿ ಅನಾಥಪಿಂಡಿಕನ ಆರಾಮದಲ್ಲಿ ತಂಗಿದನು.

ಆ ಸಮಯದಲ್ಲಿ, ಜನರ ದೊಡ್ಡ ಗುಂಪು ಪ್ರಸೇನಜಿತನ ಅರಮನೆಯ ಬಾಗಿಲಿನಲ್ಲಿ ಸೇರಿ, "ದೇವ! ನೀನು ಗೆದ್ದ ರಾಜ್ಯದಲ್ಲಿ ಅಂಗುಳಿಮಾಲನೆಂಬ ಚೋರನಿರುವನು" ಎಂದು ಅವನ ಹಾವಳಿಯನ್ನು ವಿವರಿಸಿ, "ಅವನನ್ನು ಅಡಗಿಸಬೇಕು, ದೇವ!" ಎಂದು ದನಿಯೆತ್ತಿ ಕೂಗಾಡುತ್ತಿದ್ದರು.

ಆಗ ಪ್ರಸೇನಜಿತರಾಜನು, ಬೆಳಗಾಗಲು, ಬೇಗ ಐನೂರು ಕುದುರೆಗಳೊಡನೆ ಶ್ರಾವಸ್ತಿಯಿಂದ ಹೊರಟು ಆರಾಮವಿರುವ ಕಡೆಗೆ

ತೆರಳಿದನು. ರಥವು ಹೋಗುವವರೆಗೆ ರಥದಲ್ಲಿ ಹೋಗಿ, ಇಳಿದು, ಕಾಲುನಡೆಯಿಂದ ಭಗವಂತನ ಬಳಿಸಾರಿ, ಅಭಿವಂದಿಸಿ ಒಂದು ಕಡೆ ಕುಳಿತನು.

ಹೀಗೆ ಕುಳಿತ ಪ್ರಸೇನಜಿತನನ್ನು ಕುರಿತು "ಏನು, ಮಹಾರಾಜ? ಮಗಧದ ಶ್ರೇಣಿಯ ಬಿಂಬಿಸಾರನ ಮೇಲೆ ಕೋಪವೆ? ಅಥವಾ ವೈಶಾಲಿಯವರ ಮೇಲೊ? ಇಲ್ಲ ಲಿಚ್ಛವಿಗಳ ಮೇಲೊ? ಅಥವಾ ಬೇರೆ ಯಾರಾದರೂ ಪ್ರತಿರಾಜರ ಮೇಲೊ?" ಎಂದು ಭಗವಂತನು ಪ್ರಶ್ನಿಸಿದನು.

"ಅಲ್ಲ, ಭನ್ತೇ. ಬಿಂಬಿಸಾರನೂ ಅಲ್ಲ, ವೈಶಾಲಿಕರೂ ಅಲ್ಲ, ಲಿಚ್ಛವಿಗಳೂ ಅಲ್ಲ, ಬೇರೆ ಪ್ರತಿರಾಜರೂ ಅಲ್ಲ. ನಾನು ಗೆದ್ದ ಕಡೆ ಅಂಗುಳಿಮಾಲನೆಂಬ ಚೋರನಿದ್ದಾನೆ. ಅವನ ಹಾವಳಿ ಇಂತಹದು. ನಾನು ಅವನನ್ನು ಅಡಗಿಸಲಾರೆ."

"ಮಹಾರಾಜ! ಆ ಅಂಗುಳಿಮಾಲನು ತಲೆಗೂದಲು ಗಡ್ಡಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಬಂದು, ಪ್ರಾಣಿಗಳನ್ನು ಕೊಲ್ಲದೆ, ಕೊಡದುದನ್ನು ತೆಗೆದುಕೊಳ್ಳದೆ, ಸುಳ್ಳಾಡದೆ, ಒಪ್ಪೊತ್ತು ಊಟಮಾಡಿ, ಶೀಲವಂತನಾಗಿ, ಕಲ್ಯಾಣ ಧರ್ಮಗಳನ್ನು ಆಚರಿಸುವುದು ಕಂಡರೆ, ಅವನನ್ನು ನೀನೇನು ಮಾಡುವೆ?"

"ಅವನಿಗೆ ಅಭಿವಂದಿಸುವೆನು, ಭನ್ತೇ. ಪ್ರತ್ಯುಪಸ್ಥಾನಗೈಯುವೆನು. ಆಸನಕೊಟ್ಟು ಕರೆಯುವೆನು. ಬೇಕಾದ ಬಟ್ಟೆ, ಪಾತ್ರೆ, ವಾಸಸ್ಥಳ, ಔಷಧಗಳನ್ನು ನೀಡಿ ಕರೆಯುತ್ತೇನೆ. ಅವನು ಧರ್ಮವನ್ನು ಕಾಪಾಡಲು ಬೇಕಾಗುವ ರಕ್ಷಣೆಗಳನ್ನೆಲ್ಲ ಹೊಂದಿಸುತ್ತೇನೆ. ಆದರೆ, ಭನ್ತೇ, ಶೀಲವಿಲ್ಲದೆ ಪಾಪಮಾಡುವವನಿಗೆ ಈ ರೀತಿಯ ಶೀಲಸಂಯಮ ಹೇಗೆ ಆದೀತು!"

ಆ ಸಮಯದಲ್ಲಿ, ಆಯುಷ್ಮಂತನಾದ ಅಂಗುಳಿಮಾಲನು ಭಗವಂತನಿಗೆ ಸ್ವಲ್ಪ ದೂರದಲ್ಲಿ ಕುಳಿತಿದ್ದನು. ಭಗವಂತನು ಬಲಗೈ ಚಾಚಿ, "ಮಹಾರಾಜ, ಇವನು ಅಂಗುಳಿಮಾಲ!" ಎಂದನು.

ಆಗ ಪ್ರಸೇನಜಿತನಿಗೆ ಭಯವಾಯಿತು, ನಡುಕ ಹುಟ್ಟಿತು, ರೋಮಾಂಚವಾಯಿತು. ಅವನು ಭಯಗೊಂಡು ಬೆದರಿ ನಡುಗುವು

ದನ್ನು ತಿಳಿದು, ಭಗವಂತನು "ಭಯ ಬೇಡ, ಮಹಾರಾಜ. ಇಲ್ಲೇನೂ ಭಯವಿಲ್ಲ" ಎಂದನು.

ಆಗ ಪ್ರಸೇನಜಿತನ ಭಯ, ನಡುಕ, ರೋಮಾಂಚಗಳು ಶಾಂತ ವಾದುವು. ಅವನು ಆಯುಷ್ಮಂತನಾದ ಅಂಗುಳಿಮಾಲನ ಬಳಿಸಾರಿ, "ಆರ್ಯನು ಅಂಗುಳಿಮಾಲನೆ?" ಎಂದನು.

"ಹೌದು, ಮಹಾರಾಜ."

"ಭನ್ತೇ, ಆರ್ಯನ ತಂದೆಯ ಗೋತ್ರ ಯಾವುದು? ತಾಯಿಯ ಗೋತ್ರ ಯಾವುದು?"

"ತಂದೆ ಗರ್ಗ, ಮಹಾರಾಜ. ತಾಯಿ ಮಂತ್ರಾಣಿ."

"ಆರ್ಯನಾದ ಗಾರ್ಗ್ಯ ಮಂತ್ರಾಣಿಪುತ್ರನಿಗೆ ಸಂತೋಷವಾಗಲಿ. ನಾನು ಆರ್ಯನಾದ ಗಾರ್ಗ್ಯ ಮಂತ್ರಾಣಿಪುತ್ರನಿಗೆ ಬೇಕಾದ ಬಟ್ಟೆ, ಪಾತ್ರೆ, ವಾಸಸ್ಥಾನ, ಔಷಧಗಳನ್ನು ಉತ್ಸಾಹದಿಂದ ಒದಗಿಸುತ್ತೇನೆ."

ಆ ಸಮಯದಲ್ಲಿ ಆಯುಷ್ಮಂತನಾದ ಅಂಗುಳಿಮಾಲನು ಕಾಡಿನಲ್ಲಿ ವಾಸಮಾಡಿ, ಭಿಕ್ಷೆಮಾಡಿಕೊಂಡು, ತಿಪ್ಪೆಯ ಮೇಲಿನ ಮೂರು ಬಟ್ಟೆ ಗಳನ್ನು ಧರಿಸುತ್ತಿದ್ದನು. ಅದರಿಂದ "ಸಾಕು, ಮಹಾರಾಜ. ನನ್ನ ಮೂರು ಬಟ್ಟೆಗಳು ಸಂಪೂರ್ಣವಾಗಿವೆ" ಎಂದನು.

ಆಗ ಪ್ರಸೇನಜಿತ ರಾಜನು ಭಗವಂತನಿರುವ ಬಳಿಸಾರಿ, ಅಭಿ ವಂದಿಸಿ ಒಂದು ಕಡೆ ಕುಳಿತನು. ಕುಳಿತು, "ಇದು ಆಶ್ಚರ್ಯ, ಭನ್ತೇ! ಅದ್ಭುತ, ಭನ್ತೇ! ಭಗವಂತನು ದಮನವಾಗದುದನ್ನು ದಮನಮಾಡು ವನು! ಶಾಂತವಾಗದುದನ್ನು ಶಾಂತಗೊಳಿಸುವನು! ಆರದುದನ್ನು ಆರಿ ಸುವನು! ನಾನು ಇವನನ್ನು ದಂಡ ಶಸ್ತ್ರಗಳಿಂದಲೂ ದಮನಮಾಡ ಲಾರದೆ ಹೋದೆ. ಆದರೆ ಭಗವಂತನು ದಂಡ ಶಸ್ತ್ರಗಳಿಲ್ಲದೆ ಇವನನ್ನು ದಮನಮಾಡಿದನು! ನಾನು ಹೊರಡುತ್ತೇನೆ, ಭನ್ತೇ! ಮಾಡಬೇಕಾದ ಕೆಲಸ ಕಾರ್ಯ ಬಹಳವಿದೆ" ಎಂದನು.

"ಆಗಬಹುದು, ಮಹಾರಾಜ."

ಆಗ ಪ್ರಸೇನಜಿತ ರಾಜನು ಆಸನದಿಂದ ಎದ್ದು ಪ್ರದಕ್ಷಿಣೆಮಾಡಿ ಹೊರಟನು.

* * *

ಆಗ, ಆಯುಷ್ಮಂತನಾದ ಅಂಗುಳಿಮಾಲನು ಪೂರ್ವಾಹ್ನ ಸಮಯದಲ್ಲಿ ಬಟ್ಟೆ ಹಾಕಿಕೊಂಡು, ಪಾತ್ರೆ ಚೀವರಗಳನ್ನು ತೆಗೆದುಕೊಂಡು, ಭಿಕ್ಷೆಗಾಗಿ ಶ್ರಾವಸ್ತಿಯನ್ನು ಪ್ರವೇಶಿಸಿದನು. ಅಲ್ಲಿ ಭಿಕ್ಷೆಗಾಗಿ ತಿರುಗುತ್ತ, ಒಬ್ಬ ಗರ್ಭಿಣಿಯು ಪ್ರಸವವೇದನೆಯನ್ನು ಕಂಡನು. ಕಂಡು, ಜೀವಿಗಳು ಎಷ್ಟು ಕಷ್ಟಪಡುತ್ತವೆ ಎಂದುಕೊಂಡು ತನ್ನ ಭಿಕ್ಷಾಚರಣವನ್ನು ಮುಗಿಸಿ ಬಂದು, ತಾನು ಕಂಡುದನ್ನು ಭಗವಂತನಿಗೆ ತಿಳಿಸಿದನು.

"ಹಾಗಾದರೆ, ಅಂಗುಳಿಮಾಲ, ಶ್ರಾವಸ್ತಿಗೆ ಹೋಗು. ಹೋಗಿ, 'ಸೋದರಿ! ಹುಟ್ಟಿದ ದಿನ ಮೊದಲುಗೊಂಡು ಮನಃಪೂರ್ವಕವಾಗಿ ಪ್ರಾಣಿಗಳ ಜೀವವನ್ನು ಹೋಗಲಾಡಿಸಿದೆನೆಂದು ನಾನರಿಯೆ. ಈ ಸತ್ಯವಾದ ಮಾತಿನಿಂದ ನಿನಗೆ ಕ್ಷೇಮವಾಗಲಿ, ನಿನ್ನ ಗರ್ಭಕ್ಕೆ ಕ್ಷೇಮವಾಗಲಿ' ಎಂದು ಆ ಹೆಂಗಸಿಗೆ ಹೇಳು."

"ಅದರಿಂದ, ಭನ್ತೇ, ತಿಳಿದೂ ಸುಳ್ಳಾಡಿದ ಹಾಗಾಗುತ್ತದೆ. ನಾನೇ ಮನಃಪೂರ್ವಕವಾಗಿ ಅನೇಕ ಪ್ರಾಣಿಗಳ ಜೀವವನ್ನು ಹೋಗಲಾಡಿಸಿದ್ದೇನೆ."

"ಹೋಗು, ಅಂಗುಳಿಮಾಲ. ಶ್ರಾವಸ್ತಿಗೆ ಹೋಗಿ, ನಾನು ಹೇಳಿದಂತೆ ಹೇಳು."

ಆಯುಷ್ಮಂತನಾದ ಅಂಗುಳಿಮಾಲನು ಹಾಗೆಯೇ ಆಗಲೆಂದು ಭಗವಂತನ ಮಾತಿಗೆ ಒಪ್ಪಿ, ಶ್ರಾವಸ್ತಿಗೆ ಹೋಗಿ ಭಗವಂತನೆಂದಹಾಗೆಯೆ ಹೇಳಿದನು; ಆ ಮಾತಿನ ಸತ್ಯದಿಂದ ಆ ಸ್ತ್ರೀಗೂ ಅವಳ ಗರ್ಭಕ್ಕೂ ಕ್ಷೇಮವಾಗಲೆಂದು ಬಯಸಿದನು. ಆಗ ಅವಳಿಗೂ ಆ ಗರ್ಭಕ್ಕೂ ಕ್ಷೇಮವಾಯಿತು.

ಆಗ, ಆಯುಷ್ಮಂತನಾದ ಅಂಗುಳಿಮಾಲನು ಬಲುಬೇಗನೆ ಒಂಟಿಯಾಗಿ ಬೇರಾಗಿ ವಾಸಿಸಿ, ಅಪ್ರಮತ್ತನಾಗಿ, ಆತಾಪಿಯಾಗಿ, ಮಮಕಾರವನ್ನು ಬಿಟ್ಟು ವಿಹರಿಸಿದನು. ಯಾವ ಗುರಿಗಾಗಿ ಗೃಹಸ್ಥರು ಶ್ರಮಣರಾಗುವರೋ ಆ ಉತ್ತಮೋತ್ತಮವಾದ ಬ್ರಹ್ಮಚರ್ಯದ ತುತ್ತತುದಿಯನ್ನು ಅಲ್ಲಿಯೇ ಸ್ವಂತ ಅಭಿಜ್ಞಾನದಿಂದ ಕಂಡುಕೊಂಡು ಸಂಪಾದಿಸಿದನು. "ಜಾತಿ ಕ್ಷೀಣವಾಯಿತು, ಬ್ರಹ್ಮಚರ್ಯವನ್ನು ಮುಗಿಸಿಯಾಯಿತು, ಮಾಡ

ಬೇಕಾದುದನ್ನು ಮಾಡಿಯಾಯಿತು, ಇದುವರೆಗೆ ಇದ್ದುದು ಇನ್ನುಮುಂದೆ ಇಲ್ಲ" ಎಂದು ಚೆನ್ನಾಗಿ ಮನಗಂಡನು. ಹೀಗೆ ಆಯುಷ್ಮಂತನಾದ ಅಂಗುಳಿಮಾಲನು ಇನ್ನೊಬ್ಬ ಅರ್ಹತನಾದನು.

ಆಗ, ಆಯುಷ್ಮಂತನಾದ ಅಂಗುಳಿಮಾಲನು ಪೂರ್ವಾಹ್ನ ಸಮಯದಲ್ಲಿ ಬಟ್ಟೆ ಹಾಕಿಕೊಂಡು, ಪಾತ್ರೆ ಚೀವರಗಳನ್ನು ತೆಗೆದುಕೊಂಡು, ಭಿಕ್ಷೆಗಾಗಿ ಶ್ರಾವಸ್ತಿಗೆ ಹೋದನು. ಆಗ ಒಬ್ಬನು ಅವನ ಮೇಲೆ ಒಂದು ಮಣ್ಣುಹೆಂಟೆ ಎಸೆದನು, ಒಬ್ಬನು ದೊಣ್ಣೆ ಎಸೆದನು, ಒಬ್ಬನು ಮಡಕೆ ಚೂರು ಎಸೆದನು. ಎಲ್ಲವೂ ಅಂಗುಳಿಮಾಲನ ಮೇಲೆ ಬಿತ್ತು. ಅಂಗುಳಿಮಾಲನ ತಲೆ ಒಡೆದು ರಕ್ತ ಸೋರಿತು, ಪಾತ್ರೆ ಚೂರಾಯಿತು, ಸಂಘಾಟ ಹರಿದುಹೋಯಿತು. ಅವನು ಹಾಗೆಯೆ ಭಗವಂತನ ಬಳಿಸಾರಿದನು.

ಅಂಗುಳಿಮಾಲನು ಬರುವುದನ್ನು ಭಗವಂತನು ದೂರದಿಂದಲೇ ಕಂಡು, "ಸಹಿಸಿಕೊ, ಬ್ರಾಹ್ಮಣ! ಸಹಿಸಿಕೊ, ಬ್ರಾಹ್ಮಣ! ನಿನ್ನ ಕರ್ಮದ ವಿಪಾಕದಿಂದ ಅನೇಕ ವರ್ಷಗಳು, ಅನೇಕ ನೂರುವರ್ಷಗಳು, ಅನೇಕ ಸಾವಿರವರ್ಷಗಳು ನೀನು ನಿರಯದಲ್ಲಿ ಬೇಯುತ್ತಿದ್ದೆ. ಆ ಕರ್ಮದ ವಿಪಾಕವನ್ನು ನೀನು ಈಗ ಇಲ್ಲಿಯೇ ಅನುಭವಿಸುತ್ತಿರುವೆ" ಎಂದನು.

ಆಗ ಆಯುಷ್ಮಂತನಾದ ಅಂಗುಳಿಮಾಲನು ಏಕಾಂತವಾಗಿ ಧ್ಯಾನಮಾಡಿ ವಿಮುಕ್ತಿಯ ಸುಖವನ್ನು ಅನುಭವಿಸಿದನು . . .

[ಮಜ್ಝಿಮನಿಕಾಯ — ಅಂಗುಲಿಮಾಲ ಸುತ್ತ.]

೬. ಪ್ರಾಣಿವಧೆಯ ಫಲ

ಒಂದು ಸಲ, ಭಗವಂತನು ಮಹಾ ಭಿಕ್ಷುಸಂಘದೊಡನೆ ಕೋಸಲ ದಲ್ಲಿ ಭಿಕ್ಷೆಗಾಗಿ ಸಂಚಾರಮಾಡುತ್ತಿದ್ದನು. ಆಗ, ಭಗವಂತನು ದಾರಿ ಯಲ್ಲಿ ನಡೆದುಹೋಗುತ್ತ, ಬೆಸ್ತನೊಬ್ಬನು ಮೀನುಗಳನ್ನು ಕೊಂದು ಕೊಂದು ಮಾರುವುದನ್ನು ಕಂಡನು. ಕಂಡು, ದಾರಿಯನ್ನು ಬಿಟ್ಟು ನಡೆದು, ಒಂದು ಮರದ ಬುಡದಲ್ಲಿ ಸಿದ್ಧಗೊಳಿಸಿದ ಆಸನದಲ್ಲಿ ಕುಳಿತನು.

ಆಗ, ಭಗವಂತನು ಭಿಕ್ಷುಗಳನ್ನು ಕರೆದು, "ಭಿಕ್ಷುಗಳೆ! ಆ ಬೆಸ್ತನು ಮೀನುಗಳನ್ನು ಕೊಂದುಕೊಂದು ಮಾರುವುದು ನೋಡಿ ದಿರ?" ಎಂದನು.

"ನೋಡಿದೆವು, ಭನ್ತೇ."

"ನೀವು ಏನು ತಿಳಿಯುವಿರಿ, ಭಿಕ್ಷುಗಳೆ? ಮೀನು ಹಿಡಿಯುವವನು, ಮೀನುಗಳನ್ನು ಕೊಂದುಕೊಂದು ಮಾರುವವನು, ಆ ಕೆಲಸದಿಂದ, ಆ ಜೀವನದಿಂದ ಆನೆಯ ಮೇಲಾಗಲಿ ಕುದುರೆಯ ಮೇಲಾಗಲಿ ರಥದ ಮೇಲಾಗಲಿ ಯಾನದ ಮೇಲಾಗಲಿ ಹೋಗುವುದನ್ನು, ಅಥವಾ ಭೋಗ ಗಳನ್ನು ಅನುಭವಿಸುವುದನ್ನು, ಇಲ್ಲವೆ ಮಹತ್ತಾದ ಭೋಗಗಳ ರಾಶಿ ಯನ್ನು ಪಡೆದು ಬದುಕುವುದನ್ನು ನೀವು ಕಂಡಿರುವಿರ? ಕೇಳಿರುವಿರ?"

"ಕಂಡಿಲ್ಲ, ಕೇಳಿಲ್ಲ, ಭನ್ತೇ."

"ಸಾಧು, ಭಿಕ್ಷುಗಳೆ. ನಾನು ಕೂಡ ಅದನ್ನು ಕಂಡುದಿಲ್ಲ, ಕೇಳಿ ಯಿಲ್ಲ. ಅದಕ್ಕೆ ಕಾರಣವೇನು? ಭಿಕ್ಷುಗಳೆ, ಮೀನು ಕೊಲ್ಲುವುದನ್ನು, ಮೀನನ್ನು ಕೊಲ್ಲಲು ಕೊಂಡುಹೋಗುವುದನ್ನು ಅವರು ಪಾಪದ ಮನಸ್ಸಿನಿಂದ ನೋಡಿ ಒಪ್ಪುವರು. ಅದರಿಂದ ಅವರು ಆನೆಯ ಮೇಲಾ ಗಲಿ, ಕುದುರೆಯ ಮೇಲಾಗಲಿ, ರಥದ ಮೇಲಾಗಲಿ, ಯಾನದ ಮೇಲಾಗಲಿ ಹೋಗುವುದಿಲ್ಲ; ಭೋಗಗಳನ್ನು ಅನುಭವಿಸುವುದಿಲ್ಲ; ಮಹತ್ತಾದ ಭೋಗಗಳ ರಾಶಿಯನ್ನು ಪಡೆದು ಬದುಕುವುದಿಲ್ಲ."

"ನೀವು ಏನು ಹೇಳುವಿರಿ, ಭಿಕ್ಷುಗಳೆ? ಗೋವು, ಟಗರು, ಹಂದಿ, ಹಕ್ಕಿ, ಜಿಂಕೆ— ಇವುಗಳನ್ನು ಕೊಂದುಕೊಂದು ಮಾರುವವರು

ಆ ಕೆಲಸದಿಂದ, ಆ ಜೀವನದಿಂದ ಮೇಲೆ ಹೇಳಿದಂತೆ ಭೋಗಗಳ ರಾಶಿಯನ್ನು ಪಡೆದು ಬದುಕುವುದನ್ನು ನೀವು ಕಂಡಿರುವಿರ? ಕೇಳಿರುವಿರ?"

"ಇಲ್ಲ, ಭನ್ತೇ."

"ಸಾಧು, ಭಿಕ್ಷುಗಳೆ. ನಾನೂ ಕಂಡಿಲ್ಲ, ಕೇಳಿಲ್ಲ. ಅದಕ್ಕೆ ಕಾರಣ ವೇನು? ಆ ಮೃಗಪಕ್ಷಿಗಳ ವಧೆಯನ್ನು ಅವರು ಪಾಪದ ಮನಸ್ಸಿನಿಂದ ನೋಡಿ ಒಪ್ಪುವರು. ಅದರಿಂದ ಅವರು ಮೇಲೆ ಹೇಳಿದಂತೆ ಭೋಗಗಳ ರಾಶಿಯನ್ನು ಪಡೆದು ಬದುಕುವುದಿಲ್ಲ.

"ಆದರೆ, ಮನುಷ್ಯಜೀವಿಗಳು ವಧೆಯಾಗುವುದನ್ನೂ ಅವರನ್ನು ಕೊಲ್ಲಲು ಕೊಂಡುಹೋಗುವುದನ್ನೂ ಪಾಪದ ಮನಸ್ಸಿನಿಂದ ನೋಡಿ ಒಪ್ಪುವವನಿಗೆ ಏನು ಹೇಳೋಣ! ಭಿಕ್ಷುಗಳೆ, ಅವನಿಗೆ ಬಹುಕಾಲ ಅಹಿತವಾದ ದುಃಖವುಂಟಾಗುವುದು. ಸತ್ತು ದೇಹ ಮುರಿದ ಮೇಲೆ ಅಪಾಯವೂ ದುರ್ಗತಿಯೂ ವಿನಿಪಾತವೂ ಆದ ನರಕದಲ್ಲಿ ಹುಟ್ಟುವನು."

[ಅಂಗುತ್ತರನಿಕಾಯ — ಛಕ್ಕನಿಪಾತ — ಸಾರಾಣಿಯ ವಗ್ಗ — ಮಚ್ಛಸುತ್ತ]

೭. ಕುರುಡು ಆಮೆ

"ಭಿಕ್ಷುಗಳೆ! ಒಂದೇ ಒಂದು ತೂತಿನ ನೊಗವನ್ನು ಪುರುಷನೊಬ್ಬನು ಮಹಾಸಮುದ್ರದಲ್ಲಿ ಬಿಸುಡಿದರೆ; ಅಲ್ಲಿ, ನೂರುನೂರು ವರ್ಷಗಳಾದ ಮೇಲೆ ಒಮ್ಮೊಮ್ಮೆ ಮೇಲಕ್ಕೇಳುವ ಒಂದು ಕುರುಡು ಆಮೆ ಇದ್ದರೆ; ನಿಮಗೆ ಏನೆನಿಸುವುದು, ಭಿಕ್ಷುಗಳೆ? ನೂರು ನೂರು ವರ್ಷಗಳಾದ ಮೇಲೆ ಒಮ್ಮೊಮ್ಮೆ ಮೇಲಕ್ಕೇಳುವ ಆ ಕುರುಡು ಆಮೆಯು ಆ ಒಂದೇ ಒಂದು ತೂತಿನ ನೊಗದಲ್ಲಿ ತನ್ನ ಕೊರಳನ್ನು ಪ್ರವೇಶಿಸಲಾಗುವುದೇನು?"

"ಬಹು ಕಾಲದನಂತರ ಯಾವಾಗಲಾದರೂ ಒಮ್ಮೆ ಆಗಬಹುದು, ಭನ್ತೇ."

"ಭಿಕ್ಷುಗಳೆ! ನೂರುನೂರು ವರ್ಷಗಳಾದ ಮೇಲೆ ಒಮ್ಮೊಮ್ಮೆ ಮೇಲಕ್ಕೇಳುವ ಆ ಕುರುಡು ಆಮೆಯಾದರೂ ಅದೇ ಒಂದೇ ತೂತಿನ ನೊಗದಲ್ಲಿ ಬಹುಬೇಗ ಕೊರಳನ್ನು ಪ್ರವೇಶಿಸಲಾಗುವುದು; ಆದರೆ, ವಿನಿಪಾತಕ್ಕೆ ಹೋದ ಅಜ್ಞಾನಿಯು ಮನುಷ್ಯತ್ವವನ್ನು ಪಡೆಯುವುದಿಲ್ಲ — ಎಂದು ನಾನು ಹೇಳುತ್ತೇನೆ."

[ಸಂಯುತ್ತನಿಕಾಯ–ಮಹಾವಗ್ಗ–ಸಚ್ಚಸಂಯುತ್ತ–ಪಪಾತವಗ್ಗ–ಛಿಗ್ಗಳಸುತ್ತ]

೮. ನಾಗನು ಯಾರು?

ಒಂದು ಸಲ, ಭಗವಂತನು, ಶ್ರಾವಸ್ತಿಯ ಜೇತವನದಲ್ಲಿ ಅನಾಥ ಪಿಂಡಿಕನ ಆರಾಮದಲ್ಲಿ ತಂಗಿದ್ದನು. ಆಗ, ಭಗವಂತನು, ಪೂರ್ವಾಹ್ನ ಸಮಯದಲ್ಲಿ ಬಟ್ಟೆ ಹಾಕಿಕೊಂಡು, ಪಾತ್ರೆ ಚೀವರಗಳನ್ನು ಕೊಂಡು ಭಿಕ್ಷೆಗಾಗಿ ಶ್ರಾವಸ್ತಿಯನ್ನು ಹೊಕ್ಕನು. ಭಿಕ್ಷೆಗಾಗಿ ಶ್ರಾವಸ್ತಿಯಲ್ಲಿ ಸಂಚರಿಸಿ, ಹಿಂದಿರುಗಿ ಬಂದು, ಊಟವಾದ ಮೇಲೆ "ಬಾ, ಆನಂದ. ಮಿಗಾರಮಾತೆಯ ಪೂರ್ವಾರಾಮದ ಪ್ರಾಸಾದಕ್ಕೆ ದಿವಾವಿಹಾರಕ್ಕಾಗಿ ಹೋಗೋಣ" ಎಂದನು. ಹಾಗೆಯೇ ಆಗಲೆಂದು ಆಯುಷ್ಮಂತನಾದ ಆನಂದನು ಭಗವಂತನ ಮಾತಿಗೆ ಒಪ್ಪಿದನು. ಭಗವಂತನು ಮಿಗಾರ ಮಾತೆಯ ಪೂರ್ವಾರಾಮದ ಪ್ರಾಸಾದಕ್ಕೆ ಆನಂದನೊಡನೆ ಬಂದನು.

ಆಗ, ಸಾಯಂಕಾಲ ಸಮಯದಲ್ಲಿ ಏಕಾಂತವಾದ ಧ್ಯಾನದಿಂದ ಎದ್ದು, ಭಗವಂತನು "ಬಾ, ಆನಂದ. ಪೂರ್ವಕೋಷ್ಠಕದ ಬಳಿ ಹೋಗೋಣ. ಅಂಗಗಳಿಗೆ ನೀರು ಚಿಮುಕಿಸೋಣ" ಎಂದನು. ಆನಂದನು ಒಪ್ಪಿದನು. ಇಬ್ಬರೂ ಹೋಗಿ ಮಿಂದರು. ಅನಂತರ ಮೇಲೆ ಬಂದು ನಿಂತು, ಬಟ್ಟೆಯಿಂದ ಮೈ ಒರಸುತ್ತಿದ್ದರು.

ಆ ಸಮಯದಲ್ಲಿ, ಕೋಸಲದ ರಾಜನಾದ ಪ್ರಸೇನಜಿತನ ಶ್ವೇತವೆಂಬ (ನಾಗ =) ಆನೆಯು ಮಹಾ ತೂರ್ಯ ತಾಡಿತ ವಾದ್ಯಗಳೊಡನೆ ಪೂರ್ವ ಕೋಷ್ಠಕದಿಂದ ಮೇಲೆ ಬಂತು. ಜನರು ಅದನ್ನು ಕಂಡು, "ಆಹಾ! ರಾಜನ (ನಾಗ =) ಆನೆ ಎಷ್ಟು ಸುಂದರವಾಗಿದೆ! ನೋಟಕ್ಕೆ ಎಷ್ಟು ಚೆಲುವಾಗಿದೆ! ಅದರಿಂದ ಮನಸ್ಸು ಎಷ್ಟು ಪ್ರಸನ್ನವಾಗುತ್ತದೆ! ದೇವತೆಯ ಹಾಗಿದೆ! ಆಹಾ! (ನಾಗ =) ಆನೆ! (ನಾಗ =) ಆನೆ!" ಎಂದರು.

ಹೀಗೆನ್ನಲು, (ಜೊತೆಯಲ್ಲಿ ಬಂದಿದ್ದ) ಆಯುಷ್ಮಂತನಾದ ಉದಾಯಿಯು "ಭನ್ತೇ! ದಪ್ಪ ದೊಡ್ಡ ದೇಹವನ್ನು ಕಂಡು, 'ಆಹಾ! (ನಾಗ =) ಆನೆ! (ನಾಗ =) ಆನೆ!' ಎಂದು ಆನೆಯೊಂದನ್ನೆ ಹೇಳುವರೊ? ಅಥವಾ ಬೇರೆ ದಪ್ಪ ದೊಡ್ಡ ದೇಹಗಳನ್ನು ಕಂಡರೂ, 'ಆಹಾ! (ನಾಗ =) ಆನೆ! (ನಾಗ =) ಆನೆ!' ಎಂದು ಹೇಳುವರೊ?" ಎಂದನು.

"ಉದಾಯಿ! (ನಾಗ=) ಆನೆಯ ದಪ್ಪ ದೊಡ್ಡ ದೇಹ ಕಂಡು, 'ಆಹಾ! (ನಾಗ=) ಆನೆ! (ನಾಗ=) ಆನೆ!' ಎಂದು ಜನರು ಹೇಳುವರು. ಕುದುರೆಯಾಗಲಿ, ಗೂಳಿಯಾಗಲಿ, ಹಾವಾಗಲಿ, ಮರವಾಗಲಿ—ಅದರ ದಪ್ಪ ದೊಡ್ಡ ದೇಹ ಕಂಡರೂ, ಜನರು 'ಆಹಾ! (ನಾಗ=) ಆನೆ! (ನಾಗ=) ಆನೆ!' ಎಂದು ಹೇಳುವರು. ಆದರೆ, ಉದಾಯಿ, (ಆಗುಂ ನ ಕರೋತಿ ಕಾಯೇನ ವಾಚಾಯ ಮನಸಾ ತಮಹಂ ನಾಗೋ ತಿ ಬ್ರೂಮಿ=) ಯಾರು ಮೈ ಮಾತು ಮನಸ್ಸುಗಳಿಂದ ಪಾಪಮಾಡುವುದಿಲ್ಲವೋ ಅವರನ್ನು ನಾನು 'ನಾಗ' ಎಂದು ಹೇಳುತ್ತೇನೆ."

[ಅಂಗುತ್ತರನಿಕಾಯ—ಛಕ್ಕನಿಪಾತ—ಧಮ್ಮಿಕವಗ್ಗ—ನಾಗಸುತ್ತ]

೯. ಗೃಹಪತಿಯ ಧರ್ಮ

ನಾನು ಹೀಗೆ ಕೇಳಿದ್ದೇನೆ:

ಒಂದು ಸಲ, ಭಗವಂತನು ರಾಜಗೃಹದಲ್ಲಿ, ವೇಣುವನದ ಕಳಂದಕ ನಿವಾಪದಲ್ಲಿ ತಂಗಿದ್ದನು. ಆ ಸಮಯದಲ್ಲಿ, ಒಬ್ಬ ಗೃಹಪತಿಯ ಮಗನಾದ ಸೃಗಾಲಕನೆಂಬವನು ಸಕಾಲದಲ್ಲಿ ಎದ್ದು, ರಾಜಗೃಹದಿಂದ ಹೊರಟು, ಒದ್ದೆಯಾದ ಬಟ್ಟೆ ಕೂದಲುಗಳೊಡನೆ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಕೆಳಗು, ಮೇಲಿನ ದಿಗ್ಭಾಗಗಳಿಗೆ ಕೈಮುಗಿದು ನಮಸ್ಕರಿಸಿದನು.

ಆಗ, ಭಗವಂತನು ಪೂರ್ವಾಹ್ನ ಸಮಯದಲ್ಲಿ ಉಡುಪು ಹಾಕಿಕೊಂಡು, ಪಾತ್ರೆ ಚೀವರಗಳನ್ನು ತೆಗೆದುಕೊಂಡು, ಭಿಕ್ಷೆಗಾಗಿ ರಾಜಗೃಹವನ್ನು ಪ್ರವೇಶಿಸಿದನು. ಅಲ್ಲಿ, ಗೃಹಪತಿಪುತ್ರನಾದ ಸೃಗಾಲಕನು ಒದ್ದೆಯಾದ ಬಟ್ಟೆ ಕೂದಲುಗಳೊಡನೆ ಆರು ದಿಗ್ಭಾಗಗಳಿಗೆ ಕೈಮುಗಿದು ನಮಸ್ಕರಿಸುವುದನ್ನು ಕಂಡನು.

ಕಂಡು, "ಇದೇಕೆ, ಗೃಹಪತಿಪುತ್ರ? ಸಕಾಲದಲ್ಲಿ ಎದ್ದು, ರಾಜಗೃಹದಿಂದ ಹೊರಟು, ಒದ್ದೆಯಾದ ಬಟ್ಟೆ ಕೂದಲುಗಳೊಡನೆ ಹೀಗೆ ವಿವಿಧ ದಿಗ್ಭಾಗಗಳಿಗೆ ಕೈಮುಗಿದು ನಮಸ್ಕರಿಸುತ್ತಿರುವೆ?" ಎಂದು ಭಗವಂತನು ಕೇಳಿದನು.

"ಭನ್ತೇ! ನನ್ನ ತಂದೆ ಸಾಯುವಾಗ 'ದಿಕ್ಕುಗಳಿಗೆ ನಮಸ್ಕರಿಸು, ಕಂದ!' ಎಂದು ಹೇಳಿದನು. ಅದರಿಂದ ನಾನು ತಂದೆಯ ಮಾತನ್ನು ಸತ್ಕರಿಸಿ, ಗೌರವಿಸಿ, ಮಾನಿಸಿ, ಪೂಜಿಸಿ, ಸಕಾಲದಲ್ಲಿಯೇ ಎದ್ದು ಈ ರೀತಿ ದಿಕ್ಕುಗಳಿಗೆ ನಮಸ್ಕರಿಸುತ್ತಿರುವೆನು."

"ಗೃಹಪತಿಪುತ್ರ! ಆರ್ಯರ ವಿನಯದಲ್ಲಿ, ಆರು ದಿಕ್ಕುಗಳಿಗೆ ನಮಸ್ಕರಿಸತಕ್ಕುದು ಹೀಗಲ್ಲ."

"ಆರ್ಯರ ವಿನಯದಲ್ಲಿ, ಆರು ದಿಕ್ಕುಗಳಿಗೆ ನಮಸ್ಕರಿಸತಕ್ಕುದು ಹೇಗೆ, ಭನ್ತೇ? ಆರು ದಿಕ್ಕುಗಳಿಗೆ ಹೇಗೆ ನಮಸ್ಕರಿಸತಕ್ಕುದೆಂಬ ಆರ್ಯರ ರೀತಿಯನ್ನು ಭಗವಂತನು ತಿಳಿಸಿದರೆ ಒಳ್ಳೆಯದು."

"ಹಾಗಾದರೆ, ಗೃಹಪತಿಪುತ್ರ, ಕೇಳು. ಒಳ್ಳೆಯದಕ್ಕೆ ಮನಸ್ಸು ಕೊಡು. ಹೇಳುತ್ತೇನೆ."

ಗೃಹಪತಿಪುತ್ರನಾದ ಸೃಗಾಲಕನು ಹಾಗೆಯೇ ಆಗಲೆಂದು ಭಗವಂತನ ಮಾತಿಗೆ ಒಪ್ಪಿದನು. ಭಗವಂತನು ಹೇಳಿದನು:

"ಗೃಹಪತಿಪುತ್ರ! ಆರ್ಯರ ಶ್ರಾವಕನು ನಾಲ್ಕು ಕೆಟ್ಟ ಕೆಲಸಗಳನ್ನು ನೀಗುವನು; ನಾಲ್ಕು ರೀತಿಯ ಪಾಪಕಾರ್ಯಗಳನ್ನು ಮಾಡುವುದಿಲ್ಲ; ಐಶ್ವರ್ಯವು ನಾಶವಾಗುವುದಕ್ಕೆ ಕಾರಣವಾದ ಆರು ಅಪಾಯಮುಖಗಳ ಜೊತೆ ಸೇರುವುದಿಲ್ಲ. ಹೀಗೆ, ಹದಿನಾಲ್ಕು ಪಾಪಗಳನ್ನು ಹೋಗಲಾಡಿಸಿಕೊಂಡು, ಆರು ದಿಕ್ಕುಗಳನ್ನೂ ಆವರಿಸಿ, ಉಭಯಲೋಕಗಳ ವಿಜಯಕ್ಕಾಗಿ ನಡೆಯುವನು. ಅವನಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ವೃದ್ಧಿಯಾಗುವುದು. ಸತ್ತ ಮೇಲೆ, ದೇಹ ಮುರಿದು, ಸುಗತಿಯಾದ ಸ್ವರ್ಗದಲ್ಲಿ ಹುಟ್ಟುವನು.

"ಅವನು ನೀಗುವ ನಾಲ್ಕು ಕೆಟ್ಟ ಕೆಲಸಗಳು ಯಾವುವು? ಗೃಹಪತಿಪುತ್ರ, ಪ್ರಾಣಿವಧೆ, ಕೊಡದುದನ್ನು ತೆಗೆದುಕೊಳ್ಳುವುದು, ಕಾಮಗಳಲ್ಲಿ ಸ್ವೇಚ್ಛೆಯಿಂದ ಆಚರಿಸುವುದು, ಸುಳ್ಳಾಡುವುದು -- ಎಂಬ ನಾಲ್ಕು ಕೆಟ್ಟ ಕೆಲಸಗಳನ್ನು ಅವನು ನೀಗುವನು."

ಭಗವಂತನು ಹೀಗೆಂದನು. ಸುಗತನು ಇದನ್ನು ಹೇಳಿ, ಆಮೇಲೆ ಗುರುವು ಹೀಗೆಂದನು:

> "ಪ್ರಾಣಿವಧೆ, ಕಳ್ಳತನ, ಸುಳ್ಳಾಡುವುದು, ಪರರ ಹೆಂಡರನ್ನು
> ಸೇರುವುದು — ಇವುಗಳನ್ನು ಪಂಡಿತರು ಪ್ರಶಂಸಿಸುವುದಿಲ್ಲ."

"ಅವನು ಮಾಡದ ನಾಲ್ಕು ರೀತಿಯ ಪಾಪಕಾರ್ಯಗಳು ಯಾವುವು? ಗೃಹಪತಿಪುತ್ರ, ಇಚ್ಛೆಯಿಂದ ಮಾಡುವ ಪಾಪಕಾರ್ಯ, ದ್ವೇಷದಿಂದ ಮಾಡುವ ಪಾಪಕಾರ್ಯ, ಮೋಹದಿಂದ ಮಾಡುವ ಪಾಪಕಾರ್ಯ, ಭಯದಿಂದ ಮಾಡುವ ಪಾಪಕಾರ್ಯ — ಈ ನಾಲ್ಕು ರೀತಿಯ ಪಾಪಕಾರ್ಯಗಳನ್ನು ಅವನು ಮಾಡುವುದಿಲ್ಲ."

ಭಗವಂತನು ಹೀಗೆಂದನು. ಸುಗತನು ಇದನ್ನು ಹೇಳಿ, ಆಮೇಲೆ ಗುರುವು ಹೀಗೆಂದನು:

"ಇಚ್ಛೆಯಿಂದ, ದ್ವೇಷದಿಂದ, ಭಯದಿಂದ, ಮೋಹದಿಂದ
ಧರ್ಮವನ್ನು ಮೀರಿ ನಡೆಯುವವನ ಯಶಸ್ಸು
ಕಾಳಪಕ್ಷದ ಚಂದ್ರನಂತೆ ಕಡಿಮೆಯಾಗುವುದು.

"ಇಚ್ಛೆಯಿಂದ, ದ್ವೇಷದಿಂದ, ಭಯದಿಂದ, ಮೋಹದಿಂದ
ಧರ್ಮವನ್ನು ಮೀರಿ ನಡೆಯದವನ ಯಶಸ್ಸು
ಶುಕ್ಲಪಕ್ಷದ ಚಂದ್ರನಂತೆ ಪರಿಪೂರ್ಣವಾಗುವುದು."

"ಅವನು ಜೊತೆಸೇರದ ಆರು ಅಪಾಯಮುಖಗಳು ಯಾವುವು? ಸುರಾ ಮೇರಯ ಮದ್ಯಗಳನ್ನು ಸೇವಿಸುವುದು, ಅವೇಳೆಯಲ್ಲಿ ಬೀದಿ ತಿರುಗುವುದು, ಸಂತೆಸಮ್ಮೇಳಗಳಿಗೆ ಹೆಚ್ಚಾಗಿ ಹೋಗುವುದು, ಜೂಜಾಡುವುದು, ಪಾಪಮಿತ್ರರೊಡನೆ ಸೇರುವುದು, ಆಲಸ್ಯದಿಂದಿರುವುದು—ಇವು ಐಶ್ವರ್ಯದ ನಾಶಕ್ಕೆ ಕಾರಣವಾದ ಆರು ಅಪಾಯಮುಖಗಳು.

"ಗೃಹಪತಿಪುತ್ರ! ಸುರಾ ಮೇರಯ ಮದ್ಯಗಳನ್ನು ಸೇವಿಸುವುದರಿಂದ ಆಗುವ ಕೇಡು ಆರು:—ಹಣ ಕಣ್ಣೆದುರಿಗೆಯೆ ಹಾಳಾಗುವುದು; ಜಗಳ ಹೆಚ್ಚುವುದು; ರೋಗಗಳಿಗೆ ಮನೆಯಾಗುವುದು; ಕೀರ್ತಿ ಹೋಗಿ ಕೆಟ್ಟ ಹೆಸರು ಬರುವುದು; ಕೌಪೀನ ತೆಗೆದು ಹಾಕುವುದು; ಮತ್ತು ಪ್ರಜ್ಞೆ ದುರ್ಬಲವಾಗುವುದು.

"ಗೃಹಪತಿಪುತ್ರ! ಅವೇಳೆಯಲ್ಲಿ ಬೀದಿ ತಿರುಗುವುದರಿಂದ ಆಗುವ ಕೇಡು ಆರು:—ಅವನಿಗೆ ಕಾಪಿಲ್ಲ, ರಕ್ಷಣೆಯಿಲ್ಲ; ಅವನ ಹೆಂಡತಿ ಮಕ್ಕಳಿಗೆ ಕಾಪಿಲ್ಲ, ರಕ್ಷಣೆಯಿಲ್ಲ; ಅವನ ಆಸ್ತಿಪಾಸ್ತಿಗಳಿಗೆ ಕಾಪಿಲ್ಲ, ರಕ್ಷಣೆಯಿಲ್ಲ; ಪಾಪ ನಡೆದ ಕಡೆ ಅವನ ಮೇಲೆ ಶಂಕೆ ಬರುವುದು; ಇಲ್ಲದ ಮಾತು ಅವನ ಮೇಲೆ ಹುಟ್ಟುವುದು; ಮತ್ತು ಅನೇಕ ದುಃಖಗಳು ಅವನನ್ನು ಮುತ್ತುವುವು.

"ಗೃಹಪತಿಪುತ್ರ! ಸಂತೆಸಮ್ಮೇಳಗಳಿಗೆ ಹೆಚ್ಚಾಗಿ ಹೋಗುವುದರಿಂದ ಆಗುವ ಕೇಡು ಆರು:—'ಎಲ್ಲಿ ಕುಣಿತ? ಎಲ್ಲಿ ಗೀತ? ವಾದ್ಯ ಎಲ್ಲಿ? ಕತೆ ಎಲ್ಲಿ? ತಾಳ ಎಲ್ಲಿ? ತಮಟೆ ಎಲ್ಲಿ?' ಎಂದು ಯಾವಾಗಲೂ ಚಿಂತೆ ಬರುತ್ತದೆ.

"ಗೃಹಪತಿಪುತ್ರ! ಜೂಜಾಟದಿಂದ ಆಗುವ ಕೇಡು ಆರು:—ಜಯದಿಂದ ವೈರ ಹುಟ್ಟುವುದು; ಸೋತಾಗ ಹಣಕ್ಕಾಗಿ ಗೋಳಾಡುವನು;

ಹಣವು ಕಣ್ಣೆದುರಿಗೇ ಹಾಳಾಗುವುದು; ಸಭೆಗೆ ಹೋದರೆ ಅವನ ಮಾತು ನಡೆಯುವುದಿಲ್ಲ; ಸ್ನೇಹಿತರೂ ಅಧಿಕಾರಿಗಳೂ ಅವನಿಗೆ ಅವಮಾನ ಮಾಡುವರು; ಮತ್ತು ಜೂಜುಗಾರನು ಹೆಂಡತಿಯನ್ನು ಸಾಕಲಾರನೆಂದು ಯಾರೂ ಅವನೊಡನೆ ಮದುವೆಯ ಸಂಬಂಧ ಮಾಡುವುದಿಲ್ಲ.

"ಗೃಹಪತಿಪುತ್ರ! ಪಾಪಮಿತ್ರರೊಡನೆ ಸೇರುವುದರಿಂದ ಆಗುವ ಕೇಡು ಆರು: - ಜೂಜಾಡುವವರು, ನಡತೆ ಕೆಟ್ಟವರು, ಕುಡಿಕರು, ಮೋಸಗಾರರು, ವಂಚಕರು, ಹೊಡೆದು ಬಡಿದಾಡುವವರು — ಇವರು ಅವನ ಮಿತ್ರರು, ಜೊತೆಗಾರರು.

"ಗೃಹಪತಿಪುತ್ರ! ಆಲಸ್ಯದಿಂದ ಆಗುವ ಕೇಡು ಆರು:— 'ಅತಿ ಶೀತ' ಎಂದು ಕೆಲಸಮಾಡುವುದಿಲ್ಲ; 'ಅತಿ ಉಷ್ಣ' ಎಂದು ಕೆಲಸ ಮಾಡುವುದಿಲ್ಲ; 'ಇನ್ನೂ ವೇಳೆಯಾಗಿಲ್ಲ' ಎಂದು ಕೆಲಸಮಾಡುವುದಿಲ್ಲ; 'ವೇಳೆಯಾಗಿ ಹೋಯಿತು' ಎಂದು ಕೆಲಸಮಾಡುವುದಿಲ್ಲ; 'ಹೊಟ್ಟೆ ಹಸಿವು' ಎಂದು ಕೆಲಸಮಾಡುವುದಿಲ್ಲ; 'ಹೊಟ್ಟೆ ತುಂಬಿದೆ' ಎಂದು ಕೆಲಸ ಮಾಡುವುದಿಲ್ಲ. ಹೀಗೆ, ಮಾಡಬೇಕಾದ ಅನೇಕ ಕಾರ್ಯಗಳನ್ನು ಮಾಡದೆ ಹೊಸ ಐಶ್ವರ್ಯ ಉಂಟಾಗುವುದಿಲ್ಲ; ಇರುವ ಐಶ್ವರ್ಯ ಹಾಳಾಗುತ್ತದೆ."

ಭಗವಂತನು ಹೀಗೆಂದನು. ಸುಗತನು ಇದನ್ನು ಹೇಳಿ, ಆಮೇಲೆ ಗುರುವು ಹೀಗೆಂದನು:

"ಪಾನಸಖರು ಉಂಟು; 'ಪ್ರಿಯ ಮಿತ್ರ! ಪ್ರಿಯ ಮಿತ್ರ!'
ಎನ್ನುವವರು ಉಂಟು.
ಆವಶ್ಯಕತೆ ಹುಟ್ಟಿದಾಗ ಸಹಾಯಕರಾಗುವವರು —
ಅವರು ಸಖರು.

"ಸೂರ್ಯೋದಯವಾದರೂ ಮಲಗಿರುವುದು, ಪರಪತ್ನಿಯನ್ನು
ಕೂಡುವುದು, ವೈರದಲ್ಲಿ ಸಿಕ್ಕಿಬೀಳುವುದು, ಹಾನಿಮಾಡುವುದು,
ಪಾಪಮಿತ್ರರೊಡನಾಟ, ಕೃಪಣತನ —
ಈ ಆರು ಸ್ಥಿತಿಗಳು ಪುರುಷನನ್ನು ಧ್ವಂಸಮಾಡುವುವು.

"ಪಾಪಮಿತ್ರರೊಡನಾಗಲಿ, ಪಾಪಸಖರೊಡನಾಗಲಿ,
ಪಾಪಾಚಾರದಲ್ಲಿಯಾಗಲಿ ನಡೆದಾಡಿದರೆ;
ಈ ಲೋಕದಲ್ಲಿಯೂ, ಪರದಲ್ಲಿಯೂ,
ಎರಡೂ ಕಡೆ ಮನುಷ್ಯನು ಧ್ವಂಸವಾಗುವನು.

"ಪಗಡೆ, ಹೆಂಗಸು, ಕುಡಿತ, ನೃತ್ಯಗೀತ,
ಹಗಲುನಿದ್ದೆ, ಅವೇಳೆಯಲ್ಲಿ ತಿರುಗಾಡುವುದು,
ಪಾಪಮಿತ್ರರೊಡನಾಟ, ಕೃಪಣತನ—
ಈ ಆರು ಸ್ಥಿತಿಗಳು ಪುರುಷನನ್ನು ಧ್ವಂಸಮಾಡುವುವು.

"ಪಗಡೆ ಜೂಜಾಡಿ, ಸುರೆ ಕುಡಿದು,
ಇತರರಿಗೆ ಪ್ರಾಣಸಮಾನಳಾದ ಸ್ತ್ರೀಯ ಬಳಿಸಾರಿ,
ವೃದ್ಧರನ್ನು ಸೇವಿಸದೆ ಕೀಳಾದುದನ್ನು ಸೇವಿಸುವವನು
ಕೃಷ್ಣಪಕ್ಷದ ಚಂದ್ರನಂತೆ ನಶಿಸುವನು.

"ಕುಡಿಕನು, ಹಣವಿಲ್ಲದವನು, ಗತಿಯಿಲ್ಲದವನು,
—ದಾಹದಿಂದ ಅರವಟ್ಟಿಗೆಗೆ ಬಂದು ಕುಡಿಯುತ್ತ
ನೀರಿನಲ್ಲಿ ಹೇಗೋ ಹಾಗೆ—ಋಣದಲ್ಲಿ ಮುಳುಗುವನು;
ಬೇಗನೆ ತನ್ನ ವಂಶವನ್ನು ಹೆಸರಿಲ್ಲದಂತೆ ಮಾಡುವನು.

"ಹಗಲು ನಿದ್ದೆಮಾಡುವ ನಡತೆಯಿರುವವನಿಗೆ,
ರಾತ್ರಿಯನ್ನು ಎದ್ದೇಳುವ ಕಾಲವೆಂದು ಕಾಣುವವನಿಗೆ,
ಸದಾ ಮತ್ತನಾಗಿ ಮದ್ಯ ತುಂಬಿದವನಿಗೆ
ಮನೆಯಲ್ಲಿ ವಾಸಮಾಡಲು ಶಕ್ಯವಿಲ್ಲ.

"'ಅತಿ ಶೀತ! ಅತಿ ಉಷ್ಣ! ಅತಿ ಸಮಯ!' ಎನ್ನುವರು.
ಹೀಗೆ, ಮಾಡಬೇಕಾದ ಕೆಲಸಗಳನ್ನು ಬಿಟ್ಟ ಜನರು
ತಮಗೆ ಮೇಲಾಗುವುದನ್ನು ಕಳೆದುಕೊಳ್ಳುವರು.
ಶೀತ ಉಷ್ಣಗಳನ್ನು ತೃಣಕ್ಕಿಂತ ಕಡಿಮೆಯಾಗಿ ಕಂಡವನನ್ನು,
ಮಾಡಬೇಕಾದ ಕೆಲಸಗಳನ್ನು ಪುರುಷನಂತೆ ಮಾಡುವವನನ್ನು
ಸುಖಗಳು ಬಿಡುವುದಿಲ್ಲ."

"ಗೃಹಪತಿಪುತ್ರ! ಆದುದು ಆಗಲೆಂದು ದೋಚುವವನು; ಕೆಲಸ ಮಾಡದೆ ಸುಮ್ಮನೆ ಮಾತನಾಡುವವನು; ಮುಖಸ್ತುತಿ ಮಾಡುವವನು; ಹಣವನ್ನು ಹಾಳುಮಾಡಲು ಜೊತೆಗಾರನಾದವನು;—ಈ ನಾಲ್ವರನ್ನು ಮಿತ್ರರ ವೇಷದಲ್ಲಿರುವ ಶತ್ರುಗಳೆಂದು ತಿಳಿಯತಕ್ಕುದು.

"ಆದುದು ಆಗಲೆಂದು ದೋಚುವವನು ಮಿತ್ರನ ವೇಷದ ಶತ್ರುವೆಂದು ಈ ನಾಲ್ಕು ಸ್ಥಿತಿಗಳಿಂದ ತಿಳಿಯತಕ್ಕುದು:—ಅವನು ಆದುದು ಆಗಲೆಂದು ದೋಚುತ್ತಾನೆ; ಕೊಂಚ ಕೊಟ್ಟು, ಬಹಳ ಬಯಸುತ್ತಾನೆ; ಭಯಕ್ಕೋಸ್ಕರ ತನ್ನ ಕರ್ತವ್ಯವನ್ನು ಮಾಡುತ್ತಾನೆ; ತನ್ನ ಸ್ವಾರ್ಥವನ್ನು ನೋಡಿಕೊಳ್ಳುತ್ತಾನೆ.

"ಕೆಲಸಮಾಡದೆ ಸುಮ್ಮನೆ ಮಾತನಾಡುವವನು ಮಿತ್ರನ ವೇಷದ ಶತ್ರುವೆಂದು ಈ ನಾಲ್ಕು ಸ್ಥಿತಿಗಳಿಂದ ತಿಳಿಯತಕ್ಕುದು:— (ನಿನಗಾಗಿ ಹತ್ತು ಸೇರು ಅಕ್ಕಿ ಇಟ್ಟಿದ್ದೆ. ನೀನು ಬರುವೆಯೆಂದು ಮೂರು ತಿಂಗಳು ಕಾಯ್ದೆ. ಆದರೆ ನೀನು ಬರಲಿಲ್ಲ. ಈಗ ಆ ಅಕ್ಕಿಯನ್ನೆಲ್ಲ ಇಲಿ ತಿಂದುಬಿಟ್ಟಿದೆ—ಎಂದು) ಹಿಂದಿನದನ್ನು ಹೇಳಿ ಉಪಚಾರಮಾಡುತ್ತಾನೆ; (ಇನ್ನು ಎರಡು ತಿಂಗಳಿಗೆ ಮೂರು ಮೂಟೆ ಅಕ್ಕಿ ಬರುತ್ತದೆ. ಅದರಲ್ಲಿ ನಿನಗೆ ಎರಡು ಮೂಟೆ ಕಳುಹಿಸುತ್ತೇನೆ—ಎಂದು) ಮುಂದಿನದನ್ನು ಹೇಳಿ ಉಪಚಾರಮಾಡುತ್ತಾನೆ; ನಿರರ್ಥಕವಾದ ಮಾತುಗಳಿಂದ ನಿನ್ನ ಸ್ನೇಹವನ್ನು ಕೋರುತ್ತಾನೆ; ನಿನಗೆ ಕೆಲಸವಾಗಬೇಕಾದಾಗ (ಏನು, ನನ್ನ ಗಾಡಿ ಬೇಕಾಗಿತ್ತೆ? ಅಯ್ಯೋ, ನಿನ್ನೆ ತಾನೆ ಎತ್ತಿನ ಕಾಲು ಕುಂಟಾಯಿತು; ಅಲ್ಲದೆ ಚಕ್ರವನ್ನು ಸರಿಪಡಿಸಲು ಬಡಗಿಗೆ ಹೇಳಿದ್ದೇನೆ—ಎಂದು) ವ್ಯಸನವನ್ನು ತೋರಿಸುತ್ತಾನೆ.

"ಮುಖಸ್ತುತಿ ಮಾಡುವವನು ಮಿತ್ರನ ವೇಷದ ಶತ್ರುವೆಂದು ಈ ನಾಲ್ಕು ಸ್ಥಿತಿಗಳಿಂದ ತಿಳಿಯತಕ್ಕುದು:– ನೀನು ಪಾಪಮಾಡುವುದಕ್ಕೆ ಅವನು ಸಮ್ಮತಿಸುತ್ತಾನೆ; ಕಲ್ಯಾಣವಾದುದಕ್ಕೆ ಒಪ್ಪುವುದಿಲ್ಲ; ನಿನ್ನೆದುರಿಗೆ ನಿನ್ನನ್ನು ಹೊಗಳುತ್ತಾನೆ; ಇತರರೆದುರಿಗೆ ನಿನ್ನನ್ನು ದೂಷಿಸುತ್ತಾನೆ.

"ಹಣವನ್ನು ಹಾಳುಮಾಡಲು ಜೊತೆಗಾರನಾದವನು ಮಿತ್ರನ ವೇಷದ ಶತ್ರುವೆಂದು ಈ ನಾಲ್ಕು ಸ್ಥಿತಿಗಳಿಂದ ತಿಳಿಯತಕ್ಕುದು:— ಸುರಾ ಮೇರಯ ಮದ್ಯಗಳನ್ನು ಸೇವಿಸುವಾಗ ಅವನು ಜೊತೆಗಾರನಾಗುವನು; ಅವೇಳೆಗಳಲ್ಲಿ ಬೀದಿ ತಿರುಗುವಾಗ ಜೊತೆಗಾರನಾಗುವನು; ಸಂತೆಸಮ್ಮೇಳಗಳಿಗೆ ವಿಶೇಷವಾಗಿ ಹೋಗುವಾಗ ಜೊತೆಗಾರನಾಗುವನು; ಜೂಜಾಟದ ಗೀಳು ಹಿಡಿದಾಗ ಅವನು ಜೊತೆಗಾರನಾಗುವನು."

ಭಗವಂತನು ಹೀಗೆಂದನು. ಸುಗತನು ಇದನ್ನು ಹೇಳಿ, ಆಮೇಲೆ ಗುರುವು ಹೀಗೆಂದನು:

"ಆದುದು ಆಗಲೆಂದು ದೋಚುವ ಮಿತ್ರ,
ಕೆಲಸಮಾಡದೆ ಮಾತನಾಡುವ ಮಿತ್ರ,
ಮುಖಸ್ತುತಿ ಮಾಡುವವನು,
ಕೆಟ್ಟಮಾರ್ಗಗಳಲ್ಲಿ ಸಹಾಯಕನಾದವನು—

"ಈ ನಾಲ್ವರನ್ನು ಶತ್ರುಗಳೆಂದು ತಿಳಿದು,
ಪಂಡಿತನಾದವನು ಅವರನ್ನು
— ಭಯವುಳ್ಳ ಮಾರ್ಗವನ್ನು ಹೇಗೋ ಹಾಗೆ —
ದೂರದಿಂದಲೇ ಬಿಟ್ಟು ಕಳೆಯಲಿ."

"ಗೃಹಪತಿಪುತ್ರ! ಉಪಕಾರಮಾಡುವವನು; ಸುಖದುಃಖಗಳಲ್ಲಿ ಸಮಾನನಾದವನು; ಒಳ್ಳೆಯದನ್ನು ಹೇಳುವವನು; ಅನುಕಂಪವುಳ್ಳವನು; — ಈ ನಾಲ್ವರು ಮಿತ್ರರನ್ನು ಸುಹೃದಯರೆಂದು ತಿಳಿಯತಕ್ಕದು.

"ನಿನಗೆ ಉಪಕಾರಮಾಡುವ ಮಿತ್ರನು ಸುಹೃದಯನೆಂದು ಈ ನಾಲ್ಕು ಸ್ಥಿತಿಗಳಿಂದ ತಿಳಿಯತಕ್ಕದು: — ನೀನು ಪ್ರಮತ್ತನಾಗಿರುವಾಗ ನಿನ್ನನ್ನು ರಕ್ಷಿಸುವನು; ನೀನು ಪ್ರಮತ್ತನಾಗಿರುವಾಗ ನಿನ್ನ ಸ್ವತ್ತನ್ನು ರಕ್ಷಿಸುವನು; ನೀನು ಭಯಗೊಂಡಾಗ ನಿನಗೆ ಆಶ್ರಯವಾಗುವನು; ನಿನ್ನ ಕೆಲಸ ಕಾರ್ಯಗಳಾಗಬೇಕಾದಾಗ, ನಿನಗೆ ಬೇಕಾದುದಕ್ಕೆ ಎರಡರಷ್ಟು ಭೋಗವನ್ನು ಒದಗಿಸುವನು.

"ನಿನ್ನ ಸುಖದುಃಖಗಳಲ್ಲಿ ಸಮಾನನಾದ ಮಿತ್ರನು ಸುಹೃದಯನೆಂದು ಈ ನಾಲ್ಕು ಸ್ಥಿತಿಗಳಿಂದ ತಿಳಿಯತಕ್ಕದು: — ಅವನು ತನ್ನ ಗುಟ್ಟನ್ನು ನಿನಗೆ ತಿಳಿಸುವನು; ನಿನ್ನ ಗುಟ್ಟನ್ನು ತಾನು ಗುಟ್ಟಾಗಿಡುವನು; ನಿನಗೆ ಆಪತ್ತು ಬಂದಾಗ ಅವನು ನಿನ್ನನ್ನು ಬಿಡುವುದಿಲ್ಲ; ನಿನಗಾಗಿ ಜೀವವನ್ನಾದರೂ ಬಿಡುವನು.

"ನಿನಗೆ ಒಳ್ಳೆಯದನ್ನು ಹೇಳುವ ಮಿತ್ರನು ಸುಹೃದಯನೆಂದು ಈ ನಾಲ್ಕು ಸ್ಥಿತಿಗಳಿಂದ ತಿಳಿಯತಕ್ಕದು: — ಅವನು ನಿನ್ನನ್ನು ಪಾಪದಿಂದ ತಡೆಯುವನು; ಕಲ್ಯಾಣವಾದುದನ್ನು ನಿನ್ನಿಂದ ಮಾಡಿಸುವನು; ನೀನು ಹಿಂದೆ ಎಂದೂ ಕೇಳದುದನ್ನು ತಿಳಿಸುವನು; ಸ್ವರ್ಗದ ಮಾರ್ಗವನ್ನು ತಿಳಿಯಪಡಿಸುವನು.

"ಅನುಕಂಪವುಳ್ಳ ಮಿತ್ರನು ಸುಹೃದಯನೆಂದು ಈ ನಾಲ್ಕು ಸ್ಥಿತಿಗಳಿಂದ ತಿಳಿಯತಕ್ಕದು: — ನಿನಗೆ ಕೇಡಾದರೆ ಅವನು ಆನಂದಪಡುವುದಿಲ್ಲ; ನಿನಗೆ ಅಭಿವೃದ್ಧಿಯಾದರೆ ಆನಂದಿಸುವನು; ನಿನ್ನನ್ನು ದೂಷಿಸುವವರನ್ನು ತಡೆಯುವನು; ನಿನ್ನನ್ನು ಪ್ರಶಂಸಿಸುವವರನ್ನು ಪ್ರಶಂಸಿಸುವನು."

ಭಗವಂತನು ಹೀಗೆಂದನು. ಸುಗತನು ಇದನ್ನು ಹೇಳಿ, ಆಮೇಲೆ ಗುರುವು ಹೀಗೆಂದನು:

"ಉಪಕಾರಮಾಡುವ ಮಿತ್ರ,
ಸುಖದುಃಖಗಳಲ್ಲಿ ಆಗುವ ಮಿತ್ರ,
ಮೇಲಾದುದನ್ನು ತಿಳಿಸುವ ಮಿತ್ರ,
ಅನುಕಂಪವುಳ್ಳ ಮಿತ್ರ —

"ಈ ನಾಲ್ವರನ್ನು ಮಿತ್ರರೆಂದು ತಿಳಿದು,
ಪಂಡಿತನಾದವನು ಅವರನ್ನು
— ತಾಯಿ ತನ್ನ ಎದೆಗೂಸನ್ನು ಹೇಗೋ ಹಾಗೆ —
ಸತ್ಕಾರದಿಂದ ಪರ್ಯುಪಾಸನೆ ಮಾಡಲಿ.

"ಶೀಲಸಂಪನ್ನನಾದ ಪಂಡಿತನು
ಜ್ವಲಿಸುವ ಅಗ್ನಿಯಂತೆ ಬೆಳಗುತ್ತಾನೆ.
ವರ್ಣಗಂಧಗಳನ್ನು ಕೆಡಿಸದೆ ರಸವನ್ನು ಮಾತ್ರ
ತರುವ ಭ್ರಮರದಂತೆ ಐಶ್ವರ್ಯ ಕೂಡಿಸಿದವನ
ಐಶ್ವರ್ಯವು ರಾಶಿಯಾಗುವುದು;
ಹುತ್ತದಂತೆ ಎತ್ತರವಾಗುವುದು.
ಹೀಗೆ ಐಶ್ವರ್ಯವನ್ನು ಕೂಡಿಸಿದ ಮನೆಯಾತನು
ತನ್ನ ವಂಶಕ್ಕೆ ಮೇಲುಮಾಡುವನು.

"ಐಶ್ವರ್ಯವನ್ನು ನಾಲ್ಕಾಗಿ ಭಾಗಮಾಡಲಿ;
ಅದರಿಂದ ಮಿತ್ರರು ಕೂಡುತ್ತಾರೆ.
ಒಂದನ್ನು ತಾನು (ದಾನಧರ್ಮಮಾಡಿ) ಅನುಭವಿಸಲಿ;
ಎರಡನ್ನು (ವ್ಯಾಪಾರ ಮುಂತಾದ) ಕೆಲಸಕ್ಕೆ ಪ್ರಯೋಗಿಸಲಿ;
ನಾಲ್ಕನೆಯದನ್ನು ನಿಧಿಯಾಗಿ ಇಡಲಿ —
ಆಪತ್ತಿನಲ್ಲಿ ಆಗುವುದು."

"ಗೃಹಪತಿಪುತ್ರ! ಆರ್ಯರ ಶ್ರಾವಕನು ಆರು ದಿಕ್ಕುಗಳನ್ನು ಆವರಿಸುವುದು ಹೇಗೆ? ಗೃಹಪತಿಪುತ್ರ, ಇವುಗಳನ್ನು ಆರು ದಿಕ್ಕುಗಳೆಂದು ತಿಳಿಯತಕ್ಕುದು:— ತಾಯಿತಂದೆಯರು ಪೂರ್ವದಿಕ್ಕು; ಆಚಾರ್ಯರು ದಕ್ಷಿಣದಿಕ್ಕು; ಹೆಂಡತಿಮಕ್ಕಳು ಪಶ್ಚಿಮದಿಕ್ಕು; ಸ್ನೇಹಿತರೂ ಜೊತೆಗಾರರೂ ಉತ್ತರದಿಕ್ಕು; ದಾಸರೂ ಕೆಲಸಗಾರರೂ ಕೆಳದಿಕ್ಕು; ಶ್ರಮಣರೂ ಬ್ರಾಹ್ಮಣರೂ ಮೇಲುದಿಕ್ಕು.

"ಗೃಹಪತಿಪುತ್ರ! ಹಿಂದೆ ಇವರು ನನ್ನನ್ನು ಪೋಷಿಸಿದರು, ಇಂದು ನಾನು ಅವರನ್ನು ಪೋಷಿಸುತ್ತೇನೆ; ಅವರು ಮಾಡಬೇಕಾದ ಕೆಲಸಗಳನ್ನು ನಾನು ಮಾಡುತ್ತೇನೆ; ನನ್ನ ಕುಲವಂಶಗಳನ್ನು ಮುಂದುವರಿಸುತ್ತೇನೆ; ಆಸ್ತಿಯನ್ನು ನಡಿಸುತ್ತೇನೆ; ಮತ್ತು ಕಾಲಕಾಲಕ್ಕೆ ಪಿತೃಗಳಿಗೆ ದಕ್ಷಿಣೆಯನ್ನು ಒದಗಿಸುತ್ತೇನೆ;—ಎಂದು ಈ ಐದು ರೀತಿಗಳಿಂದ, ತಾಯಿತಂದೆಯರು ಪೂರ್ವದಿಕ್ಕೆಂದು ಮಗನು ಅವರ ಸೇವೆಮಾಡತಕ್ಕುದು.

"ಹೀಗೆ ಮಗನಿಂದ ಪೂರ್ವದಿಕ್ಕೆಂದು ಸೇವಿಸಲ್ಪಟ್ಟ ತಾಯಿತಂದೆಯರು ಐದು ರೀತಿಗಳಲ್ಲಿ ಅವನ ಮೇಲೆ ಅನುಕಂಪವನ್ನು ತೋರಿಸುವರು:—ಅವನನ್ನು ಪಾಪದಿಂದ ತಡೆಯುವರು; ಕಲ್ಯಾಣವನ್ನು ಬೋಧಿಸುವರು; ವಿದ್ಯೆಯಲ್ಲಿ ಶಿಕ್ಷೆಕೊಡಿಸುವರು; ಅನುರೂಪಳಾದ ಹೆಂಡತಿಯೊಡನೆ ಮದುವೆಮಾಡುವರು; ಸಕಾಲದಲ್ಲಿ ಕುಲದ ಆಸ್ತಿಯನ್ನು ಅವನಿಗೆ ಕೊಡುವರು.

"ಹೀಗೆ, ಅವನು ಪೂರ್ವದಿಕ್ಕನ್ನು ಆವರಿಸುವನು. ಆ ಕಡೆಯಿಂದ ಅವನಿಗೆ ಕ್ಷೇಮ; ಭಯವಿಲ್ಲ.

"ಗೃಹಪತಿಪುತ್ರ! ಏಳುವುದರಿಂದ; ಉಪಚರಿಸುವುದರಿಂದ; ಶುಶ್ರೂಷೆಯಿಂದ; ಪಾರಿಚರ್ಯೆಯಿಂದ; ವಿದ್ಯೆಕಲಿಯುವಾಗ ಸತ್ಕರಿಸುವುದರಿಂದ;— ಈ ಐದು ರೀತಿಗಳಿಂದ, ಆಚಾರ್ಯರು ದಕ್ಷಿಣದಿಕ್ಕೆಂದು ಶಿಷ್ಯನು ಅವರ ಸೇವೆಮಾಡತಕ್ಕುದು.

"ಹೀಗೆ, ಶಿಷ್ಯನಿಂದ ದಕ್ಷಿಣದಿಕ್ಕೆಂದು ಸೇವಿಸಲ್ಪಟ್ಟ ಆಚಾರ್ಯರು ಐದು ರೀತಿಗಳಲ್ಲಿ ಅವನ ಮೇಲೆ ಅನುಕಂಪವನ್ನು ತೋರಿಸುವರು:—ಅವನು ಚೆನ್ನಾಗಿ ಕಲಿತುದನ್ನು ಕಲಿಸುವರು; ಅವನು ಚೆನ್ನಾಗಿ ಗ್ರಹಿಸಿದುದನ್ನು ಹಿಡಿಯಿಸುವರು; ಎಲ್ಲಾ ವಿದ್ಯೆಯ ವಿಷಯವನ್ನೂ ಅವನಿಗೆ ಚೆನ್ನಾಗಿ ತಿಳಿಸುವರು; ಸ್ನೇಹಿತರು, ಜೊತೆಗಾರರೊಡನೆ ಅವನನ್ನು ಕೀರ್ತಿಸುವರು; ಎಲ್ಲ ಕಡೆಗಳಿಂದಲೂ ಅವನನ್ನು ಕಾಪಾಡುವರು.

"ಹೀಗೆ, ಅವನು ದಕ್ಷಿಣದಿಕ್ಕನ್ನು ಆವರಿಸುವನು. ಆ ಕಡೆಯಿಂದ ಅವನಿಗೆ ಕ್ಷೇಮ; ಭಯವಿಲ್ಲ.

"ಗೃಹಪತಿಪುತ್ರ! ಸನ್ಮಾನಿಸುವುದು; ತಿರಸ್ಕರಿಸದಿರುವುದು; ಪತ್ನೀವ್ರತಸ್ಥನಾಗಿರುವುದು; ಮನೆಯ ಒಡೆತನವನ್ನು ಒಪ್ಪಿಸುವುದು; ಅಲಂಕಾರ

ಗಳನ್ನು ಒದಗಿಸುವುದು;—ಈ ಐದು ರೀತಿಗಳಿಂದ, ಹೆಂಡತಿಯು ಪಶ್ಚಿಮದಿಕ್ಕೆಂದು ಗಂಡನು ಅವಳ ಸೇವೆಮಾಡತಕ್ಕುದು.

"ಹೀಗೆ, ಗಂಡನಿಂದ ಪಶ್ಚಿಮದಿಕ್ಕೆಂದು ಸೇವಿಸಲ್ಪಟ್ಟ ಹೆಂಡತಿಯು ಐದು ರೀತಿಗಳಲ್ಲಿ ಅವನ ಮೇಲೆ ಅನುಕಂಪವನ್ನು ತೋರಿಸುವಳು:—ತನ್ನ ಕೆಲಸಗಳನ್ನು ಚೆನ್ನಾಗಿ ವಿಹಿತವಾಗಿ ಮಾಡುವಳು; ಪರಿಜನರನ್ನು ಚೆನ್ನಾಗಿ ಆದರಿಸುವಳು; ಪತಿವ್ರತೆಯಾಗಿರುವಳು; ಅವನು ತಂದ ವಸ್ತುಗಳನ್ನು ನೋಡಿ ಕಾಪಾಡುವಳು; ಸರ್ವಕಾರ್ಯಗಳಲ್ಲಿಯೂ ದಕ್ಷಳಾಗಿ ಅಲಸಿಕೆಯಿಲ್ಲದೆ ಇರುವಳು.

"ಹೀಗೆ, ಅವನು ಪಶ್ಚಿಮದಿಕ್ಕನ್ನು ಆವರಿಸುವನು. ಆ ಕಡೆಯಿಂದ ಅವನಿಗೆ ಕ್ಷೇಮ; ಭಯವಿಲ್ಲ.

"ಗೃಹಪತಿಪುತ್ರ! ದಾನದಿಂದ; ಪ್ರಿಯವಾದ ಮಾತುಗಳಿಂದ; ಮೇಲಾಗುವ ನಡತೆಯಿಂದ; ಅವರನ್ನೂ ತನ್ನಂತೆಯೇ ಕಾಣುವುದರಿಂದ; ಆಡಿದ ಮಾತಿಗೆ ತಪ್ಪದಿರುವುದರಿಂದ;—ಈ ಐದು ರೀತಿಗಳಿಂದ, ಮಿತ್ರರೂ ಜೊತೆಗಾರರರೂ ಉತ್ತರದಿಕ್ಕೆಂದು ಕುಲಪುತ್ರನು ಅವರ ಸೇವೆ ಮಾಡತಕ್ಕುದು.

"ಹೀಗೆ, ಕುಲಪುತ್ರನಿಂದ ಉತ್ತರದಿಕ್ಕೆಂದು ಸೇವಿಸಲ್ಪಟ್ಟ ಮಿತ್ರರೂ ಜೊತೆಗಾರರರೂ ಐದು ರೀತಿಗಳಲ್ಲಿ ಅವನ ಮೇಲೆ ಅನುಕಂಪವನ್ನು ತೋರಿಸುವರು:—ಪ್ರಮತ್ತನಾದಾಗ ಅವನನ್ನು ರಕ್ಷಿಸುವರು; ಪ್ರಮತ್ತನಾದಾಗ ಅವನ ಸ್ವತ್ತನ್ನು ರಕ್ಷಿಸುವರು; ಭೀತನಾದರೆ, ಅವನಿಗೆ ಆಶ್ರಯಕೊಡುವರು; ಅವನಿಗೆ ಆಪತ್ತು ಬಂದಾಗ ಅವನನ್ನು ಬಿಟ್ಟು ಹೋಗುವುದಿಲ್ಲ; ಅವನ ಮನೆಯವರನ್ನು ಗೌರವಿಸುವರು.

"ಹೀಗೆ, ಅವನು ಉತ್ತರದಿಕ್ಕನ್ನು ಆವರಿಸುವನು. ಆ ಕಡೆಯಿಂದ ಅವನಿಗೆ ಕ್ಷೇಮ; ಭಯವಿಲ್ಲ.

"ಗೃಹಪತಿಪುತ್ರ! ಅವರವರ ಬಲಕ್ಕೆ ತಕ್ಕ ಕೆಲಸ ಕೊಡುವುದರಿಂದ; ಊಟ ಕೂಲಿಗಳನ್ನು ಕೊಡುವುದರಿಂದ; ಅವರಿಗೆ ರೋಗ ಬಂದಾಗ ಉಪಚರಿಸುವುದರಿಂದ; ತಾನು ತಿನ್ನುವ ಅಪರೂಪವಾದ ರಸಗಳನ್ನು ಅವರಿಗೂ ಹಂಚಿಕೊಡುವುದರಿಂದ; ಅವರಿಗೆ ಆಗಾಗ್ಗೆ ವಿರಾಮ ಬಿಟ್ಟುಕೊಡುವುದರಿಂದ;—ಈ ಐದು ರೀತಿಗಳಿಂದ, ದಾಸರೂ ಕೆಲಸ

ಗಾರರೂ ಕೆಳದಿಕ್ಕೆಂದು ಆರ್ಯಕನು (=ಸ್ವಾಮಿ) ಅವರ ಸೇವೆಮಾಡ ತಕ್ಕುದು.

"ಹೀಗೆ, ಆರ್ಯಕನಿಂದ ಕೆಳದಿಕ್ಕೆಂದು ಸೇವಿಸಲ್ಪಟ್ಟ ದಾಸರೂ ಕೆಲಸಗಾರರೂ ಐದು ರೀತಿಗಳಲ್ಲಿ ಅವನ ಮೇಲೆ ಅನುಕಂಪವನ್ನು ತೋರಿಸುವರು:—ಅವನಿಗಿಂತ ಮೊದಲು ಏಳುವರು; ಅವನು ಮಲಗಿದ ಮೇಲೆ ಮಲಗುವರು; ಅವನು ಕೊಟ್ಟುದನ್ನು ತೆಗೆದುಕೊಳ್ಳುವರು; ತಮ್ಮ ಕೆಲಸಗಳನ್ನು ಚೆನ್ನಾಗಿ ಮಾಡುವರು; ಅವನ ಕೀರ್ತಿ ಹೆಸರು ಗಳನ್ನು ತಾವು ಹೋದ ಕಡೆಗೆಲ್ಲ ಕೊಂಡುಹೋಗುವರು.

"ಹೀಗೆ, ಅವನು ಕೆಳದಿಕ್ಕನ್ನು ಆವರಿಸುವನು. ಆ ಕಡೆಯಿಂದ ಅವನಿಗೆ ಕ್ಷೇಮ; ಭಯವಿಲ್ಲ.

"ಗೃಹಪತಿಪುತ್ರ! ಮೈತ್ರಿಯಿಂದ ಕೆಲಸ ಮಾಡುವುದು; ಮೈತ್ರಿ ಯಿಂದ ಮಾತನಾಡುವುದು; ಮೈತ್ರಿಯಿಂದ ಮನಸ್ಸು ಮಾಡುವುದು; ಮನೆಯ ಬಾಗಿಲು ತೆರೆದಿರುವುದು; ಆಹಾರಾದಿಗಳನ್ನು ಒದಗಿಸು ವುದು;—ಈ ಐದು ರೀತಿಗಳಿಂದ, ಶ್ರಮಣರೂ ಬ್ರಾಹ್ಮಣರೂ ಮೇಲು ದಿಕ್ಕೆಂದು ಕುಲಪುತ್ರನು ಅವರ ಸೇವೆಮಾಡತಕ್ಕುದು.

"ಹೀಗೆ, ಕುಲಪುತ್ರನಿಂದ ಮೇಲುದಿಕ್ಕೆಂದು ಸೇವಿಸಲ್ಪಟ್ಟ ಶ್ರಮಣರೂ ಬ್ರಾಹ್ಮಣರೂ ಆರು ರೀತಿಗಳಲ್ಲಿ ಅವನ ಮೇಲೆ ಅನುಕಂಪ ವನ್ನು ತೋರಿಸುವರು:—ಅವನನ್ನು ಪಾಪದಿಂದ ತಡೆಯುವರು; ಕಲ್ಯಾಣ ದಲ್ಲಿ ನಿಲ್ಲಿಸುವರು; ಕಲ್ಯಾಣವಾದ ಮನಸ್ಸಿನಿಂದ ಅವನಲ್ಲಿ ಅನುಕಂಪ ತೋರುವರು; ಅವನು ಹಿಂದೆ ಎಂದೂ ಕೇಳದುದನ್ನು ಕೇಳಿಸುವರು; ಅವನು ಕೇಳಿರುವುದನ್ನು ಪರಿಶುದ್ಧಿಗೊಳಿಸುವರು; ಸ್ವರ್ಗದ ಮಾರ್ಗ ವನ್ನು ತಿಳಿಯಪಡಿಸುವರು.

"ಹೀಗೆ, ಅವನು ಮೇಲುದಿಕ್ಕನ್ನು ಆವರಿಸುವನು. ಆ ಕಡೆ ಯಿಂದ ಅವನಿಗೆ ಕ್ಷೇಮ; ಭಯವಿಲ್ಲ."

ಭಗವಂತನು ಹೀಗೆಂದನು. ಸುಗತನು ಇದನ್ನು ಹೇಳಿ, ಆಮೇಲೆ ಗುರುವು ಹೀಗೆಂದನು:

"ತಾಯಿತಂದೆಯರು ಪೂರ್ವದಿಕ್ಕು,
ಆಚಾರ್ಯರು ದಕ್ಷಿಣದಿಕ್ಕು;

ಮಕ್ಕಳು, ಹೆಂಡತಿ — ಪಶ್ಚಿಮ,
ಸ್ನೇಹಿತರೂ ಜೊತೆಗಾರರೂ ಉತ್ತರ;

"ದಾಸರೂ ಕೆಲಸಗಾರರೂ ಕೆಳದಿಕ್ಕು,
ಶ್ರಮಣ ಬ್ರಾಹ್ಮಣರು ಮೇಲುದಿಕ್ಕು.
ಈ ದಿಕ್ಕುಗಳಿಗೆ ನಮಸ್ಕರಿಸುವ
ಮನೆಯಾತನ ಕುಲಕ್ಕೆ ಮೇಲು.

"ಪಂಡಿತನಾಗಿ, ಶೀಲಸಂಪನ್ನನಾಗಿ,
ಮೃದುವಾಗಿ, ಪ್ರತಿಭಾವಂತನಾಗಿ,
ನಮ್ರನಾಗಿ, ಬೀಗಿ ಮೆರೆಯದ —
ಅಂತಹವನಿಗೆ ಯಶಸ್ಸು ಲಭಿಸುತ್ತದೆ.

"ಎದ್ದೇಳತಕ್ಕವನಾಗಿ, ಆಲಸ್ಯವಿಲ್ಲದವನಾಗಿ,
ಆಪತ್ತುಗಳಿಗೆ ನಡುಗದವನು,
ದೋಷವಿಲ್ಲದ ನಡತೆಯ ಮೇಧಾವಿಯು —
ಅಂತಹವನಿಗೆ ಯಶಸ್ಸು ಲಭಿಸುತ್ತದೆ.

"ಜನರನ್ನು ಸಂಗ್ರಹಿಸಿ, ಮಿತ್ರರನ್ನು ಮಾಡಿಕೊಂಡು,
ಮಾತನಾಡಲು ತಿಳಿದು, ಮಾತ್ಸರ್ಯವಿಲ್ಲದೆ,
ದಾರಿತೋರಿಸಿ, ಬುದ್ಧಿಹೇಳಿ, ನಡಿಸಬಲ್ಲ
ಅಂತಹವನಿಗೆ ಯಶಸ್ಸು ಲಭಿಸುತ್ತದೆ.

"ಅಲ್ಲಲ್ಲಿಗೆ ತಕ್ಕಹಾಗೆ — ದಾನ,
ಪ್ರಿಯವಾದ ಮಾತು, ಇತರರಿಗೆ ಮೇಲಾಗಲು
ಕೆಲಸಮಾಡುವುದು, ಎಲ್ಲರನ್ನೂ
ಒಂದೇ ಸಮನಾಗಿ ಕಾಣುವುದು; —
ಈ ಸಂಗ್ರಹಗಳು, ರಥದ ತಿರುಗಾಟಕ್ಕೆ
ಆಣಿ ಹೇಗೋ, ಲೋಕಕ್ಕೆ ಹಾಗೆ.

"ಈ ಸಂಗ್ರಹಗಳು ಇಲ್ಲದಿದ್ದರೆ,
ತಾಯಿಗಾಗಲಿ ತಂದೆಗಾಗಲಿ
ಮಗನಿಂದ ಸನ್ಮಾನ ಪೂಜೆಗಳು
ಲಭಿಸುವುದಿಲ್ಲ.

"ಈ ಸಂಗ್ರಹಗಳನ್ನು ಪಂಡಿತರು
ಚೆನ್ನಾಗಿ ನೋಡಿ ಪರೀಕ್ಷಿಸುವುದರಿಂದ
ಅವರಿಗೆ ಮಹತ್ವ ಪ್ರಾಪ್ತಿಯಾಗುವುದು;
ಪ್ರಶಂಸೆಯೂ ಅವರಿಗೆ ಉಂಟಾಗುವುದು."

ಹೀಗೆನ್ನಲು, ಗೃಹಪತಿಪುತ್ರನಾದ ಸೃಗಾಲಕನು ಭಗವಂತನನ್ನು ಕುರಿತು "ಬಲುಸೊಗಸು, ಭನ್ತೇ! ಬಲುಸೊಗಸು, ಭನ್ತೇ! ಬಿದ್ದಿದ್ದುದನ್ನು ಎತ್ತಿ ನಿಲ್ಲಿಸಿದಂತೆ, ಮುಚ್ಚಿದ್ದುದನ್ನು ಬಿಚ್ಚಿದಂತೆ, ಮೂಢನಿಗೆ ಮಾರ್ಗ ತೋರಿಕೊಟ್ಟಂತೆ, ಕಣ್ಣಿರುವವರು ರೂಪಗಳನ್ನು ಕಾಣಲೆಂದು ಕತ್ತಲೆಯಲ್ಲಿ ತೈಲದ ದೀಪ ಹಿಡಿದಂತೆ ಭಗವಂತನು ಅನೇಕ ಪರ್ಯಾಯಗಳಿಂದ ಧರ್ಮವನ್ನು ಪ್ರಕಾಶಗೊಳಿಸಿದನು. ನಾನು ಇಂದು ಭಗವಂತನಿಗೂ ಧರ್ಮಕ್ಕೂ ಭಿಕ್ಷುಸಂಘಕ್ಕೂ ಶರಣಾಗುವೆನು. ಇಂದಿನಿಂದ ಪ್ರಾಣವಿರುವವರೆಗೂ ಶರಣಾಗತನಾದ ಉಪಾಸಕನೆಂದು ಭಗವಂತನು ನನ್ನನ್ನು ಸ್ವೀಕರಿಸಬೇಕು" ಎಂದನು.

[ದೀಘನಿಕಾಯ – ಸಿಗಾಲೋವಾದ ಸುತ್ತಂತ]

೧೦. ಸಂನ್ಯಾಸಿ ಜೀವನದ ಫಲ

ನಾನು ಹೀಗೆ ಕೇಳಿದ್ದೇನೆ:

ಒಂದು ಸಲ ಭಗವಂತನು ರಾಜಗೃಹದಲ್ಲಿ, ಮಕ್ಕಳ ವೈದ್ಯನಾದ ಜೀವಕನ ಆಮ್ರವನದಲ್ಲಿ ತಂಗಿದ್ದನು. ಅವನೊಡನೆ ಮಹಾ ಭಿಕ್ಷುಸಂಘವಿತ್ತು; ಹದಿಮೂರೂವರೆ ನೂರು ಭಿಕ್ಷುಗಳಿದ್ದರು.

ಆಗ, ವರ್ಷಾವಾಸದ ನಾಲ್ಕನೆಯ ತಿಂಗಳು; ಕಾರ್ತಿಕ ಮಾಸದ ಹದಿನೈದನೆಯ ದಿವಸ; ಕೌಮುದಿಯೆಂಬ ಹುಣ್ಣಿಮೆಯ ರಾತ್ರಿ; ಅಂದು ಉಪವಸಥ. ಆ ಪೂರ್ಣ ಹುಣ್ಣಿಮೆಯ ರಾತ್ರಿಯಲ್ಲಿ ಮಗಧದ ರಾಜನಾದ ಅಜಾತಶತ್ರು ವೈದೇಹಿಪುತ್ರನು ಮಂತ್ರಿಗಳೊಡನೆ ಅರಮನೆಯ ಮೇಲುಗಡೆ ಹೋಗಿ ಕುಳಿತಿದ್ದನು.

ಆಗ, ಆ ಉಪವಸಥದ ರಾತ್ರಿ, "ಭೋ! ಬೆಳುದಿಂಗಳು ರಾತ್ರಿ ಎಷ್ಟು ರಮಣೀಯವಾಗಿದೆ! ಎಷ್ಟು ಸುಂದರವಾಗಿದೆ! ನೋಟಕ್ಕೆ ಎಷ್ಟು ಯೋಗ್ಯವಾಗಿದೆ! ಈ ಬೆಳುದಿಂಗಳು ರಾತ್ರಿಯಿಂದ ಮನಸ್ಸು ಎಷ್ಟು ಪ್ರಸನ್ನವಾಗುವುದು! ಈ ಬೆಳುದಿಂಗಳು ರಾತ್ರಿ ಎಷ್ಟು ಶುಭಲಕ್ಷಣಗಳನ್ನು ಸೂಚಿಸುವುದು! ಈಗ ಯಾವ ಶ್ರಮಣ ಬ್ರಾಹ್ಮಣರನ್ನು ಬಳಿಸಾರಿ ಸೇವಿಸೋಣ? ಯಾರ ಬಳಿಹೋಗಿ ಸೇವಿಸಿದರೆ ಚಿತ್ತವು ಪ್ರಸನ್ನವಾಗುವುದು?" ಎಂದು ಅಜಾತಶತ್ರುವು ಸಂತೋಷದಿಂದ ಉಕ್ಕಿ ಉಸುರಿದನು.

ಹಾಗೆನ್ನಲು, ಒಬ್ಬ ಮಂತ್ರಿಯು "ದೇವ, ಪೂರ್ಣಕಶ್ಯಪನಿದ್ದಾನೆ. ಆತನು ಸಂಘಕ್ಕೆ ಮುಖ್ಯಸ್ಥನು, ಗಣಕ್ಕೆ ಮುಖಂಡನು, ಗಣಾಚಾರ್ಯನು, ಎಲ್ಲರಿಗೂ ತಿಳಿದವನು, ಯಶಸ್ವಿ, ತೀರ್ಥಕರನು, ಸಾಧುಗಳಿಂದ ಸನ್ಮಾನಪಡೆದವನು, ಬಹುಕಾಲದಿಂದ ಪ್ರವ್ರಜಿತನಾದವನು, ಜೀವನದ ದಾರಿಯಲ್ಲಿ ನಡೆದು ವಯಸ್ಸಾದವನು. ದೇವರು ಪೂರ್ಣಕಶ್ಯಪನನ್ನು ಬಳಿಸಾರಿ ಸೇವಿಸಲಿ. ಅದರಿಂದ ದೇವರ ಚಿತ್ತವು ಪ್ರಸನ್ನವಾಗುವುದು" ಎಂದನು. ಹಾಗೆನ್ನಲು, ಅಜಾತಶತ್ರುವು ಮೌನವಾಗಿದ್ದನು.

ಆಗ, ಬೇರೆ ಐವರು ಮಂತ್ರಿಗಳು ಮಸ್ಕರಿ ಗೋಶಾಲ, ಅಜಿತ ಕೇಶಕಂಬಳಿ, ಪಕುಧ ಕಾತ್ಯಾಯನ, ಸಂಜಯ ಬೇಲಟ್ಠಪುತ್ರ, ನಿರ್ಗ್ರಂಥ ಜ್ಞಾತೃಪುತ್ರ—ಎಂಬ ಐವರು ಗಣಾಚಾರ್ಯರನ್ನು ಮೇಲಿನಂತೆಯೇ

ಕೀರ್ತಿಸಿ, ಅವರನ್ನು ಬಳಿಸಾರಿ ಸೇವಿಸಿದರೆ ದೊರೆಯ ಚಿತ್ತವು ಪ್ರಸನ್ನವಾಗುವುದೆಂದರು. ಹೀಗೆ ಒಬ್ಬೊಬ್ಬ ಮಂತ್ರಿಯೂ ಒಬ್ಬೊಬ್ಬ ಗಣಾಚಾರ್ಯನನ್ನು ಸೂಚಿಸಲು, ಅಜಾತಶತ್ರುವು ಮೌನವಾಗಿದ್ದನು.

ಆ ಸಮಯದಲ್ಲಿ, ಮಕ್ಕಳ ವೈದ್ಯನಾದ ಜೀವಕನು ಅಜಾತಶತ್ರುವಿಗೆ ಸ್ವಲ್ಪ ದೂರದಲ್ಲಿ ಮೌನವಾಗಿ ಕುಳಿತಿದ್ದನು. ಆಗ ಅಜಾತಶತ್ರುವು "ಅಯ್ಯ ಜೀವಕ! ನೀನೇಕೆ ಸುಮ್ಮನಿರುವೆ?" ಎಂದನು.

"ದೇವ! ಅರ್ಹತನೂ ಸಮ್ಯಕ್‌ಸಂಬುದ್ಧನೂ ಆದ ಭಗವಂತನಿರುವನು. ಆತನು ಮಹಾ ಭಿಕ್ಷುಸಂಘದೊಡನೆ, ಹದಿಮೂರೂವರೆ ನೂರು ಭಿಕ್ಷುಗಳೊಡನೆ, ನಮ್ಮ ಆಮ್ರವನದಲ್ಲಿ ತಂಗಿರುವನು. 'ಆ ಭಗವಂತನು ಅರ್ಹತನು, ಸಮ್ಯಕ್‌ಸಂಬುದ್ಧನು, ವಿದ್ಯಾಚರಣ ಸಂಪನ್ನನು, ಸುಗತಿಯನ್ನು ಪಡೆದವನು, ಲೋಕಗಳನ್ನು ತಿಳಿದವನು, ದಮನವನ್ನು ಬಯಸುವ ಜನರನ್ನು ಸಾರಥಿಯಂತೆ ನಡಿಸುವುದರಲ್ಲಿ ಎಲ್ಲರನ್ನೂ ಮೀರಿಸಿದವನು, ದೇವತೆಗಳಿಗೂ ಮನುಷ್ಯರಿಗೂ ಗುರುವು, ಬುದ್ಧನು, ಭಗವಂತನು'—ಎಂಬ ಸುಂದರವಾದ ಕೀರ್ತಿಶಬ್ದವು ಆ ಭಗವಂತನಾದ ಗೌತಮನನ್ನು ಕುರಿತು ಹರಡಿರುವುದು. ದೇವರು ಭಗವಂತನ ಬಳಿಸಾರಿ ಸೇವಿಸಲಿ. ಭಗವಂತನ ಬಳಿಸಾರಿ ಸೇವಿಸಿದರೆ ದೇವರ ಚಿತ್ತವು ಪ್ರಸನ್ನವಾಗುವುದು."

"ಹಾಗಾದರೆ, ಅಯ್ಯ ಜೀವಕ, ಆನೆಯ ವಾಹನಗಳನ್ನು ಸಿದ್ಧಗೊಳಿಯಿಸು."

"ಹಾಗೆಯೆ ಆಗಲಿ, ದೇವ!" ಎಂದು ಮಕ್ಕಳ ವೈದ್ಯನಾದ ಜೀವಕನು ಅಜಾತಶತ್ರುವಿನ ಮಾತಿಗೆ ಒಪ್ಪಿ, ಸುಮಾರು ಐನೂರು ಹೆಣ್ಣಾನೆಗಳನ್ನೂ ರಾಜನು ಏರತಕ್ಕ ಆನೆಯನ್ನೂ ಸಿದ್ಧಗೊಳಿಯಿಸಿ, "ದೇವ, ಆನೆಯ ವಾಹನಗಳನ್ನು ಕಲ್ಪಿಸಿಯಾಯಿತು. ಚಿತ್ತಕ್ಕೆ ಬಂದಂತೆ ಮಾಡಬಹುದು" ಎಂದು ಅಜಾತಶತ್ರುವಿಗೆ ತಿಳಿಸಿದನು. ಆಗ ಅಜಾತಶತ್ರು ಐನೂರು ಹೆಣ್ಣಾನೆಗಳ ಮೇಲೆ ಬೇರೆಬೇರೆಯಾಗಿ ಹೆಂಗಸರನ್ನು ಹತ್ತಿಸಿ, ಏರತಕ್ಕ ಆನೆಯನ್ನು ಏರಿ, ಪಂಜು ಹಿಡಿದವರೊಡನೆ, ಮಹಾರಾಜಾನುಭಾವದಿಂದ ಹೊರಟು, ಮಕ್ಕಳ ವೈದ್ಯನಾದ ಜೀವಕನ ಆಮ್ರವನವನ್ನು ಕುರಿತು ರಾಜಗೃಹದಿಂದ ತೆರಳಿದನು.

ಆಮ್ರವನಕ್ಕೆ ಸ್ವಲ್ಪ ದೂರದಲ್ಲಿರುವಾಗ ಅಜಾತಶತ್ರುವಿಗೆ ಭಯವಾಯಿತು, ಆತ್ಮ ಸ್ತಂಭಿತವಾಯಿತು, ರೋಮಾಂಚವಾಯಿತು. ಆಗ ಅಜಾತಶತ್ರು ಭಯದಿಂದ, ಸಂವೇಗದಿಂದ, ರೋಮಾಂಚದಿಂದ "ಅಯ್ಯ ಜೀವಕ! ನನ್ನನ್ನು ವಂಚಿಸುತ್ತಿಲ್ಲವಷ್ಟೆ? ನನಗೆ ಮೋಸಮಾಡುತ್ತಿಲ್ಲ ತಾನೆ? ನನ್ನನ್ನು ಶತ್ರುಗಳಿಗೆ ಒಪ್ಪಿಸುತ್ತಿಲ್ಲವಷ್ಟೆ? ಈ ಮಹಾ ಭಿಕ್ಷು ಸಂಘವು, ಹದಿಮೂರೂವರೆ ನೂರು ಭಿಕ್ಷುಗಳು ಇರುವ ಕಡೆ ಒಂದು ಶಬ್ದವಾಗಲಿ, ಕೆಮ್ಮಿದ ಸದ್ದಾಗಲಿ, ಸೀಂತ ಶಬ್ದವಾಗಲಿ ಇಲ್ಲದಿರುವುದು ಹೇಗೆ?" ಎಂದನು.

"ಭಯ ಬೇಡ, ಮಹಾರಾಜ. ದೇವರನ್ನು ವಂಚಿಸುವುದಿಲ್ಲ. ದೇವರಿಗೆ ಮೋಸಮಾಡುವುದಿಲ್ಲ. ದೇವರನ್ನು ಶತ್ರುಗಳಿಗೆ ಒಪ್ಪಿಸುವುದಿಲ್ಲ. ಮಹಾರಾಜ, ಮುಂದೆ ನಡೆ. ಮುಂದೆ ನಡೆ, ಮಹಾರಾಜ. ಅಲ್ಲಿ, ಮಂಡಲಮಾಳದಲ್ಲಿ ದೀಪಗಳು ಬೆಳಗುತ್ತಿವೆ."

ಆಗ, ಅಜಾತಶತ್ರು ಆನೆ ಹೋಗಲು ದಾರಿಯಿರುವವರೆಗೆ ಆನೆಯ ಮೇಲೆ ಹೋಗಿ, ಆನೆಯಿಂದ ಇಳಿದು ಕಾಲುನಡೆಯಿಂದ ಮಂಡಲಮಾಳದ ಬಾಗಿಲ ಬಳಿಸಾರಿ, "ಆದರೆ, ಅಯ್ಯ ಜೀವಕ, ಭಗವಂತನೆಲ್ಲಿ?" ಎಂದು ಕೇಳಿದನು.

"ಅದೋ, ಅವನೇ ಭಗವಂತನು, ಮಹಾರಾಜ. ಮಹಾರಾಜ, ಮಧ್ಯದ ಕಂಬವನ್ನು ಒರಗಿ, ಭಿಕ್ಷುಸಂಘದ ನಡುವೆ ಪೂರ್ವಕ್ಕೆ ಮುಖಮಾಡಿ ಕುಳಿತಿರುವವನು, ಅವನೇ ಭಗವಂತನು!"

ಆಗ ಅಜಾತಶತ್ರು ಭಗವಂತನಿರುವ ಬಳಿಸಾರಿ, ಒಂದು ಪಕ್ಕಕ್ಕೆ ನಿಂತನು. ನಿಂತು, ವಿಶೇಷವಾಗಿ ಪ್ರಸನ್ನವಾದ ಕೊಳದಂತೆ ಮೌನದಿಂದಿದ್ದ ಭಿಕ್ಷುಸಂಘವನ್ನು ಕುರಿತು ನೋಡಿ, "ಈ ಭಿಕ್ಷುಸಂಘವು ಪಡೆದಿರುವಂತಹ ಉಪಶಮೆಯು ನನ್ನ ಕುಮಾರನಾದ ಉದಾಯಿಭದ್ರನಿಗೆ ಬರಲಿ" ಎಂದು ಹಾರೈಸಿ ಹೇಳಿದನು.

"ಪ್ರೇಮದ ಕಡೆ ತಿರುಗಿದೆಯ, ಮಹಾರಾಜ?"

"ಭನ್ತೇ, ಕುಮಾರನಾದ ಉದಾಯಿಭದ್ರನು ನನಗೆ ಪ್ರಿಯನಾದವನು. ಭನ್ತೇ, ಈ ಭಿಕ್ಷುಸಂಘವು ಪಡೆದಿರುವಂತಹ ಉಪಶಮೆಯು ನನ್ನ ಕುಮಾರನಾದ ಉದಾಯಿಭದ್ರನಿಗೆ ಬರಲಿ!"

ಆಗ, ಅಜಾತಶತ್ರು ಭಗವಂತನಿಗೆ ಅಭಿವಂದಿಸಿ, ಭಿಕ್ಷುಸಂಘಕ್ಕೆ ಕೈಮುಗಿದು ನಮಸ್ಕರಿಸಿ ಒಂದು ಕಡೆ ಕುಳಿತನು. ಕುಳಿತು, "ಭನ್ತೇ, ಭಗವಂತನನ್ನು ಒಂದು ವಿಚಾರ ಕೇಳಬಯಸುವೆನು. ಭಗವಂತನು ನನಗೆ ಅವಕಾಶಕೊಟ್ಟರೆ, ಪ್ರಶ್ನೆ ತಿಳಿಸುವೆನು" ಎಂದನು.

"ಬೇಕಾದುದು ಕೇಳು, ಮಹಾರಾಜ."

"ಭನ್ತೇ, ವಿದ್ಯೆಗಳಲ್ಲಿ ಬೇರೆ ಬೇರೆ ಶಾಖೆಗಳುಂಟು; ಮಾಹುತರು, ಕುದುರೆ ಸವಾರರು, ರಥಿಕರು, ಬಾವುಟ ಹಿಡಿಯುವವರು, ಸೈನ್ಯಾಧಿಕಾರಿಗಳು, ಸೇನೆಗೆ ಆಹಾರ ಹಂಚುವವರು, ಉಗ್ರರಾದ ರಾಜಪುತ್ರರು, ಮೇಲೆ ಬಿದ್ದು ನುಗ್ಗುವ ಸೈನಿಕರು, ಆನೆಯಂತಹ ವೀರರು, ಶೂರರು, ಚರ್ಮಕಂಚುಕದ ಭಟರು, ದಾಸರ ಮಕ್ಕಳು, ಅಡುಗೆಯವರು, ಕ್ಷೌರಿಕರು, ಸ್ನಾನಮಾಡಿಸುವವರು, ಮಿಠಾಯಿಗಾರರು, ಹೂವಾಡಿಗರು, ಅಗಸರು, ನೆಯ್ಗೆಯವರು, ಮೇದರವರು, ಕುಂಬಾರರು, ಲೆಕ್ಕಾಚಾರವನ್ನು ಬಲ್ಲ ಗಣಕರು, ಮುದ್ರಿಕರು—ಮುಂತಾಗಿ ಅನೇಕ ಶಾಖೆಗಳುಂಟು. ಅವರು ತಮ್ಮ ವಿದ್ಯೆಯ ಫಲವನ್ನು ಆಗಲೇ ಅನುಭವಿಸಿ ಉಂಡು, ತಾವು ಸುಖಪಟ್ಟು ಹಾಯಾಗಿರುವರು; ತಾಯಿತಂದೆಯನ್ನೂ ಹೆಂಡಿರುಮಕ್ಕಳನ್ನೂ ಮಿತ್ರರನ್ನೂ ಸುಖಪಡಿಸಿ ಹಾಯಾಗಿರಿಸುವರು. ಶ್ರಮಣ ಬ್ರಾಹ್ಮಣರಿಗೆ ಅವರು ದಕ್ಷಿಣೆ ನೀಡುವರು; ಅದರಿಂದ ಅವರಿಗೆ ಮೇಲಾಗುವುದು, ಸ್ವರ್ಗ ಸಿಕ್ಕುವುದು, ಸುಖದ ಪಕ್ವಫಲ ಬರುವುದು, ಅವರು ಸ್ವರ್ಗದಲ್ಲಿ ಪುನಃ ಹುಟ್ಟುವರು. ಭನ್ತೇ, ಹೀಗೆ, ಸಂನ್ಯಾಸಿ ಜೀವನದ ಇಲ್ಲಿಯೇ ಕಂಡುಬರುವ ಫಲವನ್ನು ತಿಳಿಸಲು ಶಕ್ಯವೆ?"

"ಮಹಾರಾಜ, ನೀನು ಈ ಪ್ರಶ್ನೆಯನ್ನು ಬೇರೆ ಶ್ರಮಣ ಬ್ರಾಹ್ಮಣರ ಬಳಿ ಕೇಳಿರುವುದು ಗೊತ್ತಿದೆಯೆ?"

"ಗೊತ್ತಿದೆ, ಭನ್ತೇ."

"ಅದಕ್ಕೆ ಅವರು ಹೇಗೆ ಉತ್ತರ ಕೊಟ್ಟರೆಂಬುದನ್ನು. ಹೇಳಬಹುದಾದರೆ, ಹೇಳು, ಮಹಾರಾಜ."

"ಭನ್ತೇ, ಭಗವಂತನ ಬಳಿಯಲ್ಲಿ, ಭಗವಂತನಂತಹವರ ಬಳಿ ಹೇಳಲು ಏನೂ ಅಡ್ಡಿಯಿಲ್ಲ."

"ಹಾಗಾದರೆ, ಹೇಳು, ಮಹಾರಾಜ."

"ಭನ್ತೇ! ನಾನು ಪೂರ್ಣಕಶ್ಯಪನ ಬಳಿ ಹೋಗಿದ್ದೇನೆ; ಮಸ್ಕರಿ ಗೋಶಾಲನನ್ನು ಕಂಡಿದ್ದೇನೆ; ಅಜಿತ ಕೇಶಕಂಬಳಿಯನ್ನು ಸಮೀಪಿಸಿದ್ದೇನೆ; ಪಕುಧ ಕಾತ್ಯಾಯನನನ್ನು ನೋಡಿದ್ದೇನೆ; ನಿರ್ಗ್ರಂಥ ಜ್ಞಾತೃಪುತ್ರನ ದರ್ಶನಮಾಡಿದ್ದೇನೆ; ಸಂಜಯ ಬೇಲಟ್ಠಪುತ್ರನನ್ನು ಸಾರಿದ್ದೇನೆ. ಅವರೆಲ್ಲರಲ್ಲಿಯೂ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ ನಾನು ಕೇಳಿದುದು ಬೇರೆ, ಅವರು ಹೇಳಿದುದೇ ಬೇರೆ. ಮಾವಿನ ಹಣ್ಣನ್ನು ಕೇಳಿದರೆ ಲಬುಜವನ್ನು ವರ್ಣಿಸುವಂತೆ, ಲಬುಜವನ್ನು ಕೇಳಿದರೆ ಮಾವಿನ ಹಣ್ಣನ್ನು ವರ್ಣಿಸುವಂತೆ, ನಾನು ಕೇಳಿದುದು ಬೇರೆ, ಅವರು ಹೇಳಿದುದೇ ಬೇರೆ" ಎಂದು ಅಜಾತಶತ್ರುವು ತನ್ನ ಪ್ರಶ್ನೆಗೆ ಆ ಆರುವರು ಗಣಾಚಾರ್ಯರು ಕೊಟ್ಟ ಉತ್ತರಗಳನ್ನು ತಿಳಿಸಿ, "ಭನ್ತೇ! ಅವರ ಆ ಉತ್ತರಗಳನ್ನು ಕೇಳಿ, 'ಈ ಶ್ರಮಣ ಬ್ರಾಹ್ಮಣರು ಎಲ್ಲರೂ ಅಜ್ಞಾನಿಗಳು, ಮೂಢರು. ನಾನೊಂದು ಕೇಳಿದರೆ, ಇವರು ಏಕೆ ಬೇರೊಂದು ತಿಳಿಸುವರು? ನನ್ನ ರಾಜ್ಯದಲ್ಲಿ ವಾಸಿಸುವ ಶ್ರಮಣನಿಗಾಗಲಿ ಬ್ರಾಹ್ಮಣನಿಗಾಗಲಿ ನನ್ನಂತಹವನು ಪ್ರತಿಹೇಳುವುದನ್ನು ಯೋಚಿಸುವುದಾದರೂ ಹೇಗೆ?' ಎಂದುಕೊಂಡು, ಅವರ ಮಾತಿಗೆ ನಾನು ಅಭಿನಂದಿಸಲೂ ಇಲ್ಲ, ದೂಷಿಸಲೂ ಇಲ್ಲ. ಅಭಿನಂದಿಸದೆ, ದೂಷಿಸದೆ, ಮನವೊಪ್ಪದಿದ್ದರೂ ಅದನ್ನು ಪ್ರಕಟಪಡಿಸದೆ, ಅವರ ಮಾತನ್ನು ಸ್ವೀಕರಿಸದೆ, ತಿರಸ್ಕರಿಸದೆ, ಆಸನದಿಂದ ಎದ್ದು ಹೊರಟೆನು. ಈಗ ಭಗವಂತನ ಬಳಿ ಬಂದಿದ್ದೇನೆ. ಭನ್ತೇ, ಸಂನ್ಯಾಸಿ ಜೀವನದ ಇಲ್ಲಿಯೇ ಕಂಡುಬರುವ ಫಲವನ್ನು ತಿಳಿಯಲು ಶಕ್ಯವೆ?" ಎಂದನು.

"ಶಕ್ಯ, ಮಹಾರಾಜ. ಆದಕ್ಕಾಗಿ, ಮಹಾರಾಜ, ನಿನ್ನನ್ನೇ ಪ್ರತಿಪ್ರಶ್ನೆಮಾಡುವೆನು. ನಿನಗೆ ಹೇಗೆನಿಸುವುದೋ ಹಾಗೆ ಉತ್ತರಕೊಡು.

"ಏನೆಂಬೆ, ಮಹಾರಾಜ? ನಿನ್ನ ಕೆಲಸಗಳನ್ನು ಮಾಡುವ ನಿನ್ನ ದಾಸನಿದ್ದಾನೆ. ಅವನು ನೀನು ಏಳುವ ಮೊದಲು ಎದ್ದು, ನೀನು ಮಲಗಿದನಂತರ ಮಲಗಿ, ಹೇಳಿದಂತೆ ಕೇಳಿಕೊಂಡು, ಮನಸ್ಸಿಗೆ ಒಪ್ಪುವಂತೆ ಕೆಲಸಮಾಡುವವನು; ಪ್ರಿಯವಾಗಿ ಮಾತನಾಡಿ, ಇಂಗಿತಜ್ಞನಾದವನು. ಅವನು 'ಪುಣ್ಯಗಳಿಂದ ಬರುವ ಗತಿಯೂ ಫಲವೂ

ಆಶ್ಚರ್ಯವಾದುದು! ಅದ್ಭುತವಾದುದು! ಈ ಮಗಧದ ರಾಜನಾದ ಅಜಾತ ಶತ್ರು ವೈದೇಹಿಪುತ್ರನೂ ಮನುಷ್ಯ; ನಾನೂ ಮನುಷ್ಯ. ಈ ಅಜಾತ ಶತ್ರು ಪಂಚೇಂದ್ರಿಯಗಳ ಸುಖವನ್ನು ಅನುಭವಿಸಿ, ಅದರಲ್ಲಿ ಲೀನನಾಗಿ, ದೇವರ ಹಾಗೆ ಇರುವನು. ನಾನು ಇವನಿಗಿಂತ ಮೊದಲು ಎದ್ದು, ಕಡೆಗೆ ಮಲಗಿ, ಹೇಳಿದಂತೆ ಕೇಳಿ, ಮನಸ್ಸಿಗೆ ಒಪ್ಪುವಂತೆ ಕೆಲಸಮಾಡಿ, ಪ್ರಿಯ ವಾಗಿ ಮಾತನಾಡುವ ಇಂಗಿತಜ್ಞನಾದ ಕೆಲಸಗಾರ, ದಾಸ. ಪುಣ್ಯ ಗಳನ್ನು ಮಾಡಿ ನಾನೂ ಅವನ ಹಾಗೆಯೆ ಆಗುವೆನು. ಕೂದಲು ಗಡ್ಡಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, ಗಾರ್ಹಸ್ಥ್ಯ ದಿಂದ ಸಂನ್ಯಾಸಕ್ಕೆ ಏಕೆ ಪರಿವ್ರಜಿಸಬಾರದು?' ಎಂದುಕೊಂಡು ಕೂದಲು ಗಡ್ಡಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಬರುವನು; ಹೀಗೆ ಪರಿವ್ರಜಿಸಿ, ಪ್ರವ್ರಜಿತರ ಸಮನಾಗಿ, ಮೈ ಮಾತು ಮನಸ್ಸುಗಳನ್ನು ಕಾಪಾಡಿಕೊಂಡು ವಾಸಿಸು ವನು; ಊಟ ಬಟ್ಟೆ ಮಾತ್ರದಿಂದ ಸಂತುಷ್ಟನಾಗಿ, ಏಕಾಂತವಾಸದಲ್ಲಿ ಬಹುವಾಗಿ ರಮಿಸುವನು. ಆ ದಾಸನು ಈ ರೀತಿಯಲ್ಲಿ ಸಂನ್ಯಾಸಿ ಯಾಗಿರುವುದನ್ನು ನಿನ್ನ ಪುರುಷರು ನಿನಗೆ ತಿಳಿಸಿದರೆ, 'ಆತನು ಇಲ್ಲಿಗೆ ಬಂದು, ಎಂದಿನಂತೆ ದಾಸನಾಗಿ ನನ್ನ ಸೇವೆಮಾಡುತ್ತಿರಲಿ' ಎಂದು ನೀನು ಹೇಳುವೆಯ?"

"ಇಲ್ಲ, ಇಲ್ಲ, ಭನ್ತೇ ಅದರ ಬದಲು ನಾನೇ ಅವನಿಗೆ ಅಭಿವಂದಿಸು ವೆನು, ಆಸನದಿಂದ ಎದ್ದು ಬಳಿಹೋಗಿ ಕರೆಯುವೆನು. ಬಟ್ಟೆ, ಭಿಕ್ಷಾ ಪಾತ್ರೆ, ಶಯನಾಸನಗಳು, ಕಾಯಿಲೆಗೆ ಔಷಧಿ—ಮುಂತಾದ ವಸ್ತು ಗಳನ್ನು ನೀಡಿ ಸ್ವೀಕರಿಸುವಂತೆ ಬೇಡುವೆನು. ಧರ್ಮಕ್ಕೆ ತಕ್ಕ ರಕ್ಷಣ ಗೋಪನಗಳನ್ನು ಏರ್ಪಡಿಸುವೆನು."

"ಏನು, ಮಹಾರಾಜ? ಈಗ, ಸಂನ್ಯಾಸಿ ಜೀವನಕ್ಕೆ ಇಲ್ಲಿಯೇ ಕಂಡುಬರುವ ಫಲವುಂಟೆ, ಇಲ್ಲವೆ?"

"ನಿಜ, ಭನ್ತೇ. ಸಂನ್ಯಾಸಿ ಜೀವನಕ್ಕೆ ಇಲ್ಲಿಯೇ ಕಂಡುಬರುವ ಫಲವುಂಟು."

"ಸಂನ್ಯಾಸಿ ಜೀವನದ ಇಲ್ಲಿಯೇ ಕಂಡುಬರುವ ಮೊದಲನೆಯ ಫಲವೆಂದು ನಾನು ತಿಳಿಸಿದುದು ಇದೇ, ಮಹಾರಾಜ."

"ಇದೇ ರೀತಿಯಲ್ಲಿ, ಸಂನ್ಯಾಸಿ ಜೀವನದ ಇಲ್ಲಿಯೇ ಕಂಡುಬರುವ ಇತರ ಫಲಗಳನ್ನು ತಿಳಿಸಲು ಶಕ್ಯವೆ, ಭನ್ತೇ?"

"ಶಕ್ಯ, ಮಹಾರಾಜ" ಎಂದು ಭಗವಂತನು, ಐಶ್ವರ್ಯವಂತನಾದ ಗೃಹಸ್ಥನು ಸಂನ್ಯಾಸಿಯಾದರೆ ಅವನಿಗೂ ರಾಜನಿಂದ ಪೂಜೆ ಲಭಿಸುವುದೆಂದು ತೋರಿಸಿ, ಅದು ಸಂನ್ಯಾಸಿ ಜೀವನದ ಇಲ್ಲಿಯೇ ಕಂಡುಬರುವ ಫಲಗಳಲ್ಲಿ ಇನ್ನೊಂದೆಂದು ತಿಳಿಸಿದನು.

"ಭನ್ತೇ, ಸಂನ್ಯಾಸಿ ಜೀವನದ ಇಲ್ಲಿಯೇ ಕಂಡುಬರುವ ಈ ಫಲಗಳಿಗಿಂತ ಮೇಲಾದ, ಸಿಹಿಯಾದ ಬೇರೆ ದೃಷ್ಟಫಲವನ್ನು ತಿಳಿಸಲಾಗುವುದೆ?"

"ಆಗುವುದು, ಮಹಾರಾಜ. ಕಿವಿಗೊಟ್ಟು ಕೇಳು. ಸಾಧುವಾದುದನ್ನು ಮನಸ್ಸಿನಲ್ಲಿಡು. ಹೇಳುತ್ತೇನೆ."

"ಹಾಗೆಯೆ ಆಗಲಿ, ಭನ್ತೇ!" ಎಂದು ಮಗಧದ ರಾಜನಾದ ಅಜಾತಶತ್ರು ವೈದೇಹಿಪುತ್ರನು ಭಗವಂತನ ಮಾತಿಗೆ ಒಪ್ಪಿದನು.

ಭಗವಂತನು ಹೀಗೆಂದನು:

[ಲೋಕದಲ್ಲಿ ಬುದ್ಧನ ಉದಯ]

"ಮಹಾರಾಜ, ತಥಾಗತನು ಲೋಕದಲ್ಲಿ ಹುಟ್ಟುತ್ತಾನೆ. ಆತನು ಅರ್ಹನು, ಸಮ್ಯಕ್‌ಸಂಬುದ್ಧನು, ವಿದ್ಯಾಚರಣಸಂಪನ್ನನು, ಸುಗತಿಯನ್ನು ಪಡೆದವನು, ಲೋಕಗಳನ್ನು ತಿಳಿದವನು, ದಮನವನ್ನು ಬಯಸುವ ಜನರನ್ನು ಸಾರಥಿಯಂತೆ ನಡಿಸುವುದರಲ್ಲಿ ಎಲ್ಲರನ್ನೂ ಮೀರಿಸಿದವನು, ದೇವತೆಗಳಿಗೂ ಮನುಷ್ಯರಿಗೂ ಗುರು, ಬುದ್ಧನು, ಭಗವಂತನು. ಆತನು ಈ ಲೋಕವನ್ನು—ದೇವತೆಗಳು, ಮಾರರು, ಬ್ರಹ್ಮರು, ಶ್ರಮಣರು, ಬ್ರಾಹ್ಮಣರು ಸಹಿತವಾಗಿ, ದೇವ ಮನುಷ್ಯ ಸಹಿತವಾಗಿ—ಸ್ವಂತ ಅಭಿಜ್ಞೆಯಿಂದ ಕಂಡುಕೊಂಡು ತಿಳಿಯಪಡಿಸುತ್ತಾನೆ. ಮೊದಲಿನಲ್ಲೂ ನಡುವಿನಲ್ಲೂ ಕಡೆಯಲ್ಲೂ ಸುಂದರವಾದ ಧರ್ಮವನ್ನು ಅರ್ಥ ವ್ಯಂಜನಗಳೊಡನೆ ಸಾರುವನು. ಕೇವಲ ಪರಿಪೂರ್ಣವೂ ಪರಿಶುದ್ಧವೂ ಆದ ಬ್ರಹ್ಮಚರ್ಯವನ್ನು ಪ್ರಕಾಶಗೊಳಿಸುವನು.

[ಧರ್ಮವನ್ನು ಕೇಳಿದವನ ಪ್ರವ್ರಜ್ಯ]

"ಗೃಹಪತಿಯೋ, ಗೃಹಪತಿಯ ಮಗನೋ, ಹೀನಕುಲದಲ್ಲಿ ಹುಟ್ಟಿದ ಬೇರೆ ಯಾವನೋ ಆ ಧರ್ಮವನ್ನು ಕೇಳುವನು. ಆ ಧರ್ಮವನ್ನು ಕೇಳಿ, ಅವನಿಗೆ ತಥಾಗತನಲ್ಲಿ ಶ್ರದ್ಧೆಯುಂಟಾಗುವುದು. ಆ ಶ್ರದ್ಧೆಯನ್ನು ಪಡೆದು, ಅವನು 'ಮನೆಯಲ್ಲಿ ವಾಸಿಸುವುದು ಬಾಧೆಗಳಿಗೆ ಸ್ಥಾನ, ಧೂಳಿಗೆ ದಾರಿ. ಪ್ರವ್ರಜ್ಯವು ಬಹಳ ಅವಕಾಶವುಳ್ಳದು. ಕೇವಲ ಪರಿಪೂರ್ಣವಾದ, ಕೇವಲ ಪರಿಶುದ್ಧವಾದ, ಕತ್ತರಿಸಿ ತೊಳೆದ ಶಂಖದಂತೆ ಸ್ವಚ್ಛವಾದ ಬ್ರಹ್ಮಚರ್ಯವನ್ನು ಆಚರಿಸುವುದು ಮನೆಯಲ್ಲಿ ವಾಸಿಸುವವನಿಗೆ ಸುಲಭವಲ್ಲ. ಅದರಿಂದ ಕೂದಲು ಗಡ್ಡಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸುವೆನು' ಎಂದು ಚಿಂತಿಸುವನು. ಅವನು, ಕೊಂಚ ಕಾಲವಾದ ಮೇಲೆ, ತನ್ನ ಐಶ್ವರ್ಯದ ರಾಶಿ ಕೊಂಚವಾಗಿರಲಿ ಹೆಚ್ಚಾಗಿರಲಿ, ಅದನ್ನು ಬಿಡುವನು; ತನ್ನ ಸುತ್ತಮುತ್ತಿನ ಜ್ಞಾತಿಗಳು ಸ್ವಲ್ಪವಿರಲಿ ಬಹಳವಾಗಿರಲಿ, ಅವರನ್ನು ತೊರೆಯುವನು; ಕೂದಲು ಗಡ್ಡಗಳನ್ನು ತೆಗೆದು, ಕಾಷಾಯವಸ್ತ್ರಗಳನ್ನು ಹೊದೆದು, ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸುವನು.

[ಪರಿವ್ರಜಿಸಿದವನ ಕರ್ತವ್ಯ]

"ಅವನು ಹೀಗೆ ಪ್ರವ್ರಜಿತನಾಗಿ, ಪ್ರಾತಿಮೋಕ್ಷ್ಯದಿಂದ ಸಂಯಮ ಮಾಡಿಕೊಂಡು ವಾಸಿಸುವನು; ಸದಾಚಾರಗಳನ್ನು ಆಚರಿಸಿ, ಬಿಡಬೇಕಾದ ಅಣುಮಾತ್ರಗಳಲ್ಲಿಯೂ ಭಯವನ್ನು ಕಾಣುವನು; ಶಿಕ್ಷಾಪದಗಳನ್ನು ಕೊಂಡು, ಶಿಕ್ಷೆ ಪಡೆಯುವನು; ಒಳ್ಳೆಯ ಕರ್ಮಗಳನ್ನು ಮಾಡುವನು, ಆಡುವನು; ಕುಶಲಗಳಿಂದ ಬದುಕನ್ನು ಪರಿಶುದ್ಧಿಗೊಳಿಸುವನು; ಶೀಲಸಂಪನ್ನನಾಗುವನು; ಇಂದ್ರಿಯಗಳ ಬಾಗಿಲುಗಳನ್ನು ಕಾಯ್ದು ಕಾಪಾಡುವನು; ಸ್ಮೃತಿ ಸಂಪ್ರಜಾನ್ಯಗಳಿಂದ ಕೂಡಿ ಸಂತುಷ್ಟನಾಗಿರುವನು.

[ಶ್ರಮಣನ ಸಾಧನೆ — ಶೀಲಸಂಪಾದನೆ — ಕ್ಷುಲ್ಲಶೀಲ]

"ಭಿಕ್ಷುವು ಶೀಲಸಂಪನ್ನನಾಗುವುದು ಹೇಗೆ, ಮಹಾರಾಜ? ಭಿಕ್ಷುವು ಪ್ರಾಣಿವಧೆಯನ್ನು ಬಿಟ್ಟು, ಸರ್ವ ಪ್ರಾಣಿಗಳಿಗೂ ದಯೆ

ಅನುಕಂಪಗಳನ್ನು ತೋರಿ ವಾಸಿಸುವನು. ಕೊಡದುದನ್ನು ತೆಗೆದು ಕೊಳ್ಳದೆ, ಕೊಟ್ಟುದನ್ನು ಮಾತ್ರ ಕೊಂಡು, ಕದಿಯದೆ, ಶುಚಿಯಾಗಿ ಬದುಕುವನು. ಅಬ್ರಹ್ಮಚರ್ಯವನ್ನು ಬಿಟ್ಟು, ಬ್ರಹ್ಮಚಾರಿಯಾಗಿ, ಸ್ತ್ರೀ ಕೂಟದಿಂದ ದೂರವಾಗಿ ನಡೆಯುವನು. ಸುಳ್ಳಾಡುವುದನ್ನು ಬಿಟ್ಟು, ಸತ್ಯವಾದಿಯಾಗುವನು, ಸತ್ಯಸಂಧನಾಗುವನು. ಪರರನ್ನು ನಿಂದಿಸು ವುದು ಬಿಟ್ಟು, ಅವರಿವರಲ್ಲಿ ಭೇದ ತರದೆ ಒಗ್ಗಟನ್ನು ಉಂಟುಮಾಡಿ ಬೆಳಸುವನು. ಒರಟು ಮಾತು ಬಿಟ್ಟು ಪ್ರಿಯವಾದ ಮಾತನಾಡುವನು. ಕೆಲಸಕ್ಕೆ ಬಾರದ ಮಾತು ಬಿಟ್ಟು ಪ್ರಯೋಜನಕರವಾದ ಮಾತ ನಾಡುವನು.

"ಅವನು ಬೀಜಗಳನ್ನಾಗಲಿ ಗಿಡಗಳನ್ನಾಗಲಿ ಕೊಲ್ಲುವುದಿಲ್ಲ. ಒಂದು ಹೊತ್ತು ಊಟಮಾಡಿ, ರಾತ್ರಿ ಊಟಮಾಡುವುದಿಲ್ಲ; ಅಕಾಲ ದಲ್ಲಿ ಊಟಮಾಡುವುದಿಲ್ಲ. ನೃತ್ಯ, ಗೀತ, ವಾದ್ಯ, ಮತ್ತು ತೆರತೆರದ ನೋಟಗಳಿಗೆ ಹೋಗುವುದಿಲ್ಲ. ಮಾಲೆ ಮುಂತಾದ ಒಡವೆ ತೊಡವೆ ಗಳನ್ನು ಧರಿಸುವುದಿಲ್ಲ. ಗಂಧ ಪೂಸುವುದಿಲ್ಲ. ಎತ್ತರವಾದ ದೊಡ್ಡ ಹಾಸಿಗೆಗಳನ್ನು ಬಳಸುವುದಿಲ್ಲ. ಚಿನ್ನ ಬೆಳ್ಳಿಗಳನ್ನು, ಬೇಯಿಸದ ಧಾನ್ಯ ಮಾಂಸಗಳನ್ನು, ಸ್ತ್ರೀ ಕುಮಾರಿಯರನ್ನು, ದಾಸೀ ದಾಸರು ಗಳನ್ನು ಅವನು ಸ್ವೀಕರಿಸುವುದಿಲ್ಲ. ಆಡು, ಕುರಿ, ಕೋಳಿ, ಹಂದಿ, ಆನೆ, ಹಸು, ಕುದುರೆ, ಹೆಣ್ಣುಕುದುರೆಗಳನ್ನು ಅವನು ಸ್ವೀಕರಿಸುವು ದಿಲ್ಲ. ಹೊಲಗದ್ದೆಗಳನ್ನು ಅವನು ತೆಗೆದುಕೊಳ್ಳುವುದಿಲ್ಲ. ಅವನು ದೂತನಾಗುವುದಿಲ್ಲ, ಮಧ್ಯಸ್ಥಿಕೆ ಮಾಡುವುದಿಲ್ಲ, ಲಂಚ ತೆಗೆದು ಕೊಳ್ಳುವುದಿಲ್ಲ, ವಂಚಿಸಿ ಮೋಸಮಾಡುವುದಿಲ್ಲ. ಅವನು ಗಾಯ ಗೊಳಿಸುವುದಿಲ್ಲ, ಕೊಲ್ಲುವುದಿಲ್ಲ, ಬಂಧಿಸುವುದಿಲ್ಲ, ದಾರಿ ಕಾಯುವು ದಿಲ್ಲ, ಸೂರೆಮಾಡುವುದಿಲ್ಲ, ಬಲಾತ್ಕಾರಪಡಿಸುವುದಿಲ್ಲ.

"ಇದು ಅವನ ಶೀಲವಾಗುವುದು.

[ಶ್ರಮಣನ ಸಾಧನೆ — ಶೀಲಸಂಪತ್ತಿ — ಮಧ್ಯಮಶೀಲ]

"ಭಿಕ್ಷುವು ಯಾವ ತೆರದ ಬೀಜಗಳನ್ನಾಗಲಿ ಮರಗಳನ್ನಾಗಲಿ ಸಂಹಾರಮಾಡದೆ ವಾಸಿಸುವನು. ಅನ್ನ, ಪಾನ, ವಸ್ತ್ರ, ಯಾನ ಮುಂತಾದ ಯಾವುದನ್ನೂ ಅವನು ಕೂಡಿಟ್ಟುಕೊಳ್ಳುವುದಿಲ್ಲ. ಅವನು

ಯಾವ ರೀತಿಯ ದೃಶ್ಯಗಳನ್ನೂ ನೋಡುವುದಿಲ್ಲ. ಪ್ರಮಾದಕ್ಕೆ ಸ್ಥಾನಗಳಾದ ದ್ಯೂತಗಳಲ್ಲಿ ಆತನು ಸಿಕ್ಕಿಬೀಳುವುದಿಲ್ಲ. ಯಾವ ತೆರದ ಎತ್ತರವಾದ ಹಾಸಿಗೆಯನ್ನಾಗಲಿ ದೊಡ್ಡ ಹಾಸಿಗೆಯನ್ನಾಗಲಿ ಆತನು ಬಳಸುವುದಿಲ್ಲ. ತೆರತೆರದ ಮಂಡನ ವಿಭೂಷಣಗಳಲ್ಲಿ ಯಾವುದನ್ನೂ ಆತನು ಉಪಯೋಗಿಸುವುದಿಲ್ಲ. ಯಾವ ರೀತಿಯ ಕೀಳುತೆರದ ಮಾತುಕತೆಗಳಿಗೂ ಆತನು ಸೇರುವುದಿಲ್ಲ. ವೃಥಾವಾದದಿಂದ, ಜಗಳ ತರುವ ಮಾತುಕತೆಗಳಿಂದ ಅವನು ವಿಮುಖನಾಗುವನು. ಅವನು ಯಾರಿಗೂ ದೌತ್ಯಮಾಡುವುದಿಲ್ಲ, ಮಧ್ಯಸ್ಥನಾಗುವುದಿಲ್ಲ. ಆತನು ಇತರರಂತೆ ಲಾಭಕ್ಕೆ ಆಶಿಸಿ ಮೋಸಮಾಡುವುದಿಲ್ಲ, ಮಂತ್ರ ಒದರುವುದಿಲ್ಲ.

"ಇದು ಅವನ ಶೀಲವಾಗುವುದು.

[ಶ್ರಮಣನ ಸಾಧನೆ—ಶೀಲಸಂಪಾದನೆ—ದೀರ್ಘಶೀಲ]

"ನಿಮಿತ್ತಗಳನ್ನು ನೋಡುವುದು, ಲಕ್ಷಣಗಳನ್ನು ತಿಳಿಸುವುದು, ಫಲ ನುಡಿಯುವುದು, ಜ್ಯೋತಿಷ ಹೇಳುವುದು, ಭವಿಷ್ಯ ಉಸುರುವುದು, ಮಂತ್ರಾದಿಗಳನ್ನು ಮಾಡಿ ಪ್ರಶ್ನೆ ಹೇಳುವುದು, ಶಾಂತಿಕರ್ಮಗಳನ್ನು ಮಾಡಿಸುವುದು, ಔಷಧಿಕೊಟ್ಟು ಚಿಕಿತ್ಸೆಮಾಡುವುದು—ಮುಂತಾದ ಈ ತೆರದ ಕೀಳು ವಿದ್ಯೆಗಳಿಂಧ ತಾನು ಜೀವಿಸದೆ, ಭಿಕ್ಷುವು ಮಿಥ್ಯಾಜೀವನದಿಂದ ದೂರವಾಗುವನು.

"ಇದು ಅವನ ಶೀಲವಾಗುವುದು.

"ಭಿಕ್ಷುವು ಹೀಗೆ ಶೀಲಸಂಪನ್ನನಾಗಿ, ತನ್ನ ಶೀಲಗಳನ್ನು ಸಂವರಿಸುವ ಮಟ್ಟಿಗೆ ಯಾವ ಕಡೆಯಿಂದಲೂ ಭಯ ಕಾಣುವುದಿಲ್ಲ. ಮೂರ್ಧಾಭಿಷೇಕವಾಗಿ ಶತ್ರುಗಳನ್ನು ಅಡಗಿಸಿದ ಕ್ಷತ್ರಿಯನು ತನ್ನ ಶತ್ರುಗಳಿಂದ ಮಟ್ಟಿಗೆ ಯಾವ ಕಡೆಯಿಂದಲೂ ಭಯಕಾಣನು ಹೇಗೋ, ಹಾಗೆಯೇ ಮಹಾರಾಜ, ಭಿಕ್ಷುವು ಶೀಲಸಂಪನ್ನನಾಗಿ ತನ್ನ ಶೀಲಸಂವರದ ಮಟ್ಟಿಗೆ ಯಾವ ಕಡೆಯಿಂದಲೂ ಭಯಕಾಣನು. ಅವನು ಈ ಆರ್ಯ ಶೀಲಸ್ಕಂಧದಿಂದ ಕೂಡಿ, ಅನವದ್ಯ ಸುಖವನ್ನು ಅಧ್ಯಾತ್ಮದಲ್ಲಿ ಅನುಭವಿಸುವನು. ಭಿಕ್ಷುವು ಹೀಗೆ ಶೀಲಸಂಪನ್ನನಾಗುವನು, ಮಹಾರಾಜ.

[ಶ್ರಮಣನ ಸಾಧನೆ – ಇಂದ್ರಿಯದ್ವಾರಗೋಪನ]

“ಭಿಕ್ಷುವು ಇಂದ್ರಿಯಗಳ ಬಾಗಿಲುಗಳನ್ನು ಕಾಪಾಡುವುದು ಹೇಗೆ, ಮಹಾರಾಜ? ಮಹಾರಾಜ, ಭಿಕ್ಷುವು ಕಣ್ಣಿನಿಂದ ರೂಪವನ್ನು ನೋಡಿದರೆ, ಅವನು ಅದರ ಸ್ಥೂಲ ಸ್ವರೂಪಕ್ಕಾಗಲಿ ಸೂಕ್ಷ್ಮವಿವರಗಳಿಗಾಗಲಿ ಸೋಲುವುದಿಲ್ಲ. ಈ ಕಣ್ಣಿನ ಇಂದ್ರಿಯವು ಸಂವರವಿಲ್ಲದೆ ತಿರುಗುವತನಕ, ಯಾವುದರಿಂದ ಪಾಪವೂ ಅಕುಶಲವೂ ಆದ ಧರ್ಮಗಳು, ಲೋಭ ಅತೃಪ್ತಿಗಳು ಹರಿದು ಬರುವುವೋ – ಅದರ ಸಂವರಕ್ಕಾಗಿ ದುಡಿಯುವನು; ಕಣ್ಣಿನ ಇಂದ್ರಿಯವನ್ನು ಕಾಪಾಡುವನು; ಆ ಇಂದ್ರಿಯದ ಸಂವರವನ್ನು ಸಾಧಿಸುವನು. ಅದರಂತೆಯೇ ಕಿವಿಯಿಂದ ಶಬ್ದ ಕೇಳಿದರೆ, ಮೂಗಿನಿಂದ ಗಂಧ ಮೂಸಿದರೆ, ನಾಲಗೆಯಿಂದ ರಸ ಸವಿದರೆ, ದೇಹದಿಂದ ಸ್ಪರ್ಶವನ್ನು ತಿಳಿದರೆ, ಮನಸ್ಸಿನಿಂದ ಧರ್ಮದ ವಿಜ್ಞಾನ ಪಡೆದರೆ; ಭಿಕ್ಷುವು ಅವುಗಳ ಸ್ಥೂಲಸ್ವರೂಪಕ್ಕಾಗಲಿ ಸೂಕ್ಷ್ಮವಿವರಗಳಿಗಾಗಲಿ ಸೋಲುವುದಿಲ್ಲ. ಈ ವಿವಿಧ ಇಂದ್ರಿಯಗಳು ಸಂವರವಿಲ್ಲದೆ ತಿರುಗುವತನಕ, ಯಾವುದರಿಂದ ಪಾಪವೂ ಅಕುಶಲವೂ ಆದ ಧರ್ಮಗಳು, ಲೋಭ ಅತೃಪ್ತಿಗಳು ಹರಿದು ಬರುವುವೋ – ಅವುಗಳ ಸಂವರಕ್ಕಾಗಿ ದುಡಿಯುವನು; ಆ ಇಂದ್ರಿಯಗಳನ್ನು ಕಾಪಾಡುವನು; ಆ ಇಂದ್ರಿಯಗಳ ಸಂವರವನ್ನು ಸಾಧಿಸುವನು. ಈ ರೀತಿಯ ಆರ್ಯ ಇಂದ್ರಿಯಸಂವರದಿಂದ ಕೂಡಿ ಅವ್ಯಾಸೇಕ ಸುಖವನ್ನು ಅಧ್ಯಾತ್ಮದಲ್ಲಿ ಅನುಭವಿಸುವನು.

“ಭಿಕ್ಷುವು ಹೀಗೆ ಇಂದ್ರಿಯದ್ವಾರಗೋಪನ ಮಾಡುವನು, ಮಹಾರಾಜ.

[ಶ್ರಮಣನ ಸಾಧನೆ – ಸ್ಮೃತಿ ಸಂಪ್ರಜಾನ್ಯ]

“ಭಿಕ್ಷುವು ಸ್ಮೃತಿ ಸಂಪ್ರಜಾನ್ಯಗಳಿಂದ ಕೂಡಿರುವುದು ಹೇಗೆ, ಮಹಾರಾಜ? ಮಹಾರಾಜ, ಭಿಕ್ಷುವು ಮುಂದೆ ಹೋಗಲಿ, ಹಿಂದೆ ಬರಲಿ, ಸಂಪ್ರಜಾನ್ಯದಿಂದ ಕೆಲಸಮಾಡುವನು. ಮುಂದೆ ನೋಡುವಾಗ, ಸುತ್ತ ನೋಡುವಾಗ, ಅಂಗಾಂಗಗಳನ್ನು ಮಡಿಸಿ ಬಿಚ್ಚುವಾಗ, ಸಂಘಾಟ ಪಾತ್ರೆ ಚೀವರಗಳನ್ನು ಧರಿಸುವಾಗ, ತಿನ್ನುವಾಗ, ಕುಡಿಯುವಾಗ, ಅಗಿಯುವಾಗ, ರುಚಿ ನೋಡುವಾಗ, ಮಲಮೂತ್ರ ಬಿಡುವಾಗ, ನಡೆವಾಗ, ನಿಂತಾಗ, ಕುಳಿತಾಗ, ಮಲಗಿದಾಗ, ಎಚ್ಚತ್ತಾಗ, ಮಾತ

ನಾಡಿದಾಗ, ಮೌನದಿಂದಿರುವಾಗ ಸಂಪ್ರಜಾನಕಾರಿಯಾಗಿರುವನು. ಭಿಕ್ಷುವು ಹೀಗೆ ಸ್ಮೃತಿ ಸಂಪ್ರಜಾನ್ಯಗಳಿಂದ ಕೂಡಿರುವನು, ಮಹಾರಾಜ.

[ಶ್ರಮಣನ ಸಾಧನೆ — ಸಂತುಷ್ಟಿ]

“ಭಿಕ್ಷುವು ಸಂತುಷ್ಟನಾಗಿರುವುದು ಹೇಗೆ, ಮಹಾರಾಜ? ಮಹಾರಾಜ, ಭಿಕ್ಷುವು ಮೈಗೆ ಸಾಕಷ್ಟು ಬಟ್ಟೆಯಿಂದ, ಹೊಟ್ಟೆಗೆ ಸಾಕಷ್ಟು ಭಿಕ್ಷೆಯಿಂದ ಸಂತುಷ್ಟನಾಗಿರುವನು. ಅವನು ಎಲ್ಲೆಲ್ಲಿ ಹೋದರೂ ಈ ಸಂತುಷ್ಟಿಯನ್ನು ತೆಗೆದುಕೊಂಡೇ ಹೋಗುವನು. ಮಹಾರಾಜ, ರೆಕ್ಕೆಯಿರುವ ಹಕ್ಕಿಯು ಎಲ್ಲೆಲ್ಲಿ ಹಾರಿದರೂ ತನ್ನ ರೆಕ್ಕೆಗಳನ್ನು ಹೊತ್ತುಕೊಂಡೇ ಹಾರುವಂತೆ, ಭಿಕ್ಷುವು ಎಲ್ಲೆಲ್ಲಿ ಹೋದರೂ ಸಂತುಷ್ಟಿಯನ್ನು ತೆಗೆದುಕೊಂಡೇ ಹೋಗುವನು. ಭಿಕ್ಷುವು ಹೀಗೆ ಸಂತುಷ್ಟನಾಗಿರುವನು, ಮಹಾರಾಜ.

[ಶ್ರಮಣನ ಸಾಧನೆ — ಏಕಾಂತವಾಸ]

“ಭಿಕ್ಷುವು, ಮಹಾರಾಜ, ಈ ಆರ್ಯ ಶೀಲಸ್ಕಂಧಗಳಿಂದ, ಈ ಆರ್ಯ ಇಂದ್ರಿಯ ಸಂವರದಿಂದ, ಈ ಆರ್ಯ ಸ್ಮೃತಿ ಸಂಪ್ರಜಾನ್ಯಗಳಿಂದ ಕೂಡಿ; ಕಾಡು, ಮರದ ಬುಡ, ಪರ್ವತ, ಕಂದರ, ಗಿರಿಗುಹೆ, ಶ್ಮಶಾನ, ವನಪ್ರಸ್ಥ, ಬಯಲಿನ ಹುಲ್ಲುಗುಡ್ಡೆ - ಮೊದಲಾದ ಏಕಾಂತಸ್ಥಳಗಳಲ್ಲಿ ಮಲಗುವನು, ಕೂತುಕೊಳ್ಳುವನು. ಊಟವಾದ ಮೇಲೆ ಭಿಕ್ಷಾಪಾತ್ರೆಯೊಡನೆ ಹಿಂದಿರುಗಿ, ಚಕ್ಕಳಬಕ್ಕಳ ಹಾಕಿ, ದೇಹವನ್ನು ಋಜುವಾಗಿರಿಸಿ, ಸ್ಮೃತಿಯನ್ನು ಪರಿಮುಖವಾಗಿ ಎತ್ತಿ ನಿಲ್ಲಿಸಿ ಕುಳಿತುಕೊಳ್ಳುವನು.

[ಶ್ರಮಣನ ಸಾಧನೆ — ಪಂಚ ನಿವಾರಣ ಅತಿಕ್ರಮ]

“ಭಿಕ್ಷುವು, ಮಹಾರಾಜ, ಲೋಕದ ಮೇಲಿನ ಅಭಿಧ್ಯೆಯನ್ನು ಬಿಟ್ಟು, ಅಭಿಧ್ಯೆ ಹೋದ ಚಿತ್ತದಿಂದ ವಿಹರಿಸುವನು. ಅಭಿಧ್ಯೆಯನ್ನು ಕಳೆದು ಚಿತ್ತವನ್ನು ಪರಿಶುದ್ಧಿಮಾಡುವನು. ವ್ಯಾಪಾದಪ್ರದೋಷವನ್ನು ಬಿಟ್ಟು, ಅದನ್ನು ಕಳೆದು ಚಿತ್ತವನ್ನು ಶುದ್ಧಿಗೊಳಿಸುವನು. ಸರ್ವ ಪ್ರಾಣಭೂತಗಳಿಗೂ ಹಿತವನ್ನು ಕೋರಿ, ಅನುಕಂಪವನ್ನು ತೋರುವನು. ಸ್ತ್ಯಾನಮಿದ್ಧಗಳನ್ನು ಬಿಟ್ಟು, ಅದನ್ನು ಕಳೆದು ವಿಹರಿಸುವನು. ಕಂಡುದನ್ನು ತಿಳಿಯುವವನಾಗಿ, ಸ್ಮೃತಿ ಸಂಪ್ರಜಾನ್ಯಗಳಿಂದ ಕೂಡಿ, ಸ್ತ್ಯಾನಮಿದ್ಧಗಳನ್ನು ಕಳೆದು ಚಿತ್ತವನ್ನು ಶುದ್ಧಿಗೊಳಿಸುವನು.

ಔದ್ಧತ್ಯ ಕೌಕೃತ್ಯಗಳನ್ನು ಬಿಟ್ಟು, ಉದ್ಧತಭಾವವಿಲ್ಲದೆ ವಿಹರಿಸುವನು. ಚಿತ್ತದ ಒಳಗೆ ಉಪಶಾಂತಿಯನ್ನು ನಿಲ್ಲಿಸಿ, ಔದ್ಧತ್ಯ ಕೌಕೃತ್ಯಗಳಿಂದ ಚಿತ್ತವನ್ನು ಶುದ್ಧಿಗೊಳಿಸುವನು. ವಿಚಿಕಿತ್ಸೆಯನ್ನು ಬಿಟ್ಟು, ದಾಟಿ, ವಿಹರಿಸುವನು. ಸುಂದರವಾದ ಧರ್ಮವನ್ನು ಕುರಿತು ಸಂದೇಹ ಸಂಶಯಗಳಿಲ್ಲದೆ, ವಿಚಿಕಿತ್ಸೆಯನ್ನು ಕಳೆದು ಚಿತ್ತವನ್ನು ಶುದ್ಧಿಮಾಡುವನು.

"ಮಹಾರಾಜ! ಪುರುಷನೊಬ್ಬನು ಸಾಲ ತೆಗೆದುಕೊಂಡು ಕೆಲಸಕ್ಕೆ ತೊಡಗುತ್ತಾನೆ. ಅವನ ಕೆಲಸ ಬೆಳೆದು ಹೆಚ್ಚಾಗುತ್ತದೆ. ಅವನು ಹಳೆಯ ಸಾಲವಷ್ಟನ್ನೂ ಕೊಟ್ಟುಬಿಡುವನು. ಆಗಲೂ ಅವನಿಗೆ ಹೆಂಡತಿಯನ್ನು ಸಾಕುವಷ್ಟು ಹಣ ಮಿಗುವುದು. ಆಗ 'ನಾನು ಹಿಂದೆ ಸಾಲ ತೆಗೆದುಕೊಂಡು ಕೆಲಸಕ್ಕೆ ತೊಡಗಿದೆ. ನನ್ನ ಕೆಲಸ ಬೆಳೆಯಿತು. ಹಳೆಯ ಸಾಲವಷ್ಟನ್ನೂ ಕೊಟ್ಟ ಮೇಲೆಯೂ ನನ್ನ ಹೆಂಡತಿಯನ್ನು ಸಾಕಲು ಹಣ ಮಿಕ್ಕಿದೆ' ಎಂದು ಅವನಿಗೆ ಎನಿಸುವುದು. ಅದರಿಂದ ಅವನಿಗೆ ಸಂತೋಷವಾಗುವುದು, ತೃಪ್ತಿಯಾಗುವುದು.

"ಮಹಾರಾಜ! ಪುರುಷನೊಬ್ಬನು ಕಾಯಿಲೆಬಿದ್ದು ದುಃಖಪಡುತ್ತಾನೆ. ಅವನಿಗೆ ಬಲವಾದ ರೋಗವಿದೆ; ಅನ್ನ ಅರಗುವುದಿಲ್ಲ; ದೇಹಬಲ ಕೊಂಚವೂ ಇಲ್ಲ. ಕೊಂಚ ಕಾಲದ ಮೇಲೆ ಅವನ ಕಾಯಿಲೆ ಬಿಡುವುದು, ಅನ್ನ ಅರಗುವುದು, ದೇಹದಲ್ಲಿ ಬಲ ಬರುವುದು. ಆಗ, ತಾನು ಹಿಂದಿದ್ದುದನ್ನೂ ಇಂದಿರುವುದನ್ನೂ ಕಂಡು, ಅವನಿಗೆ ಸಂತೋಷವಾಗುವುದು, ತೃಪ್ತಿಯಾಗುವುದು.

"ಮಹಾರಾಜ! ಪುರುಷನೊಬ್ಬನು ಸೆರೆಯಲ್ಲಿ ಕಟ್ಟಬಿದ್ದಿದ್ದಾನೆ. ಕೊಂಚ ಕಾಲದನಂತರ ಕ್ಷೇಮವಾಗಿ, ಏನೂ ವ್ಯಯವಿಲ್ಲದೆ, ಅವನ ಐಶ್ವರ್ಯಕ್ಕೆ ಹಾನಿಯಾಗದೆ, ಅವನ ಬಂಧನ ಬಿಡುವುದು. ಆಗ, ತಾನು ಹಿಂದಿದ್ದುದನ್ನೂ ಇಂದಿರುವುದನ್ನೂ ಕಂಡು, ಅವನಿಗೆ ಸಂತೋಷವಾಗುವುದು, ತೃಪ್ತಿಯಾಗುವುದು.

"ಮಹಾರಾಜ! ಪುರುಷನೊಬ್ಬನು ದಾಸನಾಗಿದ್ದಾನೆ. ಅವನು ಆತ್ಮಾಧೀನನಲ್ಲ, ಪರಾಧೀನ; ಬೇಕೆಂದ ಕಡೆ ಹೋಗಲಾರ. ಕೆಲಕಾಲದ ಮೇಲೆ ಅವನ ದಾಸತ್ವ ಹೋಗುವುದು. ಅವನು ಆತ್ಮಾಧೀನನಾಗಿ, ಪರಾಧೀನನಲ್ಲದೆ, ದಾಸತ್ವ ಹೋದವನಾಗಿ, ಬೇಕೆಂದ ಕಡೆ ಹೋಗ

ಬಲ್ಲನು. ಆಗ, ತಾನು ಹಿಂದಿದ್ದುದನ್ನೂ ಇಂದಿರುವುದನ್ನೂ ಕಂಡು, ಅವನಿಗೆ ಸಂತೋಷವಾಗುವುದು, ತೃಪ್ತಿಯಾಗುವುದು.

"ಮಹಾರಾಜ! ಧನಭೋಗಗಳುಳ್ಳ ಪುರುಷನೊಬ್ಬನು ನೀರಿಲ್ಲದ ಬಂಜರುಭೂಮಿಯ ಹಾದಿಯಲ್ಲಿ ನಡೆಯುತ್ತಿದ್ದಾನೆ. ಅಲ್ಲಿ ದುರ್ಭಿಕ್ಷ, ಬಹು ಭಯ. ಕೊಂಚ ಕಾಲದ ಬಳಿಕ ಅವನು ಆ ಬಂಜರುಭೂಮಿಯನ್ನು ದಾಟ ಸ್ವಸ್ತವಾಗಿ ಗ್ರಾಮದ ಬಳಿಗೆ ಬರುವನು. ಅಲ್ಲಿ ಕ್ಷೇಮ, ಭಯವಿಲ್ಲ. ಆಗ, ತಾನು ಹಿಂದಿದ್ದುದನ್ನೂ ಇಂದಿರುವುದನ್ನೂ ಕಂಡು, ಅವನಿಗೆ ಸಂತೋಷವಾಗುವುದು, ತೃಪ್ತಿಯಾಗುವುದು.

"ಅದರಂತೆಯೇ, ಮಹಾರಾಜ, ಅಭಿಧ್ಯೆ, ವ್ಯಾಪಾದಪ್ರದೋಷ, ಸ್ತ್ಯಾನಮಿದ್ಧ, ಔದ್ಧೃತ್ಯ ಕೌಕೃತ್ಯ, ವಿಚಿಕಿತ್ಸೆ—ಎಂಬ ಐದು ನಿವಾರಣಗಳು ಆತ್ಮದಿಂದ ಹೋಗದಿರುವವರೆಗೆ, ಭಿಕ್ಷುವು ತಾನು ಋಣ, ರೋಗ, ಬಂಧನಾಗಾರ, ದಾಸತ್ವ, ಕಾಂತಾರಗಳಲ್ಲಿ ಇದ್ದಂತೆ ತಿಳಿಯುವನು. ಪಂಚನಿವಾರಣಗಳು ಹೋದಮೇಲೆ, ತಾನು ಆನೃಣ್ಯ, ಆರೋಗ್ಯ, ಬಂಧನಮೋಕ್ಷ, ಭುಜಿಷ್ಯ, ಕ್ಷೇಮಾಂತ ಭೂಮಿಗಳಲ್ಲಿ ಇದ್ದಂತೆ ಕಾಣುವನು.

[ಮೊದಲನೆಯ ಶ್ರಾಮಣ್ಯಫಲ—ಪ್ರಥಮಧ್ಯಾನ]

"ಈ ಐದು ನಿವಾರಣಗಳು ಹೋದುದನ್ನು ಕಂಡು ಅವನಿಗೆ ಪ್ರಮೋದ ಹುಟ್ಟುವುದು. ಪ್ರಮೋದದಿಂದ ಪ್ರೀತಿ ಹುಟ್ಟುವುದು. ಪ್ರೀತಿಯಿಂದ ದೇಹವು ಪ್ರಶ್ರಬ್ಧವಾಗುವುದು. ದೇಹವು ಪ್ರಶ್ರಬ್ಧವಾದುದರಿಂದ ಅವನು ಸುಖವನ್ನು ಅನುಭವಿಸುವನು. ಆ ಸುಖದಲ್ಲಿ ಚಿತ್ತವನ್ನು ನಿಲ್ಲಿಸುವನು. ತಾನು ಕಾಮಗಳಿಂದ ಬೇರೆಯಾಗಿ, ಕುಶಲವಲ್ಲದ ಧರ್ಮಗಳಿಂದ ದೂರನಾಗಿ ಪ್ರಥಮಧ್ಯಾನವನ್ನು ಸಂಪಾದಿಸಿ ವಿಹರಿಸುವನು. ಇದು ವಿವೇಕದಿಂದ ಹುಟ್ಟಿದ ಪ್ರೀತಿ ಸುಖಗಳಿಂದ ಕೂಡಿದುದು; ಇಲ್ಲಿ ವಿತರ್ಕ ವಿಚಾರಗಳು ಇನ್ನೂ ಉಂಟು.

"ಮಹಾರಾಜ, ದಕ್ಷನಾದ ಸ್ನಾಪಕನಾಗಲಿ ಅವನ ಶಿಷ್ಯನಾಗಲಿ ಕಂಚಿನ ಪಾತ್ರೆಯಲ್ಲಿ ಸ್ನಾನೀಯ ಚೂರ್ಣವನ್ನು ಚಿಮುಕಿಸಿ, ನೀರು ಚೆನ್ನಾಗಿ ತಳಿದು ಕಲಸಿದರೆ, ಆ ಸ್ನಾನೀಯ ಚೂರ್ಣದ ಉಂಡೆಯು ನೀರು ಜಿನುಗದಂತೆ, ನೀರಿನಿಂದ ನೆನೆದು, ನೀರಿನಿಂದ ತುಂಬಿ, ಒಳಗು ಹೊರಗುಗಳಲ್ಲಿ ನೀರಿನಿಂದ ಆವರಿಸಲ್ಪಡುವುದು.

“ಅದರಂತೆ, ಮಹಾರಾಜ, ವಿವೇಕದಿಂದ ಹುಟ್ಟಿದ ಪ್ರೀತಿಸುಖಗಳು ಸೋಕದ ಭಾಗವು ತನ್ನ ಇಡೀ ದೇಹದಲ್ಲಿ ಕೊಂಚವೂ ಇಲ್ಲದ ಹಾಗೆ, ಭಿಕ್ಷುವು ಆ ವಿವೇಕಜವಾದ ಪ್ರೀತಿಸುಖಗಳನ್ನು ದೇಹದಲ್ಲೆಲ್ಲ ಹರಿಯಿಸುವನು; ದೇಹದ ಸುತ್ತ ಹರಿಯಿಸುವನು; ದೇಹದ ತುಂಬ ತುಂಬುವನು; ದೇಹದಲ್ಲೆಲ್ಲ ಹರಡುವನು.

“ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಎರಡನೆಯ ಶ್ರಾಮಣ್ಯಫಲ—ದ್ವಿತೀಯಧ್ಯಾನ]

“ಮುಂದೆ, ಮಹಾರಾಜ, ಭಿಕ್ಷುವು ವಿತರ್ಕ ವಿಚಾರಗಳನ್ನು ಉಪಶಮಗೊಳಿಸಿ ದ್ವಿತೀಯಧ್ಯಾನವನ್ನು ಸಂಪಾದಿಸಿ ವಿಹರಿಸುವನು. ಅದು ಸಮಾಧಿಯಿಂದ ಹುಟ್ಟಿದ ಪ್ರೀತಿಸುಖಗಳಿಂದ ಕೂಡಿದುದು; ಅಲ್ಲಿ ವಿತರ್ಕ ವಿಚಾರಗಳಿಲ್ಲ. ಅಲ್ಲಿ ಅಧ್ಯಾತ್ಮವಾದ ಚಿತ್ತವು ಸಂಪ್ರಸನ್ನವಾಗುವುದು, ಏಕೋದಿಭಾವ ಬರುವುದು.

“ಮಹಾರಾಜ, ನೀರಿನ ಕೊಳವಿದೆ. ನೀರು ಕೆಳಗಿಂದ ಚಿಮ್ಮುತ್ತಿದೆ. ಆದಕ್ಕೆ ಪೂರ್ವದಲ್ಲಾಗಲಿ, ಪಶ್ಚಿಮದಲ್ಲಾಗಲಿ, ಉತ್ತರದಲ್ಲಾಗಲಿ, ದಕ್ಷಿಣದಲ್ಲಾಗಲಿ ನೀರು ಬರುವ ದಾರಿಯಿಲ್ಲ. ದೇವತೆ ಕೂಡ ಕಾಲ ಕಾಲಕ್ಕೆ ಅದರ ಮೇಲೆ ಮಳೆ ಸುರಿಯುವುದಿಲ್ಲ. ಆದರೂ ಶೀತವಾದ ಜಲಧಾರೆಯು ಆ ಕೊಳದಿಂದ ಮೇಲೆದ್ದು, ಅದರಲ್ಲಿ ಹರಿದು, ಅದರ ಸುತ್ತ ಹರಿದು, ಅದರ ತುಂಬ ತುಂಬಿ, ಅದರಲ್ಲಿ ಹರಡುವುದು.

“ಅದರಂತೆ, ಮಹಾರಾಜ, ಸಮಾಧಿಯಿಂದ ಹುಟ್ಟಿದ ಪ್ರೀತಿಸುಖಗಳು ಸೋಕದ ಭಾಗವು ತನ್ನ ಇಡೀ ದೇಹದಲ್ಲಿ ಕೊಂಚವೂ ಇಲ್ಲದಂತೆ, ಭಿಕ್ಷುವು ಸಮಾಧಿಯಿಂದ ಹುಟ್ಟಿದ ಆ ಪ್ರೀತಿಸುಖಗಳನ್ನು ದೇಹದಲ್ಲೆಲ್ಲ ಹರಿಸುವನು; ದೇಹದ ಸುತ್ತ ಹರಿಯಿಸುವನು; ದೇಹದ ತುಂಬ ತುಂಬುವನು; ದೇಹದಲ್ಲೆಲ್ಲ ಹರಡುವನು.

“ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಮೂರನೆಯ ಶ್ರಾಮಣ್ಯಫಲ — ತೃತೀಯಧ್ಯಾನ]

"ಮುಂದೆ, ಮಹಾರಾಜ, ಭಿಕ್ಷುವು ಪ್ರೀತಿಯಲ್ಲಿ ರಮಿಸದೆ ಅದನ್ನು ಬಿಡುವನು. ಬಿಟ್ಟು, ಉಪೇಕ್ಷೆಯಿಂದ ವಿಹರಿಸುವನು. ಸ್ಮೃತಿ ಸಂಪ್ರಜಾನ್ಯಗಳಿಂದ ಕೂಡಿ ತೃತೀಯಧ್ಯಾನವನ್ನು ಸಂಪಾದಿಸಿ ವಿಹರಿಸುವನು. ಅಲ್ಲಿ ಸುಖ ಮಾತ್ರ ಉಂಟು. 'ಉಪೇಕ್ಷೆ ಸ್ಮೃತಿಗಳಿರುವವನು ಸುಖವಾಗಿ ವಿಹರಿಸುವನು' ಎಂದು ಆರ್ಯರು ಆ ಸುಖವನ್ನು ವಿವರಿಸುವರು. ಭಿಕ್ಷುವು ಆ ಸುಖವನ್ನು ದೇಹದಲ್ಲಿ ಅನುಭವಿಸುವನು.

"ಮಹಾರಾಜ, ಒಂದು ಸರಸ್ಸಿದೆ. ಅಲ್ಲಿ ಉತ್ಪಲ, ಪದ್ಮ, ಪುಂಡರೀಕಗಳಿವೆ. ಅವು ನೀರಿನಲ್ಲಿ ಹುಟ್ಟುವುವು, ನೀರಿನಲ್ಲಿ ಬೆಳೆಯುವುವು, ನೀರಿನ ಮೇಲೆ ಬರುವುದಿಲ್ಲ; ಒಳಗಿನ ಆಳದಿಂದ ಪೋಷಣೆಪಡೆಯುತ್ತವೆ. ಆ ಉತ್ಪಲ, ಪದ್ಮ, ಪುಂಡರೀಕಗಳಲ್ಲಿ ಶೀತಜಲವು ಸೋಕದ ಭಾಗವು ಕೊಂಚವೂ ಇಲ್ಲದ ಹಾಗೆ, ಅದರ ಮೇಲುತುದಿಯಿಂದ ಕೆಳತುದಿಯವರೆಗೆ ಶೀತಜಲವು ಅದರಲ್ಲಿ ಹರಿದು, ಅದರ ಸುತ್ತ ಹರಿದು, ಅದರ ತುಂಬ ತುಂಬಿ, ಅದರಲ್ಲಿ ಹರಡುವುದು.

"ಅದರಂತೆಯೇ, ಮಹಾರಾಜ, ಪ್ರೀತಿಯಿಲ್ಲದ ಸುಖವು ಸೋಕದ ಭಾಗವು ತನ್ನ ಇಡೀ ದೇಹದಲ್ಲಿ ಕೊಂಚವೂ ಇಲ್ಲದಂತೆ, ಭಿಕ್ಷುವು ಪ್ರೀತಿಯಿಲ್ಲದ ಆ ಸುಖವನ್ನು ತನ್ನ ದೇಹದಲ್ಲೆಲ್ಲ ಹರಿಸುವನು; ದೇಹದ ಸುತ್ತ ಹರಿಯಿಸುವನು; ದೇಹದ ತುಂಬ ತುಂಬುವನು; ದೇಹದಲ್ಲೆಲ್ಲ ಹರಡುವನು.

"ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ನಾಲ್ಕನೆಯ ಶ್ರಾಮಣ್ಯಫಲ — ಚತುರ್ಥಧ್ಯಾನ]

"ಮುಂದೆ, ಮಹಾರಾಜ, ಭಿಕ್ಷುವು ಸುಖವನ್ನು ಬಿಡುವನು, ದುಃಖವನ್ನು ಬಿಡುವನು; ಹಿಂದೆ ತನಗಿದ್ದ ಮನಸ್ಸಿನ ಹಿಗ್ಗು ಕುಗ್ಗುಗಳನ್ನು ತೊರೆಯುವನು; ಚತುರ್ಥಧ್ಯಾನವನ್ನು ಸಂಪಾದಿಸಿ ವಿಹರಿಸುವನು. ಅಲ್ಲಿ ದುಃಖವಿಲ್ಲ, ಸುಖವಿಲ್ಲ. ಅಲ್ಲಿ ಪರಿಶುದ್ಧವಾದ ಉಪೇಕ್ಷೆಯುಂಟು, ಸ್ಮೃತಿಯುಂಟು.

"ಮಹಾರಾಜ, ಪುರುಷನೊಬ್ಬನು ಶುಭ್ರವಾದ ಬಟ್ಟೆಗಳಿಂದ ತಲೆಯಿಂದ ಕಾಲುವರೆಗೂ ಮೈಮುಚ್ಚಿ ಕುಳಿತಿದ್ದಾನೆ; ಆ ಶುಭ್ರವಾದ ಬಟ್ಟೆಯು ತಾಗದ ಭಾಗವೇ ಅವನ ಇಡೀ ದೇಹದಲ್ಲಿಲ್ಲ.

"ಅದರಂತೆ, ಮಹಾರಾಜ, ಚಿತ್ತದ ಪರಿಶುದ್ಧಿಯೂ ಪರಿಶುಭ್ರತೆಯೂ ಸೋಕದ ಭಾಗವು ತನ್ನ ಇಡೀ ದೇಹದಲ್ಲಿ ಸ್ವಲ್ಪವೂ ಇಲ್ಲದಂತೆ, ಭಿಕ್ಷುವು ಚಿತ್ತದ ಪರಿಶುದ್ಧಿಯನ್ನೂ ಪರಿಶುಭ್ರತೆಯನ್ನೂ ತನ್ನ ದೇಹದಲ್ಲೆಲ್ಲ ಹರಡುವನು.

"ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟ ಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಐದನೆಯ ಶ್ರಾಮಣ್ಯಫಲ — ಜ್ಞಾನದರ್ಶನ]

"ಆಗ ಚಿತ್ತವು ಒಂದು ಕಡೆ ಅಚಲವಾಗಿ ನಿಲ್ಲುವುದು; ಪರಿಶುದ್ಧವಾಗುವುದು; ಪರಿಶುಭ್ರವಾಗುವುದು; ಕೊಳೆಗಳು ಹೋಗುವುದು; ಉಪಕ್ಲೇಶಗಳು ಮರೆಯಾಗುವುವು; ಬೇಕೆಂದಂತೆ ತಿರುಗಿಸುವುದಕ್ಕೆ ಅನುಕೂಲವಾಗುವ ಹಾಗೆ ಮೃದುವಾಗುವುದು; ಕೆಲಸಕ್ಕೆ ತಕ್ಕುದಾಗುವುದು; ಸ್ಥಿತವಾಗುವುದು; ತೃಷ್ಣೆಯು ಮಾಯವಾಗಿ, ಚಲನವಿಲ್ಲದೆ ಸ್ಥಿರವಾಗುವುದು.

"ಆಗ, ಚಿತ್ತವು ಮೇಲೆ ಹೇಳಿದಂತೆ ಹದವಾಗಲು, ಭಿಕ್ಷುವು ಜ್ಞಾನದರ್ಶನಕ್ಕಾಗಿ ತನ್ನ ಚಿತ್ತವನ್ನು ಒಯ್ದು ಬಗ್ಗಿಸುವನು.

"ಮಹಾರಾಜ, ಚೆನ್ನಾದ ನೀರೋಟದಿಂದ ಹೊಳೆಯುವ ಎಂಟು ಮುಖದ ವೈಡೂರ್ಯಮಣಿಯಿದೆ. ಅದನ್ನು ಕಡೆದು ಮೆರಗುಕೊಟ್ಟದೆ. ಅದು ಸ್ವಚ್ಛವಾಗಿ, ದೋಷವಿಲ್ಲದೆ, ಶುಭ್ರವಾಗಿ, ಸರ್ವಾಕಾರಸಂಪನ್ನವಾಗಿದೆ. ಅದರಲ್ಲಿ ನೀಲಿ, ಕಿತ್ತಿಳೆ, ಕೆಂಪು, ಬಿಳುಪು, ಹಳದಿ ಬಣ್ಣಗಳ ದಾರವನ್ನು ಪೋಣಿಸಿದರೆ, ಕಣ್ಣಿರುವ ಪುರುಷನು ಅದನ್ನು ಕೈಗೆ ತೆಗೆದುಕೊಂಡು, 'ಈ ವೈಡೂರ್ಯಮಣಿ ಇಂತಹದು. ಇದರಲ್ಲಿ ಪೋಣಿಸಿರುವ ದಾರ ಇಂತಹದು' — ಎಂದು ಕಾಣುವನು.

"ಅದರಂತೆಯೇ, ಮಹಾರಾಜ, ಜ್ಞಾನದರ್ಶನಕ್ಕೆ ಚಿತ್ತವನ್ನು ಒಯ್ದು ಬಗ್ಗಿಸಿದ ಭಿಕ್ಷುವು 'ಈ ನನ್ನ ಕಾಯವು ರೂಪವುಳ್ಳದ್ದು, ನಾಲ್ಕು ಮಹಾಭೂತಗಳಿಂದ ಆದುದು, ತಾಯಿತಂದೆಯರಿಂದ ಹುಟ್ಟಿದುದು, ಅನ್ನ ಗಂಜಿ

ಗಳಿಂದ ಬೆಳೆದುದು; ಅನಿತ್ಯವಾಗಿ, ಸವೆದು, ಮುರಿದು, ಒಡೆದು, ನಾಶವಾಗುವುದು ಇದರ ಧರ್ಮ; ಇದರಲ್ಲಿ ನನ್ನ ವಿಜ್ಞಾನ ಸಿಕ್ಕಿಕೊಂಡಿದೆ, ಪ್ರತಿಬದ್ಧವಾಗಿದೆ'—ಎಂದು ಚೆನ್ನಾಗಿ ತಿಳಿಯುವನು.

"ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟ ಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಆರನೆಯ ಶ್ರಾಮಣ್ಯಫಲ – ಮನೋಮಯಕಾಯ ನಿರ್ಮಾಣ]

"ಚಿತ್ತವು ಮೇಲೆ ಹೇಳಿದಂತೆ ಹದವಾಗಲು, ಭಿಕ್ಷುವು ಮನೋಮಯಕಾಯ ನಿರ್ಮಾಣಕ್ಕಾಗಿ ತನ್ನ ಚಿತ್ತವನ್ನು ಒಯ್ದು ಬಗ್ಗಿಸುವನು.

"ಮಹಾರಾಜ, ಪುರುಷನೊಬ್ಬನು ಜೊಂಡಿನಿಂದ ತಿರುಳನ್ನು ಹೊರಗೆಳೆದರೆ, 'ಇದು ಜೊಂಡು, ಇದು ತಿರುಳು' ಎಂದು ಅವನಿಗೆ ತಿಳಿಯುವುದು. ಹಾಗೆಯೇ ಒರೆಯಿಂದ ಕತ್ತಿಯನ್ನು ಎಳೆದರೆ, 'ಇದು ಒರೆ, ಇದು ಕತ್ತಿ' ಎಂದು ಅವನಿಗೆ ತಿಳಿಯುವುದು. ಅಂತೆಯೇ ಪರೆಯಿಂದ ಹಾವನ್ನು ಎತ್ತಿದರೆ, 'ಇದು ಪರೆ, ಇದು ಹಾವು' ಎಂದು ಅವನಿಗೆ ತಿಳಿಯುವುದು.

"ಅದರಂತೆಯೇ, ಮಹಾರಾಜ, ಭಿಕ್ಷುವು ಈ ತನ್ನ ಕಾಯದಿಂದ ಬೇರೆಯ ಕಾಯವನ್ನು ನಿರ್ಮಿಸುವನು. ಅದಕ್ಕೆ ರೂಪವುಂಟು; ಅದು ಮನೋಮಯವಾದದ್ದು; ಅದಕ್ಕೆ ಸರ್ವಾಂಗ ಪ್ರತ್ಯಂಗಗಳೂ ಉಂಟು; ಅದಕ್ಕೆ ಯಾವ ಇಂದ್ರಿಯವೂ ಹೀನವಾಗಿರುವುದಿಲ್ಲ.

"ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟ ಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಏಳನೆಯ ಶ್ರಾಮಣ್ಯಫಲ – ಋದ್ಧಿವಿಧ]

"ಚಿತ್ತವು ಮೇಲೆ ಹೇಳಿದಂತೆ ಹದವಾಗಲು, ಭಿಕ್ಷುವು ವಿಧವಿಧದ ಋದ್ಧಿಗಳಿಗಾಗಿ ತನ್ನ ಚಿತ್ತವನ್ನು ಒಯ್ದು ಬಗ್ಗಿಸುವನು.

"ಮಹಾರಾಜ, ದಕ್ಷನಾದ ಕುಂಬಾರನಾಗಲಿ, ಅವನ ಶಿಷ್ಯನಾಗಲಿ ಹದಗೊಳಿಸಿದ ಮಣ್ಣಿನಿಂದ ಬಯಸಿದ ಆಕಾರದ ಪಾತ್ರೆಗಳನ್ನು ಮಾಡಿ ಎತ್ತಿಕೊಡಬಲ್ಲನು. ಅದರಂತೆಯೇ ದಕ್ಷನಾದ ದಂತಕಾರನಾಗಲಿ, ಸುವರ್ಣಕಾರನಾಗಲಿ, ಅವರ ಶಿಷ್ಯನಾಗಲಿ, ಹದಗೊಳಿಸಿದ ದಂತ

ಚಿನ್ನಗಳಿಂದ ಬಯಸಿದ ಆಕಾರದ ದಂತಪಾತ್ರೆ ಸುವರ್ಣಪಾತ್ರೆಗಳನ್ನು ಮಾಡಿ ಎತ್ತಿಕೊಡಬಲ್ಲನು.

“ಅದರಂತೆಯೇ, ಮಹಾರಾಜ, ಭಿಕ್ಷುವು ಋದ್ಧಿವಿಧಗಳಿಗಾಗಿ ತನ್ನ ಚಿತ್ತವನ್ನು ಒಯ್ದು ಬಗ್ಗಿಸಿ, ಅನೇಕ ತೆರನಾದ ವಿಧವಿಧದ ಋದ್ಧಿಗಳು ಪ್ರತಿಯೊಂದನ್ನೂ ಅನುಭವಿಸುವನು: ಒಂದಾಗಿದ್ದು ಬಹುವಾಗುವನು, ಬಹುವಾಗಿದ್ದು ಒಂದಾಗುವನು; ದೃಶ್ಯನಾಗುವನು, ಅದೃಶ್ಯನಾಗುವನು; ಗೋಡೆಯ ಹಿಂದಕ್ಕೆ, ಪ್ರಾಕಾರದ ಹಿಂದಕ್ಕೆ, ಪರ್ವತದ ಹಿಂದಕ್ಕೆ—ಆಕಾಶದಲ್ಲಿ ಹೇಗೋ ಹಾಗೆ—ಅಂಟಿಕೊಳ್ಳದಂತೆ ಹೋಗುವನು; ನೀರಿನಲ್ಲಿ ಹೇಗೋ ಹಾಗೆ ಭೂಮಿಯಲ್ಲಿ ಮುಳುಗಿ ಮೇಲೇಳುವನು; ಭೂಮಿಯಲ್ಲಿ ಹೇಗೋ ಹಾಗೆ ನೀರನ್ನು ಮುರಿಯದೆ ನೀರಿನ ಮೇಲೆ ಹೋಗುವನು; ರೆಕ್ಕೆಯಿರುವ ಹಕ್ಕಿಯ ಹಾಗೆ ಆಕಾಶದಲ್ಲಿ ಚಕ್ಕಳಬಕ್ಕಳ ಹಾಕಿ ಹೋಗುವನು; ಮಹಾಋದ್ಧಿಯುಳ್ಳ, ಮಹಾನುಭಾವವುಳ್ಳ ಚಂದ್ರಸೂರ್ಯರನ್ನೂ ಕೈಗಳಿಂದ ಮುಟ್ಟಿ ಸವರುವನು; ದೇಹದೊಡನೆ ಬ್ರಹ್ಮಲೋಕವಿರುವವರೆಗೂ ತಿರುಗುವನು.

“ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟ ಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಎಂಟನೆಯ ಶ್ರಾಮಣ್ಯಫಲ—ದಿವ್ಯಶ್ರೋತ್ರ]

“ಚಿತ್ತವು ಮೇಲೆ ಹೇಳಿದಂತೆ ಹದವಾಗಲು, ಭಿಕ್ಷುವು ದಿವ್ಯಶ್ರೋತ್ರಕ್ಕಾಗಿ ತನ್ನ ಚಿತ್ತವನ್ನು ಒಯ್ದು ಬಗ್ಗಿಸುವನು.

“ಮಹಾರಾಜ, ಹೆದ್ದಾರಿಯಲ್ಲಿ ಹೋಗುವ ಪುರುಷನು ಭೇರಿ, ಮೃದಂಗ, ಶಂಖ, ಪ್ರಣವ, ಡಿಂಡಿಮಗಳ ಶಬ್ದಗಳನ್ನು ಕೇಳಿದರೆ, ‘ಇದು ಭೇರಿಯ ಶಬ್ದ, ಇದು ಮೃದಂಗ ಶಬ್ದ, ಇದು ಶಂಖದ್ದು, ಇದು ಪ್ರಣವದ್ದು, ಇದು ಡಿಂಡಿಮದ್ದು’ ಎಂದು ಅವನಿಗೆ ತಿಳಿಯುವುದು.

“ಅದರಂತೆಯೇ, ದಿವ್ಯಶ್ರೋತ್ರಧಾತುವಿಗೆ ಚಿತ್ತವನ್ನು ಒಯ್ದು ಬಗ್ಗಿಸಿದ ಭಿಕ್ಷುವು, ಆ ವಿಶುದ್ಧವಾದ, ಮನುಷ್ಯರ ಕಿವಿಯನ್ನು ಮೀರಿಸಿದ ದಿವ್ಯಶ್ರೋತ್ರಧಾತುವಿನಿಂದ—ದಿವ್ಯವಾದುದನ್ನೂ ಮಾನುಷವಾದುದನ್ನೂ ದೂರದುದನ್ನೂ ಹತ್ತಿರದುದನ್ನೂ—ಎರಡೂ ಶಬ್ದಗಳನ್ನು ಕೇಳುವನು.

"ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಒಂಬತ್ತನೆಯ ಶ್ರಾಮಣ್ಯಫಲ – ಚಿತ್ತಪರೀಕ್ಷಾಜ್ಞಾನ]

"ಚಿತ್ತವು ಮೇಲೆ ಹೇಳಿದಂತೆ ಹದವಾಗಲು, ಭಿಕ್ಷುವು ಚಿತ್ತ ಪರೀಕ್ಷಾಜ್ಞಾನಕ್ಕಾಗಿ ತನ್ನ ಚಿತ್ತವನ್ನು ಒಯ್ದು ಬಗ್ಗಿಸುವನು.

"ಮಹಾರಾಜ, ಸ್ತ್ರೀಯಾಗಲಿ ಪುರುಷನಾಗಲಿ, ಪ್ರಾಯದವ ನಾಗಲಿ ಯುವಕನಾಗಲಿ, ಹೊಳೆಯುವ ಕನ್ನಡಿಯಲ್ಲೋ ಪರಿಶುದ್ಧವೂ ಪರಿಶುಭ್ರವೂ ಸ್ಫುಟವೂ ಆದ ನೀರಿನ ಪಾತ್ರೆಯಲ್ಲೋ ತನ್ನ ಮುಖವನ್ನು ಕುರಿತು ನೋಡಿದರೆ; ಮಚ್ಚೆಯಿದ್ದರೆ ಮಚ್ಚೆಯಿದೆಯೆಂದು ತಿಳಿಯುತ್ತಾನೆ, ಮಚ್ಚೆಯಿಲ್ಲದಿದ್ದರೆ ಮಚ್ಚೆಯಿಲ್ಲವೆಂದು ತಿಳಿಯುತ್ತಾನೆ.

"ಆದರಂತೆ, ಮಹಾರಾಜ, ಚಿತ್ತಪರೀಕ್ಷಾಜ್ಞಾನಕ್ಕೆ ತನ್ನ ಚಿತ್ತವನ್ನು ಒಯ್ದ ಭಿಕ್ಷುವು ತನ್ನ ಚಿತ್ತದಿಂದ ಇತರ ಸತ್ತ್ವಗಳ, ಪುದ್ಗಲಗಳ ಚಿತ್ತ ಗಳನ್ನು ಹೊಕ್ಕು ತಿಳಿಯುವನು. 'ಈ ಚಿತ್ತದಲ್ಲಿ ರಾಗವುಂಟು, ಈ ಚಿತ್ತದಲ್ಲಿ ರಾಗವಿಲ್ಲ; ಇಲ್ಲಿ ದ್ವೇಷವುಂಟು, ಇಲ್ಲಿ ದ್ವೇಷವಿಲ್ಲ; ಇಲ್ಲಿ ಮೋಹವುಂಟು, ಇಲ್ಲಿ ಮೋಹವಿಲ್ಲ; ಈ ಚಿತ್ತ ಚೆಲ್ಲಿಹೋಗಿದೆ, ಈ ಚಿತ್ತ ಚೆಲ್ಲಿಹೋಗಿಲ್ಲ; ಈ ಚಿತ್ತ ವಿಶಾಲವಾದುದು, ಇದು ಸಂಕುಚಿತ ವಾದುದು; ಈ ಚಿತ್ತವು ಎಲ್ಲವನ್ನೂ ಮೀರಿಸಿದುದು, ಇದನ್ನು ಮೀರಿಸುವ ಚಿತ್ತ ಬೇರೆ ಉಂಟು; ಈ ಚಿತ್ತ ಚಂಚಲ, ಇದು ಅಚಲ; ಈ ಚಿತ್ತ ಮುಕ್ತಿ ಪಡೆದಿದೆ, ಈ ಚಿತ್ತ ಮುಕ್ತಿ ಪಡೆದಿಲ್ಲ'—ಎಂದು ಅವನು ಚೆನ್ನಾಗಿ ಕಾಣುವನು.

"ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಹತ್ತನೆಯ ಶ್ರಾಮಣ್ಯಫಲ – ಪೂರ್ವನಿವಾಸಾನುಸ್ಮೃತಿಜ್ಞಾನ]

"ಚಿತ್ತವು ಮೇಲೆ ಹೇಳಿದಂತೆ ಹದವಾಗಲು, ಭಿಕ್ಷುವು ಪೂರ್ವ ನಿವಾಸಾನುಸ್ಮೃತಿಜ್ಞಾನಕ್ಕಾಗಿ ತನ್ನ ಚಿತ್ತವನ್ನು ಒಯ್ದು ಬಗ್ಗಿಸುವನು.

"ಮಹಾರಾಜ, ಪುರುಷನೊಬ್ಬನು ತನ್ನ ಗ್ರಾಮದಿಂದ ಬೇರೆ ಗ್ರಾಮಕ್ಕೆ ಹೋಗುವನು. ಆ ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗುವನು. ಅಲ್ಲಿಂದ ತನ್ನ ಗ್ರಾಮಕ್ಕೇ ಹಿಂದಿರುಗುವನು. ಆಗ

ಅವನಿಗೆ 'ನಾನು ನನ್ನ ಗ್ರಾಮದಿಂದ ಆ ಗ್ರಾಮಕ್ಕೆ ಬಂದೆ. ಅಲ್ಲಿ ಹೀಗೆ ನಿಂತೆ, ಹೀಗೆ ಕುಳಿತೆ, ಹೀಗೆ ನುಡಿದೆ, ಹೀಗೆ ಮೌನವಾಗಿದ್ದೆ. ಆ ಗ್ರಾಮದಿಂದ ಆ ಗ್ರಾಮಕ್ಕೆ ಬಂದೆ. ಅಲ್ಲಿಯೂ ಹೀಗೆ ನಿಂತೆ, ಹೀಗೆ ಕುಳಿತೆ, ಹೀಗೆ ನುಡಿದೆ, ಹೀಗೆ ಮೌನವಾಗಿದ್ದೆ. ಈಗ ಆ ಗ್ರಾಮದಿಂದ ನನ್ನ ಗ್ರಾಮಕ್ಕೇ ಹಿಂದಿರುಗಿ ಬಂದೆ' ಎಂದೆನಿಸುವುದು.

"ಅದರಂತೆಯೇ, ಮಹಾರಾಜ, ಪೂರ್ವನಿವಾಸಾನುಸ್ಮೃತಿಜ್ಞಾನಕ್ಕೆ ತನ್ನ ಚಿತ್ತವನ್ನು ಒಯ್ದು ಬಗ್ಗಿಸಿದ ಭಿಕ್ಷುವು, ತಾನು ಹಿಂದಿನ ಸಂವರ್ತಕಲ್ಪ ವಿವರ್ತಕಲ್ಪಗಳಲ್ಲಿ ಎತ್ತಿದ ಒಂದು ಜನ್ಮ, ಎರಡು ಜನ್ಮ, ಮೂರು ಜನ್ಮ, ನಾಲ್ಕು ಜನ್ಮ, ಐದು ಜನ್ಮ, ಹತ್ತು ಜನ್ಮ, ಇಪ್ಪತ್ತು ಜನ್ಮ, ಮೂವತ್ತು ಜನ್ಮ, ನಲುವತ್ತು ಜನ್ಮ, ಐವತ್ತು ಜನ್ಮ, ನೂರು ಜನ್ಮ, ಸಾವಿರ ಜನ್ಮ, ನೂರುಸಾವಿರ ಜನ್ಮ—ಮೊದಲಾದ ಅನೇಕ ತೆರನಾದ ಪೂರ್ವನಿವಾಸಗಳನ್ನು ನೆನೆಯುವನು. 'ಇಂಥ ಕಡೆ ನನಗೆ ಇಂತಹ ಹೆಸರಿತ್ತು, ಈ ಗೋತ್ರವಿತ್ತು, ಇಂಥ ವರ್ಣವಿತ್ತು, ಇಂಥ ಆಹಾರವಿತ್ತು, ಸುಖದುಃಖಗಳ ಅನುಭವ ಹೀಗಿತ್ತು, ಆಯುಸ್ಸಿನ ಪರಿಮಿತಿ ಇಷ್ಟಿತ್ತು. ಅಲ್ಲಿ ಮುಗಿದ ಮೇಲೆ ಆ ಕಡೆ ಹುಟ್ಟಿದೆ. ಅಲ್ಲಿ ನನ್ನ ಹೆಸರು, ಗೋತ್ರ, ವರ್ಣ, ಆಹಾರ, ಸುಖದುಃಖಗಳ ಅನುಭವ, ಆಯುಸ್ಸಿನ ಪರಿಮಿತಿ ಹೀಗೆ ಹೀಗೆ ಇತ್ತು. ಅಲ್ಲಿ ಮುಗಿದ ಮೇಲೆ ಅಲ್ಲಿ ಹುಟ್ಟಿದೆ'-ಎಂದು ಅವನು ತನ್ನ ಅನೇಕ ತೆರನಾದ ಪೂರ್ವನಿವಾಸಗಳನ್ನು ಪ್ರತಿಯೊಂದು ರೀತಿಯೊಡನೆ, ಪ್ರತಿಯೊಂದು ಸೂಕ್ಷ್ಮಾಂಶದೊಡನೆ ಸ್ಮರಿಸುವನು.

"ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟ ಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಹನ್ನೊಂದನೆಯ ಶ್ರಾಮಣ್ಯಫಲ—ಸತ್ತ್ವಗಳ ಚ್ಯುತೋಪಪಾತಜ್ಞಾನ]

"ಚಿತ್ತವು ಮೇಲೆ ಹೇಳಿದಂತೆ ಹದವಾಗಲು, ಭಿಕ್ಷುವು ಸತ್ತ್ವಗಳ ಚ್ಯುತೋಪಪಾತಜ್ಞಾನಕ್ಕಾಗಿ ತನ್ನ ಚಿತ್ತವನ್ನು ಒಯ್ದು ಬಗ್ಗಿಸುವನು.

"ಮಹಾರಾಜ, ಚೌಕದ ನಡುವೆ ಒಂದು ಪ್ರಾಸಾದವಿದೆ. ಅಲ್ಲಿ ಕಣ್ಣಿರುವ ಪುರುಷನು ನಿಂತು, ಅಲ್ಲಿಯ ಮನೆಯೊಳಗೆ ಹೋಗುವವರನ್ನೂ, ಹೊರಗೆ ಬರುವವರನ್ನೂ, ರಥದ ಬೀದಿಯಲ್ಲಿ ತಿರುಗಾಡುವವರನ್ನೂ, ಚೌಕದ ನಡುವೆ ಕುಳಿತವರನ್ನೂ ಕಾಣುವನು. ಆಗ ಅವನಿಗೆ 'ಈ

ಜನರು ಮನೆಯೊಳಗೆ ಹೋಗುವರು, ಇವರು ಮನೆಯಿಂದ ಹೊರಗೆ ಬರುವರು, ಇವರು ರಥದ ಬೀದಿಯಲ್ಲಿ ತಿರುಗಾಡುವರು, ಇವರು ಚೌಕದ ನಡುವೆ ಕುಳಿತಿರುವರು' ಎಂದೆನಿಸುವುದು.

"ಆದರಂತೆಯೆ, ಮಹಾರಾಜ, ಸತ್ತ್ವಗಳ ಚ್ಯುತೋಪಪಾತ ಜ್ಞಾನಕ್ಕೆ ತನ್ನ ಚಿತ್ತವನ್ನು ಒಯ್ದು ಬಗ್ಗಿಸಿದ ಭಿಕ್ಷುವು, ಸಾಯುವ ಹುಟ್ಟುವ ಸತ್ತ್ವಗಳನ್ನು ತನ್ನ ದಿವ್ಯಚಕ್ಷುವಿನಿಂದ ಕಾಣುವನು. ಆ ದಿವ್ಯ ಚಕ್ಷುವು ವಿಶುದ್ಧವಾದುದು, ಮನುಷ್ಯನ ಕಣ್ಣುಗಳನ್ನು ಮೀರಿಸಿದುದು. 'ಪೂಜ್ಯರೆ! ಈ ಸತ್ತ್ವಗಳು ಕೆಟ್ಟಕೆಲಸ ಮಾಡುವವರು, ಕೆಟ್ಟ ಮಾತಾಡುವವರು, ಕೆಟ್ಟ ಆಲೋಚನೆಮಾಡುವವರು, ಆರ್ಯರನ್ನು ಅವಹೇಳನ ಮಾಡುವವರು, ಮಿಥ್ಯಾದೃಷ್ಟಿಯುಳ್ಳವರು, ಮಿಥ್ಯಾದೃಷ್ಟಿಯಿಂದ ಬರುವ ಕರ್ಮಫಲವನ್ನು ಸಂಪಾದಿಸುವವರು; ಸತ್ತು, ದೇಹ ಮುರಿದ ಮೇಲೆ, ಇವರು ಅಪಾಯಕರವಾದ ದುರ್ಗತಿಯಾದ ವಿನಿಪಾತದಲ್ಲಿ, ನಿರಯದಲ್ಲಿ ಹುಟ್ಟುವರು. ಪೂಜ್ಯರೆ! ಈ ಸತ್ತ್ವಗಳು ಒಳ್ಳೆಯ ಕೆಲಸ ಮಾಡುವವರು, ಒಳ್ಳೆಯ ಮಾತನಾಡುವವರು, ಒಳ್ಳೆಯ ಆಲೋಚನೆ ಮಾಡುವವರು, ಆರ್ಯರನ್ನು ಅವಹೇಳನಮಾಡದವರು, ಸಮ್ಯಕ್ ದೃಷ್ಟಿಯುಳ್ಳವರು, ಸಮ್ಯಕ್‌ದೃಷ್ಟಿಯಿಂದ ಬರುವ ಕರ್ಮಫಲವನ್ನು ಸಂಪಾದಿಸುವವರು; ಸತ್ತು, ದೇಹ ಮುರಿದ ಮೇಲೆ, ಇವರು ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುವರು'—ಎಂದು ಹೀನರನ್ನೂ ಉತ್ತಮರನ್ನೂ, ಸುಂದರರನ್ನೂ ಕುರೂಪಿಗಳನ್ನೂ, ಕರ್ಮಗಳಿಗೆ ಅನುಸಾರವಾಗಿ ಸುಗತಿ ದುರ್ಗತಿಗಳಿಗೆ ಹೋಗುವ ಸತ್ತ್ವಗಳನ್ನೂ ತನ್ನ ದಿವ್ಯಚಕ್ಷುವಿನಿಂದ ಕಾಣುವನು.

"ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ.

[ಹನ್ನೆರಡನೆಯ ಶ್ರಾಮಣ್ಯಫಲ — ಆಸ್ರವಕ್ಷಯಜ್ಞಾನ]

"ಚಿತ್ತವು ಮೇಲೆ ಹೇಳಿದಂತೆ ಹದವಾಗಲು, ಭಿಕ್ಷುವು ಆಸ್ರವಕ್ಷಯಜ್ಞಾನಕ್ಕಾಗಿ ತನ್ನ ಚಿತ್ತವನ್ನು ಒಯ್ದು ಬಗ್ಗಿಸುವನು.

"ಮಹಾರಾಜ, ಪರ್ವತ ಪಂಕ್ತಿಯ ನಡುವೆ ನೀರಿನ ಕೊಳವಿದೆ; ಸ್ವಚ್ಛವಾಗಿ, ಪ್ರಸನ್ನವಾಗಿ, ನಿರ್ಮಲವಾಗಿದೆ. ಅಲ್ಲಿ, ಕಣ್ಣಿರುವ

ಪುರುಷನು ತೀರದಲ್ಲಿ ನಿಂತು ಶುಕ್ತಿ, ಕಪ್ಪೆಚಿಪ್ಪು, ಮರಳು, ಕಲ್ಲು, ಮೀನುಗುಂಪುಗಳನ್ನೂ ಅವು ಚಲಿಸುವುದನ್ನೂ ಮಲಗಿರುವುದನ್ನೂ ಕಾಣುವನು. ಅವನಿಗೆ 'ಈ ನೀರಿನ ಕೊಳ ಸ್ವಚ್ಛವಾಗಿ, ಪ್ರಸನ್ನವಾಗಿ, ನಿರ್ಮಲವಾಗಿದೆ. ಇಲ್ಲಿ ಈ ಶುಕ್ತಿ, ಕಪ್ಪೆಚಿಪ್ಪು, ಮರಳು, ಕಲ್ಲು, ಮೀನುಗುಂಪುಗಳು ಚಲಿಸುತ್ತಿವೆ, ಮಲಗಿವೆ' — ಎಂದೆನಿಸುವುದು.

"ಅದರಂತೆ, ಮಹಾರಾಜ, ಆಸ್ರವಕ್ಷಯಜ್ಞಾನಕ್ಕೆ ತನ್ನ ಚಿತ್ತವನ್ನು ಒಯ್ದು ಬಗ್ಗಿಸಿದ ಭಿಕ್ಷುವು 'ಇದು ದುಃಖ, ಇದು ದುಃಖಸಮುದಯ, ಇದು ದುಃಖನಿರೋಧ, ಇದು ದುಃಖನಿರೋಧ ಗಾಮಿನೀ ಪ್ರತಿಪದ' — ಎಂದು ಯಥಾಭೂತವನ್ನು ಚೆನ್ನಾಗಿ ತಿಳಿಯುವನು. 'ಇವು ಆಸ್ರವಗಳು, ಇದು ಆಸ್ರವಸಮುದಯ, ಇದು ಆಸ್ರವನಿರೋಧ, ಇದು ಆಸ್ರವನಿರೋಧ ಗಾಮಿನೀ ಪ್ರತಿಪದ' — ಎಂದು ಯಥಾಭೂತವನ್ನು ಚೆನ್ನಾಗಿ ತಿಳಿಯುವನು. ಹೀಗೆ ತಿಳಿದವನ, ಹೀಗೆ ಕಂಡವನ ಚಿತ್ತವು ಕಾಮಾಸ್ರವದಿಂದ ವಿಮುಕ್ತಿ ಪಡೆಯುವುದು; ಅವನ ಚಿತ್ತವು ಭವಾಸ್ರವದಿಂದ ವಿಮುಕ್ತವಾಗುವುದು; ಅವಿದ್ಯಾಸ್ರವದಿಂದ ಅವನ ಚಿತ್ತವು ವಿಮುಕ್ತವಾಗುವುದು. 'ನಾನು ವಿಮುಕ್ತಿ ಪಡೆದೆನು, ನಾನು ವಿಮುಕ್ತನು!' ಎಂಬ ಜ್ಞಾನವು ಅವನಿಗೆ ಹುಟ್ಟುವುದು. 'ಜನ್ಮ ಕ್ಷಯವಾಯಿತು. ಬ್ರಹ್ಮಚರ್ಯ ಪೂರ್ಣವಾಯಿತು. ಮಾಡತಕ್ಕದು ಮಾಡಿಯಾಯಿತು. ಇದುವರೆಗೆ ಇದ್ದುದು ಇನ್ನು ಮುಂದೆ ಇಲ್ಲ' — ಎಂದು ಅವನು ಚೆನ್ನಾಗಿ ತಿಳಿಯುವನು.

"ಇದು, ಮಹಾರಾಜ, ಸಂನ್ಯಾಸಿ ಜೀವನದ ಮೇಲೆ ಹೇಳಿದ ದೃಷ್ಟ ಫಲಕ್ಕಿಂತ ಮೇಲಾದ, ಸಿಹಿಯಾದ ಇಲ್ಲಿಯೇ ಕಂಡುಬರುವ ಫಲ. ಮಹಾರಾಜ, ಇಲ್ಲಿಯೇ ಕಂಡುಬರುವ ಈ ಶ್ರಾಮಣ್ಯಫಲಕ್ಕಿಂತ ಮೇಲಾದ, ಸಿಹಿಯಾದ ದೃಷ್ಟಫಲ ಬೇರೆಯಿಲ್ಲ."

ಹೀಗೆನ್ನಲು, ಮಗಧದ ರಾಜನಾದ ಅಜಾತಶತ್ರು ವೈದೇಹಿಪುತ್ರನು "ಬಲುಸೊಗಸು, ಭನ್ತೇ! ಬಲುಸೊಗಸು, ಭನ್ತೇ! ಬಿದ್ದಿದ್ದುದನ್ನು ಎತ್ತಿ ನಿಲ್ಲಿಸಿದಂತೆ, ಮುಚ್ಚಿದ್ದುದನ್ನು ಬಿಚ್ಚಿದಂತೆ, ಮೂಢನಿಗೆ ಮಾರ್ಗ ತೋರಿಕೊಟ್ಟಂತೆ, ಕಣ್ಣಿರುವವರು ರೂಪಗಳನ್ನು ಕಾಣಲೆಂದು ಕತ್ತಲೆಯಲ್ಲಿ ತೈಲದ ದೀಪ ಹಿಡಿದಂತೆ ಭಗವಂತನು ಅನೇಕ ಪರ್ಯಾಯಗಳಿಂದ

ಧರ್ಮವನ್ನು ಪ್ರಕಾಶಗೊಳಿಸಿದನು. ಈಗ ನಾನು ಭಗವಂತನನ್ನೂ ಆತನ ಧರ್ಮ ಭಿಕ್ಷುಸಂಘಗಳನ್ನೂ ಶರಣುಹೊಗುವೆನು. ಭನ್ತೇ, ಇಂದಿನಿಂದ ಪ್ರಾಣವಿರುವವರೆಗು ಶರಣಾಗತನಾದ ಉಪಾಸಕನೆಂದು ಭಗವಂತನು ನನ್ನನ್ನು ಸ್ವೀಕರಿಸಲಿ. ಭನ್ತೇ, ಅಜ್ಞಾನಿಯಾಗಿ, ಮೂಢ ನಾಗಿ, ಅಕುಶಲಿಯಾಗಿ, ಮಾಡಬಾರದುದನ್ನು ಮಾಡಿದ್ದೇನೆ. ನನ್ನ ತಂದೆಯನ್ನು, ಆ ಧಾರ್ಮಿಕನನ್ನು, ಆ ಧರ್ಮರಾಜನನ್ನು ಈಶ್ವರತ್ವ ಕ್ಕಾಗಿ ಕೊಲ್ಲಿಸಿದೆ. ಭನ್ತೇ, ನಾನು ಮುಂದೆ ಸಂಯಮ ಪಡೆಯುವಂತೆ, ಅಪರಾಧವನ್ನು ಅಪರಾಧವೆನ್ನುವ ನನ್ನನ್ನು ಭಗವಂತನು ಪ್ರತಿಗ್ರಹಿಸ ಬೇಕು" ಎಂದು ಭಗವಂತನಿಗೆ ಹೇಳಿದನು.

"ಹೌದು, ಮಹಾರಾಜ. ಅಜ್ಞಾನಿಯಾಗಿ, ಮೂಢನಾಗಿ, ಅಕುಶಲಿ ಯಾಗಿ ಮಾಡಬಾರದುದನ್ನು ಮಾಡಿರುವೆ. ಧಾರ್ಮಿಕನಾದ, ಧರ್ಮ ರಾಜನಾದ ನಿನ್ನ ತಂದೆಯ ಜೀವ ತೆಗೆದಿರುವೆ. ಮಹಾರಾಜ, ನೀನು ಅಪರಾಧವನ್ನು ಅಪರಾಧವೆಂದು ಕಂಡು, ಧರ್ಮಕ್ಕೆ ಅನುಸಾರವಾಗಿ ಒಪ್ಪಿಕೊಂಡುದರಿಂದ ನಾನು ಅದನ್ನು ಪ್ರತಿಗ್ರಹಿಸುವೆನು. ಅಪರಾಧ ವನ್ನು ಅಪರಾಧವೆಂದು ಕಂಡು, ಧರ್ಮಕ್ಕೆ ಅನುಸಾರವಾಗಿ ಒಪ್ಪಿಕೊಂಡ ವನು ಮುಂದೆ ಸಂಯಮವನ್ನು ಪಡೆಯುವನೆಂಬುದು ಆರ್ಯರ ವಿನಯದಲ್ಲಿ ಬೆಳೆದುಬಂದುದು, ಮಹಾರಾಜ."

ಹೀಗೆನ್ನಲು, ಮಗಧದ ರಾಜನಾದ ಅಜಾತಶತ್ರು ವೈದೇಹಿಪುತ್ರನು "ಭನ್ತೇ, ನಾವು ಹೋಗಲಾದೀತು. ಬಹಳ ಕೆಲಸವಿದೆ. ಮಾಡ ಬೇಕಾದುದು ಬಹಳವಿದೆ" ಎಂದು ಭಗವಂತನಿಗೆ ಹೇಳಿದನು.

"ನಿನಗೆ ಹೇಗೆನಿಸುವುದೊ ಹಾಗಾಗಲಿ, ಮಹಾರಾಜ."

ಆಗ, ಮಗಧದ ರಾಜನಾದ ಅಜಾತಶತ್ರು ವೈದೇಹಿಪುತ್ರನು ಭಗವಂತನ ಮಾತಿಗೆ ಸಂತೋಷಪಟ್ಟು, ಅನುಮೋದಿಸಿ, ಆಸನದಿಂದ ಎದ್ದು ಭಗವಂತನಿಗೆ ಅಭಿವಂದಿಸಿ, ಪ್ರದಕ್ಷಿಣೆಮಾಡಿ ಹೊರಟನು.

ಆಗ ಭಗವಂತನು, ಅಜಾತಶತ್ರು ಹೋಗಿ ಕೊಂಚ ಕಾಲವಾಗಲು, ಭಿಕ್ಷುಗಳನ್ನು ಕರೆದು, "ಭಿಕ್ಷುಗಳೆ, ಈ ರಾಜನು ನೊಂದಿದ್ದಾನೆ. ಭಿಕ್ಷು ಗಳೆ, ಈ ರಾಜನ ಮನಸ್ಸಿಗೆ ಏಟು ತಗಲಿದೆ. ಭಿಕ್ಷುಗಳೆ, ಈ ರಾಜನು

ಧಾರ್ಮಿಕನೂ ಧರ್ಮರಾಜನೂ ಆದ ತನ್ನ ತಂದೆಯ ಜೀವ ತೆಗೆಯದಿದ್ದಿದ್ದರೆ, ಕೊಳೆಯಿಲ್ಲದ ಮಲರಹಿತವಾದ ಧರ್ಮಚಕ್ಷು ಅವನಿಗೆ ಈ ಆಸನದಲ್ಲಿಯೇ ಹುಟ್ಟುತ್ತಿತ್ತು" ಎಂದನು.

ಭಗವಂತನು ಹೀಗೆಂದನು. ಆ ಭಿಕ್ಷುಗಳು ಭಗವಂತನ ಮಾತಿಗೆ ಆತ್ತಮನರಾಗಿ ಅಭಿನಂದಿಸಿದರು.

[ದೀಘನಿಕಾಯ – ಸಾಮಞ್ಞಫಲ ಸುತ್ತ]

[ಬುದ್ಧ ವಚನ ಪರಿಚಯ ಮುಗಿಯಿತು.]

೧. ಜನ ಸ್ಥಾನ ಪರಿಚಯ

(ಸಂಖ್ಯೆಯ ಮುಂದೆ * ಎಂಬ ಚಿಹ್ನೆಯಿದ್ದರೆ, ಆ ಪುಟದ ಮುಂದಿನ ಪುಟಗಳಲ್ಲೂ ಆ ಪದ ಸಿಕ್ಕುವುದೆಂದು ಗ್ರಹಿಸಬೇಕು.)

ಅಜಾತಶತ್ರು– ಮಗಧ ರಾಜ್ಯದ ದೊರೆ, 180.*

ಅಜಿತ ಕೇಶಕಂಬಳಿ-- ಒಬ್ಬ ಗಣಾಚಾರ್ಯ, 180.*

ಅನಾಥಪಿಂಡಿಕ–ರಾಜಗೃಹದ ಧನಿಕ ಗೃಹಸ್ಥ. ಸಂಘದ ದಾನಪತಿ (Patron).

ಅನುತೀರಚಾರಿ–ಒಂದು ಉದ್ರ, 25.

ಅಭಯ - ಒಬ್ಬ ರಾಜಕುಮಾರ, 130.*

ಅಷ್ಟಕ–ಒಬ್ಬ ಋಷಿ, 105.

ಅಂಗಕ–ಸೋಣದಂಡನ ಅಕ್ಕನ ಮಗ, 125.

ಅಂಗದೇಶ–ಬುದ್ಧನ ಕಾಲದ ಒಂದು ರಾಜ್ಯ.

ಅಂಗಿರಸ–ಋಷಿ, 105.

ಅಂಗುಳಿಮಾಲ–ಚೋರ, 155.*

ಅಂಧವನ–ವನ, 71, 135.

ಅಂಬಲಟ್ಠಿಕೆ–ಮಾವಿನ ತೋಪು, 75.

ಅಂಬಷ್ಟ–ಬ್ರಾಹ್ಮಣ, 87.*

ಆದರ್ಶಮುಖ–ರಾಜ, 38.*

ಆನಂದ–ಬುದ್ಧನ ಶಿಷ್ಯ, 147, 165.

ಆಮ್ರವನ– ಬುದ್ಧನಿಗೆ ಆಮ್ರಪಾಲಿಯೆಂಬ ವೇಶ್ಯೆಯು ಕೊಟ್ಟ ವನ.

ಇಕ್ಷ್ವಾಕು–ರಾಜ, 92.*

ಇಕ್ಷ್ವಾಮುಖ–ರಾಜಕುಮಾರ, 92.

ಇಚ್ಛಾನಂಕಲ–ಗ್ರಾಮ, 87.

ಉತ್ಕೃಷ್ಟ–ಗ್ರಾಮ, 87.

ಉದಾಯಿ–ಭಿಕ್ಷು, 165.

ಉದಾಯಿಭದ್ರ– ಅಜಾತಶತ್ರುವಿನ ಮಗ, 182.

ಉಪಾಲಿ–ಭಿಕ್ಷು, 78.

ಋಷಿಪತನ–ವಾರಣಾಸಿಯ ಬಳಿಯ ಸ್ಥಲ.

ಕರ್ಣಮುಂಡ–ಕೊಳ, 31.

ಕಪಿಲವಸ್ತು–ನಗರ, 91.

ಕರಂಡು–ರಾಜಕುಮಾರ, 92.

ಕಳಂದಕನಿವಾಪ– ಅಳಿಲುಗಳಿಗೆ ಆಹಾರ ವಿಕ್ಕುತ್ತಿದ್ದ ಪ್ರದೇಶ; ವೇಣುವನದ ಭಾಗ, 75.

ಕಾಶೀರಾಷ್ಟ್ರ–29.

ಕಾಳಿ–ದಾಸಿ, 66.

ಕುಮಾರ ಕಶ್ಯಪ–ಭಿಕ್ಷು, 71.

ಕೃಷ್ಣ–ಋಷಿ, 93.*

ಕೋಸಲ–ರಾಜ್ಯ.

ಕೋಸಲರಾಜ–ಪ್ರಸೇನಜಿತ್.

ಕ್ರೋಧಭಕ್ಷ್ಯ–ಯಕ್ಷ, 69.

ಗಗ್ಗರೆ–ಕೊಳವನ್ನು ಕಟ್ಟಿಸಿದ ರಾಣಿಯೊಬ್ಬಳು, 113.

ಗರ್ಗ–ಅಂಗುಳಿಮಾಲನ ತಂದೆ, 159.

ಗಂಭೀರಚಾರಿ–ಉದ್ರ, 25.

ಗಾರ್ಗ್ಯ–ಗರ್ಗನ ಮಗ, ಅಂಗುಳಿಮಾಲ, 159.

ಗೃಧ್ರಕೂಟ–ರಾಜಗೃಹದ ಬಳಿಯ ಪರ್ವತ, 56.

ಗೌತಮ–ಬುದ್ಧನ ಪ್ರತಿನಾಮ.

ಗೌತಮಿ–ಬುದ್ಧನ ಸಾಕುತಾಯಿಯಾದ ಮಹಾ ಪ್ರಜಾಪತಿ, 11.

ಚಂಡ–ಜನಸಂಧನ ಸೇವಕ, 40.*

ಚಂಪೆ–ಅಂಗದೇಶದ ಭಾಗ, 113.*

ಜನಸಂಧ–ರಾಜ, 38.

ಜಮದಗ್ನಿ–ಋಷಿ, 105.

ಜೀವಕ–ವೈದ್ಯ, 180.

ಜೇತವನ–ಅನಾಥಪಿಂಡಿಕನು ಜೇತನೆಂಬ ದೊರೆಯಿಂದ ಕೊಂಡು ಸಂಘಕ್ಕೆದಾನಮಾಡಿದ ವನ.

ತ್ರಯಸ್ತ್ರಿಂಶಸ್–ಸ್ವರ್ಗ, 69.

ದಧಿವಾಹನ–ದೊರೆ, 28.*
ದರ್ಭಪುಷ್ಪ, ದರ್ಭೆಯ ಹೂವು–ಸೃಗಾಲ, 26.
ದಶರಥ–ಜನಸಂಧನ ಇನ್ನೊಂದು ಹೆಸರು, 39.
ದಿಶಾ–ದಾಸಿ, 93.
ದೇವದತ್ತ–ಬುದ್ಧನ ದಾಯಾದಿ, 77, 149.

ಧರ್ಮಸೇನಾಪತಿ–ಸಾರಿಪುತ್ರನ ಬಿರುದು.

ನಂದಕ–ಭಿಕ್ಷು, 11.
ನಾಲಾಗಿರಿ–ಆನೆ, 149.
ನಿರ್ಗ್ರಂಥ ಜ್ಞಾತೃಪುತ್ರ–ಗಣಾಚಾರ್ಯ, 130, 151, 180.

ಪಕುಧ ಕಾತ್ಯಾಯನ–ಗಣಾಚಾರ್ಯ, 180.
ಪ್ರಚೇತನ–ರಾಜ, 58.
ಪ್ರಸೇನಜಿತ್–ಕೋಸಲದರಸ, 87, 138, 157.
ಪೂರ್ಣಕಶ್ಯಪ–ಗಣಾಚಾರ್ಯ, 180.
ಪೂರ್ವಕೋಷ್ಠಕ–ಶ್ರಾವಸ್ತಿಯ ಪೂರ್ವದಿಕ್ಕಿನಲ್ಲಿದ್ದ ಉಗ್ರಾಣ. ಅದರ ಬಳಿ ಒಂದು ಕೊಳವಿತ್ತು, 165.
ಪೂರ್ವಾರಾಮ–ವಿಶಾಖೆಯೆಂಬ ಉಪಾಸಿಕೆಯು ಸಂಘಕ್ಕೆ ಕೊಟ್ಟ ತೋಟ, 165.
ಪೌಷ್ಕರಸಾದಿ–ಬ್ರಾಹ್ಮಣ, 87.

ಬ್ರಹ್ಮದತ್ತ–ರಾಜ, 13.
ಬಿಂಬಾದೇವಿ– ಬುದ್ಧನ ಪೂರ್ವಾಶ್ರಮದ ಹೆಂಡತಿ, 11.
ಬಿಂಬಿಸಾರ–ರಾಜ, 113.

ಭಾರದ್ವಾಜ–ಋಷಿ, 105.
ಭೃಗು–ಋಷಿ, 105.

ಮಗಧ–ಬುದ್ಧನ ಕಾಲದ ಒಂದು ರಾಜ್ಯ.
ಮದ್ರರೂಪಿ–ರಾಜಕುಮಾರಿ, 96.
ಮಸ್ಕರಿ ಗೋಶಾಲ–ಗಣಾಚಾರ್ಯ, 180.
ಮಹಾ ಪ್ರಜಾಪತಿ–ಬುದ್ಧನ ಸಾಕುತಾಯಿ, 11.
ಮಹಾ ಮೌದ್ಗಲ್ಯಾಯನ–ಬುದ್ಧನ ಮುಖ್ಯ ಶಿಷ್ಯರಲ್ಲಿ ಒಬ್ಬ, 12.
ಮಹಾವನ–157.
ಮಂತ್ರಾಣಿ–ಅಂಗುಳಿಮಾಲನ ತಾಯಿ, 159.
ಮಂತ್ರಾಣಿಪುತ್ರ–ಅಂಗುಳಿಮಾಲ, 159.
ಮಾಯಾವಿ–ಸೃಗಾಲ, 25.
ಮಾಯಾವೀ–ಸೃಗಾಲಿ, 27.
ಮಾಲುಂಕ್ಯಾಪುತ್ರ–ಭಿಕ್ಷು, 80.
ಮಿಗಾರಮಾತೆ–ವಿಶಾಖೆಯೆಂಬ ಪ್ರಸಿದ್ಧಳಾದ ಉಪಾಸಿಕೆ, 165.
ಮೃಗದಾವ–ವಾರಣಾಸಿಯ ಬಳಿಯ ಜಿಂಕೆಗಳ ಕಾಡು.

ರಾಜಗೃಹ–ಮಗಧದ ರಾಜಧಾನಿ.
ರಾಹುಲ–ಬುದ್ಧನ ಪೂರ್ವಾಶ್ರಮದ ಮಗ, 11, 75.
ರಾಹುಲಮಾತೆ– ಬುದ್ಧನ ಪೂರ್ವಾಶ್ರಮದ ಹೆಂಡತಿ, 11.

ಲಿಚ್ಛವಿ–ಆ ಕಾಲದ ಪ್ರಜಾಸತ್ತೆಯೊಂದು.

ವಜ್ರಪಾಣಿ–ಯಕ್ಷ, 95.
ವಾಮಕ–ಋಷಿ, 105.
ವಾಮದೇವ- ಋಷಿ, 105.
ವಾರಣಾಸಿ- ಕಾಶಿ.
ವಾಸಿಷ್ಠ–ಋಷಿ, 105.
ವಿಶ್ವಸೇನ–ದೊರೆ, 34.
ವಿಶ್ವಾಮಿತ್ರ–ಋಷಿ, 105.
ವೇಣುವನ– ಬಿಂಬಿಸಾರನು ದಾನಮಾಡಿದ ಬಿದಿರುಮೆಳೆಗಳ ತೋಪು.
ವೈದೇಹಿಕೆ–ಗೃಹಪತ್ನಿ, 66.*
ವೈದೇಹಿಪುತ್ರ–ಅಜಾತಶತ್ರು, 180.
ವೈಶಾಲಿ–ಒಂದು ಪ್ರಜಾಸತ್ತೆ.

ಶಾಕ್ಯ–ಕಪಿಲವಸ್ತುವಿನ ಕ್ಷತ್ರಿಯರು, 92, 93.

ಶಾಕ್ಯಪುತ್ರ–ಬುದ್ಧನ ಪ್ರತಿನಾಮ.
ಶ್ರಾವಸ್ತಿ–ನಗರ, 11.
ಶ್ರೇಣಿಯ ಬಿಂಬಿಸಾರ–ದೊರೆ, 113.
ಶ್ವೇತ–ಆನೆ, 165.

ಸನತ್ಕುಮಾರ–ಬ್ರಹ್ಮ, 100.
ಸಂಜಯ ಬೇಲಟ್ಠಿಪುತ್ರ– ಗಣಾಚಾರ್ಯ, 180.
ಸಾರಿಪುತ್ರ–ಬುದ್ಧನ ಮುಖ್ಯ ಶಿಷ್ಯ, 11.
ಸಿಂಹ–ಸೇನಾಪತಿ, 151.*
ಸೀತವನ–ವನ, 55.
ಸೀನಿಪುರ–ರಾಜಕುಮಾರ, 92.
ಸುಗತ–ಬುದ್ಧನ ಪ್ರತಿನಾಮ.
ಸುಪತ್ರ–ಕಾಗೆಗಳ ರಾಜ, 13.*
ಸುಪ್ರಿಯ–ಉಪಾಸಕ, 143.*
ಸುಪ್ರಿಯೆ–ಉಪಾಸಿಕೆ, 143.*
ಸುಮುಖ–ಕಾಕಸೇನಾಪತಿ, 13.*
ಸುಸ್ಪರ್ಶೆ–ಕಾಗೆಗಳ ಅರಸಿ, 13.*
ಸೃಗಾಲಕ–ಗೃಹಪತಿಪುತ್ರ, 167.*
ಸೋಣ–ಭಿಕ್ಷು, 55.*
ಸೋಣದಂಡ–ಬ್ರಾಹ್ಮಣ, 113.*

ಹಸ್ತಿನೀಯ–ರಾಜಕುಮಾರ, 92.
ಹಿಮವಂತ–ಪರ್ವತ.

೨. ಪದ ಪದಾರ್ಥ ಕೋಶ

(ಈ 'ಬುದ್ಧವಚನ ಪರಿಚಯ'ದೊಂದಿಗೆಯೆ 'ಮಿಲಿಂದ ಪ್ರಶ್ನೆ'ಯನ್ನೂ ಪ್ರಕಟಿಸಿರುವುದರಿಂದ; ಇಲ್ಲಿಯ ಅನೇಕ ಪಾರಿಭಾಷಿಕ ಪದಗಳಿಗೆ ಅಲ್ಲಿಯ ಗ್ರಂಥದ ಮೈಯಲ್ಲೂ ಸೂಚಿಯಲ್ಲೂ ಸಾಕಷ್ಟು ವಿವರಣೆ ದೊರಕುವುದರಿಂದ; ಅಲ್ಲಿ ಬಾರದೆ ಇಲ್ಲಿ ಬಂದ ಕ್ಲಿಷ್ಟ ಪದಗಳಿಗೆ ಮಾತ್ರ ಈ ಕೋಶವನ್ನು ರಚಿಸಿದೆ.)

ಅರ್ಕ–ಈ ವೃಕ್ಷದ ನಾರಿನಿಂದ ಬಿಲ್ಲಿನ ನಾರಿಯನ್ನು ಮಾಡುತ್ತಿದ್ದರು.

ಅರ್ಥ–ಗುರಿ, ಮೇಲು, ಶ್ರೇಯಸ್ಸು.

ಅನವದ್ಯ ಸುಖ–ನಿಂದೆಗೆ ಒಳಗಾಗದ ಸುಖ.

ಅಭಿಜ್ಞಾನ–ನಿರ್ವಾಣವನ್ನು ಪಡೆಯುವುದಕ್ಕೆ ನೆರವಾಗುವ ವಿಶೇಷ ಜ್ಞಾನ.

ಅಭಿಜ್ಞೆ–ಅಭಿಜ್ಞಾನ.

ಅಭಿಧ್ಯೆ–ಲೋಭ.

ಅಮ್ಮಣ–ಒಂದು ಅಳತೆ. ಎಷ್ಟೆಂದು ತಿಳಿಯದು.

ಅವ್ಯಾಸೇಕ ಸುಖ–ಕ್ಲೇಶಗಳ ಸಂಪರ್ಕವಿಲ್ಲದ ಸುಖ.

ಅವಿದ್ಯಾಸ್ರವ–'ಆಸ್ರವ' ನೋಡಿ.

ಅವಿದ್ಯೆ–ಅಜ್ಞಾನ. ಎರಡು ತೆರ: (೧) ಸಮ್ಯಕ್ ದೃಷ್ಟಿಯನ್ನು ಪಡೆಯದಿರುವುದು, (೨) ಮಿಥ್ಯಾದೃಷ್ಟಿಯನ್ನು ಪಡೆದಿರುವುದು. ಈ ಅಜ್ಞಾನದಿಂದ ತೃಷ್ಣೆ ಹುಟ್ಟುವುದು. ತೃಷ್ಣೆಯಿಂದ ಜನನವೂ, ಅದರಿಂದ ಸರ್ವ ದುಃಖವೂ ಏಳುವುದು.

ಆತಾಪ–ವೀರ್ಯ, ಉತ್ಸಾಹ, ಧೈರ್ಯ, ತೇಜಸ್ಸು, ಹುಮ್ಮಸ್ಸು.

ಆರ್ಯ–ಅರ್ಹ, ಶ್ರೇಷ್ಠ.

ಆರ್ಯಕ–ದಾಸನ ಯಜಮಾನ.

ಆಸ್ರವ–ಚಿತ್ತವು ಮೇಲೆದ್ದು ಮುಂದುವರಿದು ನಿರ್ವಾಣ ಪಡೆಯದ ರೀತಿಯಲ್ಲಿ ಮೌಢ್ಯವನ್ನು ಉಂಟುಮಾಡಿ, ತಡೆಗಟ್ಟುತ್ತ ಹೊಳೆಯಂತೆ ಹರಿಯುವ ಭಾವನೆಗಳು. ಆಸ್ರವಗಳು ನಾಲ್ಕು: (೧) ತೃಷ್ಣೆ ಕಾರಣವಾದ ಕಾಮಾಸ್ರವ (೨) ಉಪಾದಾನಗಳು ಕಾರಣವಾದ ಭವಾಸ್ರವ (೩) ಸಮ್ಯಕ್ ದೃಷ್ಟಿಯಿಲ್ಲದೆ ಮಿಥ್ಯಾದೃಷ್ಟಿಯನ್ನು ಹಿಡಿಯುವುದರಿಂದಾದ ದೃಷ್ಟ್ಯಾಸ್ರವ, ಮತ್ತು (೪) ನಾಲ್ಕು ಆರ್ಯಸತ್ಯಗಳ ತಿಳುವಳಿಕೆ ಇಲ್ಲದಿರುವ ಅವಿದ್ಯಾಸ್ರವ.

ಇಭ್ಯ–ಹೀನ ಕೆಲಸ ಮಾಡುವವರು.

ಉದ್ರ–ನೀರುನಾಯಿ, Otter.

ಉಪವಸಥ–ಪ್ರತಿ ಹುಣ್ಣಿಮೆಯೂ ಬೌದ್ಧರು ಆಚರಿಸುವ ಉಪವಾಸದ ದಿವಸ.

ಋದ್ಧಿ ವಿಧ–ನಾನಾತೆರದ ಋದ್ಧಿಗಳು.

ಏರಂಡ–ಹರಳು ಗಿಡ.

ಏಕೋಧಿಭಾವ–ಏಕಾಗ್ರಚಿತ್ತತೆ.

ಔದ್ಧೃತ್ಯ–ಉದ್ಧೃತಭಾವ, ಚಿತ್ತದ ಅಶಾಂತಿ, ತಳಮಳ.

ಕಚ್ಛ–ಬಾಣಮಾಡಲು ಬಳಸುತ್ತಿದ್ದ ಒಂದು ತೆರದ ಜೊಂಡು.

ಕರವೀರ ಪತ್ರ–ಕರವೀರವೆಂಬುದು ಒಂದು ಜಾತಿಯ ಹುಲ್ಲು. ಅದರಿಂದ ಮಾಡಿದ ಬಾಣ 'ಕರವೀರಪತ್ರ'.

ಕಲಲ–ಒಂದು ಹಕ್ಕಿ.

ಕಂಕ–ಒಂದು ಹಕ್ಕಿ.

ಕಾಮಾಸ್ರವ–'ಆಸ್ರವ' ನೋಡಿ.

ಕ್ಷೀರಪರ್ಣ–ಈ ಮರದ ಎಲೆಗಳಲ್ಲಿ ಹಾಲಿನಂತಹ ರಸವುಂಟು.

ಕೃಷ್ಣರು–ಕಪ್ಪು ಬಣ್ಣದವರು.

ಕೇಟುಭ–ಮಾಡತಕ್ಕ ಕರ್ಮಗಳ ನಿಯಮವನ್ನು ತಿಳಿಸುವ ಶಾಸ್ತ್ರಭಾಗ. ಇದೇ ವೇದಾಂಗಗಳಲ್ಲಿ ಒಂದಾದ 'ಕಲ್ಪ' ಎನ್ನುವರು.

ಕೋದಂಡ–ಒಂದು ತೆರದ ಬಿಲ್ಲು. ಇದು ಚಾಪದಂತೆ ಬಳುಕುವುದಿಲ್ಲ.

ಕೌಕೃತ್ಯ–ಕೆಟ್ಟ ಕೆಲಸಗಳನ್ನು ಮಾಡುವ ಭಾವ.

ಖುರಪ್ರ–ಒಂದು ತೆರದ ತೀಕ್ಷ್ಣವಾದ ಬಾಣ.

ಗ್ರಾಮಣಿ–ಗ್ರಾಮದ ಸರ್ವಾಧಿಕಾರಿ.

ಗ್ರಾಮಭೋಜಕ–ಗ್ರಾಮದ ಯಜಮಾನ.

ಗೋಕರ್ಣ–ದೊಡ್ಡ ಜಾತಿಯ ಜಿಂಕೆ.

ಗೋಧ–ಹಲ್ಲಿಯ ಜಾತಿಯ ದೊಡ್ಡ ಪ್ರಾಣಿ.

ಚರಣ–ನಡತೆ, ಶೀಲ.

ಚಾಪ–ಬಳುಕುವ ಬಿಲ್ಲು.

ಚೀವರ–ಭಿಕ್ಷು ಹೊದೆಯುವ ಬಟ್ಟೆ.

ಜಾತಕ– (ಬುದ್ಧನ) ಜಾತಿಗೆ, ಎಂದರೆ (ಪೂರ್ವದ) ಜನ್ಮಗಳಿಗೆ ಸಂಬಂಧಿಸಿದ ಕತೆಗಳು.

ಜಾತಿ–ಜನ್ಮ, ಜನನ.

ತಥಾಗತ–ಅರ್ಹತ, ಬುದ್ಧ ಎನ್ನುವುದಕ್ಕೆ ಇದನ್ನು ಸಮಶಬ್ದವಾಗಿ ಬಳಸುವರು. ಇದರ ಅರ್ಥ ನಿಷ್ಕೃಷ್ಟವಾಗಿಲ್ಲ.

ತೀರ್ಥಕ–ಬೌದ್ಧವಲ್ಲದ ಬೇರೆ ಮತಗಳ ಗುರುಗಳು.

ತೃಷ್ಣೆ–ಕಾಮ, ಆಸೆ.

ದಿವ್ಯಚಕ್ಷು–ಪುಟ 201.

ದಿವಾವಿಹಾರ–ಮಧ್ಯಾಹ್ನ ಊಟವಾದ ಮೇಲೆ ನೆರಳಿನಲ್ಲಿ ಕುಳಿತು ಧ್ಯಾನ ಸಮಾಧಿಗಳಲ್ಲಿ ವಿಹರಿಸುವುದು.

ಧರ್ಮ–(೧) ಗುಣ, ಸ್ಥಿತಿ, (೨) ಬುದ್ಧನ ಬೋಧೆ, (೩) ಸುತ್ತಪಿಟಕ, (೪) ನಿಯತಿ.

ಧರ್ಮಚಕ್ಷು–'ಹುಟ್ಟಿದ್ದೆಲ್ಲ ಹಾಳಾಗುವುದು ಧರ್ಮ' ಎಂಬ ಸತ್ಯವನ್ನು ಕಾಣುವುದು. ಇದು ದಿವ್ಯಚಕ್ಷುವಿಗಿಂತ ಮೇಲಾದುದು. ಈ ಧರ್ಮಚಕ್ಷುವನ್ನೂ ಮೀರಿಸಿದುದು, ಅರ್ಹತನಿಗೆ ಮಾತ್ರವಿರುವ ಪ್ರಜ್ಞಾಚಕ್ಷು.

ನಾರಾಚ–ಒಂದು ತೆರದ ಬಾಣ.

ನಿಗಮ–ಅನೇಕ ಜನ ಬಂದು, ಕೂಡಿ, ಹೋಗುವ ಪ್ರದೇಶ. ಇದು ಗ್ರಾಮಕ್ಕಿಂತ ದೊಡ್ಡದು, ನಗರಕ್ಕಿಂತ ಸಣ್ಣದು.

ನಿಷ್ಕ್ರಮಣ– ಮನೆಬಿಟ್ಟು ಸಂನ್ಯಾಸಿಯಾಗಿ ಹೊರಡುವುದು.

ನೈಷ್ಕ್ರಮ್ಯ–ನಿಷ್ಕ್ರಮಣ.

ಪಗ್ಗವ–ಕಹಿಹಣ್ಣು ಬಿಡುವ ಒಂದು ತೆರದ ಬಳ್ಳಿ.

ಪರಿವಿತರ್ಕ–ಮನಸ್ಸನ್ನು ವಿಷಯಕ್ಕೆ ಅರ್ಪಿಸಿ, ಚಿಂತಿಸುವುದು ವಿತರ್ಕ. ವಿಷಯವನ್ನು ಎಲ್ಲಾ ಕಡೆಗಳಿಂದಲೂ ವಿತರ್ಕಮಾಡುವುದು ಪರಿವಿತರ್ಕ.

ಪಂಚಶೀಲ–(೧) ಪ್ರಾಣಹಿಂಸೆ ಮಾಡದಿರುವುದು, (೨) ಕದಿಯದಿರುವುದು, (೩) ಬ್ರಹ್ಮಚಾರಿಯಾಗಿರುವುದು, (೪) ಸುಳ್ಳಾಡದಿರುವುದು ಮತ್ತು (೫) ನಿಂದಿಸದಿರುವುದು.

ಪ್ರತಿಪದ–ಮಾರ್ಗ, ಅಷ್ಟಾಂಗಿಕ ಮಾರ್ಗ.

ಪ್ರಮಾದ–ಅಜಾಗರೂಕತೆ.

ಪ್ರವ್ರಜಿತ–ಪರಿವ್ರಾಜಕ.

ಬಹುಶ್ರುತ–ಬಹಳ ಕೇಳಿ ತಿಳಿದು ಜ್ಞಾನ ಪಡೆದವನು.

ಬಂಧುಪಾದಾಪತ್ಯ–ಬ್ರಹ್ಮನು ಬ್ರಾಹ್ಮಣರ ಬಂಧು. ಆ ಬಂಧುವಿನ ಪಾದದಿಂದ ಹುಟ್ಟಿದ ಮಕ್ಕಳು, ಶೂದ್ರರು.

ಬೋಧಿಸತ್ತ್ವ–ಅರ್ಹತನು ನಡಿಸಬೇಕಾದ ಶೀಲಗಳನ್ನು ಕಾಪಾಡಿಕೊಂಡು, ಮುಂದಿನ ಜನ್ಮಗಳಲ್ಲಿ ಬುದ್ಧನಾಗುವ ಯೋಗ್ಯತೆಯನ್ನು ಸಂಪಾದಿಸಿ, ಬುದ್ಧನಾಗುವ ಸತ್ತ್ವವುಳ್ಳವನು.

ಭವಾಸ್ರವ–'ಆಸ್ರವ' ನೋಡಿ.

ಭಾಣವಾರ–ಮುಖಪಾಠಕ್ಕೆ ಅನುಕೂಲವಾಗಲೆಂದು ವಿಂಗಡಿಸಿದ ಸೂತ್ರಭಾಗ.

ಭುಜಿಷ್ಯ–ದಾಸತ್ವವನ್ನು ಕಳೆದುಕೊಂಡವನು.

ಮರುವ–ಒಂದು ತೆರದ ಸಣಬು.

ಮಂಡಲಮಾಳ–ಭಿಕ್ಷುಗಳ ಸಭೆಗಳಿಗಾಗಿ ಬಯಲಿನಲ್ಲಿ ಮಂಡಲಾಕಾರದಲ್ಲಿ ಕಟ್ಟಿದ ಮಾಡ, ಸಭಾಗೃಹ.

ಮಾರ–ಸಾಕಾರ ಸಗುಣವಾದ ತೃಷ್ಣೆ.

ಮಾಂಸಶೂಲ–ಬೆಂಕಿಯಲ್ಲಿ ಮಾಂಸವನ್ನು ಬೇಯಿಸುವಾಗ, ಆ ಮಾಂಸವನ್ನು ಹಿಡಿಯಲು ಚುಚ್ಚುವ ಶೂಲ.

ಮಿದ್ಧ–ಚಿತ್ತದ ಜಡತ್ವ.

ಮುಂಡಕ–ತಲೆಗೂದಲು ಬೋಳಿಸಿಕೊಂಡವನು.

ಮೂರುವೇದ–ಋಗ್, ಸಾಮ, ಯಜು ರ್ವೇದಗಳು.

ಮೇರಯ–ಪುಷ್ಪರಸಗಳಿಂದ ಮಾಡಿದ ಮದ್ಯ ವಿಶೇಷ.

ರಥವಿನೀತ–ರಥಿಕರನ್ನು ಒಂದು ಕಡೆಯಿಂದ ಒಂದು ಕಡೆಗೆ ಒಯ್ಯುವ ರಥ.

ರೋಪಿಮ–ಒಂದು ತೆರದ ಬಾಣ.

ರೋರುವ–ರುರು ಎಂಬ ಜಿಂಕೆಯ ಜಾತಿಯ ಪ್ರಾಣಿ.

ಲಬುಜ–ಒಂದು ತೆರದ ಕಾಯಿ (Bread-fruit).

ವತ್ಸದಂತ–ಕರುವಿನ ಹಲ್ಲಿನಂತಿರುವ ಒಂದು ತೆರದ ಬಾಣ.

ವಸ್ತುವಿದ್ಯೆ–ಮನೆ ಕಟ್ಟಲು ಪ್ರಶಸ್ತವಾದ ಸ್ಥಳಗಳನ್ನು ಆರಿಸಲು ಬಲ್ಲ ವಿದ್ಯೆ.

ವ್ಯಾಪಾದ–ಹಿಂಸೆ.

ವಿಚಿಕಿತ್ಸೆ–ಸಂದೇಹ, ಸಂಶಯ.

ವಿವರ್ತಕಲ್ಪ-ಲೋಕ ನಾಶವಾಗಲು ಬೇಕಾದ ಕಾಲ.

ವಿವೇಕ–ಏಕಾಂತವಾಸ.

ವಿಶುದ್ಧಿ–ಕ್ಲೇಶ, ನಿವಾರಣ, ಸಂಯೋಜನಗಳನ್ನು ಕಳೆದುಕೊಂಡ ಮೇಲೆ ಬರುವ ಶುದ್ಧತೆ.

ವಿಹಾರ–ಭಿಕ್ಷುಗಳು ತಂಗುವುದಕ್ಕಾಗಿ, ಧರ್ಮ ಸಭೆಗಳನ್ನು ನಡಿಸುವುದಕ್ಕಾಗಿ, ಶ್ರದ್ಧೆಯುಳ್ಳ ಉಪಾಸಕರು ಕಟ್ಟಿಸಿಕೊಟ್ಟ ಭವನಗಳು. ಈ ವಿಹಾರಗಳು ಸಾಮಾನ್ಯವಾಗಿ ಆರಾಮಗಳ ನಡುವೆ ಇರುವುವು.

ವೈಕಾಂಡ–ಒಂದು ತೆರದ ಬಾಣ.

ಶ್ರಮಣಕ–ಶ್ರಮಣನನ್ನು ಹೀನೈಸುವ ಅರ್ಥದಲ್ಲಿ.

ಶ್ರಾಮಣ್ಯ–ಶ್ರಮಣತ್ವ.

ಶಿಥಿಲಹನು–ಒಂದು ಪಕ್ಷಿ.

ಶ್ರುತವಂತ–'ಬಹುಶ್ರುತ'.

ಸಮುದಯ–ದುಃಖ, ಆಸ್ರವಗಳ ಹುಟ್ಟುವಿಕೆ.

ಸ್ಥವಿರೀ– ಭಿಕ್ಷುಣಿಯರ ಸಂಘದಲ್ಲಿ ಹಿರಿಯಳಾಗಿ, ಬಹುಕಾಲ ಭಿಕ್ಷುಣೀಭಾವವನ್ನು ಕೈಕೊಂಡ ಭಿಕ್ಷುಣಿ.

ಸಂಘಾಟಿ– ಭಿಕ್ಷುವು ಉಪಯೋಗಿಸುವ ಮೂರು ಬಟ್ಟೆಗಳಲ್ಲಿ ಉಡುವ ಬಟ್ಟೆ.

ಸಂವರ್ತಕಲ್ಪ–ಲೋಕ ಸೃಷ್ಟಿಯಾಗಲು ಬೇಕಾದ ಕಾಲ.

ಸಂಸ್ಥ–ಧನುಸ್ಸಿನ ನಾರಿಗೆ ಉಪಯೋಗಿಸುತ್ತಿದ್ದ ಒಂದು ತೆರದ ಜೊಂಡು.

ಸಂಸ್ಥಾಗಾರ–ಸಭಾಗೃಹ.

ಸ್ತ್ಯಾನ–ದೇಹದ ಜಡತ್ವ.

ಸ್ಥಾಲೀಪಾಕ–ನವಣೆಯನ್ನೋ ಅಕ್ಕಿಯನ್ನೋ ಹಾಲಿನಲ್ಲಿ ಬೇಯಿಸಿ, ಯಜ್ಞ ಮುಂತಾದ ಸಮಯಗಳಲ್ಲಿ ಅರ್ಪಿಸುವ ನಿವೇದನೆ.

ಸುಗತಿ–ಒಳ್ಳೆಯ ಗತಿ, ಸ್ವರ್ಗ; ಅದಕ್ಕಿಂತ ಮೇಲಾಗಿ ನಿರ್ವಾಣ.

ಸುಗತ–ನಿರ್ವಾಣ ಪಡೆದವನು, ಬುದ್ಧ.

ಸುಮೇಧ–ಪ್ರಜ್ಞಾವಂತ.

ಸ್ರುಚ– ಯಜ್ಞಕಾಲದಲ್ಲಿ ಅಗ್ನಿಗೆ ತುಪ್ಪ ಹುಯ್ಯಲು ಬಳಸುವ ಮರದ ಸೌಟು.

ಶಾಕ್ಯ ಸಾಹಿತ್ಯ ಮಂಟಪದ ಮೂರನೆಯ ಉಪಪುಷ್ಪ.

ಮಿಲಿಂದ ಪ್ರಶ್ನೆ

ಎಂಬ

ಅದೇ ಹೆಸರಿನ ಪಾಲಿ ಬೃಹದ್ಗ್ರಂಥದ
ಪ್ರಕ್ಷಿಪ್ತವೆನಿಸಿದ ಖಂಡಗಳನ್ನು ಬಿಟ್ಟು ಮಾಡಿದ
ಕನ್ನಡ ಅನುವಾದ.

ಅನುವಾದಕ–ಸಂಪಾದಕ
ಜಿ. ಪಿ. ರಾಜರತ್ನಂ



'ಅತ್ಥಂ ಹಿ ನಾಥೋ ಸರಣಂ ಅವೋಚ ನ ವ್ಯಞ್ಜನಂ'
'ಅರ್ಥವೇ ಮುಖ್ಯ, ಅಕ್ಷರವಲ್ಲ—
ಎಂದು ನಮ್ಮ ಸ್ವಾಮಿಯಾದ ಬುದ್ಧನು ಹೇಳಿದನು.'

ಶಾಕ್ಯ ಸಾಹಿತ್ಯ ಮಂಟಪ
ಮಲ್ಲೇಶ್ವರ, ಬೆಂಗಳೂರು
೧೯೩೭

MILINDA PRAṢNE

(The Milinda Questions)

IN

KANNAḌA

FROM

The Original PĀLI

PRESENTING

the genuine parts

The First Three Books

of

THE MILINDA PAÑHO

TRANSLATOR — EDITOR

G. P. RĀJA RATNAṀ, M. A.

ṢĀKYA SĀHITYA MANṬAPA

MALLÊṢWARAṀ, BANGALORE, S. INDIA.

1937

ಪ್ರವೇಶ

ಪಾಲಿ ಭಾಷೆಯಲ್ಲಿರುವ ಸಾಹಿತ್ಯವು ಎರಡು ವಿಧವಾದುದೆಂದು ಸ್ಥೂಲವಾಗಿ ಹೇಳಬಹುದು; ಒಂದು ಪಿಟಕಸಾಹಿತ್ಯ, ಒಂದು ಪಿಟಕೇತರ ಸಾಹಿತ್ಯ. ವಿನಯಪಿಟಕ, ಸುತ್ತಪಿಟಕ, ಅಭಿಧಮ್ಮಪಿಟಕ ಎಂಬ ಮೂರು ಪಿಟಕಗಳು, ಸಿಂಹಳ ಬರ್ಮಾ ಸಯಾಂ ದೇಶಗಳ ಬೌದ್ಧರ ಪ್ರಮಾಣ ಗ್ರಂಥಗಳು, ಪಿಟಕಸಾಹಿತ್ಯವೆನ್ನಿಸಿಕೊಳ್ಳುವುವು. ಇವು ಹೊರತಾಗಿ ಉಳಿದ ಇತರ ಎಲ್ಲಾ ಪಾಲಿಗ್ರಂಥಗಳು ಕೂಡಿ ಪಿಟಕೇತರ ಸಾಹಿತ್ಯವಾಗುವುದು.

ಪಿಟಕೇತರ ಪಾಲಿಸಾಹಿತ್ಯವನ್ನು ನಾಲ್ಕು ತೆರನಾಗಿ ವಿಂಗಡಿಸ ಬಹುದು: (೧) 'ಅಟ್ಠಕಥೆ' - ಬುದ್ಧದತ್ತ, ಬುದ್ಧಘೋಷ, ಧರ್ಮಪಾಲ ಎಂಬವರು ತಿಪಿಟಕಕ್ಕೆ ಬರೆದ ವ್ಯಾಖ್ಯಾನಗಳು. (೨) 'ಟೀಕಾ' — ಬುದ್ಧಘೋಷನ 'ಅಟ್ಠಕಥೆ'ಗಳಿಗೆ ಇತರರು ಬರೆದ ಉಪವ್ಯಾಖ್ಯಾನಗಳು. (೩) 'ಪಕರಣ' — ಬುದ್ಧಘೋಷನಿಗೆ ಮೊದಲೂ ಅನಂತರವೂ ಬೌದ್ಧ ವಿಷಯಕವಾಗಿ ಬರೆದ ಗ್ರಂಥಗಳು. (೪) ಕ್ರಿ. ಶ. ಎರಡು ಮೂರನೆಯ ಶತಮಾನದಿಂದ ಇಂದಿನವರೆಗು ಬರೆದಿರುವ, ಇಂದೂ ಕೆಲವರು ಬರೆಯು ತ್ತಿರುವ ಇತಿಹಾಸ, ವೈದ್ಯ, ಕಾವ್ಯ, ವ್ಯಾಕರಣ ಇತ್ಯಾದಿ ಗ್ರಂಥಗಳು.

ಪಿಟಕಗಳ ರಚನೆಯಾದ ಮೇಲೆ, ಬುದ್ಧಘೋಷನು ತನ್ನ 'ಅಟ್ಠ ಕಥೆ'ಗಳನ್ನು ಬರೆಯುವ ಮೊದಲು, ಎಂದರೆ ಕ್ರಿ. ಶ. ಒಂದರಿಂದ ನಾಲ್ಕನೆಯ ಶತಮಾನಗಳ ಅಂತರದಲ್ಲಿ ಕೆಲವು ಬೌದ್ಧಗ್ರಂಥಗಳು— ಪಾಲಿಯಲ್ಲೂ ಸಿಂಹಳ ಭಾಷೆಯಲ್ಲೂ— ರಚಿತವಾದುವೆಂದು ಬುದ್ಧ ಘೋಷನು (ಕ್ರಿ. ಶ. ೫ನೆಯ ಶತಮಾನ) ಕೊಡುವ ಪ್ರಮಾಣಗಳಿಂದಲೂ ಉದ್ಧೃತಭಾಗಗಳಿಂದಲೂ ತಿಳಿದುಬರುವುದು. ಪಿಟಕಗಳಿಗೂ ಅಟ್ಠ ಕಥೆಗಳಿಗೂ ನಡುವೆ ಸೃಷ್ಟಿಯಾದ ಈ ಸಾಹಿತ್ಯದಲ್ಲಿ ಕೆಲವು ಗ್ರಂಥಗಳು ಉಳಿದಿವೆ, ಕೆಲವು ಅಳಿದಿವೆ.

ಹೀಗೆ ಉಳಿದಿರುವವುಗಳಲ್ಲಿ — ಪಾಲಿಯಲ್ಲಿ — ಮುಖ್ಯವಾದುವು ಮೂರು: 'ನೇತ್ತಿಪಕರಣ', 'ಪೇಟಕೋಪದೇಸ', ಮತ್ತು 'ಮಿಲಿಂದ ಪಞ್ಹಂ'. ಈ ಮೂರೂ ಬೌದ್ಧ ಧರ್ಮವನ್ನು ಕುರಿತ ಶಾಸ್ತ್ರೀಯ

ಗ್ರಂಥಗಳು. ‘ನೇತ್ತಿ’ಯು ಸದ್ಧರ್ಮದ ಜ್ಞಾನಕ್ಕೆ ಶ್ರಾವಕನನ್ನು ನಡಿಸಿ ಕೊಂಡು ಹೋಗುವುದು. ‘ಪೇಟಕೋಪದೇಸ’ವು ಪಿಟಕಗಳ ಉಪ ದೇಶವನ್ನು ಸಂಗ್ರಹಿಸಿ ತಿಳಿಸುವುದು. ಈ ಎರಡರ ರೀತಿಯು ಅಭಿ ಧರ್ಮಪಿಟಕದಂತೆ ಬರಿಯ ಧರ್ಮನಿರೂಪಣೆ ಮಾತ್ರವಾಗಿದೆ. ಮೂರನೆಯದಾದ ‘ಮಿಲಿಂದ ಪ್ರಶ್ನೆ’ಯು ಧರ್ಮವನ್ನೇ ಹೇಳಿದರು ಕೂಡ, ಹೇಳುವ ರೀತಿಯಲ್ಲಿ ಕಾವ್ಯದ ಕಳೆಯಿದೆ. ಇದರ ಸ್ವರೂಪವು ವಿನಯ ಸುತ್ತಪಿಟಕಗಳನ್ನು ಸ್ಮರಿಯಿಸುತ್ತದೆ. ‘ಮಿಲಿಂದ ಪ್ರಶ್ನೆ’ಯನ್ನು ಬರೆ ದವನು, ಪ್ರಾರಂಭದಲ್ಲಿ ಆ ರಾಜನ ರಾಜಧಾನಿಯನ್ನು ಕಾವ್ಯಗಳ ರೀತಿ ಯಲ್ಲಿ ವರ್ಣಿಸಿ, ಆತನು ನಾಗಸೇನನೆಂಬ ಭಿಕ್ಷುವನ್ನು ಕಂಡನೆಂದು ಅವರ ಪೂರ್ವಕಥೆಯನ್ನು ತಿಳಿಸಿ, ಓದುಗರ ಕುತೂಹಲವನ್ನು ಕೆರಳಿಸಿ, ಮಿಲಿಂದ ನಾಗಸೇನರ ಸಂವಾದದ ರೂಪದಲ್ಲಿ ತಾನು ಹೇಳಬೇಕಾದ ಧರ್ಮಬೋಧೆಯನ್ನು ನಡಿಸುತ್ತಾನೆ.

ಧರ್ಮದ ಪ್ರೇಮದಿಂದ, ಶ್ರದ್ಧೆಯಿಂದ ಬೌದ್ಧರಾದವರು ಪಿಟಕ ಗಳಿಗೆ ತೋರುವಷ್ಟು ಗೌರವವನ್ನು ಯಾವ ಪಿಟಕೇತರ ಗ್ರಂಥಕ್ಕೂ ತೋರುವುದಿಲ್ಲ. ಆದರೆ, ಈ ನಿಯಮಕ್ಕೆ ಆಕ್ಷೇಪವಾಗಿ, ‘ಮಿಲಿಂದ ಪ್ರಶ್ನೆ’ಯೊಂದು ಮಾತ್ರ ಅವರಿಗೆ ಪಿಟಕಗಳಷ್ಟೇ ಪೂಜನೀಯ ಪ್ರಮಾಣ ಗ್ರಂಥವಾಗಿದೆ.

ಬುದ್ಧನ ಮೂಲಧರ್ಮವು ಅಶೋಕನ ಪ್ರಭಾವದಿಂದ ಸಿಂಹಳ ದಲ್ಲಿ ಪ್ರತಿಷ್ಠಿತವಾಯಿತು; ಅಲ್ಲಿಂದ ಬರ್ಮ ಸಯಾಂಗಳಿಗೆ ಹಬ್ಬಿತು. ಕಾರಣಾಂತರಗಳಿಂದ ತವರೂರಾದ ಹಿಂದೂದೇಶದಲ್ಲಿ ಮರೆಯಾಯಿತು. ಬರ್ಮ ಸಯಾಂಗಳಿಗೆ ಧರ್ಮದಾನ ಮಾಡಿದ ಸಿಂಹಳದಲ್ಲಿ ಕೂಡ ಕಾಲ ಕಾಲಕ್ಕೆ ಗದ್ದುಗೆಗೆ ಏರಿಬಂದ ದೊರೆಗಳ ಚಿತ್ತಪ್ರಸಾದಕ್ಕೆ ಅನುಗುಣವಾಗಿ ಅಶೋಕನ ಕಾಲದಿಂದಲೂ ಬೌದ್ಧಧರ್ಮವು ಎಡವುತ್ತ ಮುಗ್ಗರಿಸುತ್ತ ಏಳುತ್ತ ಬೀಳುತ್ತ ಜನರಲ್ಲಿ ಇದೆಯೆಂದು ಇತ್ತು. ಆದರೆ, ಸಿಂಹಳದಲ್ಲಿ ಬೌದ್ಧಧರ್ಮವು ಸಂಪೂರ್ಣವಾಗಿ ಹೆಸರಳಿದು ಹೋಗುವಂತೆ ತೋರಿಬಂದುದು ಕ್ರಿ. ಶ. ಹದಿನಾರನೆಯ ಶತಮಾನದ ಮೇಲೆ. ಹದಿನಾರನೆಯ ಶತಮಾನದ ಪ್ರಾರಂಭದಲ್ಲಿ ಸಿಂಹಳಕ್ಕೆ

ಪೋರ್ಚುಗೀಸರ ಪ್ರವೇಶವಾಯಿತು; ಅವರೊಡನೆ ಒಂದು ತೆರದ ಕ್ರೈಸ್ತ ಧರ್ಮವೂ ಪ್ರವೇಶಿಸಿತು. ಆಗಿನ ದೊರೆಯಾದ ಧರ್ಮಪಾಲನು ಸ್ವಧರ್ಮದಿಂದ ಮತಾಂತರ ಹೊಂದಿ 'ಡಾನ್ ಜೋನಾಸ್ ಪೆರಿಯ ಬಂಡಾರ' ಎಂದು ಹೆಸರಿಟ್ಟುಕೊಂಡನು! ಹದಿನಾರನೆಯ ಶತಮಾನದ ಕಡೆಯಲ್ಲಿ ಡಚ್ಚರು ಸಿಂಹಳವನ್ನು ಆಕ್ರಮಿಸಿ, ಬೇರೊಂದು ವಿಧದ ಕ್ರೈಸ್ತಧರ್ಮವನ್ನು ತಂದರು. ಹದಿನೆಂಟನೆಯ ಶತಮಾನದಲ್ಲಿ ಸಿಂಹಳವು ಇಂಗ್ಲಿಷರ ಪಾಲಾಯಿತು; ಆಂಗ್ಲ ಪಾದ್ರಿಗಳ ಕಣ್ಣು ಸಿಂಹಳದ ಬೌದ್ಧಧರ್ಮದ ಮೇಲೆ ಬಿತ್ತು. ಅವರು, ತಾವು ಬಲ್ಲ ಚಮತ್ಕಾರಗಳನ್ನೆಲ್ಲ ಬಳಸಿ ಬೌದ್ಧಧರ್ಮವನ್ನು ಮೆಟ್ಟಿ ಸ್ವಧರ್ಮವನ್ನು ಎತ್ತಿ ಕಟ್ಟಬೇಕೆಂದು ಸರ್ವ ವಿಧದಿಂದಲೂ ಯತ್ನಿಸುತ್ತಿದ್ದಾಗ; ಅಲ್ಲಿ ಇಲ್ಲಿ ಮೂಲೆಗಳಲ್ಲಿ ಭಿಕ್ಷುಗಳ ಅವಶೇಷವು ರಾಜಾಶ್ರಯವಿಲ್ಲದೆ, ಜನ ಧನ ಸಹಾಯವಿಲ್ಲದೆ, ಧರ್ಮವನ್ನು ಉಳಿಸುವುದಕ್ಕಾಗಿ ಶ್ರದ್ಧೆಯಿಂದ ಹೆಣಗಾಡುತ್ತಿದ್ದಾಗ; ಕ್ರೈಸ್ತಪಾದ್ರಿಗಳ ಅಪಹಾಸ್ಯ, ಆಕ್ಷೇಪ, ಅಪಪ್ರಚಾರಗಳ ಆವರ್ತದಿಂದ ಬೌದ್ಧಧರ್ಮವನ್ನು ಉದ್ಧರಿಸಲು 'ಮೋಹೋಟ್ಟವತ್ತೇ ಗುಣಾನಂದ' ಎಂಬ ಸಿಂಹಳದ ಧರ್ಮವೀರನಾದ ಶ್ರಾಮಣೇರನು ಸಿಂಹನಾದಮಾಡಿ ಪಾದ್ರಿಗಳ ಪಾಳೆಯದೆದುರು ನಿಂತು ಸತ್ಯಧರ್ಮಸ್ಥಾಪನೆಗೆ ಅವರನ್ನು ಆಹ್ವಾನಿಸಿದಾಗ; ಬಹಿರಂಗವಾದ ಮಹಾಸಭೆಯಲ್ಲಿ, ಅವರ ಒಂದೊಂದು ಆಕ್ಷೇಪಕ್ಕೂ ತಕ್ಕ ಸಮಾಧಾನ ಕೊಟ್ಟು ಅವರ ಬಾಯಿಕಟ್ಟಿ, ಅವರ ಧರ್ಮದಲ್ಲಿಯೇ ಕುಂದು ಕೊರತೆಗಳನ್ನು ಎತ್ತಿ ತೋರಿಸಿ, ಬೌದ್ಧಧರ್ಮದ ಮೇಲ್ಮೆಯನ್ನು ನ್ಯಾಯವಾದದಿಂದ ಬೆಳಗಿ ಬೌದ್ಧಧರ್ಮವನ್ನು ಮರಳಿ ಸಿಂಹಳದಲ್ಲಿ ಸ್ಥಾಪಿಸಿದಾಗ; ಗುಣಾನಂದನು ತನ್ನ ಧರ್ಮಯುದ್ಧಕ್ಕೆ ಕೊಂಡುಯ್ದ ಸೇನೆಯೆಂದರೆ, ಈ 'ಮಿಲಿಂದ ಪ್ರಶ್ನೆ'ಯ ಪಾಲಿಗ್ರಂಥವೊಂದೇ! ಹೀಗೆ 'ಮಿಲಿಂದ ಪ್ರಶ್ನೆ'ಯ ಬಲದಿಂದ ಅಂದು ಕ್ರಿ. ಶ. ೧೮೭೩ರ ಆಗಸ್ಟು ತಿಂಗಳಿನಲ್ಲಿ ಬೌದ್ಧಧರ್ಮದ ಪುನರುತ್ಥಾನವಾಗಿ, ಇಂದು ಬೌದ್ಧಧರ್ಮವು ಸಿಂಹಳ ಧರ್ಮವಾಗಿರಲಾಗಿ, 'ಮಿಲಿಂದ ಪ್ರಶ್ನೆ'ಯು ಬೌದ್ಧರ ದೃಷ್ಟಿಯಲ್ಲಿ ಪಿಟಕಗಳ ಸಮಾನಸ್ಥಾನವನ್ನು ಪಡೆದಿರುವುದು ಸಹಜ ತಾನೆ!

* * *

ಪಾಲಿಯ 'ಮಿಲಿಂದ ಪಞ್ಹ'ದಲ್ಲಿ ಏಳು ಭಾಗಗಳಿವೆ.

೧. ಬಾಹಿರ ಕಥೆ:—ಮಿಲಿಂದನೆಂಬ ರಾಜನ ನಗರದ ವರ್ಣನೆ; ಆ ರಾಜನ, ಮತ್ತು ಆತನು ಕಂಡು ಮಾತನಾಡಿಸಿದ ನಾಗಸೇನನೆಂಬ ಭಿಕ್ಷುವಿನ ಪೂರ್ವಜನ್ಮ ವೃತ್ತಾಂತ; ಅವರ ಈ ಜನ್ಮದ ಕಾರಣ; ವಾದಿಯಾದ ಮಿಲಿಂದನು ನಾಗಸೇನನನ್ನು ದೂರದಿಂದ ಕಂಡು ಅವನೊಡನೆ ಕಥಾಸಲ್ಲಾಪ ನಡಿಸಬೇಕೆಂದು ಬಯಸುವುದು—ಇದು ಈ ಭಾಗದ ವಸ್ತು.

೨. ಲಕ್ಷಣ ಪ್ರಶ್ನೆ:—ಈ ಭಾಗದಲ್ಲಿ, ಮಿಲಿಂದನು ನಾಗಸೇನನ ಬಳಿಸಾರಿ ಕೆಲವು ಪ್ರಶ್ನೆಗಳನ್ನು ಕೇಳುವನು; ಅವನ ಉತ್ತರಗಳಿಗೆ ಮೆಚ್ಚಿ, ಮಾರನೆಯ ದಿನ ಅವನಿಗೆ ಭಿಕ್ಷೆ ನೀಡುವನು. ಅಂದು, ನಾಗಸೇನನ ಊಟವಾದ ಮೇಲೆ, ಮಿಲಿಂದನು ಕೆಲವು ಪ್ರಶ್ನೆ ಕೇಳುವನು; ಸ್ಥವಿರನು ಉತ್ತರಕೊಟ್ಟು ವಿವರಿಸುವನು. ದೊರೆಯು ಶೀಲ ಮುಂತಾದ ಹಲವು ಕುಶಲಧರ್ಮಗಳ ಲಕ್ಷಣಗಳನ್ನೇ ಹೆಚ್ಚಾಗಿ ಕೇಳುವುದರಿಂದ ಈ ಭಾಗವು 'ಲಕ್ಷಣ ಪ್ರಶ್ನೆ'ಯೆನಿಸಿದೆ.

೩. ವಿಮತಿಚ್ಛೇದನ ಪ್ರಶ್ನೆ:—ಇಲ್ಲಿ, ಧರ್ಮವನ್ನು ಕುರಿತು ತನಗಿರುವ ಹಲವು ಸಂದೇಹಗಳನ್ನು ಮಿಲಿಂದನು ನಾಗಸೇನನಿಗೆ ತಿಳಿಸುವನು. ಸ್ಥವಿರನು ಆ ಸಂದೇಹಗಳು ಹರಿಯುವ ರೀತಿಯಲ್ಲಿ ಉತ್ತರ ಕೊಡುವನು.

ರಾಜನು ಸ್ಥವಿರನ ವಿವರಣೆಗಳಿಂದ ತೃಪ್ತನಾಗಿ, ಅವನಿಗೆ ಮರ್ಯಾದೆ ಮಾಡಿ, ತಾನು ಬೌದ್ಧಧರ್ಮಕ್ಕೆ ಪ್ರಸನ್ನನಾದುದನ್ನು ವ್ಯಕ್ತಗೊಳಿಸುವನು. ರಾಜನೂ ಭಿಕ್ಷುವೂ ಒಬ್ಬರನ್ನು ಒಬ್ಬರು ಮೆಚ್ಚುವರು.

೪. ಮೇಂಡಕ ಪ್ರಶ್ನೆ:—ಎರಡು ತುದಿಯ 'ಟಗರು ಪ್ರಶ್ನೆ'. 'ನೀವು ಮಾಡುವ ಪೂಜೆಯನ್ನು ಬುದ್ಧನು ಸ್ವೀಕರಿಸಿದರೆ, ಅವನು ಪರಿನಿರ್ವಾಣ ಪಡೆದವನಾಗುವುದಿಲ್ಲ; ಲೋಕಕ್ಕೆ ಸೇರಿದವನಾಗುವನು. ಅವನು ಪರಿನಿರ್ವಾಣ ಪಡೆದವನೇ ಆಗಿ, ನಿಮ್ಮ ಪೂಜೆಯನ್ನು ಸ್ವೀಕರಿಸದಿದ್ದರೆ, ನಿಮ್ಮ ಪೂಜೆಯಿಂದ ಫಲವಿಲ್ಲ. ಇದು ಟಗರಿನ ಕೊಂಬಿನಂತೆ ಎರಡು ತುದಿಯ ಪ್ರಶ್ನೆ. ಇದಕ್ಕೆ ಸಮಾಧಾನವೇನು?' . . . 'ಬುದ್ಧನ ಸಂಘವನ್ನು ಒಡೆಯಲಾಗುವುದಿಲ್ಲ—ಎನ್ನುವಿರಿ. ಪುನಃ, ದೇವದತ್ತನು

ಐನೂರು ಭಿಕ್ಷುಗಳ ಸಂಘದಲ್ಲಿ ಒಂದೇ ಏಟಿಗೆ ಒಡಕುಹುಟ್ಟಿಸಿದನು—ಎನ್ನುವಿರಿ. ಈ ಎರಡರಲ್ಲಿ ಒಂದು ನಿಜವಾದರೆ, ಒಂದು ಸುಳ್ಳಾಗಬೇಕು. ಇದು ಟಗರಿನ ಕೊಂಬಿನಂತೆ ಎರಡು ತುದಿಯ ಪ್ರಶ್ನೆ. ಇದಕ್ಕೇನು ಸಮಾಧಾನ?" . . . . . ಎಂದು ಈ ರೀತಿಯ ಎಂಬತ್ತು 'ಟಗರು ಪ್ರಶ್ನೆ'ಗಳನ್ನು ದೊರೆ ಕೇಳುವನು. ಸ್ಥವಿರನು ಸಮಾಧಾನ ಹೇಳುವನು.

೫. ಅನುಮಾನ ಪ್ರಶ್ನೆ:—ಬುದ್ಧನು ಇದ್ದುದಕ್ಕೆ ಏನು ಗುರುತೆಂದು ದೊರೆ ಕೇಳುವನು. ಮೃತನಾದ ರಾಜನ ವಸ್ತುಗಳನ್ನು ಕಂಡು ಆತನನ್ನು ತಿಳಿಯುವಂತೆ, ಸುನಿರ್ಮಿತವಾದ ನಗರವನ್ನು ಕಂಡು ಅದರ ಶಿಲ್ಪಿಯನ್ನು ತಿಳಿಯುವಂತೆ, ಭಗವಂತನ ಅರ್ಹತಲಕ್ಷಣಗಳನ್ನೂ ಆತನು ರಚಿಸಿದ ಧರ್ಮನಗರವನ್ನೂ ಕಂಡು ಆತನ ಅಸ್ತಿತ್ವವನ್ನು ತಿಳಿಯಬಹುದೆಂದು ನಾಗಸೇನನು ವಿವರಿಸುವನು.

೬. ಧೂತಾಂಗಗಳು:—ಉಪಾಸಕರು ಕೂಡ ನಿರ್ವಾಣ ಪಡೆಯಬಹುದಾದರೆ, ಭಿಕ್ಷುಗಳು ಮಾತ್ರ ಧೂತಾಂಗಗಳೆಂಬ ಕೆಲವು ವಿಶೇಷ ನಿಯಮಗಳನ್ನು ಏಕೆ ಪಾಲಿಸಬೇಕೆಂದು ದೊರೆಯು ಕೇಳುವ ಪ್ರಶ್ನೆಗೆ ಸ್ಥವಿರನು ಉತ್ತರ ಹೇಳುವನು.

೭. ಔಪಮ್ಯಕಥಾ ಪ್ರಶ್ನೆ:— ಅರ್ಹತನಿಗಿರಬೇಕಾದ ಗುಣಗಳನ್ನು ಉಪಮಾನಗಳೊಡನೆ ನಾಗಸೇನನು ದೊರೆಗೆ ತಿಳಿಸುವನು.

ಕಡೆಗೆ, ಗ್ರಂಥದ ಕೊನೆಯಲ್ಲಿ, ಭೂಮಿ ನಡುಗುವುದು, ಮಿಂಚು ಥಳಿಸುವುದು, ಪುಷ್ಪವೃಷ್ಟಿಯಾಗುವುದು, ಬ್ರಹ್ಮನೂ ಪ್ರೀತನಾಗುವನು. ಮಿಲಿಂದನು ತನ್ನ ಮಿಥ್ಯಾದೃಷ್ಟಿಯನ್ನು ನೀಗಿಕೊಂಡು, ನಾಗಸೇನನನ್ನು ಪೂಜಿಸಿ, 'ಮಿಲಿಂದ ವಿಹಾರ'ವೆಂಬ ವಿಹಾರವನ್ನು ಕಟ್ಟಿಸಿ, ಮಗನಿಗೆ ರಾಜ್ಯ ಕೊಟ್ಟು, ತಾನು ಪರಿವ್ರಜಿಸಿ ಅರ್ಹತನಾಗುವನು!

ಇಲ್ಲಿಗೆ 'ಮಿಲಿಂದ ಪ್ರಶ್ನೆ' ಮುಗಿಯುವುದು.

* * *

ಈ 'ಮಿಲಿಂದ ಪ್ರಶ್ನೆ' ಗ್ರಂಥದ ಇತಿವೃತ್ತ ಏನೇನೂ ಸ್ಪಷ್ಟವಾಗಿಲ್ಲ. ಅದನ್ನು ಕುರಿತ ಪಂಡಿತರ ಮತಗಳನ್ನೆಲ್ಲ ಇಲ್ಲಿ ತಿಳಿಸುವುದು ಸಾಧ್ಯ

ವಲ್ಲದುದರಿಂದ, ಅವರು ಕಂಡ ವಿಷಯುಗಳ ಸಾರವನ್ನು ಮಾತ್ರ ಕೆಳಗೆ ತಿಳಿಸಲಾಗುವುದು.*

ಈ ಪ್ರಶ್ನೆಗಳಲ್ಲಿ ವ್ಯೆದೋರುವ ಮಹಾಪುರುಷರು ಇಬ್ಬರು: ಒಬ್ಬನು ಮಿಲಿಂದನೆಂಬ ದೊರೆ, ಇನ್ನೊಬ್ಬನು ನಾಗಸೇನನೆಂಬ ಭಿಕ್ಷು. ಇವರಲ್ಲಿ ನಾಗಸೇನನು ಯಾರೆಂದು ತಿಳಿದುಬಂದಿಲ್ಲ. ಕ್ರಿ. ಪೂ. ಒಂದನೆಯ ಶತಮಾನದಲ್ಲಿ ಹಿಂದೂದೇಶದ ವಾಯುವ್ಯಭಾಗದಲ್ಲಿ ರಾಜ್ಯ ವಾಳುತ್ತಿದ್ದ ಮಿನಾಂದರನೆಂಬ ಗ್ರೀಕೋ-ಬ್ಯಾಕ್ಟ್ರಿಯದ ದೊರೆಯೇ ಈ ಪ್ರಶ್ನೆಗಳ ಮಿಲಿಂದರಾಜನೆಂದು ಪಂಡಿತರು ತಿಳಿಸುವರು. ಈ ದೊರೆಯು ಬೌದ್ಧ ಭಿಕ್ಷುವೊಬ್ಬನೊಡನೆ ವಾದಮಾಡಿದ ಐತಿಹಾಸಿಕ ಘಟನೆಯನ್ನು ಈ ಗ್ರಂಥವು ನಿರೂಪಿಸುವುದೋ, ಅಥವಾ ಇದರಲ್ಲಿನ ಸಂವಾದಗಳೆಲ್ಲ ಮಿಲಿಂದನ ಹೆಸರನ್ನು ಹಿಂದೆ ಇಟ್ಟುಕೊಂಡು ಕಲ್ಪಿತ ವಾದುವೋ ತಿಳಿದುಬರುವಂತಿಲ್ಲ.

ಈ 'ಮಿಲಿಂದ ಪ್ರಶ್ನೆ'ಯನ್ನು ಬರೆದವನ ವಿಷಯವೇನೂ ಗೊತ್ತಿಲ್ಲ. ಇದು ಒಬ್ಬನೇ ಗ್ರಂಥಕರ್ತೃವಿನ ಕೆಲಸವೆಂದು ಕೆಲವು ಪಂಡಿತರೂ, ಇದರಲ್ಲಿನ ಹಲವು ಭಾಗಗಳನ್ನು ಹಲವರು ಬರೆದರೆಂದು ಇತರರೂ, ಒಬ್ಬನೇ ಬರೆದ 'ಮಿಲಿಂದ ಪ್ರಶ್ನೆ'ಯನ್ನು ಈಚೆಗೆ ಅನೇಕರು ತಿದ್ದಿ ಸಂಪಾದಿಸಿದರೆಂದು ಬೇರೆ ಕೆಲವರೂ ಅಭಿಪ್ರಾಯಪಡುವರು. ಅಂತೂ,

---

* ಹೆಚ್ಚು ವಿವರಗಳಿಗೆ ಈ ಸಾಹಿತ್ಯಗಳನ್ನು ನೋಡಬಹುದು.

1. NĀGASENA, by T. W Rhys Davids, J. R. A. S. 1891.
2. Questions of King Milinda, Parts 1 and 2, by T. W. Rhys Davids, 1925 and 1894.
3. Chinese Translations of the Milinda Panha, by Takakusu, J R A S. 1896.
4. Historical Basis for the Questions of King Menander, from the Tibetan, by L. A Waddel, J. R. A. S. 1897.
5. Milinda, by T. W Rhys Davids. Encyclopœdia of Religion and Ethics. pp. 631—633.
6. Milinda Questions, by Mrs. Rhys Davids, 1930.
7. History of Indian Literature, Part 2, by M. Winternitz, 1933, pp 174—183.

"'ಮಿಲಿಂದ ಪ್ರಶ್ನೆ'ಯ ಏಳು ಭಾಗಗಳಲ್ಲಿ 'ಲಕ್ಷಣ ಪ್ರಶ್ನೆ' ಮತ್ತು 'ವಿಮತಿಚ್ಛೇದನ ಪ್ರಶ್ನೆ' ಮಾತ್ರ ಸಹಜವಾದ 'ಮೂಲ ಮಿಲಿಂದ ಪ್ರಶ್ನೆ'; ಮಿಕ್ಕ ಐದು ಭಾಗಗಳು ಪ್ರಕ್ಷಿಪ್ತವಾದುವು" ಎಂದು ಎಲ್ಲ ಪಂಡಿತರೂ ಒಪ್ಪಿರುವರು.

ಮಿಸೆಸ್ ರ್ಹಿಸ್ ಡೇವಿಡ್ಸ್ ಪಂಡಿತೆಯು "ಮಿಲಿಂದನಿಗೂ ಒಬ್ಬ ಬೌದ್ಧ ಭಿಕ್ಷುವಿಗೂ ವಾದ ನಡೆದಿರಬೇಕು. ಅದರ ವರದಿಯನ್ನು ಲೋಹದ ಹಾಳೆಗಳಲ್ಲಿ ಬರೆದು ಅರಮನೆಯ ಸರಸ್ವತೀ ಭಂಡಾರದಲ್ಲಿ ಇಟ್ಟಿರಬಹುದು. ಮಿಲಿಂದನ ಅನಂತರ ಬಂದ ದೊರೆಯು, ಆ ಲೋಹದ ಹಾಳೆಗಳಲ್ಲಿಯ ವರದಿಗೆ ಒಂದು ರೂಪುಕೊಟ್ಟು ಸಂಸ್ಕರಿಸುವಂತೆ ಪಂಡಿತನೊಬ್ಬನಿಗೆ ಆಜ್ಞಾಪಿಸಿರಬಹುದು. ಆ ಪಂಡಿತನಿಗೆ 'ಮಾಣವ' ಎಂದು ಹೆಸರಿಡೋಣ. ಅವನು ಬ್ರಾಹ್ಮಣನಾಗಿದ್ದಿರಬಹುದು; ಬೌದ್ಧವಿದ್ಯಾಲಯವಾದ ನಾಲಂದದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ಅನಂತರ ದೊರೆಯ ಆಜ್ಞೆಯಂತೆ 'ಮಿಲಿಂದ ಪ್ರಶ್ನೆ'ಯನ್ನು ಬರೆದಿರಬಹುದು. ಈ 'ಮಿಲಿಂದ ಪ್ರಶ್ನೆ'ಯು ನಮ್ಮ ಗ್ರಂಥದ 'ಲಕ್ಷಣ ಪ್ರಶ್ನೆ' ಮತ್ತು 'ವಿಮತಿಚ್ಛೇದನ ಪ್ರಶ್ನೆ' ಮಾತ್ರ. ಇದರಿಂದ ಮಾಣವನಿಗೆ ಯಶಸ್ಸು ದೊರೆತಿರಬೇಕು. ಆಗ, ಕೆಲವು ವರುಷಗಳಾದ ಮೇಲೆ, ತನಗೆ ಹೆಸರುತಂದ 'ಮಿಲಿಂದ ಪ್ರಶ್ನೆ'ಯನ್ನು ಮುಂದುವರಿಸಬೇಕೆಂದು ತಾನು ನಾಲಂದದಲ್ಲಿ ಪಡೆದ ಬೌದ್ಧ ಧರ್ಮಜ್ಞಾನವನ್ನು ಬೆಳೆಸಿಕೊಂಡು 'ಮೇಂಡಕ ಪ್ರಶ್ನೆ' ಮುಂತಾದ ಕಡೆಯ ನಾಲ್ಕು ಭಾಗಗಳನ್ನು ಬರೆದಿರಬಹುದು. ಈ ಆರು ಭಾಗಗಳಿಗೆ ಪ್ರವೇಶರೂಪವಾಗಿರುವ 'ಬಾಹಿರ ಕಥೆ'ಯ ಕೆಲವು ಭಾಗಗಳನ್ನು ಮಾಣವನು ಬರೆದಿರಬಹುದು, ಉಳಿದುದು ಪ್ರಕ್ಷಿಪ್ತವಾಗಿರಬಹುದು; ಅಥವಾ ಇಡೀ 'ಬಾಹಿರ ಕಥೆ'ಯನ್ನು ಸಿಂಹಳದ ಭಿಕ್ಷುಗಳು ಸೇರಿಸಿರಬಹುದು" ಎಂದು ಈ ರೀತಿಯಾಗಿ 'ಮಿಲಿಂದ ಪ್ರಶ್ನೆ'ಯ ಭವವನ್ನೂ ಅದರ ಕರ್ತೃವನ್ನೂ ಕುರಿತು ಕಲ್ಪಿಸಿದ್ದಾಳೆ.

'ಮಿಲಿಂದ ಪ್ರಶ್ನೆ'ಯ ಎರಡು ಮೂರನೆಯ ಭಾಗಗಳು ಮಾತ್ರ ಸಹಜ ಮೂಲವೆಂದೂ ಉಳಿದುವು ಪ್ರಕ್ಷಿಪ್ತವೆಂದೂ ಪಂಡಿತರು ಹೇಳುವುದಕ್ಕೆ ಕಾರಣಗಳು ಹಲವು. ಎರಡು ಮೂರನೆಯ ಭಾಗಗಳಲ್ಲಿ

ಕಾಣುವ ಪ್ರಶ್ನೋತ್ತರಗಳ ತೀವ್ರಗತಿಯು ಕಡೆಯ ನಾಲ್ಕು ಭಾಗಗಳಲ್ಲಿ ಇಲ್ಲ; ಇಲ್ಲಿ ರಾಜನು ಹ್ಞೂಗುಟ್ಟುವ ಬೊಂಬೆ, ನಾಗಸೇನನು ಉಪನ್ಯಾಸ ಕರ್ತ. ಮೂರನೆಯ ಭಾಗದ ಕಡೆಯಲ್ಲಿ ಮಿಲಿಂದ ಪ್ರಶ್ನೆ ಮುಗಿಯಿತೆಂದು ಸಮಾಪ್ತಿ ವಾಕ್ಯಗಳಿವೆ; ನಾಲ್ಕನೆಯ 'ಮೇಂಡಕ ಪ್ರಶ್ನೆ'ಗೆ ಪ್ರತ್ಯೇಕವಾದ ಪ್ರಾರಂಭಮುಖವಿದೆ. ಇನ್ನೊಂದು ಮುಖ್ಯವಾದ ಕಾರಣವೆಂದರೆ, ಚೀನಾ ಭಾಷೆಯಲ್ಲಿ ಸಿಕ್ಕುವ 'ಮಿಲಿಂದ ಪ್ರಶ್ನೆ'ಯ ಭಾಷಾಂತರದ ಎರಡು ಪ್ರಾಚೀನ ಪ್ರತಿಗಳಲ್ಲೂ 'ಮೇಂಡಕ ಪ್ರಶ್ನೆ' ಮೊದಲಾದ ಕಡೆಯ ನಾಲ್ಕು ಭಾಗಗಳು ದೊರೆಯುವುದಿಲ್ಲ.

ಈ ಏಳು ಭಾಗಗಳ 'ಮಿಲಿಂದ ಪ್ರಶ್ನೆ'ಯು ನಮಗೆ ಸಿಕ್ಕುವುದು ಪಾಲಿಯಲ್ಲಿ ಮಾತ್ರ; ಸಿಂಹಳ, ಬರ್ಮಾ, ಸಯಾಂ ದೇಶಗಳಲ್ಲಿ. ಈ ಗ್ರಂಥವು ಬರ್ಮಾ ಸಯಾಂಗಳಿಗೆ ಸಿಂಹಳದಿಂದ ಹೋಯಿತು. 'ಮಿಲಿಂದ'ದ ಮೂಲವು ಸಿಂಹಳಕ್ಕೆ ಹಿಂದೂದೇಶದಿಂದ ದೊರೆಯಿತೆಂದು ಪಂಡಿತರು ಅಭಿಪ್ರಾಯಪಡುವರು. ಈ ಮೂಲ ಮಿಲಿಂದ ಪ್ರಶ್ನೆಯು ಹಿಂದೂದೇಶದ ಯಾವ ಭಾಗದಿಂದ ಸಿಂಹಳಕ್ಕೆ ಯಾವ ರೂಪದಲ್ಲಿ ಯಾವಾಗ ಹೇಗೆ ಮುಟ್ಟಿತೆಂಬುದು ಸ್ಪಷ್ಟವಾಗಿಲ್ಲ. ನಾವು ಪುನಃ ಪಂಡಿತರ ಮತಗಳಿಗೇ ಶರಣಾಗಬೇಕು.

ಈ ಪ್ರಶ್ನೆಗಳ ಮಿಲಿಂದನು ಗ್ರೀಕೋ-ಬ್ಯಾಕ್ಟ್ರಿಯದ ಮಿನಾಂದರನಾದರೆ, ಅವನು ಇದ್ದುದು ಕ್ರಿ. ಪೂ. ೧ನೆ ಶತಮಾನದಲ್ಲಿ. ಬುದ್ಧಘೋಷನ ಕಾಲಕ್ಕೆ, ಎಂದರೆ ಕ್ರಿ. ಶ. ೫ನೆ ಶತಮಾನದ ವೇಳೆಗೆ ಮಿಲಿಂದ ಪ್ರಶ್ನೆಯು ಪಿಟಕಗಳಷ್ಟೇ ಪ್ರಜ್ಞಪ್ತವಾದ ಪ್ರಮಾಣಗ್ರಂಥವಾಗಿತ್ತು. ಕ್ರಿ. ಶ. ೧ನೆ ಶತಮಾನದ ವೇಳೆಗೆ ಗ್ರೀಕೋ-ಬ್ಯಾಕ್ಟ್ರಿಯದ ಆಧಿಪತ್ಯವು ಹಿಂದೂದೇಶದಿಂದ ಮರೆಯಾಗಿ, ಕ್ರಿ. ಶ. ೫ನೆಯ ಶತಮಾನದ ವೇಳೆಗೆ 'ಮಿಲಿಂದ ಪ್ರಶ್ನೆ'ಯು ಅಷ್ಟು ಪ್ರಾಮುಖ್ಯತೆ ಪಡೆಯಬೇಕಾಗಿದ್ದರೆ, ಮಿಲಿಂದನ ಹೆಸರು ಇನ್ನೂ ಜನರ ಸ್ಮೃತಿಪಥದಲ್ಲಿ ಸುಳಿದಾಡುತ್ತಿರುವಾಗಲೇ ಈ ಕೃತಿ ರಚಿತವಾಗಿರಬೇಕು; ಎಂದರೆ, ಕ್ರಿ. ಪೂ. ೧ನೆ ಶತಮಾನದ ಕಡೆಯ ಭಾಗದಲ್ಲಿ ಈ ಕೃತಿಯು ರಚನೆಯಾಗಿರಬಹುದು.

ಮೂಲ ಮಿಲಿಂದ ಪ್ರಶ್ನೆಯು, ಮಿಲಿಂದನ ನೆನಪು ಗಾಢವಾಗಿದ್ದ ಹಿಂದೂದೇಶದ ವಾಯುವ್ಯ ಭಾಗದಲ್ಲಿ ಬರೆಯಲ್ಪಟ್ಟಿರಬೇಕು. ಆದ್ದರಿಂದ ಅದರ ಭಾಷೆಯು ಸಂಸ್ಕೃತವಾಗಿದ್ದಿರಬೇಕು, ಅಥವಾ ಆ ಪ್ರಾಂತ್ಯದ ಪ್ರಾಕೃತಪ್ರಭೇದವಾಗಿದ್ದಿರಬೇಕು. ಅಶೋಕನ ಕಾಲದಿಂದ ಹಿಂದೂ ದೇಶಕ್ಕೂ ಸಿಂಹಳಕ್ಕೂ ಧರ್ಮಬಾಂಧವ್ಯನಿದ್ದಿತಾದ್ದರಿಂದ; ಕ್ರಿ. ಶ. ಮೂರನೆಯ ಶತಮಾನದಲ್ಲಿ ವೈತುಲ್ಯಕರೆಂಬ ಬೌದ್ಧರ ಪಂಗಡವು ಸಿಂಹಳ ದಲ್ಲಿ ಪ್ರಬಲವಾಗಿತ್ತಾದ್ದರಿಂದ; ಸಂಶೋಧನೆಗಳಿಂದ ತಿಳಿಯುವಂತೆ ಈ ವೈತುಲ್ಯಕರು ಮಹಾಯಾನವನ್ನು ಅವಲಂಬಿಸಿದವರಾಗಿದ್ದರೆ, ಅವರ ಧರ್ಮಗ್ರಂಥಗಳು ಸಂಸ್ಕೃತದಲ್ಲಿರುವುದು ಸಹಜವಾದ್ದರಿಂದ; ಪ್ರಾಕೃತ ದಿಂದ ಸಂಸ್ಕೃತಕ್ಕೆ ರೂಪಾಂತರವಾದ ಅಥವಾ ಸಂಸ್ಕೃತಸ್ವರೂಪದಲ್ಲಿಯೇ ರಚಿತವಾದ ಮಿಲಿಂದ ಪ್ರಶ್ನೆಯು ಹಿಂದೂದೇಶದ ವಾಯುವ್ಯಭಾಗದಿಂದ ಸಿಂಹಳಕ್ಕೆ – ವ್ಯಾಪಾರಿಗಳ ಮೂಲಕವೋ ಭಿಕ್ಷುಗಳ ಮೂಲಕವೋ — ಪ್ರವೇಶಿಸಿರಬಹುದೆಂದರೆ ಅಸಂಭವವಾಗಲಾರದು. ಆದರೆ ಸಿಂಹಳಕ್ಕೆ ಯಾವಾಗ ಪ್ರವೇಶಿಸಿತೆಂದು ತಿಳಿಯದು.

ಸಿಂಹಳದ ಬೌದ್ಧರು ಹೀನಯಾನಿಗಳು. ಅವರ ಧರ್ಮಗ್ರಂಥ ಗಳಿರುವುದು ಪಾಲಿಭಾಷೆಯಲ್ಲಿ ಮಹಾಯಾನಿಗಳ ಸಂಸ್ಕೃತ ಗ್ರಂಥ ಗಳಿಗೆ ಅವರು ಬೆಲೆಕಟ್ಟುವುದಿಲ್ಲ. ಆದರೆ ಸಂಸ್ಕೃತ ರೂಪದಲ್ಲಿ ಹಿಂದೂ ದೇಶದಿಂದ ಆಗಮಿಸಿದ ಮಿಲಿಂದ ಪ್ರಶ್ನೆಯಲ್ಲಿ ಅಭಿಧರ್ಮಪಿಟಕದ ಬೋಧೆಯೇ ರೂಪಭೇದದಿಂದ ತಿಳಿಸಲ್ಪಟ್ಟಿರುವುದಕ್ಕೆ ಮೆಚ್ಚಿ, ಸಿಂಹಳದ ಹೀನಯಾನಿಗಳು ಆ ಸಂಸ್ಕೃತ ಮೂಲವನ್ನು ತಮ್ಮ ಧರ್ಮಗ್ರಂಥಗಳ ಭಾಷೆಯಾದ ಪಾಲಿಯಲ್ಲಿ ಅನುವಾದಮಾಡಿ ತಮ್ಮದು ಮಾಡಿಕೊಂಡ ರೆಂದು ತೋರುತ್ತದೆ. ಆದರೆ ಈಗ ಪಾಲಿ 'ಮಿಲಿಂದ'ವಲ್ಲದೆ, ಸಂಸ್ಕೃತ 'ಮಿಲಿಂದ' ದೊರೆಯುವುದಿಲ್ಲ. ಹೀಗೆ ರೂಪಾಂತರ ಪಡೆದಿರಬಹುದಾದ ಪಾಲಿ 'ಮಿಲಿಂದ'ದಲ್ಲಿ ಮೂಲದಲ್ಲಿಲ್ಲದಿದ್ದ ಹಲವು ಭಾಗಗಳು ಹೊಸದಾಗಿ ಸೇರಿದುವೆಂದು ಸಹಜವಾಗಿ ಶಂಕೆ ಬರುತ್ತದೆ. ಗ್ರಂಥದ ಹಿಂದುಮುಂದುಗಳನ್ನು ನೋಡುವಾಗ ಈ ಶಂಕೆ ದೃಢ ವಾಗುತ್ತದೆ.

* * *

ಮುಂದೆ ಕೊಟ್ಟಿರುವ ಅನುವಾದಗಳಲ್ಲಿ 'ಮಿಲಿಂದ ಪ್ರಶ್ನೆ'ಯ ಪ್ರಕ್ಷಿಪ್ತವೆನಿಸಿರುವ ಕಡೆಯ ನಾಲ್ಕು ಭಾಗಗಳನ್ನು ಸದ್ಯಕ್ಕೆ ಬಿಟ್ಟಿದೆ.* ತೆಗೆದುಕೊಂಡಿರುವ ಮೊದಲ ಮೂರರಲ್ಲಿ 'ಲಕ್ಷಣ ಪ್ರಶ್ನೆ', 'ವಿಮತಿಚ್ಛೇದನ ಪ್ರಶ್ನೆ'ಗಳನ್ನು ಸಂಪೂರ್ಣವಾಗಿ ಅನುವಾದಮಾಡಿದೆ; 'ಬಾಹಿರ ಕಥೆ'ಯಲ್ಲಿ, ವಿಂಟರ್‌ನಿಟ್ಸ್ ಪಂಡಿತನ ಮತದಂತೆ ಪ್ರಕ್ಷಿಪ್ತವೆನಿಸಿದ ಭಾಗಗಳನ್ನು ಮಾತ್ರ ಸಂಗ್ರಹಿಸಿ, ಮಿಕ್ಕುದನ್ನು ಮೂಲದಂತೆಯೆ ತರಲಾಗಿದೆ.

ಈ ಅನುವಾದಗಳಿಗೆ, ಟ್ರೆಂಕ್ನರ್ ಪಂಡಿತನು ಸಂಪಾದಿಸಿ ಲಂಡನ್ನಿನ 'ರಾಯಲ್ ಏಷ್ಯಾಟಿಕ್ ಸೊಸೈಟಿ'ಯು (1928) ಪ್ರಕಟಿಸಿರುವ ಮಾತೃಕೆಯೆ ಮೂಲ. ಯಶಃಕಾಯನಾದ ರ್‍ಹಿಸ್ ಡೇವಿಡ್ಸ್ ಪಂಡಿತನ ಆಂಗ್ಲ ಅನುವಾದದಿಂದಲೂ, ರ್‍ಹಿಸ್ ಡೇವಿಡ್ಸ್ ಮತ್ತು ಸ್ಟೀಡ್ ಅವರ ಹೊಸ ಪಾಲಿ ಶಬ್ದಕೋಶದಿಂದಲೂ ಬಹು ಉಪಕೃತರಾಗಿದ್ದೇವೆ.

ಇಲ್ಲಿಯ ಅನುವಾದಗಳು ಮೂಲಪಾಲಿಯ ಜಾಡನ್ನೇ ಬಿಡದೆ ಹಿಡಿದಿದ್ದರು ಕೂಡ, ಮೂಲದಲ್ಲಿ ಮೇಲಿಂದ ಮೇಲೆ ಬರುವ 'ಪೆಯ್ಯಾಲ'† ಗಳನ್ನು ಸಂಕ್ಷೇಪಮಾಡಿ, ಅನುವಾದವನ್ನು ಓದಲು ಹೆಚ್ಚು ಇಷ್ಟವಾಗುವಂತೆ ಮಾಡಿದೆ. ಅನುವಾದದ ಸ್ಪಷ್ಟತೆಗಾಗಿ, ಮೂಲದಲ್ಲಿ ಇಲ್ಲದ ಕೆಲವು ಮಾತುಗಳನ್ನು ಹೊಸದಾಗಿ ಸೇರಿಸಿದೆ; ಅಂತಹ ಭಾಗಗಳನ್ನು ಚೌಕದ ಆವರಣಗಳಲ್ಲಿ ಹಾಕಿ ತೋರಿಸಿದೆ. ಉದಾಹರಣೆಗೆ

ಪಾಲಿ ಮೂಲ: —

'ಕತಿವಸ್ಸೋಸಿ ತ್ವಂ, ಭನ್ತೇ ನಾಗಸೇನ?'
'ಸತ್ತ ವಸ್ಸೋಽಹಂ, ಮಹಾರಾಜ.'

ಮಾಡಬೇಕಾದ ಅನುವಾದ: —

'ಭನ್ತೇ ನಾಗಸೇನ, ನೀನು ಎಷ್ಟು ವರ್ಷ?'
'ನಾನು ಏಳು ವರ್ಷ, ಮಹಾರಾಜ'

ಮಾಡಿರುವ ಅನುವಾದ (ಪುಟ ೩೭): —

'ಭನ್ತೇ ನಾಗಸೇನ, ನೀನು [ಭಿಕ್ಷುವಾಗಿ] ಎಷ್ಟು ವರ್ಷ[ವಾಯಿತು]?'
'ನಾನು [ಭಿಕ್ಷುವಾಗಿ] ಏಳು ವರ್ಷ[ವಾಯಿತು], ಮಹಾರಾಜ.'

---

* ಈ ಉಳಿದುದನ್ನು ಮುಂದಿನ ವರ್ಷ ಪ್ರಕಟಿಸುವ ಆಲೋಚನೆ ಉಂಟು.

† ಪರ್ಯಾಯ, repetition.

ಅದರಿಂದ, ಈ ಆವರಣಗಳಲ್ಲಿ ಸೇರಿಸಿರುವುದನ್ನು ಬಿಟ್ಟರೆ, ಉಳಿದುದು ಅಕ್ಷರಶಃ ಮೂಲದ ಅನುವಾದವಾಗುವುದು. ಮೂಲದಲ್ಲಿ ಪ್ರತಿಪ್ರಶ್ನೆಯಾದನಂತರ ದೊರೆ ಹೇಳುವ 'ಕಲ್ಲೋ ಸಿ ಭನ್ತೇ ನಾಗಸೇನ' ಎಂಬ ಒಂದೇ ರೀತಿಯ ಸಾಧುಕಾರವನ್ನು 'ನೀನು ಕುಶಲಿ,' 'ನೀನು ಜಾಣ' 'ನೀನು ಚತುರ' ಎಂದು ಮೂರು ಬಗೆಯಾಗಿ ಕನ್ನಡಿಸಿದೆ.

ಈ ಅನುವಾದದಲ್ಲಿ ಗದ್ಯವನ್ನು ದಪ್ಪ ಅಕ್ಷರದಲ್ಲಿಯೂ ಪದ್ಯವನ್ನು ಸಣ್ಣ ಅಕ್ಷರದಲ್ಲಿಯೂ ಮುದ್ರಿಸಿದೆ. ಪದ್ಯರೂಪದಲ್ಲಿ ಅಚ್ಚಾಗಿದ್ದರೂ ಪದ್ಯಭಾಗದ ಅನುವಾದವು ಗದ್ಯರೂಪದಲ್ಲಿದೆ.

ಅನುವಾದವನ್ನು ಆದಷ್ಟು ಕನ್ನಡವಾಗಿ ಸುಲಭವಾಗಿ ಮಾಡಬೇಕೆಂದು ಯತ್ನಿಸಿ ಆಗಿಸಿದ್ದರು ಕೂಡ, ಉಳಿಸಿಕೊಂಡಿರುವ ಬೌದ್ಧ ಪಾರಿಭಾಷಿಕ ಶಬ್ದಗಳಿಂದ ಅನುವಾದವು ಕ್ಲಿಷ್ಟವಾಗಿ ತೋರಬಹುದು. ಅದಕ್ಕಾಗಿ ಗ್ರಂಥದ ಕಡೆಯಲ್ಲಿ ಎರಡು ಸೂಚಿಗಳನ್ನು ಕೊಟ್ಟಿದೆ. ಸೂಚಿಸಿರುವ ಪುಟಗಳಲ್ಲಿಯೇ ಆ ಶಬ್ದದ ಅರ್ಥ ಪರಿಚಯವಾಗುವ ಕಡೆ ಪುನಃ ವಿವರಿಸಿಲ್ಲ; ಇತರ ಕಡೆ ಸಾಕಷ್ಟು ಅರ್ಥ ವಿವರಿಸಲಾಗಿದೆ.

ಶ್ರದ್ಧೆಯಿಂದ ಅನುಗೊಳಿಸಿದ ಈ 'ಮಿಲಿಂದ ಪ್ರಶ್ನೆ'ಯು ಸಹೃದಯರ ಮಡಿಲಿಗಿರಲಿ; ಅವರ ಅನುಕಂಪದಿಂದ ಬೆಳೆಯಲಿ.

ಶಾಕ್ಯ ಸಾಹಿತ್ಯ ಮಂಟಪ
ಮಲ್ಲೇಶ್ವರ, ಬೆಂಗಳೂರು.

ಜಿ. ಪಿ. ರಾಜರತ್ನಂ

ವಿ ವ ರ

		ಪುಟ
೧.	ಬಾಹಿರ ಕಥೆ .	೧೫
೨.	ಲಕ್ಷಣ ಪ್ರಶ್ನೆ	
	ವರ್ಗ ಒಂದು	೩೩
	ವರ್ಗ ಎರಡು	೫೪
	ವರ್ಗ ಮೂರು	೬೯
೩.	ವಿಮತಿಚ್ಛೇದನ ಪ್ರಶ್ನೆ	
	ವರ್ಗ ನಾಲ್ಕು	೮೮
	ವರ್ಗ ಐದು	೯೬
	ವರ್ಗ ಆರು	೧೦೨
	ವರ್ಗ ಏಳು	೧೧೦

೧.	ನಾಮಪದ ಸೂಚಿ	೧೨೭
೨.	ಪದ ವಿಷಯ ಸೂಚಿ	೧೨೮

ನಮೋ
ತಸ್ಸ ಭಗವತೋ ಅರಹತೋ ಸಮ್ಮಾಸಂಬುದ್ಧಸ್ಸ

ಮಿಲಿಂದ ಪ್ರಶ್ನೆ

ಬಾಹಿರ ಕಥೆ[1]

೧

ಮಿಲಿಂದನೆಂಬ ಹೆಸರಿನ ರಾಜನು
ಪುರಗಳಲ್ಲಿ ಉತ್ತಮವಾದ ಸಾಗಲೆಯಲ್ಲಿ
—ಗಂಗೆಯು ಸಾಗರವನ್ನು ಹೇಗೋ ಹಾಗೆ—
ನಾಗಸೇನನ ಬಳಿಗೆ ಹೋದನು.

ಪಂಜನ್ನು ಹಿಡಿದು ಕತ್ತಲೆಯನ್ನು ಓಡಿಸಿ
ಮನೋಹರವಾಗಿ ಮಾತನಾಡುವವನ ಬಳಿಗೆ ರಾಜನು ಸಾರಿ
ಬೇರೆ ಬೇರೆ ಸ್ಥಾನಾಸ್ಥಾನಗತಗಳಾದ
ನಿಪುಣವಾದ ಪ್ರಶ್ನೆಗಳನ್ನು ಕೇಳಿದನು.

ಪ್ರಶ್ನೆಯನ್ನು ಬಿಡಿಸಿದುದು, [ಆ ರೀತಿಯು],
ಗಂಭೀರವಾದ ಅರ್ಥದಿಂದ ಕೂಡಿ,
ಹೃದಯಂಗಮವಾಗಿ, ಕಿವಿಗೆ ಸುಖವಾಗಿ,
ಅದ್ಭುತವಾಗಿ, ರೋಮಾಂಚವನ್ನು ಉಂಟುಮಾಡುತ್ತಿತ್ತು.

ನಾಗಸೇನನ ಮಾತುಕತೆಯು
ಅಭಿಧರ್ಮ ವಿನಯಗಳಲ್ಲಿ ಮುಳುಗಿ,
ಸೂತ್ರದ ಜಾಲಗಳನ್ನು ಬಿಚ್ಚಿ ಬಿಡಿಸಿ,
ಔಪಮ್ಯಗಳಿಂದಲೂ ನಯಗಳಿಂದಲೂ ಚಿತ್ರವಾಗಿತ್ತು.

ಇಲ್ಲಿ ಜ್ಞಾನವನ್ನು ಇರಿಸಿ,
ಮನಸ್ಸನ್ನು ಸಂತೋಷಗೊಳಿಸಿ,
ಸಂಶಯವುಳ್ಳ ಸ್ಥಾನಗಳನ್ನು ನಾಶಮಾಡುವ
ನಿಪುಣವಾದ ಪ್ರಶ್ನೆಗಳನ್ನು ಕಿವಿಗೊಟ್ಟು ಕೇಳಿರಿ.

---

1. ಧರ್ಮಕ್ಕೆ ಹೊರಗಾದ ಕಥೆ 'ಬಾಹಿರ ಕಥೆ'. 'ಮಿಲಿಂದ ಪ್ರಶ್ನೆ'ಯ ಮುಂದಿನ ಭಾಗಗಳಲ್ಲಿ ಧರ್ಮವನ್ನು ಕುರಿತ ಕಥಾಸಲ್ಲಾಪವಾದುದರಿಂದಲೂ, ಈ ಭಾಗದಲ್ಲಿ ಧರ್ಮವನ್ನು ಕುರಿತ ಮಾತುಕತೆಯಿಲ್ಲದಿರುವುದರಿಂದಲೂ, ಇದನ್ನು 'ಬಾಹಿರ ಕಥೆ' ಎಂದು ಕರೆದಿರುವರು.

೨

ಪರಂಪರೆಯಿಂದ ಹೀಗೆ ಕೇಳಿಬಂದಿದೆ:

ಸಾಗಲವೆಂಬ ಹೆಸರಿನ ಯವನಕರ ನಗರವುಂಟು. ಅಲ್ಲಿ ಅನೇಕ [ವ್ಯಾಪಾರದ ಪದಾರ್ಥಗಳ] ಪೆಟ್ಟಿಗೆಗಳನ್ನು ಒಡೆಯುತ್ತಿದ್ದರು.[1] ಅದು ನದಿ ಪರ್ವತಗಳಿಂದ ಶೋಭಿಸುತ್ತಿತ್ತು. ಅಲ್ಲಿಯ ಭೂಮಿಪ್ರದೇಶ ಭಾಗವು ರಮಣೀಯವಾಗಿತ್ತು. [ಆ ನಗರವು] ಆರಾಮ, ಉದ್ಯಾನ, ಉಪವನ, ತಟಾಕ, ಪುಷ್ಕರಿಣಿಗಳಿಂದ ಸಂಪನ್ನವಾಗಿತ್ತು, ನದಿ ಪರ್ವತ ವನಗಳಿಂದ ರಮಣೀಯವಾಗಿತ್ತು. [ಆ ನಗರವು] ಉಪಪೀಡೆಯಿಲ್ಲದೆ ಇತ್ತು. [ಆ ನಗರಕ್ಕೆ] ವಿವಿಧವಾದ ವಿಚಿತ್ರವಾದ ದೃಢವಾದ ಅಟ್ಟಾಲಗಳು, ಕೋಷ್ಟಕಗಳು; ಒಳ್ಳೆಯ ಸೊಗಸಾದ ಗೋಪುರಗಳು, ತೋರಣಗಳು. [ಅಲ್ಲಿಯ] ಅಂತಃಪುರದ ಸುತ್ತ ಆಳವಾದ ಅಗಳು, ಬಿಳಿಯ ಪ್ರಾಕಾರ. ಅಲ್ಲಿಯ ಬೀದಿಗಳನ್ನೂ ಚೌಕಗಳನ್ನೂ, ಅಡ್ಡಮಾರ್ಗಗಳನ್ನೂ ಅಂಗಡಿಬೀದಿಗಳನ್ನೂ ಚೆನ್ನಾಗಿ ವಿಂಗಡಿಸಿದ್ದರು. ಅಲ್ಲಿಯ ಅಂಗಡಿಗಳಲ್ಲಿ ಅನೇಕ ವಿಧವಾದ ಶ್ರೇಷ್ಠವಸ್ತುಗಳನ್ನು ಚೆನ್ನಾಗಿ ಹರಡಿ ತುಂಬಿದ್ದರು. [ಆ ನಗರವು] ಅನೇಕ ವಿಧವಾದ ನೂರಾರು ದಾನಶಾಲೆಗಳಿಂದ ಶೋಭಿಸುತ್ತಿತ್ತು; ಹಿಮಗಿರಿಯ ಶಿಖರದಂತಹ ನೂರುಸಾವಿರ ಶ್ರೇಷ್ಠವಾದ ಭವನಗಳಿಂದ ಅಲಂಕೃತವಾಗಿತ್ತು; ಆನೆ, ಕುದುರೆ, ರಥ, ಕಾಲಾಳುಗಳಿಂದ ತುಂಬಿತ್ತು. ಬಹು ರೂಪವಂತರಾದ ಗಂಡಸರೂ ಹೆಂಗಸರೂ ಅಲ್ಲಿ ಗುಂಪಾಗಿ ತಿರುಗುತ್ತಿದ್ದರು. ಅಲ್ಲಿ ಅನೇಕ ಜನ ಮನುಷ್ಯರು ತುಂಬಿದ್ದರು; ಬೇರೆ ಬೇರೆ ಕ್ಷತ್ರಿಯರು, ಬ್ರಾಹ್ಮಣರು, ವೈಶ್ಯರು, ಶೂದ್ರರು, ವಿವಿಧ ಶ್ರಮಣ ಬ್ರಾಹ್ಮಣ ಜನರು ಅಲ್ಲಿ ಸಭೆ ಸೇರುತ್ತಿದ್ದರು. ಬಹು ತೆರದ ವಿದ್ಯಾವಂತರೂ ನರವೀರರೂ ಅಲ್ಲಿ ವಾಸಿಸುತ್ತಿದ್ದರು. ಅಲ್ಲಿಯ ಅಂಗಡಿಗಳಲ್ಲಿ ಕೌಶಿಕ ಕೌಟುಂಬರ ಮೊದಲಾದ ನಾನಾ ವಿಧದ ವಸ್ತ್ರಗಳು ತುಂಬಿತ್ತು. ಮನೋಹರವಾದ ಬಹುವಿಧದ ಪುಷ್ಪಗಂಧದ ಅಂಗಡಿಗಳಿಂದ ಸುಗಂಧವು ಸುತ್ತ ಹರಡಿತ್ತು. [ಮನಸ್ಸು] ಆಶಿಸತಕ್ಕ ಬಹುರತ್ನಗಳು [ಎಲ್ಲ ಅಲ್ಲಿ] ಪರಿಪೂರ್ಣವಾಗಿತ್ತು. ಅಲ್ಲಿಯ ವ್ಯಾಪಾರಿಗಳು ಅಂಗಡಿಗಳನ್ನು ದಿಕ್ಕುದಿಕ್ಕಿಗೂ ಶೃಂಗಾರವಾಗಿ ಹರಡು

1. 'ನಾನಾ ಪುಟಭೇದನಂ' = ದೊಡ್ಡ ವ್ಯಾಪಾರದ ಕೇಂದ್ರ. (?)

ತ್ತಿದ್ದರು. ಕಹಾಪಣಗಳೂ, ಬೆಳ್ಳಿ, ಚಿನ್ನ, ಕಂಚು, ಕಲ್ಲುಗಳ[ಪದಾರ್ಥ ಗಳೂ] ಅಲ್ಲಿ ಪೂರ್ಣವಾಗಿತ್ತು. ಬೆಳಬೆಳಗುವ ನಿಧಿಗೆ ಅದು ಮನೆ ಯಾಗಿತ್ತು. ಧನ, ಧಾನ್ಯ, ಹಣ, ಉಪಕರಣಗಳು ರಾಶಿಯಾಗಿತ್ತು. ಕೋಶಕೋಷ್ಠಾಗಾರವು ಸಂಪೂರ್ಣವಾಗಿ ತುಂಬಿತ್ತು. ಅನ್ನಪಾನ ಗಳೂ ವಿವಿಧವಾದ ಖಾದ್ಯ ಭೋಜ್ಯ ಲೇಹ್ಯ ಪೇಯುಗಳೂ ಸಿಹಿಯಾದ ವಸ್ತುಗಳೂ ಬಹುವಾಗಿದ್ದುವು. [ಆ ನಗರವು] ಸಸ್ಯಸಂಪತ್ತಿಯಲ್ಲಿ ಉತ್ತರಕುರುವಿಗೆ ಸಮಾನವಾಗಿತ್ತು; ದೇವಪುರವಾದ ಆಳಕಮುಂದದ ಹಾಗಿತ್ತು.

೩[1]

[ಇಲ್ಲಿ, ಅವರ ಪೂರ್ವಕರ್ಮವನ್ನು ಬಿಟ್ಟರೆ, ಅವರ ವಿಷಯವಾಗಿ ಹೇಳತಕ್ಕುದನ್ನು ಆರು ಭಾಗಮಾಡಿ ಹೇಳತಕ್ಕುದು. ಎಂದರೆ:

೧. ಪೂರ್ವಯೋಗ.	೪. ಮೇಂಡಕ ಪ್ರಶ್ನೆ.
೨. ಮಿಲಿಂದ ಪ್ರಶ್ನೆ.	೫. ಅನುಮಾನ ಪ್ರಶ್ನೆ.
೩. ಲಕ್ಷಣ ಪ್ರಶ್ನೆ.	೬. ಔಪಮ್ಯಕಥಾ ಪ್ರಶ್ನೆ.

ಇಲ್ಲಿ, 'ಲಕ್ಷಣಪ್ರಶ್ನೆ', 'ವಿಮತಿಚ್ಛೇದನಪ್ರಶ್ನೆ' ಎಂದು 'ಮಿಲಿಂದ ಪ್ರಶ್ನೆ'ಯಲ್ಲಿ ಎರಡು ವಿಧ; 'ಮಹಾವರ್ಗ', 'ಯೋಗಿಕಥಾಪ್ರಶ್ನೆ' ಎಂದು 'ಮೇಂಡಕಪ್ರಶ್ನೆ'ಯಲ್ಲಿ ಎರಡು ವಿಧ.]

೪—೮[2]

[ಪೂರ್ವಯೋಗವೆಂದರೆ ಅವರ ಹಿಂದಿನ ಕರ್ಮ.

[ಹಿಂದೆ, ಕಶ್ಯಪ ಬುದ್ಧನ ಕಾಲದಲ್ಲಿ ಗಂಗಾತೀರದಲ್ಲಿ ಅನೇಕ ಭಿಕ್ಷುಗಳಿದ್ದರು. ಅವರು ಧರ್ಮ ವಿನಯಗಳಿಗೆ ಅನುಸಾರವಾಗಿ ಬದುಕುತ್ತಿದ್ದರು. ಪ್ರತಿದಿನವೂ ಬೆಳಿಗ್ಗೆ ಬೇಗ ಎದ್ದು, ಬುದ್ಧನನ್ನು ಕುರಿತು ನೆನೆಯುತ್ತ, ಉದ್ದವಾದ ಪರಕೆಗಳಿಂದ ಅಂಗಳದ ಕಸವನ್ನು ಗುಡಿಸಿ ಎತ್ತಿ ಹಾಕುತ್ತಿದ್ದರು.

---

1. ಈ ಭಾಗವು ಮೂಲದಲ್ಲಿ ಮೊದಲು ಇರಲಿಲ್ಲವೆಂದೂ ಅನಂತರ ಸೇರಿಸಲ್ಪಟ್ಟಿತೆಂದೂ ಪಂಡಿತರು ಹೇಳುವರು. 2. ಈ ಭಾಗ ಕೂಡ ಪ್ರಕ್ಷಿಪ್ತವೆಂದು ಹಲವರ ಮತ. ಅದರಿಂದ ಆ ಭಾಗದ ಸಾರವನ್ನು ಇಲ್ಲಿ ಸಂಗ್ರಹಿಸಿದೆ.

[ಒಂದು ದಿನ ಒಬ್ಬ ಭಿಕ್ಷುವು ಆರಾಮದಲ್ಲಿ ಗುಡಿಸಿದ್ದ ಕಸವನ್ನು ಎತ್ತಿ ಬಿಸುಡುವಂತೆ ಒಬ್ಬ ಶ್ರಾಮಣೇರನಿಗೆ ಹೇಳಿದನು. ಶ್ರಾಮಣೇರನು ಅದು ಕಿವಿಗೆ ಬೀಳದಿದ್ದ ಹಾಗೆ ಮುಂದೆ ಹೋದನು. ಭಿಕ್ಷುವು ಅವನನ್ನು ಎರಡು ಮೂರು ಸಲ ಕೂಗಿ, ಅವನು ಬಾರದಿರಲು, ಕೋಪಗೊಂಡು ಪರಕೆಯ ಹಿಡಿಯಿಂದ ಅವನನ್ನು ಹೊಡೆದನು. ಆಗ ಶ್ರಾಮಣೇರನು ಭಯಪಟ್ಟು ಅಳುತ್ತ ಆ ಕಸವನ್ನು ತೆಗೆದುಹಾಕಿ, "ಈ ಕಸವನ್ನು ತೆಗೆದುಹಾಕಿದುದರ ಫಲವಾಗಿ ನಾನು ಪ್ರತಿಜನ್ಮದಲ್ಲಿಯೂ ಉತ್ತಮಪದವಿ ಪಡೆದು, ನಿರ್ವಾಣವನ್ನು ಸಾಧಿಸಿ, ನಡುಹಗಲಿನ ಸೂರ್ಯನಂತೆ ತೇಜಸ್ವಿಯಾಗೇನೆ!" ಎಂದು ಬಯಸಿದನು. ಅನಂತರ, ಕೆಲಸವನ್ನು ಮುಗಿಸಿ ಗಂಗಾತೀರಕ್ಕೆ ಬಂದು, ಗಂಗೆಯು ನೊರೆಗಟ್ಟಿ ಮೊರೆಯುವುದನ್ನು ಕಂಡು, "ನಾನು ನಿರ್ವಾಣವನ್ನು ಪಡೆಯುವ ಮೊದಲು ಪ್ರತಿಜನ್ಮದಲ್ಲಿಯೂ ಸದಾಕಾಲವೂ ಸರಿಯಾದುದನ್ನು ಆ ಕ್ಷಣವೇ ಹೇಳಿ, ಈ ಮಹಾಪ್ರವಾಹದಂತೆ ಎಲ್ಲರನ್ನೂ [ವಾದದಲ್ಲಿ] ಕೊಚ್ಚಿಕೊಂಡು ಹೋಗಬೇಕು!" ಎಂದು ಎರಡನೆಯ ಸಲ ಹಾರೈಸಿದನು.

[ಈ ಮಧ್ಯೆ ಆ ಭಿಕ್ಷುವು ಕಸಬರಿಕೆಯನ್ನು ಎತ್ತಿರಿಸಿ, ಸ್ನಾನಕ್ಕಾಗಿ ಗಂಗಾತೀರಕ್ಕೆ ಹೋಗಿ ಆ ಶ್ರಾಮಣೇರನ ಹಾರೈಕೆಯನ್ನು ಕೇಳಿ, "ನನ್ನ ಪ್ರೇರಣೆಯಿಂದ ನಡಿಸಿದ ಕಾರ್ಯದ ಪುಣ್ಯದಿಂದಲೇ ಇವನು ಇಂತಹ ಫಲವನ್ನು ಹಾರೈಸುವುದಾದರೆ, ನಾನು ಏನು ತಾನೆ ಬಯಸಬಾರದು!" ಎಂದುಕೊಂಡು, "ನಾನು ನಿರ್ವಾಣವನ್ನು ಪಡೆಯುವ ಮೊದಲು ಪ್ರತಿಜನ್ಮದಲ್ಲಿಯೂ ಸರಿಯಾದುದನ್ನು ಆ ಕ್ಷಣವೇ ಹೇಳುವ ಶಕ್ತಿ ನನಗೂ ಬರಲಿ! ಅಲ್ಲದೆ ಇವನು ಕೇಳುವ ಪ್ರತಿ ಪ್ರಶ್ನೆಗೂ ಉತ್ತರವನ್ನು ಬಿಡಿಸಿ ಹೇಳುವ ಸಾಮರ್ಥ್ಯ ನನಗೆ ಬರಲಿ!" ಎಂದು ಬಯಸಿದನು.

[ಅನಂತರ ಆ ಇಬ್ಬರೂ ಅನೇಕ ಜನ್ಮಗಳು ದೇವತೆಗಳ ಮನುಷ್ಯರ ನಡುವೆ ಹುಟ್ಟಿ, ಗೌತಮ ಬುದ್ಧನ ಕಾಲದಲ್ಲಿಯೂ ಹುಟ್ಟಿದರು. ಆಗ ಭಗವಂತನು "ನಾನು ಪರಿನಿರ್ವಾಣ ಪಡೆದ ಐನೂರು ವರ್ಷದ ಮೇಲೆ ಈ ಇಬ್ಬರೂ ಜನ್ಮವೆತ್ತಿ, ನಾನು ಸೂಕ್ಷ್ಮವಾಗಿ ಹೇಳಿದ ಧರ್ಮವಿನಯಗಳನ್ನು ಪ್ರಶ್ನೆ ಉತ್ತರ ಉಪಮಾನ ಯುಕ್ತಿಗಳಿಂದ ಬಿಚ್ಚಿ ಬಿಡಿಸುವರು" ಎಂದು ಮೌದ್ಗಲ್ಯಾಪುತ್ರನಿಗೂ ತಿಷ್ಯನೆಂಬ ಸ್ಥವಿರನಿಗೂ ಹೇಳಿದನು.]

೯

ಅವರಲ್ಲಿ ಶ್ರಾಮಣೇರನು ಜಂಬೂದ್ವೀಪದ ಸಾಗಲನಗರದಲ್ಲಿ ಮಿಲಿಂದನೆಂಬ ರಾಜನಾದನು. ಆತನು ಪಂಡಿತನು, ವ್ಯಕ್ತನು, ಮೇಧಾವಿ, ಸಮರ್ಥನು; ಹಿಂದಿನ, ಮುಂದಿನ ಮತ್ತು ಇಂದಿನ ಎಲ್ಲಾ ಯೋಗವಿಧಾನ ಕ್ರಿಯೆಗಳನ್ನು ಮಾಡತಕ್ಕ ಕಾಲದಲ್ಲಿ ತಿಳಿದು ಮಾಡ ತಕ್ಕವನು; ಶ್ರುತಿ, ಸಮ್ಮುತಿ, ಸಂಖ್ಯಾ, ಯೋಗ, ನೀತಿ, ವೈಶೇಷಿಕ, ಗಣಿತ, ಗಂಧರ್ವ, ಚಿಕಿತ್ಸೆ, ನಾಲ್ಕು ವೇದಗಳು, ಪುರಾಣಗಳು, ಇತಿ ಹಾಸಗಳು, ಜ್ಯೋತಿಷ, ಮಾಯಾ, ಹೇತು, ಮಂತ್ರಣ, ಯುದ್ಧ, ಛಂದಸ್ಸು, ಮುದ್ರಾ, ಎಂಬ ಅನೇಕ ಶಾಸ್ತ್ರಗಳನ್ನು—ಒಂದೇ ಮಾತಿನಲ್ಲಿ ಹತ್ತೊಂಬತ್ತನ್ನೂ—ಅವನು ಗ್ರಹಿಸಿದ್ದನು. ಆತನು ವಾದಿ; [ವಾದದಲ್ಲಿ] ಅವನನ್ನು ಸಮೀಪಿಸುವುದು ಕಷ್ಟ, ಅವನನ್ನು ಮೆಟ್ಟುವುದು ಕಷ್ಟ. ಅವ ನನ್ನು ಬೇರೆ ಬೇರೆ ತೀರ್ಥಕರ ಅಗ್ರನೆಂದು ಹೇಳುವರು. ದೇಹಬಲ ದಲ್ಲಿ, ವೇಗದಲ್ಲಿ, ಶೌರ್ಯದಲ್ಲಿ, ಪ್ರಜ್ಞೆಯಲ್ಲಿ, ಮಿಲಿಂದರಾಜನ ಸಮಾನ ರಾದವರು ಯಾರೂ ಜಂಬೂದ್ವೀಪದಲ್ಲಿ ಇಲ್ಲದಾದರು. ಆತನು ಆಢ್ಯನು, ಮಹಾ ಧನವುಳ್ಳವನು, ಮಹಾ ಭೋಗವುಳ್ಳವನು. ಅವನ ಸೇನಾ ಬಲವು ಅನಂತವಾದುದು.

೧೦

ಒಂದು ದಿನ ಮಿಲಿಂದರಾಜನು [ತನ್ನ] ಅನಂತವಾದ ಸೇನಾಬಲ ವನ್ನು, ಚತುರಂಗಗಳಿಂದ ಕೂಡಿದ ಬಲಗ್ರಸೇನಾವ್ಯೂಹವನ್ನು ಕಾಣ ಬೇಕೆಂದು ಬಯಸಿ ನಗರದಿಂದ ಹೊರಗೆ ಹೊರಟನು. ನಗರದ ಹೊರಗೆ ಸೇನೆಯನ್ನು ಎಣಿಸುತ್ತ, ಆ ರಾಜನು, ಲೋಕಾಯತ, ವಿತಂಡ [ಮುಂತಾದ] ಜನರೊಡನೆ ಮಾತು ನಡಿಸುವುದರಲ್ಲಿ ಕುತೂಹಲವುಳ್ಳ ಆ ಭಾಷ್ಯಪ್ರವಾದಕನು, ಸೂರ್ಯನನ್ನು ದೃಷ್ಟಿಸಿ ನೋಡಿ, "ಹಗಲು ಇನ್ನೂ ಬಹಳ ಉಳಿದಿದೆ. ನಗರದ ಒಳಗೆ ಹೋಗಿ ಏನು ಮಾಡೋಣ? ನನ್ನೊ ಡನೆ ಮಾತನಾಡಿ ನನ್ನ ಸಂದೇಹಗಳನ್ನು ಹೋಗಲಾಡಿಸಲು ಶಕ್ತನಾದ ಯಾವನಾದರೂ ಪಂಡಿತನಾದ ಶ್ರಮಣನಾಗಲಿ, ಬ್ರಾಹ್ಮಣನಾಗಲಿ, ಸಂಘದ ಮುಖ್ಯಸ್ಥನಾಗಲಿ, ಗಣದ ಮುಖಂಡನಾಗಲಿ, ಗಣಾಚಾರ್ಯ

ನಾಗಲಿ,—ಅರ್ಹತನನ್ನೂ ಸಮ್ಯಕ್‌ಸಂಬುದ್ಧನನ್ನೂ ಒಪ್ಪಿದವನಾದರೂ ಸರಿಯೆ—ಯಾವನಾದರೂ ಉಂಟೆ?" ಎಂದು ಅಮಾತ್ಯರನ್ನು ಕರೆದು ಕೇಳಿದನು.

೧೧—೧೪[1]

[ಆಗ ಐನೂರು ಯುವನಕರು ಪೂರ್ಣ ಕಶ್ಯಪ, ಮಸ್ಕರಿ ಗೋಶಾಲ, ನಿರ್ಗ್ರಂಥ ಜ್ಞಾತೃಪುತ್ರ, ಸಂಜಯ ಬೇಲಟ್ಠಪುತ್ರ, ಅಜಿತ ಕೇಶಕಂಬಳಿ ಮತ್ತು ಪಕುಧ ಕಾತ್ಯಾಯನ ಎಂದು ಆರು ಜನ ಗಣಾಚಾರ್ಯರ ಹೆಸರನ್ನು ಸೂಚಿಸಿದರು. ದೊರೆಯು ಅವರ ದರ್ಶನಕ್ಕಾಗಿ ಹೊರಟು, ಪೂರ್ಣ ಕಶ್ಯಪನೊಡನೆಯೂ ಮಸ್ಕರಿ ಗೋಶಾಲನೊಡನೆಯೂ ಮಾತನಾಡಿ ತೃಪ್ತನಾಗದೆ, ತನ್ನ ಅತೃಪ್ತಿಯನ್ನು ಸೂಚಿಸಿದನು.]

೧೫

ಆ ಸಮಯದಲ್ಲಿ, ಪಂಡಿತರಾದ ಶ್ರಮಣರೂ ಬ್ರಾಹ್ಮಣರೂ ಗೃಹಪತಿಗಳೂ ಇಲ್ಲದೆ ಸಾಗಲನಗರವು ಹನ್ನೆರಡು ವರ್ಷಗಳಿಂದ ಶೂನ್ಯವಾಗಿತ್ತು. ಪಂಡಿತರಾದ ಶ್ರಮಣರೂ ಬ್ರಾಹ್ಮಣರೂ ಗೃಹಪತಿಗಳೂ ಎಲ್ಲಿ ವಾಸಿಸುವರೆಂದು ಕೇಳಿದರೆ, ಅಲ್ಲಿಗೆ ಹೋಗಿ ರಾಜನು ಅವರನ್ನು ಪ್ರಶ್ನೆ ಕೇಳುವನು. ಅವರು ಆ ಪ್ರಶ್ನೆಯನ್ನು ಬಿಡಿಸಿ ರಾಜನನ್ನು ಮೆಚ್ಚಿಸಲಾರದೆ ಅಲ್ಲಿಗೋ ಇಲ್ಲಿಗೋ ಹೊರಟುಹೋಗುವರು. ಬೇರೆ ದಿಕ್ಕಿಗೆ ಹೋಗದವರೆಲ್ಲರೂ ಸಂಪೂರ್ಣವಾಗಿ ಮೌನವಾಗುವರು. ಭಿಕ್ಷುಗಳು ಬಹುವಾಗಿ ಹಿಮವಂತಕ್ಕೇ ಹೋಗುವರು.

೧೬—೩೬[2]

[ಆಗ, ಹಿಮವಂತ ಪ್ರಾಂತದಲ್ಲಿ ರಕ್ಷಿತಪಾರ್ಶ್ವವೆಂಬ ಭಾಗದಲ್ಲಿ ಅಶ್ವಗುಪ್ತನೆಂಬ ಸ್ಥವಿರನು ಅನೇಕ ಅರ್ಹತರೊಡನೆ ವಾಸಮಾಡು

1. ಈ ಭಾಗವು ಪ್ರಕ್ಷಿಪ್ತವೆಂಬುದು ಸ್ಪಷ್ಟ. ಇದು 'ದೀಘನಿಕಾಯ'ದ 'ಸಾಮಞ್ಞಫಲ ಸುತ್ತ'ದ ಮುಖಭಾಗವನ್ನು ಅನುಕರಿಸಿದುದು. ಅಜಾತಶತ್ರುವಿನ ಕಾಲದಲ್ಲಿ ಬದುಕಿದ್ದ ಈ ಅರುವರು ಗಣಾಚಾರ್ಯರನ್ನು ಮಿಲಿಂದನು ಕಾಣುವುದು ಹೇಗೆ ಸಾಧ್ಯ?

2 ಮುಂದಿನ ನಾಲ್ಕು ಪುಟಗಳಲ್ಲಿ ಸಂಗ್ರಹಮಾಡಿರುವ ಈ ಭಾಗವು ಮಹಾಸೇನನೆಂಬ ದೇವತೆಯು ಮಿಲಿಂದರಾಜನನ್ನು ಅಡಗಿಸಿ ಭಿಕ್ಷುಗಳನ್ನು ಕಾಪಾಡುವುದಕ್ಕೋಸ್ಕರ ನಾಗಸೇನನಾಗಿ ಭೂಮಿಯಲ್ಲಿ ಅವತಾರಮಾಡಿದನೆಂಬುದನ್ನು ತಿಳಿಸುವುದು. ಈ ಭಾಗವೂ ಮೂಲಗ್ರಂಥದ ಅಂಗವಾಗಿರಲಿಲ್ಲವೆಂದು ತಿಳಿದವರು ಹೇಳುವರು.

ತ್ತಿದ್ದನು. ಮಿಲಿಂದರಾಜನು ಆಡಿದ ಮಾತು ಅಶ್ವಗುಪ್ತನ ದಿವ್ಯ ಶ್ರೋತ್ರಕ್ಕೆ ಗೋಚರವಾಯಿತು. ಆಗ ಅವನು ಅಲ್ಲಿಯ ಅರ್ಹತರನ್ನೆಲ್ಲ ಕರೆದು, ಯುಗಂಧರ ಪರ್ವತದ ತುದಿಯಲ್ಲಿ ಸಭೆ ಸೇರಿಸಿ, "ಮಿಲಿಂದ ರಾಜನೊಡನೆ ವಾದಮಾಡಿ ಅವನ ಸಂದೇಹಗಳನ್ನು ಕಳೆಯಬಲ್ಲವರು ಈ ಸಭೆಯಲ್ಲಿ ಯಾರಾದರೂ ಉಂಟೆ?" ಎಂದು ಕೇಳಿದನು. ಯಾರೂ ಉತ್ತರ ಕೊಡಲಿಲ್ಲ. ಆಗ, ಮಿಲಿಂದರಾಜನೊಡನೆ ಮಾತನಾಡಿ ಆತನ ಸಂದೇಹಗಳನ್ನು ಕಳೆಯಲು ಸಮರ್ಥರಾದವರು ತಮ್ಮಲ್ಲಿ ಯಾರೂ ಇಲ್ಲವೆಂದೂ, ತ್ರಯಸ್ತ್ರಿಂಶಸ್ ಸ್ವರ್ಗದಲ್ಲಿಯ ವೈಜಯಂತವೆಂಬ ಅರ ಮನೆಯ ಪೂರ್ವದಿಕ್ಕಿನ ಕೇತುಮತೀ ಎಂಬ ಭವನದಲ್ಲಿರುವ ಮಹಾಸೇನ ನೆಂಬ ದೇವನು ಮಿಲಿಂದರಾಜನಿಗೆ ಎದುರಾಗಲು ಸಮರ್ಥನೆಂದೂ ಕಂಡು, ಅಶ್ವಗುಪ್ತನು, [ಜೊತೆಯ] ಅರ್ಹತರೊಡನೆ ಯುಗಂಧರ ಪರ್ವತದಿಂದ ಮರೆಯಾಗಿ ತ್ರಯಸ್ತ್ರಿಂಶಸ್ ಸ್ವರ್ಗದಲ್ಲಿ ಪ್ರತ್ಯಕ್ಷ ನಾದನು.

[ಅವರು ಬಂದುದನ್ನು ದೇವೇಂದ್ರನಾದ ಶಕ್ರನು ಕಂಡು, ಅವರ ಕಾರ್ಯವನ್ನು ತಿಳಿದು, ತಾನೂ ಅವರೊಡನೆ ಮಹಾಸೇನದೇವನ ಬಳಿ ಸಾರಿ, "ದೇವ, ಮಿಲಿಂದರಾಜನ ಮಿಥ್ಯಾದೃಷ್ಟಿಯನ್ನು ಎದುರಿಸಿ, ಸದ್ಧ ರ್ಮದ ಉದ್ಧಾರಕ್ಕಾಗಿ ನೀನು ಭೂಮಿಯಲ್ಲಿ ಅವತರಿಸಬೇಕು" ಎಂದು ಬೇಡಿಕೊಂಡನು. ಆದರೆ ಉತ್ತಮ ಜನ್ಮಗಳಲ್ಲಿ ಅಭಿಲಾಷೆಯುಳ್ಳ ಮಹಾಸೇನನು ಪುನಃ ಭೂಲೋಕದಲ್ಲಿ ಜನಿಸಲು ಉತ್ಸಾಹಪಡಲಿಲ್ಲ. ಆದರೆ ಶಕ್ರನೂ ಅಶ್ವಗುಪ್ತಾದಿ ಅರ್ಹತರೂ ಮೇಲಿಂದ ಮೇಲೆ ಬೇಡಿ ಕೊಂಡುದಕ್ಕೆ ಕರಗಿ, ಅವರ ಪ್ರಾರ್ಥನೆಯಂತೆ ಮಿಲಿಂದರಾಜನನ್ನು ದಮನಮಾಡುವುದಕ್ಕಾಗಿ ಭೂಮಿಯಲ್ಲಿ ಜನಿಸುವೆನೆಂದು ಅಭಯ ಕೊಟ್ಟನು. ಅಶ್ವಗುಪ್ತನೂ ಇತರ ಅರ್ಹತರೂ ಕೃತಕೃತ್ಯರಾಗಿ ರಕ್ಷಿತ ಪಾರ್ಶ್ವಕ್ಕೆ ಹಿಂದಿರುಗಿದರು.

[ಈ ಅರ್ಹತರೆಲ್ಲರೂ ದೇವಲೋಕಕ್ಕೆ ಹೋಗುವುದಕ್ಕೆ ಮೊದಲು ರೋಹಣನೆಂಬ ಭಿಕ್ಷುವು ಏಕಾಂತದಲ್ಲಿ ಸಮಾಧಿಸ್ಥನಾಗಿದ್ದನು. ಅದರಿಂದ ಮಿಕ್ಕವರೊಡನೆ ಹೋಗದೆ ಹಿಂದುಳಿದಿದ್ದನು. ಮಹಾಸೇನನನ್ನು ಭೂಮಿ ಯಲ್ಲಿ ಅವತರಿಸುವಂತೆ ಒಪ್ಪಿಸಿ ಬಂದು, ಆ ಪರಿಷೆಯಲ್ಲಿ ರೋಹಣನು

ಮಾತ್ರ ಇಲ್ಲದುದನ್ನು ಕಂಡು, ಅಶ್ವಗುಪ್ತನು, ಆತನನ್ನು ಸಮಾಧಿಯಿಂದ ಕರೆಯಿಸಿದನು. ಕರೆಯಿಸಿ, "ರೋಹಣ, ಸದ್ಧರ್ಮದ ಉದ್ಧಾರವಾಗುತ್ತಿರುವಾಗ ನೀನು ಮರೆಯಾಗಿದ್ದುದರಿಂದ ನಿನಗೆ ಪ್ರಾಯಶ್ಚಿತ್ತವಾಗಬೇಕು. ರೋಹಣ, ಹಿಮವಂತದ ತಪ್ಪಲಿನಲ್ಲಿ ಕಜಂಗಲವೆಂಬ ಬ್ರಾಹ್ಮಣ ಗ್ರಾಮವುಂಟು. ಅಲ್ಲಿ ಸೋಣುತ್ತರನೆಂಬ ಬ್ರಾಹ್ಮಣನಿರುವನು. ಅವನಿಗೆ ನಾಗಸೇನನೆಂಬ ಮಗನಾಗುವನು. ನೀನು ಏಳು ವರ್ಷ ಹತ್ತು ತಿಂಗಳು ಆ ಮನೆಗೆ ಭಿಕ್ಷೆಗೆ ಹೋಗು. ಅನಂತರ ಆ ಬಾಲನನ್ನು ಗೃಹಸ್ಥಧರ್ಮದಿಂದ ತಪ್ಪಿಸಿ ಸಂಘಕ್ಕೆ ಸೇರಿಸು. ಆಗ ನಿನ್ನ ಪ್ರಾಯಶ್ಚಿತ್ತ ಮುಗಿಯುವುದು" ಎಂದನು. ರೋಹಣನು ಒಪ್ಪಿದನು.

[ಮಹಾಸೇನನು ದೇವಲೋಕವನ್ನು ಬಿಟ್ಟು ಬ್ರಾಹ್ಮಣ ಸೋಣುತ್ತರನ ಮನೆಯಲ್ಲಿ ಹುಟ್ಟಿದನು. ಅಂದಿನಿಂದ ರೋಹಣನು ಅವನ ಮನೆಗೆ ಭಿಕ್ಷೆಗೆ ಹೋಗುತ್ತಿದ್ದನು. ಆದರೆ ಅಲ್ಲಿ ಅವನಿಗೆ ಭಿಕ್ಷೆಹಾಕುತ್ತಿರಲಿಲ್ಲ; ಮುಂದೆ ಹೋಗು ಎಂದೂ ಹೇಳುತ್ತಿರಲಿಲ್ಲ; ಬೈದು ಅಟ್ಟುತ್ತಿದ್ದರು. ಆದರೂ ರೋಹಣನು ತಪ್ಪದೆ ಹೋಗುತ್ತಿದ್ದನು. ಹೀಗೆಯೇ ಏಳು ವರ್ಷ ಹತ್ತು ತಿಂಗಳಾಗಲು, ಒಂದು ದಿನ 'ಮುಂದೆ ಹೋಗು' ಎಂದು ಹೇಳಿದರು. ರೋಹಣನು ಆ ಒಳ್ಳೆಯ ಮಾತನ್ನು ಭಿಕ್ಷೆಪಡೆದಷ್ಟೇ ಸಂತೋಷದಿಂದ ಸ್ವೀಕರಿಸಲು, ಮನೆಯಾತನು ಆತನ ಸೌಜನ್ಯಕ್ಕೆ ಮೆಚ್ಚಿ, ಅಂದಿನಿಂದ ಅವನಿಗೆ ಭಿಕ್ಷೆಯಿಕ್ಕಲು ಮೊದಲು ಮಾಡಿದನು.

[ಈ ನಡುವೆ ನಾಗಸೇನನು, ಏಳು ವರ್ಷಗಳಾಗಲು, ಒಬ್ಬ ಬ್ರಾಹ್ಮಣನಿಗೆ ಗುರುದಕ್ಷಿಣೆ ಕೊಟ್ಟು ವೇದ ವೇದಾಂಗಗಳಲ್ಲಿ ಪಾರಂಗತನಾದನು. ಆದರೂ, ಗುರು ಕಲಿಸಬಲ್ಲುದನ್ನೆಲ್ಲ ಕಲಿತರೂ, ಅವನಿಗೆ ಅದರಿಂದ ಮನಸ್ಸು ತೃಪ್ತಿಯಾಗಲಿಲ್ಲ. ಆಗ, ಆರ್ಯ ರೋಹಣನು ಅವನ ಮನಸ್ಸನ್ನು ತಿಳಿದು ಅವನಿಗೆ ಎದುರಾದನು. ನಾಗಸೇನನು ಅವನ ಶ್ರಮಣಭಾವದಿಂದ ಪ್ರಸನ್ನನಾಗಿ, ಅವನನ್ನು ಮನೆಗೆ ಕರೆದೊಯ್ದು ಭಿಕ್ಷೆಯಿಕ್ಕಿ, ಅವನಿಂದ ಉಪದೇಶ ಪಡೆಯಲು ಬಯಸಿದನು. ಬಯಸಿ, ತಾಯಿತಂದೆಯರ ಅಪ್ಪಣೆ ಪಡೆದು ರೋಹಣನೊಡನೆ ಅವನ ಆರಾಮಕ್ಕೆ ಹೋಗಿ, ಶ್ರಾಮಣೇರನಾಗಿ ಅಲ್ಲಿಯ ಸಂಘವನ್ನು ಪ್ರವೇಶಿಸಿದನು.

[ರೋಹಣನು, ನಾಗಸೇನನ ಪ್ರಜ್ಞೆಯು ಅಸಾಧಾರಣವಾದುದನ್ನು ಕಂಡು, ಅವನಿಗೆ ಸೂತ್ರಗಳನ್ನು ಕಲಿಸದೆಯೆ ಅಭಿಧರ್ಮವನ್ನು ಕಲಿಸಿದನು. ನಾಗಸೇನನು, ತಾನು ಗುರುವಿನಿಂದ ಕಲಿತ ಅಭಿಧರ್ಮವನ್ನು ಭಿಕ್ಷುಸಂಘದ ಎದುರಿಗೆ ಏಳು ತಿಂಗಳು ಸಂಪೂರ್ಣವಾಗಿ ವಿವರಿಸಿ, ಅವರ ಮೆಚ್ಚುಗೆಯನ್ನು ಪಡೆದನು.

[ಮೂರನೆಯ ದಿನ, ಗುರುವಿನೊಡನೆ ಭಿಕ್ಷೆಗೆ ಹೋಗುವಾಗ "ಬುದ್ಧವಚನದ ಮಿಕ್ಕ ಭಾಗಗಳನ್ನು ಬಿಟ್ಟು, ಇದೇನು ದೊಡ್ಡದೆಂದು ಈ ಅಭಿಧರ್ಮವನ್ನು ನನ್ನ ಗುರು ನನಗೆ ಕಲಿಸಿದನು!" ಎಂದು ನಾಗಸೇನನಿಗೆ ಎನ್ನಿಸಿತು. ಆಗ ರೋಹಣನು ಅದನ್ನು ತಿಳಿದು "ಈ ಯೋಚನೆ ತಕ್ಕುದಲ್ಲ, ನಾಗಸೇನ" ಎಂದನು. ನಾಗಸೇನನು ಗುರುವಿನ ಮಹಿಮೆಗೆ ಮೆಚ್ಚಿ ಆತನ ಕ್ಷಮೆ ಬೇಡಿದನು.

[ಆದರೆ ರೋಹಣನು "ಕ್ಷಮಿಸಲಾರೆ, ನಾಗಸೇನ. ಸಾಗಲವೆಂಬ ನಗರದಲ್ಲಿ ಮಿಲಿಂದನೆಂಬ ರಾಜನುಂಟು. ಅವನು ಮಿಥ್ಯಾದೃಷ್ಟಿಯಿಂದ ಭಿಕ್ಷುಗಳನ್ನು ಪ್ರಶ್ನಿಸಿ ಪೀಡಿಸುತ್ತಿದ್ದಾನೆ. ನೀನು ಹೋಗಿ ಅವನನ್ನು ವಾದದಲ್ಲಿ ಸೋಲಿಸಿ, ಅವನನ್ನು ಧರ್ಮಕ್ಕೆ ಒಲಿಸಿದರೆ, ನಿನಗೆ ಕ್ಷಮೆ ಸಿಕ್ಕುವುದು" ಎಂದನು. ನಾಗಸೇನನು ಹಾಗೆಯೆ ಆಗಲೆಂದು ಹೊರಟನು.

[ಆದರೆ ಆಗ ಮಳೆಗಾಲವಾಗಿತ್ತು. ಅದರಿಂದ, ವರ್ಷಾವಾಸವನ್ನು ಅಶ್ವಗುಪ್ತನೊಡನೆ ಕಳೆಯಬೇಕೆಂಬ ಗುರುವಚನವನ್ನು ಒಪ್ಪಿ, ಹಿಮವಂತದ ಬಳಿಯ ಅಶ್ವಗುಪ್ತನ ಆರಾಮಕ್ಕೆ ಹೋಗಿ, ಅವನ ಅಪ್ಪಣೆ ಪಡೆದು, ವರ್ಷಾವಾಸಕ್ಕೆ ಅಲ್ಲಿ ನಿಂತನು.

[ಆ ಸಮಯದಲ್ಲಿ, ಅಶ್ವಗುಪ್ತನಿಗೆ ಭಿಕ್ಷೆಯಿಡುತ್ತಿದ್ದ ಉಪಾಸಿಕೆಯೊಬ್ಬಳಿಗೆ ನಾಗಸೇನನು ಗುರ್ವಾಜ್ಞೆಯಂತೆ ಅಭಿಧರ್ಮವನ್ನು ಬೋಧಿಸಿದನು. ಬೋಧಿಸುತ್ತ ಬೋಧಿಸುತ್ತ ಅವನಿಗೇ ತನ್ನ ಮಾತಿನ ಅರ್ಥವು ಚೆನ್ನಾಗಿ ತಿಳಿಯಿತು. ನಾಗಸೇನನು ಸ್ರೋತಾಪನ್ನನಾದನು.

[ಅವನು ಸ್ರೋತಾಪನ್ನನಾದುದನ್ನು ಕಂಡುಕೊಂಡು, ಅಶ್ವಗುಪ್ತನು "ನಾಗಸೇನ, ಪಾಟಲೀಪುತ್ರಕ್ಕೆ ಹೋಗು. ಅಲ್ಲಿಯ ಅಶೋಕಾರಾಮದ

ಆರ್ಯ ಧರ್ಮರಕ್ಷಿತನ ಬಳಿ ಬುದ್ಧವಚನವನ್ನು ಕಲಿ" ಎಂದನು. ನಾಗಸೇನನು ಪಾಟಲೀಪುತ್ರಕ್ಕೆ ಹೊರಟನು.

[ಪಾಟಲೀಪುತ್ರದ ಮಾರ್ಗದಲ್ಲಿ ನಾಗಸೇನನಿಗೆ ಧನಿಕ ವ್ಯಾಪಾರಿಯೊಬ್ಬನು ಸಿಕ್ಕಿದನು. ಅವನು ನಾಗಸೇನನಿಗೆ ಬೇಕಾದ ಊಟ ಉಪಚಾರಗಳನ್ನೆಲ್ಲ ನಡಿಸಿದನು. ನಾಗಸೇನನು ಅವನಿಗೆ ಅಭಿಧರ್ಮವನ್ನು ಬೋಧಿಸಿದನು. ಆಗ ನಾಗಸೇನನಿಗೆ ಕ್ರಮವಾಗಿ ಧರ್ಮಚಕ್ಷು ಪ್ರಾಪ್ತವಾಯಿತು.

[ನಾಗಸೇನನು ಕ್ರಮವಾಗಿ ಪಾಟಲೀಪುತ್ರಕ್ಕೆ ಬಂದು, ಅಶೋಕಾರಾಮದ ಧರ್ಮರಕ್ಷಿತನ ಬಳಿಸಾರಿ, ತಾನು ಬಂದ ಕಾರ್ಯವನ್ನು ತಿಳಿಸಿ, ಅವನಿಂದ ಮೂರು ಪಿಟಕಗಳನ್ನು ಅರ್ಥವ್ಯಂಜನಗಳೊಡನೆ ಕಲಿತನು. ಹೀಗೆ ಕಲಿತು, ಆರು ತಿಂಗಳಾದ ಮೇಲೆ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು ಅರ್ಹತನಾದನು.

[ಆಗ, ಹಿಮವತ್ಪ್ರಾಂತದ ಅರ್ಹತರೆಲ್ಲರೂ ನಾಗಸೇನನನ್ನು ಬರಮಾಡಿಕೊಂಡು, "ನಾಗಸೇನ, ಮಿಲಿಂದರಾಜನು ಭಿಕ್ಷುಗಳೊಡನೆ ವಾದಿಸಿ ಪೀಡಿಸುತ್ತಾನೆ. ಹೋಗಿ ಅವನನ್ನು ಅಡಗಿಸು" ಎಂದರು. ನಾಗಸೇನನು ಅವರಿಗೆ ಅಭಯವನ್ನು ಕೊಡಲು, ಆ ಅರ್ಹತರು ತಮ್ಮ ಹಳದಿಯ ವಸ್ತ್ರಗಳಿಂದ ದೀಪಗಳಂತೆ ಬೆಳಗುತ್ತ ಸಾಗಲನಗರವನ್ನು ಪ್ರವೇಶಿಸಿದರು.]

೩೭

ಆ ಸಮಯದಲ್ಲಿ ಆಯುಷ್ಮಂತನಾದ ಆಯುಪಾಲನು ಸಂಖ್ಯೇಯ ಪರಿವೇಣದಲ್ಲಿ ವಾಸಮಾಡುತ್ತಿದ್ದನು. ಆಗ, ಮಿಲಿಂದರಾಜನು "ಆಹಾ! ಬೆಳುದಿಂಗಳು ರಾತ್ರಿ ರಮಣೀಯವಾಗಿದೆ! ಈ ದಿನ ಮಾತನಾಡಿ ಪ್ರಶ್ನೆ ಕೇಳುವುದಕ್ಕಾಗಿ, ಯಾವ ಶ್ರಮಣ ಬ್ರಾಹ್ಮಣರ ಬಳಿ ಹೋಗೋಣ? ನನ್ನೊಡನೆ ಮಾತನಾಡಿ [ನನ್ನ] ಸಂಶಯಗಳನ್ನು ಹೋಗಲಾಡಿಸಲು ಯಾರು ಸಮರ್ಥರು?" ಎಂದು ಅಮಾತ್ಯಗಿಗೆ ಹೇಳಿದನು.

ಹೀಗೆನ್ನಲು, "ಮಹಾರಾಜ, ಆಯುಪಾಲನೆಂಬ ಸ್ಥವಿರನುಂಟು. ಅವನು ಮೂರು ಪಿಟಕಗಳನ್ನು ಬಲ್ಲವನು, ಬಹುಶ್ರುತನು, ಆಗಮಗಳನ್ನು ತಿಳಿದವನು. ಅವನು ಈಗ ಸಂಖ್ಯೇಯ ಪರಿವೇಣದಲ್ಲಿ ವಾಸಿಸು

ತ್ತಿರುವನು. ನೀನು ಹೋಗು, ಮಹಾರಾಜ. ಆಯುಷ್ಮಂತನಾದ ಆಯು ಪಾಲನನ್ನು ಪ್ರಶ್ನಿಸು" ಎಂದು ಐನೂರು ಯವನಕರು ಮಿಲಿಂದರಾಜನಿಗೆ ಹೇಳಿದರು.

"ಹಾಗಾದರೆ, ನೀವು ಭದಂತನಿಗೆ ತಿಳಿಯಪಡಿಸಿರಿ."

ಆಗ "ಮಿಲಿಂದರಾಜನು ಆಯುಷ್ಮಂತನಾದ ಆಯುಪಾಲನನ್ನು ಕಾಣಬಯಸುತ್ತಾನೆ" ಎಂದು ನೈಮಿತ್ತಿಕನು ಆಯುಪಾಲನ ಬಳಿಗೆ ದೂತ ನನ್ನು ಕಳುಹಿಸಿದನು.

ಆಯುಷ್ಮಂತನಾದ ಆಯುಪಾಲನು "ಹಾಗಾದರೆ, ಬರಲಿ" ಎಂದನು.

ಆಗ ಮಿಲಿಂದರಾಜನು ಐನೂರು ಯವನಕರ ಪರಿವಾರದೊಡನೆ ರಥವರವನ್ನು ಏರಿ, ಸಂಖ್ಯೇಯ ಪರಿವೇಣದಲ್ಲಿ ಆಯುಷ್ಮಂತನಾದ ಆಯುಪಾಲನಿರುವ ಬಳಿಸಾರಿ, ಅವನೊಡನೆ ಸಮ್ಮೋದದಿಂದ ಮಾತನಾಡಿ ಕೇಳತಕ್ಕ ಕುಶಲಪ್ರಶ್ನೆಗಳನ್ನು ಕೇಳಿಯಾಗಲು, ಒಂದು ಕಡೆ ಕುಳಿತನು.

೩೮

ಒಂದು ಕಡೆ ಕುಳಿತು, ಮಿಲಿಂದರಾಜನು ಆಯುಷ್ಮಂತನಾದ ಆಯುಪಾಲನನ್ನು ಕುರಿತು, "ಭನ್ತೇ ಆಯುಪಾಲ, ನಿಮ್ಮ ಪ್ರವ್ರಜ್ಯವು ಯಾವ ಅರ್ಥಕ್ಕಾಗಿ? ನಿಮ್ಮ ಪರಮಾರ್ಥವಾವುದು?" ಎಂದನು.

ಸ್ಥವಿರನು "[ನಮ್ಮ] ಪ್ರವ್ರಜ್ಯವು ಧರ್ಮಚರ್ಯಾರ್ಥವಾಗಿ, ಶಮ ಚರ್ಯಾರ್ಥವಾಗಿ" ಎಂದನು.

"ಧರ್ಮಚಾರಿಗಳಾಗಿ ಶಮಚಾರಿಗಳಾದ ಗೃಹಸ್ಥರು ಉಂಟೆ, ಭನ್ತೇ?"

"ಹೌದು, ಉಂಟು, ಮಹಾರಾಜ. ವಾರಣಾಸಿಯಲ್ಲಿ ಋಷಿ ಪತನದ ಮೃಗದಾವದಲ್ಲಿ ಭಗವಂತನು ಧರ್ಮಚಕ್ರಪ್ರವರ್ತನವನ್ನು ಗೈದಾಗ ಹದಿನೆಂಟು ಕೋಟಿ ಬ್ರಹ್ಮರುಗಳೂ, ಎಣಿಕೆಯನ್ನು ಮೀರಿದ ಅನೇಕ ದೇವತೆಗಳೂ ಧರ್ಮವನ್ನು ಕಂಡುಕೊಂಡರು. ಅವರೆಲ್ಲರೂ ಗೃಹಸ್ಥರಾದವರೇ; ಪ್ರವ್ರಜಿತರಲ್ಲ. ಪುನಃ, ಮಹಾರಾಜ, ಭಗವಂತನು 'ಮಹಾಸಮಯ ಸುತ್ತಂತ'ವನ್ನು ಉಪದೇಶಿಸಿದಾಗ, 'ಮಹಾಮಂಗಲ

ಸುತ್ತಂತ'ವನ್ನು ಉಪದೇಶಿಸಿದಾಗ, 'ಸಮಚಿತ್ತ ಪರಿಯಾಯ ಸುತ್ತಂತ' ವನ್ನು ಉಪದೇಶಿಸಿದಾಗ, 'ರಾಹುಲೋವಾದ ಸುತ್ತಂತ'ವನ್ನು ಉಪ ದೇಶಿಸಿದಾಗ, 'ಪರಾಭವ ಸುತ್ತಂತ'ವನ್ನು ಉಪದೇಶಿಸಿದಾಗ, ಎಣಿಕೆ ಯನ್ನು ಮೀರಿದ [ಅನೇಕ] ದೇವತೆಗಳು ಧರ್ಮವನ್ನು ಕಂಡುಕೊಂಡರು. ಅವರೆಲ್ಲರೂ ಗೃಹಸ್ಥರಾದವರೇ; ಪ್ರವ್ರಜಿತರಲ್ಲ."

"ಹಾಗಾದರೆ, ಭನ್ತೇ ಆಯುಪಾಲ, ನಿಮ್ಮ ಪ್ರವ್ರಜ್ಯವು ನಿರರ್ಥಿ ಕವು. ಪೂರ್ವದಲ್ಲಿ ಮಾಡಿದ ಪಾಪಕರ್ಮಗಳ ಫಲದಿಂದ [ಈ] ಶಾಕ್ಯ ಪುತ್ರರಾದ ಶ್ರಮಣರು ಪರಿವ್ರಜಿಸುವರು; ಧೂತಾಂಗಗಳನ್ನೂ ಕಾಪಾಡು ವರು. ಭನ್ತೇ ಆಯುಪಾಲ, [ಈಗ] ಏಕಾಸನಿಕರಾದ ಭಿಕ್ಷುಗಳು ಹಿಂದೆ ಇತರರ ಭೋಗಗಳನ್ನು ಅಪಹರಿಸಿದ ಚೋರರು; ಅವರು ಇತರರ ಭೋಗಗಳನ್ನು ಕೊಳ್ಳೆಹೊಡೆದು, ಆ ಕರ್ಮದ ಫಲದಿಂದ ಹೀಗೆ ಏಕಾ ಸನಿಕರಾಗಿರುವರು; [ಅದಕ್ಕೇ] ಅವರಿಗೆ ಕಾಲ ಕಾಲಕ್ಕೆ ಊಟ ಸಿಕ್ಕು ವುದಿಲ್ಲ; ಇದು ಅವರ ಶೀಲವಲ್ಲ, ತಪವಲ್ಲ, ಬ್ರಹ್ಮಚರ್ಯವಲ್ಲ. [ಈಗ] ಬಯಲಲ್ಲಿ ವಾಸಮಾಡುವ ಭಿಕ್ಷುಗಳು, ಭನ್ತೇ ಆಯುಪಾಲ, ಹಿಂದೆ ಗ್ರಾಮಘಾತಕರಾದ ಚೋರರು [ಆಗಿದ್ದವರು]; ಅವರು ಇತರರ ಮನೆ ಗಳನ್ನು ನಾಶಮಾಡಿ, ಆ ಕರ್ಮದ ಫಲದಿಂದ ಹೀಗೆ ಬಯಲಿನಲ್ಲಿ ವಾಸಿಸುವವರಾಗಿರುವರು; ಅವರಿಗೆ ಮಲಗಿ ಕುಳಿತುಕೊಳ್ಳಲು ಎಡೆ ಸಿಕ್ಕುವುದಿಲ್ಲ; ಇದು ಅವರ ಶೀಲವಲ್ಲ, ತಪಸ್ಸಲ್ಲ, ಬ್ರಹ್ಮಚರ್ಯವಲ್ಲ. ಭನ್ತೇ ಆಯುಪಾಲ, [ಈಗ] ಮಲಗದಿರುವ ಭಿಕ್ಷುಗಳು ಪೂರ್ವದಲ್ಲಿ ದಾರಿಗರನ್ನು ಹಿಂಸಿಸುತ್ತಿದ್ದ ಚೋರರು; ಅವರು ದಾರಿಗರನ್ನು ಹಿಡಿದು ಬಂಧಿಸಿ, [ಒಂದು ಕಡೆ] ಕುಳ್ಳಿರಿಸಿ, ಆ ಕರ್ಮದ ಫಲದಿಂದ ಹೀಗೆ ಮಲಗದವರಾಗಿರುವರು; ಅವರಿಗೆ ಮಲಗಲು ಹಾಸಿಗೆ ಸಿಕ್ಕುವುದಿಲ್ಲ; ಇದು ಅವರ ಶೀಲವಲ್ಲ, ತಪಸ್ಸಲ್ಲ, ಬ್ರಹ್ಮಚರ್ಯವಲ್ಲ" ಎಂದು ಹೇಳಿ ದನು.

೩೯

ಹೀಗೆನ್ನಲು, ಆಯುಷ್ಮಂತನಾದ ಆಯುಪಾಲನು ಮೌನವಾದನು; ಏನೂ ಉತ್ತರ ಹೇಳಲಿಲ್ಲ. ಆಗ, ಐನೂರು ಯವನಕರು "ಮಹಾರಾಜ,

ಸ್ಥವಿರನು ಪಂಡಿತನು; ಆದರೂ ವಿಶಾರದನಲ್ಲ. [ಅದರಿಂದ] ಏನೂ ಉತ್ತರ ಹೇಳುವುದಿಲ್ಲ" ಎಂದು ಮಿಲಿಂದರಾಜನಿಗೆ ಹೇಳಿದರು.

ಆಗ ಮಿಲಿಂದರಾಜನು ಆಯುಷ್ಮಂತನಾದ ಆಯುಪಾಲನು ಮೌನವಾದುದನ್ನು ಕಂಡು ಚಪ್ಪಾಳೆ ತಟ್ಟಿ, ಕೋಲಾಹಲಮಾಡಿ, "ಭೋ, [ಈ] ಜಂಬೂದ್ವೀಪ ತುಚ್ಛವಾದುದು! [ಈ] ಜಂಬೂದ್ವೀಪ ಜೊಳ್ಳು! ನನ್ನೊಡನೆ ಮಾತನಾಡಿ ನನ್ನ ಸಂದೇಹಗಳನ್ನು ಹೋಗಲಾಡಿಸಲು ಸಮರ್ಥನಾದ ಶ್ರಮಣನಿಲ್ಲ, ಬ್ರಾಹ್ಮಣನಿಲ್ಲ!" ಎಂದು ಯವನಕರಿಗೆ ಹೇಳಿದನು.

ಆಗ, ಮಿಲಿಂದರಾಜನು ಆ ಸರ್ವಪರಿಷೆಯನ್ನೂ ಕ್ರಮವಾಗಿ ದೃಷ್ಟಿಸಿನೋಡಿ, ಭೀತಿಯಿಲ್ಲದೆ ಮಂಕಾಗದ [ಆ] ಯವನಕರನ್ನು ಕಂಡು, "ನನ್ನೊಡನೆ ಮಾತನಾಡಿ ನನ್ನ ಸಂದೇಹಗಳನ್ನು ಹೋಗಲಾಡಿಸಲು ಸಮರ್ಥನಾದ ಬೇರೆ ಯಾರೋ ಪಂಡಿತನಾದ ಭಿಕ್ಷು ನಿಸ್ಸಂಶಯ ವಾಗಿಯೂ ಇರಬೇಕು. ಅದರಿಂದ ಈ ಯವನಕರು ಮಂಕಾಗಿಲ್ಲ" ಎಂದುಕೊಂಡು, "ಅಯ್ಯ, ನನ್ನೊಡನೆ ಮಾತನಾಡಿ ನನ್ನ ಸಂದೇಹ ಗಳನ್ನು ಹೋಗಲಾಡಿಸಲು ಸಮರ್ಥನಾದ ಬೇರಾವನಾದರೂ ಪಂಡಿತ ನಾದ ಭಿಕ್ಷುವಿರುವನೆ?" ಎಂದನು.

೪೦

ಆ ಸಮಯದಲ್ಲಿ, ಆಯುಷ್ಮಂತನಾದ ನಾಗಸೇನನು ಗ್ರಾಮ ನಗರ ರಾಜಧಾನಿಗಳಲ್ಲಿ ಭಿಕ್ಷಾಚರಣಮಾಡುತ್ತ ಶ್ರಮಣಗಣದ ಪರಿವಾರ ದೊಡನೆ ಕ್ರಮವಾಗಿ ಸಾಗಲನಗರದ ಬಳಿಸಾರಿದ್ದನು. ಆತನು ಸಂಘದ ಮುಖ್ಯಸ್ಥನು, ಗಣದ ಮುಖಂಡನು, ಗಣಾಚಾರ್ಯನು, ಪ್ರಸಿದ್ಧನು, ಯಶಸ್ವಿ; ಬಹುಜನರ ಸಮ್ಮತಿಯಿಂದ ಸಾಧುವೆನಿಸಿದವನು; ಪಂಡಿತನು, ತಿಳಿದವನು, ಮೇಧಾವಿ, ನಿಪುಣ, ವಿಜ್ಞ, ವಿಭಾವಿ, ವಿನೀತ, ವಿಶಾರದ, ಬಹುಶ್ರುತ; ಮೂರು ಪಿಟಕಗಳನ್ನು ಬಲ್ಲವನು, ವೇದಗಳನ್ನು ತಿಳಿ ದವನು, ಪಕ್ವವಾದ ಬುದ್ಧಿಯುಳ್ಳವನು, ಆಗಮಗಳನ್ನು ಬಲ್ಲವನು, ಪ್ರತಿಸಂಭಿದೆಗಳಲ್ಲಿ ಪಕ್ವವಾದವನು, ಒಂಬತ್ತು ಅಂಗಗಳ ಗುರುಶಾಸನ ದಲ್ಲಿ ಪ್ರವೀಣನು, ಜಿನವಚನದಲ್ಲಿ ಪಾರಂಗತನು, ಧರ್ಮ ಅರ್ಥಗಳನ್ನು

ಬೋಧಿಸುವುದರಲ್ಲೂ ತಿಳಿಯುವುದರಲ್ಲೂ ಕುಶಲಿಯು; ಆತನ ಪ್ರತಿಭೆಯು ಅಕ್ಷಯವಾದುದು, ವಿಚಿತ್ರವಾದುದು; ಅವನು ಸುಂದರವಾಗಿ ಮಾತನಾಡುವನು; ಅವನ ಮಾತೂ ಕೆಲಸಗಳೂ ಸುಂದರವಾದುವು; [ವಾದದಲ್ಲಿ] ಅವನನ್ನು ಸಮೀಪಿಸುವುದು ಕಷ್ಟ, ಅಡಗಿಸುವುದು ಕಷ್ಟ, ಮೀರಿಸುವುದು ಕಷ್ಟ, ತಡೆಯುವುದು ಕಷ್ಟ; ಅವನು ಸಾಗರದಂತೆ ಅಕ್ಷೋಭ್ಯನು, ಗಿರಿರಾಜನಂತೆ ನಿಶ್ಚಲನು; ಯುದ್ಧವನ್ನು ಬಿಟ್ಟವನು; ಕತ್ತಲೆಯನ್ನು ಹೋಗಲಾಡಿಸಿ ಬೆಳಕು ಮಾಡುವವನು; ಮಾತನಾಡುವುದರಲ್ಲಿ ದೊಡ್ಡವನು, ಇತರ ಗಣಾಚಾರ್ಯರ ಗಣಗಳನ್ನು ಮಥಿಸುವವನು, ಇತರ ತೀರ್ಥಕರನ್ನು ಮರ್ದನಮಾಡುವವನು; ಭಿಕ್ಷುಗಳು, ಭಿಕ್ಷುಣಿಯರು, ಉಪಾಸಕರು, ಉಪಾಸಿಕೆಯರು, ರಾಜರು, ರಾಜಮಹಾಮಾತ್ಯರು ಅವನನ್ನು ಸತ್ಕರಿಸಿ, ಗೌರವಿಸಿ, ಮಾನಿಸಿ, ಪೂಜಿಸಿ, ಅವನಿಗೆ ಕೈಜೋಡಿಸುವರು; ಬಟ್ಟೆ, ಊಟ, ಶಯನಾಸನ, ಕಾಯಿಲೆಗೆ ಔಷಧಿ ಮುಂತಾದ ಪರಿಷ್ಕಾರಗಳು ಅವನಿಗೆ ಲಭಿಸುವುವು; ಅವನು ಲಾಭಯಶಸ್ಸುಗಳ ತುದಿಯನ್ನು ಪಡೆದವನು; ಕೇಳಬೇಕೆಂದು ಬಂದ ಬುದ್ಧರಿಗೂ ವಿಜ್ಞರಿಗೂ ಒಂಬತ್ತು ಅಂಗಗಳ ಜಿನಶಾಸನರತ್ನವನ್ನು ಚೆನ್ನಾಗಿ ತೋರಿಸುವನು; ಧರ್ಮಮಾರ್ಗವನ್ನು ಉಪದೇಶಿಸುವನು; ಧರ್ಮಪ್ರದ್ಯೋತವನ್ನು ಧರಿಸುವನು; ಧರ್ಮಯೂಪವನ್ನು ಎತ್ತಿ ನಿಲ್ಲಿಸುವನು; ಧರ್ಮಯಾಗವನ್ನು ಮಾಡುವನು; ಧರ್ಮಧ್ವಜವನ್ನು ಹಿಡಿಯುವನು; ಧರ್ಮಕೇತುವನ್ನು ಎತ್ತಿ ನಿಲ್ಲಿಸುವನು; ಧರ್ಮಶಂಖವನ್ನು ಊದುವನು; ಧರ್ಮಭೇರಿಯನ್ನು ಧ್ವನಿಮಾಡುವನು; ಸಿಂಹನಾದವನ್ನು ಕೂಗುವನು; ಇಂದ್ರಗರ್ಜಿತವನ್ನು ಗರ್ಜಿಸುವನು; ಮಧುರವಾದ ಸ್ವರದ ಗರ್ಜಿತದಿಂದ, ತನ್ನ ಶ್ರೇಷ್ಠವಾದ ಜ್ಞಾನವೆಂಬ ವಿದ್ಯುಜ್ಜಾಲದ ಪರಿವೇಷ್ಟಿತದಿಂದ, ಕರುಣಾಜಲಭರಿತವಾದ ಮಹಾ ಧರ್ಮಾಮೃತಮೇಘದಿಂದ ಸಕಲಲೋಕವನ್ನು ತಣಿಸುವನು.

೪೧

ಆಗ, ಅಲ್ಲಿ ಆಯುಷ್ಮಂತನಾದ ನಾಗಸೇನನು ಎಂಬತ್ತು ಸಾವಿರ ಭಿಕ್ಷುಗಳೊಡನೆ ಸಂಖ್ಯೇಯ ಪರಿವೇಣದಲ್ಲಿ ವಾಸಿಸುತ್ತಿದ್ದನು. ಅದರಿಂದ

> " [ನಾಗಸೇನನು] ಬಹುಶ್ರುತನು, ಮನೋಹರವಾಗಿ ಮಾತನಾಡುವವನು,
> ನಿಪುಣನು, ವಿಶಾರದನು;

ಸಮಯವರಿತು ನುಡಿವವನು, ಕುಶಲಿಯು,
ಪ್ರಶ್ನೆಯನ್ನು ವಿವರಿಸುವುದರಲ್ಲಿ ಕೋವಿದನು.

"ಮೂರು ಪಿಟಕಗಳನ್ನು ಬಲ್ಲ ಭಿಕ್ಷುಗಳೂ
ಐದು ನಿಕಾಯಗಳನ್ನು ತಿಳಿದವರೂ
ನಾಲ್ಕು ನಿಕಾಯಗಳನ್ನು ಬಲ್ಲವರೂ
ಆ ನಾಗಸೇನನನ್ನು ಪುರಸ್ಕರಿಸುವರು.

"ಗಂಭೀರವಾದ ಪ್ರಜ್ಞೆಯುಳ್ಳವನೂ ಮೇಧಾವಿಯೂ
ಮಾರ್ಗ ಅಮಾರ್ಗಗಳಲ್ಲಿ ಕೋವಿದನೂ
ಉತ್ತಮಾರ್ಥದ ಪ್ರಾಪ್ತಿಯನ್ನು ಪಡೆದ
ವಿಶಾರದನೂ ಆದ ನಾಗಸೇನನು—

"ನಿಪುಣರೂ ಸತ್ಯವಾದಿಗಳೂ ಆದ
ಆ ಭಿಕ್ಷುಗಳಿಂದ ಬಳಸಲ್ಪಟ್ಟು
ಗ್ರಾಮನಗರಗಳಲ್ಲಿ ಸಂಚಾರಮಾಡುತ್ತ
ಸಾಗಲದ ಬಳಿಸಾರಿದನು.

"ಆಗ ನಾಗಸೇನನು
ಸಂಖ್ಯೇಯ ಪರಿವೇಣದಲ್ಲಿ ವಾಸಿಸುತ್ತಿದ್ದನು.
ಪರ್ವತದಲ್ಲಿ ಕೇಸರಿ ಹೇಗೋ ಹಾಗೆ
ಮನುಷ್ಯರೊಡನೆ ಮಾತನಾಡುತ್ತಿದ್ದನು"

ಎಂದು ಹೇಳುವರು.

೪೨

ಆಗ ದೇವಮಂತ್ರಿಕನು "ಸ್ವಲ್ಪ ತಡೆ, ಮಹಾರಾಜ. ಸ್ವಲ್ಪ ತಡೆ, ಮಹಾರಾಜ. ಮಹಾರಾಜ, ನಾಗಸೇನನೆಂಬ ಸ್ಥವಿರನುಂಟು; [ಆತನು] ಪಂಡಿತನು, ಬಲ್ಲವನು, ಮೇಧಾವಿ, ವಿನೀತನು, ವಿಶಾರದನು, ಬಹಳ ತಿಳಿದವನು; ಮಾತನಾಡುವುದರಲ್ಲಿ ಕುಶಲಿಯು; ಸುಂದರವಾದ ಪ್ರತಿಭೆಯುಳ್ಳವನು; ಅರ್ಥ—ಧರ್ಮ—ನಿರುಕ್ತಿ—ಪ್ರತಿಭಾನ—ಪ್ರತಿಸಂಭಿಧೆಗಳಲ್ಲಿ ಪಾರಂಗತನಾದವನು. ಈಗ ಅವನು ಸಂಖ್ಯೇಯ ಪರಿವೇಣದಲ್ಲಿ ವಾಸಿಸುತ್ತಿರುವನು. ಹೋಗು, ಮಹಾರಾಜ. ಅವನು ನಿನ್ನೊಡನೆ ಮಾತನಾಡಿ, [ನಿನ್ನ] ಸಂದೇಹ ಸಂಶಯಗಳನ್ನು ಕಳೆಯಲು ಸಮರ್ಥನು" ಎಂದು ಮಿಲಿಂದರಾಜನಿಗೆ ಹೇಳಿದನು.

ಆಗ, ನಾಗಸೇನನೆಂಬ ಶಬ್ದ ಕೇಳಿದೊಡನೆ ಮಿಲಿಂದರಾಜನಿಗೆ ಭಯವಾಯಿತು, ಆತ್ಮ ಸ್ತಂಭಿತವಾಯಿತು, ರೋಮಾಂಚವಾಯಿತು. ಆಗ, ಮಿಲಿಂದರಾಜನು "ಭೋ. ಭಿಕ್ಷು ನಾಗಸೇನನು ನನ್ನೊಡನೆ ಮಾತು ಕತೆಯಾಡಲು ಸಮರ್ಥನೆ?" ಎಂದು ದೇವಮಂತ್ರಿಕನನ್ನು ಕೇಳಿದನು.

"ಮಹಾರಾಜ, ಇಂದ್ರ ಯಮ ವರುಣ ಕುಬೇರ ಪ್ರಜಾಪತಿ ಸುಯಾಮ ಸಂತುಶಿತ [ಮೊದಲಾದ] ಲೋಕಪಾಲರೊಡನೆ, ಪಿತುಪಿತಾಮಹನಾದ ಮಹಾಬ್ರಹ್ಮನೊಡನೆ ಕೂಡ ಆತನು ಮಾತುಕತೆಯಾಡಲು ಸಮರ್ಥನು. ಇನ್ನು ಮನುಷ್ಯಭೂತರು ಯಾವ ಲೆಕ್ಕ?"

"ಹಾಗಾದರೆ, ದೇವಮಂತ್ರಿಕ, ಭದಂತನ ಬಳಿಗೆ ದೂತನನ್ನು ಕಳುಹು" ಎಂದು ಮಿಲಿಂದರಾಜನು ದೇವಮಂತ್ರಿಕನಿಗೆ ಹೇಳಿದನು.

"ಹಾಗೇ ಆಗಲಿ, ದೇವ" ಎಂದು ದೇವಮಂತ್ರಿಕನು "ಭನ್ತೇ, ಮಿಲಿಂದರಾಜನು ಆಯುಷ್ಮಂತನ ದರ್ಶನವನ್ನು ಬಯಸುತ್ತಾನೆ" ಎಂದು ಆಯುಷ್ಮಂತನಾದ ನಾಗಸೇನನ ಬಳಿಗೆ ದೂತನನ್ನು ಕಳುಹಿಸಿದನು.

ಆಯುಷ್ಮಂತನಾದ ನಾಗಸೇನನು ತಾನು ಕೂಡ "ಹಾಗಾದರೆ, ಬರಲಿ" ಎಂದನು.

ಆಗ, ಮಿಲಿಂದರಾಜನು ಐನೂರು ಯವನಕರಿಂದ ಪರಿವೃತನಾಗಿ ಉತ್ತಮವಾದ ರಥವನ್ನು ಹತ್ತಿ, ಮಹಾ ಸೈನ್ಯದೊಡನೆ ಸಂಖ್ಯೇಯ ಪರಿವೇಣವಿರುವ ಕಡೆಗೆ, ಆಯುಷ್ಮಂತನಾದ ನಾಗಸೇನನಿರುವ ಕಡೆಗೆ, ಸಾರಿದನು.

೪೩

ಆ ಸಮಯದಲ್ಲಿ, ಆಯುಷ್ಮಂತನಾದ ನಾಗಸೇನನು ಎಂಬತ್ತು ಸಾವಿರ ಭಿಕ್ಷುಗಳೊಡನೆ ಮಂಡಲಮಾಳದಲ್ಲಿ ಕುಳಿತಿದ್ದನು. ಆಯುಷ್ಮಂತನಾದ ನಾಗಸೇನನ [ಆ] ಪರಿಷೆಯನ್ನು ಮಿಲಿಂದರಾಜನು ದೂರದಿಂದಲೇ ಕಂಡು, "ದೇವಮಂತ್ರಿಕ, ಈ ಮಹತ್ತಾದ ಪರಿಷೆ ಯಾರದು?" ಎಂದು ದೇವಮಂತ್ರಿಕನನ್ನು ಕೇಳಿದನು.

"[ಇದು] ಆಯುಷ್ಮಂತನಾದ ನಾಗಸೇನನ ಪರಿಷೆ, ಮಹಾರಾಜ."

ಆಗ, ಆಯುಷ್ಮಂತನಾದ ನಾಗಸೇನನ ಪರಿಷೆಯನ್ನು ದೂರದಿಂದಲೇ ಕಂಡು ಮಿಲಿಂದರಾಜನಿಗೆ ಭಯವಾಯಿತು, ಆತ್ಮ ಸ್ತಂಭಿತ

ವಾಯಿತು, ರೋಮಾಂಚವಾಯಿತು. ಆಗ, ಮಿಲಿಂದರಾಜನು ಖಡ್ಗಮೃಗಗಳು ಮುತ್ತಿದ ಆನೆಯ ಹಾಗೆ, ಗರುಡಗಳು ಸುತ್ತಿದ ಹಾವಿನಂತೆ, ಅಜಗರಗಳು ಬಳಸಿದ ಜಂಬುಕದಂತೆ, ಮಹಿಷಗಳ ನಡುವಣ ಕರಡಿಯಂತೆ, ಹಾವು ಬೆನ್ನಟ್ಟಿದ ಕಪ್ಪೆಯಂತೆ, ಶಾರ್ದೂಲವು ಬೆನ್ನು ಹತ್ತಿದ ಜಿಂಕೆಯಂತೆ, ಹಾವಾಡಿಗನಿಗೆ ಎದುರಾದ ಹಾವಿನಂತೆ, ಬೆಕ್ಕಿಗೆ ಎದುರಾದ ಇಲಿಯಂತೆ, ಭೂತವೈದ್ಯನಿಗೆ ಎದುರಾದ ಪಿಶಾಚಿಯಂತೆ, ರಾಹುವಿನ ಬಾಯಿಗೆ ಬಿದ್ದ ಚಂದ್ರನಂತೆ, ಬುಟ್ಟಿಯಲ್ಲಿ ಬಿದ್ದ ಸರ್ಪದಂತೆ, ಪಂಜರದೊಳಹೊಕ್ಕ ಹಕ್ಕಿಯಂತೆ, ಬಲೆಯ ಒಳಹೊಕ್ಕ ಮೀನಿನಂತೆ, ದುಷ್ಟಮೃಗಗಳ ಕಾಡಿನ ಒಳಹೊಕ್ಕ ಮನುಷ್ಯನಂತೆ, ವೈಶ್ರವಣನಿಗೆ ಅಪರಾಧಮಾಡಿದ ಯಕ್ಷನಂತೆ, ಆಯುಸ್ಸು ಪರಿಕ್ಷೀಣನಾದ ದೇವಪುತ್ರನಂತೆ ಭೀತನಾದನು, ಉದ್ವಿಗ್ನನಾದನು, ಭಯಗೊಂಡನು, ಸಂವಿಗ್ನನಾದನು, ರೋಮಾಂಚಗೊಂಡನು; ಅವನ ಮನಸ್ಸು ಮಂಕಾಯಿತು, ಮನಸ್ಸು ಕೆಟ್ಟಿತು, ಚಿತ್ತ ಭ್ರಮಣೆಯಾಯಿತು, ಮನಸ್ಸು ಅಸ್ತವ್ಯಸ್ತವಾಯಿತು. ಆದರೂ "ಈ ಜನರು ನನಗೆ ಅವಮಾನಮಾಡದಿರಲಿ" ಎಂದು ಧೈರ್ಯವೆತ್ತಿಕೊಂಡು, "ಆಯುಷ್ಮಂತನಾದ ನಾಗಸೇನನನ್ನು ನೀನು ನನಗೆ ತೋರಿಸಬೇಡ, ದೇವಮಂತ್ರಿಕ. [ನೀನು] ಹೇಳದೆಯೆ ನಾನೇ ನಾಗಸೇನನನ್ನು ತಿಳಿಯುತ್ತೇನೆ" ಎಂದು ದೇವಮಂತ್ರಿಕನಿಗೆ ಹೇಳಿದನು.

"ಸಾಧು, ಮಹಾರಾಜ, ನೀನೇ ತಿಳಿ."

೪೪

ಆ ಸಮಯದಲ್ಲಿ, ಆಯುಷ್ಮಂತನಾದ ನಾಗಸೇನನು ಆ ಭಿಕ್ಷುಗಳ ಪರಿಷೆಯಲ್ಲಿ [ತನ್ನ] ಮುಂದಿನ ನಲುವತ್ತುಸಾವಿರ ಭಿಕ್ಷುಗಳಿಗಿಂತ ಹೊಸಬನಾಗಿದ್ದನು; [ತನ್ನ] ಹಿಂದಿನ ನಲುವತ್ತುಸಾವಿರ ಭಿಕ್ಷುಗಳಿಗಿಂತ ಹಿರಿಯನಾಗಿದ್ದನು. ಆಗ, ಮಿಲಿಂದರಾಜನು ಆ ಸರ್ವಭಿಕ್ಷುಸಂಘವನ್ನೂ—ಮುಂದೆ, ಹಿಂದೆ, ನಡುವೆ—ಕ್ರಮವಾಗಿ ದೃಷ್ಟಿಸಿನೋಡಿ, ಆಯುಷ್ಮಂತನಾದ ನಾಗಸೇನನು ದೂರದಲ್ಲಿ ಭಿಕ್ಷುಸಂಘದ ನಡುವೆ ಭಯಭೈರವಗಳಿಲ್ಲದೆ, ರೋಮಾಂಚವಿಲ್ಲದೆ, ಭಯಲಜ್ಜೆಗಳಿಲ್ಲದೆ ಕೇಸರ

ಸಿಂಹದಂತೆ ಕುಳಿತಿರುವುದನ್ನು ಕಂಡು, "ಇವನು ನಾಗಸೇನ!" ಎಂದು [ಅವನ] ಆಕಾರದಿಂದಲೇ ತಿಳಿದನು.

ಆಗ, ಮಿಲಿಂದರಾಜನು "ಇವನು ನಾಗಸೇನ, ದೇವಮಂತ್ರಿಕ!" ಎಂದು ದೇವಮಂತ್ರಿಕನಿಗೆ ಹೇಳಿದನು.

"ಹೌದು, ಮಹಾರಾಜ. ಅವನು ನಾಗಸೇನ. ನಾಗಸೇನನನ್ನು ಚೆನ್ನಾಗಿ ತಿಳಿದೆ, ಮಹಾರಾಜ."

ಆಗ "[ಯಾರೂ] ಹೇಳದೆಯೆ ನಾನೇ ನಾಗಸೇನನನ್ನು ತಿಳಿದೆ" ಎಂದು ರಾಜನು ಸಂತೋಷಪಟ್ಟನು.

ಆಗ, ಆಯುಷ್ಮಂತನಾದ ನಾಗಸೇನನನ್ನು ಕಂಡು ಮಿಲಿಂದ ರಾಜನಿಗೆ ಭಯವಾಯಿತು, ಆತ್ಮ ಸ್ತಂಭಿತವಾಯಿತು, ರೋಮಾಂಚ ವಾಯಿತು. ಅದರಿಂದ

" [ಒಳ್ಳೆಯ] ನಡತೆಯಿಂದ ಸಂಪನ್ನನಾದ,
ಉತ್ತಮವಾದ ದಮೆಯಿಂದ ಚೆನ್ನಾಗಿ ದಮನಮಾಡಿಕೊಂಡ
[ಆ] ನಾಗಸೇನನನ್ನು ಕಂಡು
ರಾಜನು ಈ ಮಾತು ಹೇಳಿದನು:

" 'ಮಾತನಾಡುವವರು ಅನೇಕರನ್ನು ನಾನು ನೋಡಿದ್ದೇನೆ,
ಅನೇಕರೊಡನೆ ಮಾತನಾಡಿ ಬಂದಿದ್ದೇನೆ;
ಈ ದಿನ ನನಗೆ ಆದಂತಹ ಭಯ, ನಡುಕ,
[ಇದುವರೆಗೆ ನನಗೆ] ಆಗಲಿಲ್ಲ.

" 'ಈ ದಿನ ನಿಸ್ಸಂಶಯವಾಗಿ
ನನಗೆ ಪರಾಜಯವಾಗುವುದು;
ನಾಗಸೇನನಿಗೆ ಜಯ[ವಾಗುವುದು];
ನನ್ನ ಮನಸ್ಸು ಅಷ್ಟು ಅಸ್ಥಿರವಾಗಿದೆ' "

ಎಂದು ಹೇಳುವರು.

[ಬಾಹಿರ ಕಥೆ ಮುಗಿಯಿತು.]

ಲಕ್ಷಣ ಪ್ರಶ್ನೆ

ವರ್ಗ ಒಂದು

೧

ಆಗ ಮಿಲಿಂದರಾಜನು ಆಯುಷ್ಮಂತನಾದ ನಾಗಸೇನನ ಬಳಿ ಸಾರಿ, ಅವನೊಡನೆ ಸಮ್ಮೋದದಿಂದ ನುಡಿದನು; ಮೋದಪಡುವಂತಹ ಸ್ನೇಹಪರವಾದ ಪರಸ್ಪರ ಮಾತುಕತೆಯಾಡಿ ಒಂದು ಕಡೆ ಕುಳಿತನು. ಆಯುಷ್ಮಂತನಾದ ನಾಗಸೇನನು ಕೂಡ ಅದಕ್ಕೆ ಪ್ರತಿಯಾಗಿ ಉಪಚರಿಸಿ ನುಡಿದನು. ಅದರಿಂದ ಮಿಲಿಂದರಾಜನ ಮನಸ್ಸಿಗೆ ಮೆಚ್ಚುಗೆಯಾಯಿತು.

ಆಗ ಮಿಲಿಂದನು "ಭದಂತನನ್ನು ಏನೆಂದು ತಿಳಿಯುವರು? ಭನ್ತೇ, ನಿನ್ನ ಹೆಸರೇನು?" ಎಂದನು.

"ನನ್ನನ್ನು ನಾಗಸೇನನೆಂದು ತಿಳಿಯುವರು, ಮಹಾರಾಜ. ಜೊತೆಯ ಬ್ರಹ್ಮಚಾರಿಗಳು ನನ್ನನ್ನು ನಾಗಸೇನನೆಂದು ಬಳಕೆಯಾಗಿ ಕರೆಯುವರು. ಆದರೆ ತಾಯಿತಂದೆಗಳು 'ನಾಗಸೇನ, ಶೂರಸೇನ, ವೀರಸೇನ, ಸಿಂಹಸೇನ' ಎಂದು ಹೆಸರು ಇಟ್ಟರೂ, ಈ 'ನಾಗಸೇನ' ಮುಂತಾದುವು ಸಾಮಾನ್ಯವಾಗಿ ಒಪ್ಪಿರುವ ಸಂಜ್ಞೆ; ವ್ಯವಹಾರದ ಹೆಸರು ಮಾತ್ರ. ಇಲ್ಲಿ ಪುದ್ಗಲವು ಲಭಿಸುವುದಿಲ್ಲ."

ಆಗ ಮಿಲಿಂದರಾಜನು "ಐನೂರು ಯವನಕರೂ ಎಂಬತ್ತು ಸಾವಿರ ಭಿಕ್ಷುಗಳೂ ಈ ಮಾತನ್ನು ಕೇಳಬೇಕು. ಇಲ್ಲಿ ಪುದ್ಗಲವು ಲಭಿಸುವುದಿಲ್ಲವೆಂದು ಈ ನಾಗಸೇನನು ಹೇಳುವನು. ಈ ಮಾತನ್ನು ಒಪ್ಪಲಾಗುವುದೆ?" ಎಂದನು.

ಎಂದು, "ಭನ್ತೇ ನಾಗಸೇನ, ಪುದ್ಗಲವು ಲಭಿಸದಿದ್ದರೆ, ನಿಮ್ಮ ಬಟ್ಟೆ, ಊಟ, ಮಲಗಿ ಕೂರುವ ಸ್ಥಳ, ರೋಗವಾದಾಗ ಓಷಧ—ಇವುಗಳನ್ನು ಕೊಡುವವರು ಯಾರು? ಅವುಗಳನ್ನು ಅನುಭವಿಸುವವರು ಯಾರು? ಶೀಲಗಳನ್ನು ಕಾಪಾಡುವವರು ಯಾರು? ಮಾರ್ಗದ ಫಲವಾದ ನಿರ್ವಾಣವನ್ನು ಕಂಡುಕೊಳ್ಳುವವರು ಯಾರು? ಕೊಡದುದನ್ನು

ತೆಗೆದುಕೊಳ್ಳುವವರು ಯಾರು? ಕಾಮುಗಳಿಗೆ ಕಟ್ಟುಬಿದ್ದು ಕೆಟ್ಟ ಕೆಲಸ ಮಾಡುವವರು ಯಾರು? ಮಧುಮದ್ಯಗಳನ್ನು ಕುಡಿಯುವವರು ಯಾರು? [ಮಾಡಿದ ಗಳಿಗೆಯೆ ವಿಪಾಕಕೊಡುವ] ಐದು ಆನಂತರಿಯ ಕರ್ಮಗಳನ್ನು ಮಾಡುವವರು ಯಾರು? ಆದ್ದರಿಂದ ಕುಶಲವಿಲ್ಲ, ಅಕುಶಲವಿಲ್ಲ, ಕುಶಲಾಕುಶಲವಿಲ್ಲ; ಕರ್ಮಗಳನ್ನು ಮಾಡುವವನಿಲ್ಲ, ಮಾಡಿಸುವವನಿಲ್ಲ; ಸುಕೃತ ದುಷ್ಕೃತ ಕರ್ಮಗಳ ಫಲ ವಿಪಾಕಗಳು ಇಲ್ಲ. ಭನ್ತೇ ನಾಗಸೇನ, ನಿನ್ನನ್ನು ಯಾರಾದರೂ ಕೊಂದರೆ, ಆದರಿಂದ ಪ್ರಾಣಹಾನಿಯಿಲ್ಲ. ನಿಮಗೆ ಆಚಾರ್ಯರೂ ಇಲ್ಲ, ಉಪಾಧ್ಯಾಯರೂ ಇಲ್ಲ, ಉಪಸಂಪದೆಯೂ ಇಲ್ಲ.

"'ಜೊತೆಯ ಬ್ರಹ್ಮಚಾರಿಗಳು ನನ್ನನ್ನು ನಾಗಸೇನನೆಂದು ಬಳಕೆಯಾಗಿ ಕರೆಯುವರು, ಮಹಾರಾಜ' ಎಂದು ನೀನು ಹೇಳಿದರೆ, ಈ 'ನಾಗಸೇನ' [ಎಂಬುದು] ಯಾವುದು? ಏನು ಭನ್ತೇ, [ನಿನ್ನ] ತಲೆ ಕೂದಲೆ 'ನಾಗಸೇನ'?"

"ಅಲ್ಲ, ಮಹಾರಾಜ."

"ಹಾಗಾದರೆ, 'ನಾಗಸೇನ' ಎಂಬುದು [ನಿನ್ನ] ಮೈಕೂದಲೆ?"

"ಅಲ್ಲ, ಮಹಾರಾಜ."

"ಹಾಗಾದರೆ, ಈ 'ನಾಗಸೇನ' ಎಂಬುದು ಉಗುರೆ? ಹಲ್ಲೆ? ಚರ್ಮವೆ? ಮಾಂಸವೆ? ಸ್ನಾಯುವೆ? ಮೂಳೆಯೆ? ಅಸ್ಥಿಮಜ್ಜವೆ? ಹೃದಯವೆ? ಯಕೃತ್ತೆ? ಕಿಬ್ಬೊಟ್ಟೆಯೆ? ಮೂತ್ರಕೋಶವೆ? ಪ್ಲೀಹವೆ? ಶ್ವಾಸಕೋಶವೆ? ದೊಡ್ಡ ಕರುಳೆ? ಸಣ್ಣ ಕರುಳೆ? ಹೊಟ್ಟೆಯೆ? ಮಲವೆ? ಪಿತ್ತವೆ? ಶ್ಲೇಷ್ಮವೆ? ಕೀವೆ? ರಕ್ತವೆ? ಬೆವರೆ? ಬೊಜ್ಜೆ? ಕಣ್ಣೀರೆ? ವಸೆಯೆ? ಜೊಲ್ಲೆ? ಸಿಂಬಳವೆ? ರಸಿಕೆಯೆ? ಮೂತ್ರವೆ? ತಲೆಯ ಮಿದುಳೆ? ಯಾವುದು ಈ 'ನಾಗಸೇನ'?"

"ಇದು ಯಾವುದೂ ಅಲ್ಲ, ಮಹಾರಾಜ."

"ಹಾಗಾದರೆ, ಭನ್ತೇ, ರೂಪವೆ 'ನಾಗಸೇನ'?"

"ಅಲ್ಲ, ಮಹಾರಾಜ."

"ಹಾಗಾದರೆ, ಈ 'ನಾಗಸೇನ' ಎಂಬುದು ಯಾವುದು? ವೇದನೆಯೆ? ಸಂಜ್ಞೆಯೆ? ಸಂಸ್ಕಾರವೆ? ವಿಜ್ಞಾನವೆ?"

"ಇದು ಯಾವುದೂ ಅಲ್ಲ, ಮಹಾರಾಜ."

"ಏನು ಭನ್ತೇ, ರೂಪ ವೇದನೆ ಸಂಜ್ಞೆ ಸಂಸ್ಕಾರ ವಿಜ್ಞಾನಗಳು [ಕೂಡಿ] 'ನಾಗಸೇನ'ನೆ?"

"ಅಲ್ಲ, ಮಹಾರಾಜ."

"ಈ ಐದು ಸ್ಕಂಧಗಳಿಂದ ಬೇರೆಯಾದುದು ಯಾವುದಾದರೂ 'ನಾಗಸೇನ'ನೆ?"

"ಅಲ್ಲ, ಮಹಾರಾಜ."

"ಭನ್ತೇ, ನಿನ್ನನ್ನು ಸಾರಿ ಸಾರಿ ಕೇಳಿ 'ನಾಗಸೇನ'ನನ್ನು ಕಾಣಲಾರೆ. 'ನಾಗಸೇನ' ಎಂಬುದು ಬರಿಯ ಶಬ್ದ. ಹಾಗಾದರೆ ಈ 'ನಾಗಸೇನ' ಯಾರು? ನೀನು ಹೇಳಿದುದು ಮೃಷಾವಾದ, ಸುಳ್ಳು. 'ನಾಗಸೇನ'ನಿಲ್ಲ."

ಆಗ ಆಯುಷ್ಮಂತನಾದ ನಾಗಸೇನನು "ಮಹಾರಾಜ, ನೀನು ಕ್ಷತ್ರಿಯ ಸುಕುಮಾರ, ಅತ್ಯಂತ ಸುಕುಮಾರ. ಈ ಮಧ್ಯಾಹ್ನದಲ್ಲಿ ಕಾಯ್ದ ನೆಲದ ಮೇಲೆ ಸುಡುವ ಮರಳಿನ ಮೇಲೆ ಕಠಿಣವಾದ ನೊರಜುಗಲ್ಲು ಮರಳುಗಳನ್ನು ಕಾಲಿನಿಂದ ತುಳಿಯುತ್ತ ಬಂದರೆ ಕಾಲು ಗಾಯವಾಗಿ ನೋಯುವುದು, ದೇಹ ಬಳಲುವುದು, ಚಿತ್ತ ಕೆಡುವುದು, ಸಹಿಸಲು ಕಷ್ಟವಾದ ಕಾಯವಿಜ್ಞಾನವು ಹುಟ್ಟುವುದು. ನೀನೇನು ನಡೆದು ಬಂದೆಯೊ, ಅಥವಾ ವಾಹನದಲ್ಲೊ?" ಎಂದು ಮಿಲಿಂದ ರಾಜನನ್ನು ಕೇಳಿದನು.

"ನಡೆದು ಬರಲಿಲ್ಲ, ಭನ್ತೇ. ನಾನು ರಥದಲ್ಲಿ ಬಂದೆ."

"ನೀನು ರಥದಲ್ಲಿ ಬಂದುದಾದರೆ, ಮಹಾರಾಜ, ನಿನ್ನ 'ರಥ' ಯಾವುದು ತಿಳಿಯಿಸು. ಏನು, ಮಹಾರಾಜ, ಮೂಕಿಯು 'ರಥ'ವೆ?"

"ಅಲ್ಲ, ಭನ್ತೇ."

"ಹಾಗಾದರೆ ಈ 'ರಥ' ಎಂಬುದು ಯಾವುದು? ಅಕ್ಷವೆ? ಚಕ್ರಗಳೆ? ರಥಪಂಜರವೆ? ರಥದಂಡಕವೆ? ಯುಗವೆ? ರಶ್ಮಿಯೆ? ಚುಚ್ಚುಗೋಲೆ? ಯಾವುದು 'ರಥ'?"

"ಇದು ಯಾವುದೂ ಅಲ್ಲ, ಭನ್ತೇ."

"ಇವು ಎಲ್ಲವೂ [ಕೂಡಿ] 'ರಥ'ವೆ?"

"ಅಲ್ಲ, ಭನ್ತೇ."

"ಇವುಗಳಿಂದ ಬೇರೆಯಾದುದು ಯಾವುದಾದರೂ 'ರಥ'ವೆ?"

"ಅಲ್ಲ, ಭನ್ತೇ."

"ಮಹಾರಾಜ, ನಿನ್ನನ್ನು ಸಾರಿ ಸಾರಿ ಕೇಳಿ 'ರಥ'ವನ್ನು ಕಾಣಲಾರೆ. 'ರಥ'ವೆಂಬುದು ಬರಿಯ ಶಬ್ದ, ಮಹಾರಾಜ. ನೀನು ಹೇಳಿದುದು ಮೃಷಾವಾದ, ಸುಳ್ಳು. 'ರಥ'ವಿಲ್ಲ. ಮಹಾರಾಜ, ನೀನು ಸಕಲ ಜಂಬೂದ್ವೀಪದ ಅಗ್ರರಾಜ. ಯಾರಿಗೆ ಭಯಪಟ್ಟು ನೀನು ಸುಳ್ಳು ಹೇಳುವೆ? ಐನೂರು ಯವನಕರೂ ಎಂಬತ್ತುಸಾವಿರ ಭಿಕ್ಷುಗಳೂ ಇದನ್ನು ಕೇಳಬೇಕು. ಈ ಮಿಲಿಂದರಾಜನು ತಾನು ರಥದಲ್ಲಿ ಬಂದೆನೆಂದನು. 'ರಥದಲ್ಲಿ ಬಂದರೆ, ಮಹಾರಾಜ, ಆ "ರಥ"ವಾವುದು ತಿಳಿಸು' ಎಂದರೆ, ಹೇಳಿದ 'ರಥ'ವನ್ನು ವಿವರಿಸಿ ಸ್ಥಾಪಿಸಲಿಲ್ಲ. ಇದನ್ನು ಮೆಚ್ಚಲಾಗುವುದೆ?"

ಹೀಗೆನ್ನಲು, ಆ ಐನೂರು ಜನ ಯವನಕರು ಆಯುಷ್ಮಂತನಾದ ನಾಗಸೇನನಿಗೆ ಸಾಧುಕಾರವನ್ನು ಕೊಟ್ಟು, "ಮಹಾರಾಜ, ನಿನಗೆ ಶಕ್ತಿಯಿದ್ದರೆ ಇದಕ್ಕೆ ಏನು ಹೇಳುವೆಯೋ ಹೇಳು" ಎಂದು ಮಿಲಿಂದರಾಜನಿಗೆ ಹೇಳಿದರು.

ಆಗ ಮಿಲಿಂದರಾಜನು "ಭನ್ತೇ ನಾಗಸೇನ, ನಾನು ಸುಳ್ಳು ಹೇಳುವುದಿಲ್ಲ. ಮೂಕಿ, ಅಕ್ಷ, ಚಕ್ರ ಮುಂತಾದವು ಇರುವುದರಿಂದ 'ರಥ'ವೆಂದು ಸಾಮಾನ್ಯವಾಗಿ ಒಪ್ಪಿರುವ ಸಂಜ್ಞೆ, ವ್ಯವಹಾರದ ಹೆಸರು, ಬಳಕೆಯಲ್ಲಿರುವುದು" ಎಂದನು.

"ಸಾಧು, ಮಹಾರಾಜ. 'ರಥ'ವೇನೆಂಬುದನ್ನು ನೀನು ತಿಳಿದಿರುವೆ. ಅದರಂತೆಯೇ, ಮಹಾರಾಜ, ತಲೆಗೂದಲು ಮುಂತಾದ ದೇಹದ ಮೂವತ್ತೆರಡು ಆಕಾರಗಳಿಂದಲೂ ರೂಪ ಮೊದಲಾದ ಐದು ಸ್ಕಂಧಗಳಿಂದಲೂ ಈ 'ನಾಗಸೇನ' ಎಂದು ಸಾಮಾನ್ಯವಾಗಿ ಒಪ್ಪಿರುವ ಸಂಜ್ಞೆ, ವ್ಯವಹಾರದ ಹೆಸರು, ಬಳಕೆಯಲ್ಲಿರುವುದು. ಆದರೆ ಪರಮಾರ್ಥದಲ್ಲಿ ಪುದ್ಗಲವು ಲಭಿಸುವುದಿಲ್ಲ. ಮಹಾರಾಜ,

'ಅಂಗಸಂಭಾರಗಳಿಂದ "ರಥ"ವೆಂಬ ಶಬ್ದವಾಗುವ ಹಾಗೆ
ಸ್ಕಂಧಗಳ ಇರುವಿಕೆಯಿಂದ ಸತ್ತ್ವವೆಂಬ ಸಮ್ಮತಿಯಾಗುವುದು'

ಎಂದು ಭಿಕ್ಷುಣಿ ವಜ್ರೆಯು ಹೇಳಿರುವಳು."

"ಆಶ್ಚರ್ಯ, ಭನ್ತೇ ನಾಗಸೇನ. ಅದ್ಭುತ, ಭನ್ತೇ ನಾಗಸೇನ. [ನನಗೆ] ಪ್ರಶ್ನೆ ಹೊಳೆದುದೂ [ನೀನು] ಅದನ್ನು ಬಿಡಿಸಿದುದೂ ಅತಿ ಸೊಗಸು. ಬುದ್ಧನು ಇದ್ದಿದ್ದರೆ, ಅವನೂ ಸಾಧುಕಾರವನ್ನು ಕೊಡು ತ್ತಿದ್ದ. ಸಾಧು, ಸಾಧು, ನಾಗಸೇನ. [ನನಗೆ] ಪ್ರಶ್ನೆಯು ಹೊಳೆ ದುದೂ [ನೀನು] ಅದನ್ನು ಬಿಡಿಸಿದುದೂ ಅತಿಸೊಗಸು.

೨

"ಭನ್ತೇ ನಾಗಸೇನ, ನೀನು [ಭಿಕ್ಷುವಾಗಿ] ಎಷ್ಟು ವರ್ಷ [ವಾಯಿತು]?"

"ನಾನು [ಭಿಕ್ಷುವಾಗಿ] ಏಳು ವರ್ಷ[ವಾಯಿತು], ಮಹಾರಾಜ."

"ನಿನ್ನದು ಹೇಗೆ ಏಳು, ಭನ್ತೇ? ಏಳು [ಎಂಬುದು] ನೀನೆ? ಏಳು [ಎಂಬುದು] ಸಂಖ್ಯೆಯೆ?"

ಆ ಸಮಯದಲ್ಲಿ ಎಲ್ಲಾ ಆಭರಣಗಳಿಂದ ಅಲಂಕಾರ ಮಾಡಿ ಕೊಂಡ ಮಿಲಿಂದರಾಜನ ನೆರಳು ನೆಲದ ಮೇಲೆ ಕಾಣುತ್ತಿತ್ತು, ನೀರಿನ ಪಾತ್ರೆಯಲ್ಲೂ ಕಾಣುತ್ತಿತ್ತು.

ಆಗ ಆಯುಷ್ಮಂತನಾದ ನಾಗಸೇನನು "ಮಹಾರಾಜ, ನೆಲದ ಮೇಲೂ ನೀರಿನಲ್ಲೂ ನಿನ್ನ ನೆರಳು ಕಾಣುವುದು. ಏನು, ಮಹಾರಾಜ, ರಾಜನು ನೀನೇ, ಅಥವಾ ನೆರಳೆ?" ಎಂದನು.

"ಭನ್ತೇ ನಾಗಸೇನ, ರಾಜನು ನಾನು; ನೆರಳು ರಾಜನಲ್ಲ. ನನ್ನನ್ನು ಆಶ್ರಯಿಸಿ ನೆರಳು ವರ್ತಿಸುವುದು."

"ಅದರಂತೆಯೇ, ಮಹಾರಾಜ, ವರ್ಷಗಳ ಸಂಖ್ಯೆ ಏಳು; ಏಳು [ಎಂಬುದು] ನಾನಲ್ಲ. ನೆರಳಿನ ಉಪಮಾನದಂತೆ ನನ್ನನ್ನು ಆಶ್ರಯಿಸಿ 'ಏಳು' ಪ್ರವರ್ತಿಸುವುದು."

"ಆಶ್ಚರ್ಯ, ಭನ್ತೇ ನಾಗಸೇನ. ಅದ್ಭುತ, ಭನ್ತೇ ನಾಗಸೇನ. [ನನಗೆ] ಪ್ರಶ್ನೆ ಹೊಳೆದುದೂ [ನೀನು] ಅದನ್ನು ಬಿಡಿಸಿದುದೂ ಅತಿಸೊಗಸು."

೩

ರಾಜನು "ಭನ್ತೇ ನಾಗಸೇನ, ನನ್ನ ಸಂಗಡ ಮಾತುಕತೆಯಾಡು ವೆಯ?" ಎಂದನು.

"ಮಹಾರಾಜ, ನೀನು ಪಂಡಿತನ ಹಾಗೆ ಮಾತನಾಡಿದರೆ, ಮಾತ ನಾಡುವೆನು; ರಾಜನ ಹಾಗೆ ಮಾತನಾಡಿದರೆ, ಮಾತನಾಡುವುದಿಲ್ಲ."

"ಪಂಡಿತರು ಹೇಗೆ ಮಾತನಾಡುವರು, ಭನ್ತೇ ನಾಗಸೇನ?"

"ಮಹಾರಾಜ, ಮಾತುಕತೆಯಾಡುವಾಗ ಪಂಡಿತರು ಮುಚ್ಚಿ ಹೇಳುವರು, ಬಿಚ್ಚಿ ಹೇಳುವರು, ತಪ್ಪನ್ನು ತೋರಿಸುವರು, ತಪ್ಪನ್ನು ಒಪ್ಪಿಕೊಳ್ಳುವರು, ಒಂದೊಂದಕ್ಕೂ ಲಕ್ಷಣಗಳನ್ನು ಹೇಳುವರು, ಪ್ರತಿ ಲಕ್ಷಣಗಳನ್ನು ಹೇಳುವರು. ಅದರಿಂದ ಪಂಡಿತರಿಗೆ ಕೋಪಬರುವುದಿಲ್ಲ. ಪಂಡಿತರು ಹೀಗೆ ಮಾತುಕತೆ ಆಡುವರು, ಮಹಾರಾಜ."

"ರಾಜರು ಹೇಗೆ ಮಾತನಾಡುವರು, ಭನ್ತೇ?"

"ರಾಜರು, ಮಹಾರಾಜ, ಮಾತನಾಡುವಾಗ ಒಂದು ವಿಷಯ ವನ್ನು ಎತ್ತುವರು. ಯಾರಾದರೂ ಅದನ್ನು ವಿರೋಧಿಸಿದರೆ, 'ಇವನಿಗೆ ದಂಡ ಹಾಕಿರಿ!' ಎಂದು ದಂಡವನ್ನು ಆಜ್ಞಾಪಿಸುವರು. ರಾಜರು ಹೀಗೆ ಮಾತುಕತೆಯಾಡುವರು, ಮಹಾರಾಜ."

"ನಾನು ಪಂಡಿತನಂತೆ ಮಾತನಾಡುವೆನು, ಭನ್ತೇ; ರಾಜನಂತೆ ಅಲ್ಲ. ಭದಂತನು ಮನವಾರೆ ಮಾತನಾಡಲಿ. ಭಿಕ್ಷುಗಳೊಡನೆ, ಶ್ರಾಮಣೇರರೊಡನೆ, ಉಪಾಸಕರೊಡನೆ ಅಥವಾ ಆರಾಮದ ನಿವಾಸಿ ಗಳೊಡನೆ ಮಾತನಾಡುವಂತೆ ಭದಂತನು ಮನವಾರೆ ಮಾತನಾಡಲಿ. ಭಯಪಡುವುದು ಬೇಡ."

"ಒಳ್ಳೆಯದು, ಮಹಾರಾಜ" ಎಂದು ಸ್ಥವಿರನು ಸಂತೋಷದಿಂದ ಒಪ್ಪಿದನು.

೪

ರಾಜನು "ಪ್ರಶ್ನೆ ಕೇಳುತ್ತೇನೆ, ಭನ್ತೇ ನಾಗಸೇನ" ಎಂದನು.

"ಕೇಳು, ಮಹಾರಾಜ."

"ಕೇಳಿಯಾಯಿತು, ಭನ್ತೇ."

"ಉತ್ತರ ಹೇಳಿಯಾಯಿತು, ಮಹಾರಾಜ."

"ನೀನು ಏನು ಉತ್ತರ ಹೇಳಿದೆ, ಭನ್ತೇ?"

"ನೀನು ಏನು ಪ್ರಶ್ನೆ ಕೇಳಿದೆ, ಮಹಾರಾಜ?"

* * *

ಆಗ ಮಿಲಿಂದರಾಜನು "ಈ ಭಿಕ್ಷು ಪಂಡಿತನು. ನನ್ನೊಡನೆ ಮಾತನಾಡಲು ಸಮರ್ಥನು. ನಾನು ಕೇಳತಕ್ಕ ಸ್ಥಾನಗಳು ಬಹಳ ಉಂಟು. ಅವುಗಳನ್ನೆಲ್ಲ ಕೇಳುವುದರೊಳಗೆ ಸೂರ್ಯನು ಮುಳುಗುವನು. ಆದರಿಂದ ನಾಳೆ ಅಂತಃಪುರದಲ್ಲಿ ಮಾತುಕತೆಯಾಡೋಣ" ಎಂದು ಕೊಂಡು, ದೇವಮಂತ್ರಿಕನನ್ನು ಕುರಿತು "ದೇವಮಂತ್ರಿಕ, ನಾಳೆ ಅಂತಃ ಪುರದಲ್ಲಿ ರಾಜನೊಡನೆ ಮಾತುಕತೆಯಾಗುವುದೆಂದು ಭದಂತನಿಗೆ ತಿಳಿಸು" ಎಂದನು.

ಹೀಗೆ ಹೇಳಿ, ಮಿಲಿಂದರಾಜನು ಆಸನದಿಂದ ಎದ್ದು, ಸ್ಥವಿರ ನಾಗಸೇನನನ್ನು ಬೀಳ್ಕೊಂಡು, ಕುದುರೆಯನ್ನು ಏರಿ, "ನಾಗಸೇನ! ನಾಗಸೇನ!" ಎಂದು ಪುನಃ ಪುನಃ ಉಚ್ಚರಿಸುತ್ತ ಹೊರಟನು.

ಆಗ ದೇವಮಂತ್ರಿಕನು "ಭನ್ತೇ, ನಾಳೆ ಅಂತಃಪುರದಲ್ಲಿ ಮಾತುಕತೆ ಯಾಗುವುದೆಂದು ಮಿಲಿಂದರಾಜನು ಹೇಳಿದನು" ಎಂದು ಆಯುಷ್ಮಂತ ನಾದ ನಾಗಸೇನನಿಗೆ ತಿಳಿಸಿದನು.

ಸ್ಥವಿರನು "ಒಳ್ಳೆಯದು" ಎಂದು ಸಂತೋಷದಿಂದ ಒಪ್ಪಿದನು.

ಆಗ, ಆ ರಾತ್ರಿ ಮುಗಿಯಲು ದೇವಮಂತ್ರಿಕ, ಅನಂತಕಾಯ, ಮಂಕುರ, ಸರ್ವದತ್ತರು ಮಿಲಿಂದರಾಜನ ಬಳಿಸಾರಿ, "ಭದಂತ ನಾಗ ಸೇನನು ಇಂದು ಬರಲಿ, ಮಹಾರಾಜ?" ಎಂದರು.

"ಹೌದು, ಬರಲಿ."

"ಎಷ್ಟು ಮಂದಿ ಭಿಕ್ಷುಗಳೊಡನೆ ಬರಲಿ?"

"ಬಯಸಿದಷ್ಟು ಭಿಕ್ಷುಗಳೊಡನೆ ಬರಲಿ."

"ಹತ್ತು ಭಿಕ್ಷುಗಳೊಡನೆ ಬರಲಿ, ಮಹಾರಾಜ" ಎಂದು ಸರ್ವ ದತ್ತನು ಹೇಳಿದನು.

ಮಿಲಿಂದರಾಜನು "ಬಯಸಿದಷ್ಟು ಭಿಕ್ಷುಗಳೊಡನೆ ಬರಲಿ" ಎಂದು ಎರಡನೆಯ ಸಲ ಹೇಳಿದನು.

"ಹತ್ತು ಭಿಕ್ಷುಗಳೊಡನೆ ಬರಲಿ, ಮಹಾರಾಜ" ಎಂದು ಸರ್ವದತ್ತನು ಎರಡನೆಯ ಸಲ ಹೇಳಿದನು.

ಮಿಲಿಂದರಾಜನು "ಬಯಸಿದಷ್ಟು ಭಿಕ್ಷುಗಳೊಡನೆ ಬರಲಿ" ಎಂದು ಮೂರನೆಯ ಸಲ ಹೇಳಿದನು.

"ಹತ್ತು ಭಿಕ್ಷುಗಳೊಡನೆ ಬರಲಿ, ಮಹಾರಾಜ" ಎಂದು ಸರ್ವದತ್ತನು ಮೂರನೆಯ ಸಲ ಹೇಳಿದನು.

"ಈ ಎಲ್ಲಾ ಸತ್ಕಾರಗಳನ್ನೂ ಸಿದ್ಧಮಾಡಿಯಾಗಿದೆ. 'ಬಯಸಿದಷ್ಟು ಭಿಕ್ಷುಗಳೊಡನೆ ಬರಲಿ' ಎಂದು ನಾನು ಹೇಳಿದರೆ, ಈ ಸರ್ವದತ್ತನು ಬೇರೇನೋ ಹೇಳುತ್ತಾನೆ. ಏನು, ಭಿಕ್ಷುಗಳಿಗೆ ಭೋಜನ ಕೊಡಲು ನನಗೆ ಶಕ್ತಿಯಿಲ್ಲವೆ?"

ಹೀಗೆನ್ನಲು, ಸರ್ವದತ್ತನು ಮಂಕಾದನು.

ಆಗ, ದೇವಮಂತ್ರಿಕ, ಅನಂತಕಾಯ, ಮಂಕುರರು ಆಯುಷ್ಮಂತನಾದ ನಾಗಸೇನನಿರುವ ಬಳಿಸಾರಿ, "ಭನ್ತೇ, ಬಯಸಿದಷ್ಟು ಭಿಕ್ಷುಗಳೊಡನೆ ಬರಬಹುದೆಂದು ರಾಜಾ ಮಿಲಿಂದನು ಹೇಳಿದನು" ಎಂದರು.

ಆಗ, ಆಯುಷ್ಮಂತನಾದ ನಾಗಸೇನನು ಪೂರ್ವಾಹ್ನ ಸಮಯದಲ್ಲಿ ಉಡುಪು ಹಾಕಿಕೊಂಡು, ಪಾತ್ರೆ ಚೀವರಗಳನ್ನು ಕೊಂಡು, ಎಂಬತ್ತು ಸಾವಿರ ಭಿಕ್ಷುಗಳೊಡನೆ ಸಾಗಲವನ್ನು ಹೊಕ್ಕನು.

ಆಗ ಅನಂತಕಾಯನು, ಆಯುಷ್ಮಂತನಾದ ನಾಗಸೇನನ ಆಶ್ರಯದಲ್ಲಿ ಹೋಗುತ್ತ, "ಭನ್ತೇ ನಾಗಸೇನ, 'ನಾಗಸೇನ' ಎಂದರೆ, ಇಲ್ಲಿ 'ನಾಗಸೇನ' [ಎಂಬುದು] ಯಾವುದು?" ಎಂದನು.

ಸ್ಥವಿರನು "ಇಲ್ಲಿ 'ನಾಗಸೇನ' [ಎಂಬುದು] ಏನೆಂದು ತಿಳಿಯುವೆ?" ಎಂದನು.

"ಭನ್ತೇ, ಒಳಗೆ ಪ್ರವೇಶಿಸುವ ಮತ್ತು ಹೊರಗೆ ನಿಷ್ಕ್ರಮಿಸುವ ಅಭ್ಯಂತರ ವಾಯುವಾದ ಜೀವವು 'ನಾಗಸೇನ' ಎಂದು ತಿಳಿಯುವೆನು."

"ಆ ನಿಷ್ಕ್ರಮಿಸಿದ ವಾಯು [ಪುನಃ] ಪ್ರವೇಶಿಸದಿದ್ದರೆ, ಆ ಪ್ರವೇಶಿಸಿದ ವಾಯು [ಪುನಃ] ನಿಷ್ಕ್ರಮಿಸದಿದ್ದರೆ, ಆ ಪುರುಷನು ಜೀವಿಸುವನೆ?"

"ಇಲ್ಲ, ಭನ್ತೇ."

"ಹಾಗಾದರೆ, ಶಂಖ ಊದುವವರು ಶಂಖವನ್ನು ಊದುವರಲ್ಲ; ಹೊರಗೆ ಬಂದ ಅವರ ಉಸಿರು [ಪುನಃ ಒಳಗೆ] ಪ್ರವೇಶಿಸುವುದೆ?"

"ಇಲ್ಲ, ಭನ್ತೇ."

"ಕೊಂಬು ಊದುವವರ ಹೊರಗೆ ಬಂದ ಉಸಿರು [ಪುನಃ ಒಳಗೆ] ಪ್ರವೇಶಿಸುವುದೆ?"

"ಇಲ್ಲ, ಭನ್ತೇ."

"ಹಾಗಾದರೆ ಅವರೇಕೆ ಸಾಯುವುದಿಲ್ಲ?"

"ವಾದಿಯಾದ ನಿನ್ನೊಡನೆ ಮಾತನಾಡಲು ನಾನು ಸಮರ್ಥನಲ್ಲ. ಒಳ್ಳೆಯದು, ಭನ್ತೇ. ಅರ್ಥವನ್ನು ತಿಳಿಸಿರಿ."

"ಇದು 'ಜೀವ'ವಲ್ಲ; ಈ ಉಚ್ಛ್ವಾಸ ನಿಶ್ವಾಸಗಳು ಕಾಯಸಂಸ್ಕಾರಗಳು ಮಾತ್ರ" ಎಂದು ಸ್ಥವಿರನು ಅಭಿಧರ್ಮವನ್ನು ಕುರಿತು ಮಾತನಾಡಿದನು. ಆಗ, ಅನಂತಕಾಯನು ತಾನು ಉಪಾಸಕನಾದೆನೆಂದು ಸ್ಥವಿರನಿಗೆ ತಿಳಿಸಿದನು.

* * *

೫

ಆಗ, ಆಯುಷ್ಮಂತನಾದ ನಾಗಸೇನನು ಮಿಲಿಂದರಾಜನ ಮನೆಯ ಬಳಿಸಾರಿ, ಸಿದ್ಧಗೊಳಿಸಿದ್ದ ಆಸನದಲ್ಲಿ ಕುಳಿತನು. ಮಿಲಿಂದರಾಜನು ಆಯುಷ್ಮಂತನಾದ ನಾಗಸೇನನಿಗೂ ಅವನ ಪರಿಷೆಗೂ ಸಿಹಿಯಾದ ಖಾದನೀಯ ಭೋಜನೀಯಗಳನ್ನು ಸ್ವಹಸ್ತದಿಂದ ಸಾಕೆನ್ನುವವರೆಗೆ ನೀಡಿ, ಅವರನ್ನು ಚೆನ್ನಾಗಿ ತೃಪ್ತಿಪಡಿಸಿದನು. ಒಬ್ಬೊಬ್ಬ ಭಿಕ್ಷುವಿಗೂ ಎರಡೆರಡು ಬಟ್ಟೆ ಕೊಟ್ಟು, ಆಯುಷ್ಮಂತನಾದ ನಾಗಸೇನನಿಗೆ ಮೂರು ಬಟ್ಟೆಕೊಟ್ಟು, ಮಿಲಿಂದರಾಜನು "ಭನ್ತೇ ನಾಗಸೇನ, ನೀನು ಹತ್ತು ಭಿಕ್ಷುಗಳೊಡನೆ ಇಲ್ಲಿ ಕುಳ್ಳಿರು. ಮಿಕ್ಕವರು ಹೋಗಲಿ" ಎಂದನು.

ಆಗ, ಆಯುಷ್ಮಂತನಾದ ನಾಗಸೇನನು ಊಟಮಾಡಿ ಪಾತ್ರೆಯಿಂದ ಕೈ ತೆಗೆದುದನ್ನು ತಿಳಿದು, ಮಿಲಿಂದನು ಬೇರೆ ನೀಚಾಸನವನ್ನು ಹಿಡಿದು ಒಂದು ಕಡೆ ಕುಳಿತನು. ಆಗ ಮಿಲಿಂದನು "ಭನ್ತೇ ನಾಗಸೇನ, ಏನು ಮಾತನಾಡೋಣ?" ಎಂದನು.

"ಮಹಾರಾಜ, ನಾವು ಅರ್ಥವನ್ನು ಹುಡುಕುವವರು. ಅರ್ಥವನ್ನು ಕುರಿತು ಮಾತನಾಡೋಣ."

ರಾಜನು "ಭನ್ತೇ ನಾಗಸೇನ, ನೀವು ಯಾವ ಅರ್ಥಕ್ಕಾಗಿ ಪರಿವ್ರಜಿಸುವುದು? ನಿಮ್ಮ ಪರಮಾರ್ಥವೇನು?" ಎಂದನು.

ಸ್ಥವಿರನು "ಮಹಾರಾಜ, ಈ ದುಃಖವು ನಿರೋಧವಾಗಲೆಂದು, ಬೇರೆ ದುಃಖವು ಎದ್ದೇಳದಿರಲೆಂದು, ಈ ಅರ್ಥದಿಂದ ನಾವು ಪರಿವ್ರಜಿಸುವುದು. ಅನುಪಾದಾನವಾದ ಪರಿನಿರ್ವಾಣವು ನಮ್ಮ ಪರಮಾರ್ಥ."

"ಏನು, ಭನ್ತೇ ನಾಗಸೇನ, ಎಲ್ಲರೂ ಈ ಅರ್ಥಕ್ಕಾಗಿಯೆ ಪರಿವ್ರಜಿಸುವರೆ?"

"ಇಲ್ಲ, ಮಹಾರಾಜ; ಕೆಲವರು ಈ ಅರ್ಥಕ್ಕಾಗಿ ಪರಿವ್ರಜಿಸುವರು. ದೊರೆಯ ಭಯದಿಂದ ಕೆಲವರು ಪರಿವ್ರಜಿಸುವರು. ಕೆಲವರು ಕಳ್ಳರಿಗೆ ಹೆದರಿ ಪರಿವ್ರಾಜಕರಾಗುವರು. ಸಾಲ ಹೆಚ್ಚಾಗಿ ಕೆಲವರು ಪರಿವ್ರಜಿಸುವರು. ಜೀವನವನ್ನು ಪಡೆಯುವುದಕ್ಕಾಗಿ ಕೆಲವರು ಪರಿವ್ರಜಿಸುವರು. ಆದರೆ ಸರಿಯಾಗಿ ಪರಿವ್ರಜಿಸುವವರು ಈ ಅರ್ಥಕ್ಕಾಗಿ ಪರಿವ್ರಜಿಸುವರು."

"ನೀನು ಪರಿವ್ರಜಿಸಿದುದು ಈ ಅರ್ಥಕ್ಕಾಗಿಯೆ, ಭನ್ತೇ?"

"ನಾನು ಪರಿವ್ರಾಜಕನಾದಾಗ ಬಲು ಚಿಕ್ಕವನಾಗಿದ್ದೆ, ಮಹಾರಾಜ. ನಾನು ಈ ಅರ್ಥಮಾತ್ರಕ್ಕಾಗಿ ಪರಿವ್ರಜಿಸುವೆನೆಂದು ತಿಳಿದಿರಲಿಲ್ಲ. ಆದರೂ 'ಪಂಡಿತರಾದ ಈ ಶ್ರಮಣರು, ಈ ಶಾಕ್ಯಪುತ್ರರು ನನಗೆ ಕಲಿಸಬಲ್ಲರು' ಎಂದು [ಆಗ] ಎನ್ನಿಸಿತು. ನಾನು ಅವರಿಂದ ಕಲಿತು, 'ಇದೇ ಅರ್ಥಕ್ಕಾಗಿಯೆ ನಾನು ಪರಿವ್ರಾಜಕನಾದುದು' ಎಂದು [ಈಗ] ತಿಳಿದಿದ್ದೇನೆ, ಕಂಡಿದ್ದೇನೆ."

"ನೀನು ಕುಶಲಿ, ಭನ್ತೇ ನಾಗಸೇನ."

೬

ರಾಜನು "ಭನ್ತೇ ನಾಗಸೇನ, ಸತ್ತ ಮೇಲೆ ಪ್ರತಿಸಂಧಿಸದವರು ಯಾರಾದರೂ ಉಂಟೆ?" ಎಂದನು.

ಸ್ಥವಿರನು "ಕೆಲವರು ಪ್ರತಿಸಂಧಿಸುವರು. ಕೆಲವರು ಪ್ರತಿಸಂಧಿಸುವುದಿಲ್ಲ" ಎಂದನು.

"ಪ್ರತಿಸಂಧಿಸುವವರು ಯಾರು? ಪ್ರತಿಸಂಧಿಸದವರು ಯಾರು?"

"ಕ್ಲೇಶದಿಂದ ಕೂಡಿದವರು ಪ್ರತಿಸಂಧಿಸುವರು. ಕ್ಲೇಶದಿಂದ ಕೂಡದವರು ಪ್ರತಿಸಂಧಿಸುವುದಿಲ್ಲ."

"ನೀನು ಪ್ರತಿಸಂಧಿಸುವೆಯ, ಭನ್ತೇ?"

"[ನಾನು ಸಾಯುವಾಗ] ನನಗೆ ಉಪಾದಾನವಿದ್ದರೆ, ಮಹಾರಾಜ, ಪ್ರತಿಸಂಧಿಸುವೆನು; ಉಪಾದಾನವಿಲ್ಲದಿದ್ದರೆ ಪ್ರತಿಸಂಧಿಸುವುದಿಲ್ಲ."

"ನೀನು ಜಾಣ, ಭನ್ತೇ ನಾಗಸೇನ."

೭

ರಾಜನು "ಭನ್ತೇ ನಾಗಸೇನ, ಪ್ರತಿಸಂಧಿ ಇಲ್ಲದವನು ಪ್ರತಿಸಂಧಿಯನ್ನು ನೀಗುವುದು ಮನಸಿಕಾರದಿಂದಲೆ?" ಎಂದನು.

"ಮನಸಿಕಾರದಿಂದ, ಪ್ರಜ್ಞೆಯಿಂದ, ಮತ್ತು ಇತರ ಕುಶಲವಾದ ಧರ್ಮಗಳಿಂದ, ಮಹಾರಾಜ."

"ಮನಸಿಕಾರವೇ ಪ್ರಜ್ಞೆ; ಅಲ್ಲವೆ, ಭನ್ತೇ?"

"ಅಲ್ಲ, ಮಹಾರಾಜ. ಮನಸಿಕಾರ ಬೇರೆ, ಪ್ರಜ್ಞೆ ಬೇರೆ. ಮಹಾರಾಜ, ಕುರಿ, ಆಡು, ಹಸು, ಎಮ್ಮೆ, ಒಂಟೆ, ಕತ್ತೆಗಳಿಗೆ ಮನಸಿಕಾರವಿದೆ; ಆದರೆ ಅವುಗಳಿಗೆ ಪ್ರಜ್ಞೆಯಿಲ್ಲ."

"ನೀನು ಚತುರ, ಭನ್ತೇ ನಾಗಸೇನ."

೮

ರಾಜನು "ಭನ್ತೇ, ಮನಸಿಕಾರದ ಲಕ್ಷಣವೇನು? ಪ್ರಜ್ಞೆಯ ಲಕ್ಷಣವೇನು?" ಎಂದನು.

"ಮಹಾರಾಜ, ಮನಸಿಕಾರದ ಲಕ್ಷಣ ಊಹನ. ಛೇದನವು ಪ್ರಜ್ಞೆಯ ಲಕ್ಷಣ."

"ಊಹನವು ಹೇಗೆ ಮನಸಿಕಾರದ ಲಕ್ಷಣ? ಛೇದನವು ಪ್ರಜ್ಞೆಯ ಲಕ್ಷಣ ಹೇಗೆ? ಉಪಮಾನ ಕೊಡು."

"ಜವೆ ಕತ್ತರಿಸುವವರು ನಿನಗೆ ನೆನಪಿದೆಯೆ, ಮಹಾರಾಜ?"

"ಹೌದು ನೆನಪಿದೆ, ಭನ್ತೇ."

"ಜವೆ ಕೊಯ್ಯುವವರು ಜವೆ ಹೇಗೆ ಕೊಯ್ಯುವರು, ಮಹಾರಾಜ?"

"ಎಡಗೈಯಿಂದ ಜವೆಯ ಕಟ್ಟನ್ನು ಹಿಡಿದು, ಬಲಗೈಯಿಂದ ಕುಡುಗೋಲು ಹಿಡಿದು, ಕುಡುಗೋಲಿನಿಂದ ಕತ್ತರಿಸುವರು."

"ಅದರಂತೆಯೇ, ಮಹಾರಾಜ, ಯೋಗಾವಚರನು ಮನಸಿಕಾರದಿಂದ ಮನಸ್ಸನ್ನು ಹಿಡಿದು, ಪ್ರಜ್ಞೆಯಿಂದ ಕ್ಲೇಶವನ್ನು ಕತ್ತರಿಸುತ್ತಾನೆ. ಹೀಗೆ, ಮಹಾರಾಜ, ಊಹನವು ಮನಸಿಕಾರದ ಲಕ್ಷಣ; ಛೇದನವು ಪ್ರಜ್ಞೆಯ ಲಕ್ಷಣ."

"ನೀನು ಕುಶಲಿ, ಭನ್ತೇ ನಾಗಸೇನ."

೯

ರಾಜನು "ಭನ್ತೇ ನಾಗಸೇನ, 'ಇತರ ಕುಶಲವಾದ ಧರ್ಮಗಳಿಂದ' ಎಂದು ನೀನು ಹೇಳಿದೆ. ಆ ಕುಶಲಧರ್ಮಗಳು ಯಾವುವು?" ಎಂದನು.

"ಶೀಲ, ಶ್ರದ್ಧೆ, ವೀರ್ಯ, ಸ್ಮೃತಿ, ಸಮಾಧಿ—ಇವು ಆ ಕುಶಲಧರ್ಮಗಳು, ಮಹಾರಾಜ."

"ಶೀಲದ ಲಕ್ಷಣವೇನು, ಭನ್ತೇ?"

"ಎಲ್ಲಾ ಕುಶಲಧರ್ಮಗಳಿಗೂ ಆಧಾರವಾದುದು ಶೀಲ. ಈ ಪ್ರತಿಷ್ಠಾನವು ಶೀಲದ ಲಕ್ಷಣ. ಇಂದ್ರಿಯಬಲ, ಬೋಧ್ಯಂಗ, ಮಾರ್ಗ, ಸ್ಮೃತಿಪ್ರಸ್ಥಾನ, ಸಮ್ಯಕ್‌ಪ್ರಧಾನ, ಋದ್ಧಿಪಾದ, ಧ್ಯಾನ, ವಿಮೋಕ್ಷ, ಸಮಾಧಿ, ಸಮಾಪತ್ತಿ—ಇವುಗಳಿಗೆ ಶೀಲವು ಆಧಾರ. ಶೀಲದ ಆಧಾರದಿಂದ ನಿಂತವನಿಗೆ ಈ ಎಲ್ಲಾ ಕುಶಲಧರ್ಮಗಳೂ ಕಡಿಮೆಯಾಗುವುದಿಲ್ಲ."

"ಉಪಮಾನ ಕೊಡು."

"ಮಹಾರಾಜ, ಮರಗಳೂ ಮೃಗಗಳೂ ವೃದ್ಧಿಪಡೆದು, ಬೆಳುವಳಿಗೆ ಹೊಂದಿ, ವಿಪುಲವಾಗುವಾಗ ಅವೆಲ್ಲವೂ ನೆಲವನ್ನು ಆಶ್ರಯಿಸಿ, ನೆಲದ ಆಧಾರದಿಂದ ವೃದ್ಧಿಪಡೆದು, ಬೆಳುವಳಿಗೆ ಹೊಂದಿ, ವಿಪುಲವಾಗುವುವು. ಅದರಂತೆಯೇ, ಮಹಾರಾಜ, ಯೋಗಾವಚರನು ಶೀಲವನ್ನು ಆಶ್ರಯಿಸಿ, ಶೀಲದ ಆಧಾರದಿಂದ ಶ್ರದ್ಧೇಂದ್ರಿಯ, ವೀರ್ಯೇಂದ್ರಿಯ, ಸ್ಮೃತೀಂದ್ರಿಯ, ಸಮಾಧೀಂದ್ರಿಯ, ಪ್ರಜ್ಞೇಂದ್ರಿಯ ಎಂಬ ಪಂಚೇಂದ್ರಿಯಗಳನ್ನು ಭಾವಿಸುವನು."

“ಇನ್ನೊಂದು ಉಪಮಾನ ಕೊಡು.”

“[ದೇಹ]ಬಲದಿಂದ ಮಾಡತಕ್ಕ ಕಾರ್ಯಗಳನ್ನು ಮಾಡುವವನು ನೆಲದ ಆಶ್ರಯದಿಂದ, ನೆಲದ ಆಧಾರದಿಂದ ಅದನ್ನು ಮಾಡುವನು. ಅದರಂತೆಯೇ, ಯೋಗಾವಚರನು ಶೀಲದ ಆಶ್ರಯದಿಂದ, ಶೀಲದ ಆಧಾರದಿಂದ ಮೇಲೆ ಹೇಳಿದ ಪಂಚೇಂದ್ರಿಯಗಳನ್ನು ಭಾವಿಸುವನು.”

“ಇನ್ನೊಂದು ಉಪಮಾನ ಕೊಡು.”

“ಮಹಾರಾಜ, ನಗರವನ್ನು ಕಟ್ಟಲು ಬಯಸುವ ನಗರವರ್ಧಕಿಯು ಮೊದಲು ನಗರದ ಸ್ಥಾನವನ್ನು ಶೋಧಿಸುವನು; ಕಲ್ಲುಮುಳ್ಳುಗಳನ್ನು ತೆಗೆಸುವನು; ಸಮಗೊಳಿಸುವನು; ಅನಂತರ ಬೀದಿ, ಚೌಕ, ನಾಕುಬೀದಿ ಕೂಡುವ ಸ್ಥಳ—ಮುಂತಾದ ಭಾಗಗಳಾಗಿ ವಿಂಗಡಿಸಿ ನಗರವನ್ನು ಕಟ್ಟು ವನು. ಅದರಂತೆಯೇ, ಯೋಗಾವಚರನು ಶೀಲದ ಆಶ್ರಯದಿಂದ, ಶೀಲದ ಆಧಾರದಿಂದ ಮೇಲೆ ಹೇಳಿದ ಪಂಚೇಂದ್ರಿಯಗಳನ್ನು ಭಾವಿಸುವನು.”

“ಇನ್ನೊಂದು ಉಪಮಾನ ಕೊಡು.”

“ಮಹಾರಾಜ, ತನ್ನ ವಿದ್ಯೆಯನ್ನು ತೋರಿಸಲು ಬಯಸುವ ಲಂಘಕನು ನೆಲವನ್ನು ಅಗೆಯಿಸಿ, ಕಲ್ಲು ಬಕ್ಕರೆಗಳನ್ನು ತೆಗೆಯಿಸಿ, ನೆಲವನ್ನು ಸಮಗೊಳಿಸಿ, ಮೃದುವಾದ ನೆಲದಲ್ಲಿ ತನ್ನ ವಿದ್ಯೆಯನ್ನು ತೋರಿಸುವನು. ಅದರಂತೆಯೇ, ಮಹಾರಾಜ, ಯೋಗಾವಚರನು ಶೀಲದ ಆಶ್ರಯದಿಂದ, ಶೀಲದ ಆಧಾರದಿಂದ ಮೇಲೆ ಹೇಳಿದ ಪಂಚೇಂದ್ರಿಯಗಳನ್ನು ಭಾವಿಸುವನು. ಮಹಾರಾಜ,

‘ಪ್ರಜ್ಞೆಯುಳ್ಳ ಮನುಷ್ಯನು ಶೀಲದ ಆಧಾರದಿಂದ
ಚಿತ್ತವನ್ನೂ ಪ್ರಜ್ಞೆಯನ್ನೂ ಭಾವಿಸಬಲ್ಲನು.
[ಹೀಗೆ] ಆತಾಪಿಯೂ ನಿಪಕನೂ ಆದ ಭಿಕ್ಷುವು
[ಗೋಜಿದ ಈ ಸಂಸಾರದ] ಗೋಜನ್ನು ಬಿಡಿಸುವನು.

‘ಪ್ರಾಣಿಗಳಿಗೆ ಈ ಧರಣಿ ಹೇಗೆ ಆಧಾರವೋ
ಹಾಗೆ, ಕುಶಲಗಳ ಅಭಿವೃದ್ಧಿಗೆ ಇದೇ ಮೂಲ;
ಜಿನನ ಸರ್ವ ಅನುಶಾಸನಕ್ಕೂ ಇದು ಮುಖ;
ಶೀಲಸ್ಕಂಧವು ಶ್ರೇಷ್ಠವಾದ ಪ್ರಾತಿಮೋಕ್ಷ್ಯವು’

ಎಂದು ಭಗವಂತನು ಹೇಳಿದ್ದಾನೆ.”

“ನೀನು ಜಾಣ, ಭನ್ತೇ ನಾಗಸೇನ.”

೧೦

ರಾಜನು "ಭನ್ತೇ ನಾಗಸೇನ, ಶ್ರದ್ಧೆಯ ಲಕ್ಷಣವೇನು?" ಎಂದನು.

"ಮಹಾರಾಜ, ಶ್ರದ್ಧೆಯ ಲಕ್ಷಣವು ಸಂಪ್ರಸಾದನ ಮತ್ತು ಸಂಪ್ರಸ್ಕಂದನ."

"ಸಂಪ್ರಸಾದನವು ಶ್ರದ್ಧೆಯ ಲಕ್ಷಣ ಹೇಗೆ, ಭನ್ತೇ?"

"ಮಹಾರಾಜ, [ಚಿತ್ತದಲ್ಲಿ] ಶ್ರದ್ಧೆ ಏಳುವುದರಿಂದ ನಿವಾರಣಗಳು ಸಿಡಿಯುವುವು. ನಿವಾರಣಗಳು ಹೋದ ಚಿತ್ತವು ಸ್ವಚ್ಛವಾಗಿ, ವಿಶೇಷ ಪ್ರಸನ್ನವಾಗಿ, ಅಚಲವಾಗುವುದು. ಹೀಗೆ, ಮಹಾರಾಜ, ಸಂಪ್ರಸಾದನವು ಶ್ರದ್ಧೆಯ ಲಕ್ಷಣ."

"ಉಪಮಾನ ಕೊಡು."

"ಮಹಾರಾಜ, ಚಕ್ರವರ್ತಿಯಾದ ರಾಜನು ಚತುರಂಗ ಸೇನೆಯೊಡನೆ ಮಹಾಮಾರ್ಗದಲ್ಲಿ ನಡೆಯುತ್ತ ಸಣ್ಣ ನೀರನ್ನು ದಾಟುವನು. [ದಾಟದ] ಆನೆ, ಕುದುರೆ, ರಥ, ಪದಾತಿಗಳಿಂದ ಆ ನೀರು ಕಲಕುವುದು, ಕದಡುವುದು, ಬಗ್ಗಡವಾಗುವುದು, ಕೆಸರಾಗುವುದು. ಅದನ್ನು ದಾಟದ ಚಕ್ರವರ್ತಿಯು 'ಅಯ್ಯ, ಕುಡಿಯುವ ನೀರು ತನ್ನಿ. ಕುಡಿಯಬೇಕು' ಎಂದು ತನ್ನ ಜನರಿಗೆ ಆಜ್ಞಾಪಿಸುವನು. ಆ ರಾಜನ ಬಳಿಯಲ್ಲಿ ಒಂದು ಉದಕಪ್ರಸಾದಕ ಮಣಿ ಇದೆ. ಆ ಜನರು 'ಹಾಗೆಯೆ ಆಗಲಿ, ದೇವ' ಎಂದು ಚಕ್ರವರ್ತಿಯ ಮಾತಿಗೆ ಒಪ್ಪಿ, ಆ ಉದಕಪ್ರಸಾದಕ ಮಣಿಯನ್ನು [ಆ ಕದಡಿದ] ನೀರಿನಲ್ಲಿ ಎಸೆಯುವರು. ನೀರಿನಲ್ಲಿ ಅದನ್ನು ಎಸೆದ ಮಾತ್ರದಿಂದ ಅಲ್ಲಿಯ ಶಂಖಗಳೂ, ನೀರುಗಿಡಗಳ ಎಲೆಚೂರುಗಳೂ ಹೋಗುವುವು; ಕೆಸರು ಕೆಳಗೆ ಕುಳಿತು, ನೀರು ಸ್ವಚ್ಛವಾಗಿ, ಪ್ರಸನ್ನವಾಗಿ, ತಿಳಿಯಾಗುವುದು. ಆಗ, 'ದೇವರು ಪಾನೀಯವನ್ನು ಕುಡಿಯಲಿ' ಎಂದು [ಆ ಜನರು] ಚಕ್ರವರ್ತಿಗೆ ಕುಡಿಯುವ ನೀರನ್ನು ಒಯ್ಯುವರು. ಮಹಾರಾಜ, ಚಿತ್ತವನ್ನು ನೀರಿನಂತೆ ಕಾಣಬೇಕು; ಯೋಗಾವಚರನನ್ನು ಚಕ್ರವರ್ತಿಯ ಜನರಂತೆ ಕಾಣಬೇಕು; ಕ್ಲೇಶಗಳನ್ನು ಶಂಖ, ನೀರುಗಿಡಗಳ ಎಲೆಚೂರು, ಕೆಸರುಗಳಂತೆ ಕಾಣಬೇಕು; ಶ್ರದ್ಧೆಯನ್ನು ಉದಕಪ್ರಸಾದಕ ಮಣಿಯಂತೆ ಕಾಣಬೇಕು. ಉದಕಪ್ರಸಾದಕ ಮಣಿಯನ್ನು ನೀರಿನಲ್ಲಿ ಎಸೆದರೆ ಹೇಗೆ ಆ ನೀರು ಕೊಳೆಯಿಲ್ಲದೆ, ಕೆಸರಿಲ್ಲದೆ,

ಸ್ವಚ್ಛವಾಗಿ ತಿಳಿಯಾಗುವುದೋ — ಹಾಗೆಯೇ, ಮಹಾರಾಜ, ಶ್ರದ್ಧೆಯಿಂದ ನಿವಾರಣಗಳು ನಾಶವಾಗಿ ಚಿತ್ತವು ಸ್ವಚ್ಛವಾಗುವುದು, ಪ್ರಸನ್ನವಾಗುವುದು, ಅಚಲವಾಗುವುದು. ಹೀಗೆ, ಮಹಾರಾಜ, ಸಂಪ್ರಸಾದನವು ಶ್ರದ್ಧೆಯ ಲಕ್ಷಣ."

"ಸಂಪ್ರಸ್ಕಂದನವು ಶ್ರದ್ಧೆಯ ಲಕ್ಷಣ ಹೇಗೆ, ಭನ್ತೇ?"

"ಮಹಾರಾಜ, ಯೋಗಾವಚರನು, ಬೇರೆಯ ಚಿತ್ತವು ವಿಮುಕ್ತವಾದುದನ್ನು ಕಂಡು ಸ್ರೋತಾಪತ್ತಿಫಲವನ್ನೋ ಸಕೃದಾಗಾಮಿಫಲವನ್ನೋ ಅನಾಗಾಮಿಫಲವನ್ನೋ ಅರ್ಹತ್ತ್ವವನ್ನೋ ಸಂಪ್ರಸ್ಕಂದಿಸುವನು; ತಾನು [ಇನ್ನೂ] ಪಡೆಯದುದನ್ನು ಪಡೆಯುವುದಕ್ಕಾಗಿ, ತನಗೆ [ಇನ್ನೂ] ವಶವಾಗದುದನ್ನು ವಶಪಡಿಸುವುದಕ್ಕಾಗಿ, ತನಗೆ [ಇನ್ನೂ] ಸಾಕ್ಷಾತ್ಕಾರವಾಗದುದು ಸಾಕ್ಷಾತ್ಕಾರವಾಗುವುದಕ್ಕಾಗಿ [ಯೋಗಾವಚರನು] ಯೋಗ ಮಾಡುವನು. ಹೀಗೆ, ಮಹಾರಾಜ, ಸಂಪ್ರಸ್ಕಂದನವು ಶ್ರದ್ಧೆಯ ಲಕ್ಷಣ."

"ಉಪಮಾನ ಕೊಡು."

"ಮಹಾರಾಜ, ಪರ್ವತದ ಮೇಲೆ ಮಹಾಮೇಘವು ಬಹುವಾಗಿ ಮಳೆ ಸುರಿಸುವುದು. ಆ ನೀರು ಹಳ್ಳವಿರುವ ಕಡೆ ಹರಿದು, ಆ ಪರ್ವತದ ಹಳ್ಳಕೊಳ್ಳಗಳನ್ನೂ ಕಂದರಗಳನ್ನೂ ತುಂಬಿ, [ಕೆಳಗಿನ] ನದಿಯನ್ನು ಪೂರ್ಣವಾಗಿ ತುಂಬುವುದು. ಆ ನದಿಯು ಎರಡು ದಡಗಳನ್ನೂ ಮೀರಿ ಹರಿಯುವುದು. ಆಗ ಜನರ ದೊಡ್ಡ ಗುಂಪು ಬಂದು ಆ ನದಿಯ ಅಗಲ ಆಳಗಳನ್ನು ತಿಳಿಯದೆ ಭೀತರಾಗಿ ಶಂಕಿಸುತ್ತ ತೀರದಲ್ಲಿ ನಿಲ್ಲುವರು. ಅಲ್ಲಿಗೆ ಬೇರೊಬ್ಬ ಪುರುಷನು ಬರುವನು. ಅವನಿಗೆ ತನ್ನ ಶಕ್ತಿ ಬಲಗಳು ಗೊತ್ತು. ಅವನು ತನ್ನ ಕಚ್ಚೆಯನ್ನು ಗಾಢವಾಗಿ ಬಿಗಿದು, ಹಾರಿ [ಆ ನದಿಯನ್ನು] ದಾಟುವನು. ಅವನು ದಾಟಿದುದನ್ನು ಕಂಡು ಆ ಜನರ ದೊಡ್ಡ ಗುಂಪೂ ದಾಟುವುದು. ಅದರಂತೆಯೇ, ಮಹಾರಾಜ, ಯೋಗಾವಚರನು ಬೇರೆಯ ಚಿತ್ತವು ವಿಮುಕ್ತವಾದುದನ್ನು ಕಂಡು ಸ್ರೋತಾಪತ್ತಿಫಲವನ್ನೋ ಸಕೃದಾಗಾಮಿಫಲವನ್ನೋ ಅನಾಗಾಮಿಫಲವನ್ನೋ ಅರ್ಹತ್ತ್ವವನ್ನೋ ಪ್ರಸ್ಕಂದಿಸುವನು. ಹೀಗೆ, ಮಹಾರಾಜ, ಸಂಪ್ರಸ್ಕಂದನವು ಶ್ರದ್ಧೆಯ ಲಕ್ಷಣ. ಮಹಾರಾಜ,

> ‘ಶ್ರದ್ಧೆಯಿಂದ ಹೊಳೆಯನ್ನೂ
> ಅಪ್ರಮಾದದಿಂದ ಸಮುದ್ರವನ್ನೂ ದಾಟುವನು;
> ವೀರ್ಯದಿಂದ ದುಃಖವನ್ನು ನಿಲ್ಲಿಸುವನು,
> ಪ್ರಜ್ಞೆಯಿಂದ ಪರಿಶುದ್ಧನಾಗುವನು’

ಎಂದು ಭಗವಂತನು ಶ್ರೇಷ್ಠವಾದ ಸಂಯುಕ್ತನಿಕಾಯದಲ್ಲಿ ಹೇಳಿದ್ದಾನೆ.”

“ನೀನು ಚತುರ, ಭನ್ತೇ ನಾಗಸೇನ.”

೧೧

ರಾಜನು “ಭನ್ತೇ ನಾಗಸೇನ, ವೀರ್ಯದ ಲಕ್ಷಣವೇನು?” ಎಂದನು.

“ವೀರ್ಯದ ಲಕ್ಷಣವು ಉಪಸ್ತಂಭನ, ಮಹಾರಾಜ. ವೀರ್ಯದ ಆಸರೆಯಿದ್ದರೆ ಕುಶಲಧರ್ಮಗಳು ಕಡಿಮೆಯಾಗುವುದಿಲ್ಲ.”

“ಉಪಮಾನ ಕೊಡು.”

“ಮಹಾರಾಜ, ಮನೆಯು ಬೀಳುತ್ತಿದ್ದರೆ ಪುರುಷನು ಬೇರೊಂದು ಮರದಿಂದ [ಅದಕ್ಕೆ] ಆಸರೆ ಕೊಡುವನು. ಹೀಗೆ ಉಪಸ್ತಂಭಿತವಾದ ಆ ಮನೆಯು ಹೇಗೆ ಬೀಳುವುದಿಲ್ಲವೋ ಹಾಗೆಯೇ ವೀರ್ಯದ ಆಸರೆ ಯಿದ್ದರೆ ಕುಶಲಧರ್ಮಗಳು ಕಡಿಮೆಯಾಗುವುದಿಲ್ಲ.”

“ಇನ್ನೊಂದು ಉಪಮಾನ ಕೊಡು.”

“ಮಹಾರಾಜ, ದೊಡ್ಡ ಸೈನ್ಯವು ಸಣ್ಣ ಸೈನ್ಯವನ್ನು ಸೋಲಿಸು ವುದು. ಆಗ [ಸೋತ ಸಣ್ಣ ಸೈನ್ಯದ] ರಾಜನು ಬೇರೆಬೇರೆಯವರನ್ನು ನೆನೆನೆನೆದು [ಅವರಿಗೆ] ಹೇಳಿಕಳುಹಿಸುವನು. ಅವರ ಜೊತೆಯಿಂದ ಸಣ್ಣ ಸೈನ್ಯವು ದೊಡ್ಡ ಸೈನ್ಯವನ್ನು ಸೋಲಿಸುವುದು. ಅದರಂತೆಯೇ, ಮಹಾರಾಜ, ಉಪಸ್ತಂಭನವು ವೀರ್ಯದ ಲಕ್ಷಣ; ವೀರ್ಯದ ಉಪಸ್ತಂಭನ ದಿಂದ ಕುಶಲಧರ್ಮಗಳು ಕಡಿಮೆಯಾಗುವುದಿಲ್ಲ. ಮಹಾರಾಜ,

> ‘ಭಿಕ್ಷುಗಳೆ, ವೀರ್ಯವಂತನಾದ ಆರ್ಯಶ್ರಾವಕನು
> ಅಕುಶಲವಾದುದನ್ನು ಬಿಟ್ಟು ಕುಶಲವಾದುದನ್ನು ಭಾವಿಸುವನು,
> ದೂಷ್ಯವಾದುದನ್ನು ಬಿಟ್ಟು ದೂಷ್ಯವಲ್ಲದುದನ್ನು ಭಾವಿಸುವನು;
> ಆತ್ಮವನ್ನು ಶುದ್ಧವಾಗಿ ಕಾಪಾಡುವನು’

ಎಂದು ಭಗವಂತನು ಹೇಳಿದ್ದಾನೆ.”

“ನೀನು ಕುಶಲಿ, ಭನ್ತೇ ನಾಗಸೇನ.”

೧೨

ರಾಜನು "ಭನ್ತೇ ನಾಗಸೇನ, ಸ್ಮೃತಿಯ ಲಕ್ಷಣವೇನು?" ಎಂದನು.

"ಮಹಾರಾಜ, ಸ್ಮೃತಿಯ ಲಕ್ಷಣವು ಅಪಿಲಾಪನ ಮತ್ತು ಉಪಗೃಹ್ಣನ."

"ಅಪಿಲಾಪನವು ಸ್ಮೃತಿಯ ಲಕ್ಷಣ ಹೇಗೆ, ಭನ್ತೇ?"

"ಮಹಾರಾಜ, [ಚಿತ್ತದಲ್ಲಿ] ಸ್ಮೃತಿಯು ಮೇಲೆದ್ದಹಾಗೆಲ್ಲ 'ಇವು ನಾಲ್ಕು ಸ್ಮೃತಿಪ್ರಸ್ಥಾನಗಳು, ಇವು ನಾಲ್ಕು ಸಮ್ಯಕ್ಪ್ರಧಾನಗಳು, ಇವು ನಾಲ್ಕು ಋದ್ಧಿಪಾದಗಳು, ಇವು ಪಂಚೇಂದ್ರಿಯಗಳು, ಇವು ಪಂಚ ಬಲಗಳು, ಇವು ಸಪ್ತ ಬೋಧ್ಯಂಗಗಳು, ಇದು ಆರ್ಯ ಅಷ್ಟಾಂಗಿಕ ಮಾರ್ಗ, ಇದು ಶಮಥ, ಇದು ವಿಪಶ್ಯನ, ಇದು ವಿದ್ಯೆ, ಇದು ವಿಮುಕ್ತಿ'–ಎಂದು ಕುಶಲವಾದ ಧರ್ಮಗಳನ್ನೂ ಅಕುಶಲವಾದವುಗಳನ್ನೂ, ದೂಷ್ಯವಾದವುಗಳನ್ನೂ ದೂಷ್ಯವಲ್ಲದವನ್ನೂ, ಹೀನವಾದವನ್ನೂ ಪ್ರಸಿದ್ಧವಾದವನ್ನೂ, ಕಪ್ಪಗಿರುವವನ್ನೂ ಬೆಳ್ಳಗಿರುವವನ್ನೂ, ಅವುಗಳಿಗೆ ಸಮಾನವಾದ ಪ್ರತಿಯೊಂದು ಧರ್ಮವನ್ನೂ [ಯೋಗಾವಚರನು] ಮೇಲಿಂದ ಮೇಲೆ ಹೇಳಿಕೊಳ್ಳುವನು. ಈ ರೀತಿಯಲ್ಲಿ ಯೋಗಾವಚರನು ಸೇವಿಸತಕ್ಕ ಧರ್ಮಗಳನ್ನು ಸೇವಿಸುವನು, ಸೇವಿಸತಗದ ಧರ್ಮಗಳನ್ನು ಸೇವಿಸುವುದಿಲ್ಲ; ಭಜಿಸತಕ್ಕ ಧರ್ಮಗಳನ್ನು ಭಜಿಸುವನು, ಭಜಿಸತಗದ ಧರ್ಮಗಳನ್ನು ಭಜಿಸುವುದಿಲ್ಲ. ಹೀಗೆ, ಮಹಾರಾಜ, ಅಪಿಲಾಪನವು ಸ್ಮೃತಿಯ ಲಕ್ಷಣ."

"ಉಪಮಾನ ಕೊಡು."

"ಮಹಾರಾಜ, ಚಕ್ರವರ್ತಿಯಾದ ರಾಜನ ಭಂಡಾರಿಯು 'ದೇವ, ನಿನ್ನ ಆನೆ ಇಷ್ಟು, ನಿನ್ನ ಕುದುರೆ ಇಷ್ಟು, ನಿನ್ನ ರಥ ಇಷ್ಟು, ಕಾಲಾಳು ಇಷ್ಟು, ನಿನ್ನ ಹಣ ಇಷ್ಟು, ಚಿನ್ನ ಇಷ್ಟು, ನಿನ್ನ ಸಂಪತ್ತಿ ಇಷ್ಟು; ದೇವರು ಇದನ್ನು ಸ್ಮರಿಸಬೇಕು' ಎಂದು ಸಂಜೆಯೂ ಹಗಲೂ ಅವನ ಸಂಪತ್ತನ್ನು ಅಪಿಲಾಪಿಸಿ ಅವನ ಯಶಸ್ಸನ್ನು ಸ್ಮರಿಯಿಸುವನು. ಅದರಂತೆಯೇ, ಮಹಾರಾಜ, ಯೋಗಾವಚರನು ಮೇಲೆ ಹೇಳಿದ ಧರ್ಮಗಳು ಪ್ರತಿಯೊಂದನ್ನೂ ಅಪಿಲಾಪಿಸುವನು. ಹೀಗೆ, ಮಹಾರಾಜ, ಅಪಿಲಾಪನವು ಸ್ಮೃತಿಯ ಲಕ್ಷಣ."

"ಉಪಗೃಹ್ಣನವು ಸ್ಮೃತಿಯ ಲಕ್ಷಣ ಹೇಗೆ, ಭನ್ತೇ?"

"ಮಹಾರಾಜ, [ಚಿತ್ತದಲ್ಲಿ] ಸ್ಮೃತಿಯು ಮೇಲೆದ್ದಹಾಗೆಲ್ಲ 'ಈ ಧರ್ಮಗಳು ಹಿತ, ಈ ಧರ್ಮಗಳು ಅಹಿತ; ಈ ಧರ್ಮಗಳಿಂದ ಉಪಕಾರ, ಇವುಗಳಿಂದ ಉಪಕಾರವಿಲ್ಲ' ಎಂದು [ಯೋಗಾವಚರನು] ಹಿತಾಹಿತ ಧರ್ಮಗಳ ಗತಿಯನ್ನು ಚೆನ್ನಾಗಿ ಹುಡುಕುವನು. ಈ ರೀತಿಯಲ್ಲಿ, ಯೋಗಾವಚರನು ಉಪಕಾರವಿಲ್ಲದ ಧರ್ಮಗಳನ್ನು ಮರೆಗೊಳಿಸಿ, ಉಪಕಾರವಾಗುವ ಧರ್ಮಗಳನ್ನು ಪುನಃ ಪುನಃ ಹಿಡಿಯುವನು. ಹೀಗೆ, ಮಹಾರಾಜ, ಉಪಗೃಹ್ಣನವು ಸ್ಮೃತಿಯ ಲಕ್ಷಣ."

"ಉಪಮಾನ ಕೊಡು."

"ಮಹಾರಾಜ, ಚಕ್ರವರ್ತಿಯಾದ ರಾಜನ ಪರಿನಾಯಕರತ್ನನು 'ರಾಜನಿಗೆ ಇವು ಹಿತ, ಇವು ಅಹಿತ; ರಾಜನಿಗೆ ಇವುಗಳಿಂದ ಉಪಕಾರ, ಇವುಗಳಿಂದ ಉಪಕಾರವಿಲ್ಲ' ಎಂದು ರಾಜನಿಗೆ ಹಿತಾಹಿತಗಳನ್ನು ತಿಳಿಸುವನು; ಅಹಿತವಾದುವನ್ನು ಮರೆಗೊಳಿಸಿ ಹಿತವಾದುವನ್ನು ಪುನಃ ಪುನಃ ಹಿಡಿಯುವನು; ಉಪಕಾರವಾಗದವನ್ನು ಮರೆಗೊಳಿಸಿ ಉಪಕಾರವಾಗುವವನ್ನು ಪುನಃ ಪುನಃ ಹಿಡಿಯುವನು. ಅದರಂತೆಯೇ, ಮಹಾರಾಜ, ಯೋಗಾವಚರನು ಹಿತವಲ್ಲದುವನ್ನೂ ಉಪಕಾರವಿಲ್ಲದುವನ್ನೂ ಮರೆಗೊಳಿಸಿ, ಹಿತವಾದುವನ್ನೂ ಉಪಕಾರವಾದುವನ್ನೂ ಪುನಃ ಪುನಃ ಹಿಡಿಯುವನು. ಹೀಗೆ, ಮಹಾರಾಜ, ಉಪಗೃಹ್ಣನವು ಸ್ಮೃತಿಯ ಲಕ್ಷಣ. ಮಹಾರಾಜ,

"ಭಿಕ್ಷುಗಳೆ, ಸ್ಮೃತಿಯು ಯಾವಾಗಲೂ ಅರ್ಥವುಳ್ಳುದೆಂದು ನಾನು ಹೇಳುತ್ತೇನೆ!"

ಎಂದು ಭಗವಂತನು ಹೇಳಿದ್ದಾನೆ."

"ನೀನು ಚತುರ, ಭನ್ತೇ ನಾಗಸೇನ."

೧೩

ರಾಜನು "ಭನ್ತೇ ನಾಗಸೇನ, ಸಮಾಧಿಯ ಲಕ್ಷಣವೇನು?" ಎಂದನು.

"ಮಹಾರಾಜ, ಸಮಾಧಿಯು ಪ್ರಮುಖಲಕ್ಷಣವು. ಕುಶಲವಾದ ಧರ್ಮಗಳು ಎಲ್ಲಕ್ಕೂ ಸಮಾಧಿಯು ಪ್ರಮುಖ. ಅವು ಎಲ್ಲವೂ

ಸಮಾಧಿಯ ಕಡೆಗೆ ಇಳಿಯುತ್ತವೆ, ಸಮಾಧಿಯ ಕಡೆಗೆ ಬಾಗುತ್ತವೆ, ಸಮಾಧಿಯ ಕಡೆ ವಾಲುತ್ತವೆ."

"ಉಪಮಾನ ಕೊಡು."

"ಮಹಾರಾಜ, ಕೂಟಾಗಾರದ ಎಲ್ಲಾ ದೂಲಗಳೂ ಕೂಟದ ಕಡೆಗೆ ಹೋಗುವುವು, ಕೂಟದ ಕಡೆ ಬಾಗುವುವು, ಕೂಟದಲ್ಲಿ ಹೋಗಿ ಸೇರುವುವು; ಅವುಗಳಲ್ಲಿ ಕೂಟವನ್ನೇ ತುದಿಯೆಂದು ಹೇಳುವರು. ಅದರಂತೆಯೇ, ಮಹಾರಾಜ, ಕುಶಲವಾದ ಎಲ್ಲಾ ಧರ್ಮಗಳಿಗೂ ಸಮಾಧಿಯು ಪ್ರಮುಖ. ಅವು ಎಲ್ಲವೂ ಸಮಾಧಿಯ ಕಡೆಗೆ ಇಳಿದು, ಸಮಾಧಿಯ ಕಡೆ ಬಾಗಿ, ಸಮಾಧಿಯ ಕಡೆ ವಾಲುತ್ತವೆ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ರಾಜನೊಬ್ಬನು ಚತುರಂಗ ಸೇನೆಯೊಡನೆ ಯುದ್ಧಕ್ಕೆ ಬರುವನು. ಆನೆ, ಕುದುರೆ, ರಥ, ಕಾಲಾಳು ಎಂಬ ಆ ಸೇನೆಗೆ ಅವನೇ ಪ್ರಮುಖ; ಆ ಸೇನೆಯು ಅವನ ಕಡೆ ಹೋಗುವುದು, ಅವನ ಕಡೆ ಇಳಿಯುವುದು, ಅವನ ಕಡೆ ವಾಲುವುದು, ಅವನನ್ನೇ ಅನುಸರಿಸಿ ಬಳಸುವುದು. ಅದರಂತೆಯೇ, ಮಹಾರಾಜ, ಕುಶಲವಾದ ಎಲ್ಲಾ ಧರ್ಮಗಳಿಗೂ ಸಮಾಧಿಯು ಪ್ರಮುಖ. ಅವು ಎಲ್ಲವೂ ಸಮಾಧಿಯ ಕಡೆಗೆ ಇಳಿದು, ಸಮಾಧಿಯ ಕಡೆ ಬಾಗಿ, ಸಮಾಧಿಯ ಕಡೆ ವಾಲುತ್ತವೆ. ಹೀಗೆ, ಮಹಾರಾಜ, ಸಮಾಧಿಯು ಪ್ರಮುಖಲಕ್ಷಣವು. ಮಹಾರಾಜ,

'ಭಿಕ್ಷುಗಳೆ, ಸಮಾಧಿಯನ್ನು ಭಾವಿಸಿರಿ;
ಸಮಾಹಿತನಾದವನು ಯಥಾಭೂತವನ್ನು ತಿಳಿಯುವನು'

ಎಂದು ಭಗವಂತನು ಹೇಳಿದ್ದಾನೆ."

"ನೀನು ಜಾಣ, ಭನ್ತೇ ನಾಗಸೇನ."

೧೪

ರಾಜನು "ಭನ್ತೇ ನಾಗಸೇನ, ಪ್ರಜ್ಞೆಯ ಲಕ್ಷಣವೇನು?" ಎಂದನು.

"ಮಹಾರಾಜ, 'ಪ್ರಜ್ಞೆಯ ಲಕ್ಷಣವು ಛೇದನ' ಎಂದು ನಾನು ಹಿಂದೆಯೆ ಹೇಳಿದೆ. ಅಲ್ಲದೆ, ಅವಭಾಸನ ಕೂಡ ಪ್ರಜ್ಞೆಯ ಲಕ್ಷಣ."

"ಅವಭಾಸನವು ಹೇಗೆ ಪ್ರಜ್ಞೆಯ ಲಕ್ಷಣ, ಭನ್ತೇ?"

"ಮಹಾರಾಜ, ಪ್ರಜ್ಞೆಯು [ಚಿತ್ತದಲ್ಲಿ] ಮೇಲೆದ್ದಾಗ [ಅದು] ಅವಿದ್ಯೆಯ ಕತ್ತಲನ್ನು ಧ್ವಂಸಮಾಡುವುದು; ವಿದ್ಯೆಯ ಅವಭಾಸವನ್ನು ಜನಿಯಿಸುವುದು; ಜ್ಞಾನದ ಪ್ರಭೆಯನ್ನು ಬೆಳಗಿಸುವುದು; ಆರ್ಯಸತ್ಯ ಗಳನ್ನು ಪ್ರಕಟಪಡಿಸುವುದು. ಅದರಿಂದ ಯೋಗಾವಚರನು [ಲೋಕವು] ಅನಿತ್ಯವೆಂದು, [ಲೋಕವು] ದುಃಖವೆಂದು, [ಲೋಕವು] ಅನಾತ್ಮವೆಂದು ಸಮ್ಯಕ್‌ಪ್ರಜ್ಞೆಯಿಂದ ಕಾಣುವನು."

"ಉಪಮಾನ ಕೊಡು."

"ಮಹಾರಾಜ, ಪುರುಷನು ಕತ್ತಲೆಯ ಮನೆಯೊಳಕ್ಕೆ ದೀಪವನ್ನು ತಂದರೆ; ಹಾಗೆ ತಂದ ದೀಪವು ಕತ್ತಲೆಯನ್ನು ಕಳೆಯುವುದು, ಅವಭಾಸ ವನ್ನು ಜನಿಯಿಸುವುದು, ಪ್ರಭೆಯನ್ನು ಬೆಳಗಿಸುವುದು, ರೂಪಗಳನ್ನು ಪ್ರಕಟಪಡಿಸುವುದು. ಅದರಂತೆಯೇ, ಮಹಾರಾಜ, [ಚಿತ್ತದಲ್ಲಿ] ಪ್ರಜ್ಞೆಯು ಮೇಲೆದ್ದಾಗ [ಅದು] ಅವಿದ್ಯೆಯ ಕತ್ತಲನ್ನು ಧ್ವಂಸಮಾಡು ವುದು; ವಿದ್ಯೆಯ ಅವಭಾಸವನ್ನು ಜನಿಯಿಸುವುದು; ಜ್ಞಾನದ ಪ್ರಭೆ ಯನ್ನು ಬೆಳಗಿಸುವುದು; ಆರ್ಯಸತ್ಯಗಳನ್ನು ಪ್ರಕಟಪಡಿಸುವುದು. ಅದರಿಂದ ಯೋಗಾವಚರನು [ಲೋಕವು] ಅನಿತ್ಯ, [ಲೋಕವು] ದುಃಖ, [ಲೋಕವು] ಅನಾತ್ಮ — ಎಂದು ಸಮ್ಯಕ್‌ಪ್ರಜ್ಞೆಯಿಂದ ಕಾಣುವನು. ಹೀಗೆ, ಮಹಾರಾಜ, ಅವಭಾಸನವು ಪ್ರಜ್ಞೆಯ ಲಕ್ಷಣ."

"ನೀನು ಚತುರ, ಭನ್ತೇ ನಾಗಸೇನ."

೧೫

ರಾಜನು "ಭನ್ತೇ ನಾಗಸೇನ, [ಮೇಲೆ ಹೇಳಿದ] ಈ ನಾನಾ [ಕುಶಲ] ಧರ್ಮಗಳು ಎಲ್ಲವೂ ಒಂದೇ ಅರ್ಥವನ್ನು ಉಂಟುಮಾಡು ವುವೆ?" ಎಂದನು.

"ಹೌದು, ಮಹಾರಾಜ. [ಮೇಲೆ ಹೇಳಿದ] ಈ ನಾನಾ [ಕುಶಲ] ಧರ್ಮಗಳು ಎಲ್ಲವೂ ಒಂದೇ ಅರ್ಥವನ್ನು ಉಂಟುಮಾಡುವುವು: ಕ್ಲೇಶಗಳನ್ನು ಕೊಲ್ಲುವುವು."

"ಅದು ಹೇಗೆ, ಭನ್ತೇ? ಉಪಮಾನ ಕೊಡು."

"ಮಹಾರಾಜ, ಆನೆ, ಕುದುರೆ, ರಥ, ಕಾಲಾಳು—ಎಂದು ಸೈನ್ಯವು ನಾನಾ [ತೆರ]ನಾದರೂ, [ಅವು ಎಲ್ಲವೂ] ಒಂದೇ ಅರ್ಥವನ್ನು ಉಂಟುಮಾಡುವುವು: ಯುದ್ಧದಲ್ಲಿ ಎದುರುಸೈನ್ಯವನ್ನು ಜಯಿಸುವುವು. ಅದರಂತೆಯೇ, ಮಹಾರಾಜ, ಈ ನಾನಾ ಧರ್ಮಗಳು ಎಲ್ಲವೂ ಒಂದೇ ಅರ್ಥವನ್ನು ಉಂಟುಮಾಡುವುವು: ಕ್ಲೇಶಗಳನ್ನು ಕೊಲ್ಲುವುವು."

"ನೀನು ಜಾಣ, ಭನ್ತೇ ನಾಗಸೇನ."

[ಮೊದಲ ವರ್ಗ ಮುಗಿಯಿತು.]

ವರ್ಗ ಎರಡು

೧

ರಾಜನು "ಭನ್ತೇ ನಾಗಸೇನ, ಹುಟ್ಟುವವನು [ಮೊದಲಿನ ಹಾಗೆ] ಅವನೇ ಆಗಿರುವನೊ? ಅಥವಾ ಬೇರೆಯಾಗುವನೊ?" ಎಂದನು.

ಸ್ಥವಿರನು "ಅವನೂ ಅಲ್ಲ, ಬೇರೆಯೂ ಅಲ್ಲ, ಮಹಾರಾಜ" ಎಂದನು.

"ಉಪಮಾನ ಕೊಡು."

"ಏನೆಂಬೆ, ಮಹಾರಾಜ? ನೀನು ಹಿಂದೆ ಎಳೆಯವನಾಗಿ, ತರುಣನಾಗಿ, ಚಿಕ್ಕವನಾಗಿ, ಬೆನ್ನಡಿಯಾಗಿ ಮಲಗಿದ್ದೆ. [ಈಗ] ಹೀಗೆ ದೊಡ್ಡವನಾಗಿರುವ ನೀನು [ಮೊದಲಿನ] ಅವನೇ ಏನು?"

"ಅಲ್ಲ, ಭನ್ತೇ. ಆ ಮಗು ಬೇರೆ, ನಾನೇ ಬೇರೆ."

"ಹಾಗಾದರೆ, ಮಹಾರಾಜ, ನಿನಗೆ ತಾಯಿ ಇರುವುದಿಲ್ಲ, ತಂದೆ ಇರುವುದಿಲ್ಲ, ಆಚಾರ್ಯನಿರುವುದಿಲ್ಲ; ನಿನಗೆ ಶಿಲ್ಪಗಳು ಗೊತ್ತಿರುವುದಿಲ್ಲ; ನಿನಗೆ ಶೀಲವಿರುವುದಿಲ್ಲ, ಪ್ರಜ್ಞೆಯಿರುವುದಿಲ್ಲ. ಏನು, ಮಹಾರಾಜ? ಒಂದು ತಿಂಗಳ ಗರ್ಭದ ತಾಯಿ ಬೇರೆ, ಎರಡು ತಿಂಗಳ ಗರ್ಭದ ತಾಯಿ ಬೇರೆ, ಮೂರು ತಿಂಗಳ ಗರ್ಭದ ತಾಯಿ ಬೇರೆ, ನಾಲ್ಕು ತಿಂಗಳ ಗರ್ಭದ ತಾಯಿ ಬೇರೆಯೆ? ಚಿಕ್ಕವನ ತಾಯಿ ಬೇರೆ, ದೊಡ್ಡವನ ತಾಯಿ ಬೇರೆಯೆ? ಶಿಲ್ಪವನ್ನು ಕಲಿಯುವವನು ಬೇರೆ, ಶಿಕ್ಷಿತನಾದವನು ಬೇರೆಯೆ? ಪಾಪವನ್ನು ಮಾಡುವವನು ಬೇರೆ, [ಅದಕ್ಕೆ ದಂಡವಾಗಿ] ಕೈಕಾಲು ಕತ್ತರಿಸಿಕೊಳ್ಳುವವನು ಬೇರೆಯೆ?"

"ಅಲ್ಲ, ಭನ್ತೇ. ಆದರೆ, ಇದಕ್ಕೆ ನೀವೇನು ಹೇಳುವಿರಿ, ಭನ್ತೇ?"

ಸ್ಥವಿರನು "ಮಹಾರಾಜ, 'ಎಳೆಯನಾಗಿ, ತರುಣನಾಗಿ, ಚಿಕ್ಕವನಾಗಿ, ಬೆನ್ನಡಿಯಾಗಿ ಮಲಗಿದ್ದವನೂ ನಾನೇ; ಈಗ ಹೀಗೆ ದೊಡ್ಡವನಾಗಿರುವವನೂ ನಾನೇ. ಇವು ಎಲ್ಲವೂ ಇದೇ ದೇಹವನ್ನು ಆಶ್ರಯಿಸಿ ಒಂದರಲ್ಲಿ ಸಂಗ್ರಹವಾಗಿವೆ' [ಎಂದು ನಾನು ಹೇಳುವೆನು]" ಎಂದನು.

"ಉಪಮಾನ ಕೊಡು."

"ಮಹಾರಾಜ, ಪುರುಷನೊಬ್ಬನು ಒಂದು ದೀಪವನ್ನು ಹತ್ತಿಸಿದರೆ, ಅದು ರಾತ್ರಿಯೆಲ್ಲ ಉರಿಯುವುದೆ?"

"ರಾತ್ರಿಯೆಲ್ಲ ಉರಿಯುವುದು, ಭನ್ತೇ."

"ಏನು, ಮಹಾರಾಜ? ಮೊದಲ ಯಾಮದ[ಲ್ಲಿ ಉರಿಯುವ] ಜ್ವಾಲೆಯು ಮಧ್ಯಮದ ಯಾಮದ[ಲ್ಲಿ ಉರಿಯುವ] ಜ್ವಾಲೆಯೆ? [ಎರಡೂ ಒಂದೇಯೆ?]"

"ಅಲ್ಲ, ಭನ್ತೇ."

"ಮಧ್ಯಮದ ಯಾಮದ[ಲ್ಲಿ ಉರಿಯುವ] ಜ್ವಾಲೆಯು ಕಡೆಯ ಯಾಮದ[ಲ್ಲಿ ಉರಿಯುವ] ಜ್ವಾಲೆಯೆ? [ಎರಡೂ ಒಂದೇಯೆ?]"

"ಅಲ್ಲ, ಭನ್ತೇ."

"ಏನು, ಮಹಾರಾಜ? ಮೊದಲ ಯಾಮದಲ್ಲಿ ಬೇರೆ ದೀಪ, ಮಧ್ಯಮ ಯಾಮದಲ್ಲಿ ಬೇರೆ ದೀಪ, ಕಡೆಯ ಯಾಮದಲ್ಲಿ ಬೇರೆ ದೀಪ ಇರುವುದೆ?"

"ಇಲ್ಲ, ಭನ್ತೇ. ಅದರ, [ಆ ಒಂದೇ ದೀಪದ], ಆಶ್ರಯದಿಂದಲೇ ರಾತ್ರಿಯೆಲ್ಲ ಬೆಳಗುವುದು."

"ಅದರಂತೆಯೆ, ಮಹಾರಾಜ, ಧರ್ಮಗಳ ಸಂತತಿಯು ಕೂಡಿ ಬರುವುದು. ಹುಟ್ಟುವವನು ಒಬ್ಬ, ನಾಶವಾಗುವವನು ಬೇರೊಬ್ಬ. [ಆದರೆ ಇದು] ಹಿಂದಿನದಲ್ಲ, [ಇದು] ಆಮೇಲಿನದಲ್ಲ ಎಂಬ ಹಾಗೆ [ಏಕಕ್ಷಣದಲ್ಲಿ ಧರ್ಮಸಂತತಿಯು] ಕೂಡುವುದು. ಅದರಿಂದ ಕಡೆಯ ವಿಜ್ಞಾನಸಂಗ್ರಹಕ್ಕೆ ಹೋಗುವವನು ಅವನೂ ಅಲ್ಲ, ಬೇರೆಯೂ ಅಲ್ಲ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಹಸುವಿನಿಂದ ಕರೆದ ಹಾಲು ಕಾಲಾಂತರದಲ್ಲಿ ಮೊಸರಾಗಿ ಬದಲಿಸಿ, ಮೊಸರಿನಿಂದ ಬೆಣ್ಣೆ, ಬೆಣ್ಣೆಯಿಂದ ತುಪ್ಪ ಹೇಗೋ ಹಾಗೆ. ಈಗ, ಮಹಾರಾಜ, 'ಯಾವುದು [ಹಿಂದೆ] ಹಾಲು [ಆಗಿತ್ತು] ಅದೇ [ಈ] ಮೊಸರು, ಅದೇ [ಈ] ಬೆಣ್ಣೆ, ಅದೇ [ಈ] ತುಪ್ಪ' ಎಂದು ಹೇಳಿದರೆ, ಆ ಮಾತು ಸರಿಯೆ?"

"ಇಲ್ಲ, ಭನ್ತೇ. ಇವು ಅದನ್ನು ಆಶ್ರಯಿಸಿ ಹುಟ್ಟಿದುವು."

"ಅದರಂತೆಯೆ, ಮಹಾರಾಜ, ಧರ್ಮಗಳ ಸಂತತಿಯು ಕೂಡಿ ಬರುವುದು. ಹುಟ್ಟುವವನು ಒಬ್ಬ, ನಾಶವಾಗುವವನು ಬೇರೊಬ್ಬ. [ಆದರೆ ಇದು] ಹಿಂದಿನದಲ್ಲ, [ಇದು] ಆಮೇಲಿನದಲ್ಲ ಎಂಬ ಹಾಗೆ

[ಏಕಕ್ಷಣದಲ್ಲಿ ಧರ್ಮಸಂತತಿಯು] ಕೂಡುವುದು. ಆದರಿಂದ ಕಡೆಯ ವಿಜ್ಞಾನಸಂಗ್ರಹಕ್ಕೆ ಹೋಗುವವನು ಅವನೂ ಅಲ್ಲ, ಬೇರೆಯೂ ಅಲ್ಲ."

"ನೀನು ಜಾಣ, ಭನ್ತೇ ನಾಗಸೇನ."

೨

ರಾಜನು "ಭನ್ತೇ ನಾಗಸೇನ, ಪ್ರತಿಸಂಧಿಸದವನು 'ನಾನು ಪ್ರತಿ ಸಂಧಿಸುವುದಿಲ್ಲ' ಎಂದು ತಿಳಿಯುವನೆ?" ಎಂದನು.

"ಹೌದು, ತಿಳಿಯುವನು, ಮಹಾರಾಜ."

"ಹೇಗೆ ತಿಳಿಯುವನು, ಭನ್ತೇ?"

"ಪ್ರತಿಸಂಧಿಸುವುದಕ್ಕೆ ಯಾವುದು ಕಾರಣ, ಯಾವುದು ಮೂಲ, ಆ ಕಾರಣ ಮೂಲಗಳು ನಿಲ್ಲುವುದರಿಂದ ತಾನು ಪ್ರತಿಸಂಧಿಸುವುದಿಲ್ಲ ವೆಂದು ತಿಳಿಯುವನು."

"ಉಪಮಾನ ಕೊಡು."

"ಮಹಾರಾಜ, ಮನೆಯೊಡೆಯನಾದ ಕೃಷಿಕನು ಕೃಷಿಮಾಡಿ, ಬಿತ್ತಿ, ಧಾನ್ಯದ ಕಣಜವನ್ನು ತುಂಬುವನು. ಅನಂತರ ಅವನು ಕೃಷಿ ಮಾಡುವುದಿಲ್ಲ, ಬಿತ್ತುವುದಿಲ್ಲ. ತಾನು ಕೂಡಿಟ್ಟ ಧಾನ್ಯವನ್ನು ತಿನ್ನುವನು; ಅಥವಾ [ತನಗೆ ಬೇಕಾದ ಇತರ ಪದಾರ್ಥಗಳಿಗೆ] ಬದಲಾಗಿ ಕೊಡುವನು; ಅಥವಾ ಆವಶ್ಯಕವಾದಂತೆ [ವ್ಯಯ]ಮಾಡುವನು. [ಹೀಗೆ ಮಾಡುವ] ಆ ಕೃಷಿಕನು ತನ್ನ ಕಣಜ ತುಂಬುತ್ತಿಲ್ಲವೆಂದು ತಿಳಿಯುವನೆ, ಮಹಾರಾಜ?"

"ತಿಳಿಯುವನು, ಭನ್ತೇ."

"ಹೇಗೆ ತಿಳಿಯುವನು?"

"ಕಣಜ ತುಂಬುವುದಕ್ಕೆ ಯಾವುದು ಕಾರಣ, ಯಾವುದು ಮೂಲ, ಆ ಕಾರಣ ಮೂಲಗಳು ನಿಂತುದರಿಂದ ತನ್ನ ಕಣಜ ತುಂಬು ತ್ತಿಲ್ಲವೆಂದು ತಿಳಿಯುವನು."

"ಆದರಂತೆಯೆ, ಮಹಾರಾಜ, ಪ್ರತಿಸಂಧಿಸುವುದಕ್ಕೆ ಯಾವುದು ಕಾರಣ, ಯಾವುದು ಮೂಲ, ಆ ಕಾರಣ ಮೂಲಗಳ ನಿಲ್ಲುವಿಕೆಯಿಂದ ತಾನು ಪ್ರತಿಸಂಧಿಸುವುದಿಲ್ಲವೆಂದು ತಿಳಿಯುವನು."

"ನೀನು ಚತುರ, ಭನ್ತೇ ನಾಗಸೇನ."

೩

ರಾಜನು "ಭನ್ತೇ ನಾಗಸೇನ, ಜ್ಞಾನ ಹುಟ್ಟಿದವನಿಗೆ ಪ್ರಜ್ಞೆ ಹುಟ್ಟುವುದೆ?" ಎಂದನು.

"ಹೌದು, ಮಹಾರಾಜ; ಜ್ಞಾನ ಹುಟ್ಟಿದವನಿಗೆ ಪ್ರಜ್ಞೆ ಹುಟ್ಟುವುದು."

"ಏನು, ಭನ್ತೇ? ಜ್ಞಾನ, ಪ್ರಜ್ಞೆ ಎರಡೂ ಒಂದೇಯೆ?"

"ಹೌದು, ಮಹಾರಾಜ."

"ಈ ಜ್ಞಾನ, ಇದೇ ಈ ಪ್ರಜ್ಞೆ ಹುಟ್ಟಿದವನಿಗೆ ಸಮ್ಮೋಹವಿರುವುದೆ? ಅಥವಾ ಸಮ್ಮೋಹವಿರುವುದಿಲ್ಲವೆ?"

"ಕೆಲವದರಲ್ಲಿ ಸಮ್ಮೋಹವಿರುವುದು, ಕೆಲವದರಲ್ಲಿ ಸಮ್ಮೋಹವಿರದು, ಮಹಾರಾಜ."

"ಅವನಿಗೆ ಯಾವುದರಲ್ಲಿ ಸಮ್ಮೋಹವಿರುವುದು, ಭನ್ತೇ? ಯಾವುದರಲ್ಲಿ ಸಮ್ಮೋಹವಿರದು?"

"ತಾನು ಹಿಂದೆ ತಿಳಿಯದ ವಿದ್ಯೆಯ ಅಂಗಗಳಲ್ಲಿ, [ತಾನು] ಹಿಂದೆ ಹೋಗದ ದಿಕ್ಕಿನ [ದೇಶಗಳ]ಲ್ಲಿ, [ತಾನು] ಹಿಂದೆ ಕೇಳದ ಹೆಸರು ಗುರುತುಗಳಲ್ಲಿ [ಅವನಿಗೆ ಇನ್ನೂ] ಸಮ್ಮೋಹವಿರುವುದು, ಮಹಾರಾಜ."

"[ಅವನಿಗೆ] ಯಾವುದರಲ್ಲಿ ಸಮ್ಮೋಹವಿರುವುದಿಲ್ಲ?"

"ಮಹಾರಾಜ, [ಲೋಕವು] ಅನಿತ್ಯ[ವಾದುದು], [ಲೋಕವು] ದುಃಖ[ದಿಂದ ತುಂಬಿದುದು], [ಲೋಕವು] ಅನಾತ್ಮ[ವಾದುದು]—[ಎಂದು] ತಾನು ಪ್ರಜ್ಞೆಯಿಂದ ಸಾಧಿಸಿದುದರಲ್ಲಿ [ಅವನಿಗೆ] ಸಮ್ಮೋಹವಿರುವುದಿಲ್ಲ."

"ಹಾಗಾದರೆ, ಅವನ ಮೋಹ ಎಲ್ಲಿಗೆ ಹೋಗುವುದು, ಭನ್ತೇ?"

"ಮಹಾರಾಜ, ಜ್ಞಾನ ಹುಟ್ಟಿದ ಮಾತ್ರಕ್ಕೆ ಮೋಹ ಆಗಲೇ ಅಡಗುವುದು."

"ಉಪಮಾನ ಕೊಡು."

"ಮಹಾರಾಜ, ಪುರುಷನೊಬ್ಬನು ಕತ್ತಲೆಯ ಮನೆಯಲ್ಲಿ ದೀಪವನ್ನು ತಂದರೆ, ಆಗ ಕತ್ತಲೆ ಅಡಗಿ ಬೆಳಕು ಪ್ರತ್ಯಕ್ಷವಾಗುವುದು. ಅದರಂತೆಯೇ, ಮಹಾರಾಜ, ಜ್ಞಾನ ಹುಟ್ಟಿದ ಮಾತ್ರಕ್ಕೆ ಮೋಹ ಆಗಲೇ ಅಡಗುವುದು."

“ಪ್ರಜ್ಞೆ ಎಲ್ಲಿ ಹೋಗುವುದು, ಭನ್ತೇ?”

“ಪ್ರಜ್ಞೆಯು ತಾನು ಮಾಡಬೇಕಾದುದನ್ನು ಮಾಡಿ ಆಗಲೇ ಅಡಗುವುದು. ಆದರೆ ಆ ಪ್ರಜ್ಞೆಯಿಂದ ಕಂಡ ‘[ಲೋಕ] ಅನಿತ್ಯ, [ಲೋಕ] ದುಃಖ, [ಲೋಕ] ಅನಾತ್ಮ’ ಎಂಬುದು, [ಆ ತಿಳಿವು], ಅಡಗುವುದಿಲ್ಲ.”

“ಭನ್ತೇ ನಾಗಸೇನ, ‘ಪ್ರಜ್ಞೆ ಮಾಡಬೇಕಾದುದನ್ನು ಮಾಡಿ ಅಡಗುವುದು; ಅದರಿಂದ ಕಂಡ ಅನಿತ್ಯ, ದುಃಖ, ಅನಾತ್ಮ[ಎಂಬ ತಿಳಿವು] ಅಡಗದು’ ಎಂದು ನೀನು ಹೇಳುವೆ. ಉಪಮಾನ ಕೊಡು.”

“ಮಹಾರಾಜ, ಪುರುಷನೊಬ್ಬನು ರಾತ್ರೆ ಲೇಖವನ್ನು ಬರೆಯಬೇಕೆಂದು ಲೇಖಕನನ್ನು ಕರೆಕಳುಹಿ, ದೀಪವನ್ನು ತಂದು, ಲೇಖವನ್ನು ಬರೆಯಿಸುವನು. ಲೇಖವನ್ನು ಬರೆಯಿಸಿ ದೀಪವನ್ನು ಆರಿಸುವನು. ದೀಪವನ್ನು ಆರಿಸಿದರೂ ಆ ಲೇಖ ನಾಶವಾಗುವುದಿಲ್ಲ. ಅದರಂತೆಯೇ, ಮಹಾರಾಜ, ಪ್ರಜ್ಞೆಯು ತಾನು ಮಾಡಬೇಕಾದುದನ್ನು ಮಾಡಿ ಅಡಗಿದರೂ, ಅದರಿಂದ ಬಂದ ತಿಳಿವು ಅಡಗುವುದಿಲ್ಲ.”

“ಇನ್ನೊಂದು ಉಪಮಾನ ಕೊಡು.”

“ಮಹಾರಾಜ, ಪೂರ್ವದ ಜನಪದಗಳ ಜನರು [ಮನೆಗೆ ಬಿದ್ದ] ಬೆಂಕಿಯನ್ನು ಆರಿಸಲು ಮನೆಯ ಹಿಂದೆ ಐದೈದು ನೀರಿನ ಮಡಕೆಗಳನ್ನು ಇರಿಸುತ್ತಾರೆ. ಮನೆ ಉರಿದರೆ ಆ ಐದು ನೀರಿನ ಮಡಕೆಗಳನ್ನು ಮನೆಯ ಮೇಲೆ ಹಾಕುತ್ತಾರೆ; ಆಗ ಬೆಂಕಿ ಆರುತ್ತದೆ. [ಆಗ] ಪುನಃ ಈ ಮಡಕೆಗಳಿಂದ ಕೆಲಸಮಾಡೋಣವೆಂದು ಅವರಿಗೆನಿಸುವುದೆ?”

“ಇಲ್ಲ, ಭನ್ತೇ. ಆ ಮಡಕೆಗಳ ಕೆಲಸವಾಯಿತು. ಇನ್ನೇಕೆ ಆ ಮಡಕೆಗಳು?”

“ಮಹಾರಾಜ, ಶ್ರದ್ಧೇಂದ್ರಿಯ, ವೀರ್ಯೇಂದ್ರಿಯ, ಸ್ಮೃತೀಂದ್ರಿಯ, ಸಮಾಧೀಂದ್ರಿಯ, ಪ್ರಜ್ಞೇಂದ್ರಿಯ ಎಂಬ ಈ ಐದು ಇಂದ್ರಿಯಗಳನ್ನು ಆ ಐದು ನೀರಿನ ಮಡಕೆಗಳಂತೆ ಕಾಣಬೇಕು. ಯೋಗಾವಚರನನ್ನು ಆ ಜನರಂತೆ ಕಾಣಬೇಕು. ಕ್ಲೇಶಗಳನ್ನು ಬೆಂಕಿಯಂತೆ ಕಾಣಬೇಕು. ಐದು ನೀರಿನ ಮಡಕೆಗಳಿಂದ ಬೆಂಕಿ ಆರುವ ಹಾಗೆ ಈ ಪಂಚೇಂದ್ರಿಯಗಳಿಂದ ಕ್ಲೇಶ ಆರುವುದು; ಆರಿದ ಕ್ಲೇಶ ಪುನಃ ಸಂಭವಿಸುವುದಿಲ್ಲ.

ಅದರಂತೆಯೆ, ಮಹಾರಾಜ, ಪ್ರಜ್ಞೆಯು ತಾನು ಮಾಡಬೇಕಾದುದನ್ನು ಮಾಡಿ ಅಡಗಿದರೂ, ಅದರಿಂದ ಬಂದ ತಿಳಿವು ಅಡಗುವುದಿಲ್ಲ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ವೈದ್ಯನು ಐದು ತೆರದ ಮೂಲಿಕೆಗಳನ್ನು ಹಿಡಿದು ರೋಗಿಯ ಬಳಿಸಾರಿ, ಆ ಐದು ಮೂಲಿಕೆಗಳನ್ನು ಅವನಿಗೆ ಅರೆದು ಕುಡಿಸುವನು. ಅದರಿಂದ ಅವನ ದೋಷಗಳು ಬಿಟ್ಟು ಓಡುವುವು. ಆಗ, 'ಪುನಃ ಈ ಮೂಲಿಕೆಗಳನ್ನು ಇವನಿಗೆ ಕುಡಿಸೋಣ' ಎಂದು ಆ ವೈದ್ಯನಿಗೆನಿಸುವುದೆ?"

"ಇಲ್ಲ. ಆ ಮೂಲಿಕೆಗಳ ಕೆಲಸವಾಯಿತು. ಪುನಃ ಏಕೆ?"

"ಮಹಾರಾಜ, ಶ್ರದ್ಧೆ, ವೀರ್ಯ, ಸ್ಮೃತಿ, ಸಮಾಧಿ, ಪ್ರಜ್ಞೆಗಳ ಐದು ಇಂದ್ರಿಯಗಳನ್ನು ಐದು ಮೂಲಿಕೆಗಳಂತೆ ಕಾಣಬೇಕು. ಯೋಗಾವಚರನನ್ನು ವೈದ್ಯನಂತೆ ಕಾಣಬೇಕು. ಕ್ಲೇಶಗಳನ್ನು ವ್ಯಾಧಿಯಂತೆ ಕಾಣಬೇಕು. ಸಾಮಾನ್ಯ ಜನರನ್ನು ರೋಗಿಯಂತೆ ಕಾಣಬೇಕು. ಐದು ಮೂಲಿಕೆಗಳ ವೈದ್ಯದಿಂದ ಹೇಗೆ ರೋಗದ ದೋಷಗಳು ಬಿಟ್ಟೋಡಿ ರೋಗ ಆರೋಗ್ಯವಾಗುವುದೋ ಹಾಗೆ ಈ ಪಂಚೇಂದ್ರಿಯಗಳಿಂದ ಕ್ಲೇಶಗಳು ಬಿಟ್ಟೋಡುವುವು; ಬಿಟ್ಟೋಡಿದ ಕ್ಲೇಶಗಳು ಪುನಃ ಸಂಭವಿಸುವುದಿಲ್ಲ. ಅದರಂತೆಯೆ, ಮಹಾರಾಜ, ಪ್ರಜ್ಞೆಯು ತಾನು ಮಾಡಬೇಕಾದುದನ್ನು ಮಾಡಿ ಅಡಗಿದರೂ, ಅದರಿಂದ ಬಂದ ತಿಳಿವು ಅಡಗುವುದಿಲ್ಲ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಯುದ್ಧದಲ್ಲಿ ಚೆನ್ನಾಗಿ ಪರಿಚಯವಿರುವ ಯೋಧನು ಐದು ಭರ್ಜಿಗಳನ್ನು ಹಿಡಿದು ಎದುರುಸೈನ್ಯವನ್ನು ಜಯಿಸಲು ಯುದ್ಧಕ್ಕೆ ಬರುವನು. ಬಂದು, ಆ ಐದು ಭರ್ಜಿಗಳನ್ನು ಎಸೆಯುವನು. ಅದರಿಂದ ಎದುರು ಸೇನೆ ಮುರಿಯುವುದು. ಆಗ, ಪುನಃ ಭರ್ಜಿಗಳನ್ನು ಎಸೆಯೋಣವೆಂದು ಅವನಿಗೆನಿಸುವುದೆ?"

"ಇಲ್ಲ, ಭನ್ತೇ. ಆ ಭರ್ಜಿಗಳ ಕೆಲಸವಾಯಿತು. ಪುನಃ ಏಕೆ?"

"ಮಹಾರಾಜ, ಶ್ರದ್ಧೆ, ವೀರ್ಯ, ಸ್ಮೃತಿ, ಸಮಾಧಿ, ಪ್ರಜ್ಞೆಗಳ ಐದು ಇಂದ್ರಿಯಗಳನ್ನು ಐದು ಭರ್ಜಿಗಳಂತೆ ಕಾಣಬೇಕು. ಯೋಗಾವಚರನನ್ನು ಯೋಧನಂತೆ ಕಾಣಬೇಕು. ಕ್ಲೇಶಗಳನ್ನು ಪರಸೈನ್ಯದಂತೆ

ಕಾಣಬೇಕು. ಐದು ಭರ್ಜಿಗಳಿಂದ ಪರಸೈನ್ಯವು ಮುರಿಯುವಂತೆ ಪಂಚೇಂದ್ರಿಯಗಳಿಂದ ಕ್ಲೇಶಗಳು ಮುರಿಯುವುವು. ಮುರಿದ ಕ್ಲೇಶಗಳು ಪುನಃ ಸಂಭವಿಸುವುದಿಲ್ಲ. ಅದರಂತೆಯೆ, ಮಹಾರಾಜ, ಪ್ರಜ್ಞೆಯು ತಾನು ಮಾಡಬೇಕಾದುದನ್ನು ಮಾಡಿ ಅಡಗಿದರೂ, ಅದರಿಂದ ಬಂದ ತಿಳಿವು ಅಡಗುವುದಿಲ್ಲ."

"ನೀನು ಜಾಣ, ಭನ್ತೇ ನಾಗಸೇನ."

೪

ರಾಜನು "ಭನ್ತೇ ನಾಗಸೇನ, ಪ್ರತಿಸಂಧಿಸದವನು ಯಾವುದಾದರೂ ದುಃಖಕರವಾದ ವೇದನೆಯನ್ನು ತಿಳಿಯುವನೆ?" ಎಂದನು.

ಸ್ಥವಿರನು "ಕೆಲವನ್ನು ತಿಳಿಯುವನು, ಕೆಲವನ್ನು ತಿಳಿಯನು" ಎಂದನು.

"ಯಾವುದನ್ನು ತಿಳಿಯುವನು? ಯಾವುದನ್ನು ತಿಳಿಯನು?"

"ದೈಹಿಕವಾದ ವೇದನೆಯನ್ನು ತಿಳಿಯುವನು, ಮಹಾರಾಜ; ಚೇತಸಿಕವಾದ ವೇದನೆಯನ್ನು ತಿಳಿಯನು."

"ದೈಹಿಕವಾದ ವೇದನೆಯನ್ನು ಏಕೆ ತಿಳಿಯುವನು, ಚೇತಸಿಕವಾದುದನ್ನು ಏಕೆ ತಿಳಿಯನು, ಭನ್ತೇ?"

"ದೈಹಿಕವಾದ ದುಃಖದ ವೇದನೆ ಹುಟ್ಟಲು ಯಾವುದು ಮೂಲ, ಯಾವುದು ಕಾರಣ, ಆ ಮೂಲ ಕಾರಣಗಳು ನಿಲ್ಲದಿರುವುದರಿಂದ ದೈಹಿಕವಾದ ದುಃಖದ ವೇದನೆಯನ್ನು ತಿಳಿಯುವನು. ಚೇತಸಿಕವಾದ ದುಃಖದ ವೇದನೆ ಹುಟ್ಟಲು ಯಾವುದು ಮೂಲ, ಯಾವುದು ಕಾರಣ, ಆ ಮೂಲ ಕಾರಣಗಳು ನಿಂತಿರುವುದರಿಂದ ಚೇತಸಿಕವಾದ ದುಃಖದ ವೇದನೆಯನ್ನು ತಿಳಿಯನು. ಮಹಾರಾಜ,

'ಅವನು ಒಂದು ವೇದನೆಯನ್ನು ತಿಳಿಯುವನು:
ದೈಹಿಕವಾದುದನ್ನು, ಚೇತಸಿಕವಾದುದನ್ನಲ್ಲ'

ಎಂದು ಭಗವಂತನು ಹೇಳಿದ್ದಾನೆ."

"ಭನ್ತೇ ನಾಗಸೇನ, ದುಃಖದ ವೇದನೆಯನ್ನು ತಿಳಿಯುವವನು ಪರಿನಿರ್ವಾಣವನ್ನೇಕೆ ಪಡೆಯುವುದಿಲ್ಲ?"

"ಮಹಾರಾಜ, ಅರ್ಹತನು [ಮರಣವನ್ನು ಬಯಸಿ ಅದರ] ಬಳಿಸಾರಿ ಸೇವಿಸುವುದಿಲ್ಲ, [ಮರಣಕ್ಕೆ ಹೆದರಿ] ಅಸಹ್ಯದಿಂದ ದೂರ ಹೋಗುವುದಿಲ್ಲ. ಅರ್ಹತನು ಅಪಕ್ವವಾದುದನ್ನು ಬೀಳಿಸುವುದಿಲ್ಲ. ಪಂಡಿತನು ಪರಿಪಕ್ವವಾದುದಕ್ಕೆ ಕಾಯುವನು. ಮಹಾರಾಜ, ಧರ್ಮಸೇನಾಪತಿಯಾದ ಸ್ಥವಿರ ಸಾರಿಪುತ್ರನು

'ನಾನು ಮರಣಕ್ಕೆ ಅಭಿನಂದಿಸುವುದಿಲ್ಲ, ಜೀವಿತಕ್ಕೆ ಅಭಿನಂದಿಸುವುದಿಲ್ಲ;
ಭೃತ್ಯನು ಕೂಲಿಗೆ ಹೇಗೋ ಹಾಗೆ ಸಮಯವನ್ನು ಕಾಯುತ್ತಿದ್ದೇನೆ.
ನಾನು ಮರಣಕ್ಕೆ ಅಭಿನಂದಿಸುವುದಿಲ್ಲ, ಜೀವಿತಕ್ಕೆ ಅಭಿನಂದಿಸುವುದಿಲ್ಲ;
ಸಂಪ್ರಜಾನನಾಗಿ ಪ್ರತಿಸ್ಮೃತನಾಗಿ ಕಾಲವನ್ನು ಕಾಯುತ್ತಿದ್ದೇನೆ'

ಎಂದು ಹೇಳಿದ್ದಾನೆ."

"ನೀನು ಚತುರ, ಭನ್ತೇ ನಾಗಸೇನ."

೫

ರಾಜನು "ಭನ್ತೇ ನಾಗಸೇನ, ಸುಖವಾದ ವೇದನೆಯು ಕುಶಲ ವಾದುದೊ? ಅಕುಶಲವಾದುದೊ? ಅಥವಾ ತಿಳಿಸಲು ಆಗುವುದಿಲ್ಲವೊ?" ಎಂದನು.

"ಸುಖವಾದ ವೇದನೆಯು ಕುಶಲವಾಗಬಹುದು, ಅಕುಶಲ ವಾಗಬಹುದು, ತಿಳಿಸಲಾಗದಿರಬಹುದು."

"ಭನ್ತೇ, ಕುಶಲವಾದುದು ದುಃಖವಲ್ಲದಿದ್ದರೆ, ದುಃಖವಾದುದು ಕುಶಲವಲ್ಲದಿದ್ದರೆ, ಕುಶಲವೂ ದುಃಖವೂ ಆದದ್ದು ಹುಟ್ಟದು."

"ಏನೆಂಬೆ, ಮಹಾರಾಜ? ಪುರುಷನೊಬ್ಬನ [ಒಂದು] ಕೈಯಲ್ಲಿ ಸುಡುವ ಕಬ್ಬಿಣದ ಗುಂಡು ಇಟ್ಟು, ಎರಡನೆಯ ಕೈಯಲ್ಲಿ ಶೀತವಾದ ಹಿಮಪಿಂಡವನ್ನು ಇಟ್ಟರೆ, ಎರಡೂ ಅವನನ್ನು ನೋಯಿಸುವುವೆ?"

"ಹೌದು, ಭನ್ತೇ. ಎರಡೂ ಅವನನ್ನು ನೋಯಿಸುವುವು."

"ಏನು, ಅವು ಎರಡೂ ಬಿಸಿಯಾಗಿವೆಯೆ, ಮಹಾರಾಜ?"

"ಇಲ್ಲ, ಭನ್ತೇ."

"ಹಾಗಾದರೇನು, ಅವು ಎರಡೂ ತಣ್ಣಗಿವೆಯೆ, ಮಹಾರಾಜ?"

"ಇಲ್ಲ, ಭನ್ತೇ."

"ಸೋಲು ಒಪ್ಪಿಕೊ. ಬಿಸಿಯಾದುದು ನೋಯಿಸುವುದೆನ್ನಲು ಅವು ಎರಡೂ ಬಿಸಿಯಲ್ಲ; ಅದರಿಂದ [ನೋವು] ಹುಟ್ಟದು. ಶೀತಲವಾದುದು ನೋಯಿಸುವುದೆನ್ನಲು ಅವು ಎರಡೂ ತಣ್ಣಗಿಲ್ಲ; ಅದರಿಂದ [ನೋವು] ಹುಟ್ಟದು. ಹೀಗಿರುವಾಗ, ಅವು ಎರಡೂ ಅವನನ್ನು ಹೇಗೆ ನೋಯಿಸಿ ಯಾವು, ಮಹಾರಾಜ? ಎರಡೂ ಬಿಸಿಯಲ್ಲ, ಎರಡೂ ಶೀತಲವಲ್ಲ; ಒಂದು ಬಿಸಿ, ಒಂದು ಶೀತಲ. ಎರಡೂ ನೋಯಿಸುವುವೆನ್ನಲು — ಅದ ರಿಂದ [ನೋವು] ಹುಟ್ಟದು."

"ನಿನ್ನೊಡನೆ ವಾದಿಸಿ ಮಾತನಾಡಲು ನಾನು ಶಕ್ತನಲ್ಲ. ಒಳ್ಳೆ ಯದು, ಇದರ ಅರ್ಥವನ್ನು ತಿಳಿಸಬೇಕು."

ಆಗ ಸ್ಥವಿರನು "ಮಹಾರಾಜ, ಮನೆಯನ್ನು ಆಶ್ರಯಿಸಿರುವ ಸುಖಗಳು ಆರು, ಸಂನ್ಯಾಸಕ್ಕೆ ತಗುಲಿಕೊಂಡಿರುವ ಸುಖಗಳು ಆರು; ಮನೆಯನ್ನು ಆಶ್ರಯಿಸಿರುವ ಸಂಕಟಗಳು ಆರು, ಸಂನ್ಯಾಸಕ್ಕೆ ತಗುಲಿ ಕೊಂಡಿರುವ ಸಂಕಟಗಳು ಆರು; ಮನೆಯನ್ನು ಆಶ್ರಯಿಸಿರುವ ಉಪೇಕ್ಷೆಗಳು ಆರು, ಸಂನ್ಯಾಸಕ್ಕೆ ತಗುಲಿಕೊಂಡಿರುವ ಉಪೇಕ್ಷೆಗಳು ಆರು; - ಹೀಗೆ ಆರು ಷಟ್ಕಗಳು. ಹಿಂದಿನ ಮೂವತ್ತಾರು ವಿಧದ ವೇದನೆಗಳು, ಮುಂದಿನ ಮೂವತ್ತಾರು ವಿಧದ ವೇದನೆಗಳು, ಇಂದಿನ ಮೂವತ್ತಾರು ವಿಧದ ವೇದನೆಗಳು — ಇವುಗಳನ್ನೆಲ್ಲ ಒಂದಾಗಿ ಕೂಡಿಸಿ ಸೇರಿಸಿದರೆ ನೂರೆಂಟು ವೇದನೆಗಳು ಆಗುವುವು" ಎಂದು ಅಭಿಧರ್ಮ ದಿಂದ ಕೂಡಿದ [ಮಾತು] ಕತೆಯಿಂದ ಮಿಲಿಂದರಾಜನನ್ನು ಒಪ್ಪಿಸಿ ದನು.

"ನೀನು ಜಾಣ, ಭನ್ತೇ ನಾಗಸೇನ."

೬

ರಾಜನು "ಭನ್ತೇ ನಾಗಸೇನ, ಪ್ರತಿಸಂಧಿಸುವವರು ಯಾರು?" ಎಂದನು.

ಸ್ಥವಿರನು "ಪ್ರತಿಸಂಧಿಸುವುದು ನಾಮರೂಪ, ಮಹಾರಾಜ." ಎಂದನು.

"ಏನು, ಇದೇ ನಾಮರೂಪ ಪ್ರತಿಸಂಧಿಸುವುದೆ?"

"ಇಲ್ಲ, ಮಹಾರಾಜ; ಇದೇ ನಾಮರೂಪ ಪ್ರತಿಸಂಧಿಸುವುದಿಲ್ಲ. ಆದರೆ, ಮಹಾರಾಜ, ಈ ನಾಮರೂಪವು ಶುಭವಾದ ಅಥವಾ ಪಾಪಕವಾದ ಕರ್ಮಗಳನ್ನು ಮಾಡುವುದು; ಆ ಕರ್ಮಗಳಿಂದ ಬೇರೆ ನಾಮರೂಪವು ಪ್ರತಿಸಂಧಿಸುವುದು."

"ಭನ್ತೇ, ಯಾವಾಗ ಇದೇ ನಾಮರೂಪ ಪ್ರತಿಸಂಧಿಸುವುದಿಲ್ಲವೊ, [ಆಗ] ಅದು ಪಾಪಕರ್ಮಗಳಿಂದ ಬಿಡುಗಡೆ ಹೊಂದುವುದಲ್ಲವೆ?"

ಸ್ಥವಿರನು "ಪ್ರತಿಸಂಧಿಸದಿದ್ದರೆ ಪಾಪಕರ್ಮಗಳಿಂದ ಬಿಡುಗಡೆ ಹೊಂದುವುದು. [ಆದರೆ] ಪ್ರತಿಸಂಧಿಸುವುದರಿಂದ [ಅದು] ಪಾಪಕರ್ಮಗಳಿಂದ ಬಿಡುಗಡೆ ಹೊಂದದು" ಎಂದನು.

"ಉಪಮಾನ ಕೊಡು."

"ಮಹಾರಾಜ, ಯಾವನಾದರೂ ಪುರುಷನು ಬೇರೊಬ್ಬ ಪುರುಷನ ಮಾವನ್ನು ಕದಿಯುವನು. ಅವನನ್ನು ಆ ಮಾವಿನ ಹಣ್ಣಿನ ಒಡೆಯನು ಹಿಡಿದು ರಾಜನೆದುರಿಗೆ ತಂದು, 'ದೇವ, ಈ ಪುರುಷನು ನನ್ನ ಮಾವನ್ನು ಕದ್ದನು' ಎನ್ನುವನು. ಅವನು 'ದೇವ, ನಾನು ಇವನ ಮಾವನ್ನು ಕದಿಯಲಿಲ್ಲ. ಇವನು ನಟ್ಟ ಮಾವೇ ಬೇರೆ, ನಾನು ಕದ್ದ ಮಾವೇ ಬೇರೆ. ನಾನು ಶಿಕ್ಷೆಗೆ ಪಾತ್ರನಲ್ಲ' ಎಂದು ಹೇಳುವನು. ಏನು, ಮಹಾರಾಜ, ಆ ಪುರುಷನು ಶಿಕ್ಷೆಗೆ ಪಾತ್ರನೆ?"

"ಹೌದು, ಭನ್ತೇ, ಶಿಕ್ಷೆಗೆ ಪಾತ್ರನು."

"ಅದೇಕೆ?"

"ಅವನು ಹೀಗೆ ಏನು ಹೇಳಿದರೂ, ಭನ್ತೇ, ಮೊದಲನೆಯ ಮಾವಿನಿಂದ ಹುಟ್ಟಿದ ಆಮೇಲಿನ ಮಾವಿನ ದೆಸೆಯಿಂದ ಆ ಪುರುಷನು ಶಿಕ್ಷೆಗೆ ಪಾತ್ರನಾಗುವನು."

"ಅದರಂತೆಯೆ, ಮಹಾರಾಜ, ಈ ನಾಮರೂಪವು ಶುಭವಾದ ಅಥವಾ ಪಾಪಕವಾದ ಕರ್ಮಗಳನ್ನು ಮಾಡುವುದು. ಆ ಕರ್ಮದಿಂದ ಬೇರೆ ನಾಮರೂಪವು ಪ್ರತಿಸಂಧಿಸುವುದು. ಅದರಿಂದ [ಆ ನಾಮರೂಪಕ್ಕೆ] ಪಾಪಕರ್ಮಗಳಿಂದ ಬಿಡುಗಡೆಯಿಲ್ಲ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಯಾವನಾದರೂ ಪುರುಷನು ಬೇರೊಬ್ಬ ಪುರುಷನ ಬತ್ತವನ್ನೋ ಕಬ್ಬನ್ನೋ ಕದಿಯುವನು . . . . (ಎಂದು ಮೇಲಿನ ಮಾವಿನ ಉಪಮೆಯಂತೆಯೆ ಓದಿಕೊಳ್ಳಬೇಕು.) . . . . ಮಹಾರಾಜ, ಪುರುಷನೊಬ್ಬನು ಹೇಮಂತಕಾಲದಲ್ಲಿ ಬೆಂಕಿ ಹತ್ತಿಸಿ [ಮೈ] ಕಾಯಿಸಿಕೊಂಡು, [ಅದನ್ನು] ಆರಿಸದೆಯೇ ಹೊರಟುಹೋಗುವನು. ಆಗ ಆ ಬೆಂಕಿ ಬೇರೊಬ್ಬ ಪುರುಷನ ಹೊಲವನ್ನು ಸುಡುವುದು. ಆಗ, ಆ ಹೊಲದ ಯಜಮಾನನು ಅವನನ್ನು ಹಿಡಿದು ರಾಜನೆದುರಿಗೆ ತಂದು, 'ದೇವ, ಇವನಿಂದ ನನ್ನ ಹೊಲ ಸುಟ್ಟುಹೋಯಿತು' ಎನ್ನುವನು. ಅವನು 'ನಾನು ಇವನ ಹೊಲ ಸುಡಲಿಲ್ಲ. ನಾನು ಆರಿಸದೆ ಬಿಟ್ಟ ಆ ಬೆಂಕಿ ಬೇರೆ, ಇವನ ಹೊಲವನ್ನು ಸುಟ್ಟ ಬೆಂಕಿ ಬೇರೆ. ನಾನು ಶಿಕ್ಷೆಗೆ ಪಾತ್ರನಲ್ಲ' ಎಂದು ಹೇಳುವನು. ಏನು, ಮಹಾರಾಜ, ಆ ಪುರುಷನು ಶಿಕ್ಷೆಗೆ ಪಾತ್ರನೆ?"

"ಹೌದು, ಭನ್ತೇ, ಶಿಕ್ಷೆಗೆ ಪಾತ್ರ."

"ಅದೇಕೆ?"

"ಅವನು ಹೀಗೆ ಏನೇ ಹೇಳಿದರೂ, ಭನ್ತೇ, ಮೊದಲ ಬೆಂಕಿಯಿಂದ ಹುಟ್ಟಿದ ಆಮೇಲಿನ ಬೆಂಕಿಯು ದೆಸೆಯಿಂದ ಆ ಪುರುಷನು ಶಿಕ್ಷೆಗೆ ಪಾತ್ರನಾಗುವನು."

"ಅದರಂತೆಯೆ, ಮಹಾರಾಜ, ಈ ನಾಮರೂಪವು ಶುಭವಾದ ಅಥವಾ ಪಾಪಕವಾದ ಕರ್ಮಗಳನ್ನು ಮಾಡುವುದು. ಆ ಕರ್ಮದಿಂದ ಬೇರೆ ನಾಮರೂಪವು ಪ್ರತಿಸಂಧಿಸುವುದು. ಆದರಿಂದ [ಆ ನಾಮರೂಪಕ್ಕೆ] ಪಾಪಕರ್ಮಗಳಿಂದ ಬಿಡುಗಡೆಯಿಲ್ಲ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಯಾವನಾದರೂ ಪುರುಷನು ದೀಪವನ್ನು ತೆಗೆದುಕೊಂಡು ಮಹಡಿ ಹತ್ತಿ ಊಟಮಾಡುವನು. ಉರಿಯುವ ಆ ದೀಪವು [ಮನೆಗೆ ಹೊದಿಸಿದ] ಹುಲ್ಲನ್ನು ಉರಿಸುವುದು. ಉರಿಯುವ ಹುಲ್ಲಿನಿಂದ ಮನೆ ಉರಿಯುವುದು. ಉರಿಯುವ ಮನೆಯಿಂದ ಗ್ರಾಮ ಉರಿಯುವುದು. ಗ್ರಾಮದ ಜನರು ಆ ಪುರುಷನನ್ನು ಹಿಡಿದು, 'ಅಯ್ಯ, ಗ್ರಾಮವನ್ನೇಕೆ ಸುಟ್ಟೆ?' ಎನ್ನುವರು. ಅವನು 'ಭೋ, ಗ್ರಾಮವನ್ನು ನಾನು ಸುಡ

ಲಿಲ್ಲ. ನಾನು ಯಾವುದರ ಬೆಳಕಿನಲ್ಲಿ ಊಟಮಾಡಿದೆನೋ ಆ ದೀಪದ ಬೆಂಕಿ ಬೇರೆ, ಗ್ರಾಮವನ್ನು ಸುಟ್ಟ ಬೆಂಕಿ ಬೇರೆ' ಎನ್ನುವನು. ಅವರು ವಿವಾದಮಾಡುತ್ತ ನಿನ್ನ ಬಳಿ ಬರುವರು. ನೀನು ಯಾರ ಕಡೆ ತೀರ್ಪು ಕೊಡುವೆ, ಮಹಾರಾಜ?"

"ಗ್ರಾಮದ ಜನರ ಕಡೆ, ಭನ್ತೇ."

"ಅದೇಕೆ?"

"ಅವನು ಹೀಗೆ ಏನೇ ಹೇಳಿದರೂ, [ಮೊದಲನೆ]ಯದರಿಂದಲೇ ಆ [ಗ್ರಾಮವನ್ನು ಸುಟ್ಟ] ಬೆಂಕಿ ಹುಟ್ಟಿದುದು."

"ಅದರಂತೆಯೆ, ಮಹಾರಾಜ, ಈ ನಾಮರೂಪವು ಶುಭವಾದ ಅಥವಾ ಪಾಪಕವಾದ ಕರ್ಮಗಳನ್ನು ಮಾಡುವುದು. ಆ ಕರ್ಮದಿಂದ ಬೇರೆ ನಾಮರೂಪವು ಪ್ರತಿಸಂಧಿಸುವುದು. ಅದರಿಂದ [ಆ ನಾಮರೂಪಕ್ಕೆ] ಪಾಪಕರ್ಮಗಳಿಂದ ಬಿಡುಗಡೆಯಿಲ್ಲ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಯಾವನಾದರೂ ಪುರುಷನು ಎಳೆಯ ಹುಡುಗಿಯನ್ನು ವರಿಸಿ, ಶುಲ್ಕವನ್ನು ಕೊಟ್ಟು ಹೊರಟುಹೋಗುತ್ತಾನೆ. ಅನಂತರ ಅವಳು ವಯಸ್ಸು ಬಂದು ದೊಡ್ಡವಳಾಗುತ್ತಾಳೆ. ಆಗ ಬೇರೊಬ್ಬ ಪುರುಷನು ಶುಲ್ಕವನ್ನು ಕೊಟ್ಟು [ಅವಳನ್ನು] ಮದುವೆಮಾಡಿಕೊಳ್ಳುವನು. ಮೊದಲನೆಯವನು ಬಂದು, 'ಭೋ ಪುರುಷ, ನನ್ನ ಹೆಂಡತಿಯನ್ನು ಏಕೆ ಒಯ್ಯುವೆ?' ಎನ್ನುವನು. ಅವನು 'ನಾನು ನಿನ್ನ ಹೆಂಡತಿಯನ್ನು ಒಯ್ಯುತ್ತಿಲ್ಲ. ನೀನು ಶುಲ್ಕ ಕೊಟ್ಟು ವರಿಸಿದ ಎಳೆಯಳೂ ತರುಣಿಯೂ ಆದ [ಆ] ಹುಡುಗಿ ಬೇರೆ; ನಾನು ಶುಲ್ಕ ಕೊಟ್ಟು ವರಿಸಿದ, ವಯಸ್ಸು ಬಂದು ಬೆಳೆದ [ಈ] ಹುಡುಗಿ ಬೇರೆ' ಎನ್ನುವನು. ಅವರು ವಿವಾದಮಾಡುತ್ತ ನಿನ್ನ ಬಳಿ ಬರುವರು. ನೀನು ಯಾರ ಕಡೆ ತೀರ್ಪು ಕೊಡುವೆ, ಮಹಾರಾಜ?"

"ಮೊದಲನೆಯವನ ಕಡೆ, ಭನ್ತೇ."

"ಅದೇಕೆ?"

"ಎರಡನೆಯವನು ಹೀಗೆ ಏನೇ ಹೇಳಿದರೂ, [ಎಳೆಯ] ಅವಳಿಂದಲೇ ದೊಡ್ಡವಳು ಆದುದು."

"ಅದರಂತೆಯೆ, ಮಹಾರಾಜ, ಈ ನಾಮರೂಪವು ಶುಭವಾದ ಅಥವಾ ಪಾಪಕವಾದ ಕರ್ಮಗಳನ್ನು ಮಾಡುವುದು. ಆ ಕರ್ಮದಿಂದ ಬೇರೆ ನಾಮರೂಪವು ಪ್ರತಿಸಂಧಿಸುವುದು. ಅದರಿಂದ [ಆ ನಾಮರೂಪಕ್ಕೆ] ಪಾಪಕರ್ಮಗಳಿಂದ ಬಿಡುಗಡೆಯಿಲ್ಲ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಪುರುಷನೊಬ್ಬನು ಗೊಲ್ಲನ ಕೈಯಿಂದ ಹಾಲಿನ ಪಾತ್ರೆಯನ್ನು ಕೊಂಡು, ನಾಳೆ ತೆಗೆದುಕೊಂಡು ಹೋಗುವೆನೆಂದು ಅದೇ [ಗೊಲ್ಲನ] ಕೈಯಲ್ಲಿಯೇ [ಆ ಹಾಲಿನ ಪಾತ್ರೆಯನ್ನು] ಇಟ್ಟು ಹೊರಟು ಹೋಗುವನು. ಅದು ಮಾರನೆಯ ದಿನ ಮೊಸರಾಗಿ ಹೋಗುವುದು. ಅವನು ಬಂದು, 'ನನ್ನ ಹಾಲಿನ ಪಾತ್ರೆ ಕೊಡು' ಎನ್ನುವನು; ಅವನು ಮೊಸರನ್ನು ತೋರಿಸಲು, 'ನಾನು ನಿನ್ನ ಕೈಲಿ ಮೊಸರು ಕೊಡಲಿಲ್ಲ; ನನ್ನ ಹಾಲಿನ ಪಾತ್ರೆ ಕೊಡು' ಎನ್ನುವನು. ಅವನು 'ನನಗೆ ತಿಳಿಯದೆಯೆ ಆ ಹಾಲು ಮೊಸರಾಯಿತು' ಎನ್ನುವನು. ಅವರು ವಿವಾದಮಾಡುತ್ತ ನಿನ್ನ ಬಳಿ ಬರುವರು. ನೀನು ಯಾರ ಕಡೆ ತೀರ್ಪು ಕೊಡುವೆ, ಮಹಾರಾಜ?"

"ಗೊಲ್ಲನ ಕಡೆ, ಭನ್ತೇ."

"ಅದೇಕೆ?"

"ಎರಡನೆಯವನು ಹೀಗೆ ಏನೇ ಹೇಳಿದರೂ ಹಾಲಿನಿಂದಲೇ ಮೊಸರು ಆದುದು."

"ಅದರಂತೆಯೆ, ಮಹಾರಾಜ, ಈ ನಾಮರೂಪವು ಶುಭವಾದ ಅಥವಾ ಪಾಪಕವಾದ ಕರ್ಮಗಳನ್ನು ಮಾಡುವುದು. ಆ ಕರ್ಮದಿಂದ ಬೇರೆ ನಾಮರೂಪವು ಪ್ರತಿಸಂಧಿಸುವುದು. ಅದರಿಂದ [ಆ ನಾಮರೂಪಕ್ಕೆ] ಪಾಪಕರ್ಮಗಳಿಂದ ಬಿಡುಗಡೆಯಿಲ್ಲ."

"ನೀನು ಚತುರ, ಭನ್ತೇ ನಾಗಸೇನ."

೭

ರಾಜನು "ಭನ್ತೇ ನಾಗಸೇನ, ನೀನು ಪ್ರತಿಸಂಧಿಸುವೆಯ?" ಎಂದನು.

"ಸಾಕು, ಮಹಾರಾಜ. ಅದನ್ನು ಕೇಳುವುದರಿಂದ ಏನು [ಬರುವುದು]? '[ಸಾಯುವಾಗ] ನನಗೆ ಉಪಾದಾನವಿದ್ದರೆ ಪ್ರತಿಸಂಧಿಸುತ್ತೇನೆ, ಉಪಾದಾನವಿಲ್ಲದಿದ್ದರೆ ಪ್ರತಿಸಂಧಿಸುವುದಿಲ್ಲ' ಎಂದು ನಾನು ಮೊದಲೇ ಹೇಳಲಿಲ್ಲವೆ?"

"ಉಪಮಾನ ಕೊಡು."

"ಮಹಾರಾಜ, ಯಾವನಾದರೂ ಪುರುಷನು ರಾಜನಿಗೆ ಒಂದು ಸೇವೆ ಮಾಡುವನು. ರಾಜನು [ಅದಕ್ಕೆ] ತೃಪ್ತಿಪಟ್ಟು [ಅವನಿಗೆ] ಒಂದು ಅಧಿಕಾರವನ್ನು ದಾನಮಾಡುವನು. ಅವನು ಆ ಅಧಿಕಾರ[ದ ಬಲ]ದಿಂದ ಪಂಚೇಂದ್ರಿಯಸುಖಗಳಲ್ಲಿ ಲೀನನಾಗಿ ಮುಳುಗಿ ಬದುಕುವನು. ಅವನು 'ರಾಜನು ನನಗೆ [ನನ್ನ ಸೇವೆಗೆ] ಏನೂ ಬದಲು ಮಾಡಲಿಲ್ಲ' ಎಂದು ಜನರಿಗೆ ಹೇಳಿದರೆ, ಆ ಪುರುಷನು ಮಾಡುವುದು ಸರಿಯಾದುದೆ, ಮಹಾರಾಜ?"

"ಇಲ್ಲ, ಭನ್ತೇ."

"ಅದರಂತೆಯೆ, ಮಹಾರಾಜ, ಅದನ್ನು ಕೇಳುವುದರಿಂದ ಏನು [ಬರುವುದು]? '[ಸಾಯುವಾಗ] ನನಗೆ ಉಪಾದಾನವಿದ್ದರೆ ಪ್ರತಿಸಂಧಿಸುವೆನು, ಉಪಾದಾನವಿಲ್ಲದಿದ್ದರೆ ಪ್ರತಿಸಂಧಿಸುವುದಿಲ್ಲ' ಎಂದು ನಾನು ಮೊದಲೇ ಹೇಳಲಿಲ್ಲವೆ?"

"ನೀನು ಕುಶಲಿ, ಭನ್ತೇ ನಾಗಸೇನ."

೮

ರಾಜನು "ಭನ್ತೇ ನಾಗಸೇನ, ನೀನು 'ನಾಮರೂಪ' ಎಂದು ಹೇಳಿದೆ. ಇಲ್ಲಿ 'ನಾಮ' ಯಾವುದು? 'ರೂಪ' ಯಾವುದು?" ಎಂದನು.

"ಮಹಾರಾಜ, ಇಲ್ಲಿ, ಸ್ಥೂಲವಾದುದು 'ರೂಪ'; ಸೂಕ್ಷ್ಮವೂ ಚಿತ್ತಚೇತಸಿಕವೂ ಆದ ಧರ್ಮವು 'ನಾಮ'."

"ಭನ್ತೇ ನಾಗಸೇನ, ನಾಮವೇ ಆಗಲಿ ರೂಪವೇ ಆಗಲಿ [ಪ್ರತ್ಯೇಕವಾಗಿ] ಪ್ರತಿಸಂಧಿಸುವುದಿಲ್ಲ; ಅದೇಕೆ?"

"ಈ ಧರ್ಮಗಳು ಒಂದನ್ನೊಂದು ಆಶ್ರಯಿಸಿವೆ, ಮಹಾರಾಜ. [ಅದರಿಂದ] ಒಟ್ಟಾಗಿ ಪ್ರತಿಸಂಧಿಸುವುವು."

"ಉಪಮಾನ ಕೊಡು."

"ಮಹಾರಾಜ, ಕೋಳಿಗೆ ಮೊಟ್ಟೆಯಾಗಲಿ ಮೊಟ್ಟೆಯ ರಸವಾಗಲಿ ಪ್ರತ್ಯೇಕವಾಗಿ ಆಗುವುದಿಲ್ಲ. ಮೊಟ್ಟೆಯ ರಸವೂ ಮೊಟ್ಟೆಯೂ ಒಂದನ್ನೊಂದು ಆಶ್ರಯಿಸಿಕೊಂಡು ಒಂದೇ ಸಲ [ಒಟ್ಟಿಗೆ] ಹುಟ್ಟುವುದು. ಅದರಂತೆಯೇ, ಮಹಾರಾಜ, ನಾಮ ಆಗದ ಕಡೆ ರೂಪ ಆಗುವುದಿಲ್ಲ. ನಾಮ ರೂಪಗಳು ಎರಡೂ ಒಂದನ್ನೊಂದು ಆಶ್ರಯಿಸಿಕೊಂಡು ಅವು ಒಟ್ಟಿಗೆ ಹುಟ್ಟುವುವು. ಬಹುಕಾಲದಿಂದ ಹೀಗೆಯೇ ಸಂಭವಿಸುತ್ತಿದೆ."

"ನೀನು ಚತುರ, ಭನ್ತೇ ನಾಗಸೇನ."

೯

ರಾಜನು "ಭನ್ತೇ ನಾಗಸೇನ, 'ಬಹುಕಾಲ'ವೆಂದು ನೀನು ಹೇಳಿದೆ. ಈ 'ಕಾಲ'ವೆಂಬ ಹೆಸರೇನು?" ಎಂದನು.

"ಹಿಂದಿನ ಕಾಲ, ಮುಂದಿನ ಕಾಲ, ಈಗಿನ ಕಾಲ, ಮಹಾರಾಜ."

"ಏನು? 'ಕಾಲ' [ಎಂಬುದು] ಉಂಟೆ, ಭನ್ತೇ?"

"ಕೆಲವು 'ಕಾಲ' ಇವೆ; ಕೆಲವು ['ಕಾಲ'] ಇಲ್ಲ."

"ಯಾವುದು ಇವೆ, ಭನ್ತೇ? ಯಾವುದು ಇಲ್ಲ?"

"ಮಹಾರಾಜ, ಯಾರಿಗೆ ಸಂಸ್ಕಾರಗಳು ಹಿಂದಿನದಾಗಿ, ಕಳೆದು ಹೋಗಿ, ನಿಂತುಹೋಗಿ, ಬದಲಾಯಿಸಿ ಹೋಗಿವೆಯೋ ಅವರಿಗೆ 'ಕಾಲ'ವೆಂಬುದು ಇಲ್ಲ. [ಆದರೆ] ವಿಪಾಕವನ್ನು ಉಂಟುಮಾಡುತ್ತಿರುವ [ಮನೋ]ಧರ್ಮವುಳ್ಳವರಿಗೆ, ವಿಪಾಕವನ್ನು ಉಂಟುಮಾಡುವ ಗುಣವುಳ್ಳ ಮನೋಧರ್ಮವುಳ್ಳವರಿಗೆ, ಬೇರೆ ತೆರದಲ್ಲಿ ಪ್ರತಿಸಂಧಿಯನ್ನು ಕೊಡುವ [ಮನೋಧರ್ಮವುಳ್ಳವರಿಗೆ,] 'ಕಾಲ'ವೆಂಬುದು ಉಂಟು. ಸತ್ತು ಬೇರೆ ಕಡೆ ಹುಟ್ಟುವ ಸತ್ತ್ವಗಳಿಗೆ 'ಕಾಲ'ವೆಂಬುದು ಉಂಟು. ಸತ್ತು ಬೇರೆ ಕಡೆ ಹುಟ್ಟದ ಸತ್ತ್ವಗಳಿಗೆ 'ಕಾಲ'ವೆಂಬುದು ಇಲ್ಲ. ಪರಿನಿರ್ವಾಣವನ್ನು ಪಡೆದ ಸತ್ತ್ವಗಳಿಗೆ, ಪರಿನಿರ್ವೃತಾತ್ಮರಿಗೆ 'ಕಾಲ'ವೆಂಬುದು ಇಲ್ಲ."

"ನೀನು ಜಾಣ, ಭನ್ತೇ ನಾಗಸೇನ."

[ಎರಡನೆಯ ವರ್ಗ ಮುಗಿಯಿತು.]

ವರ್ಗ ಮೂರು.

೧

ರಾಜನು "ಭನ್ತೇ ನಾಗಸೇನ, ಹಿಂದಿನ ಕಾಲಕ್ಕೆ ಮೂಲವಾವುದು? ಮುಂದಿನ ಕಾಲಕ್ಕೆ ಮೂಲ ಯಾವುದು? ಈಗಿನ ಕಾಲಕ್ಕೆ ಯಾವುದು ಮೂಲ?" ಎಂದನು.

"ಮಹಾರಾಜ, ಹಿಂದಿನ, ಮುಂದಿನ ಮತ್ತು ಈಗಿನ ಕಾಲಗಳಿಗೆ ಅವಿದ್ಯೆಯು ಮೂಲ. ಅವಿದ್ಯೆ ಕಾರಣವಾಗಿ ಸಂಸ್ಕಾರ, ಸಂಸ್ಕಾರ ಕಾರಣವಾಗಿ ವಿಜ್ಞಾನ, ವಿಜ್ಞಾನ ಕಾರಣವಾಗಿ ನಾಮರೂಪ, ನಾಮರೂಪ ಕಾರಣವಾಗಿ ಷಡಾಯತನ, ಷಡಾಯತನ ಕಾರಣವಾಗಿ ಸ್ಪರ್ಶ, ಸ್ಪರ್ಶ ಕಾರಣವಾಗಿ ವೇದನೆ, ವೇದನೆ ಕಾರಣವಾಗಿ ತೃಷ್ಣೆ, ತೃಷ್ಣೆ ಕಾರಣವಾಗಿ ಉಪಾದಾನ, ಉಪಾದಾನ ಕಾರಣವಾಗಿ ಭವ, ಭವ ಕಾರಣವಾಗಿ ಜಾತಿ, ಜಾತಿ ಕಾರಣವಾಗಿ ಜರಾ-ಮರಣ-ಶೋಕ-ಪರಿದೇವ-ದುಃಖ-ದೌರ್ಮನಸ್ಯ-ಉಪಾಯಾಸಗಳು ಸಂಭವಿಸುವುವು. ಹೀಗೆ, ಈ ಸರ್ವ ಕಾಲದ ಹಿಂದಿನ ಕೊನೆ ತಿಳಿಯುವುದಿಲ್ಲ."

"ನೀನು ಚತುರ, ಭನ್ತೇ ನಾಗಸೇನ."

೨

ರಾಜನು "ಭನ್ತೇ ನಾಗಸೇನ, 'ಕಾಲದ ಹಿಂದಿನ ಕೊನೆ ತಿಳಿಯುವುದಿಲ್ಲ'ವೆಂದು ನೀವು ಹೇಳುವಿರಿ. ಅದಕ್ಕೆ ಉಪಮಾನ ಕೊಡು." ಎಂದನು.

"ಮಹಾರಾಜ, ಪುರುಷನು ಬಲು ಸಣ್ಣ ಬೀಜವನ್ನು ನೆಲದಲ್ಲಿ ನೆಡುವನು. ಅದರಿಂದ ಮೊಳಕೆ ಮೇಲೆದ್ದು ಕ್ರಮವಾಗಿ ವೃದ್ಧಿಯನ್ನೂ ಬೆಳುವಳಿಗೆಯನ್ನೂ ವೈಪುಲ್ಯವನ್ನೂ ಹೊಂದಿ ಫಲಕೊಡುವುದು. ಅದರ ಬೀಜವನ್ನು ಹಿಡಿದು ಪುನಃ ನಟ್ಟರೆ, ಅದರಿಂದಲೂ ಮೊಳಕೆ ಮೇಲೆದ್ದು ಕ್ರಮವಾಗಿ ವೃದ್ಧಿಯನ್ನೂ ಬೆಳುವಳಿಗೆಯನ್ನೂ ವೈಪುಲ್ಯವನ್ನೂ ಹೊಂದಿ ಫಲಕೊಡುವುದು. ಹೀಗೆ ಈ ರೀತಿಯಾದ ಸಂತತಿಗೆ ಕೊನೆಯುಂಟೆ?"

"ಇಲ್ಲ, ಭನ್ತೇ."

"ಹೀಗೆಯೇ, ಮಹಾರಾಜ, ಕಾಲದ ಹಿಂದಿನ ಕೊನೆಯೂ ತಿಳಿಯುವುದಿಲ್ಲ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಕೋಳಿಯಿಂದ ಮೊಟ್ಟೆ, ಮೊಟ್ಟೆಯಿಂದ ಕೋಳಿ, ಕೋಳಿಯಿಂದ ಮೊಟ್ಟೆ—ಹೀಗೆ ಈ ರೀತಿಯಾದ ಸಂತತಿಗೆ ಕೊನೆಯುಂಟೆ?"

"ಇಲ್ಲ, ಭನ್ತೇ."

"ಹೀಗೆಯೇ, ಮಹಾರಾಜ, ಕಾಲದ ಹಿಂದಿನ ಕೊನೆಯೂ ತಿಳಿಯುವುದಿಲ್ಲ."

"ಇನ್ನೊಂದು ಉಪಮಾನ ಕೊಡು."

ಸ್ಥವಿರನು ನೆಲದಲ್ಲಿ ಚಕ್ರವನ್ನು ಬರೆದು, "ಮಹಾರಾಜ, ಈ ಚಕ್ರಕ್ಕೆ ಕೊನೆಯುಂಟೆ?" ಎಂದು ಮಿಲಿಂದರಾಜನನ್ನು ಕೇಳಿದನು.

"ಇಲ್ಲ, ಭನ್ತೇ."

"ಇದರಂತೆಯೇ, ಮಹಾರಾಜ, ಭಗವಂತನು ಈ ಚಕ್ರಗಳನ್ನು ಕುರಿತು ಹೇಳಿದನು: ಕಣ್ಣೂ ರೂಪಗಳೂ ಕಾರಣವಾಗಿ ಚಕ್ಷುವಿಜ್ಞಾನವು ಎದ್ದೇಳುವುದು; [ಈ] ಮೂರರ ಸಂಗತಿಯು ಸ್ಪರ್ಶ; ಸ್ಪರ್ಶ ಕಾರಣವಾಗಿ ವೇದನೆ, ವೇದನೆ ಕಾರಣವಾಗಿ ತೃಷ್ಣೆ, ತೃಷ್ಣೆ ಕಾರಣವಾಗಿ ಕರ್ಮ; ಕರ್ಮದಿಂದ ಪುನಃ ಕಣ್ಣು ಹುಟ್ಟುವುದು. ಹೀಗೆ, ಈ ರೀತಿಯಾದ ಸಂತತಿಗೆ ಕೊನೆಯುಂಟೆ?"

"ಇಲ್ಲ, ಭನ್ತೇ."

"ಮಿಕ್ಕ ಪಂಚೇಂದ್ರಿಯಗಳೂ ಅವವುಗಳ ವಿಷಯಗಳೂ ಕಾರಣಗಳಾಗಿ ಇತರ ಇಂದ್ರಿಯವಿಜ್ಞಾನಗಳು ಹುಟ್ಟುವುವು. ಇಂದ್ರಿಯ, ವಿಷಯ, ಇಂದ್ರಿಯವಿಜ್ಞಾನ, ಇವುಗಳ ಸಂಗತಿಯಿಂದ ಸ್ಪರ್ಶ ಹುಟ್ಟಿ, ಸ್ಪರ್ಶ ಕಾರಣವಾಗಿ ವೇದನೆಯೂ, ವೇದನೆ ಕಾರಣವಾಗಿ ತೃಷ್ಣೆಯೂ, ತೃಷ್ಣೆ ಕಾರಣವಾಗಿ ಕರ್ಮವೂ, ಆ ಆ ಕರ್ಮಗಳಿಂದ ಪುನಃ ಆ ಆ ಇಂದ್ರಿಯಗಳೂ ಹುಟ್ಟುವುವು. ಹೀಗೆ ಈ ರೀತಿಯಾದ ಸಂತತಿಗೆ ಕೊನೆಯುಂಟೆ?"

"ಇಲ್ಲ, ಭನ್ತೇ."

"ಹೀಗೆಯೇ, ಮಹಾರಾಜ, ಕಾಲದ ಹಿಂದಿನ ಕೊನೆಯೂ ತಿಳಿಯುವುದಿಲ್ಲ."

"ನೀನು ಕುಶಲಿ, ಭನ್ತೇ ನಾಗಸೇನ."

೩

ರಾಜನು "ಭನ್ತೇ ನಾಗಸೇನ, 'ಹಿಂದಿನ ಕೊನೆ ತಿಳಿಯಲಾಗುವುದಿಲ್ಲ' ಎಂದು ನೀವು ಹೇಳುವಿರಿ. ಆ 'ಹಿಂದಿನ ಕೊನೆ' ಎಂತಹದು?" ಎಂದನು.

"ಕಳೆದುಹೋದ ಕಾಲದ ಹಿಂದಿನ ಕೊನೆ, ಮಹಾರಾಜ."

"ಭನ್ತೇ ನಾಗಸೇನ, 'ಹಿಂದಿನ ಕೊನೆ ತಿಳಿಯುವುದಿಲ್ಲ' ಎಂದು ನೀವು ಹೇಳುವಿರಿ. ಏನು, ಭನ್ತೇ, ಎಲ್ಲದರ ಹಿಂದಿನ ಕೊನೆಯೂ ತಿಳಿಯುವುದಿಲ್ಲವೆ?"

"ಕೆಲವು ತಿಳಿಯುತ್ತದೆ; ಕೆಲವು ತಿಳಿಯುವುದಿಲ್ಲ, ಮಹಾರಾಜ."

"ಯಾವುದು ತಿಳಿಯುತ್ತದೆ, ಯಾವುದು ತಿಳಿಯುವುದಿಲ್ಲ, ಭನ್ತೇ?"

"ಇದಕ್ಕೆ ಮೊದಲು, ಮಹಾರಾಜ, ಎಲ್ಲವೂ ಎಲ್ಲ ಕಡೆಯೂ ಅವಿದ್ಯೆಯಾಗಿತ್ತು; ಅದರ ಹಿಂದಿನ ಕೊನೆ ತಿಳಿಯುವುದಿಲ್ಲ. [ಆದರೆ] ಯಾವುದು ಇಲ್ಲದೆ ಇದ್ದು ಸಂಭವಿಸುವುದು, ಆಗಿ ಪುನಃ ನಾಶವಾಗುವುದು, ಅದರ ಹಿಂದಿನ ಕೊನೆ ತಿಳಿಯುವುದು."

"ಭನ್ತೇ ನಾಗಸೇನ, ಇಲ್ಲದೆ ಇದ್ದು ಸಂಭವಿಸುವ ಅದು, ಆಗಿ ಪುನಃ ನಾಶವಾಗುವ ಅದು—ಇವು ಎರಡು ಕಡೆಯೂ ಕತ್ತರಿಸಲ್ಪಟ್ಟು ನಾಶವಾಗುವುವೆ?"

"ಎರಡು ಕಡೆಯೂ ಕತ್ತರಿಸಿದುದು ನಾಶವಾಗುವುದಾದರೆ, ಎರಡು ಕಡೆಯೂ ಕತ್ತರಿಸಿದುದನ್ನು ಬೆಳೆಸಲು ಶಕ್ಯವೆ, ಮಹಾರಾಜ?"

"ಹೌದು, ಅವನ್ನು ಬೆಳೆಸಲು ಶಕ್ಯ. ನಾನು ಅದನ್ನು ಕೇಳಲಿಲ್ಲ, ಭನ್ತೇ. [ಕತ್ತರಿಸಿದ] ಕೊನೆಯಿಂದ ಬೆಳೆಸಲು ಶಕ್ಯವೆ?"

"ಹೌದು, ಬೆಳೆಸಲು ಶಕ್ಯ."

"ಉಪಮಾನ ಕೊಡು."

ಆಗ ಸ್ಥವಿರನು ಎಲ್ಲಾ ದುಃಖಸ್ಕಂಧಗಳಿಗೂ ಸ್ಕಂಧಗಳು ಬೀಜಗಳೆಂದು ವೃಕ್ಷದ ಉಪಮಾನವನ್ನು ಹೇಳಿದನು.

"ನೀನು ಜಾಣ, ಭನ್ತೇ ನಾಗಸೇನ."

೪

ರಾಜನು "ಭನ್ತೇ ನಾಗಸೇನ, ಜನಿಸುವ ಸಂಸ್ಕಾರಗಳು ಯಾವುದಾದರೂ ಉಂಟೆ?" ಎಂದನು.

"ಹೌದು, ಮಹಾರಾಜ. ಜನಿಸುವ ಸಂಸ್ಕಾರಗಳು ಉಂಟು."

"ಅವು ಯಾವುವು, ಭನ್ತೇ?"

"ಮಹಾರಾಜ, ಕಣ್ಣೂ ರೂಪಗಳೂ ಇದ್ದರೆ ಚಕ್ಷುವಿಜ್ಞಾನವಾಗುವುದು; ಚಕ್ಷುವಿಜ್ಞಾನವಿದ್ದರೆ ಚಕ್ಷುಸಂಸ್ಪರ್ಶವಾಗುವುದು; ಚಕ್ಷುಸಂಸ್ಪರ್ಶವಿದ್ದರೆ ವೇದನೆಯಾಗುವುದು; ವೇದನೆಯಿದ್ದರೆ ತೃಷ್ಣೆಯಾಗುವುದು; ತೃಷ್ಣೆಯಿದ್ದರೆ ಉಪಾದಾನವಾಗುವುದು; ಉಪಾದಾನವಿದ್ದರೆ ಭವವಾಗುವುದು; ಭವವಿದ್ದರೆ ಜಾತಿಯಾಗುವುದು; ಜಾತಿಯಿದ್ದರೆ ಜರಾ–ಮರಣ–ಶೋಕ–ಪರಿದೇವ–ದುಃಖ–ದೌರ್ಮನಸ್ಯ–ಉಪಾಯಾಸಗಳು ಸಂಭವಿಸುವುವು; ಹೀಗೆ ಸಮಸ್ತ ದುಃಖಸ್ಕಂಧವೂ ಏಳುವುದು. [ಆದರೆ] ಕಣ್ಣೂ ರೂಪಗಳೂ ಇಲ್ಲದಿದ್ದರೆ, ಮಹಾರಾಜ, ಚಕ್ಷುವಿಜ್ಞಾನವಾಗುವುದಿಲ್ಲ; ಚಕ್ಷುವಿಜ್ಞಾನವಿಲ್ಲದಿದ್ದರೆ ಚಕ್ಷುಸಂಸ್ಪರ್ಶವಾಗುವುದಿಲ್ಲ; ಚಕ್ಷುಸಂಸ್ಪರ್ಶವಿಲ್ಲದಿದ್ದರೆ ವೇದನೆಯಾಗುವುದಿಲ್ಲ; ವೇದನೆಯಿಲ್ಲದಿದ್ದರೆ ತೃಷ್ಣೆಯಾಗುವುದಿಲ್ಲ; ತೃಷ್ಣೆಯಿಲ್ಲದಿದ್ದರೆ ಉಪಾದಾನವಾಗುವುದಿಲ್ಲ; ಉಪಾದಾನವಿಲ್ಲದಿದ್ದರೆ ಭವವಾಗುವುದಿಲ್ಲ; ಭವವಿಲ್ಲದಿದ್ದರೆ ಜಾತಿಯಾಗುವುದಿಲ್ಲ; ಜಾತಿಯಿಲ್ಲದಿದ್ದರೆ ಜರಾ–ಮರಣ–ಶೋಕ–ಪರಿದೇವ–ದುಃಖ ದೌರ್ಮನಸ್ಯ–ಉಪಾಯಾಸಗಳು ಆಗುವುದಿಲ್ಲ; ಹೀಗೆ ಸಮಸ್ತ ದುಃಖ ಸ್ಕಂಧವೂ ನಿರೋಧವಾಗುವುದು."

"ನೀನು ಚತುರ, ಭನ್ತೇ ನಾಗಸೇನ."

೫

ರಾಜನು "ಭನ್ತೇ ನಾಗಸೇನ, ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುದಾದರೂ ಉಂಟೆ?" ಎಂದನು.

"ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುವೂ ಇಲ್ಲ, ಮಹಾರಾಜ. ಸಂಸ್ಕಾರಗಳು ಭವವಿದ್ದೇ ಜನಿಸುತ್ತವೆ."

"ಉಪಮಾನ ಕೊಡು."

"ಏನೆಂಬೆ, ಮಹಾರಾಜ? ನೀನು ಕುಳಿತಿರುವ ಈ ಮನೆಯು ಭವವಿಲ್ಲದೆ ಹುಟ್ಟಿತೇನು?"

"ಇಲ್ಲಿ ಯಾವುದೂ ಭವವಿಲ್ಲದೆ ಹುಟ್ಟಲಿಲ್ಲ, ಭನ್ತೇ; ಭವವಿದ್ದೇ ಹುಟ್ಟಿತು. ಈ ಮರಗಳು ಕಾಡಿನಲ್ಲಿ ಇದ್ದುವು; ಈ ಮಣ್ಣು ನೆಲದಲ್ಲಿತ್ತು; ಹೆಂಗಸರೂ ಗಂಡಸರೂ ದುಡಿದು ಕೆಲಸಮಾಡಿ ಈ ಮನೆಯನ್ನು ಮಾಡಿದರು."

"ಅದರಂತೆಯೇ, ಮಹಾರಾಜ, ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುವೂ ಇಲ್ಲ; ಸಂಸ್ಕಾರಗಳು ಭವವಿದ್ದೇ ಜನಿಸುತ್ತವೆ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಗಿಡ ಮರಗಳನ್ನು ಭೂಮಿಯಲ್ಲಿ ನೆಟ್ಟರೆ, [ಅವು] ಕ್ರಮವಾಗಿ ಬೆಳೆದು ದೊಡ್ಡವಾಗಿ ವಿಪುಲವಾಗಿ ಹೂಗಳನ್ನೂ ಹಣ್ಣುಗಳನ್ನೂ ಕೊಡುವುವು. ಆ ವೃಕ್ಷಗಳು ಭವವಿಲ್ಲದೆ ಹುಟ್ಟಲಿಲ್ಲ. ಭವವಿದ್ದೇ ಹುಟ್ಟಿದುವು. ಅದರಂತೆಯೇ, ಮಹಾರಾಜ, ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುವೂ ಇಲ್ಲ; ಸಂಸ್ಕಾರಗಳು ಭವವಿದ್ದೇ ಜನಿಸುತ್ತವೆ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಕುಂಬಾರನು ನೆಲದಿಂದ ಮಣ್ಣನ್ನು ಎತ್ತಿ ನಾನಾ ತೆರದ ಪಾತ್ರೆಗಳನ್ನು ಮಾಡುವನು. ಆ ಪಾತ್ರೆಗಳು ಭವವಿಲ್ಲದೆ ಹುಟ್ಟಲಿಲ್ಲ; ಭವವಿದ್ದೇ ಹುಟ್ಟಿದುವು. ಅದರಂತೆಯೇ, ಮಹಾರಾಜ, ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುವೂ ಇಲ್ಲ; ಸಂಸ್ಕಾರಗಳು ಭವವಿದ್ದೇ ಜನಿಸುತ್ತವೆ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ವೀಣೆಗೆ ಪತ್ರವಿಲ್ಲದಿದ್ದರೆ, ಚರ್ಮವಿಲ್ಲದಿದ್ದರೆ, ದ್ರೋಣಿಯಿಲ್ಲದಿದ್ದರೆ, ದಂಡವಿಲ್ಲದಿದ್ದರೆ, ಉಪವೀಣೆಯಿಲ್ಲದಿದ್ದರೆ, ತಂತಿಯಿಲ್ಲದಿದ್ದರೆ, ಕಮಾನು ಇಲ್ಲದಿದ್ದರೆ, ಪುರುಷನ ಸಾಮರ್ಥ್ಯ ಪ್ರಯತ್ನಗಳಿಲ್ಲದಿದ್ದರೆ, ಶಬ್ದ ಹುಟ್ಟುವುದೆ?"

"ಇಲ್ಲ, ಭನ್ತೇ."

"ಇವು ಎಲ್ಲವೂ ಇದ್ದರೆ, ಶಬ್ದ ಹುಟ್ಟುವುದೆ?"

"ಹೌದು, ಭನ್ತೇ, ಹುಟ್ಟುವುದು."

"ಅದರಂತೆಯೇ, ಮಹಾರಾಜ, ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುವೂ ಇಲ್ಲ; ಸಂಸ್ಕಾರಗಳು ಭವವಿದ್ದೇ ಜನಿಸುತ್ತವೆ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಅರಣಿಯಿಲ್ಲದಿದ್ದರೆ, ಅರಣಿಪೋತಕವಿಲ್ಲದಿದ್ದರೆ, ಅರಣಿಯುತ್ನಕವಿಲ್ಲದಿದ್ದರೆ, ಉತ್ತರಾರಣಿಯಿಲ್ಲದಿದ್ದರೆ, ಚೋಳಕವಿಲ್ಲದಿದ್ದರೆ, ಪುರುಷನ ಸಾಮರ್ಥ್ಯಪ್ರಯತ್ನಗಳಿಲ್ಲದಿದ್ದರೆ, ಅಗ್ನಿ ಹುಟ್ಟುವುದೆ?"

"ಇಲ್ಲ, ಭನ್ತೇ."

"ಇವೆಲ್ಲವೂ ಇದ್ದರೆ, ಅಗ್ನಿ ಹುಟ್ಟುವುದೆ?"

"ಹೌದು, ಹುಟ್ಟುವುದು, ಭನ್ತೇ."

"ಅದರಂತೆಯೇ, ಮಹಾರಾಜ, ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುವೂ ಇಲ್ಲ; ಸಂಸ್ಕಾರಗಳು ಭವವಿದ್ದೇ ಜನಿಸುತ್ತವೆ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಮಣಿಯಿಲ್ಲದಿದ್ದರೆ, ಬಿಸಿಲಿಲ್ಲದಿದ್ದರೆ, ಗೋಮಯವಿಲ್ಲದಿದ್ದರೆ, ಬೆಂಕಿ ಹುಟ್ಟುವುದೆ?"

"ಇಲ್ಲ, ಭನ್ತೇ."

"ಇದೆಲ್ಲವೂ ಇದ್ದರೆ, ಬೆಂಕಿ ಹುಟ್ಟುವುದೆ?"

"ಹೌದು, ಹುಟ್ಟುವುದು, ಭನ್ತೇ."

"ಅದರಂತೆಯೇ, ಮಹಾರಾಜ, ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುವೂ ಇಲ್ಲ; ಸಂಸ್ಕಾರಗಳು ಭವವಿದ್ದೇ ಜನಿಸುತ್ತವೆ."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ಕನ್ನಡಿಯಿಲ್ಲದಿದ್ದರೆ, ಬೆಳಕಿಲ್ಲದಿದ್ದರೆ, ಮುಖವಿಲ್ಲದಿದ್ದರೆ, ತನ್ನ ಬಿಂಬ ಹುಟ್ಟುವುದೆ?"

"ಇಲ್ಲ, ಭನ್ತೇ."

"ಇದೆಲ್ಲವೂ ಇದ್ದರೆ, ಬಿಂಬ ಹುಟ್ಟುವುದೆ?"

"ಹೌದು, ಹುಟ್ಟುವುದು, ಭನ್ತೇ."

"ಅದರಂತೆಯೇ, ಮಹಾರಾಜ, ಭವವಿಲ್ಲದೆ ಜನಿಸುವ ಸಂಸ್ಕಾರಗಳು ಯಾವುವೂ ಇಲ್ಲ; ಸಂಸ್ಕಾರಗಳು ಭವವಿದ್ದೇ ಜನಿಸುತ್ತವೆ."

"ನೀನು ಚತುರ, ಭನ್ತೇ ನಾಗಸೇನ."

೬

ರಾಜನು "ಭನ್ತೇ ನಾಗಸೇನ, ವೇದಕ [ಎಂಬುದು] ಸಿಕ್ಕುವುದೆ?" ಎಂದನು.

"ಈ 'ವೇದಕ' ಎಂಬುದು ಏನು, ಮಹಾರಾಜ?"

"ಕಣ್ಣಿನಿಂದ ರೂಪವನ್ನು ಕಂಡು, ಕಿವಿಯಿಂದ ಶಬ್ದವನ್ನು ಕೇಳಿ, ಮೂಗಿನಿಂದ ಗಂಧವನ್ನು ಮೂಸಿ, ನಾಲಗೆಯಿಂದ ರಸವನ್ನು ಸವಿದು, ದೇಹದಿಂದ ಸ್ಪೃಷ್ಟವ್ಯವನ್ನು ಮುಟ್ಟಿ, ಮನಸ್ಸಿನಿಂದ ಧರ್ಮವನ್ನು ವಿಜಾನಿಸುವ ಅಭ್ಯಂತರವಾದ ಜೀವ[ವು ವೇದಕ], ಭನ್ತೇ. ನಾವು ಈ ಪ್ರಾಸಾದದಲ್ಲಿ ಕುಳಿತು ಯಾವಯಾವ ಕಿಟಕಿಗಳಿಂದ ಕಾಣಲು ಬಯಸಿದರೂ ಆ ಆ ಕಿಟಕಿಗಳಿಂದ ಕಾಣಬಲ್ಲ ಹಾಗೆ; ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರದ ಕಡೆಯ ಕಿಟಕಿಗಳಿಂದ ಕಾಣಬಲ್ಲ ಹಾಗೆ; ಹಾಗೆಯೇ, ಭನ್ತೇ, ಈ ಅಭ್ಯಂತರವಾದ ಜೀವವು ಯಾವ ಯಾವ ದ್ವಾರಗಳಿಂದ ಕಾಣಲು ಬಯಸಿದರೂ ಆ ಆ ದ್ವಾರಗಳಿಂದ ಕಾಣಬಲ್ಲುದು."

ಸ್ಥವಿರನು "ಐದು ದ್ವಾರಗಳನ್ನು ಕುರಿತು ಹೇಳುವೆನು, ಮಹಾರಾಜ. ಅದನ್ನು ಕೇಳು. ಸಾಧುವಾದುದಕ್ಕೆ ಮನಸ್ಸು ಕೊಡು. ನಾವು ಈ ಪ್ರಾಸಾದದಲ್ಲಿ ಕುಳಿತು ಕಾಣಲು ಬಯಸಿದ ಕಿಟಕಿಗಳಿಂದ ರೂಪವನ್ನು ಕಾಣಬಲ್ಲ ಹಾಗೆ, ಯಾವ ದಿಕ್ಕಿನ ಕಿಟಕಿಯಿಂದ ಬೇಕಾದರೂ ರೂಪವನ್ನು ಕಾಣಬಲ್ಲ ಹಾಗೆ, ಅಭ್ಯಂತರವಾದ ಜೀವವು ಕಣ್ಣಿನಿಂದ ರೂಪವನ್ನು ಕಾಣಬಲ್ಲುದಾದರೆ; [ಈ] ಅಭ್ಯಂತರವಾದ ಜೀವವು ಕಿವಿಯಿಂದಲೂ ರೂಪವನ್ನು ಕಾಣಬಲ್ಲುದು; ಮೂಗಿನಿಂದಲೂ ರೂಪವನ್ನು ಕಾಣಬಲ್ಲುದು; ನಾಲಗೆಯಿಂದಲೂ ರೂಪವನ್ನು ಕಾಣಬಲ್ಲುದು; ದೇಹದಿಂದಲೂ ರೂಪವನ್ನು ಕಾಣಬಲ್ಲುದು; ಮನಸ್ಸಿನಿಂದಲೂ ರೂಪವನ್ನು ಕಾಣಬಲ್ಲುದು; [ಅಲ್ಲವೆ]? [ಹಾಗೆಯೇ ಈ ಅಭ್ಯಂತರವಾದ ಜೀವವು] ಕಣ್ಣು, ಕಿವಿ, ಮೂಗು, ನಾಲಗೆ, ದೇಹ, ಮನಸ್ಸುಗಳಿಂದಲೂ ಶಬ್ದವನ್ನು

ಕೇಳಬಲ್ಲುದಲ್ಲವೆ? ಈ ಆರು ಇಂದ್ರಿಯಗಳು ಪ್ರತಿಯೊಂದರಿಂದಲೂ ಗಂಧವನ್ನು ಮೂಸಬಲ್ಲುದಲ್ಲವೆ? ಪ್ರತಿ ಇಂದ್ರಿಯದಿಂದಲೂ ರಸವನ್ನು ಸವಿಯಬಲ್ಲುದಲ್ಲವೆ? ಪ್ರತಿ ಇಂದ್ರಿಯದಿಂದಲೂ ಸ್ಪ್ರಷ್ಟವ್ಯವನ್ನು ಮುಟ್ಟಬಲ್ಲುದಲ್ಲವೆ? ಪ್ರತಿ ಇಂದ್ರಿಯದಿಂದಲೂ ಧರ್ಮವನ್ನು ವಿಜಾನಿಸಬಲ್ಲುದಲ್ಲವೆ?"

"ಇಲ್ಲ, ಭನ್ತೇ."

"ಇವು, ಮಹಾರಾಜ, ಮೊದಲನೆಯದು ಕಡೆಯದಕ್ಕೂ ಕಡೆಯದು ಮೊದಲನೆಯದಕ್ಕೂ ಸೇರಿಕೊಂಡಿಲ್ಲ. ಮಹಾರಾಜ, ನಾವು ಈ ಪ್ರಾಸಾದದಲ್ಲಿ ಕುಳಿತು ತೆರೆದಿಕ್ಕಿದ ಕಿಟಕಿಗಳಿಂದ ಬಯಲಿಗೆ ಮುಖ ಮಾಡಿ ರೂಪಗಳನ್ನು ಹೆಚ್ಚು ಸ್ಪಷ್ಟವಾಗಿ ಕಾಣುವೆವು. ಅದರಂತೆ, ಈ ಅಭ್ಯಂತರವಾದ ಜೀವವು ತೆರೆದಿಕ್ಕಿದ ಚಕ್ಷುದ್ವಾರದಿಂದ ಬಯಲಿನಲ್ಲಿ ರೂಪಗಳನ್ನು ಹೆಚ್ಚು ಸ್ಪಷ್ಟವಾಗಿ ಕಾಣಬಲ್ಲುದಲ್ಲವೆ? ಕಿವಿ, ಮೂಗು, ನಾಲಗೆ, ದೇಹಗಳನ್ನು ತೆರೆದಿಕ್ಕಿದರೆ ಶಬ್ದಗಳನ್ನು ಕೇಳಿ, ವಾಸನೆಯನ್ನು ಮೂಸಿ, ರಸವನ್ನು ಸವಿದು, ಸ್ಪ್ರಷ್ಟವ್ಯವನ್ನು ಮುಟ್ಟಬಲ್ಲುದಲ್ಲವೆ?"

"ಇಲ್ಲ, ಭನ್ತೇ."

"ಇವು, ಮಹಾರಾಜ, ಮೊದಲನೆಯದು ಕಡೆಯದಕ್ಕೂ ಕಡೆಯದು ಮೊದಲನೆಯದಕ್ಕೂ ಸೇರಿಕೊಂಡಿಲ್ಲ. ಮಹಾರಾಜ, ಈ ದತ್ತನು ಹೊರಗೆ ಹೋಗಿ ಬಾಗಿಲ ಹೊರಗೆ ನಿಂತರೆ, 'ಈ ದತ್ತನು ಹೊರಗೆ ಹೋಗಿ ಬಾಗಿಲ ಹೊರಗೆ ನಿಂತಿದ್ದಾನೆ' ಎಂದು ನಿನಗೆ ತಿಳಿಯುವುದೆ?"

"ತಿಳಿಯುವುದು, ಭನ್ತೇ."

"ಈ ದತ್ತನು ಒಳಗೆ ಪ್ರವೇಶಿಸಿ ನಿನ್ನ ಎದುರಿಗೆ ನಿಂತರೆ, 'ಈ ದತ್ತನು ಒಳಗೆ ಪ್ರವೇಶಿಸಿ ನನ್ನ ಎದುರಿಗೆ ನಿಂತಿದ್ದಾನೆ' ಎಂದು ನಿನಗೆ ತಿಳಿಯುವುದೆ, ಮಹಾರಾಜ?"

"ಹೌದು, ತಿಳಿಯುವುದು, ಭನ್ತೇ."

"ಹಾಗೆಯೇ, ಮಹಾರಾಜ, ನಾಲಗೆಯ ಮೇಲೆ ರಸವನ್ನು ಇಟ್ಟರೆ, 'ಹುಳಿ, ಉಪ್ಪು, ಕಾರ, ಕಟು, ಕಷಾಯ, ಸಿಹಿ' ಎಂದು ಆ ಅಭ್ಯಂತರವಾದ ಜೀವವು [ಆ ಆ ರಸಗಳನ್ನು] ತಿಳಿಯುವುದೆ?"

"ಹೌದು, ತಿಳಿಯುವುದು, ಭನ್ತೇ."

"ಆ ರಸವು [ಹೊಟ್ಟೆಯ] ಒಳಕ್ಕೆ ಹೋದ ಮೇಲೆ, 'ಹುಳಿ, ಉಪ್ಪು, ಕಾರ, ಕಟು, ಕಷಾಯ, ಸಿಹಿ' ಎಂದು ತಿಳಿಯುವುದೆ?"

"ಇಲ್ಲ, ಭನ್ತೇ."

"ಇವು, ಮಹಾರಾಜ, ಮೊದಲನೆಯದು ಕಡೆಯದಕ್ಕೂ ಕಡೆಯದು ಮೊದಲನೆಯದಕ್ಕೂ ಸೇರಿಕೊಂಡಿಲ್ಲ. ಮಹಾರಾಜ, ಪುರುಷನೊಬ್ಬನು ನೂರು ಗಡಿಗೆ ಮಧುವನ್ನು ತರಿಸಿ, ಮಧುದ್ರೋಣಿಯನ್ನು ತುಂಬಿಸಿ, ಮನುಷ್ಯನೊಬ್ಬನ ಬಾಯಿಮುಚ್ಚಿ ಅವನನ್ನು ಆ ಮಧುದ್ರೋಣಿಯಲ್ಲಿ ಹಾಕುವನು. [ಆ ದ್ರೋಣಿಯು] ಮಧುವಿಂದ ತುಂಬಿದೆಯೋ ತುಂಬಿಲ್ಲವೋ ಎಂದು ಅವನು ತಿಳಿಯುವನೆ?"

"ಇಲ್ಲ, ಭನ್ತೇ."

"ಕಾರಣವೇನು?"

"ಅವನ ಬಾಯೊಳಕ್ಕೆ ಮಧು ಹೋಗುವುದಿಲ್ಲ, ಭನ್ತೇ."

"ಇವು, ಮಹಾರಾಜ, ಮೊದಲನೆಯದು ಕಡೆಯದಕ್ಕೂ ಕಡೆಯದು ಮೊದಲನೆಯದಕ್ಕೂ ಸೇರಿಕೊಂಡಿಲ್ಲ."

"ನಿನ್ನಂತಹ ವಾದಿಯೊಡನೆ ಮಾತನಾಡಲು ನಾನು ಸಮರ್ಥನಲ್ಲ, ಭನ್ತೇ. ಒಳ್ಳೆಯದು, ಅರ್ಥವನ್ನು ತಿಳಿಸಿರಿ."

ಸ್ಥವಿರನು "ಮಹಾರಾಜ, ಕಣ್ಣೂ ರೂಪಗಳೂ ಕಾರಣವಾಗಿ ಚಕ್ಷುವಿಜ್ಞಾನವು ಏಳುವುದು. ಅದರ ಸಹಜಾತವಾಗಿ ಸ್ಪರ್ಶ, ವೇದನೆ, ಸಂಜ್ಞೆ, ಚೇತನ, ಏಕಾಗ್ರತೆ, ಜೀವಿತೇಂದ್ರಿಯ, ಮನಸಿಕಾರ ಎಂಬ ಈ ಧರ್ಮಗಳು ಒಂದರ ಹಿಂದೆ ಒಂದು ಹುಟ್ಟುವುವು. ಇಲ್ಲಿ ವೇದಕ [ಎಂಬುದು] ಸಿಕ್ಕುವುದಿಲ್ಲ. [ಹೀಗೆಯೇ] ಕಿವಿಯೂ ಶಬ್ದಗಳೂ ಕಾರಣವಾಗಿ ಶ್ರೋತ್ರವಿಜ್ಞಾನವೂ, ಮೂಗು ಗಂಧಗಳು ಕಾರಣವಾಗಿ ಘ್ರಾಣವಿಜ್ಞಾನವೂ, ನಾಲಗೆ ರಸಗಳು ಕಾರಣವಾಗಿ ಜಿಹ್ವಾವಿಜ್ಞಾನವೂ, ದೇಹ ಸ್ಪ್ರುಷ್ಟವ್ಯಗಳು ಕಾರಣವಾಗಿ ಕಾಯವಿಜ್ಞಾನವೂ, ಮನಸ್ಸು ಧರ್ಮಗಳು ಕಾರಣವಾಗಿ ಮನೋವಿಜ್ಞಾನವೂ ಏಳುವುವು. ಅವುಗಳ ಸಹಜಾತವಾಗಿ ಸ್ಪರ್ಶ, ವೇದನೆ, ಸಂಜ್ಞೆ, ಚೇತನ, ಏಕಾಗ್ರತೆ, ಜೀವಿತೇಂದ್ರಿಯ, ಮನಸಿಕಾರ ಎಂಬ ಈ ಧರ್ಮಗಳು ಒಂದರ ಹಿಂದೆ ಒಂದು ಹುಟ್ಟುವುವು. ಇಲ್ಲಿ ವೇದಕ [ಎಂಬದು] ಸಿಕ್ಕುವುದಿಲ್ಲ" ಎಂದು

ಅಭಿಧರ್ಮದಿಂದ ಕೂಡಿದ ಮಾತುಕತೆಯಿಂದ ಮಿಲಿಂದರಾಜನನ್ನು ಒಪ್ಪಿಸಿದನು.

೭

ರಾಜನು "ಭನ್ತೇ ನಾಗಸೇನ, ಚಕ್ಷುವಿಜ್ಞಾನವು ಎದ್ದ ಕಡೆ ಮನೋವಿಜ್ಞಾನವೂ ಏಳುವುದೆ?" ಎಂದನು.

"ಹೌದು, ಮಹಾರಾಜ. ಚಕ್ಷುವಿಜ್ಞಾನವು ಎದ್ದ ಕಡೆ ಮನೋವಿಜ್ಞಾನವೂ ಏಳುವುದು."

"ಏನು, ಭನ್ತೇ ನಾಗಸೇನ? ಮೊದಲು ಚಕ್ಷುವಿಜ್ಞಾನವು ಎದ್ದು, ಅನಂತರ ಮನೋವಿಜ್ಞಾನ [ಏಳುವುದೆ]? ಅಥವಾ, ಮನೋವಿಜ್ಞಾನ ಮೊದಲು ಎದ್ದು, ಅನಂತರ ಚಕ್ಷುವಿಜ್ಞಾನ [ಏಳುವುದೆ]?"

"ಮೊದಲು ಚಕ್ಷುವಿಜ್ಞಾನ ಏಳುವುದು, ಮಹಾರಾಜ. ಅನಂತರ ಮನೋವಿಜ್ಞಾನ."

"ಏನು, ಭನ್ತೇ ನಾಗಸೇನ? ಚಕ್ಷುವಿಜ್ಞಾನವು 'ನಾನು ಎದ್ದ ಕಡೆ ನೀನೂ ಏಳು' ಎಂದು ಮನೋವಿಜ್ಞಾನಕ್ಕೆ ಆಜ್ಞಾಪಿಸುವುದೊ? ಅಥವಾ, ಮನೋವಿಜ್ಞಾನವು 'ನೀನು ಎದ್ದ ಕಡೆ ನಾನೂ ಏಳುವೆನು' ಎಂದು ಚಕ್ಷುವಿಜ್ಞಾನಕ್ಕೆ ಆಜ್ಞಾಪಿಸುವುದೊ?"

"ಇಲ್ಲ, ಮಹಾರಾಜ. ಅವು ಒಂದರೊಡನೆ ಒಂದು ಮಾತನಾಡುವುದಿಲ್ಲ."

"[ಹಾಗಾದರೆ,] ಭನ್ತೇ ನಾಗಸೇನ, ಚಕ್ಷುವಿಜ್ಞಾನವು ಎದ್ದ ಕಡೆ ಮನೋವಿಜ್ಞಾನವೂ ಏಳುವುದು ಹೇಗೆ?"

"ನಿಮ್ನತ್ವದಿಂದ, ದ್ವಾರತ್ವದಿಂದ, ಚರಣತ್ವದಿಂದ ಮತ್ತು ಸಮುದಾಚರಿತತ್ವದಿಂದ, ಮಹಾರಾಜ."

"ಭನ್ತೇ ನಾಗಸೇನ, ಚಕ್ಷುವಿಜ್ಞಾನವು ಎದ್ದ ಕಡೆ ಮನೋವಿಜ್ಞಾನವು ನಿಮ್ನತ್ವದಿಂದ ಏಳುವುದು ಹೇಗೆ? ಉಪಮಾನ ಕೊಡು."

"ಏನೆಂಬೆ, ಮಹಾರಾಜ? ದೇವತೆಯು ಮಳೆಗರೆದರೆ, ನೀರು ಎಲ್ಲಿಗೆ ಹೋಗುವುದು?"

"ತಗ್ಗಾಗಿರುವ ಕಡೆ ಹೋಗುವುದು, ಭನ್ತೇ."

"ಆಮೇಲೆ [ಪುನಃ] ದೇವತೆಯು ಮಳೆಗರೆದರೆ, ಆ ನೀರು ಎಲ್ಲಿಗೆ ಹೋಗುವುದು?"

"ಮೊದಲನೆಯ ನೀರು ಹೋದಲ್ಲಿಗೆ ಅದೂ ಹೋಗುವುದು, ಭನ್ತೇ."

"ಏನು, ಮಹಾರಾಜ? 'ನಾನು ಹೋಗುವಲ್ಲಿಗೆ ನೀನೂ ಹೋಗು' ಎಂದು ಮೊದಲ ನೀರು ಆಮೇಲಿನ ನೀರಿಗೆ ಆಜ್ಞೆಮಾಡಿತೊ? ಅಥವಾ, 'ನೀನು ಹೋದಲ್ಲಿಗೆ ನಾನೂ ಹೋಗುತ್ತೇನೆ' ಎಂದು ಆಮೇಲಿನ ನೀರು ಮೊದಲ ನೀರಿಗೆ ಆಜ್ಞೆಮಾಡಿತೊ?"

"ಇಲ್ಲ, ಭನ್ತೇ. ಅವು ಒಂದರೊಡನೆ ಒಂದು ಮಾತನಾಡುವುದಿಲ್ಲ. ನಿಮ್ನತ್ವದಿಂದ ಹೋಗುವುವು."

"ಅದರಂತೆಯೇ, ಮಹಾರಾಜ, ನಿಮ್ನತ್ವದಿಂದ ಚಕ್ಷುವಿಜ್ಞಾನವೆದ್ದ ಕಡೆ ಮನೋವಿಜ್ಞಾನವೂ ಏಳುವುದು. 'ನಾನು ಎದ್ದ ಕಡೆ ನೀನೂ ಏಳು' ಎಂದು ಚಕ್ಷುವಿಜ್ಞಾನವು ಮನೋವಿಜ್ಞಾನಕ್ಕಾಗಲಿ, 'ನೀನು ಎದ್ದ ಕಡೆ ನಾನೂ ಏಳುವೆನು' ಎಂದು ಮನೋವಿಜ್ಞಾನವು ಚಕ್ಷುವಿಜ್ಞಾನಕ್ಕಾಗಲಿ ಆಜ್ಞೆಮಾಡುವುದಿಲ್ಲ. ಅವು ಒಂದರೊಡನೆ ಒಂದು ಮಾತನಾಡುವುದಿಲ್ಲ; ನಿಮ್ನತ್ವದಿಂದ ಏಳುವುವು."

"ಭನ್ತೇ ನಾಗಸೇನ, ಚಕ್ಷುವಿಜ್ಞಾನವು ಎದ್ದ ಕಡೆ ಮನೋವಿಜ್ಞಾನವು ದ್ವಾರತ್ವದಿಂದ ಏಳುವುದು ಹೇಗೆ? ಉಪಮಾನ ಕೊಡು."

"ಏನೆಂಬೆ, ಮಹಾರಾಜ? ರಾಜನ ಗಡಿನಾಡಿನ ನಗರವಿದೆ; ಅದಕ್ಕೆ ದೃಢವಾದ ಪ್ರಾಕಾರ ತೋರಣಗಳು, ಒಂದೇ ಬಾಗಿಲು. ಪುರುಷನೊಬ್ಬನಿಗೆ ಅಲ್ಲಿಂದ ಹೊರಗೆ ಹೋಗಬೇಕೆಂದು ಮನಸ್ಸಾದರೆ, [ಅವನು] ಹೇಗೆ ಹೊರಗೆ ಹೋಗುವನು?"

"ಬಾಗಿಲಿನಿಂದ ಹೊರಗೆ ಹೋಗುವನು, ಭನ್ತೇ."

"ಅನಂತರ [ಇನ್ನೊಬ್ಬ] ಪುರುಷನಿಗೆ ಅಲ್ಲಿಂದ ಹೋಗಬೇಕೆಂದು ಮನಸ್ಸಾದರೆ, ಅವನು ಹೇಗೆ ಹೊರಗೆ ಹೋಗುವನು?"

"ಮೊದಲನೆಯ ಪುರುಷನು ಹೊರಗೆ ಹೋದ ಬಾಗಿಲಿನಿಂದ ಅವನೂ ಹೊರಗೆ ಹೋಗುವನು."

"ಏನು, ಮಹಾರಾಜ? 'ನಾನು ಹೋದ ಕಡೆ ನೀನೂ ಬಾ' ಎಂದು ಮೊದಲನೆಯ ಪುರುಷನು ಎರಡನೆಯವನಿಗಾಗಲಿ, 'ನೀನು ಹೋದ

ಕಡೆ ನಾನೂ ಬರುವೆನು' ಎಂದು ಎರಡನೆಯುವನು ಮೊದಲನೆಯುವನಿಗಾಗಲಿ ಆಜ್ಞಾಪಿಸಿದನೆ?"

"ಇಲ್ಲ, ಭನ್ತೇ. ಅವರು ಒಬ್ಬರೊಡನೆ ಒಬ್ಬರು ಮಾತನಾಡುವುದಿಲ್ಲ. ದ್ವಾರತ್ವದಿಂದ ಹೋಗುವರು."

"ಅದರಂತೆಯೇ, ಮಹಾರಾಜ, ದ್ವಾರತ್ವದಿಂದ ಚಕ್ಷುವಿಜ್ಞಾನವೆದ್ದ ಕಡೆ ಮನೋವಿಜ್ಞಾನವೂ ಏಳುವುದು. ಒಂದು ಇನ್ನೊಂದಕ್ಕೆ ಆಜ್ಞೆಮಾಡುವುದಿಲ್ಲ. ಒಂದರೊಡನೆ ಒಂದು ಮಾತನಾಡುವುದಿಲ್ಲ. ದ್ವಾರತ್ವದಿಂದ ಏಳುವುವು."

"ಭನ್ತೇ ನಾಗಸೇನ, ಚಕ್ಷುವಿಜ್ಞಾನವು ಎದ್ದ ಕಡೆ ಮನೋವಿಜ್ಞಾನವು ಚರಣತ್ವದಿಂದ ಏಳುವುದು ಹೇಗೆ? ಉಪಮಾನ ಕೊಡು."

"ಏನೆಂಬೆ, ಮಹಾರಾಜ? ಮೊದಲು ಒಂದು ಗಾಡಿ ಹೋದರೆ, ಎರಡನೆಯ ಗಾಡಿ ಹೇಗೆ ಹೋಗುವುದು?"

"ಮೊದಲನೆಯ ಗಾಡಿ ಹೋದ ಕಡೆ ಅದೂ ಹೋಗುವುದು, ಭನ್ತೇ."

"ಏನು, ಮಹಾರಾಜ? 'ನಾನು ಹೋದ ಕಡೆ ನೀನೂ ಬಾ' ಎಂದು ಮೊದಲಗಾಡಿ ಎರಡನೆಯುದಕ್ಕಾಗಲಿ, 'ನೀನು ಹೋದ ಕಡೆ ನಾನೂ ಬರುವೆನು' ಎಂದು ಎರಡನೆಯುದು ಮೊದಲನೆಯುದಕ್ಕಾಗಲಿ ಆಜ್ಞೆಮಾಡಿತೇನು?"

"ಇಲ್ಲ, ಭನ್ತೇ. ಅವು ಒಂದರೊಡನೆ ಒಂದು ಮಾತನಾಡವು. ಚರಣತ್ವದಿಂದ ಹೋಗುವುವು."

"ಅದರಂತೆಯೇ, ಮಹಾರಾಜ, ಚರಣತ್ವದಿಂದ ಚಕ್ಷುವಿಜ್ಞಾನವೆದ್ದ ಕಡೆ ಮನೋವಿಜ್ಞಾನವೂ ಏಳುವುದು. ಒಂದು ಇನ್ನೊಂದಕ್ಕೆ ಆಜ್ಞೆ ಮಾಡುವುದಿಲ್ಲ. ಒಂದರೊಡನೆ ಒಂದು ಮಾತನಾಡುವುದಿಲ್ಲ. ಚರಣತ್ವದಿಂದ ಏಳುವುವು."

"ಭನ್ತೇ ನಾಗಸೇನ, ಚಕ್ಷುವಿಜ್ಞಾನವು ಎದ್ದ ಕಡೆ ಮನೋವಿಜ್ಞಾನವು ಸಮುದಾಚರಿತತ್ವದಿಂದ ಏಳುವುದು ಹೇಗೆ? ಉಪಮಾನ ಕೊಡು."

"ಮಹಾರಾಜ, ಮುದ್ರಾ, ಗಣನಾ, ಸಂಖ್ಯಾ, ಲೇಖ ಮೊದಲಾದ ವಿದ್ಯೆಗಳನ್ನು ಕಲಿಯುವವನು ಮೊದಲು ಬೆಪ್ಪಾಗಿರುವನು. ಅನಂತರ

ಆಮೇಲೆ ಚೆನ್ನಾಗಿ ಕೆಲಸಮಾಡಿ ಸಮುದಾಚರಿತತ್ವದಿಂದ ಚುರುಕಾಗುವನು. ಅದರಂತೆಯೇ, ಮಹಾರಾಜ, ಸಮುದಾಚರಿತತ್ವದಿಂದ ಚಕ್ಷುವಿಜ್ಞಾನವೆದ್ದ ಕಡೆ ಮನೋವಿಜ್ಞಾನವೂ ಏಳುವುದು. ಒಂದು ಇನ್ನೊಂದಕ್ಕೆ ಆಜ್ಞೆಮಾಡುವುದಿಲ್ಲ. ಒಂದರೊಡನೆ ಒಂದು ಮಾತನಾಡುವುದಿಲ್ಲ. ಸಮುದಾಚರಿತತ್ವದಿಂದ ಏಳುವುವು."

"ಭನ್ತೇ ನಾಗಸೇನ, ಶ್ರೋತ್ರವಿಜ್ಞಾನವು ಎದ್ದಕಡೆ ಮನೋವಿಜ್ಞಾನವೂ ಏಳುವುದೆ? ಘ್ರಾಣವಿಜ್ಞಾನ, ಜಿಹ್ವಾವಿಜ್ಞಾನ, ಕಾಯವಿಜ್ಞಾನಗಳು ಎದ್ದ ಕಡೆಯೂ ಮನೋವಿಜ್ಞಾನವು ಏಳುವುದೆ?"

"ಹೌದು, ಮಹಾರಾಜ. ಅಲ್ಲೆಲ್ಲ ಮನೋವಿಜ್ಞಾನವೂ ಏಳುವುದು. ಚಕ್ಷು, ಶ್ರೋತ್ರ, ಘ್ರಾಣ, ಜಿಹ್ವಾ, ಕಾಯವಿಜ್ಞಾನಗಳು ಮೊದಲು; ಮನೋವಿಜ್ಞಾನ ಅನಂತರ. ಅವು ಒಂದು ಇನ್ನೊಂದಕ್ಕೆ ಆಜ್ಞೆಮಾಡುವುದಿಲ್ಲ. ಒಂದರೊಡನೆ ಒಂದು ಮಾತನಾಡುವುದಿಲ್ಲ. ಸಮುದಾಚರಿತತ್ವದಿಂದ ಏಳುವುವು."

"ನೀನು ಜಾಣ, ಭನ್ತೇ ನಾಗಸೇನ."

೮

ರಾಜನು "ಭನ್ತೇ ನಾಗಸೇನ, ಮನೋವಿಜ್ಞಾನವು ಎದ್ದ ಕಡೆ ವೇದನೆಯೂ ಏಳುವುದೆ?" ಎಂದನು.

"ಹೌದು, ಮಹಾರಾಜ. ಮನೋವಿಜ್ಞಾನವು ಎದ್ದ ಕಡೆ ಸ್ಪರ್ಶವೂ ಏಳುವುದು. ಅಲ್ಲಿ ವೇದನೆಯೂ ಏಳುವುದು. ಸಂಜ್ಞೆ, ಚೇತನೆ, ವಿತರ್ಕ, ವಿಚಾರಗಳೂ ಸ್ಪರ್ಶ ಮೊದಲಾದ ಎಲ್ಲಾ ಧರ್ಮಗಳೂ ಅಲ್ಲಿ ಏಳುವುವು."

೯

"ಭನ್ತೇ ನಾಗಸೇನ, ಸ್ಪರ್ಶದ ಲಕ್ಷಣವೇನು?"

"ಸ್ಪರ್ಶನವು ಸ್ಪರ್ಶದ ಲಕ್ಷಣ, ಮಹಾರಾಜ."

"ಉಪಮಾನ ಕೊಡು."

"ಮಹಾರಾಜ, ಎರಡು ಟಗರು ಯುದ್ಧಮಾಡಿದರೆ ಹೇಗೋ ಹಾಗೆ. ಅದರಲ್ಲಿ, ಕಣ್ಣನ್ನು ಒಂದು ಟಗರಿನಂತೆ ಕಾಣಬೇಕು; ರೂಪ

ವನ್ನು ಎರಡನೆಯ ಟಗರಿನಂತೆ ಕಾಣಬೇಕು; ಸ್ಪರ್ಶವನ್ನು ಅವುಗಳ ಸನ್ನಿಪಾತದಂತೆ ಕಾಣಬೇಕು."

"ಇನ್ನೊಂದು ಉಪಮಾನ ಕೊಡು."

"ಎರಡು ಕೈ ಶಬ್ದಮಾಡಿದರೆ ಹೇಗೋ ಹಾಗೆ, ಮಹಾರಾಜ. ಅದರಲ್ಲಿ, ಕಣ್ಣನ್ನು ಒಂದು ಕೈಯಂತೆ ಕಾಣಬೇಕು, ರೂಪವನ್ನು ಎರಡನೆಯ ಕೈಯಂತೆ ಕಾಣಬೇಕು; ಸ್ಪರ್ಶವನ್ನು ಅವುಗಳ ಸನ್ನಿಪಾತ ದಂತೆ ಕಾಣಬೇಕು."

"ಇನ್ನೊಂದು ಉಪಮಾನ ಕೊಡು."

"ಎರಡು ತಾಳ ಸದ್ದುಮಾಡಿದರೆ ಹೇಗೋ ಹಾಗೆ, ಮಹಾರಾಜ. ಅದರಲ್ಲಿ ಕಣ್ಣನ್ನು ಒಂದು ತಾಳದಂತೆ ಕಾಣಬೇಕು, ರೂಪವನ್ನು ಎರಡ ನೆಯ ತಾಳದಂತೆ ಕಾಣಬೇಕು; ಸ್ಪರ್ಶವನ್ನು ಅವುಗಳ ಸನ್ನಿಪಾತದಂತೆ ಕಾಣಬೇಕು."

"ನೀನು ಜಾಣ, ಭನ್ತೇ ನಾಗಸೇನ."

೧೦

"ಭನ್ತೇ ನಾಗಸೇನ, ವೇದನೆಯ ಲಕ್ಷಣವೇನು?"

"ವೇದನೆಯು ವೇದಯಿತಲಕ್ಷಣವಾದುದು, ಮಹಾರಾಜ. ಅನುಭವನ ಕೂಡ [ವೇದನೆಯ] ಲಕ್ಷಣ."

"ಉಪಮಾನ ಕೊಡು."

"ಮಹಾರಾಜ, ಪುರುಷನೊಬ್ಬನು ರಾಜನಿಗೆ ಏನಾದರೂ ಕೆಲಸ ಮಾಡುವನು. ಆದರಿಂದ ರಾಜನು ಸಂತುಷ್ಟನಾಗಿ [ಅವನಿಗೆ ಏನಾದರೂ] ಅಧಿಕಾರ ಕೊಡುವನು. ಅವನು ಆ ಅಧಿಕಾರದಿಂದ ಪಂಚೇಂದ್ರಿಯ ಸುಖಗಳನ್ನು ಅನುಭವಿಸಿ ಅದರಲ್ಲಿ ಲೀನನಾಗಿ ಬದುಕುವನು. [ಆಗ] ಅವನಿಗೆ 'ನಾನು ಹಿಂದೆ ರಾಜನಿಗೆ ಕೆಲಸಮಾಡಿದೆ. ರಾಜನು ಅದಕ್ಕೆ ಸಂತುಷ್ಟನಾಗಿ ನನಗೆ ಅಧಿಕಾರಕೊಟ್ಟನು. ಇಂದು ನಾನು ಅದೆ ಕಾರಣವಾಗಿ ಈ ರೀತಿಯ ವೇದನೆಯನ್ನು ತಿಳಿಯುತ್ತಿದ್ದೇನೆ' ಎಂದೆನಿಸು ವುದು. ಅಥವಾ, ಮಹಾರಾಜ, ಪುರುಷನೊಬ್ಬನು ಕುಶಲಕರ್ಮ ಗಳನ್ನು ಮಾಡಿ, ಸತ್ತು ದೇಹ ಮುರಿದ ಮೇಲೆ ಸುಗತಿಯಾದ ಸ್ವರ್ಗ

ಲೋಕವನ್ನು ಪಡೆಯುವನು. ಅವನು ಅಲ್ಲಿ ದಿವ್ಯವಾದ ಪಂಚೇಂದ್ರಿಯ ಸುಖಗಳನ್ನು ಅನುಭವಿಸಿ ಅದರಲ್ಲಿ ಲೀನನಾಗಿ ಬದುಕುವನು. [ಆಗ] ಅವನಿಗೆ 'ನಾನು ಹಿಂದೆ ಕುಶಲಕರ್ಮಗಳನ್ನು ಮಾಡಿದೆ. ಇಂದು ಅದೆ ಕಾರಣವಾಗಿ ಈ ರೀತಿಯ ವೇದನೆಯನ್ನು ತಿಳಿಯುತ್ತಿದ್ದೇನೆ' ಎಂದೆನಿಸುವುದು. ಅದರಂತೆಯೇ, ಮಹಾರಾಜ, ವೇದನೆಯು ವೇದಯಿತಲಕ್ಷಣವಾದುದು ಮತ್ತು ಅನುಭವನ ಲಕ್ಷಣವಾದುದು."

"ನೀನು ಚತುರ, ಭನ್ತೇ ನಾಗಸೇನ."

೧೧

"ಭನ್ತೇ ನಾಗಸೇನ, ಸಂಜ್ಞೆಯ ಲಕ್ಷಣವೇನು?"

"ಸಂಜ್ಞೆಯ ಲಕ್ಷಣ ಸಂಜಾನನ, ಮಹಾರಾಜ. [ಅವನು] ಏನು ಸಂಜಾನಿಸುವನು? [ಅವನು] ನೀಲವನ್ನು, ಹಳದಿಯನ್ನು, ಕೆಂಪನ್ನು, ಬಿಳುಪನ್ನು, ಮತ್ತು ಕಂದುಬಣ್ಣವನ್ನು ಸಂಜಾನಿಸುವನು. ಹೀಗೆ, ಮಹಾರಾಜ, ಸಂಜಾನನವು ಸಂಜ್ಞೆಯ ಲಕ್ಷಣ."

"ಉಪಮಾನ ಕೊಡು."

"ಮಹಾರಾಜ, ರಾಜನ ಭಾಂಡಾಗಾರಿಕನು ಭಂಡಾರವನ್ನು ಹೊಕ್ಕು, [ಅಲ್ಲಿನ] ನೀಲ–ಹಳದಿ–ಕೆಂಪು–ಬಿಳುಪು–ಕಂದು–[ಬಣ್ಣಗಳ] ರಾಜಭೋಗಗಳಾದ ರೂಪಗಳನ್ನು ಹೇಗೆ ಸಂಜಾನಿಸುವನೋ ಹಾಗೆ. ಈ ರೀತಿಯಲ್ಲಿ, ಮಹಾರಾಜ, ಸಂಜಾನನವು ಸಂಜ್ಞೆಯ ಲಕ್ಷಣ."

"ನೀನು ಕುಶಲಿ, ಭನ್ತೇ ನಾಗಸೇನ."

೧೨

"ಭನ್ತೇ ನಾಗಸೇನ, ಚೇತನೆಯ ಲಕ್ಷಣವೇನು?"

"ಚೇತನೆಯು ಚೇತಯಿತಲಕ್ಷಣವಾದುದು, ಮಹಾರಾಜ; ಅಭಿಸಂಸ್ಕರಣ ಕೂಡ [ಚೇತನೆಯ] ಲಕ್ಷಣ."

"ಉಪಮಾನ ಕೊಡು."

"ಮಹಾರಾಜ, ಪುರುಷನೊಬ್ಬನು ವಿಷವನ್ನು ಅಭಿಸಂಸ್ಕರಿಸಿ ತಾನೂ ಕುಡಿದು ಇತರರಿಗೂ ಕುಡಿಸುವನು. ಅದರಿಂದ ಅವನೂ ದುಃಖ

ಪಡುವನು, ಇತರರೂ ದುಃಖಪಡುವರು. ಅದರಂತೆಯೇ, ಮಹಾರಾಜ, ಇಲ್ಲಿ ಒಬ್ಬನು ಅಕುಶಲವಾದ ಕರ್ಮವನ್ನು ಚೇತನೆಯಿಂದ ಚೇತಯಿಸಿ, ಸತ್ತು ದೇಹ ಮುರಿದ ಮೇಲೆ ಅಪಾಯವೂ ದುರ್ಗತಿಯೂ ವಿನಿಪಾತವೂ ಆದ ನರಕದಲ್ಲಿ ಹುಟ್ಟುವನು. ಅವನಿಂದ ಶಿಕ್ಷೆಪಡೆದವರು ತಾವೂ ಸತ್ತು ದೇಹ ಮುರಿದ ಮೇಲೆ ಅಪಾಯವೂ ದುರ್ಗತಿಯೂ ವಿನಿಪಾತವೂ ಆದ ನರಕದಲ್ಲಿ ಹುಟ್ಟುವರು.

"ಪುನಃ, ಮಹಾರಾಜ, ಪುರುಷನೊಬ್ಬನು ತುಪ್ಪ, ಬೆಣ್ಣೆ, ತೈಲ, ಜೇನುತುಪ್ಪ, ಕಬ್ಬಿನರಸಗಳನ್ನು ಒಂದು ಕಡೆ ಅಭಿಸಂಸ್ಕರಿಸಿ ತಾನೂ ಕುಡಿದು ಇತರರಿಗೂ ಕುಡಿಸುವನು. ಆದರಿಂದ ಅವನೂ ಸುಖಪಡುವನು, ಇತರರೂ ಸುಖಪಡುವರು. ಅದರಂತೆಯೇ, ಮಹಾರಾಜ, ಇಲ್ಲಿ ಒಬ್ಬನು ಕುಶಲವಾದ ಕರ್ಮವನ್ನು ಚೇತನೆಯಿಂದ ಚೇತಯಿಸಿ, ಸತ್ತು ದೇಹ ಮುರಿದ ಮೇಲೆ ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುವನು. ಅವನಿಂದ ಶಿಕ್ಷೆಪಡೆದವರು ತಾವೂ ಸತ್ತು ದೇಹ ಮುರಿದ ಮೇಲೆ ಸುಗತಿಯಾದ ಸ್ವರ್ಗಲೋಕದಲ್ಲಿ ಹುಟ್ಟುವರು.

"ಹೀಗೆ, ಮಹಾರಾಜ, ಚೇತನೆಯು ಚೇತಯಿತಲಕ್ಷಣವಾದುದು; ಅಭಿಸಂಸ್ಕರಣ ಕೂಡ [ಚೇತನೆಯ] ಲಕ್ಷಣ."

"ನೀನು ಜಾಣ, ಭನ್ತೇ ನಾಗಸೇನ."

೧೩

"ಭನ್ತೇ ನಾಗಸೇನ, ವಿಜ್ಞಾನದ ಲಕ್ಷಣವೇನು?"

"ವಿಜ್ಞಾನದ ಲಕ್ಷಣವು ವಿಜಾನನ, ಮಹಾರಾಜ."

"ಉಪಮಾನ ಕೊಡು."

"ಮಹಾರಾಜ, ನಗರಗುಪ್ತಕನು ನಗರದ ನಡುವೆ ಮಾರ್ಗಗಳು ಕೂಡುವ ಕಡೆ ಕುಳಿತು, ಪೂರ್ವದಿಕ್ಕಿನಿಂದ ಪುರುಷನು ಬರುವುದನ್ನು ನೋಡುವನು, ದಕ್ಷಿಣ ದಿಕ್ಕಿನಿಂದ ಪುರುಷನು ಬರುವುದನ್ನು ಕಾಣುವನು, ಪಶ್ಚಿಮ ದಿಕ್ಕಿನಿಂದ ಪುರುಷನು ಬರುವುದನ್ನು ಕಾಣುವನು, ಉತ್ತರ ದಿಕ್ಕಿನಿಂದ ಪುರುಷನು ಬರುವುದನ್ನು ನೋಡುವನು. ಅದರಂತೆಯೇ, ಮಹಾರಾಜ, ಪುರುಷನು ಕಣ್ಣಿನಿಂದ ರೂಪಗಳನ್ನು ಕಂಡರೆ ವಿಜ್ಞಾನ

ದಿಂದ ವಿಜಾನಿಸುವನು; [ಅದರಂತೆಯೇ] ಕಿವಿಯಿಂದ ಶಬ್ದವನ್ನು ಕೇಳಿದರೆ, ಮೂಗಿನಿಂದ ಗಂಧವನ್ನು ಮೂಸಿದರೆ, ನಾಲಗೆಯಿಂದ ರಸವನ್ನು ಸವಿದರೆ, ದೇಹದಿಂದ ಸ್ಪೃಷ್ಟವ್ಯವನ್ನು ಮುಟ್ಟಿದರೆ, ಮನಸ್ಸಿನಿಂದ ಧರ್ಮವನ್ನು ವಿಜಾನಿಸಿದರೆ, ವಿಜ್ಞಾನದಿಂದ ವಿಜಾನಿಸುವನು. ಹೀಗೆ, ಮಹಾರಾಜ, ವಿಜಾನನವು ವಿಜ್ಞಾನದ ಲಕ್ಷಣ."

"ನೀನು ಚತುರ, ಭನ್ತೇ ನಾಗಸೇನ."

೧೪

"ಭನ್ತೇ ನಾಗಸೇನ, ವಿತರ್ಕದ ಲಕ್ಷಣವೇನು?"

"ವಿತರ್ಕದ ಲಕ್ಷಣವು ಅರ್ಪಣ, ಮಹಾರಾಜ."

"ಉಪಮಾನ ಕೊಡು."

"ಮಹಾರಾಜ, ಬಡಗಿಯು ಚೆನ್ನಾಗಿ ಹದಮಾಡಿದ ಮರವನ್ನು [ಬೇಕಾದ] ಸಂಧಿಯಲ್ಲಿ ಅರ್ಪಿಸುವನು. ಅದರಂತೆಯೇ, ಮಹಾರಾಜ, ಅರ್ಪಣವು ವಿತರ್ಕದ ಲಕ್ಷಣ."

"ನೀನು ಕುಶಲಿ, ಭನ್ತೇ ನಾಗಸೇನ."

೧೫

"ಭನ್ತೇ ನಾಗಸೇನ, ವಿಚಾರದ ಲಕ್ಷಣವೇನು?"

"ವಿಚಾರದ ಲಕ್ಷಣವು ಅನುಮರ್ಜನ, ಮಹಾರಾಜ."

"ಉಪಮಾನ ಕೊಡು."

"ಮಹಾರಾಜ, ಕಂಚಿನ ಪಾತ್ರೆಯನ್ನು ಕುಟ್ಟಿದನಂತರ ಅದು ಅನುಸರಿಸಿ ಧ್ವನಿಮಾಡಿ ರೂಪುಗೊಳ್ಳುವುದು. ವಿತರ್ಕವನ್ನು ಕುಟ್ಟುವಿಕೆಯಂತೆ ಕಾಣಬೇಕು; ವಿಚಾರವನ್ನು ಅನುರವಣದಂತೆ ಕಾಣಬೇಕು."

"ನೀನು ಜಾಣ, ಭನ್ತೇ ನಾಗಸೇನ."

[ಮೂರನೆಯ ವರ್ಗ ಮುಗಿಯಿತು.]*

* ಇಲ್ಲಿ, ಮೂರನೆಯ ವರ್ಗ ಮುಗಿಯಿತೆಂದು ಬರೆದಿದ್ದರು ಕೂಡ, ನಾಲ್ಕನೆಯ ವರ್ಗ ಮೊದಲಾಗುವುದು ಮುಂದಿನ ಎರಡು ಪ್ರಶ್ನೆಗಳಾದ ಮೇಲೆ.

೧೬

ರಾಜನು "ಭನ್ತೇ ನಾಗಸೇನ, [ಮೇಲೆ ಹೇಳಿದ] ಈ ಒಂದಾಗಿ ಸೇರಿಕೊಂಡ ಧರ್ಮಗಳನ್ನು 'ಇದು ಸ್ಪರ್ಶ, ಇದು ವೇದನೆ, ಇದು ಸಂಜ್ಞೆ, ಇದು ಚೇತನೆ, ಇದು ವಿಜ್ಞಾನ, ಇದು ವಿತರ್ಕ, ಇದು ವಿಚಾರ' ಎಂದು ಬೇರೆ ಬೇರೆಯಾಗಿ ಬಗ್ಗಿಸಿ ಬಗ್ಗಿಸಿ ತಿಳಿಸಲು ಶಕ್ಯವೆ?" ಎಂದನು.

"ಶಕ್ಯವಿಲ್ಲ, ಮಹಾರಾಜ."

"ಉಪಮಾನ ಕೊಡು."

"ಮಹಾರಾಜ, ರಾಜನ ಅಡುಗೆಯವನು ಸಾರನ್ನೋ ರಸವನ್ನೋ ಮಾಡುವನು. ಅವನು ಅದಕ್ಕೆ ಮೊಸರು, ಉಪ್ಪು, ಶುಂಠಿ, ಜೀರಿಗೆ, ಮೆಣಸು ಮತ್ತು ಇತರ ಪದಾರ್ಥಗಳನ್ನು ಹಾಕುವನು. [ಆಗ] ರಾಜನು 'ಮೊಸರಿನ ರಸ ತಾ, ಉಪ್ಪಿನ ರಸ ತಾ, [ಅದಕ್ಕೆ] ಹಾಕಿದ ಎಲ್ಲದರ ರಸವನ್ನೂ ತಾ' ಎಂದು ಅವನಿಗೆ ಹೇಳಿದರೆ, ಆ ಒಂದಾಗಿ ಸೇರಿಕೊಂಡ ರಸಗಳನ್ನು 'ಇದು ಹುಳಿ, ಇದು ಉಪ್ಪು, ಇದು ಕಾರ, ಇದು ಕಟು, ಇದು ಕಷಾಯ, ಇದು ಮಾಧುರ್ಯ' ಎಂದು ಬೇರೆ ಬೇರೆಯಾಗಿ ಬಗ್ಗಿಸಿ ಬಗ್ಗಿಸಿ ತಿಳಿಸಲು ಶಕ್ಯವೆ?"

"ಅದು ಶಕ್ಯವಿಲ್ಲ, ಮಹಾರಾಜ. ಆದರೂ ತಮ್ಮ ತಮ್ಮ ಲಕ್ಷಣಗಳಿಂದ [ಅವು ಎಲ್ಲವೂ ಅಲ್ಲಿ] ನೆಲಸಿಯುಂಟು."

"ಅದರಂತೆಯೆ, ಮಹಾರಾಜ, [ಮೇಲೆ ಹೇಳಿದ] ಈ ಒಂದಾಗಿ ಸೇರಿಕೊಂಡ ಧರ್ಮಗಳನ್ನು 'ಇದು ಸ್ಪರ್ಶ, ಇದು ವೇದನೆ, ಇದು ಸಂಜ್ಞೆ, ಇದು ಚೇತನೆ, ಇದು ವಿಜ್ಞಾನ, ಇದು ವಿತರ್ಕ, ಇದು ವಿಚಾರ' ಎಂದು ಬೇರೆ ಬೇರೆಯಾಗಿ ಬಗ್ಗಿಸಿ ಬಗ್ಗಿಸಿ ತಿಳಿಸಲು ಶಕ್ಯವಿಲ್ಲ. ಆದರೂ ತಮ್ಮ ತಮ್ಮ ಲಕ್ಷಣಗಳಿಂದ [ಅವು ಎಲ್ಲವೂ ಅಲ್ಲಿ] ನೆಲಸಿಯುಂಟು."

"ನೀನು ಚತುರ, ಭನ್ತೇ ನಾಗಸೇನ."

೧೭

ಸ್ಥವಿರನು "ಮಹಾರಾಜ, ಉಪ್ಪನ್ನು ಕಣ್ಣಿನಿಂದ ತಿಳಿಯಲಾಗುವುದೆ?" ಎಂದನು.

"ಹೌದು, ಭನ್ತೇ, ಕಣ್ಣಿನಿಂದ ತಿಳಿಯಲಾಗುವುದು."

"ಸರಿಯಾಗಿ ತಿಳಿ[ದು ಹೇಳು], ಮಹಾರಾಜ."

"ಹಾಗಾದರೆ ಏನು, ಭನ್ತೇ, ನಾಲಗೆಯಿಂದ ತಿಳಿಯಲಾಗುವುದೆ?"

"ಹೌದು, ಮಹಾರಾಜ, ನಾಲಗೆಯಿಂದ ತಿಳಿಯಲಾಗುವುದು."

"ಏನು, ಭನ್ತೇ? ಎಲ್ಲಾ ಉಪ್ಪನ್ನೂ ನಾಲಗೆಯಿಂದ ತಿಳಿಯಲಾಗುವುದೆ?"

"ಹೌದು, ಮಹಾರಾಜ, ಎಲ್ಲಾ ಉಪ್ಪನ್ನೂ ನಾಲಗೆಯಿಂದ ತಿಳಿಯಲಾಗುವುದು."

"ಎಲ್ಲಾ ಉಪ್ಪನ್ನೂ ನಾಲಗೆಯು ತಿಳಿದರೆ, ಎತ್ತುಗಳು ಅದನ್ನು ಗಾಡಿಯಲ್ಲಿ ಏಕೆ ತರುವುವು? ಉಪ್ಪನ್ನು ಮಾತ್ರವಲ್ಲವೆ ತರತಕ್ಕುದು?"

"ಉಪ್ಪು ಒಂದನ್ನೇ ತರಲು ಶಕ್ಯವಿಲ್ಲ, ಮಹಾರಾಜ. [ಇಂದ್ರಿಯಗಳಿಗೆ] ಕಾಣುವ ಈ ಅನೇಕ ಧರ್ಮಗಳು ಒಂದು ಕಡೆ ಸೇರಿವೆ. ಭಾರವಾಗಿರುವುದು ಕೂಡ ಉಪ್ಪಿನ ಭಾವ. ಉಪ್ಪನ್ನು ತಕ್ಕಡಿಯಲ್ಲಿ ತೂಕಮಾಡಲು ಶಕ್ಯವೆ, ಮಹಾರಾಜ?"

"ಹೌದು, ಶಕ್ಯ, ಭನ್ತೇ."

"ಉಪ್ಪನ್ನು ತಕ್ಕಡಿಯಲ್ಲಿ ತೂಗುವುದು ಶಕ್ಯವಿಲ್ಲ, ಮಹಾರಾಜ, ತಕ್ಕಡಿಯಲ್ಲಿ ತೂಗುವುದು [ಉಪ್ಪಲ್ಲ; ಉಪ್ಪಿನ] ಭಾರ."

"ನೀನು ಜಾಣ, ಭನ್ತೇ ನಾಗಸೇನ."

[ನಾಗಸೇನ ಮಿಲಿಂದರಾಜ ಪ್ರಶ್ನೆಗಳು ಮುಗಿದುವು.] *

---

* ಸಹಜವಾಗಿ ಇಲ್ಲಿ 'ಲಕ್ಷಣ ಪ್ರಶ್ನೆ ಮುಗಿಯಿತು' ಎಂದಿರಬೇಕು. ಆದರೆ ಮೂಲದಲ್ಲಿ ಹೀಗಿದೆ. ಏಕೋ ಗೊತ್ತಿಲ್ಲ.

ವಿಮತಿಚ್ಛೇದನ ಪ್ರಶ್ನೆ.

ವರ್ಗ ನಾಲ್ಕು.

೧

ರಾಜನು "ಭನ್ತೇ ನಾಗಸೇನ, ಈ ಐದು ಆಯತನಗಳು ನಾನಾ ಕರ್ಮಗಳಿಂದ ಹುಟ್ಟಿದುವೆ, ಅಥವಾ ಒಂದೇ ಕರ್ಮದಿಂದಲೆ?" ಎಂದನು.

"ನಾನಾ ಕರ್ಮಗಳಿಂದ, ಮಹಾರಾಜ; ಒಂದೇ ಕರ್ಮದಿಂದ ಅಲ್ಲ."

"ಉಪಮಾನ ಕೊಡು."

"ಏನೆಂಬೆ, ಮಹಾರಾಜ? ಒಂದು ಹೊಲದಲ್ಲಿ ಐದು [ತೆರದ] ಬೀಜಗಳನ್ನು ಬಿತ್ತಿದರೆ, ಆ ನಾನಾ ಬೀಜಗಳಿಂದ ನಾನಾ ಫಲಗಳು ಹುಟ್ಟುವುದಿಲ್ಲವೆ?"

"ಹೌದು, ಭನ್ತೇ, ಹುಟ್ಟುವುವು."

"ಅದರಂತೆಯೆ, ಮಹಾರಾಜ, ಈ ಐದು ಆಯತನಗಳೂ ನಾನಾ ಕರ್ಮಗಳಿಂದ ಹುಟ್ಟಿದುವು; ಒಂದೇ ಕರ್ಮದಿಂದ ಅಲ್ಲ."

"ನೀನು ಜಾಣ, ಭನ್ತೇ ನಾಗಸೇನ."

೨

ರಾಜನು "ಭನ್ತೇ ನಾಗಸೇನ, ಮನುಷ್ಯರೆಲ್ಲರೂ ಒಂದೇ ಸಮವಾಗಿಲ್ಲ; ಕೆಲವರು ಅಲ್ಪಾಯುಗಳು, ಕೆಲವರು ದೀರ್ಘಾಯುಗಳು; ಕೆಲವರಿಗೆ ರೋಗ ಹೆಚ್ಚು, ಕೆಲವರಿಗೆ ರೋಗ ಕಡಿಮೆ; ಕೆಲವರು ಕುರೂಪಿಗಳು, ಕೆಲವರು ರೂಪವಂತರು; ಕೆಲವರು ಶಕ್ತಿಹೀನರು, ಕೆಲವರು ಶಕ್ತಿವಂತರು; ಕೆಲವರಿಗೆ ಐಶ್ವರ್ಯ ಕಡಿಮೆ, ಕೆಲವರಿಗೆ ಐಶ್ವರ್ಯ ಬಹಳ; ಕೆಲವರು ನೀಚಕುಲದಲ್ಲಿ ಜನಿಸುವರು, ಕೆಲವರು ಮಹಾಕುಲದಲ್ಲಿ ಜನಿಸುವರು; ಕೆಲವರಿಗೆ ಪ್ರಜ್ಞೆಯಿಲ್ಲ, ಕೆಲವರು ಪ್ರಜ್ಞಾವಂತರು. ಇದಕ್ಕೇನು ಕಾರಣ?" ಎಂದನು.

ಸ್ಥವಿರನು "ಮಹಾರಾಜ, ಮರಗಳಲ್ಲಿ ಕೆಲವು ಹುಳಿ, ಕೆಲವು ಉಪ್ಪು, ಕೆಲವು ಖಾರ, ಕೆಲವು ಕಹಿ, ಕೆಲವು ಕಷಾಯ, ಕೆಲವು ಸಿಹಿ. ಅವು ಎಲ್ಲವೂ ಏಕೆ ಒಂದೇ ಸಮವಾಗಿಲ್ಲ?" ಎಂದನು.

"ನಾನಾ ತೆರದ ಬೀಜಗಳಿಂದ ಎಂದು ತೋರುವುದು, ಭನ್ತೇ."

"ಅದರಂತೆಯೆ, ಮಹಾರಾಜ, ನಾನಾ ತೆರದ ಕರ್ಮಗಳಿಂದ ಮನುಷ್ಯರೆಲ್ಲ ಒಂದೇ ಸಮನಾಗಿಲ್ಲ; ನೀನು ಹೇಳಿದಂತೆ ಬೇರೆ ಬೇರೆ ತೆರನಾಗಿರುವರು. ಮಹಾರಾಜ,

'ಮಾನವ, ಸತ್ತ್ವಗಳು ಕರ್ಮಸ್ವಕೀಯರು, ಕರ್ಮದಾಯಾದರು,
ಕರ್ಮಯೋನಿಗಳು, ಕರ್ಮಬಂಧುಗಳು, ಕರ್ಮಪ್ರತಿಶರಣರು.
ಹೀಗೆ ಹೀನ, ಉತ್ತಮ ಎಂದು ಕರ್ಮವು ಸತ್ತ್ವಗಳನ್ನು ವಿಭಾಗಿಸುವುದು'

ಎಂದು ಭಗವಂತನು ಹೇಳಿದ್ದಾನೆ."

"ನೀನು ಚತುರ, ಭನ್ತೇ ನಾಗಸೇನ."

೩

ರಾಜನು "ಭನ್ತೇ ನಾಗಸೇನ, '[ನಾವು ಪರಿವ್ರಾಜಕರಾದುದು] ಈ ದುಃಖ ನಾಶವಾಗುವುದಕ್ಕೆ, ಬೇರೆ ದುಃಖ ಹುಟ್ಟದಿರುವುದಕ್ಕೆ' ಎಂದು ನೀವು ಹೇಳುವಿರಿ" ಎಂದನು.

"ನಮ್ಮ ಪ್ರವ್ರಜ್ಯವು ಅದಕ್ಕೋಸ್ಕರ, ಮಹಾರಾಜ."

"[ನೀವು ಪರಿವ್ರಾಜಕರಾದುದು] ಹಿಂದಿನ ವ್ಯಾಯಾಮದಿಂದಲೊ, ಅಥವಾ ಈಗ ಮುಂದೆ ವ್ಯಾಯಾಮ ಮಾಡುವುದಕ್ಕೊ?"

ಸ್ಥವಿರನು "ಮಹಾರಾಜ, ಈಗಿನ ವ್ಯಾಯಾಮವು [ಇನ್ನೂ] ಮಾಡದಿರುವುದನ್ನು ಮಾಡುವುದು. ಹಿಂದಿನ ವ್ಯಾಯಾಮವು ಮಾಡ ಬೇಕಾದುದನ್ನು ಮಾಡಿರುವುದು" ಎಂದನು.

"ಉಪಮಾನ ಕೊಡು."

"ಏನೆಂಬೆ, ಮಹಾರಾಜ? ನಿನಗೆ ದಾಹವಾದಾಗ, ಆಗ, ನೀರು ಕುಡಿಯುವುದಕ್ಕೋಸ್ಕರ ಬಾವಿ ಅಗೆಯಿಸಿ ತಟಾಕವನ್ನು ತೋಡಿಸು ವೆಯ?"

"ಇಲ್ಲ, ಭನ್ತೇ."

"ಹಾಗೆಯೆ, ಮಹಾರಾಜ, ಈಗಿನ ವ್ಯಾಯಾಮವು [ಇನ್ನೂ] ಮಾಡದಿರುವುದನ್ನು ಮಾಡುವುದು. ಹಿಂದಿನ ವ್ಯಾಯಾಮವು ಮಾಡ ಬೇಕಾದುದನ್ನು ಮಾಡಿರುವುದು."

"ಇನ್ನೊಂದು ಉಪಮಾನ ಕೊಡು."

"ಏನೆಂಬೆ, ಮಹಾರಾಜ? ನಿನಗೆ ಹಸಿವಾದಾಗ, ಆಗ, ಅನ್ನ ಊಟ ಮಾಡೋಣವೆಂದು ಗದ್ದೆಯನ್ನು ಕೃಷಿಮಾಡಿಸಿ, ಬತ್ತವನ್ನು ಬಿತ್ತಿಸಿ, ಧಾನ್ಯ ಕೊಯಿಸುವೆಯ?"

"ಇಲ್ಲ, ಭನ್ತೇ."

"ಅದರಂತೆಯೆ, ಮಹಾರಾಜ, ಈಗಿನ ವ್ಯಾಯಾಮವು [ಇನ್ನೂ] ಮಾಡದಿರುವುದನ್ನು ಮಾಡುವುದು. ಹಿಂದಿನ ವ್ಯಾಯಾಮವು ಮಾಡಬೇಕಾದುದನ್ನು ಮಾಡಿರುವುದು."

"ಇನ್ನೊಂದು ಉಪಮಾನ ಕೊಡು."

"ಏನೆಂಬೆ, ಮಹಾರಾಜ? ಯುದ್ಧವು ನಿನಗೆ ಎದುರಾದಾಗ, ಆಗ ಅಗಳನ್ನು ತೋಡಿಸಿ, ಪ್ರಾಕಾರವನ್ನು ಎತ್ತಿಸಿ, ಗೋಪುರವನ್ನು ಮಾಡಿಸಿ, ಅಟ್ಟಾಲಕವನ್ನು ಕಟ್ಟಿಸಿ, ಧಾನ್ಯವನ್ನು ಕೂಡಿಹಾಕಿಸುವೆಯ? ಆಗ ನೀನು ಆನೆ, ಕುದುರೆ, ರಥ, ಬಿಲ್ಲು, ಕತ್ತಿಗಳಲ್ಲಿ ಶಿಕ್ಷೆಪಡೆಯುವೆಯ?"

"ಇಲ್ಲ, ಭನ್ತೇ."

"ಅದರಂತೆಯೆ, ಮಹಾರಾಜ, ಈಗಿನ ವ್ಯಾಯಾಮವು [ಇನ್ನೂ] ಮಾಡದಿರುವುದನ್ನು ಮಾಡುವುದು. ಹಿಂದಿನ ವ್ಯಾಯಾಮವು ಮಾಡಬೇಕಾದುದನ್ನು ಮಾಡಿರುವುದು. ಮಹಾರಾಜ,

'ಆತ್ಮಕ್ಕೆ ಹಿತವೆಂದು ತಿಳಿದುದನ್ನು
[ಧೀರನು] ಮೊದಲೇ ಸಿದ್ಧಮಾಡಿಕೊಳ್ಳಲಿ.
ಗಾಡಿಯುವನ ಚಿಂತೆಯಂತಲ್ಲದೆ
ಮಂತ್ರದಲ್ಲಿ ಧೀರನಾದವನು ಪರಾಕ್ರಮಮಾಡಲಿ.

'ಸಮವಾದ ಮಹಾಮಾರ್ಗವನ್ನು ಬಿಟ್ಟು
ವಿಷಮವಾದ ಮಾರ್ಗವನ್ನು ಹತ್ತಿ
[ಗಾಡಿಯ] ಅಕ್ಷವನ್ನು ಮುರಿದುಕೊಂಡು
ಗೋಳಾಡುವ ಗಾಡಿಯುವನಂತೆ—

'ಧರ್ಮವನ್ನು ಬಿಟ್ಟುಹೋಗಿ
ಅಧರ್ಮವನ್ನು ಅನುಸರಿಸಿದ
ಮನಸ್ಸು ಮೃತ್ಯುಮುಖವನ್ನು ಪಡೆದು
ಅಕ್ಷ ಮುರಿದುಕೊಂಡವನಂತೆ ಗೋಳಾಡುವುದು'

ಎಂದು ಭಗವಂತನು ಹೇಳಿದ್ದಾನೆ."

"ನೀನು ಕುಶಲಿ, ಭನ್ತೇ ನಾಗಸೇನ."

೪

ರಾಜನು "ಭನ್ತೇ ನಾಗಸೇನ, 'ಸಹಜವಾದ ಬೆಂಕಿಗಿಂತ ನಿರಯದ ಬೆಂಕಿಯ ತಾಪ ಬಹಳ ಹೆಚ್ಚು. ಸಹಜವಾದ ಬೆಂಕಿಯಲ್ಲಿ ಒಂದು ಸಣ್ಣ ಕಲ್ಲು ಎಸೆದರೆ, ಅದು ನಾಶವಾಗುವುದಿಲ್ಲ; ಒಂದು ದಿನವೆಲ್ಲ ಹೊಗೆಯಾಡುತ್ತದೆ. [ಆದರೆ] ಈ ಕೂಟಾಗಾರದಷ್ಟು ದೊಡ್ಡ ಕಲ್ಲನ್ನು ನಿರಯದ ಬೆಂಕಿಗೆ ಹಾಕಿದರೆ ಕ್ಷಣದಲ್ಲಿ ಲಯವಾಗುತ್ತದೆ' ಎಂದು ನೀವು ಹೇಳುವಿರಿ. ಈ ಮಾತಿನಲ್ಲಿ ನನಗೆ ಶ್ರದ್ಧೆಯಿಲ್ಲ. ಅಲ್ಲದೆ ಪುನಃ, 'ಹುಟ್ಟುವ ಸತ್ತ್ವಗಳು ಅನೇಕ ಸಾವಿರ ವರ್ಷಗಳು ನಿರಯದಲ್ಲಿ ಬೆಂದರೂ ಲಯವಾಗುವುದಿಲ್ಲ' ಎಂದು ಹೇಳುವಿರಿ. ಈ ಮಾತಿನಲ್ಲೂ ನನಗೆ ಶ್ರದ್ಧೆಯಿಲ್ಲ" ಎಂದನು.

ಸ್ಥವಿರನು "ಏನೆಂಬೆ, ಮಹಾರಾಜ? ಮಕರ, ಮೊಸಳೆ, ಆಮೆ, ನವಿಲು, ಪಾರಿವಾಳಗಳು, [ಇವುಗಳ ಹೆಣ್ಣು ಜಾತಿಗಳು] ಗಟ್ಟಿಯಾದ ಕಲ್ಲು ಮರಳುಗಳನ್ನು ತಿನ್ನುವುದಿಲ್ಲವೆ?" ಎಂದನು.

"ಹೌದು, ಭನ್ತೇ, ತಿನ್ನುವುವು."

"ಅದು ಅವುಗಳ ಹೊಟ್ಟೆಯಲ್ಲಿ ಚೀಲದೊಳಕ್ಕೆ ಹೋಗಿ ನಾಶವಾಗುವುದೆ?"

"ಹೌದು, ಭನ್ತೇ, ನಾಶವಾಗುವುದು."

"ಮತ್ತೆ, ಅವುಗಳ ಹೊಟ್ಟೆಯಲ್ಲಿರುವ ಗರ್ಭ— ಅದು ನಾಶವಾಗುವುದೆ?"

"ಇಲ್ಲ, ಭನ್ತೇ."

"ಅದಕ್ಕೇನು ಕಾರಣ?"

"ಕರ್ಮದ ಅಧಿಕಾರದಿಂದ [ಅದು] ನಾಶವಾಗದೆಂದು ತಿಳಿಯುವೆನು, ಭನ್ತೇ."

"ಅದರಂತೆಯೆ, ಮಹಾರಾಜ, ಕರ್ಮದ ಅಧಿಕಾರದಿಂದ, ನಿರಯಕ್ಕೆ ಹೋದ ಸತ್ತ್ವಗಳು ಅನೇಕ ಸಾವಿರ ವರ್ಷಗಳಾದರೂ ನಿರಯದಲ್ಲಿ ಬೆಂದೂ ನಾಶವಾಗರು. ಅಲ್ಲಿಯೆ ಹುಟ್ಟುವರು, ಅಲ್ಲಿಯೆ ಬೆಳೆಯುವರು, ಅಲ್ಲಿಯೆ ಸಾಯುವರು. ಮಹಾರಾಜ,

'ಎಂದಿನ ವರೆಗೆ ಪಾಪಕರ್ಮ ಮುಗಿಯುವುದಿಲ್ಲ,
ಅಂದಿನವರೆಗೆ ಅವನು ಸಾಯುವುದಿಲ್ಲ'

ಎಂದು ಭಗವಂತನು ಹೇಳಿದ್ದಾನೆ."

"ಇನ್ನೊಂದು ಉಪಮಾನ ಕೊಡು."

"ಏನೆಂಬೆ, ಮಹಾರಾಜ? ಸಿಂಹ, ಹುಲಿ, ಚಿರತೆ, ನಾಯಿ [ಇವುಗಳ ಹೆಣ್ಣು ಜಾತಿಗಳು] ಗಟ್ಟಿಯಾದ ಮೂಳೆ ಮಾಂಸಗಳನ್ನು ತಿನ್ನುವುದಿಲ್ಲವೆ?"

"ಹೌದು, ಭನ್ತೇ, ತಿನ್ನುವುವು."

"ಅದು ಅವುಗಳ ಹೊಟ್ಟೆಯಲ್ಲಿ ಚೀಲದೊಳಕ್ಕೆ ಹೋಗಿ ನಾಶವಾಗುವುದೆ?"

"ಹೌದು, ಭನ್ತೇ, ನಾಶವಾಗುವುದು."

"ಮತ್ತೆ, ಅವುಗಳ ಹೊಟ್ಟೆಯಲ್ಲಿರುವ ಗರ್ಭ – ಅದು ನಾಶವಾಗುವುದೆ?"

"ಇಲ್ಲ, ಭನ್ತೇ."

"ಅದಕ್ಕೇನು ಕಾರಣ?"

"ಕರ್ಮದ ಅಧಿಕಾರದಿಂದ [ಅದು] ನಾಶವಾಗದೆಂದು ತಿಳಿಯುವೆನು, ಭನ್ತೇ."

"ಅದರಂತೆಯೆ, ಮಹಾರಾಜ, ಕರ್ಮದ ಅಧಿಕಾರದಿಂದ, ನಿರಯಕ್ಕೆ ಹೋದ ಸತ್ತ್ವಗಳು ಅನೇಕ ಸಾವಿರ ವರ್ಷಗಳಾದರೂ ನಿರಯದಲ್ಲಿ ಬೆಂದೂ ನಾಶವಾಗರು."

"ಮತ್ತೊಂದು ಉಪಮಾನ ಕೊಡು."

"ಏನೆಂಬೆ, ಮಹಾರಾಜ? ಯವನಕರ, ಕ್ಷತ್ರಿಯರ, ಬ್ರಾಹ್ಮಣರ, ಗೃಹಪತಿಗಳ ಸುಕುಮಾರಿಯರು ಗಟ್ಟಿಯಾದ ಕಜ್ಜಾಯಗಳನ್ನೂ ಮಾಂಸವನ್ನೂ ತಿನ್ನುವುದಿಲ್ಲವೆ?"

"ಹೌದು, ಭನ್ತೇ, ತಿನ್ನುವರು."

"ಅದು ಅವರ ಹೊಟ್ಟೆಯಲ್ಲಿ ಚೀಲದೊಳಕ್ಕೆ ಹೋಗಿ ನಾಶವಾಗುವುದೆ?"

"ಹೌದು, ಭನ್ತೇ, ನಾಶವಾಗುವುದು."

“ಮತ್ತೆ, ಅವರ ಹೊಟ್ಟೆಯಲ್ಲಿರುವ ಗರ್ಭ—ಅದು ನಾಶವಾಗುವುದೆ?”

“ಇಲ್ಲ, ಭನ್ತೇ.”

“ಅದಕ್ಕೇನು ಕಾರಣ?”

“ಕರ್ಮದ ಅಧಿಕಾರದಿಂದ [ಅದು] ನಾಶವಾಗದೆಂದು ತಿಳಿಯುವೆನು, ಭನ್ತೇ.”

“ಅದರಂತೆ, ಮಹಾರಾಜ, ಕರ್ಮದ ಅಧಿಕಾರದಿಂದ ನಿರಯಕ್ಕೆ ಹೋದ ಸತ್ತ್ವಗಳು ಅನೇಕ ಸಾವಿರ ವರ್ಷಗಳಾದರೂ ನಿರಯದಲ್ಲಿ ಬೆಂದೂ ನಾಶವಾಗರು. ಅಲ್ಲಿಯೆ ಹುಟ್ಟುವರು, ಅಲ್ಲಿಯೆ ಬೆಳೆಯುವರು, ಅಲ್ಲಿಯೆ ಸಾಯುವರು. ಮಹಾರಾಜ,

‘ಎಂದಿನವರೆಗೆ ಪಾಪಕರ್ಮ ಮುಗಿಯುವುದಿಲ್ಲ,
ಅಂದಿನವರೆಗೆ ಅವನು ಸಾಯುವುದಿಲ್ಲ’

ಎಂದು ಭಗವಂತನು ಹೇಳಿದ್ದಾನೆ.”

“ನೀನು ಜಾಣ, ಭನ್ತೇ ನಾಗಸೇನ.”

೫

ರಾಜನು “ಭನ್ತೇ ನಾಗಸೇನ, ‘ಈ ಮಹಾಪೃಥ್ವಿ ನೀರಿನ ಮೇಲೆ ನಿಂತಿದೆ, ನೀರು ವಾಯುವಿನ ಮೇಲೆ ನಿಂತಿದೆ, ವಾಯು ಆಕಾಶದ ಮೇಲೆ ನಿಂತಿದೆ’ ಎಂದು ನೀವು ಹೇಳುವಿರಿ. ಈ ಮಾತಿನಲ್ಲಿ ನನಗೆ ಶ್ರದ್ಧೆಯಿಲ್ಲ” ಎಂದನು.

[ಆಗ] ಸ್ಥವಿರನು [ಒಂದು] ಧರ್ಮಕರಕದಲ್ಲಿ ನೀರು ಹಿಡಿದುಕೊಂಡು ‘ಮಹಾರಾಜ, ಈ ನೀರಿಗೆ ವಾಯು ಹೇಗೆ ಆಧಾರವಾಗಿದೆಯೋ ಆ ನೀರಿಗೂ ಹೀಗೆಯೆ ವಾಯು ಆಧಾರವಾಗಿದೆ’ ಎಂದು ರಾಜಾ ಮಿಲಿಂದನನ್ನು ಒಪ್ಪಿಸಿದನು.

“ನೀನು ಚತುರ, ಭನ್ತೇ ನಾಗಸೇನ.”

೬

ರಾಜನು “ಭನ್ತೇ ನಾಗಸೇನ, ನಿರೋಧವು ನಿರ್ವಾಣವೆ?” ಎಂದನು.

"ಹೌದು, ಮಹಾರಾಜ. ನಿರೋಧವು ನಿರ್ವಾಣ."

"ನಿರೋಧವು ಹೇಗೆ ನಿರ್ವಾಣ, ಭನ್ತೇ ನಾಗಸೇನ?"

"ಮಹಾರಾಜ, ಅಜ್ಞಾನಿಗಳಾದ ಸಾಮಾನ್ಯ ಜನರು ಎಲ್ಲರೂ ಅಧ್ಯಾತ್ಮಕ್ಕೆ ಹೊರಗಾದ ಆಯತನಗಳಲ್ಲಿ ಮೋದಪಡುವರು; [ಅದನ್ನು] ಪ್ರಶಂಸಿಸುವರು; [ಅದಕ್ಕೆ] ಅಂಟಿಕೊಂಡು ನಿಲ್ಲುವರು. ಅವರನ್ನು ಆ ಪ್ರವಾಹ ಎತ್ತಿಕೊಂಡು ಹೋಗುವುದು. ಅವರಿಗೆ ಜಾತಿ-ಜರಾಮರಣ-ಶೋಕ-ಪರಿದೇವ-ದುಃಖ-ದೌರ್ಮನಸ್ಯ-ಉಪಾಯಾಸಗಳಿಂದ ಬಿಡುಗಡೆಯಿಲ್ಲ; ದುಃಖದಿಂದ ಅವರಿಗೆ ಬಿಡುಗಡೆಯಿಲ್ಲ-ಎಂದು ನಾನು ಹೇಳುತ್ತೇನೆ. ಶ್ರುತವಂತನಾದ ಆರ್ಯಶ್ರಾವಕನು, ಮಹಾರಾಜ, ಅಧ್ಯಾತ್ಮಕ್ಕೆ ಹೊರಗಾದ ಆಯತನಗಳಲ್ಲಿ ಮೋದಪಡುವುದಿಲ್ಲ; [ಅದನ್ನು] ಪ್ರಶಂಸಿಸುವುದಿಲ್ಲ; [ಅದಕ್ಕೆ] ಅಂಟಿಕೊಂಡು ನಿಲ್ಲುವುದಿಲ್ಲ. [ಹೀಗೆ] ಅವುಗಳಲ್ಲಿ ಮೋದಪಡದೆ, ಅದನ್ನು ಪ್ರಶಂಸಿಸದೆ, ಅದಕ್ಕೆ ಅಂಟಿಕೊಳ್ಳದವನ ತೃಷ್ಣೆಯು ನಿರೋಧವಾಗುವುದು. ತೃಷ್ಣೆಯ ನಿರೋಧದಿಂದ ಉಪಾದಾನದ ನಿರೋಧ; ಉಪಾದಾನದ ನಿರೋಧದಿಂದ ಭವದ ನಿರೋಧ; ಭವದ ನಿರೋಧದಿಂದ ಜಾತಿಯ ನಿರೋಧ; ಜಾತಿಯ ನಿರೋಧದಿಂದ ಜರಾಮರಣ-ಶೋಕ-ಪರಿದೇವ-ದುಃಖ-ದೌರ್ಮನಸ್ಯ-ಉಪಾಯಾಸಗಳ ನಿರೋಧ; ಆ ಎಲ್ಲಾ ದುಃಖಸ್ಕಂಧವು ನಿರೋಧವಾಗುವುದು. ಹೀಗೆ, ಮಹಾರಾಜ, ನಿರೋಧವು ನಿರ್ವಾಣ."

"ನೀನು ಜಾಣ, ಭನ್ತೇ ನಾಗಸೇನ."

೭

ರಾಜನು "ಭನ್ತೇ ನಾಗಸೇನ, ನಿರ್ವಾಣವು ಎಲ್ಲರಿಗೂ ಲಭಿಸುವುದೆ?" ಎಂದನು.

"ನಿರ್ವಾಣವು ಎಲ್ಲರಿಗೂ ಲಭಿಸುವುದಿಲ್ಲ, ಮಹಾರಾಜ. ಆದರೆ, ಮಹಾರಾಜ, ಯಾರು ಸರಿಯಾದ ದಾರಿಯಲ್ಲಿ ನಡೆಯುವರು, ಒಪ್ಪಬೇಕಾದ ಧರ್ಮಗಳನ್ನು ಒಪ್ಪುವರು, ಚೆನ್ನಾಗಿ ತಿಳಿಯಬೇಕಾದ ಧರ್ಮಗಳನ್ನು ಚೆನ್ನಾಗಿ ತಿಳಿಯುವರು, ಬಿಡಬೇಕಾದ ಧರ್ಮಗಳನ್ನು ಬಿಡುವರು, ಭಾವಿಸಬೇಕಾದ ಧರ್ಮಗಳನ್ನು ಭಾವಿಸುವರು, ಸಾಕ್ಷಾತ್ಕರಿಸ

ಬೇಕಾದ ಧರ್ಮಗಳನ್ನು ಸಾಕ್ಷಾತ್ಕರಿಸುವರು — ಅವರಿಗೆ ನಿರ್ವಾಣವು ಲಭಿಸುವುದು."

"ನೀನು ಚತುರ, ಭನ್ತೇ ನಾಗಸೇನ."

೮

ರಾಜನು "ಭನ್ತೇ ನಾಗಸೇನ, ನಿರ್ವಾಣ ಲಭಿಸದವನು 'ನಿರ್ವಾಣವು ಸುಖ' ಎಂದು ತಿಳಿಯುವನೆ?" ಎಂದನು.

"ತಿಳಿಯುವನು, ಮಹಾರಾಜ."

"ಭನ್ತೇ ನಾಗಸೇನ, [ನಿರ್ವಾಣವು] ಲಭಿಸದೆಯೆ 'ನಿರ್ವಾಣವು ಸುಖ' ಎಂದು [ಅವನು] ಹೇಗೆ ತಿಳಿಯುವನು?"

"ಏನೆಂಬೆ ಮಹಾರಾಜ? ಕೈ ಕಾಲು ಕತ್ತರಿಸಿಕೊಳ್ಳದವರು 'ಕೈ ಕಾಲು ಕತ್ತರಿಸುವುದು ದುಃಖ' ಎಂದು ತಿಳಿಯುವರೆ?"

"ಹೌದು, ಭನ್ತೇ, ತಿಳಿಯುವರು."

"ಹೇಗೆ ತಿಳಿಯುವರು?"

"ಕೈ ಕಾಲು ಕತ್ತರಿಸಿದ ಇತರರ ಗೋಳಾಟದ ಸದ್ದು ಕೇಳಿ 'ಕೈ ಕಾಲು ಕತ್ತರಿಸುವುದು ದುಃಖ' ಎಂದು ತಿಳಿಯುವರು, ಭನ್ತೇ."

"ಅದರಂತೆಯೆ, ಮಹಾರಾಜ, ನಿರ್ವಾಣವನ್ನು ಕಂಡವರ [ಆನಂದದ] ಶಬ್ದವನ್ನು ಕೇಳಿ 'ನಿರ್ವಾಣವು ಸುಖ' ಎಂದು ತಿಳಿಯುವರು."

"ನೀನು ಕುಶಲಿ, ಭನ್ತೇ ನಾಗಸೇನ."

[ನಾಲ್ಕನೆಯ ವರ್ಗ ಮುಗಿಯಿತು.]

ವರ್ಗ ಐದು.

೧

ರಾಜನು "ಭನ್ತೇ ನಾಗಸೇನ, ನೀನು ಬುದ್ಧನನ್ನು ಕಂಡಿರುವೆಯು?" ಎಂದನು.

"ಇಲ್ಲ, ಮಹಾರಾಜ."

"ನಿನ್ನ ಆಚಾರ್ಯರು ಬುದ್ಧನನ್ನು ಕಂಡಿರುವರೆ?"

"ಇಲ್ಲ, ಮಹಾರಾಜ."

"ಹಾಗಾದರೆ, ಭನ್ತೇ ನಾಗಸೇನ, ಬುದ್ಧ [ಎಂಬವನು] ಇಲ್ಲ."

"ಮಹಾರಾಜ, ಹಿಮವತಿಯಾದ ಊಹಾನದಿಯನ್ನು ನೀನು ಕಂಡಿರುವೆಯು?"

"ಇಲ್ಲ, ಭನ್ತೇ."

"ನಿನ್ನ ತಂದೆ ಊಹಾನದಿಯನ್ನು ಕಂಡಿರುವನೆ?"

"ಇಲ್ಲ, ಭನ್ತೇ."

"ಹಾಗಾದರೆ, ಮಹಾರಾಜ, ಊಹಾನದಿ [ಎಂಬುದು] ಇಲ್ಲ."

"ಇದೆ, ಭನ್ತೇ. ನಾನು ಊಹಾನದಿಯನ್ನು ಕಾಣದಿದ್ದರೂ, ನನ್ನ ತಂದೆಯೂ ಊಹಾನದಿಯನ್ನು ಕಾಣದಿದ್ದರೂ, ಊಹಾನದಿ ಇದೆ."

"ಅದರಂತೆಯೆ, ಮಹಾರಾಜ, ನಾನು ಭಗವಂತನನ್ನು ಕಾಣದಿದ್ದರೂ, ಭಗವಂತನನ್ನು ನನ್ನ ಆಚಾರ್ಯರೂ ಕಾಣದಿದ್ದರೂ, ಭಗವಂತನು ಇದ್ದನು."

"ನೀನು ಜಾಣ, ಭನ್ತೇ ನಾಗಸೇನ."

೨

ರಾಜನು "ಭನ್ತೇ ನಾಗಸೇನ, ಬುದ್ಧನು ಎಲ್ಲರನ್ನೂ ಮೀರಿಸಿದವನೆ?" ಎಂದನು.

"ಹೌದು, ಮಹಾರಾಜ, ಭಗವಂತನು ಎಲ್ಲರನ್ನೂ ಮೀರಿಸಿದವನು."

"[ಆವನನ್ನು] ಹಿಂದೆ [ಎಂದೂ] ಕಾಣದೆ, ಬುದ್ಧನು ಎಲ್ಲರನ್ನೂ ಮೀರಿಸಿದವನೆಂದು ನಿನಗೆ ಹೇಗೆ ತಿಳಿಯಿತು?"

"ಏನೆಂಬೆ, ಮಹಾರಾಜ? ಮಹಾಸಮುದ್ರವನ್ನು ಹಿಂದೆ [ಎಂದೂ] ಕಾಣದವರು 'ಮಹಾಸಮುದ್ರವು ದೊಡ್ಡದು, ಗಂಭೀರವು, ಅಪ್ರಮೇಯವು; [ಅದರ] ಆಳ ತಿಳಿಯುವುದು ಕಷ್ಟ. ಅಲ್ಲಿ ಗಂಗೆ, ಯಮುನೆ, ಅಚಿರವತಿ, ಶರಭೂ, ಮಹೀ ಎಂಬ ಐದು ಮಹಾನದಿಗಳು ಸದಾ ಯಾವಾಗಲೂ [ಬಂದು] ಸೇರುವುವು. ಆದರೂ ಅಲ್ಲಿ ಕಡಿಮೆಯಾದಂತೆಯಾಗಲಿ ಹೆಚ್ಚಾದಂತೆಯಾಗಲಿ ತಿಳಿಯುವುದಿಲ್ಲ' ಎಂದು ತಿಳಿಯಲಾಪರೆ?"

"ತಿಳಿಯಲಾಪರು, ಭನ್ತೇ."

"ಅದರಂತೆಯೆ, ಮಹಾರಾಜ, ಪರಿನಿರ್ವಾಣ ಪಡೆದ ಮಹಾಶ್ರಾವಕರನ್ನು ಕಂಡು, ಭಗವಂತನು ಎಲ್ಲರನ್ನೂ ಮೀರಿಸಿದವನೆಂದು ತಿಳಿಯುತ್ತೇನೆ."

"ನೀನು ಚತುರ, ಭನ್ತೇ ನಾಗಸೇನ."

೩

ರಾಜನು "ಭನ್ತೇ ನಾಗಸೇನ, ಬುದ್ಧನು ಎಲ್ಲರನ್ನೂ ಮೀರಿಸಿದವನೆಂದು ತಿಳಿಯಲು ಶಕ್ಯವೆ?" ಎಂದನು.

"ತಿಳಿಯಲು ಶಕ್ಯ, ಮಹಾರಾಜ."

"ಅದು ಹೇಗೆ ಶಕ್ಯ, ಭನ್ತೇ ನಾಗಸೇನ?"

"ಮಹಾರಾಜ, ಬಹು ಕಾಲದ ಹಿಂದೆ ಸ್ಥವಿರ ತಿಷ್ಯನೆಂಬ ಲೇಖಾಚಾರ್ಯನಿದ್ದನು. ಅವನು ಸತ್ತು ಕಳೆದು ಹೋಗಿ ಬಹು ವರ್ಷಗಳಾದುವು. ಅವನನ್ನು ತಿಳಿಯುವುದು ಹೇಗೆ?"

"ಅವನ ಲೇಖನದಿಂದ, ಭನ್ತೇ."

"ಅದರಂತೆಯೇ, ಮಹಾರಾಜ, ಧರ್ಮವನ್ನು ಕಾಣುವವನು— ಅವನು ಭಗವಂತನನ್ನು ಕಾಣುವನು. ಧರ್ಮವನ್ನೇ ಭಗವಂತನು ಉಪದೇಶಮಾಡಿದುದು, ಮಹಾರಾಜ."

"ನೀನು ಕುಶಲಿ, ಭನ್ತೇ ನಾಗಸೇನ."

೪

ರಾಜನು "ಭನ್ತೇ ನಾಗಸೇನ, ನೀನು ಧರ್ಮವನ್ನು ಕಂಡಿರುವೆಯು?" ಎಂದನು.

"ಮಹಾರಾಜ, [ನಾವು] ಶ್ರಾವಕರು ಜೀವವಿರುವತನಕ ಬುದ್ಧನ ಕಣ್ಣೆದುರಿಗೆ ಬುದ್ಧನ ಆಜ್ಞೆಯಂತೆ ನಡೆಯತಕ್ಕದು."

"ನೀನು ಜಾಣ, ಭನ್ತೇ ನಾಗಸೇನ."

೫

ರಾಜನು "ಭನ್ತೇ ನಾಗಸೇನ, ಸಂಕ್ರಮಣವಿಲ್ಲದೆ ಪ್ರತಿಸಂಧಿ ಉಂಟೆ?" ಎಂದನು.

"ಹೌದು, ಮಹಾರಾಜ. ಸಂಕ್ರಮಿಸದೆ ಪ್ರತಿಸಂಧಿ ಉಂಟು."

"ಸಂಕ್ರಮಿಸದೆ ಪ್ರತಿಸಂಧಿಸುವುದು ಹೇಗೆ, ಭನ್ತೇ ನಾಗಸೇನ? ಉಪಮಾನ ಕೊಡು."

"ಮಹಾರಾಜ, ಯಾವನಾದರೂ ಪುರುಷನು [ಒಂದು] ದೀಪದಿಂದ [ಇನ್ನೊಂದು] ದೀಪವನ್ನು ಹತ್ತಿಸಿದರೆ, [ಒಂದು] ದೀಪದಿಂದ ಇನ್ನೊಂದು ದೀಪ ಸಂಕ್ರಮಿಸಿತೇನು?"

"ಇಲ್ಲ, ಭನ್ತೇ."

"ಅದರಂತೆಯೆ, ಮಹಾರಾಜ, ಸಂಕ್ರಮಿಸದೆ ಪ್ರತಿಸಂಧಿ ಉಂಟು."

"ಇನ್ನೊಂದು ಉಪಮಾನ ಕೊಡು."

"ಮಹಾರಾಜ, ನೀನು ಎಳೆಯವನಾಗಿದ್ದಾಗ ಶ್ಲೋಕಾಚಾರ್ಯನ ಬಳಿಯಲ್ಲಿ ಯಾವುದಾದರೂ ಶ್ಲೋಕವನ್ನು ಗ್ರಹಿಸಿದುದು ನೆನಪಿದೆಯೆ?"

"ಹೌದು, ಭನ್ತೇ."

"ಹಾಗಾದರೆ, ಮಹಾರಾಜ, ಆ ಶ್ಲೋಕವು ಆಚಾರ್ಯನಿಂದ ಸಂಕ್ರಮಿಸಿತೇನು?"

"ಇಲ್ಲ, ಭನ್ತೇ."

"ಅದರಂತೆಯೇ, ಮಹಾರಾಜ, ಸಂಕ್ರಮಿಸದೆ ಪ್ರತಿಸಂಧಿ ಉಂಟು."

"ನೀನು ಜಾಣ, ಭನ್ತೇ ನಾಗಸೇನ."

೬

ರಾಜನು "ಭನ್ತೇ ನಾಗಸೇನ, ವೇದಕ [ಎಂಬುದು] ಸಿಕ್ಕುವುದೆ?" ಎಂದನು.

ಸ್ಥವಿರನು "ಪರಮಾರ್ಥದಲ್ಲಿ ವೇದಕ [ಎಂಬುದು] ಸಿಕ್ಕುವುದಿಲ್ಲ, ಮಹಾರಾಜ" ಎಂದನು.

"ನೀನು ಚತುರ, ಭನ್ತೇ ನಾಗಸೇನ."

೭

ರಾಜನು "ಭನ್ತೇ ನಾಗಸೇನ, ಈ ದೇಹದಿಂದ ಬೇರೆ ದೇಹಕ್ಕೆ ಸಂಕ್ರಮಿಸುವ ಸತ್ತ್ವ ಯಾವುದಾದರೂ ಇದೆಯೆ?" ಎಂದನು.

"ಇಲ್ಲ, ಮಹಾರಾಜ."

"ಈ ದೇಹದಿಂದ ಬೇರೆ ದೇಹಕ್ಕೆ ಸಂಕ್ರಮಣವಿಲ್ಲದಿದ್ದರೆ, ಭನ್ತೇ ನಾಗಸೇನ, [ಈ ದೇಹವು] ಪಾಪಕರ್ಮಗಳಿಂದ ಬಿಡುಗಡೆ ಹೊಂದುವುದು, ಅಲ್ಲವೆ?"

"ಹೌದು, ಮಹಾರಾಜ. [ಈ ದೇಹವು] ಪ್ರತಿಸಂಧಿಸದಿದ್ದರೆ ಪಾಪ ಕರ್ಮಗಳಿಂದ ಬಿಡುಗಡೆ ಹೊಂದುವುದು. [ಆದರೆ] ಯಾವಾಗ ಪ್ರತಿ ಸಂಧಿಸುವುದು, ಆಗ ಪಾಪಕರ್ಮಗಳಿಂದ ಬಿಡುಗಡೆಯಾಗದು, ಮಹಾರಾಜ."

"ಉಪಮಾನ ಕೊಡು."

"ಮಹಾರಾಜ, ಯಾವನಾದರೂ ಪುರುಷನು ಬೇರೊಬ್ಬ ಪುರುಷನ ಮಾವನ್ನು ಕದ್ದರೆ, ಅವನು ಶಿಕ್ಷೆಗೆ ಪಾತ್ರನಾಗುವನೆ?"

"ಹೌದು, ಭನ್ತೇ, ಶಿಕ್ಷೆಗೆ ಪಾತ್ರನಾಗುವನು."

"[ಆದರೆ] ಮಹಾರಾಜ, ಅವನು ಯಾವುದನ್ನು ನೆಟ್ಟನೋ ಅವು ಗಳನ್ನು ಅವನು ಕದಿಯಲಿಲ್ಲ; ಶಿಕ್ಷೆಗೆ ಹೇಗೆ ಪಾತ್ರನಾದಾನು?"

"ಭನ್ತೇ, ಆ ಮಾವು ಅವುಗಳ ಆಶ್ರಯದಿಂದ ಹುಟ್ಟಿದುದು. ಅದರಿಂದ ಶಿಕ್ಷೆಗೆ ಪಾತ್ರನಾಗುವನು."

"ಅದರಂತೆಯೆ, ಮಹಾರಾಜ, ಈ ನಾಮರೂಪವು ಶುಭವಾದ ಅಥವಾ ಅಶುಭವಾದ ಕರ್ಮವನ್ನು ಮಾಡಿದರೆ, ಆ ಕರ್ಮದಿಂದ ಬೇರೆ ಒಂದು ನಾಮರೂಪವು ಪ್ರತಿಸಂಧಿಸುವುದು. ಅದರಿಂದ ಪಾಪಕರ್ಮ ಗಳಿಂದ ಬಿಡುಗಡೆ ಆಗದು."

"ನೀನು ಚತುರ, ಭನ್ತೇ ನಾಗಸೇನ."

೮

ರಾಜನು "ಭನ್ತೇ ನಾಗಸೇನ, ಈ ನಾಮರೂಪವು ಕುಶಲ ಅಥವಾ ಅಕುಶಲ ಕರ್ಮಗಳನ್ನು ಮಾಡಿದರೆ, ಆ ಕರ್ಮಗಳು ಎಲ್ಲಿ ನಿಲ್ಲುವುವು?" ಎಂದನು.

"ಆ ಕರ್ಮಗಳು 'ಬಿಟ್ಟು ಅಗಲದ ನೆರಳಿನಂತೆ' ಅನುಸರಿಸುವುವು, ಮಹಾರಾಜ."

"ಭನ್ತೇ, 'ಆ ಕರ್ಮಗಳು ಇಲ್ಲಿವೆ, ಇಲ್ಲಿವೆ' ಎಂದು ಆ ಕರ್ಮಗಳನ್ನು ತೋರಿಸಲು ಶಕ್ಯವೆ?"

"ಶಕ್ಯವಿಲ್ಲ, ಮಹಾರಾಜ."

"ಉಪಮಾನ ಕೊಡು."

"ಏನೆಂಬೆ, ಮಹಾರಾಜ? ಈ ಮರಗಳಲ್ಲಿ ಇನ್ನೂ ಹುಟ್ಟದ ಹಣ್ಣುಗಳನ್ನು ಕುರಿತು, 'ಹಣ್ಣು ಇಲ್ಲಿದೆ, ಇಲ್ಲಿದೆ' ಎಂದು ಆ ಹಣ್ಣುಗಳನ್ನು ತೋರಿಸಲು ಶಕ್ಯವೆ?"

"ಇಲ್ಲ, ಭನ್ತೇ."

"ಅದರಂತೆಯೇ, ಮಹಾರಾಜ, ಅವ್ಯವಚ್ಛಿನ್ನವಾದ ಸಂತತಿಯಲ್ಲಿ 'ಆ ಕರ್ಮಗಳು ಇಲ್ಲಿವೆ, ಇಲ್ಲಿವೆ' ಎಂದು ಆ ಕರ್ಮಗಳನ್ನು ತೋರಿಸಲು ಶಕ್ಯವಲ್ಲ."

"ನೀನು ಜಾಣ, ಭನ್ತೇ ನಾಗಸೇನ."

೯

ರಾಜನು "ಭನ್ತೇ ನಾಗಸೇನ, ಹುಟ್ಟುವವನು 'ನಾನು ಹುಟ್ಟುತ್ತೇನೆ' ಎಂದು ತಿಳಿಯುವನೆ?" ಎಂದನು.

"ಹೌದು, ತಿಳಿಯುವನು, ಮಹಾರಾಜ."

"ಉಪಮಾನ ಕೊಡು."

"ಮಹಾರಾಜ, ಕೃಷಿಕನಾದ ಗೃಹಪತಿಯು ಭೂಮಿಯಲ್ಲಿ ಬೀಜ ಬಿತ್ತಿದರೆ, ದೇವತೆಯು ಚೆನ್ನಾಗಿ ಮಳೆಗರೆದರೆ, 'ಧಾನ್ಯ ಬೆಳೆಯುವುದು' ಎಂದು [ಅವನು] ತಿಳಿಯುವನೆ?"

"ಹೌದು, ಭನ್ತೇ, ತಿಳಿಯುವನು."

"ಅದರಂತೆಯೆ, ಮಹಾರಾಜ, ಹುಟ್ಟುವವನು 'ನಾನು ಹುಟ್ಟುತ್ತೇನೆ' ಎಂದು ತಿಳಿಯುವನು."

"ನೀನು ಕುಶಲಿ, ಭನ್ತೇ ನಾಗಸೇನ."

೧೦

ರಾಜನು "ಭನ್ತೇ ನಾಗಸೇನ, ಬುದ್ಧನು ಇರುವನೆ?" ಎಂದನು.

"ಹೌದು, ಭಗವಂತನು ಇರುವನು, ಮಹಾರಾಜ."

"ಭನ್ತೇ ನಾಗಸೇನ, ಬುದ್ಧನನ್ನು 'ಇಲ್ಲಿ, ಇಲ್ಲಿ' ಎಂದು ತೋರಿಸಲು ಶಕ್ಯವೆ?"

"ಭಗವಂತನು ಅನುಪಾದಿಶೇಷವಾದ ನಿರ್ವಾಣಧಾತುವಿನಲ್ಲಿ ಪರಿನಿರ್ವಾಣ ಪಡೆದನು, ಮಹಾರಾಜ. ಭಗವಂತನನ್ನು 'ಅಲ್ಲಿ, ಇಲ್ಲಿ' ಎಂದು ತೋರಿಸಲು ಶಕ್ಯವಿಲ್ಲ."

"ಉಪಮಾನ ಕೊಡು."

"ಏನೆಂಬೆ, ಮಹಾರಾಜ? ಪ್ರಜ್ವಲಿಸುವ ದೊಡ್ಡ ಬೆಂಕಿಯ ಸಮುದಾಯದಲ್ಲಿ ಆರಿಹೋದ ಒಂದು ಜ್ವಾಲೆಯನ್ನು ಕುರಿತು 'ಅಲ್ಲಿ, ಇಲ್ಲಿ' ಎಂದು ತೋರಿಸಲು ಶಕ್ಯವೆ?"

"ಇಲ್ಲ, ಭನ್ತೇ. ಆ ಜ್ವಾಲೆ ಮುಗಿದುಹೋಗಿದೆ, ಮರೆಯಾಗಿದೆ."

"ಅದರಂತೆಯೆ, ಮಹಾರಾಜ, ಭಗವಂತನು ಅನುಪಾದಿಶೇಷವಾದ ನಿರ್ವಾಣಧಾತುವಿನಲ್ಲಿ ಪರಿನಿರ್ವಾಣ ಪಡೆದನು. ಮುಗಿದು ಮರೆಯಾದ ಭಗವಂತನನ್ನು 'ಅಲ್ಲಿ, ಇಲ್ಲಿ' ಎಂದು ತೋರಿಸಲು ಶಕ್ಯವಿಲ್ಲ. ಆದರೆ, ಧರ್ಮಕಾಯದಿಂದ ಭಗವಂತನನ್ನು ತೋರಿಸಲು ಶಕ್ಯ, ಮಹಾರಾಜ. ಧರ್ಮವನ್ನೇ ಭಗವಂತನು ಉಪದೇಶಮಾಡಿದುದು."

"ನೀನು ಜಾಣ, ಭನ್ತೇ ನಾಗಸೇನ."

[ಐದನೆಯ ವರ್ಗ ಮುಗಿಯಿತು.]

ವರ್ಗ ಆರು.

೧

ರಾಜನು "ಭನ್ತೇ ನಾಗಸೇನ, [ನಿಮಗೆ], ಪರಿವ್ರಾಜಕರಿಗೆ ದೇಹವು ಪ್ರಿಯವಾದುದೆ?" ಎಂದನು.

"ಪರಿವ್ರಾಜಕರಿಗೆ ದೇಹವು ಪ್ರಿಯವಲ್ಲ, ಮಹಾರಾಜ."

"ಹಾಗಾದರೆ, ಅದನ್ನು ನೀವು ಪೋಷಿಸಿ ಉಪಚರಿಸುವಿರಿ ಏಕೆ, ಭನ್ತೇ?"

"ಮಹಾರಾಜ, ನೀನು ಯುದ್ಧಕ್ಕೆ ಹೋದಾಗ ಯಾವಾಗಲಾದರೂ ಎಲ್ಲಿಯಾದರೂ ನಿನಗೆ ಬಾಣದಿಂದ ಗಾಯವಾಗಿರುವುದೆ?"

"ಹೌದು, ಭನ್ತೇ, ಆಗಿದೆ."

"ಆ ಗಾಯಕ್ಕೆ ಆಲೇಪನ ಹಚ್ಚಿ, ತೈಲವನ್ನು ಸೂಕ್ಷ್ಮವಾಗಿ ಸವರಿ, ಬಟ್ಟೆ ಎಲೆಗಳಿಂದ [ಅದನ್ನು] ಕಟ್ಟುವುದಿಲ್ಲವೆ, ಮಹಾರಾಜ?"

"ಹೌದು, ಭನ್ತೇ. ಹಾಗೆ ಮಾಡುವುದುಂಟು."

"ಏಕೆ, ಮಹಾರಾಜ? ಆಲೇಪನ ಹಚ್ಚಿ, ತೈಲ ಸವರಿ, ಬಟ್ಟೆ ಎಲೆಗಳನ್ನು ಕಟ್ಟುವುದಕ್ಕೆ ಆ ಗಾಯ ನಿನಗೆ ಪ್ರಿಯವಾದುದೆ?"

"ಆ ಗಾಯ ನನಗೆ ಪ್ರಿಯವಲ್ಲ, ಭನ್ತೇ. ಆದರೂ [ಅಲ್ಲಿಯ] ಮಾಂಸ ಬೆಳೆಯಲೆಂದು ಆಲೇಪನ ಹಚ್ಚುವೆವು, ತೈಲ ಸವರುವೆವು, ಬಟ್ಟೆ ಎಲೆಗಳನ್ನು ಕಟ್ಟುವೆವು."

"ಅದರಂತೆಯೇ, ಮಹಾರಾಜ, ಪರಿವ್ರಾಜಕರಿಗೆ ದೇಹವು ಅಪ್ರಿಯವಾದುದು; ಆದರೂ, ಪರಿವ್ರಾಜಕರು [ದೇಹಕ್ಕೆ] ಅಂಟಿಕೊಳ್ಳದೆ ಬ್ರಹ್ಮಚರ್ಯದ ಅನುಗ್ರಹಕ್ಕಾಗಿ ದೇಹವನ್ನು ಕಾಪಾಡುವರು. ಅಲ್ಲದೆ, ಮಹಾರಾಜ, ದೇಹವು ಗಾಯಕ್ಕೆ ಸಮಾನವಾದುದೆಂದು ಭಗವಂತನು ಹೇಳಿದ್ದಾನೆ. ಅದರಿಂದ, ಪರಿವ್ರಾಜಕರು [ದೇಹಕ್ಕೆ] ಅಂಟಿಕೊಳ್ಳದೆ, ದೇಹವನ್ನು ಗಾಯದಂತೆ ಕಾಪಾಡುವರು.

"ಮಹಾರಾಜ,

'[ಈ ದೇಹವನ್ನು] ಒದ್ದೆಯಾದ ಚರ್ಮ ಮುಚ್ಚಿದೆ.
[ಇದಕ್ಕೆ] ಒಂಬತ್ತು ಬಾಗಿಲು

[ಇದು] ಅಶುಚಿ, ಹೊಲೆವಾಸನೆ:
ದೊಡ್ಡ ಗಾಯದಂತೆ ಸೋರುತ್ತದೆ'

ಎಂದು ಭಗವಂತನು ಹೇಳಿದ್ದಾನೆ."

"ನೀನು ಕುಶಲಿ, ಭನ್ತೇ ನಾಗಸೇನ."

೨

ರಾಜನು "ಭನ್ತೇ ನಾಗಸೇನ, ಬುದ್ಧನು ಎಲ್ಲವನ್ನೂ ತಿಳಿದವನೆ? ಎಲ್ಲವನ್ನೂ ಕಂಡವನೆ?" ಎಂದನು.

"ಹೌದು, ಮಹಾರಾಜ. ಭಗವಂತನು ಸರ್ವಜ್ಞ, ಸರ್ವದರ್ಶಿ."

"ಹಾಗಾದರೆ, ಭನ್ತೇ ನಾಗಸೇನ, [ಬುದ್ಧನು] ಸಮಯವನ್ನು ಅನುಸರಿಸಿ ಶ್ರಾವಕರಿಗೆ ಶಿಕ್ಷಾಪದವನ್ನು ಆಜ್ಞೆಮಾಡಿದುದೇಕೆ?"

"ಮಹಾರಾಜ, ಈ ಪೃಥ್ವಿಯಲ್ಲಿರುವ ಎಲ್ಲಾ ಭೈಷಜ್ಯಗಳನ್ನೂ ಬಲ್ಲ ವೈದ್ಯನು ಯಾವನಾದರೂ ಇರುವನೆ?"

"ಹೌದು, ಮಹಾರಾಜ, ಇರುವನು."

"ಏನು, ಮಹಾರಾಜ? ಆ ವೈದ್ಯನು ರೋಗ ಉಂಟಾದಾಗ ಭೈಷಜ್ಯವನ್ನು ಕುಡಿಸುತ್ತಾನೆಯೊ, ಅಥವಾ [ರೋಗ] ಉಂಟಾಗದ ಕಾಲದಲ್ಲೊ?"

"ರೋಗ ಉಂಟಾದ ಸಮಯದಲ್ಲಿ ಭೈಷಜ್ಯವನ್ನು ಕುಡಿಸುವನು; [ರೋಗ] ಉಂಟಾಗದ ಕಾಲದಲ್ಲಲ್ಲ."

"ಅದರಂತೆಯೇ, ಮಹಾರಾಜ, ಎಲ್ಲವನ್ನೂ ತಿಳಿದು ಎಲ್ಲವನ್ನೂ ಕಂಡ ಭಗವಂತನು ಶ್ರಾವಕರಿಗೆ ಶಿಕ್ಷಾಪದವನ್ನು ಅಕಾಲದಲ್ಲಿ ಆಜ್ಞೆ ಮಾಡಲಿಲ್ಲ; ಜೀವವಿರುವತನಕ ಅತಿಕ್ರಮಿಸಬಾರದಾದ ಶಿಕ್ಷಾಪದವನ್ನು ಸಮಯ ಬಂದಾಗ [ಮಾತ್ರ] ಶ್ರಾವಕರಿಗೆ ಆಜ್ಞೆಮಾಡಿದನು."

"ನೀನು ಜಾಣ, ಭನ್ತೇ ನಾಗಸೇನ."

೩

ರಾಜನು "ಭನ್ತೇ ನಾಗಸೇನ, ಬುದ್ಧನಿಗೆ ಮೂವತ್ತೆರಡು ಮಹಾ ಪುರುಷಲಕ್ಷಣಗಳು ಇದ್ದುವೆ? [ಅವನು] ಎಂಬತ್ತು ಉಪಲಕ್ಷಣಗಳಿಂದ

ಮೆರೆಯುತ್ತಿದ್ದನೆ? ಅವನ ಬಣ್ಣ ಸುವರ್ಣವಾಗಿತ್ತೆ? ಅವನ ಚರ್ಮ ಚಿನ್ನದ ಹಾಗಿತ್ತೆ? ಅವನ ಸುತ್ತ ಮಾರುದ್ದದ ಪ್ರಭಾಮಂಡಲವಿತ್ತೆ?" ಎಂದನು.

"ಹೌದು, ಮಹಾರಾಜ, ಭಗವಂತನಿಗೆ ಅವೆಲ್ಲ ಇತ್ತು."

"ಏನು, ಭನ್ತೇ, ಅವನ ತಾಯಿತಂದೆ ಹಾಗೆಯೆ ಇದ್ದರೇನು?"

"ಇಲ್ಲ, ಮಹಾರಾಜ."

"ಹಾಗಾದರೆ, ಭನ್ತೇ ನಾಗಸೇನ, ಬುದ್ಧನು ಮೂವತ್ತೆರಡು ಮಹಾಪುರುಷಲಕ್ಷಣಗಳೊಡನೆ, ಎಂಬತ್ತು ಉಪಲಕ್ಷಣಗಳೊಡನೆ, ಸುವರ್ಣವರ್ಣನಾಗಿ, ಚಿನ್ನದಂತಹ ಚರ್ಮದೊಡನೆ, ಮಾರುದ್ದದ ಪ್ರಭಾಮಂಡಲದೊಡನೆ ಹುಟ್ಟಿದನು. [ಆದರೆ] ಮಗನು ತಾಯಂತೆಯೋ ತಾಯ ಕಡೆಯವರಂತೆಯೋ ಆಗುವನು; ಅಥವಾ ತಂದೆಯಂತೆಯೋ ತಂದೆಯ ಕಡೆಯವರಂತೆಯೋ ಆಗುವನು. [ಅಲ್ಲವೆ?]"

ಸ್ಥವಿರನು "ಮಹಾರಾಜ, ಶತಪತ್ರವೆಂಬ ಪದ್ಮವುಂಟೆ?" ಎಂದನು.

"ಹೌದು, ಭನ್ತೇ, ಉಂಟು."

"ಅದು ಹುಟ್ಟುವುದೆಲ್ಲಿ?"

"[ಅದು] ಕೆಸರಿನಲ್ಲಿ ಹುಟ್ಟುವುದು; ನೀರಿನಲ್ಲಿ ಆಶ್ರಯ ಪಡೆಯುವುದು."

"ಏನು, ಮಹಾರಾಜ? ಬಣ್ಣದಲ್ಲಾಗಲಿ ಗಂಧದಲ್ಲಾಗಲಿ ರಸದಲ್ಲಿಯಾಗಲಿ ಪದ್ಮವು ಕೆಸರಿಗೆ ಸಮಾನವೆ?"

"ಇಲ್ಲ, ಭನ್ತೇ."

"ಅಥವಾ, ವರ್ಣ ಗಂಧ ರಸಗಳಲ್ಲಿ [ಪದ್ಮವು] ನೀರಿಗೆ ಸಮಾನವೆ?"

"ಇಲ್ಲ, ಭನ್ತೇ."

"ಹಾಗೆಯೇ, ಮಹಾರಾಜ, ನೀನು ಹೇಳಿದ ಲಕ್ಷಣಗಳು ಅವನ ತಾಯಿತಂದೆಗೆ ಇಲ್ಲದಿದ್ದರೂ ಅವು ಎಲ್ಲವೂ ಭಗವಂತನಿಗೆ ಇದ್ದುವು."

"ನೀನು ಜಾಣ, ಭನ್ತೇ ನಾಗಸೇನ."

೪

ರಾಜನು "ಭನ್ತೇ ನಾಗಸೇನ, ಬುದ್ಧನು ಬ್ರಹ್ಮಚಾರಿಯೆ?" ಎಂದನು.

"ಹೌದು, ಮಹಾರಾಜ. ಭಗವಂತನು ಬ್ರಹ್ಮಚಾರಿ."

"ಹಾಗಾದರೆ, ಭನ್ತೇ ನಾಗಸೇನ, ಬುದ್ಧನು ಬ್ರಹ್ಮನ ಶಿಷ್ಯ!"

"ಮಹಾರಾಜ, ನಿನ್ನಲ್ಲಿ ಪಟ್ಟದ ಆನೆ ಇದೆಯೆ?"

"ಹೌದು, ಭನ್ತೇ, ಇದೆ."

"ಏನು ಮಹಾರಾಜ, ಆ ಆನೆ ಯಾವಾಗಲಾದರೂ ಎಲ್ಲಿಯಾದರೂ ಕ್ರೌಂಚನಾದವನ್ನು ಸದ್ದುಮಾಡುವುದೆ?"*

"ಹೌದು, ಭನ್ತೇ, ಸದ್ದುಮಾಡುವುದು."

"ಆದರಿಂದ, ಮಹಾರಾಜ, ಆ ಆನೆ ಕ್ರೌಂಚಗಳ ಶಿಷ್ಯನೆ?"

"ಅಲ್ಲ, ಭನ್ತೇ."

"ಏನು, ಮಹಾರಾಜ? ಬ್ರಹ್ಮನು ಬುದ್ಧಿಯುಳ್ಳವನೊ? ಬುದ್ಧಿಯಿಲ್ಲದವನೊ?"

"ಬುದ್ಧಿಯುಳ್ಳವನು, ಭನ್ತೇ."

"ಹಾಗಾದರೆ, ಮಹಾರಾಜ, ಬ್ರಹ್ಮನು ಭಗವಂತನ ಶಿಷ್ಯ!"

"ನೀನು ಚತುರ, ಭನ್ತೇ ನಾಗಸೇನ."

೫

ರಾಜನು "ಭನ್ತೇ ನಾಗಸೇನ, ಉಪಸಂಪದವು ಸುಂದರವಾದುದೆ?" ಎಂದನು.

"ಹೌದು, ಮಹಾರಾಜ. ಉಪಸಂಪದವು ಸುಂದರವಾದುದು."

"ಭನ್ತೇ, ಬುದ್ಧನಿಗೆ ಉಪಸಂಪದವು ಇತ್ತೆ? ಅಥವಾ ಇರಲಿಲ್ಲವೆ?"

"ಮಹಾರಾಜ, ಬೋಧಿವೃಕ್ಷದ ಮೂಲದಲ್ಲಿ ಸರ್ವಜ್ಞತೆಯ ಜ್ಞಾನದೊಡನೆ ಭಗವಂತನಿಗೆ ಉಪಸಂಪದವು ಪ್ರಾಪ್ತವಾಯಿತು. ಜೀವವಿರುವವರೆಗೆ ಅತಿಕ್ರಮಿಸಬಾರದ ಶಿಕ್ಷಾಪದವನ್ನು ಭಗವಂತನು ಶ್ರಾವಕರಿಗೆ ಆಜ್ಞಾಪಿಸಿದ ಹಾಗೆ ಬೇರೆಯವರು ಭಗವಂತನಿಗೆ ಉಪಸಂಪದವನ್ನು ಕೊಡಲಿಲ್ಲ."

"ನೀನು ಜಾಣ, ಭನ್ತೇ ನಾಗಸೇನ."

---

* 'ಕೋಂಚನಾದಂ ನದತಿ' — ಆನೆಯು ಘೀಂಕಾರಮಾಡುವುದು.

೬

ರಾಜನು "ಭನ್ತೇ ನಾಗಸೇನ, ತಾಯಿಯ ಮರಣಕ್ಕಾಗಿ ಅಳುವವನು, ಧರ್ಮದ ಮೇಲಿನ ಪ್ರೇಮದಿಂದ ಅಳುವವನು,— ಈ ಇಬ್ಬರಲ್ಲಿ ಯಾರಿಗೆ [ಆ] ಕಣ್ಣೀರು ಭೈಷಜ್ಯ? ಯಾರಿಗೆ ಭೈಷಜ್ಯವಲ್ಲ?" ಎಂದನು.

"ಒಬ್ಬನ ಕಣ್ಣೀರು, ಮಹಾರಾಜ, ರಾಗ ದ್ವೇಷ ಮೋಹಗಳಿಂದ ಕೊಳೆಯಾದುದು, ಬಿಸಿಯಾದುದು. ಒಬ್ಬನದು ಪ್ರೀತಿ ಸೌಮನಸ್ಯಗಳಿಂದ ಶುದ್ಧವಾದುದು, ಶೀತಲವಾದುದು. ಯಾವುದು ಶೀತಲ, ಅದು ಭೈಷಜ್ಯ, ಮಹಾರಾಜ; ಯಾವುದು ಉಷ್ಣ, ಅದು ಭೈಷಜ್ಯವಲ್ಲ."

"ನೀನು ಕುಶಲಿ, ಭನ್ತೇ ನಾಗಸೇನ."

೭

ರಾಜನು "ಭನ್ತೇ ನಾಗಸೇನ, ರಾಗವುಳ್ಳವನಿಗೂ ರಾಗವಿಲ್ಲದವನಿಗೂ ವ್ಯತ್ಯಾಸವೇನು?" ಎಂದನು.

"ಒಬ್ಬನು [ಲೋಕಕ್ಕೆ] ಅಂಟಿಕೊಂಡವನು, ಮಹಾರಾಜ. ಒಬ್ಬನು [ಲೋಕಕ್ಕೆ] ಅಂಟಿಕೊಳ್ಳದವನು."

"ಈ 'ಅಂಟಿಕೊಂಡವನು', 'ಅಂಟಿಕೊಳ್ಳದವನು' ಎಂಬುದು ಏನು, ಭನ್ತೇ?"

"ಒಬ್ಬನು [ಇದು ಬೇಕು, ಅದು ಬೇಕು ಎಂಬ] ಅರ್ಥವುಳ್ಳವನು, ಮಹಾರಾಜ. ಒಬ್ಬನು [ಈ] ಅರ್ಥವಿಲ್ಲದವನು."

"ನನಗೆ ಹೀಗೆ ತೋರುತ್ತದೆ, ಭನ್ತೇ: ರಾಗವಿರುವವನಾಗಲಿ, ರಾಗವಿಲ್ಲದವನಾಗಲಿ, ಎಲ್ಲರೂ ತಿನ್ನುವುದರಲ್ಲಿ ಶುಭವಾದುದನ್ನೇ ಬಯಸುವರು; ಯಾರೂ ಕೆಟ್ಟುದನ್ನು ಬಯಸುವುದಿಲ್ಲ."

"ಮಹಾರಾಜ, ರಾಗವಿರುವವನು ರಸವನ್ನು ಅನುಭವಿಸುತ್ತ ಆ ರಸದಿಂದ ಬರುವ ರಾಗವನ್ನು ಅನುಭವಿಸುತ್ತ ಭೋಜನವನ್ನು ತಿನ್ನುವನು. ರಾಗವಿಲ್ಲದವನು ರಸವನ್ನು [ಮಾತ್ರ] ಅನುಭವಿಸುತ್ತ, ಆ ರಸದಿಂದ ಬರುವ ರಾಗವನ್ನು ಅನುಭವಿಸದೆ ಭೋಜನವನ್ನು ತಿನ್ನುವನು."

"ನೀನು ಜಾಣ, ಭನ್ತೇ ನಾಗಸೇನ."

೮

ರಾಜನು "ಭನ್ತೇ ನಾಗಸೇನ, ಪ್ರಜ್ಞೆ ಎಲ್ಲಿ ವಾಸಮಾಡುವುದು?" ಎಂದನು.

"ಎಲ್ಲಿಯೂ ಇಲ್ಲ, ಮಹಾರಾಜ."

"ಹಾಗಾದರೆ, ಭನ್ತೇ ನಾಗಸೇನ, ಪ್ರಜ್ಞೆ [ಎಂಬುದು] ಇಲ್ಲ."

"ಮಹಾರಾಜ, ಗಾಳಿ ಎಲ್ಲಿ ವಾಸಮಾಡುವುದು?"

"ಎಲ್ಲಿಯೂ ಇಲ್ಲ, ಭನ್ತೇ."

"ಹಾಗಾದರೆ, ಮಹಾರಾಜ, ಗಾಳಿ [ಎಂಬುದು] ಇಲ್ಲ."

"ನೀನು ಚತುರ, ಭನ್ತೇ ನಾಗಸೇನ."

೯

ರಾಜನು "ಭನ್ತೇ ನಾಗಸೇನ, 'ಸಂಸಾರ'ವೆಂದು ನೀವು ಹೇಳುವಿರಿ. ಆ 'ಸಂಸಾರ' ಯಾವುದು?" ಎಂದನು.

"ಮಹಾರಾಜ, ಇಲ್ಲಿ ಹುಟ್ಟಿದವನು ಇಲ್ಲಿಯೇ ಸಾಯುವನು; ಇಲ್ಲಿ ಸತ್ತು ಬೇರೆ ಕಡೆ ಹುಟ್ಟುವನು; ಅಲ್ಲಿ ಹುಟ್ಟಿ ಅಲ್ಲಿಯೇ ಸಾಯುವನು; ಅಲ್ಲಿ ಸತ್ತು ಬೇರೆ ಕಡೆ ಹುಟ್ಟುವನು; ಹೀಗೆ, ಮಹಾರಾಜ, ಸಂಸಾರವಾಗುವುದು."

"ಉಪಮಾನ ಕೊಡು."

"ಮಹಾರಾಜ, ಯಾವನಾದರೂ ಪುರುಷನು ಪಕ್ವವಾದ ಮಾವನ್ನು ತಿಂದು, [ಅದರ] ಬೀಜವನ್ನು ನೆಡುವನು. ಅದರಿಂದ ದೊಡ್ಡ ಮಾವಿನ ಮರ ಹುಟ್ಟಿ ಫಲ ಕೊಡುವುದು. ಆಗ ಆ ಪುರುಷನು ಅದರಲ್ಲಿಯೂ ಪಕ್ವವಾದ ಮಾವನ್ನು ತಿಂದು, [ಅದರ] ಬೀಜವನ್ನು ನೆಡುವನು. ಅದರಿಂದ ದೊಡ್ಡ ಮಾವಿನಮರ ಹುಟ್ಟಿ ಫಲ ಕೊಡುವುದು. ಆಗ ಆ ಪುರುಷನು ಅದರಲ್ಲಿಯೂ ಪಕ್ವವಾದ ಮಾವನ್ನು ತಿಂದು, [ಅದರ] ಬೀಜವನ್ನು ನೆಡುವನು. ಅಲ್ಲಿಯೂ ದೊಡ್ಡ ಮಾವಿನ ಮರ ಹುಟ್ಟಿ ಫಲ ಕೊಡುವುದು. ಹೀಗೆ [ಹುಟ್ಟುವ] ಆ ಮರಗಳ ಸಂಖ್ಯೆಯನ್ನು ತಿಳಿಯಲು ಆಗದು. ಅದರಂತೆಯೇ, ಮಹಾರಾಜ, ಇಲ್ಲಿ ಹುಟ್ಟಿದವನು ಇಲ್ಲಿಯೇ ಸಾಯುವನು; ಇಲ್ಲಿ ಸತ್ತು ಬೇರೆ ಕಡೆ ಹುಟ್ಟುವನು; ಅಲ್ಲಿ

ಹುಟ್ಟಿ ಅಲ್ಲಿಯೇ ಸಾಯುವನು; ಅಲ್ಲಿ ಸತ್ತು ಬೇರೆ ಕಡೆ ಹುಟ್ಟುವನು; ಹೀಗೆ, ಮಹಾರಾಜ, ಸಂಸಾರವಾಗುವುದು."

"ನೀನು ಜಾಣ, ಭನ್ತೇ ನಾಗಸೇನ."

೧೦

ರಾಜನು "ಭನ್ತೇ, ಕಳೆದು ಹೋದ ಬಹು ಕಾಲದ ಹಿಂದೆ ಮಾಡಿದುದನ್ನು ಸ್ಮರಿಸುವುದು ಯಾವುದರಿಂದ?" ಎಂದನು.

"ಸ್ಮೃತಿಯಿಂದ, ಮಹಾರಾಜ."

"ಸ್ಮರಿಸುವುದು ಚಿತ್ತದಿಂದಲ್ಲವೆ, ಭನ್ತೇ ನಾಗಸೇನ? ಸ್ಮೃತಿಯಿಂದ ಅಲ್ಲ."

"ಮಾಡಬೇಕಾದುದು ಯಾವುದನ್ನಾದರೂ ಮಾಡಿ, ಅದನ್ನು ನೀನು ಮರೆತುದು ನೆನಪಿದೆಯೆ, ಮಹಾರಾಜ?"

"ಹೌದು, ಭನ್ತೇ."

"ಏನು, ಮಹಾರಾಜ, ಆ ಸಮಯದಲ್ಲಿ ನಿನಗೆ ಚಿತ್ತವಿರಲಿಲ್ಲವೆ?"

"ಇಲ್ಲ, ಭನ್ತೇ, ಆ ಸಮಯದಲ್ಲಿ ನನಗೆ ಸ್ಮೃತಿಯಿರಲಿಲ್ಲ."

"ಹಾಗಾದರೆ, 'ಸ್ಮರಿಸುವುದು ಚಿತ್ತದಿಂದ, ಸ್ಮೃತಿಯಿಂದಲ್ಲ' ಎಂದೇಕೆ ಹೇಳುವೆ, ಮಹಾರಾಜ?"

"ನೀನು ಜಾಣ, ಭನ್ತೇ ನಾಗಸೇನ."

೧೧

ರಾಜನು "ಭನ್ತೇ ನಾಗಸೇನ, ಎಲ್ಲಾ ಸ್ಮೃತಿಯೂ ತಾನಾಗಿಯೇ ಹುಟ್ಟುವುದೊ, ಅಥವಾ ಕೃತ್ರಿಮಕವಾಗಿಯೊ?" ಎಂದನು.

"ಸ್ಮೃತಿ ತಾನಾಗಿಯೂ ಹುಟ್ಟುವುದು, ಮಹಾರಾಜ; ಸ್ಮೃತಿ ಕೃತ್ರಿಮಕವಾಗಿಯೂ [ಹುಟ್ಟುವುದು.]"

"ಎಂದರೆ, ಭನ್ತೇ ನಾಗಸೇನ, ಎಲ್ಲಾ ಸ್ಮೃತಿಯೂ ತಾನಾಗಿಯೆ ಹುಟ್ಟುವುದು; ಕೃತ್ರಿಮಕವಾದ ಸ್ಮೃತಿಯಿಲ್ಲ–[ಎಂದಂತೆ ಆಗಲಿಲ್ಲವೆ?]"

"ಕೃತ್ರಿಮಕವಾದ ಸ್ಮೃತಿಯಿರದಿದ್ದರೆ, ಮಹಾರಾಜ, ಶಿಲ್ಪಿಗಳಿಗೆ ವಿವಿಧವಾದ ಕೆಲಸಗಳಾಗಲಿ, ವಿವಿಧವಾದ ಶಿಲ್ಪಗಳಾಗಲಿ, [ಕಲಿಯುವು

ದಕ್ಕೆ] ವಿದ್ಯಾಸ್ಥಾನಗಳಾಗಲಿ ಬೇಕಾಗಿಲ್ಲ; [ಹಾಗಿದ್ದರೆ] ಆಚಾರ್ಯರಿಂದ ಪ್ರಯೋಜನವಿಲ್ಲ. ಆದರೆ, ಮಹಾರಾಜ, ಕೃತ್ರಿಮಕವಾದ ಸ್ಮೃತಿಯಿರುವುದರಿಂದ ವಿವಿಧವಾದ ಕೆಲಸಗಳೂ ವಿವಿಧವಾದ ಶಿಲ್ಪಗಳೂ [ಕಲಿಯುವುದಕ್ಕೆ] ವಿದ್ಯಾಸ್ಥಾನಗಳೂ ಇವೆ; ಆಚಾರ್ಯರಿಂದ ಪ್ರಯೋಜನವಿದೆ."

"ನೀನು ಕುಶಲಿ, ಭನ್ತೇ ನಾಗಸೇನ."

[ಆರನೆಯ ವರ್ಗ ಮುಗಿಯಿತು.]

ವರ್ಗ ಏಳು.

೧

ರಾಜನು "ಭನ್ತೇ ನಾಗಸೇನ, ಸ್ಮೃತಿಯು ಎಷ್ಟು ಆಕಾರಗಳಲ್ಲಿ ಏಳುವುದು?" ಎಂದನು.

"ಸ್ಮೃತಿ ಹದಿನಾರು[1] ಆಕಾರಗಳಲ್ಲಿ ಏಳುವುದು, ಮಹಾರಾಜ. [ಆ] ಹದಿನಾರು ಆಕಾರಗಳು ಯಾವುವು? ಮಹಾರಾಜ, [ಅಭಿಜ್ಞಾನ=] ಸ್ವಂತ ಅನುಭವದಿಂದ, [ಕೃತ್ರಿಮತೆ=] ಹೊರಗಿನ ಸಹಾಯದಿಂದ, [ಔದಾರಿಕವಿಜ್ಞಾನ=] ಯಾವುದಾದರೂ ಮಹತ್ತರವಾದ ಸಂಗತಿಯಿಂದ ಆದ ಪರಿಣಾಮದಿಂದ, [ಹಿತವಿಜ್ಞಾನ=] ಹಿತವಾದುದರಿಂದ ಆದ ಪರಿಣಾಮದಿಂದ, [ಅಹಿತವಿಜ್ಞಾನ=] ಅಹಿತವಾದುದರಿಂದ ಆದ ಪರಿಣಾಮದಿಂದ, [ಸಭಾಗನಿಮಿತ್ತತೆ=] ಒಂದೇ ಸಮವಾದ ರೂಪು ಆಕಾರಗಳಿಂದ, [ವಿಸಭಾಗನಿಮಿತ್ತತೆ=] ವಿಷಮವಾದ ರೂಪು ಆಕಾರಗಳಿಂದ, [ಕಥಾಭಿಜ್ಞಾನ=] ಆಡುವ ಮಾತಿನ ತಿಳುವಳಿಕೆಯಿಂದ, [ಲಕ್ಷಣ=] ಗುರುತುಗಳಿಂದ, [ಸ್ಮರಣ=] ಸ್ಮರಿಸುವ ಶಕ್ತಿಯಿಂದ, [ಮುದ್ರೆ=] ಗುಣಿಸುವುದರಿಂದ, [ಗಣನೆ=] ಎಣಿಸುವುದರಿಂದ, [ಧಾರಣೆ=] ಕಂಠಪಾಠಮಾಡುವುದರಿಂದ, [ಭಾವನೆ=] ಅದನ್ನೇ ಕುರಿತು ಧ್ಯಾನಮಾಡುವುದರಿಂದ, [ಪುಸ್ತಕನಿಬಂಧನ=] ಪುಸ್ತಕಗಳ ಸಹಾಯದಿಂದ, [ಉಪನಿಕ್ಷೇಪ=] ಒತ್ತೆಯಿಟ್ಟುದರಿಂದ, [ಅನುಭೂತ=] ಅನುಭವದಿಂದ ಸ್ಮೃತಿ ಎದ್ದೇಳುವುದು.

"ಅಭಿಜ್ಞಾನದಿಂದ ಸ್ಮೃತಿ ಹೇಗೆ ಎದ್ದೇಳುವುದು? ಮಹಾರಾಜ, ಆಯುಷ್ಮಂತನಾದ ಆನಂದನಾಗಲಿ, ಉಪಾಸಿಕೆಯಾದ ಕುಬ್ಜೆ ಉತ್ತರೆಯಾಗಲಿ, ತಮ್ಮ ಹಿಂದಿನ ಜನ್ಮಗಳನ್ನು ಸ್ಮರಿಸಬಲ್ಲ ಇತರರಾಗಲಿ ತಮ್ಮ ಜನ್ಮವನ್ನು ಹೇಗೆ ಸ್ಮರಿಸುತಿದ್ದರೋ—ಹಾಗೆ ಅಭಿಜ್ಞಾನದಿಂದ ಸ್ಮೃತಿ ಎದ್ದೇಳುವುದು.

"ಕೃತ್ರಿಮತೆಯಿಂದ ಸ್ಮೃತಿ ಹೇಗೆ ಎದ್ದೇಳುವುದು? ಮಹಾರಾಜ, ಸಹಜವಾಗಿ ಸ್ಮೃತಿ ಮಂಕಾಗಿರುವವನಿಗೆ ಇತರರು ಮೇಲಿಂದ ಮೇಲೆ

---

1 ಮುಂದೆ ಕೊಟ್ಟಿರುವ ಆಕಾರಗಳ ಸಂಖ್ಯೆ ಹದಿನೇಳು, ಹದಿನಾರಲ್ಲ. ಆದರೆ, ಅಭಿಜ್ಞಾನ—ಭಾವನೆ, ಅಭಿಜ್ಞಾನ—ಅನುಭೂತ, ಹಿತವಿಜ್ಞಾನ—ಅಹಿತವಿಜ್ಞಾನ ಈ ಜೋಡಿಗಳು ಯಾವುದಾದರೂ ಒಂದನ್ನು ಒಂದೇ ವಿಧವೆಂದು ಎಣಿಸುವುದಾದರೆ, ಸಂಖ್ಯೆ ಹದಿನಾರಾಗುವುದು.

ನೆನಪು ಕೊಡುವರು. ಹೀಗೆ ಕೃತ್ರಿಮತೆಯಿಂದ ಸ್ಮೃತಿ ಎದ್ದೇಳುವುದು.

"ಯಾವತ್ತು ರಾಜ್ಯಾಭಿಷೇಕವಾಯಿತು, ಅಥವಾ ಸ್ರೋತಾಪತ್ತಿ ಫಲ ದೊರೆಯಿತು [ಎಂದು ನೆನೆಯುವ ಹಾಗೆ] ಔದಾರಿಕವಿಜ್ಞಾನದಿಂದ ಸ್ಮೃತಿ ಎದ್ದೇಳುವುದು.

"ಸುಖ ಪಡೆದವನು 'ಇದರಿಂದ ಈ ಸುಖವಾಯಿತು' ಎಂದು ಸ್ಮರಿಸುವ ಹಾಗೆ ಹಿತವಿಜ್ಞಾನದಿಂದ ಸ್ಮೃತಿ ಎದ್ದೇಳುವುದು.

"ದುಃಖ ಪಡೆದವನು 'ಇದರಿಂದ ಈ ದುಃಖವಾಯಿತು' ಎಂದು ಸ್ಮರಿಸುವ ಹಾಗೆ ಅಹಿತವಿಜ್ಞಾನದಿಂದ ಸ್ಮೃತಿ ಎದ್ದೇಳುವುದು.

"ಸಮಾನನಾದವನನ್ನು ಕಂಡು, [ಅವನ] ತಾಯಿ, ತಂದೆ, ಅಣ್ಣ ಅಕ್ಕಂದಿರನ್ನು ಸ್ಮರಿಸುವಂತೆ; [ಒಂದು] ಒಂಟೆ, ಹಸು, ಕತ್ತೆಗಳನ್ನು ಕಂಡು ಅದರಂತಹ ಒಂಟೆ, ಹಸು, ಕತ್ತೆಗಳನ್ನು ಸ್ಮರಿಸುವಂತೆ ಸಭಾಗ ನಿಮಿತ್ತತೆಯಿಂದ ಸ್ಮೃತಿ ಎದ್ದೇಳುವುದು.

"ಈ ಬಣ್ಣ ಇದರದು, ಈ ಶಬ್ದ ಇದರದು, ಈ ಗಂಧ ಇದರದು, ಈ ರಸ ಇದರದು, ಈ ಸ್ಪ್ರಷ್ಟವ್ಯ ಇದರದು—ಎಂದು ಸ್ಮರಿಸುವಂತೆ ವಿಸಭಾಗನಿಮಿತ್ತತೆಯಿಂದ ಸ್ಮೃತಿ ಎದ್ದೇಳುವುದು.

"ಸಹಜವಾಗಿ ಸ್ಮೃತಿ ಮಂಕಾದವನಿಗೆ ಇತರರು ನೆನಪು ಕೊಟ್ಟರೆ ಅವನು ಹೇಗೆ ನೆನೆಯುವನೋ ಹಾಗೆ ಕಥಾಭಿಜ್ಞಾನದಿಂದ ಸ್ಮೃತಿ ಎದ್ದೇಳುವುದು.

"ಗಾಡಿಯೆಳೆಯುವ ಎತ್ತನ್ನು [ಅದಕ್ಕೆ ಹಾಕಿದ] ಗುರುತಿನಿಂದ, ಚಿಹ್ನೆಯಿಂದ ತಿಳಿಯುವಂತೆ ಲಕ್ಷಣದಿಂದ ಸ್ಮೃತಿ ಎದ್ದೇಳುವುದು.

"ಸಹಜವಾಗಿ ಸ್ಮೃತಿ ಮಂಕಾದವನಿಗೆ 'ನೆನಪಿಗೆ ತಂದುಕೊ! ನೆನಪಿಗೆ ತಂದುಕೊ!' ಎಂದು ಪುನಃ ಪುನಃ ನೆನಪುಮಾಡುವಂತೆ, ಸ್ಮರಣದಿಂದ ಸ್ಮೃತಿ ಎದ್ದೇಳುವುದು.

"ಬರವಣಿಗೆಯಲ್ಲಿ ಶಿಕ್ಷೆಪಡೆದವನು 'ಈ ಅಕ್ಷರವಾದ ಮೇಲೆ ಈ ಅಕ್ಷರವಾಗಬೇಕು' ಎಂದು ತಿಳಿಯುವ ಹಾಗೆ ಮುದ್ರೆಯಿಂದ ಸ್ಮೃತಿ ಎದ್ದೇಳುವುದು.

"ಗಣನೆಯಲ್ಲಿ ಶಿಕ್ಷೆಪಡೆದ ಗಣಕರು ಬಹಳ [ದೊಡ್ಡ ದೊಡ್ಡ ಸಂಖ್ಯೆ]ಗಳನ್ನು ಎಣಿಸುವ ಹಾಗೆ ಗಣನೆಯಿಂದ ಸ್ಮೃತಿ ಎದ್ದೇಳುವುದು.

"[ಮಂತ್ರವನ್ನು] ಧರಿಸುವುದರಲ್ಲಿ ಶಿಕ್ಷೆಪಡೆದ [ಮಂತ್ರ] ಧಾರಣಕರು ಬಹಳ [ಮಂತ್ರ]ಗಳನ್ನು ಧರಿಸುವ ಹಾಗೆ ಧಾರಣೆಯಿಂದ ಸ್ಮೃತಿ ಎದ್ದೇಳುವುದು.

"ಭಿಕ್ಷುವು ತಾನು ಹಿಂದೆ ಹುಟ್ಟಿದ ಅನೇಕ ತೆರನಾದ ಸ್ಥಳಗಳನ್ನು ಕ್ರಮವಾಗಿ ಸ್ಮರಿಸುವಂತೆ ಭಾವನೆಯಿಂದ ಸ್ಮೃತಿ ಎದ್ದೇಳುವುದು.

"ರಾಜನು [ತಾನು ಮಾಡಿದ] ಶಾಸನವನ್ನು ಸ್ಮರಿಸುವುದಕ್ಕಾಗಿ 'ಆ ಪುಸ್ತಕವನ್ನು ತಾ' ಎಂದು [ಹೇಳಿ], ಆ ಪುಸ್ತಕದಿಂದ ಸ್ಮರಿಸುವಂತೆ ಪುಸ್ತಕ ನಿಬಂಧನದಿಂದ ಸ್ಮೃತಿ ಎದ್ದೇಳುವುದು.

"ತನ್ನಲ್ಲಿ ಒತ್ತೆಯಿಟ್ಟ ಪದಾರ್ಥಗಳನ್ನು ಕಂಡು [ಆಗಿನ ಸಮಯ ಸಂಗತಿಗಳನ್ನು] ಸ್ಮರಿಸುವ ಹಾಗೆ ಉಪನಿಕ್ಷೇಪದಿಂದ ಸ್ಮೃತಿ ಎದ್ದೇಳುವುದು.

"ಕಂಡವನು ರೂಪವನ್ನು ಸ್ಮರಿಸುವಂತೆ, ಕೇಳಿದವನು ಶಬ್ದವನ್ನು ಸ್ಮರಿಸುವ ಹಾಗೆ, ಮೂಸಿದವನು ಗಂಧವನ್ನು ಸ್ಮರಿಸುವಂತೆ, ಸವಿದವನು ರಸವನ್ನು ಸ್ಮರಿಸುವ ಹಾಗೆ, ಮುಟ್ಟಿದವನು ಸ್ಪೃಷ್ಟವ್ಯವನ್ನು ಸ್ಮರಿಸುವಂತೆ, ವಿಜ್ಞಾನ ಪಡೆದವನು ಧರ್ಮವನ್ನು ಸ್ಮರಿಸುವಂತೆ ಅನುಭೂತದಿಂದ ಸ್ಮೃತಿ ಎದ್ದೇಳುವುದು.

"ಈ ಹದಿನಾರು ಆಕಾರಗಳಲ್ಲಿ ಸ್ಮೃತಿ ಎದ್ದೇಳುವುದು, ಮಹಾರಾಜ."

"ನೀನು ಚತುರ, ಭನ್ತೇ ನಾಗಸೇನ."

೨

ರಾಜನು "ಭನ್ತೇ ನಾಗಸೇನ, 'ಒಬ್ಬನು ನೂರು ವರ್ಷಗಳು ಅಕುಶಲ ಮಾಡಿದರೂ, ಮರಣಕಾಲದಲ್ಲಿ ಬುದ್ಧನನ್ನು ನೆನೆದರೆ, ಅವನು ದೇವರುಗಳ ನಡುವೆ ಹುಟ್ಟುವನು' ಎಂದು ನೀವು ಹೇಳುವಿರಿ. ಇದರಲ್ಲಿ ನನಗೆ ಶ್ರದ್ಧೆಯಿಲ್ಲ. ಅಲ್ಲದೆ ಪುನಃ, '[ಒಂದೇ] ಒಂದು ಪ್ರಾಣಿಹತ್ಯೆಯಿಂದ [ಮನುಷ್ಯನು] ನಿರಯದಲ್ಲಿ ಹುಟ್ಟುವನು' ಎನ್ನುವಿರಿ. ಇದರಲ್ಲಿಯೂ ನನಗೆ ಶ್ರದ್ಧೆಯಿಲ್ಲ" ಎಂದನು.

“ಏನೆಂಬೆ, ಮಹಾರಾಜ? ಅತಿ ಸಣ್ಣದಾದ ಕಲ್ಲು ಕೂಡ ದೋಣಿಯಿಲ್ಲದೆ ನೀರಿನಲ್ಲಿ ತೇಲಬಲ್ಲುದೆ?”

“ಇಲ್ಲ, ಭನ್ತೇ.”

“ಏನು, ಮಹಾರಾಜ? ನೂರು ಗಾಡಿಗಳ ಕಲ್ಲಾದರು ಕೂಡ ದೋಣಿಯಲ್ಲಿ ಹೇರಿದರೆ ನೀರಿನಲ್ಲಿ ತೇಲುವುದೆ?”

“ಹೌದು, ಭನ್ತೇ, ತೇಲುವುದು.”

“ಕುಶಲವಾದ ಕರ್ಮಗಳನ್ನು ಆ ದೋಣಿಯಂತೆ ಕಾಣತಕ್ಕುದು, ಮಹಾರಾಜ.”

“ನೀನು ಜಾಣ, ಭನ್ತೇ ನಾಗಸೇನ.”

೩

ರಾಜನು “ಏನು, ಭನ್ತೇ ನಾಗಸೇನ, ನೀವು ವ್ಯಾಯಾಮಮಾಡುವುದು ಹಿಂದಿನ ದುಃಖವನ್ನು ನೀಗುವುದಕ್ಕೇನು?” ಎಂದನು.

“ಅಲ್ಲ, ಮಹಾರಾಜ.”

“ಹಾಗಾದರೆ, ಮುಂದಿನ ದುಃಖವನ್ನು ನೀಗುವುದಕ್ಕಾಗಿ ವ್ಯಾಯಾಮಮಾಡುವಿರ?”

“ಅಲ್ಲ, ಮಹಾರಾಜ.”

“ಹಾಗಾದರೆ, ಈಗಿನ ದುಃಖವನ್ನು ನೀಗುವುದಕ್ಕೇನು?”

“ಅಲ್ಲ, ಮಹಾರಾಜ.”

“ನೀವು ವ್ಯಾಯಾಮಮಾಡುವುದು ಹಿಂದಿನ ದುಃಖವನ್ನು ನೀಗುವುದಕ್ಕಲ್ಲದಿದ್ದರೆ, ಮುಂದಿನ ದುಃಖವನ್ನಾಗಲಿ ಇಂದಿನ ದುಃಖವನ್ನಾಗಲಿ ನೀಗುವುದಕ್ಕಲ್ಲದಿದ್ದರೆ; ನೀವು ಯಾವ ಅರ್ಥಕ್ಕಾಗಿ ವ್ಯಾಯಾಮ ಮಾಡುವಿರಿ?”

ಸ್ಥವಿರನು “ಏಕೆಂದರೆ, ಮಹಾರಾಜ, ಈ ದುಃಖ ನಿಂತು ನಾಶವಾಗಲಿ, ಬೇರೆ ದುಃಖ ಹುಟ್ಟದಿರಲಿ—ಎಂಬ ಅರ್ಥಕ್ಕಾಗಿ ನಾವು ವ್ಯಾಯಾಮಮಾಡುವೆವು” ಎಂದನು.

“ಹಾಗಾದರೆ, ಭನ್ತೇ ನಾಗಸೇನ, ಮುಂದಿನ ದುಃಖ [ಎಂಬುದು] ಉಂಟೆ?”

"ಇಲ್ಲ, ಮಹಾರಾಜ."

"ಭನ್ತೇ ನಾಗಸೇನ, ಹುಟ್ಟದೆ ಇರುವ ದುಃಖವನ್ನು ನೀಗುವುದಕ್ಕಾಗಿ ವ್ಯಾಯಾಮಮಾಡಲು ನೀವು ಅತಿಪಂಡಿತರೇ ಸರಿ!"

"ಮಹಾರಾಜ, ನಿನಗೆ ವೈರಿಗಳಾಗಿ, ಶತ್ರುಗಳಾಗಿ, ಎದುರಾದ ಪ್ರತಿರಾಜರು ಯಾರಾದರೂ ಇರುವರೇನು?"

"ಹೌದು, ಭನ್ತೇ, ಇರುವರು."

"ಏನು, ಮಹಾರಾಜ? [ಅವರು ನಿನಗೆ ಎದುರಾದಾಗ], ಆಗ ನೀನು ಅಗಳು ತೋಡಿಸಿದೆಯು? [ಆಗ] ಪ್ರಾಕಾರ ಎತ್ತಿಸಿದೆಯು? [ಆಗ] ಗೋಪುರ ಮಾಡಿಸಿದೆಯು? [ಆಗ] ಅಟ್ಟಾಲಕ ಕಟ್ಟಿಸಿದೆಯು? [ಆಗ] ಧಾನ್ಯವನ್ನು ಕೂಡಿಹಾಕಿಸಿದೆಯು?"

"ಇಲ್ಲ, ಭನ್ತೇ, ಅದು [ಎಲ್ಲ] ಮೊದಲೇ ಸಿದ್ಧವಾಗಿತ್ತು."

"ಏನು, ಮಹಾರಾಜ? [ಅವರು ನಿನಗೆದುರಾದಾಗ], ಆಗ ನೀನು ಆನೆ, ಕುದುರೆ, ರಥ, ಬಿಲ್ಲು, ಕತ್ತಿಗಳಲ್ಲಿ ಶಿಕ್ಷೆಪಡೆದೆಯು?"

"ಇಲ್ಲ, ಭನ್ತೇ, ಅದರಲ್ಲಿ ಮೊದಲೇ ಶಿಕ್ಷೆಪಡೆದಿದ್ದೆ."

"ಯಾವ ಅರ್ಥದಿಂದ?"

"ಮುಂದಿನ ಭಯವನ್ನು ತಡೆದು ದೂರಮಾಡುವ ಅರ್ಥದಿಂದ, ಭನ್ತೇ."

"ಏನು ಮಹಾರಾಜ, ಮುಂದಿನ ಭಯ [ಎಂಬುದು] ಉಂಟೆ?"

"ಇಲ್ಲ, ಭನ್ತೇ."

"ಮಹಾರಾಜ, ಮುಂದಿನ ಭಯವನ್ನು ತಡೆದು ದೂರಮಾಡುವುದಕ್ಕಾಗಿ ಸಿದ್ಧರಾಗಲು ನೀವು ಅತಿಪಂಡಿತರೇ ಸರಿ!"

"ಇನ್ನೊಂದು ಉಪಮಾನ ಕೊಡು."

"ಏನೆಂಬೆ, ಮಹಾರಾಜ? ನಿನಗೆ ದಾಹವಾದಾಗ, ಆಗ, ನೀರು ಕುಡಿಯೋಣವೆಂದು ಬಾವಿ ತೆಗೆಸುವೆಯು? [ಆಗ] ಕೊಳ ಅಗೆಸುವೆಯು? [ಆಗ] ಕೆರೆ ಕಟ್ಟಿಸುವೆಯು?"

"ಇಲ್ಲ, ಭನ್ತೇ, ಅದು ಮೊದಲೇ ಸಿದ್ಧವಾಗಿದೆ."

"ಯಾವ ಅರ್ಥದಿಂದ?"

"ಮುಂದಿನ ದಾಹವನ್ನು ತಡೆಯುವ ಅರ್ಥದಿಂದ, ಭನ್ತೇ."

"ಏನು, ಮಹಾರಾಜ? ಮುಂದಿನ ದಾಹ [ಎಂಬುದು] ಉಂಟೆ?"

"ಇಲ್ಲ, ಭನ್ತೇ."

"ಮಹಾರಾಜ, ಮುಂದಿನ ದಾಹವನ್ನು ತಡೆದು ದೂರಮಾಡುವುದಕ್ಕಾಗಿ ಸಿದ್ಧರಾಗಲು ನೀವು ಅತಿಪಂಡಿತರೇ ಸರಿ!"

"ಇನ್ನೊಂದು ಉಪಮಾನ ಕೊಡು."

"ಏನೆಂಬೆ, ಮಹಾರಾಜ? ನಿನಗೆ ಹಸಿವಾದಾಗ, ಆಗ, ಅನ್ನ ಊಟಮಾಡೋಣವೆಂದು ಗದ್ದೆಯನ್ನು ಕೃಷಿಮಾಡಿಸಿ, ಬತ್ತ ಬಿತ್ತಿಸಿ, ಧಾನ್ಯ ಕೊಯಿಸುವೆಯ?"

"ಇಲ್ಲ, ಭನ್ತೇ, ಅದು ಮೊದಲೇ ಸಿದ್ಧವಾಗಿದೆ."

"ಯಾವ ಅರ್ಥದಿಂದ?"

"ಮುಂದಿನ ಹಸಿವನ್ನು ತಡೆಯುವ ಅರ್ಥದಿಂದ, ಭನ್ತೇ."

"ಏನು, ಮಹಾರಾಜ, ಮುಂದಿನ ಹಸಿವು [ಎಂಬುದು] ಉಂಟೆ?"

"ಇಲ್ಲ, ಭನ್ತೇ."

"ಮಹಾರಾಜ, ಹುಟ್ಟದೆ ಇರುವ ಮುಂದಿನ ಹಸಿವನ್ನು ತಡೆದು ದೂರಮಾಡುವುದಕ್ಕಾಗಿ ಸಿದ್ಧರಾಗಲು ನೀವು ಅತಿಪಂಡಿತರೇ ಸರಿ!"

"ನೀನು ಜಾಣ, ಭನ್ತೇ ನಾಗಸೇನ."

೪

ರಾಜನು "ಭನ್ತೇ ನಾಗಸೇನ, ಇಲ್ಲಿಂದ ಬ್ರಹ್ಮಲೋಕಕ್ಕೆ ಎಷ್ಟು ದೂರ?" ಎಂದನು.

"ಇಲ್ಲಿಂದ ಬ್ರಹ್ಮಲೋಕ ದೂರ, ಮಹಾರಾಜ. ಈ ಕೂಟಾಗಾರದ ಗಾತ್ರದ ಕಲ್ಲು ಅಲ್ಲಿಂದ ಬಿದ್ದರೆ, ಹಗಲೂ ರಾತ್ರೆ ನಲುವತ್ತೆಂಟು ಸಾವಿರ ಯೋಜನ [ಗಳ ವೇಗದಿಂದ] ಬಿದ್ದರೆ, ನಾಲ್ಕು ತಿಂಗಳಲ್ಲಿ ಭೂಮಿಗೆ ತಾಗುವುದು."

"ಭನ್ತೇ ನಾಗಸೇನ, 'ಬಲಶಾಲಿಯಾದ ಪುರುಷನು ಬಗ್ಗಿಸಿದ ಬಾಹುವನ್ನು ಪಸರಿಸುವಂತೆ, ಪಸರಿಸಿದ ಬಾಹುವನ್ನು ಮಡಿಸುವಂತೆ, ಅಂತೆಯೇ ಋದ್ಧಿಮಂತನಾದ ಭಿಕ್ಷುವು ತನ್ನ ಚೇತೋವಶಿಲ್ಪದಿಂದ ಜಂಬೂದ್ವೀಪದಲ್ಲಿ ಅಂತರ್ಧಾನನಾಗಿ ಬ್ರಹ್ಮಲೋಕದಲ್ಲಿ ಪ್ರತ್ಯಕ್ಷನಾಗು

ವನು' ಎಂದು ನೀವು ಹೇಳುವಿರಿ. ಈ ಮಾತಿನಲ್ಲಿ ನಾನು ಶ್ರದ್ಧೆಯಿಡ ಲಾರೆ. ಅವನು ಆ ಅನೇಕ ನೂರು ಯೋಜನಗಳನ್ನು ಅತಿಶೀಘ್ರವಾಗಿ ಹೋಗುವನೆ?"

ಸ್ಥವಿರನು "ಮಹಾರಾಜ, ನಿನ್ನ ಜನ್ಮಭೂಮಿ ಎಲ್ಲಿ?" ಎಂದನು.

"ಭನ್ತೇ, ಅಲಸಂದವೆಂಬ ದ್ವೀಪವುಂಟು. ನಾನು ಅಲ್ಲಿ ಹುಟ್ಟಿದೆನು."

"ಇಲ್ಲಿಂದ ಅಲಸಂದ ಎಷ್ಟು ದೂರವಾಗುವುದು, ಮಹಾರಾಜ?"

"ಸುಮಾರು ಎರಡುನೂರು ಯೋಜನ, ಭನ್ತೇ."

"ನೀನು ಅಲ್ಲಿ [ಹಿಂದೆ] ಮಾಡಿ, [ಈಗ] ಸ್ಮರಿಸುವ ಯಾವುದಾದರೂ ಕೆಲಸ ನಿನಗೆ ಗೊತ್ತೆ, ಮಹಾರಾಜ?"

"ಹೌದು, ಸ್ಮರಿಸುವೆನು, ಭನ್ತೇ."

"ಸುಮಾರು ಎರಡುನೂರು ಯೋಜನಗಳನ್ನು ನೀನು ಬಹು ಬೇಗ ಹೋದೆಯಲ್ಲವೆ, ಮಹಾರಾಜ!"

"ನೀನು ಕುಶಲಿ, ಭನ್ತೇ ನಾಗಸೇನ."

ಜ

ರಾಜನು "ಭನ್ತೇ ನಾಗಸೇನ, ಇಲ್ಲಿ ಸತ್ತವನು [ಒಬ್ಬನು] ಬ್ರಹ್ಮ ಲೋಕದಲ್ಲಿ ಹುಟ್ಟುವನು; ಇಲ್ಲಿ ಸತ್ತವನು [ಇನ್ನೊಬ್ಬನು] ಕಾಶ್ಮೀರದಲ್ಲಿ ಹುಟ್ಟುವನು. [ಈ ಇಬ್ಬರಲ್ಲಿ] ಯಾವನು ಬಹು ಮೊದಲು, ಯಾವನು ಬಹು ಬೇಗ [ಹುಟ್ಟುವನು]?" ಎಂದನು.

"[ಇಬ್ಬರೂ] ಸಮ[ವಾಗಿ ಒಂದೇ ವೇಳೆಯಲ್ಲಿ ಹುಟ್ಟುವರು], ಮಹಾರಾಜ."

"ಉಪಮಾನ ಕೊಡು."

"ನೀನು ಹುಟ್ಟಿದ ನಗರ ಎಲ್ಲಿ ಮಹಾರಾಜ?"

"ಕಲಸಿಯೆಂಬ ಗ್ರಾಮವುಂಟು. ಅಲ್ಲಿ ನಾನು ಹುಟ್ಟಿದುದು, ಭನ್ತೇ."

"ಮಹಾರಾಜ, ಇಲ್ಲಿಂದ ಕಲಸಿಗ್ರಾಮಕ್ಕೆ ಎಷ್ಟು ದೂರ?"

"ಸುಮಾರು ಎರಡುನೂರು ಯೋಜನ, ಭನ್ತೇ."

"ಇಲ್ಲಿಂದ ಕಾಶ್ಮೀರ ಎಷ್ಟು ದೂರವಾಗುವುದು, ಮಹಾರಾಜ?"

"ಹನ್ನೆರಡು ಯೋಜನ, ಭನ್ತೇ."

"ಮಹಾರಾಜ, ಎಲ್ಲಿ, ಕಲಸಿಗ್ರಾಮವನ್ನು ಚಿಂತಿಸು."

"ಚಿಂತಿಸಿದೆ, ಭನ್ತೇ."

"ಮಹಾರಾಜ, ಎಲ್ಲಿ, ಕಾಶ್ಮೀರವನ್ನು ಚಿಂತಿಸು."

"ಚಿಂತಿಸಿದೆ, ಭನ್ತೇ."

"ಮಹಾರಾಜ, [ಆ ಎರಡರಲ್ಲಿ] ಯಾವುದನ್ನು ಬಹು ಮೊದಲು, ಯಾವುದನ್ನು ಬಹು ಬೇಗ ಚಿಂತಿಸಿದೆ?"

"[ಎರಡನ್ನೂ] ಸಮ[ವಾಗಿ ಒಂದೇ ವೇಳೆಯಲ್ಲಿ ಚಿಂತಿಸಿದೆ], ಭನ್ತೇ."

"ಅದರಂತೆಯೆ, ಮಹಾರಾಜ, ಇಲ್ಲಿ ಸತ್ತು ಬ್ರಹ್ಮಲೋಕದಲ್ಲಿ ಹುಟ್ಟುವವನೂ, ಇಲ್ಲಿ ಸತ್ತು ಕಾಶ್ಮೀರದಲ್ಲಿ ಹುಟ್ಟುವವನೂ ಸಮವಾಗಿ [ಒಂದೇ ಕಾಲದಲ್ಲಿ] ಹುಟ್ಟುವರು."

"ಇನ್ನೊಂದು ಉಪಮಾನ ಕೊಡು."

"ಏನೆಂಬೆ, ಮಹಾರಾಜ? ಎರಡು ಹಕ್ಕಿಗಳು ಆಕಾಶದಲ್ಲಿ ಹೋಗುವುವು. ಅವುಗಳಲ್ಲಿ ಒಂದು ಎತ್ತರವಾದ ಮರದ ಮೇಲೆ ಕೂರುವುದು; ಒಂದು ತಗ್ಗಾದ ಮರದ ಮೇಲೆ ಕೂರುವುದು. ಎರಡೂ ಒಂದೇ ಸಮವಾಗಿ [ಒಂದೇ ಗಳಿಗೆಯಲ್ಲಿ] ಕುಳಿತರೆ, ಯಾವುದರ ನೆರಳು ಭೂಮಿಯನ್ನು ಮುಂಚೆ ಮುಟ್ಟುವುದು?"

"[ಎರಡರ ನೆರಳೂ ಭೂಮಿಯನ್ನು] ಸಮ[ವಾಗಿ ಮುಟ್ಟುವುದು], ಭನ್ತೇ."

"ಅದರಂತೆಯೆ, ಮಹಾರಾಜ, ಇಲ್ಲಿ ಸತ್ತು ಬ್ರಹ್ಮಲೋಕದಲ್ಲಿ ಹುಟ್ಟುವವನೂ, ಇಲ್ಲಿ ಸತ್ತು ಕಾಶ್ಮೀರದಲ್ಲಿ ಹುಟ್ಟುವವನೂ ಸಮವಾಗಿ [ಒಂದೇ ಕಾಲದಲ್ಲಿ] ಹುಟ್ಟುವರು."

"ನೀನು ಚತುರ, ಭನ್ತೇ ನಾಗಸೇನ."

೬

ರಾಜನು "ಭನ್ತೇ ನಾಗಸೇನ, ಬೋಧ್ಯಂಗಗಳು ಎಷ್ಟು?" ಎಂದನು.

"ಮಹಾರಾಜ, ಬೋಧ್ಯಂಗಗಳು ಏಳು."

"ಬುದ್ಧಿ ಪಡೆಯುವುದು ಎಷ್ಟು ಬೋಧ್ಯಂಗಗಳಿಂದ, ಭನ್ತೇ?"

"ಬುದ್ಧಿ ಪಡೆಯುವುದು ಒಂದು ಬೋಧ್ಯಂಗದಿಂದ, ಮಹಾರಾಜ; ಧರ್ಮ ವಿಚಯ ಸಂಬೋಧ್ಯಂಗದಿಂದ."

"ಹಾಗಾದರೆ, ಭನ್ತೇ, 'ಬೋಧ್ಯಂಗಗಳು ಏಳು' ಎಂದು ಏಕೆ ಹೇಳುವರು?"

"ಏನೆಂಬೆ, ಮಹಾರಾಜ? ಒರೆಯಲ್ಲಿ ಮುಚ್ಚಿಟ್ಟ ಕತ್ತಿಯು, [ನೀನು] ಕೈಯಿಂದ ಹಿಡಿಯದಿದ್ದರೆ, ಕತ್ತರಿಸಬೇಕಾದುದನ್ನು ಕತ್ತರಿಸುವುದಕ್ಕೆ [ತಾನಾಗಿಯೆ] ಸಮರ್ಥವಾಗುವುದೆ?"

"ಇಲ್ಲ, ಭನ್ತೇ."

"ಅದರಂತೆಯೆ, ಮಹಾರಾಜ, ಧರ್ಮವಿಚಯಸಂಬೋಧ್ಯಂಗವಿಲ್ಲದೆ [ಮಿಕ್ಕ] ಆರು ಬೋಧ್ಯಂಗಗಳಿಂದ ಬುದ್ಧಿ ಪಡೆಯಲಾಗುವುದಿಲ್ಲ."

"ನೀನು ಚತುರ, ಭನ್ತೇ ನಾಗಸೇನ."

೭

ರಾಜನು "ಯಾವುದು ಹೆಚ್ಚಾಗಿದೆ, ಭನ್ತೇ? ಪುಣ್ಯವೊ? ಪಾಪವೊ?" ಎಂದನು.

"ಪುಣ್ಯ ಹೆಚ್ಚು, ಮಹಾರಾಜ; ಪಾಪ ಸ್ವಲ್ಪ."

"ಇದಕ್ಕೇನು ಕಾರಣ?"

"ಮಹಾರಾಜ, ಪಾಪಮಾಡಿದವನು 'ನಾನು ಪಾಪಮಾಡಿದೆ' ಎಂದು ಪರಿತಪಿಸುವನು. ಅದರಿಂದ ಪಾಪ ಬೆಳೆದು ಹೆಚ್ಚಾಗುವುದಿಲ್ಲ. ಪುಣ್ಯಮಾಡಿದವನು, ಮಹಾರಾಜ, ಪರಿತಾಪಪಡುವುದಿಲ್ಲ. [ಆ] ಪರಿತಾಪಪಡದವನಿಗೆ ಪ್ರಮೋದ ಹುಟ್ಟುವುದು; ಪ್ರಮೋದ ಹುಟ್ಟಿದವನಿಗೆ ಪ್ರೀತಿ ಹುಟ್ಟುವುದು; ಪ್ರೀತಿ ಹುಟ್ಟಿದವನ ದೇಹವು ಪ್ರಶ್ರಂಭಿಸುವುದು; ದೇಹದ ಪ್ರಶ್ರಬ್ಧಿ ಪಡೆದವನು ಸುಖವನ್ನು ಅನುಭವಿಸುವನು; ಸುಖಿಯಾದವನ ಚಿತ್ತವು ಸಮಾಧಿಯನ್ನು ಪಡೆಯುವುದು; ಸಮಾಧಿಯನ್ನು ಪಡೆದವನು ಇರುವುದನ್ನು ಇರುವಂತೆ ತಿಳಿಯುವನು. ಆ ಕಾರಣದಿಂದ ಪುಣ್ಯ ಬೆಳೆದು ಹೆಚ್ಚುವುದು. ಮಹಾರಾಜ, ಕೈಕಾಲು ಕತ್ತರಿಸಿಹೋದ ಪುರುಷನು ಭಗವಂತನಿಗೆ [ಒಂದೇ] ಒಂದು ಕೈತುಂಬ ಉತ್ಪಲ

ಗಳನ್ನು ಕೊಟ್ಟರೆ, [ಅದರ ಫಲವಾಗಿ] ತೊಂಬತ್ತೊಂದು ಕಲ್ಪಗಳು ವಿನಿಪಾತಕ್ಕೆ ಹೋಗುವುದಿಲ್ಲ. ಈ ಕಾರಣದಿಂದ, ಮಹಾರಾಜ, 'ಪುಣ್ಯ ಹೆಚ್ಚು, ಪಾಪ ಕಡಿಮೆ' ಎಂದು ಹೇಳುತ್ತೇನೆ."

"ನೀನು ಜಾಣ, ಭನ್ತೇ ನಾಗಸೇನ."

೮

ರಾಜನು "ಭನ್ತೇ ನಾಗಸೇನ, ಯಾರ ಪಾಪ ಹೆಚ್ಚು? ತಿಳಿದು ಪಾಪ ಮಾಡುವವನದೋ? ತಿಳಿಯದೆಯೆ ಪಾಪಮಾಡುವವನದೋ?" ಎಂದನು.

ಸ್ಥವಿರನು "ತಿಳಿಯದೆ ಪಾಪಮಾಡುವವನ ಪಾಪ ಹೆಚ್ಚು" ಎಂದನು.

"ಹಾಗಾದರೆ, ಭನ್ತೇ ನಾಗಸೇನ, ತಿಳಿಯದೆ ಪಾಪ ಮಾಡುವ ನಮ್ಮ ರಾಜಪುತ್ರರನ್ನೋ ರಾಜಮಹಾಮಾತ್ಯರನ್ನೋ ನಾವು ಎರಡರಷ್ಟು ದಂಡಿಸಬೇಕು!"

"ಏನೆಂಬೆ, ಮಹಾರಾಜ? ಕಾದು ಸುಡುತ್ತ ಉರಿದು ಜ್ವಲಿಸುವ ಕಬ್ಬಿಣದ ಗುಂಡನ್ನು ಒಬ್ಬನು ತಿಳಿಯದೆ ಹಿಡಿದರೆ, [ಬೇರೆ] ಒಬ್ಬನು ತಿಳಿದು ಹಿಡಿದರೆ, [ಅದು] ಯಾರನ್ನು ಹೆಚ್ಚಾಗಿ ಸುಡುವುದು?"

"ತಿಳಿಯದೆ ಹಿಡಿಯುವವನನ್ನು ಹೆಚ್ಚಾಗಿ ಸುಡುವುದು."

"ಅದರಂತೆಯೆ, ಮಹಾರಾಜ, ಯಾವನು ತಿಳಿಯದೆ ಪಾಪ ಮಾಡುವನು, ಅವನ ಪಾಪ ಹೆಚ್ಚು."

"ನೀನು ಕುಶಲಿ, ಭನ್ತೇ ನಾಗಸೇನ."

೯

ರಾಜನು "ಭನ್ತೇ ನಾಗಸೇನ, ಈ ಶರೀರದೇಹದಿಂದ ಉತ್ತರ ಕುರುವಿಗೋ ಬ್ರಹ್ಮಲೋಕಕ್ಕೋ ಅಥವಾ ಬೇರೆ ದ್ವೀಪಗಳಿಗೋ ಹೋಗುವವರು ಯಾರಾದರೂ ಉಂಟೆ?" ಎಂದನು.

"ಈ ಚತುರ್ಮಹಾಭೂತಗಳಿಂದ ಆಗ ದೇಹದೊಡನೆ ಉತ್ತರ ಕುರುವಿಗೋ ಬ್ರಹ್ಮಲೋಕಕ್ಕೋ ಅಥವಾ ಬೇರೆ ದ್ವೀಪಗಳಿಗೋ ಹೋಗುವವರು ಉಂಟು, ಮಹಾರಾಜ."

"ಅವರು ಶರೀರದೇಹದಿಂದ ಹೇಗೆ ಹೋಗುವರು, ಭನ್ತೇ?"

"ಮಹಾರಾಜ, ನೀನು ಒಂದೋ ಎರಡೋ ಅಡಿ ಭೂಮಿ ದಾಟಿದುದೇನಾದರೂ ನೆನಪಿದೆಯೆ?"

"ಹೌದು, ಭನ್ತೇ, ನೆನಪಿದೆ. ನಾನು ಎಂಟು ರತನಿ ಹಾರಬಲ್ಲೆ."

"ಅದು ಹೇಗೆ ಹಾರಬಲ್ಲೆ, ಮಹಾರಾಜ?"

" 'ಅಲ್ಲಿ ಇಳಿಯುತ್ತೇನೆ' ಎಂದು ಮನಸ್ಸು ಮಾಡುತ್ತೇನೆ. [ಹಾಗೆ] ಮನಸ್ಸು ಏಳುವುದರಿಂದ ನನ್ನ ದೇಹ ಹಗುರಾಗುತ್ತದೆ."

"ಅದರಂತೆಯೆ, ಮಹಾರಾಜ, ಋದ್ಧಿಮಂತನಾದ ಭಿಕ್ಷುವು ಚಿತ್ತವನ್ನು ವಶಮಾಡಿಕೊಂಡು, ಚಿತ್ತದಲ್ಲಿ ದೇಹವನ್ನು ಸೇರಿಸಿ, ಚಿತ್ತವಶದಿಂದ ಆಕಾಶದಲ್ಲಿ ಹೋಗುವನು."

"ನೀನು ಚತುರ, ಭನ್ತೇ ನಾಗಸೇನ."

೧೦

ರಾಜನು "ಭನ್ತೇ ನಾಗಸೇನ, 'ನೂರು ಯೋಜನ ಉದ್ದವಾದ ಮೂಳೆಗಳು' ಎಂದು ನೀವು ಹೇಳುವಿರಿ. ನೂರು ಯೋಜನಗಳ ಮರಗಳೂ ಇಲ್ಲ. ನೂರು ಯೋಜನ ಉದ್ದದ ಮೂಳೆಗಳೆಲ್ಲಿ ಆಗುವುವು?" ಎಂದನು.

"ಏನೆಂಬೆ, ಮಹಾರಾಜ? ಮಹಾಸಮುದ್ರದಲ್ಲಿ ಐನೂರು ಯೋಜನಗಳ [ಉದ್ದದ] ಮತ್ಸ್ಯಗಳು ಉಂಟೆಂದು ಕೇಳಿರುವೆಯ?"

"ಹೌದು, ಕೇಳಿದ್ದೇನೆ, ಭನ್ತೇ."

"ಹಾಗಾದರೆ, ಮಹಾರಾಜ, ಐನೂರು ಯೋಜನ [ಉದ್ದ]ದ ಮತ್ಸ್ಯಗಳ ಮೂಳೆಗಳು ನೂರು ಯೋಜನ [ಉದ್ದ] ಆಗವೆ?"

"ನೀನು ಜಾಣ, ಭನ್ತೇ ನಾಗಸೇನ."

೧೧

ರಾಜನು "ಭನ್ತೇ ನಾಗಸೇನ, 'ಉಸಿರು ಒಳಗೆ ಎಳೆದು ಬಿಡುವುದನ್ನು ನಿರೋಧಿಸಲು ಶಕ್ಯ' ಎಂದು ನೀವು ಹೇಳುವಿರಿ" ಎಂದನು.

"ಹೌದು, ಮಹಾರಾಜ, ನಿರೋಧಿಸಲು ಶಕ್ಯ."

"ಅದು ಹೇಗೆ ಶಕ್ಯ, ಭನ್ತೇ ನಾಗಸೇನ?"

"ಏನೆಂಬೆ, ಮಹಾರಾಜ? ಯಾವನಾದರೂ ಗೊರಕೆ ಬಿಡುವುದನ್ನು ಈ ಹಿಂದೆ ಕೇಳಿರುವೆಯು?"

"ಹೌದು, ಹಿಂದೆ ಕೇಳಿದ್ದೇನೆ, ಭನ್ತೇ."

"ಏನು, ಮಹಾರಾಜ? [ಅವನ] ಮೈಯನ್ನು ಬಗ್ಗಿಸಿದರೆ ಆ ಶಬ್ದ ನಿಲ್ಲುವುದೆ?"

"ಹೌದು, ನಿಲ್ಲುವುದು, ಭನ್ತೇ."

"ಮಹಾರಾಜ, ದೇಹ ಶೀಲ ಚಿತ್ತ ಪ್ರಜ್ಞೆಗಳನ್ನು ಭಾವಿಸದವನ ದೇಹವನ್ನು ಬಗ್ಗಿಸಿದ ಮಾತ್ರಕ್ಕೆ ಆ ಶಬ್ದ ನಿಂತರೆ; ದೇಹ ಶೀಲ ಚಿತ್ತ ಪ್ರಜ್ಞೆಗಳನ್ನು ಭಾವಿಸಿದವನ, ಚತುರ್ಥ ಧ್ಯಾನವನ್ನು ಹೊಂದಿದವನ ಆಶ್ವಾಸ ಪ್ರಾಶ್ವಾಸಗಳು ನಿರೋಧವಾಗಲಾರವೆ?"

"ನೀನು ಚತುರ, ಭನ್ತೇ ನಾಗಸೇನ."

೧೨

ರಾಜನು "ಭನ್ತೇ ನಾಗಸೇನ, 'ಸಮುದ್ರ! ಸಮುದ್ರ!' ಎನ್ನುವರು. ನೀರನ್ನು ಏಕೆ 'ಸಮುದ್ರ'ವೆಂದು ಹೇಳುವರು?" ಎಂದನು.

ಸ್ಥವಿರನು "ಮಹಾರಾಜ, [ಅಲ್ಲಿ] ಎಷ್ಟು ನೀರಿದೆ, ಅಷ್ಟು ಉಪ್ಪು [ಇದೆ]; ಎಷ್ಟು ಉಪ್ಪು [ಇದೆ], ಅಷ್ಟು ನೀರು [ಇದೆ]. ಅದರಿಂದ [ಅದನ್ನು] 'ಸಮುದ್ರ'ವೆಂದು ಹೇಳುವರು" ಎಂದನು.

"ನೀನು ಕುಶಲಿ, ಭನ್ತೇ ನಾಗಸೇನ."

೧೩

ರಾಜನು "ಭನ್ತೇ ನಾಗಸೇನ, ಸಮುದ್ರವು ಒಂದೇ ರಸವಾಗಿ ಲವಣರಸವಾಗಿರಲು ಕಾರಣವೇನು?" ಎಂದನು.

"[ಆ] ನೀರು ಚಿರಕಾಲ ನಿಂತುದರಿಂದ ಸಮುದ್ರ ಒಂದೇ ರಸ, ಲವಣರಸ."

"ನೀನು ಜಾಣ, ಭನ್ತೇ ನಾಗಸೇನ."

೧೪

ರಾಜನು "ಭನ್ತೇ ನಾಗಸೇನ, ಎಲ್ಲಕ್ಕಿಂತ ಸೂಕ್ಷ್ಮವಾದುದನ್ನು ಒಡೆಯಲು ಶಕ್ಯವೆ?" ಎಂದನು.

"ಶಕ್ಯ, ಮಹಾರಾಜ."

"ಹಾಗಾದರೆ, ಎಲ್ಲಕ್ಕಿಂತ ಸೂಕ್ಷ್ಮವಾದುದು ಯಾವುದು, ಭನ್ತೇ?"

"ಎಲ್ಲಕ್ಕಿಂತ ಸೂಕ್ಷ್ಮವಾದುದು ಧರ್ಮ, ಮಹಾರಾಜ. [ಆದರೆ] ಎಲ್ಲ ಧರ್ಮಗಳೂ ಸೂಕ್ಷ್ಮವಲ್ಲ. ಸೂಕ್ಷ್ಮ, ಸ್ಥೂಲ ಎಂಬುದು ಧರ್ಮಗಳಿಗೆ ಹೆಸರು, ಮಹಾರಾಜ. ಒಡೆಯಲಾಗುವ ಎಲ್ಲವನ್ನೂ ಪ್ರಜ್ಞೆ ಒಡೆಯುವುದು; ಪ್ರಜ್ಞೆಯನ್ನು ಒಡೆಯಬಲ್ಲ ಎರಡನೆಯ [ಧರ್ಮ]ವಿಲ್ಲ."

"ನೀನು ಚತುರ, ಭನ್ತೇ ನಾಗಸೇನ."

೧೫

ರಾಜನು "ಭನ್ತೇ ನಾಗಸೇನ, ವಿಜ್ಞಾನ, ಪ್ರಜ್ಞೆ, ಭೂತಗಳ ಜೀವ [ಎಂಬ] ಈ ಧರ್ಮಗಳು ಅರ್ಥದಲ್ಲಿಯೂ ವ್ಯಂಜನದಲ್ಲಿಯೂ ಬೇರೆ ಬೇರೆಯೆ? ಅಥವಾ ಅರ್ಥದಲ್ಲಿ ಒಂದೇ ಆಗಿ ವ್ಯಂಜನದಲ್ಲಿ [ಮಾತ್ರ] ಬೇರೆಯೆ?" ಎಂದನು.

"ಮಹಾರಾಜ, ವಿಜಾನನವು ವಿಜ್ಞಾನದ ಲಕ್ಷಣ; ಪ್ರಜಾನನವು ಪ್ರಜ್ಞೆಯ ಲಕ್ಷಣ; ಭೂತಗಳ ಜೀವ [ಎಂಬುದು] ಸಿಕ್ಕುವುದಿಲ್ಲ."

"ಜೀವ[ವೆಂಬುದು] ಸಿಕ್ಕದಿದ್ದರೆ, ಕಣ್ಣಿನಿಂದ ರೂಪವನ್ನು ನೋಡುವವರು ಯಾರು? ಕಿವಿಯಿಂದ ಶಬ್ದ ಕೇಳುವವರಾರು? ಮೂಗಿನಿಂದ ಗಂಧ ಮೂಸಿ, ನಾಲಗೆಯಿಂದ ರಸ ಸವಿದು, ದೇಹದಿಂದ ಸ್ಪ್ರಷ್ಟವ್ಯವನ್ನು ಮುಟ್ಟಿ, ಮನಸ್ಸಿನಿಂದ ಧರ್ಮವನ್ನು ವಿಜಾನಿಸುವವರು ಯಾರು?"

ಸ್ಥವಿರನು "[ನೀನು ಹೇಳುವಂತೆ] ಜೀವ[ವೆಂಬುದು] ಕಣ್ಣಿನಿಂದ ರೂಪ ನೋಡಿ, ಕಿವಿಯಿಂದ ಶಬ್ದ ಕೇಳಿ, ಮೂಗಿನಿಂದ ಗಂಧ ಮೂಸಿ, ನಾಲಗೆಯಿಂದ ರಸ ಸವಿದು, ದೇಹದಿಂದ ಸ್ಪ್ರಷ್ಟವ್ಯವನ್ನು ಮುಟ್ಟಿ, ಮನಸ್ಸಿನಿಂದ ಧರ್ಮವನ್ನು ತಿಳಿ[ಯುವುದಾ]ದರೆ; ಕಣ್ಣಿನ ಬಾಗಿಲನ್ನು [ಕಿತ್ತು] ಕೆಳಗೆ ಬಿಸುಟರೆ, [ಮೊದಲಿಗಿಂತ] ದೊಡ್ಡದಾದ [ಈ ಹೊಸ]

ಅವಕಾಶದಲ್ಲಿ ಜೀವವು ಹೊರಗೆ ಮುಖಮಾಡಿಕೊಂಡು ಇನ್ನೂ ಚೆನ್ನಾಗಿ ರೂಪಗಳನ್ನು ಕಾಣುವುದೆ? ಅಥವಾ ಕಿವಿ, ಮೂಗು, ನಾಲಗೆ, ಮೈ, ಮನಸ್ಸುಗಳನ್ನು ಕಿತ್ತು ಕೆಳಗೆಸೆದರೆ, ಜೀವವು ಹೊರಗೆ ಮುಖಮಾಡಿಕೊಂಡು ಇನ್ನೂ ಚೆನ್ನಾಗಿ ಶಬ್ದ ಕೇಳುವುದೆ? ಗಂಧ ಮೂಸುವುದೆ? ರಸ ಸವಿಯುವುದೆ? ಮುಟ್ಟತಕ್ಕುದನ್ನು ಮುಟ್ಟುವುದೆ? ಅಥವಾ ಧರ್ಮವನ್ನು ತಿಳಿಯುವುದೆ?" ಎಂದನು.

"ಇಲ್ಲ, ಭನ್ತೇ."

"ಆದರಿಂದ, ಮಹಾರಾಜ, ಭೂತಗಳ ಜೀವ[ವೆಂಬುದು] ಸಿಕ್ಕುವುದಿಲ್ಲ."

"ನೀನು ಚತುರ, ಭನ್ತೇ ನಾಗಸೇನ."

೧೬

ಸ್ಥವಿರನು "ಮಾಡಲು ಕಷ್ಟವಾದುದನ್ನು ಭಗವಂತನು ಮಾಡಿದನು, ಮಹಾರಾಜ" ಎಂದನು.

"ಮಾಡಲು ಕಷ್ಟವಾದ ಯಾವುದನ್ನು ಭಗವಂತನು ಮಾಡಿದನು, ಭನ್ತೇ?"

"ಭಗವಂತನು ಮಾಡಿದುದನ್ನು ಮಾಡಲು ಕಷ್ಟ, ಮಹಾರಾಜ: 'ಇದು ಸ್ಪರ್ಶ, ಇದು ವೇದನೆ, ಇದು ಸಂಜ್ಞೆ, ಇದು ಚೇತನಾ, ಇದು ಚಿತ್ತ' ಎಂದು ಈ ರೂಪವಿಲ್ಲದ ಚಿತ್ತಚೇತಸಿಕಗಳಾದ ಧರ್ಮಗಳನ್ನು, ಒಂದು ಅವಲಂಬನದಿಂದ ವರ್ತಿಸುವವುಗಳನ್ನು, ವ್ಯವಸ್ಥೆಯಿಂದ ಹೇಳಿದುದು."

"ಉಪಮಾನ ಕೊಡು."

"ಮಹಾರಾಜ, ಯಾವನಾದರೂ ಪುರುಷನು ದೋಣಿಯಲ್ಲಿ ಮಹಾಸಮುದ್ರವನ್ನು ಹೊಕ್ಕು, ಬೊಗಸೆಯಿಂದ ನೀರು ಹಿಡಿದು ನಾಲಗೆಯಿಂದ ಸವಿದು, 'ಇದು ಗಂಗೆಯ ನೀರು, ಇದು ಯಮುನೆಯ ನೀರು, ಇದು ಅಚಿರವತಿಯ ನೀರು, ಇದು ಶರಭುವಿನ ನೀರು, ಇದು ಮಹಿಯ ನೀರು' ಎಂದು ತಿಳಿಯಬಲ್ಲನೆ?"

"ತಿಳಿಯಲು ಕಷ್ಟ, ಭನ್ತೇ."

"ಭಗವಂತನು ಮಾಡಿದುದು ಅದಕ್ಕಿಂತ ಕಷ್ಟ, ಮಹಾರಾಜ: 'ಇದು ಸ್ಪರ್ಶ, ಇದು ವೇದನೆ, ಇದು ಸಂಜ್ಞೆ, ಇದು ಚೇತನಾ, ಇದು ಚಿತ್ತ' ಎಂದು ಈ ರೂಪವಿಲ್ಲದ ಚಿತ್ತಚೇತಸಿಕಗಳಾದ ಧರ್ಮಗಳನ್ನು, ಒಂದು ಅವಲಂಬನದಿಂದ ವರ್ತಿಸುವವುಗಳನ್ನು, ವ್ಯವಸ್ಥೆಯಿಂದ ಹೇಳಿದುದು."

"[ನೀನು ಹೇಳಿದುದು] ಸರಿ, ಭನ್ತೇ" ಎಂದು ರಾಜನು ಅನುಮೋದಿಸಿದನು.

[ಏಳನೆಯ ವರ್ಗ ಮುಗಿಯಿತು.]

೧೭

ಸ್ಥವಿರನು "ಈಗ ಏನು ವೇಳೆ, ಗೊತ್ತೆ, ಮಹಾರಾಜ?" ಎಂದನು.

"ಗೊತ್ತು, ಭನ್ತೇ. ಈಗ ಮೊದಲ ಯಾಮ ಮೀರಿತು, ಮಧ್ಯಮ ಯಾಮ ನಡೆಯುತ್ತಿದೆ. ಪಂಜುಗಳನ್ನು ಹತ್ತಿಸಿದೆ. ನಾಲ್ಕು ಪತಾಕೆಗಳನ್ನು ಎತ್ತಲು ಆಜ್ಞೆಯಾಗಿದೆ. ಭಂಡಾರದಿಂದ ರಾಜದಾನವು [ಈಗ] ಹೊರಡುವುದು."

ಯವನಕರು "ನೀನು ನುಡಿದುದು ಸರಿ, ಮಹಾರಾಜ. [ಈ] ಭಿಕ್ಷು ಪಂಡಿತನು" ಎಂದರು.

"ಆಹಾ, ಅಲ್ಲವೆ! ಸ್ಥವಿರನು ಪಂಡಿತನು. ಇಂತಹ ಆಚಾರ್ಯನೂ ನನ್ನಂತಹ ಶಿಷ್ಯನೂ ಆದರೆ, ಪಂಡಿತ[ನಾದ ಶಿಷ್ಯ]ನು ಬಹು ಬೇಗ ಧರ್ಮವನ್ನು ತಿಳಿಯುವನು."

ಆಗ ರಾಜನು [ತನ್ನ] ಪ್ರಶ್ನೆಗಳಿಗೆ [ನಾಗಸೇನನು ಕೊಟ್ಟ] ವಿವರಣೆಗಳಿಂದ ತೃಪ್ತಿಹೊಂದಿ, ನೂರು ಸಾವಿರ [ಕಹಾಪಣ]ಗಳ ಬೆಲೆಯ ಕಂಬಳವನ್ನು ಸ್ಥವಿರ ನಾಗಸೇನನಿಗೆ ಹೊದಿಸಿ, "ಭನ್ತೇ ನಾಗಸೇನ, ಇಂದಿನಿಂದ ಎಂಟುನೂರು ದಿನಗಳು ನಿನಗೆ ಆಹಾರವನ್ನು [ಒದಗಿಸಲು] ಆಜ್ಞೆಕೊಟ್ಟಿದ್ದೇನೆ. ನನ್ನ ಅರಮನೆಯಲ್ಲಿ ತೆಗೆದುಕೊಳ್ಳಬಹುದಾದುದು ಯಾವುದನ್ನಾದರೂ ನೀಡುತ್ತೇನೆ" ಎಂದನು.

"ಸಾಕು, ಮಹಾರಾಜ. [ಇರುವಷ್ಟರಲ್ಲಿ] ಜೀವಿಸುತ್ತೇನೆ."

"[ಇರುವಷ್ಟರಲ್ಲಿ] ಜೀವಿಸುತ್ತೀಯೆ, ಗೊತ್ತು, ಭನ್ತೇ ನಾಗಸೇನ. ಆದರೂ ನನ್ನನ್ನು ಕಾಪಾಡಿ ನಿನ್ನನ್ನೂ ಕಾಪಾಡಿಕೊ. ನಿನ್ನನ್ನು ಕಾಪಾಡಿ

ಕೊಳ್ಳುವುದು ಹೇಗೆ? 'ನಾಗಸೇನನು ರಾಜಾ ಮಿಲಿಂದನನ್ನು ಪ್ರಸನ್ನಗೊಳಿಸಿದನು. [ಆದರೂ ಅವನಿಗೆ ದೊರೆಯಿಂದ] ಏನೂ ದೊರೆಯಲಿಲ್ಲ' ಎಂದು ಇತರರಿಂದ ಅಪವಾದ ಬರುವುದು. ಹೀಗೆ ನಿನ್ನನ್ನು ರಕ್ಷಿಸಿಕೊ. ನನ್ನನ್ನು ರಕ್ಷಿಸುವುದು ಹೇಗೆ? 'ರಾಜಾ ಮಿಲಿಂದನು ಪ್ರಸನ್ನನಾಗಿಯೂ ಯಾವ ಮರ್ಯಾದೆಯನ್ನೂ ಮಾಡಲಿಲ್ಲ' ಎಂದು ಇತರರಿಂದ ಅಪವಾದ ಬರುವುದು. ಹೀಗೆ ನನ್ನನ್ನು ರಕ್ಷಿಸು."

"ಹಾಗೆಯೆ ಆಗಲಿ, ಮಹಾರಾಜ."

"ಭನ್ತೇ, ಮೃಗರಾಜನಾದ ಸಿಂಹವು ಚಿನ್ನದ ಬೋನಿನಲ್ಲಿ ಇಟ್ಟರೂ ಹೊರಗಡೆಗೇ ಮುಖಮಾಡುವಂತೆ, ನಾನು ಮನೆಯಲ್ಲಿ ವಾಸಮಾಡಿದರು ಕೂಡ ಬಹಿರ್ಮುಖನೇ ಆಗಿದ್ದೇನೆ. [ಆದರೆ] ನಾನು ಮನೆಯಿಂದ ಮನೆಯಿಲ್ಲದ ಸ್ಥಿತಿಗೆ ಪರಿವ್ರಜಿಸಿದರೆ, ಭನ್ತೇ, ನಾನು ಬಹುಕಾಲ ಬದುಕುವುದಿಲ್ಲ; ನನಗೆ ಶತ್ರುಗಳು ಬಹಳ."

ಆಗ, ಆಯುಷ್ಮಂತನಾದ ನಾಗಸೇನನು ಮಿಲಿಂದರಾಜನ ಪ್ರಶ್ನೆಗಳನ್ನು ಬಿಡಿಸಿ, ಆಸನದಿಂದ ಎದ್ದು ಸಂಘಾರಾಮಕ್ಕೆ ಹೊರಟನು.

೧೮

ಆಯುಷ್ಮಂತನಾದ ನಾಗಸೇನನು ಮರೆಯಾದ ಸ್ವಲ್ಪ ಕಾಲದಲ್ಲಿ ರಾಜಾ ಮಿಲಿಂದನು "ನಾನು ಏನು ಕೇಳಿದೆ? ಭದಂತನು ಏನು ಬಿಡಿಸಿದನು?" ಎಂದುಕೊಂಡನು. ಆಗ, "ನಾನು ಎಲ್ಲವನ್ನೂ ಸರಿಯಾಗಿ ಕೇಳಿದೆನು; ಭದಂತನು ಎಲ್ಲವನ್ನೂ ಸರಿಯಾಗಿ ಬಿಡಿಸಿದನು" ಎಂದು ಅವನಿಗೆನಿಸಿತು.

ಸಂಘಾರಾಮಕ್ಕೆ ಬಂದ ಮೇಲೆ ಆಯುಷ್ಮಂತನಾದ ನಾಗಸೇನನು ಕೂಡ "ರಾಜನು ಏನು ಕೇಳಿದನು? ನಾನು ಏನು ಬಿಡಿಸಿದೆನು?" ಎಂದುಕೊಂಡನು. ಆಗ, "ರಾಜನು ಎಲ್ಲವನ್ನೂ ಸರಿಯಾಗಿ ಕೇಳಿದನು; ನಾನು ಎಲ್ಲವನ್ನೂ ಸರಿಯಾಗಿ ಬಿಡಿಸಿದೆನು" ಎಂದು ಅವನಿಗೆನಿಸಿತು.

ಆಗ, ಆ ರಾತ್ರಿ ಮುಗಿಯಲು, ಆಯುಷ್ಮಂತನಾದ ನಾಗಸೇನನು ಪೂರ್ವಾಹ್ನ ಸಮಯದಲ್ಲಿ ಉಡುಪು ಹಾಕಿಕೊಂಡು ಪಾತ್ರೆ ಚೀವರಗಳನ್ನು ಕೊಂಡು, ಮಿಲಿಂದನ ನಿವಾಸವಿರುವಲ್ಲಿಗೆ ಸಾರಿ ಸಿದ್ಧಗೊಳಿಸಿದ್ದ

ಆಸನದಲ್ಲಿ ಕುಳಿತನು. ಆಗ ರಾಜಾ ಮಿಲಿಂದನು ಆಯುಷ್ಮಂತನಾದ ನಾಗಸೇನನಿಗೆ ಅಭಿವಂದನೆ ಮಾಡಿ ಒಂದು ಕಡೆ ಕುಳಿತನು.

ಒಂದು ಕಡೆ ಕುಳಿತು, ರಾಜಾ ಮಿಲಿಂದನು ಆಯುಷ್ಮಂತನಾದ ನಾಗಸೇನನನ್ನು ಕುರಿತು "ನಾಗಸೇನನನ್ನು ಪ್ರಶ್ನೆ ಕೇಳಿದೆನೆಂದು, ಅದೇ ಸಂತೋಷದಿಂದ ನಾನು ರಾತ್ರಿಯ ಉಳಿದ ಭಾಗದಲ್ಲಿ ಮಲಗಲಿಲ್ಲವೆಂದು ಭದಂತನು ತಿಳಿಯದಿರಲಿ. ಭನ್ತೇ, ರಾತ್ರಿಯ ಮಿಕ್ಕ ಭಾಗದಲ್ಲಿ 'ನಾನು ಕೇಳಿದುದೇನು? ಭದಂತನು ಬಿಡಿಸಿದುದೇನು? ನಾನು ಕೇಳಿದುದೆಲ್ಲ ಸರಿಯಾಗಿತ್ತು; ಭದಂತನು ಎಲ್ಲವನ್ನೂ ಸರಿಯಾಗಿ ಬಿಡಿಸಿದನು' ಎಂದು ನನಗೆನಿಸಿತು" ಎಂದನು.

ಸ್ಥವಿರನು ಕೂಡ "ರಾಜಾ ಮಿಲಿಂದನ ಪ್ರಶ್ನೆಗಳನ್ನು ಬಿಡಿಸಿದೆನೆಂದು, ಅದೇ ಸಂತೋಷದಿಂದ ನಾನು ರಾತ್ರಿಯ ಉಳಿದ ಭಾಗದಲ್ಲಿ ಮಲಗಲಿಲ್ಲವೆಂದು ಮಹಾರಾಜನು ತಿಳಿಯದಿರಲಿ. ಮಹಾರಾಜ, ರಾತ್ರಿಯ ಮಿಕ್ಕಭಾಗದಲ್ಲಿ 'ರಾಜಾ ಮಿಲಿಂದನು ಕೇಳಿದುದೇನು? ನಾನು ಬಿಡಿಸಿದುದೇನು? ರಾಜಾ ಮಿಲಿಂದನು ಎಲ್ಲವನ್ನೂ ಸರಿಯಾಗಿ ಕೇಳಿದನು; ನಾನು ಎಲ್ಲವನ್ನೂ ಸರಿಯಾಗಿ ಬಿಡಿಸಿದೆನು' ಎಂದು ನನಗೆ ಎನ್ನಿಸಿತು" ಎಂದನು.

ಹೀಗೆ, [ತಾವು] ಮಾತನಾಡಿದುದು ಸರಿಯಾಗಿತ್ತೆಂದು ಆ ಮಹಾನಾಗರು ಒಬ್ಬರನ್ನೊಬ್ಬರು ಅನುಮೋದಿಸಿದರು.

[ಮಿಲಿಂದ ಪ್ರಶ್ನೆಯ 'ಪ್ರಶ್ನೆಗಳನ್ನು ಬಿಡಿಸುವುದು' ಮುಗಿಯಿತು.]

೧. ನಾಮಪದ ಸೂಚಿ

(ಸಂಖ್ಯೆಯ ಮುಂದೆ * ಎಂಬ ಚಿಹ್ನೆಯಿದ್ದರೆ, ಆ ಪುಟದ ಮುಂದಿನ ಪುಟಗಳಲ್ಲೂ ಆ ಪದ ಸಿಕ್ಕುವುದೆಂದು ಗ್ರಹಿಸಬೇಕು.)

ಅಚಿರವತಿ–ಮಹಾನದಿ, 97, 123.
ಅಜಿತ ಕೇಶಕಂಬಳಿ–ಗಣಾಚಾರ್ಯ, 20.
ಅನಂತಕಾಯ–ಮಂತ್ರಿ, 39.*
ಅಲಸಂದ–ದ್ವೀಪ, 116.
ಅಶ್ವಗುಪ್ತ–ಸ್ಥವಿರ, 20.*
ಅಶೋಕಾರಾಮ– ಆರಾಮ, 23, 24.

ಆನಂದ–ಬುದ್ಧನ ಶಿಷ್ಯ, 110.
ಆಯುಪಾಲ–ಸ್ಥವಿರ, 24.*
ಆಳಕಮಂದ–ದೇವಪುರ, 17.

ಇಂದ್ರ–ಲೋಕಪಾಲ, 30.

ಉತ್ತರ ಕುರು–ದೇಶ, 17, 119.

ಊಹಾ–ನದಿ, 96.

ಋಷಿಪತನ–ಸ್ಥಳ, 25.

ಕಜಂಗಲ–ಗ್ರಾಮ, 22.
ಕಲಸಿ–ಗ್ರಾಮ, 116.*
ಕಾಶ್ಮೀರ–ದೇಶ, 116.*
ಕುಬ್ಜೆ ಉತ್ತರೆ–ಭಿಕ್ಷುಣಿ, 110.
ಕುಬೇರ–ಲೋಕಪಾಲ, 30.
ಕೂಟಾಗಾರ–ಮೇಲೆ ಗೋಪುರವಿದ್ದ ಮನೆ, 51, 91, 115.
ಕೇತುಮತೀ–ಭವನ, 21.

ಗಂಗೆ– ಮಹಾನದಿ, 97, 123.

ಜಂಬೂದ್ವೀಪ–19, 115.
ಜಿನ–ಬುದ್ಧ, 45.

ತ್ರಯಸ್ತ್ರಿಂಶಸ್–ಸ್ವರ್ಗ, 21.
ತಿಷ್ಯ–(೧) ಸ್ಥವಿರ, 18.
(೨) ಲೇಖಾಚಾರ್ಯ, 97.

ದತ್ತ–ಸರ್ವದತ್ತ ಮಂತ್ರಿ, 76.
ದೇವತೆ–ಪರ್ಜನ್ಯ, 79, 81.
ದೇವಮಂತ್ರಿಕ–ಮಂತ್ರಿ, 29,* 39.

ಧರ್ಮರಕ್ಷಿತ–ಸ್ಥವಿರ, 24.
ಧರ್ಮಸೇನಾಪತಿ–ಸಾರಿಪುತ್ರ, 61.

ನಾಗಸೇನ–ಸ್ಥವಿರ, 15–126.
ನಿರ್ಗ್ರಂಥ ಜ್ಞಾತೃಪುತ್ರ–ಗಣಾಚಾರ್ಯ, 20.

ಪಕುಧ ಕಾತ್ಯಾಯನ–ಗಣಾಚಾರ್ಯ, 20.
ಪರಾಭವ ಸುತ್ತ–26.
ಪ್ರಜಾಪತಿ–ಲೋಕಪಾಲ, 30.
ಪಾಟಲಿಪುತ್ರ–ನಗರ, 23, 24.
ಪೂರ್ಣಕಶ್ಯಪ–ಗಣಾಚಾರ್ಯ, 20.

ಬ್ರಹ್ಮ–25, 105.
ಬ್ರಹ್ಮಲೋಕ–115.*
ಬುದ್ಧ–37, 96.
ಬೋಧಿವೃಕ್ಷ–105.

ಮಸ್ಕರಿ ಗೋಶಾಲ–ಗಣಾಚಾರ್ಯ, 20.
ಮಹಾಬ್ರಹ್ಮ–30.
ಮಹಾಮಂಗಲ ಸುತ್ತ–25
ಮಹಾಸಮಯ ಸುತ್ತಂತ–25.
ಮಹಾಸೇನ–ದೇವ, 21.*
ಮಹೀ– ಮಹಾನದಿ, 97, 123.
ಮಂಕುರ–ಮಂತ್ರಿ, 39.*
ಮಂಡಲಮಾಳ–ಮಂಡಲಾಕಾರವಾದ ಸಭಾಮಂದಿರ, 30.
ಮಿಲಿಂದ–ದೊರೆ, 15–126.
ಮೃಗದಾವ–ವಾರಣಾಸಿಯಬಳಿಯ ವನ, 25.
ಮೌದ್ಗಲ್ಯಾಪುತ್ರ–ಮಹಾ ಮೌದ್ಗಲ್ಯಾಯನನೆಂಬ ಬುದ್ಧನ ಮುಖ್ಯ ಶಿಷ್ಯ, 18.

ಯಮ–ಲೋಕಪಾಲ, 30.
ಯಮುನೆ–ಮಹಾನದಿ, 97, 123.
ಯವನಕ–ಬ್ಯಾಕ್ಟ್ರಿಯದ ಗ್ರೀಕರು, 16, 26, 33, 36.
ಯುಗಂಧರ–ಪರ್ವತ, 21.

ರಕ್ಷಿತಪಾರ್ಶ್ವ–20, 21.
ರಾಹುಲೋವಾದ ಸುತ್ತಂತ–26.
ರೋಹಣ–ಭಿಕ್ಷು, 21.*

ವಜ್ರೆ–ಭಿಕ್ಷುಣಿ, 37.
ವರುಣ–ಲೋಕಪಾಲ, 30.
ವಾರಣಾಸಿ–25.
ವೀರಸೇನ–ಒಂದು ಹೆಸರು, 33.
ವೈಜಯಂತ–ಅರಮನೆ, 21.
ವೈಶ್ರವಣ–ಯಕ್ಷರ ದೊರೆ, 31.

ಶಕ್ರ–ದೇವೇಂದ್ರ, 21.
ಶರಭೂ–ಮಹಾನದಿ, 97, 123.
ಶೂರಸೇನ–ಒಂದು ಹೆಸರು, 33.

ಸಮಚಿತ್ತಪರಿಯಾಯ ಸುತ್ತಂತ-26.
ಸರ್ವದತ್ತ–ಮಂತ್ರಿ, 39, 40.
ಸಂಖ್ಯೇಯ–ಪರಿವೇಣ, 24, 28.
ಸಂಜಯ ಬೇಲಟ್ಠಿಪುತ್ರ–ಗಣಾಚಾರ್ಯ 20.
ಸಂತುಶಿತ–ಲೋಕಪಾಲ, 30.
ಸಂಯುಕ್ತನಿಕಾಯ–ಸುತ್ತಪಿಟಕದ ಮೂರನೆಯ ನಿಕಾಯ, 48.
ಸಾಗಲ–ನಗರ, 15.*
ಸಾರಿಪುತ್ರ–ಬುದ್ಧನ ಶಿಷ್ಯ, 61.
ಸಿಂಹಸೇನ–ಒಂದು ಹೆಸರು, 33.
ಸುಯಾಮ–ಲೋಕಪಾಲ, 30.
ಸೋಣುತ್ತರ–ಬ್ರಾಹ್ಮಣ, 22.

ಹಿಮವಂತ–ಪರ್ವತ, 20, 22, 96.

೨. ಪದ ವಿಷಯ ಸೂಚಿ

ಅರ್ಹ–ಗುರಿ, 25, 27, 42, 50, 52, 53, 106, 113.*
ಅನಾಗಾಮಿ–'ಅರ್ಹತ' ನೋಡಿ, 47.
ಅನಾತ್ಮ–ಲೋಕದ ಲಕ್ಷಣ, 52, 57, 58.
ಅನಿತ್ಯ–ಲೋಕದ ಲಕ್ಷಣ, 52, 57, 58.
ಅನುಭವನ–ವೇದನೆಯ ಲಕ್ಷಣ, 82, 83.
ಅನುಮರ್ದನ–ಪುನಃ ಪುನಃ ಬಡಿಯುವುದು, 85.
ಅನುರವಣ–ಧ್ವನಿಯನ್ನು ಅನುಸರಿಸಿ ಧ್ವನಿಯಾಗುವುದು, 85.
ಅರ್ಪಣ–ವಿತರ್ಕದ ಲಕ್ಷಣ, 85.
ಅಪಿಲಾಪನ–ಸ್ಮೃತಿಯ ಲಕ್ಷಣ, 49.
ಅಭಿಧರ್ಮ–ಧರ್ಮದ ಸೂಕ್ಷ್ಮಾಂಶಗಳ ವಿಶೇಷ ವಿವರ, 15, 23, 41, 78.
ಅಭಿಸಂಸ್ಕರಣ–ಕೂಡಿಹಾಕುವುದು; ಚೇತನೆಯ ಲಕ್ಷಣ, 83, 84.
ಅರಣಿ–ಕಡೆದು ಬೆಂಕಿಮಾಡಲು ಉಪಯೋಗಿಸುವ ಮರದ ಕಟ್ಟಿಗೆ, 74.
ಅರಣಿಪೋತಕ–ಸಣ್ಣ ಕಟ್ಟಿಗೆ ಚೂರು, 74.
ಅರಣಿಯುತ್ತರಕ–ಕಡೆದು ಬೆಂಕಿಮಾಡುವಾಗ, ಮೇಲಿನ ಕಡೆಯುವ ಮರಕ್ಕೆ ಬಿಗಿಯುವ ಹಗ್ಗ, 74.
ಅವಭಾಸನ–ಪ್ರಕಾಶವಾಗುವಿಕೆ; ಪ್ರಜ್ಞೆಯ ಲಕ್ಷಣ, 51, 52.
ಅವಿದ್ಯೆ–ಇದು ಸರ್ವದುಃಖಕ್ಕು ಮೂಲ, 52, 69, 71.
ಅಷ್ಟಾಂಗಿಕ ಮಾರ್ಗ–ನಿರ್ವಾಣಕ್ಕೆ ಇದು ದಾರಿ. ಈ ಮಾರ್ಗದ ಎಂಟು ಅಂಗಗಳೆಂದರೆ: ಸಮ್ಯಕ್ ದೃಷ್ಟಿ, ಸ. ಸಂಕಲ್ಪ, ಸ. ವಾಕ್ಕು, ಸ. ಕರ್ಮ, ಸ. ಆಜೀವ, ಸ. ವಾಯಾಮ, ಸ. ಸ್ಮೃತಿ, ಸ. ಸಮಾಧಿ; 49.

ಅರ್ಹತ-(೧) ಬುದ್ಧನಲ್ಲಿ, ಆತನ ಧರ್ಮದಲ್ಲಿ, ಮತ್ತು ಅವನ ಸಂಘದಲ್ಲಿ ಶ್ರದ್ಧೆಯಿಟ್ಟು, ಆರ್ಯ ಅಷ್ಟಾಂಗಿಕ ಮಾರ್ಗವನ್ನು ಕೈಕೊಂಡು, ಸಂಸಾರವೆಂಬ ಹೊಳೆಯುನ್ನು ದಾಟಲು ಸಾರಿದವನು 'ಸ್ರೋತಾಪನ್ನ' ಎನ್ನಿಸಿಕೊಳ್ಳುವನು. ಅವನು, ನಿರ್ವಾಣಸಾಧನೆಗೆ ಅಡ್ಡಿಬರುವ ಐದು ಸಂಯೋಜನಗಳನ್ನು ಮುರಿದಾಗ ಅವನಿಗೆ ಆಯುಸ್ಸು, ಬಣ್ಣ, ಸುಖ, ಆಧಿಪತ್ಯಗಳು ಲಭಿಸುವುವು. ಸ್ರೋತಾಪನ್ನನು ನರಕದಲ್ಲಿ ಜನಿಸುವುದಿಲ್ಲ; ಪ್ರಾಣಿಯಾಗಿ ಹುಟ್ಟುವುದಿಲ್ಲ, ಪ್ರೇತವಾಗುವುದಿಲ್ಲ. (೨) 'ಸ್ರೋತಾಪನ್ನ'ನು ಮುಂದಿನ ಎರಡು ಸಂಯೋಜನಗಳನ್ನು ದಾಟಿದರೆ 'ಸಕೃದಾಗಾಮಿ' ಎನ್ನಿಸಿಕೊಳ್ಳುವನು. ಇವನು ಇನ್ನೊಮ್ಮೆ ಮಾತ್ರ ಜನ್ಮ ತಾಳಬೇಕು. (೩) ಮುಂದಿನ ಎರಡು ಸಂಯೋಜನಗಳನ್ನು ಮೀರಿದರೆ 'ಸಕೃದಾಗಾಮಿ'ಯು 'ಅನಾಗಾಮಿ'ಯಾಗುವನು. ಇವನಿಗೆ ಪುನರ್ಜನ್ಮವಿಲ್ಲ. (೪) ಉಳಿದ ಮೂರು ಸಂಯೋಜನಗಳನ್ನೂ ದಾಟಿದರೆ ಅವನು 'ಅರ್ಹತ'ನಾಗುವನು; ನಿರ್ವಾಣ ಪಡೆಯುವನು. ಅರ್ಹತ್ತ್ವವನ್ನು ಮೀರಿದ ಪದವಿಯಿಲ್ಲ, 20, 24, 61.

ಅರ್ಹತ್ತ್ವ-47.

ಅಂತಃಪುರ-ಅರಮನೆಯ ಒಳಭಾಗ, 39.

ಆಗಮ-ಸುತ್ತಪಿಟಕದ ಮೊದಲ ನಾಲ್ಕು ನಿಕಾಯಗಳಿಗೆ ಆಗಮಗಳೆಂದೂ ಹೆಸರು, 24, 27.

ಆಚಾರ್ಯ-ಶ್ರಾಮಣೇರನಿಗೆ ಧರ್ಮವಿನಯಗಳಲ್ಲಿ ಶಿಕ್ಷೆಕೊಡುವವನು 'ಉಪಾಧ್ಯಾಯ'. ಉಪಾಧ್ಯಾಯನ ಬದಲಿಗೆ ನಿಂತು ಕಲಿಸುವವನು 'ಆಚಾರ್ಯ', 34, 96.

ಆತಾಪಿ-ವೀರ್ಯವಂತ; ಉತ್ಸಾಹ, ಧೈರ್ಯ, ತೇಜಸ್ಸು, ಹುಮ್ಮಸ್ಸುಗಳುಳ್ಳವನು, 45.

ಅನಂತರಿಯ ಕರ್ಮ-34.

ಆಯತನ-(೧) ಅಧ್ಯಾತ್ಮಿಕ—ಕಣ್ಣು, ಕಿವಿ, ಮೂಗು, ನಾಲಗೆ, ದೇಹ ಎಂಬ ಐದು, 88; ಅರಸೆಯುದು ಮನಸ್ಸು. (೨) ಬಾಹಿರ—ರೂಪ, ಶಬ್ದ, ಗಂಧ, ರಸ, ಸ್ಪ್ರಷ್ಟವ್ಯ ಮತ್ತು ಧರ್ಮ, 94.

ಆಯುಷ್ಮಂತ-ಭಿಕ್ಷುಗಳನ್ನು ಸಂಬೋಧಿಸುವ ಮರ್ಯಾದೆಯ ರೂಪ.

ಆರ್ಯಸತ್ಯ-ನಾಲ್ಕು: (೧) ದುಃಖ, (೨) ದುಃಖದ ಉದಯ, (೩) ಉದಯದ ನಿರೋಧ, (೪) ನಿರೋಧದ ಮಾರ್ಗ, 52.

ಆರಾಮ-ಶಿಷ್ಯರು ಬುದ್ಧನಿಗೋ ಭಿಕ್ಷುಸಂಘಕ್ಕೋ ದಾನಮಾಡಿದ ವನ ಉಪವನಗಳು. ಅಲ್ಲಿ ಅವರು ಧ್ಯಾನ ಧರ್ಮಸಭೆಗಳನ್ನು ನಡಿಸುವರು, 18, 22.

ಇಂದ್ರಿಯ-ಆರು: ಕಣ್ಣು, ಕಿವಿ, ಮೂಗು, ನಾಲಗೆ, ದೇಹ, ಮನಸ್ಸು, 76.

ಇಂದ್ರಿಯ ಬಲ-ಶ್ರದ್ಧೆ, ವೀರ್ಯ, ಸ್ಮೃತಿ, ಸಮಾಧಿ, ಪ್ರಜ್ಞೆ ಎಂಬ ಐದು ಇಂದ್ರಿಯಗಳ ಬಲ, 44.

ಇಂದ್ರಿಯ ವಿಜ್ಞಾನ-ಇಂದ್ರಿಯಗಳಿಗೂ ಅವುಗಳ ವಿಷಯಗಳಿಗೂ ಆದ ಸನ್ನಿಪಾತದಿಂದ ಹುಟ್ಟುವ ತಿಳುವಳಿಕೆ, 70.

ಉತ್ತಮಾರ್ಥ-ಶ್ರೇಷ್ಠವಾದ ಗುರಿ, ನಿರ್ವಾಣ, 29.

ಉತ್ತರಾರಣಿ-ಕಡೆದು ಬೆಂಕಿಮಾಡುವ ಕಡ್ಡಿಗಳಲ್ಲಿ ಮೇಲಿನ ಕಡ್ಡಿ, 74.

ಉದಕಪ್ರಸಾದಕ ಮಣಿ-ಕದಡಿದ ನೀರನ್ನು ತಿಳಿಮಾಡುವ ಮಣಿ, 46.

ಉಪಗೃಹ್ಣನ-ಸ್ಮೃತಿಯ ಲಕ್ಷಣ, 49, 50.

ಉಪಸಂಪದೆ-ಭಿಕ್ಷುಪದವಿಯನ್ನು ಸಂಪಾದಿಸಿಕೊಡುವ ದೀಕ್ಷೆ, 34, 105.

ಉಪಸ್ತಂಭನ-ವೀರ್ಯದ ಲಕ್ಷಣ, 48.

ಉಪಾದಾನ-ಬೆಂಕಿಗೆ ಕಟ್ಟಿಗೆ ಹೇಗೋ ಭವಕ್ಕೆ ಉಪಾದಾನ ಹಾಗೆ, 'ಪರಿನಿರ್ವಾಣ' ನೋಡಿ; 42, 43, 67, 69, 72, 94.

ಉಪಾದಿ-ಉಪಾದಾನ; 101.

ಉಪಾಧ್ಯಾಯ-ಧರ್ಮಮಾರ್ಗವನ್ನು ಕಲಿಸುವ ಗುರು, 34.

ಉಪಾಯಾಸ–ದುಃಖಗಳಲ್ಲಿ ಒಂದು ವಿಧ, ಅಶಾಂತತೆ, 69, 72, 94.
ಉಪಾಸಕ–ಬೌದ್ಧಧರ್ಮವನ್ನು ಅವಲಂಬಿಸಿದ ಗೃಹಪತಿ, 23, 28.
ಉಪಾಸಿಕೆ–ಬೌದ್ಧಧರ್ಮವನ್ನು ಅವಲಂಬಿಸಿದ ಗೃಹಪತ್ನಿ, 23.
ಉಪೇಕ್ಷೆ–ಸುಖ ದುಃಖಗಳು ಸಮಾನವಾದ ಭಾವನೆ, 62.

ಊಹನ–ಮನಸಿಕಾರದ ಲಕ್ಷಣ, 43, 44.

ಋದ್ಧಿ–ತಕ್ಕ ಸಾಧನೆಗಳಿಂದ ವೃದ್ಧಿಗೊಳಿಸಿದ ಅಮಾನುಷೀಶಕ್ತಿ, 115, 120.
ಋದ್ಧಿಪಾದ–ದಿವ್ಯಶಕ್ತಿಗೆ ಬೇಕಾದ ನಾಲ್ಕು ಆಧಾರಗಳು, 44, 49.

ಏಕಾಗ್ರತೆ–77.

ಕರ್ಮ–70, 88–93, 100.
ಕಹಾಪಣ–ಚೌಕನೆಯ ತಾಮ್ರದ ನಾಣ್ಯ, 17, 124.
ಕಂಬಳ–ಒಂದು ತೆರಣ ಉಣ್ಣೆಯ ಬಟ್ಟೆ, 124.
ಕಾಯವಿಜ್ಞಾನ–35, 70, 77, 81.
ಕಾಲ–68–71.
ಕಾಶಿಕ–ಕಾಶಿಯ ವಸ್ತ್ರ, 16.
ಕ್ಲೇಶ–ಕೆಟ್ಟಗುಣ, ದೋಷ, 43–46, 52, 53, 58, 59.
ಕೌಟುಂಬರ–ಒಂದು ತೆರದ ಬಟ್ಟೆ, 16.

ಗುರುಶಾಸನ–ಬುದ್ಧವಚನಕ್ಕೆ ಬೇರೆ ಹೆಸರು, 27.

ಘ್ರಾಣವಿಜ್ಞಾನ–70, 77, 81.

ಚಕ್ಷುವಿಜ್ಞಾನ–70, 72. 77–81.
ಚಕ್ಷುಸಂಸ್ಪರ್ಶ–72.
ಚತುರ್ಥಧ್ಯಾನ–'ಬುದ್ಧವಚನ ಪರಿಚಯ'ದ ೧೯೫ನೆ ಪುಟ ನೋಡಿ, 121.
ಚರಣತ್ವ–78, 80.
ಚಿತ್ತ–45–47, 108, 121, 123, 124.
ಚೀವರ–ಭಿಕ್ಷುವಿನ ಹೊದೆಯುವ ಬಟ್ಟೆ, 40, 125.
ಚೇತನ–ಚಿತ್ತವು ಜಾಗ್ರತವಾಗಿ ಕೆಲಸಮಾಡುತ್ತಿದ್ದರೆ 'ಚೇತನೆ'ಯೆನ್ನಿಸಿಕೊಳ್ಳುವುದು, 77, 81, 83, 84, 86, 123, 124.
ಚೋಳಕ–ಬೆಂಕಿಮಾಡಲು ಬಳಸುವ ಚಕ್ಕೆಯಿರಬಹುದು, 74.

ಛೇದನ–ಪ್ರಜ್ಞೆಯ ಲಕ್ಷಣ, 43, 44, 51.

ಜರಾ–ಮುಪ್ಪು, ಒಂದು ತೆರದ ದುಃಖ, 69, 72, 94.
ಜಾತಿ–ಜನ್ಮ, ಒಂದು ರೀತಿಯ ದುಃಖ, 69, 72, 94.
ಜ್ಞಾನ–ಪ್ರಜ್ಞೆ, 52, 57.
ಜಿನವಚನ–ಬುದ್ಧವಚನ, 27.
ಜಿನಶಾಸನ–ಬುದ್ಧನ ಉಪದೇಶ, 28.
ಜಿಹ್ವಾವಿಜ್ಞಾನ–70, 77, 81.
ಜೀವ- 40, 41, 75, 76, 122, 123.
ಜೀವಿತೇಂದ್ರಿಯ–ಜೀವಿಸಿರುವುದನ್ನು ತಿಳಿಯುವ ಇಂದ್ರಿಯ, 77.

ತೃಷ್ಣೆ–ಪುನರ್ಜನ್ಮಕ್ಕೆ ಕಾರಣವಾದ ಕಾಮ, 69, 70, 72, 94.
ತೀರ್ಥಕ–19.

ದ್ವಾರತ್ತ್ವ–78, 79, 80.
ದುಃಖ–42, 48, 52, 57. 58, 60, 69, 72, 89, 94, 113, 114.
ದುಃಖಸ್ಕಂಧ–ಎಲ್ಲ ತೆರದ ದುಃಖಗಳೂ ಕೂಡಿದ ರಾಶಿ, 72, 94.
ದೌರ್ಮನಸ್ಯ–ಮನಸ್ಸು ಕುಗ್ಗಿರುವಿಕೆ, ನಿರುತ್ಸಾಹ, 69, 72, 94.

ಧರ್ಮ–(೧) ಗುಣ, ಸ್ಥಿತಿ, 43, 44, 49, 50, 52, 53, 55, 77, 81, 86, 87, 94, 122, 124.
(೨) ಬುದ್ಧನ ಬೋಧೆ, 17, 27, 90, 97, 101, 124.

ಧರ್ಮಚಕ್ರಪ್ರವರ್ತನ–ಬುದ್ಧನ ಧರ್ಮಬೋಧೆಯ ಪ್ರಾರಂಭ, 25.

ಧರ್ಮಕರಕ–ಭಿಕ್ಷುಗಳು ಉಪಯೋಗಿಸುತ್ತಿದ್ದ ಕುಡಿಯುವ ನೀರಿನ ಪಾತ್ರೆ. ಅದರ ಲಕ್ಷಣ ತಿಳಿದಿಲ್ಲ; 93.

ಧರ್ಮವಿಚಯ ಸಂಬೋಧ್ಯಂಗ–'ಬೋಧ್ಯಂಗ'ವನ್ನು ನೋಡಿ, 118.

ಧ್ಯಾನ–'ಬುದ್ಧವಚನ ಪರಿಚಯ'ದ ಪುಟ ೧೯೩—೧೯೬ ನೋಡಿ, 121.

ಧೂತಾಂಗ–ಭಿಕ್ಷುವು ಧೌತನಾಗಬೇಕಾದರೆ ಆಚರಿಸಬೇಕಾದ ಹದಿಮೂರು ವಿಶೇಷ ನಿಯಮಗಳು, 26.

ನಗರಗುಪ್ತಕ–ನಗರಪಾಲಕ, 84.

ನಗರವರ್ಧಕಿ–ನಗರ ರಚಿಸುವ ಶಿಲ್ಪಿ, 45.

ನಾಮರೂಪ- ಮಣ್ಣು, ನೀರು, ಗಾಳಿ, ಬೆಳಕು ಎಂಬ ಮಹಾಭೂತಗಳಿಂದ ಆಗಿ ಕಣ್ಣುಮೊದಲಾದ ಪಂಚೇಂದ್ರಿಯಗಳಿಗೆ ಗೋಚರವಾಗುವ ಸತ್ತ್ವಭಾಗವು 'ರೂಪ'; ವೇದನೆ, ಸಂಜ್ಞೆ, ಸಂಸ್ಕಾರ, ವಿಜ್ಞಾನ ಎಂಬ ಚೇತಸಿಕಗಳಾದ ಅರೂಪಿಸ್ಕಂಧಗಳಿಂದ ಆದ ಸತ್ತ್ವಭಾಗವು 'ನಾಮ'. ಈ ನಾಮರೂಪಗಳ ಸಂಯೋಗದಿಂದ ಸತ್ತ್ವಗಳು ಜನಿಸುವುವು. 62—69, 99.

ನಿಕಾಯ–ಸುತ್ತಪಿಟಕದ ಐದು ಭಾಗಗಳು, 29.

ನಿಪಕ ಚತುರ, ಕುಶಲಿ, 45.

ನಿಮ್ನತ್ತ–78, 79.

ನಿರಯ–ಕೆಳಲೋಕ, ನರಕ, 84, 91,* 112.

ನಿರೋಧ–42, 93, 94.

ನಿವಾರಣ–'ಬುದ್ಧವಚನ ಪರಿಚಯ' ಪುಟ ೧೯೧ ನೋಡಿ, 46, 47.

ನಿರ್ವಾಣ–ದುಃಖವೂ ಅದಕ್ಕೆ ಕಾರಣವಾದ ತೃಷ್ಣೆಯೂ ಪರಿಕ್ಷಯವಾಗುವುದು 'ನಿರ್ವಾಣ'. 'ಪರಿನಿರ್ವಾಣ ನೋಡಿ'; 18, 33, 93—95, 101.

ನಿರ್ವಾಣಧಾತು–ರಾಗರಹಿತವಾದ ಸ್ಥಿತಿ, 101.

ಪರಮಾರ್ಥ–(೧) ತುತ್ತತುದಿಯ ಗುರಿ, 42. (೨) ಆಡಿದ ಶಬ್ದಕ್ಕೆ ವಿಚಾರಶಕ್ತಿ, ಬುದ್ಧಿಶಕ್ತಿಗಳ ಬಲದಿಂದ ಕಲ್ಪಿಸುವ ನಿಷ್ಕೃಷ್ಟವಾದ ಅರ್ಥ, 36, 99.

ಪರಿದೇವ–ಮಾತಿನ ಪ್ರಲಾಪ, 69, 72, 94.

ಪರಿನಿರ್ವಾಣ–ಸಂಪೂರ್ಣ ನಿರ್ವಾಣ. ಅರ್ಹತನು, ಪುನರ್ಜನ್ಮಕ್ಕೆ ಕಾರಣವಾದ ಸಂಯೋಜನಗಳನ್ನೆಲ್ಲ ಕಡಿದು, ಜಾತಿ ಭವಗಳಿಂದ ಮುಕ್ತನಾಗಿ ಇನ್ನೂ ಭೌತಿಕದೇಹದೊಡನೆ ಬದುಕಿದ್ದರೆ, ಅವನು 'ಸ–ಉಪಾದಿಶೇಷವಾದ ಪರಿನಿರ್ವಾಣ'ವನ್ನು ಪಡೆದವನೆಂದು ಹೇಳುವರು. ಮುಂದೆ ಅವನು ಮೃತನಾಗಿ ಭೌತಿಕದೇಹವನ್ನು ತ್ಯಜಿಸಿದರೆ, 'ಅನುಪಾದಿಶೇಷವಾದ ಪರಿನಿರ್ವಾಣ'ವನ್ನು ಪಡೆದನೆನ್ನುವರು; ಅವನ ಜನ್ಮ ಸಂಪೂರ್ಣವಾಗಿ ಕ್ಷಯಿಸಿತು. 18, 42, 60, 68, 97, 101.

ಪರಿವ್ರಜಿಸು–ಸಂನ್ಯಾಸಿಯಾಗಿ ಸಂಚರಿಸು.

ಪರಿವ್ರಾಜಕ–ಸಂಚಾರಮಾಡುವ ಸಂನ್ಯಾಸಿ.

ಪರಿವೇಣ–ವಿಹಾರದಲ್ಲಿ ಭಿಕ್ಷುಗಳ ಪ್ರತ್ಯೇಕ ವಾಸಕ್ಕಾಗಿ ಮಾಡಿದ ಕೊಠಡಿ, 24.

ಪಂಚಬಲ–ಶ್ರದ್ಧಾಬಲ, ವೀರ್ಯಬಲ, ಸ್ಮೃತಿಬಲ, ಸಮಾಧಿಬಲ, ಪ್ರಜ್ಞಾಬಲ, 49.

ಪಂಚೇಂದ್ರಿಯ–44, 45, 49, 58, 59.

ಪ್ರಜಾನನ-ಪ್ರಜ್ಞೆಯ ಲಕ್ಷಣ, 122.

ಪ್ರಜ್ಞೆ–19, 23, 43,* 51, 52, 54, 57,* 88, 107, 121, 122.

ಪ್ರಜ್ಞೇಂದ್ರಿಯ–44, 58.

ಪ್ರತಿಭಾನ–ಪ್ರತಿಭೆ, 29.

ಪ್ರತಿಷ್ಠಾನ–ಶೀಲದ ಲಕ್ಷಣ, 44.

ಪ್ರತಿಸಂಧಿ–ಪುನರ್ಜನ್ಮ; ನಾಲ್ಕು ಮಹಾಭೂತಗಳು ಸೇರಿ ರೂಪವಾಗುವುದು, ವೇದನೆ ಮೊದಲಾದ ಸ್ಕಂಧಗಳು ಸೇರಿ ನಾಮವಾಗುವುದು, ನಾಮರೂಪಗಳು ಸೇರಿ ಸತ್ತ್ವ

ಜನಿಸುವುದು; 42, 43, 56, 60, 62—67, 98, 99.

ಪ್ರತಿಸಂಭಿಧೆ—ಧರ್ಮಗಳನ್ನು ವಿಭಜಿಸಿ ತಿಳಿಯುವ ಜ್ಞಾನ, 27, 29.

ಪ್ರತಿಸ್ಮೃತಿ-61.

ಪ್ರಮುಖತ್ವ—ಸಮಾಧಿಯ ಲಕ್ಷಣ, 50.

ಪ್ರವ್ರಜ್ಯ—ಪರಿವ್ರಾಜಕನಾಗುವ ದೀಕ್ಷೆ.

ಪ್ರಶ್ರಬ್ಧಿ—ಸಮಶ್ವಾಸಪ್ರಾಪ್ತಿ, ಶಾಂತಿ, 118.

ಪಾತ್ರೆ—ಭಿಕ್ಷಾಪಾತ್ರೆ, 40, 125.

ಪ್ರಾತಿಮೋಕ್ಷ್ಯ—ಭಿಕ್ಷುಗಳು ಕಡ್ಡಾಯವಾಗಿ ಪಾಲಿಸಲೇಬೇಕಾದ ಕೆಲವು ನಿಯಮಗಳು; ವಿನಯಪಿಟಕದ ಒಂದು ಭಾಗ, 45.

ಪಿಟಕ—ವಿನಯ, ಧರ್ಮ, ಅಭಿಧರ್ಮ ಎಂದು ಪಿಟಕಗಳು ಮೂರು, 24, 27, 29.

ಪುದ್ಗಲ—ವ್ಯಕ್ತಿ (ಅನೇಕ ವ್ಯಕ್ತಿಗಳು ಕೂಡಿದರೆ ಸಂಘವೆನಿಸುವುದು), 33, 36.

ಬ್ರಹ್ಮಚರ್ಯ—ನಿರ್ವಾಣಪ್ರಾಪ್ತಿಗಾಗಿ ನಡೆಯಬೇಕಾದ ನಡತೆ, ಬೌದ್ಧರ ಪರಮಪದವಾದ ನಿರ್ವಾಣಕ್ಕೆ ಬ್ರಹ್ಮವೆಂಬುದು ಪ್ರತಿಶಬ್ದ. 26, 102.

ಬ್ರಹ್ಮಚಾರಿ-ಬ್ರಹ್ಮದ ಕಡೆಗೆ ನಡೆಯುವವನು, 33, 104.

ಬುದ್ಧವಚನ—ಪಿಟಕಗಳಿಗೆ ಪ್ರತಿಶಬ್ದ, 24.

ಬುದ್ಧಿ—ಪ್ರಜ್ಞೆ, 105, 118.

ಬೋಧ್ಯಂಗ—ಬುದ್ಧನು ಪಡೆದ ಜ್ಞಾನವಾದ ಬೋಧಿಗೆ ಏಳು ಅಂಗಗಳು: ಸ್ಮೃತಿ, ಧರ್ಮವಿಚಯ, ವೀರ್ಯ, ಪ್ರೀತಿ, ಪ್ರಶ್ರಬ್ಧಿ, ಸಮಾಧಿ ಮತ್ತು ಉಪೇಕ್ಷೆ, 44, 49, 117, 118.

ಭಗವಂತ—ಭಾಗ್ಯವಂತ. ಸಾಮಾನ್ಯವಾಗಿ ಬುದ್ಧನನ್ನು ಕುರಿತು ಬಳಸುವ ಶಬ್ದ, 25, 45, 48, . . .

ಭದಂತ—ಪೂಜ್ಯನೆಂಬುದನ್ನು ಸೂಚಿಸುವ ಶಬ್ದ, 25, 33, 39.

ಭನ್ತೇ—ಗೌರವಾರ್ಥದಲ್ಲಿ ಹಿರಿಯರನ್ನು ಸಂಬೋಧಿಸುವ ಶಬ್ದ.

ಭವ-ಜನ್ಮಕ್ಕೆ ಪೂರ್ವಭಾವಿಯಾದ ಅನುಕ್ರಮದ ಬೆಳವಣಿಗೆ, 69, 72—75, 94.

ಭಾವಿಸು—ಅನುಕ್ರಮವಾಗಿ ಬೆಳೆಸು, 44, 45, 48, 51, 94, 121.

ಭಿಕ್ಷು—ಬೌದ್ಧ ಸಂನ್ಯಾಸಿ.

ಭಿಕ್ಷುಣಿ—ಬೌದ್ಧ ಸಂನ್ಯಾಸಿನಿ.

ಮನಸಿಕಾರ—'ಯೋನಿಸೋ ಮನಸಿಕಾರ'—ಪಾಲಿ; ಹಿಡಿದ ವಿಷಯಕ್ಕೆ ಮನಸ್ಸನ್ನು ಅರ್ಪಿಸಿ, ಅದನ್ನು ಸಮೂಲವಾಗಿ ತಿಳಿಯುವ ತೀವ್ರವಾದ ಚಿತ್ತವೃತ್ತಿ, 43, 77.

ಮನಸ್ಸು—44.

ಮನೋವಿಜ್ಞಾನ—77—81.

ಮರಣ—ಒಂದು ತೆರದ ದುಃಖ, 69, 72, 94.

ಮಹಾನದಿಗಳು-97, 123.

ಮಹಾನಾಗ—ಮದದಾನೆಯಂತೆ ವೀರ್ಯಸ್ಥಾಮಗಳುಳ್ಳ ಮಹಾನುಭಾವ, 126.

ಮಹಾಭೂತಗಳು—ನಾಲ್ಕು; ನೆಲ, ಜಲ, ಬೆಂಕಿ, ವಾಯು, 119.

ಮಾರ್ಗ—ದುಃಖವನ್ನು ತಡೆದು, ನಿರ್ವಾಣವನ್ನು ಸೇರುವ ದಾರಿ. 'ಅಷ್ಟಾಂಗಿಕ ಮಾರ್ಗ' ನೋಡಿ, 29, 33, 44.

ಮೋಹ—ಮೌಢ್ಯ, 'ಸಮ್ಮೋಹ' ನೋಡಿ, 57.

ಯಥಾಭೂತ—ನಿಜಸ್ಥಿತಿ, 51.

ಯೋಗಾವಚರ— ಆತ್ಮದ ಪ್ರಯತ್ನವನ್ನು ನಿರ್ವಾಣ ಸಾಧನೆಗೆ ಯೋಜಿಸುವುದೇ ನಡತೆಯಾದವನು, 44—47, 49, 50, 52, 58, 59.

ರತನಿ— ಮೊಣಕೈಯಿಂದ ಕಿರುಬೆರಳವರೆಗಿನ ಪ್ರಮಾಣ, 120.

ರಾಗ—106.

ರೂಪ—'ನಾಮರೂಪ'ವನ್ನೂ ನೋಡಿರಿ, 34—36, 81, 82, 84.

ವರ್ಷಾವಾಸ–ಮಳೆಗಾಲದ ನಾಲ್ಕು ತಿಂಗಳು ಹೊರಗೆ ಸಂಚಾರಕ್ಕೆ ಹೋಗದೆ ಆರಾಮದಲ್ಲಿ ವಾಸಮಾಡುವುದು, 23.

ವ್ಯಾಯಾಮ–ಪ್ರಯತ್ನ, 89, 90, 113, 114.

ವಿಚಾರ–ವಿಚರಣ, ಅನುಸಂಚರಣ, 81, 85, 86.

ವಿಜಾನನ–ವಿಜ್ಞಾನದ ಲಕ್ಷಣ, 84, 85, 122.

ವಿಜ್ಞಾನ–(ಸ್ಕಂಧ), 34, 35, 55, 56, 69, 84–86, 122.

ವಿತರ್ಕ–ಮನಸ್ಸನ್ನು ವಿಷಯಕ್ಕೆ ಅರ್ಪಿಸಿ, ಚಿಂತಿಸುವುದು ವಿತರ್ಕ. ಅದನ್ನು ಅನುಸರಿಸಿ ಚಿಂತಿಸುವುದು ವಿಚಾರ, 81, 85, 86.

ವಿತಂಡ– ಅನರ್ಥಸಂಹಿತವಾದ ಮಾತುಕತೆ, 19.

ವಿದ್ಯೆ–ಶೀಲಸಂಪದ, ಚಿತ್ತಸಂಪದ, ಪ್ರಜ್ಞಾಸಂಪದವೆಂಬ ಮೂರು ಸಂಪದಗಳು ಕೂಡಿ 'ವಿದ್ಯೆ'ಯಾಗುವುದು. 'ಬುದ್ಧವಚನ ಪರಿಚಯ'ದ ಪುಟ ೧೮೭–೧೮೯ರಲ್ಲಿ ಶೀಲಸಂಪದವು ವರ್ಣಿತವಾಗಿದೆ; ೧೯೦ರಿಂದ ೧೯೬ರ ನಾಲ್ಕನೆಯ ಧ್ಯಾನ ಪೂರ್ಣವಾಗಿ ಚಿತ್ತಸಂಪದವೆನಿಸಿಕೊಳ್ಳುವುದು; ಮುಂದೆ ೨೦೨ರ ವರೆಗಿನ ಉಳಿದ ಎಂಟು ಶ್ರಾಮಣ್ಯ ಫಲಗಳು ಪ್ರಜ್ಞಾಸಂಪದವೆನಿಸಿಕೊಳ್ಳುವುದು, 49, 52.

ವಿನಯ–ಭಿಕ್ಷುಗಳನ್ನು ನಡಿಸುವುದಕ್ಕಾಗಿ ಮಾಡಿದ ನಿಯಮಗಳು, 15, 17.

ವಿಪಶ್ಯನ–ಸಾಕ್ಷಾತ್ಕಾರ, 49.

ವಿಮತಿ–ಸಂದೇಹ, ಸಂಶಯ, 88.

ವಿಮುಕ್ತಿ–ಅರ್ಹತ್ತ್ವ, ನಿರ್ವಾಣ, 49.

ವಿಮೋಕ್ಷ–ವಿಮುಕ್ತಿ, 44.

ವೀರ್ಯ–44, 48.

ವೀರ್ಯೇಂದ್ರಿಯ–44, 58, 59.

ವೇದ–ಬುದ್ಧನು ವೇದಯಿಸಿ ತಿಳಿದ ಜ್ಞಾನ, 27.

ವೇದಕ–ಜೀವ, 75, 77, 98, 99.

ವೇದನೆ–(ಸ್ಕಂಧ) 34, 35, 60–62, 69, 70, 72, 77 81–83, 86, 123, 124.

ವೇದಯಿಸು–ಅನುಭವಿಸಿ ತಿಳಿ, 82, 83.

ಶಮಥ–ಸಂಸ್ಕಾರಗಳ ನಾಶದಿಂದ ಬರುವ ಶಾಂತಿ, 49.

ಶ್ರದ್ಧೆ–44, 46, 47.

ಶ್ರದ್ಧೇಂದ್ರಿಯ–44, 58, 59.

ಶ್ರಮಣ–ಬ್ರಾಹ್ಮಣರಲ್ಲದ ಸಂನ್ಯಾಸಿಗಳು, 16, 19.

ಶಾಕ್ಯಪುತ್ರ - ಬೌದ್ಧ ಸಂನ್ಯಾಸಿ.

ಶಾಸ್ತ್ರ–ಶಾಸ್ತ್ರಗಳು ಹತ್ತೊಂಬತ್ತು, 19.

ಶ್ರಾಮಣೇರ–ಇನ್ನೂ ಶ್ರಮಣನಲ್ಲದ ಬಾಲಭಿಕ್ಷು, 18, 22, 38.

ಶ್ರಾವಕ–ಧರ್ಮವನ್ನು ಕಿವಿಗೊಟ್ಟು ಕೇಳುವವನು, 48.

ಶಿಕ್ಷಾಪದ– ಬೌದ್ಧನಾಗಲು ಬಯಸುವವನು ಆಚರಿಸಬೇಕಾದ ಹತ್ತು ಶೀಲಗಳು, 103, 105.

ಶಿಲ್ಪ–ಜೀವನೋಪಾಯಕ್ಕಾಗಿ ಕಲಿಯುವ ವಿದ್ಯೆಗಳು, ಕಲೆಗಳು.

ಶೀಲ–'ಬುದ್ಧವಚನ ಪರಿಚಯ' ಪುಟ ೧೮೭–೧೮೯ ನೋಡಿ, 26, 33, 44, 45, 54, 121.

ಶೋಕ–69, 72, 94.

ಶ್ರೋತ್ರವಿಜ್ಞಾನ–77, 81.

ಷಡಾಯತನ–'ಆಯತನ' ನೋಡಿ, 69.

ಸಕೃದಾಗಾಮಿ–'ಅರ್ಹತ' ನೋಡಿ, 47.

ಸತ್ತ್ವ–ಜೀವಂತವಾದ ವ್ಯಕ್ತಿ, 68, 89, 91, 92, 99.

ಸಮ್ಯಕ್ ಪ್ರಧಾನ– ಹುಟ್ಟದ ಅಕುಶಲ ಧರ್ಮಗಳು ಹುಟ್ಟದಂತೆ, ಇರುವ ಅಕುಶಲ ಧರ್ಮಗಳು ಹೋಗುವಂತೆ, ಇಲ್ಲದ ಕುಶಲ ಧರ್ಮಗಳು ಹುಟ್ಟುವಂತೆ, ಇರುವ ಕುಶಲ

ಧರ್ಮಗಳು ವೃದ್ಧಿಯಾಗುವಂತೆ ಮಾಡುವ ತಕ್ಕ ಪ್ರಯತ್ನ, 44, 49.
ಸಮಾಧಿ–'ಬುದ್ಧ ವಚನ ಪರಿಚಯ' ಪುಟ ೧೯೦–೧೯೫; ಇಂದ್ರಿಯ ದ್ವಾರಗೋಪನ, ಸ್ಮೃತಿ ಸಂಪ್ರಜಾನ್ಯ, ಸಂತುಷ್ಟಿ, ಪಂಚ ನಿವಾರಣ ಅತಿಕ್ರಮ ಮತ್ತು ನಾಲ್ಕು ಧ್ಯಾನಗಳು ಕೂಡಿ 'ಸಮಾಧಿ'ಯೆನಿಸುವುದು, 44, 50, 51.
ಸಮಾಧೀಂದ್ರಿಯ–44, 58, 59.
ಸಮಾಪತ್ತಿ– ಬುದ್ಧನಾಗಲು ಪ್ರಾಪ್ತವಾಗಬೇಕಾದ ಎಂಟು ಗುಣಗಳು; 44.
ಸಮುದಾಚರಿತತ್ವ–78, 80, 81.
ಸಮ್ಮೋಹ–57.
ಸಂಕ್ರಮಣ- Transmigration, 98, 99.
ಸಂಘ–ಭಿಕ್ಷುಗಳ ಪರಿಷತ್ತು.
ಸಂಘಾರಾಮ–ಸಂಘದ ವಾಸಸ್ಥಾನ, 125.
ಸಂಜಾನನ–ಸಂಜ್ಞೆಯ ಲಕ್ಷಣ, 83.
ಸಂಜ್ಞೆ–(ಸ್ಕಂಧ) 34, 35, 77, 81, 83, 86, 123, 124.
ಸಂಪ್ರಜಾನ್ಯ–ಸ್ಮೃತಿ ಸಂಪ್ರಜಾನ್ಯ ಸುಮಾರು ಸಮಶಬ್ದಗಳು, 61.
ಸಂಪ್ರಸ್ಕಂದನ– ಉದಾತ್ತವಾದ ಗುರಿಯನ್ನು ಕುರಿತ ತೀವ್ರವಾದ ಆಸೆ; 46, 47.
ಸಂಪ್ರಸಾದನ–ತಿಳಿಯಾಗುವಿಕೆ, 46, 47.
ಸಂಸಾರ- 107, 108.
ಸಂಸ್ಕಾರ–(೧) ಸ್ಕಂಧಗಳಲ್ಲಿ ಒಂದು, 34, 35. (೨) ನಾಮರೂಪಕ್ಕೆ ಕಾರಣವಾದ ಧರ್ಮಗಳ ರಾಶಿ, 69. (೩) ಇಂದ್ರಿಯಗಳೂ ವಿಷಯಗಳೂ ಇಂದ್ರಿಯ ವಿಜ್ಞಾನಗಳೂ, 68, 72, 74.
ಸ್ಕಂಧ–ಐದು: ರೂಪ, ವೇದನೆ, ಸಂಜ್ಞೆ, ಸಂಸ್ಕಾರ, ವಿಜ್ಞಾನ, 35, 36.
ಸ್ಥವಿರ–ಸಂಘದಲ್ಲಿ ಹಿರಿಯನಾಗಿ, ಬಹುಕಾಲ ಭಿಕ್ಷುಭಾವವನ್ನು ಕೈಕೊಂಡ ಭಿಕ್ಷು.
ಸ್ಪರ್ಶ–69, 70, 77, 81, 82, 86, 123, 124.
ಸ್ಪರ್ಶನ–ಸ್ಪರ್ಶದ ಲಕ್ಷಣ, 81.
ಸ್ಮೃತಿ-44, 49, 50, 108, 109, 110–112.
ಸ್ಮೃತಿ ಪ್ರಸ್ಥಾನ– ಕೆಲಸ ಮಾಡುವುದಕ್ಕೆ ಸ್ಮೃತಿಯನ್ನು ಮುಂದೆ ನಡಿಸುವುದು, 44, 49.
ಸ್ಮೃತೀಂದ್ರಿಯ-44, 58, 59.
ಸ್ಥಾನ– ಧರ್ಮವನ್ನು ಕುರಿತ ಸಂದಿಗ್ಧವಾದ ಅಥವಾ ಜಟಿಲವಾದ ಸ್ಥಳಗಳು, 15, 39.
ಸೂತ್ರ–ಸುತ್ತಪಿಟಕ, 15. 23.
ಸ್ರೋತಾಪನ್ನ–'ಅರ್ಹತ' ನೋಡಿ, 23, 47.
ಸ್ರೋತಾಪತ್ತಿ- ಸ್ರೋತಾಪನ್ನನ ಸ್ಥಿತಿ, 47, 111.



